
ಕುಡುಬಿಯರ ಮದುವೆ

ಕೊಂಕಣೆ
ಕೊಡಿಯಾಲ್
ಕುಡುಬಿಯರ
ಮದುವೆ ಸಂಪ್ರದಾಯಗಳು



ಯಂ. ಗೋಪಾಲ ಗೌಡ



ಪ್ರಕಟಣೆ:
ಕುಡುಬಿ ಜಾನಪದ ಕಲಾ ವೇದಿಕೆ(ರಿ)
ಎಡಪದವು

ಕುಡುಬಿಯರ ಮದುವೆ

(ಕೊಂಕಣಿ-ಕೊಡಿಯಾಲ್ ಕುಡುಬಿಯರ ಮದುವೆ ಸಂಪ್ರದಾಯಗಳು)

ಯಂ. ಗೋಪಾಲ ಗೌಡ
ಎಡಪದವು

2016

ಪ್ರಕಟಣೆ
ಕುಡುಬಿ ಜಾನಪದ ಕಲಾ ವೇದಿಕೆ (ರಿ.) ಎಡಪದವು

KUDUBIYARA MADUVE:

An Analytical description of the Wedding Traditions of Konkani Kodial Kudubis

by M. Gopal Gowda
Patlachil, Yedapadavu
Mangaluru Taluk - 574144
Cell Phone : 09611943325

Published by	:	KUDUBI JANAPADA KALA VEDIKE (R.) YEDAPADAVU

First impression	:	2016
Pages	:	208+8
Paper Used	:	80 gsm Ns Maplitho, demi $^{1}/_{8}$ size
DTP	:	Smt. Varija, Sri Durgamahammayi Printers, Siddakatte
Cover Design	:	John Chandran
Printer	:	Assisi Press Udupi
Colour Pages	:	Sumeru Digitals, Yedappadavu
Price	:	150/-

ಮುನ್ನುಡಿ

ಎಂ. ಗೋಪಾಲ ಗೌಡ ಎಡಪದವು ಇವರು ಕೊಂಕಣಿ ಕುಡುಬಿ ಸಾಂಪ್ರದಾಯಿಕ ಕುಟುಂಬದಲ್ಲಿ ಜನಿಸಿ, ಕುಡುಬಿ ಸಂಸ್ಕೃತಿಯ ಬಗ್ಗೆ ಆಸಕ್ತಿಯಿಂದ ಅಧ್ಯಯನ ನಡೆಸಿ, ಈಗ ಮಂಗಳೂರಿನ ಸೈಂಟ್ ಅಲೋಸಿಯಸ್ ಕಾಲೇಜಿನ ಕೊಂಕಣಿ ಸಂಸ್ಥೆಯಲ್ಲಿ ವೃತ್ತಿ ನಿರತರು. ಇವರ 'ಗುಮಟೆ ಮತ್ತು ಕೋಲಾಟದ ಹಾಡುಗಳು' ಆರಂಭದ ಉತ್ತಮ ಸಂಗ್ರಹ. 'ಕುಡುಬಿ ಗಾದೆಗಳು' ಆ ಜನಾಂಗದ ಗಾದೆಗಳ ಮೊದಲ ಸಂಗ್ರಹ. 'ಗುಮಟ್' ಎಂಬ ಅಧ್ಯಯನ ಗ್ರಂಥವು ಕೊಂಕಣಿ ಮತ್ತು ಕನ್ನಡ ಭಾಷೆಯಲ್ಲಿ ಇದ್ದು ಅಪೂರ್ವ ಮಾಹಿತಿಯನ್ನು ಒಳಗೊಂಡಿದೆ.

ಗೋಪಾಲ ಗೌಡರು ಕುಡುಬಿ ಸಂಸ್ಕೃತಿಯ ಒಳಗಿನವರಾಗಿ ಇರುವುದು ಮತ್ತು ಸಂಶೋಧನೆಯ ಮೂಲ ಗುಣಗಳಾದ ಕುತೂಹಲ, ಅನ್ವೇಷಕ ಪ್ರವೃತ್ತಿ, ಸಮಚಿತ್ತದ ಮನೋಧರ್ಮ ಉಳ್ಳವರಾದ ಕಾರಣ ಅವರು ಕುಡುಬಿ ಸಮುದಾಯದ ಬಗ್ಗೆ ನಡೆಸುವ ಎಲ್ಲ ಅಧ್ಯಯನಗಳಿಗೆ ವಿಶೇಷ ಮಹತ್ವ ಇದೆ. ಈ ದೃಷ್ಟಿಯಿಂದ ಗೋಪಾಲ ಗೌಡರ ಹೊಸ ಪುಸ್ತಕ **'ಕುಡುಬಿಯರ ಮದುವೆ'** ಸಂಸ್ಕೃತಿಯ ಅಧ್ಯಯನಕ್ಕೆ ಒಂದು ಮಹತ್ತರ ಕೊಡುಗೆ. ಒಂದು ಜನಾಂಗದ ಮದುವೆ ಸಂಪ್ರದಾಯದ ಬಗ್ಗೆಯೇ ಇಷ್ಟು ವಿಸ್ತಾರವಾದ ಅಧ್ಯಯನಗಳು ಕನ್ನಡದಲ್ಲಿ ಹೆಚ್ಚು ಬಂದಿಲ್ಲ.

ಗೋಪಾಲ ಗೌಡರು 'ಕುಡುಬಿಯರ ಮದುವೆ'ಯ ಮೊದಲ ಮೂರು ಭಾಗಗಳಲ್ಲಿ ಕೊಂಕಣಿ ಕುಡುಬಿ ಸಮಾಜದ ಮೂಲ, ವಲಸೆ, ಪ್ರಭೇದ ಮತ್ತು ಒಳವಿಭಜನೆಗಳನ್ನು ಪರಿಚಯಿಸಿ, ಬಳಿಕ ದಕ್ಷಿಣ ಕನ್ನಡ ಜಿಲ್ಲೆಯ ಕುಡುಬಿ ವಾಡೆಗಳ ಪಟ್ಟಿಯನ್ನು ಕೊಡುತ್ತಾರೆ. ಬಳಿಕ ಕುಡುಬಿಯರ ಬಳಿ / ಬೆಡಗುಗಳ ವಿವರವಾದ ಮಾಹಿತಿಯನ್ನು ಒದಗಿಸಿದ್ದಾರೆ. ಈ ಆರಂಭದ ಪ್ರಸ್ತಾವನೆಯು ಇಡೀ ಗ್ರಂಥಕ್ಕೆ ಸಮರ್ಪಕವಾದ ಪ್ರವೇಶಿಕೆಯಾಗಿ ಕೆಲಸ ಮಾಡುತ್ತದೆ.

ಕುಡುಬಿಯರ ವಿವಾಹದ ಪದ್ಧತಿಯ ಬಗ್ಗೆ ಗೋಪಾಲ ಗೌಡರು ಕೊಡುವ ಮಾಹಿತಿಯ ಹರಹು ವ್ಯಾಪಕವಾಗಿದೆ ಮತ್ತು ವೈವಿಧ್ಯಮಯವಾಗಿದೆ. ಬಹಳ ಮುಖ್ಯವಾದ ಸಂಗತಿಯೆಂದರೆ ಗೋಪಾಲ ಗೌಡರು ಪಾಶ್ಚಿಮಾತ್ಯ ಮಾನವವಿಜ್ಞಾನದ ಅಧ್ಯಯನ ವಿಧಾನಗಳನ್ನು ಬಳಸದೆ, ತಮ್ಮದೇ ಆದ ದೇಸಿ ಮಾದರಿಗಳನ್ನು ಇಲ್ಲಿ ಅಳವಡಿಸಿಕೊಂಡಿರುವುದು. ಆದ್ದರಿಂದಲೇ ಈ ಭಾಗವು ಸ್ವತಂತ್ರ ಆಲೋಚನೆಯ ಅನನ್ಯ ದಾಖಲೆಯಾಗಿದೆ.

ಕುಡುಬಿ ಸಮಾಜದ ಮದುವೆಯ ಸಂಪ್ರದಾಯದಲ್ಲಿ ನೆಂಟಸ್ತಿಕೆಯಿಂದ ತೊಡಗಿ ಶೋಭನ ಶಾಸ್ತ್ರದ ವರೆಗಿನ ಎಲ್ಲ ಪ್ರಮುಖ ಹಂತಗಳು ವಿವರವಾಗಿ ಚಿತ್ರವತ್ತಾಗಿ ಇಲ್ಲಿ

ಬಿತ್ತರಗೊಂಡಿವೆ. ಜಾನಪದ ದಾಖಲೀಕರಣಕ್ಕೆ ಈಗ ಅನೇಕ ಬಗೆಯ ದೃಶ್ಯ ಶ್ರವ್ಯ ಸಾಧನಗಳಿವೆ. ಅವುಗಳ ಮೂಲಕ ದಾಖಲಿಸಿ ವಸ್ತುರೂಪದಲ್ಲಿ ಮಾಹಿತಿಯನ್ನು ಕೊಡುವುದು ಒಂದು ಬಗೆ. ಇನ್ನೊಂದು ಬಗೆಯೆಂದರೆ ಕ್ಷೇತ್ರಕಾರ್ಯದ ಎಲ್ಲ ಮಾಹಿತಿಗಳನ್ನು ಚಿತ್ರಕ ಶೈಲಿಯಲ್ಲಿ ವಿವರವಿವರವಾಗಿ ಭಾಷೆಯಲ್ಲಿ ಕಟ್ಟಿಕೊಡುವುದು. ಗೋಪಾಲ ಗೌಡರು ಈ ಎರಡನೆಯ ವಿಧಾನವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಮದುವೆಯ ಎಲ್ಲ ಸಂಗತಿಗಳನ್ನು ಪ್ರತ್ಯಕ್ಷ ಕಂಡ ಅನುಭವವನ್ನು ಇಲ್ಲಿನ ವಿವರಗಳು ಕೊಡುತ್ತವೆ.

ಕುಡುಬಿಯರಲ್ಲಿ ಮದುವೆ ಎನ್ನುವುದು ಕೆಲವು ದಿನಗಳ ಕಾಲ ನಡೆಯುವ ಒಂದು ವಿದ್ಯಮಾನ. ಅದು ಎರಡು ಕುಟುಂಬಗಳ ನಡುವೆ ಕಟ್ಟಿಕೊಡುವ ಸಂಬಂಧಗಳ ಬೆಸುಗೆಯ ಪ್ರಯಾಣ. ಅದು ಹಂತ ಹಂತವಾಗಿ ತೆರೆದುಕೊಳ್ಳುವ ಆಚರಣೆಗಳ ಅನುಬಂಧ. ಹಾಗಾಗಿಯೇ ಇಲ್ಲಿನ ಸಣ್ಣ ದೊಡ್ಡ ಎಲ್ಲ ವಿವರಗಳು ಬಹಳ ಮುಖ್ಯವಾಗಿವೆ. ವಿವಾಹ ಪೂರ್ವ ತಯಾರಿಗಳಿಂದ ತೊಡಗಿ ವಧು ಮತ್ತು ವರನ ಮನೆಯ ಸಂಪ್ರದಾಯಗಳು ಇವನ್ನು ನಡೆಸಿದ ಬಳಿಕ ನಡೆಯುವ ದಿಬ್ಬಣ ಒಂದು ಸಾಂಸ್ಕೃತಿಕ ಘಟಕ. ಇಂದು ಬಹಳ ಮಟ್ಟಿಗೆ ಕಣ್ಮರೆ ಆಗಿರುವ ದಿಬ್ಬಣವು ಮದುವೆಯನ್ನು ಸಾರ್ವಜನಿಕಗೊಳಿಸುವ ಒಂದು ವಿಶಿಷ್ಟ ಕಾರ್ಯಕ್ರಮ.

ಗೋಪಾಲ ಗೌಡರು ಕೊಟ್ಟ ಪೂರಕ ವಿಷಯಗಳು ಕೂಡಾ ಸಂಶೋಧನೆಯ ದೃಷ್ಟಿಯಿಂದ ಅಗತ್ಯವಾಗಿವೆ. ಮಾಹಿತಿಗಳ ವ್ಯಾಪಕತೆಯು ಯಾವಾಗಲೂ ಅಧ್ಯಯನಕ್ಕೆ ಅಧಿಕೃತತೆಯನ್ನು ತಂದುಕೊಡುತ್ತದೆ. ಸಮಕಾಲೀನ ಸಂದರ್ಭದಲ್ಲಿ ಆದ ಬದಲಾವಣೆಗಳನ್ನು ಕೂಡಾ ಗಮನಿಸುವ ಗೋಪಾಲ ಗೌಡರು ಕುಡುಬಿ ಜನಾಂಗದ ಚಲನಶೀಲತೆಯನ್ನು ಪರಿಶೀಲಿಸಿರುವುದು ಗಮನಾರ್ಹ.

ಗೋಪಾಲ ಗೌಡರ ಈ ಅಧ್ಯಯನ ಗ್ರಂಥವು ವ್ಯಾಪಕ ಕ್ಷೇತ್ರ ಕಾರ್ಯ, ದೇಸಿ ಕ್ರಮದ ವಿಶ್ಲೇಷಣೆ, ಸರಳವಾದ ಸಂವಹನ ಭಾಷಾ ಶೈಲಿ, ವೈಭವೀಕರಣ ಇಲ್ಲದ ಮನೋಧರ್ಮ, ವಿಷಯ ಪ್ರತಿಪಾದನೆಯ ಸ್ಪಷ್ಟತೆ, ಸಮತೂಕದ ಬರವಣಿಗೆ; ಈ ಎಲ್ಲ ಗುಣಗಳಿಂದ ಕನ್ನಡ ಜಾನಪದ / ಸಾಂಸ್ಕೃತಿಕ ಅಧ್ಯಯನದ ಕ್ಷೇತ್ರದಲ್ಲಿ ಗಣನೀಯ ಗ್ರಂಥವಾಗಿ ಸ್ಥಾನ ಪಡೆಯುತ್ತದೆ. ಇಂತಹ ಕೃತಿಯನ್ನು ಪರಿಶ್ರಮ ಮತ್ತು ಪ್ರಾಮಾಣಿಕತೆಯಿಂದ ಸಿದ್ಧಪಡಿಸಿದ ಗೋಪಾಲ ಗೌಡರನ್ನು ಅಭಿನಂದಿಸುತ್ತೇನೆ.

*** ಡಾ। ಬಿ. ಎ. ವಿವೇಕ ರೈ,**
ಮಂಗಳೂರು

ಲೇಖಕರ ಮಾತು

ಸಂಪ್ರದಾಯಗಳು ಮನುಷ್ಯನ ಜೀವನವನ್ನು ರೂಪಿಸುತ್ತವೆ. ಸಂಪ್ರದಾಯಗಳ ಅಸ್ತಿತ್ವವಿಲ್ಲದೆ ವ್ಯಕ್ತಿಯ ಆಲೋಚನೆಗಳು ಅಥವಾ ಕ್ರಿಯೆಗಳು ಊರ್ಜಿತವಾಗುವುದಿಲ್ಲ. ಸಾಮಾಜಿಕ ಜೀವನದಲ್ಲಿ ಸಂಪ್ರದಾಯಗಳ ನಿಕಟ ಸಂಬಂಧವಿರುತ್ತದೆ. ಯಾವುದೇ ಒಂದು ಸಮಾಜ, ಸಂಸ್ಕೃತಿ ಪ್ರವರ್ಧಮಾನಕ್ಕೆ ಬಂದ ರೀತಿ, ಅದರ ಆಳ-ಅಗಲಗಳ ಅಧ್ಯಯನಕ್ಕೆ ಸಂಪ್ರದಾಯಗಳು ಸಹಕಾರಿ.

ಆಯಾಯ ಸಮುದಾಯದ ನಂಬಿಕೆಗಳು ಅವರ ಸಂಪ್ರದಾಯಗಳಿಗೆ ಮೂಲ. ನಂಬಿಕೆಗಳೇ ಸಾಕಾರಗೊಂಡು ಸಂಪ್ರದಾಯದ ರೂಪ ಪಡಕೊಳ್ಳುತ್ತವೆ. ಯಾವುದೇ ಒಂದು ಕಾರ್ಯ ಆಗಬೇಕಾದಾಗ ಯಾವಾಗ ಯಾವುದನ್ನು ಹೇಗೆ ಆಚರಿಸಬೇಕೆಂಬುದು 'ವಿಧಿ'ಯಾಗುತ್ತದೆ. ಯಾವ ಕ್ರಿಯೆ ಜರಗಿಸಬಾರದು ಎಂಬುದು 'ನಿಷೇಧ'ವಾಗುತ್ತದೆ. ಆಚರಣೆಯ ವಿಧಿ ನಿಷೇಧಗಳು ಸಂಪ್ರದಾಯಗಳಿಂದ ಪ್ರತ್ಯೇಕಗೊಳಿಸಲು ಆಗದಷ್ಟು ಸಂಮಿಳಿತಗೊಂಡಿರುತ್ತವೆ.

ನಿರಂತರ ನೀರಿನಲ್ಲೇ ಜೀವಿಸುವ ಮೀನು ನೀರಿನ ಚಿಂತನೆಯನ್ನೇ ಮಾಡದೆ, ನೀರಿನ ಆಧಾರದಿಂದಲೇ ಹೇಗೆ ಬದುಕುತ್ತದೊ, ಅದೇ ರೀತಿ ಒಂದು ಬುಡಕಟ್ಟು ಜನಾಂಗವಾದ ಕುಡುಬಿ ಜನರೂ ತಮ್ಮ ಸಂಪ್ರದಾಯಗಳಲ್ಲಿ ಕೆಲವು ವಿಧಿನಿಷೇಧಗಳನ್ನು ಪಾಲಿಸುವಲ್ಲಿ ತಮ್ಮ ಶ್ರೀಮಂತ ಸಂಸ್ಕೃತಿಯ ಸಮೀಕ್ಷೆ, ವಿಶ್ಲೇಷಣೆ ಮಾಡಲು ಉಪಕ್ರಮಿಸದೆ ಜೀವಿಸುವುದನ್ನು ಕಾಣುತ್ತೇವೆ. ಹಾಗಂತ ಈ ಸಂಪ್ರದಾಯಗಳೆಲ್ಲಾ ಕೇವಲ ಕಂದಾಚಾರಗಳು ಎನ್ನುವಂತಿಲ್ಲ. ಕುಡುಬಿಯರ ಸಂಸ್ಕೃತಿಯಲ್ಲಿ ಸಮಷ್ಟಿಯ ಅಂಗೀಕಾರ ಪಡೆದುಕೊಂಡ ನಂಬಿಕೆ, ರೀತಿ ರಿವಾಜು, ನಡವಳಿಕೆ, ಆಚಾರ-ವಿಚಾರಗಳ ತಿಳುವಳಿಕೆ ಮತ್ತು ಜ್ಞಾನಕ್ಕೆ ಪೂರಕ ಸಂಬಂಧವಿದೆ. ಈ ವಿಷಯಗಳಿಗೆ ಬದ್ಧರಾಗಿರುವವರಿಗೆ ಕುಡುಬಿ ಸಂಸ್ಕೃತಿಯಲ್ಲಿ ಸ್ಥಾನವಿದೆ. ಜನಪದ ಸಂಸ್ಕೃತಿಯ ಪ್ರಾತಿನಿಧಿಕ ರೂಪಗಳಾದ ಮನುಷ್ಯ ಜೀವನದ ಪ್ರತಿಯೊಂದು ಹಂತದಲ್ಲಿ ವ್ಯಕ್ತವಾಗುವ ಮಾತು, ನಂಬಿಕೆ, ರೀತಿ ರಿವಾಜು, ಸಂಪ್ರದಾಯಗಳ ಮೂಲ ಬೇರನ್ನು ಅಲ್ಲಾಡಿಸುವ ವ್ಯಕ್ತಿತ್ವವನ್ನು ಸಮಾಜ ವಿರೋಧಿಸುತ್ತದೆ, ಬಹಿಷ್ಕರಿಸುತ್ತದೆ. ಇಂತಹ ಕಠಿಣ ಚೌಕಟ್ಟು ಕುಡುಬಿ ಜನಪದ ಸಂಸ್ಕೃತಿಯಲ್ಲಿದೆ. ಕುಡುಬಿಯರು ಮದುವೆ ಸಂಪ್ರದಾಯದಲ್ಲಿ ಇಂತಹ ಹಲವು ಸಾಂಪ್ರದಾಯಿಕ ವಿಧಿ ನಿಷೇಧಗಳನ್ನು ಪಾಲಿಸಿಕೊಂಡು ಬಂದಿರುವುದನ್ನು ಕಾಣಬಹುದು.

ದೈಹಿಕ, ಮಾನಸಿಕ ಹಾಗೂ ಆತ್ಮಶುದ್ಧೀಕರಣಗಳಿಗೆ ಪ್ರತಿಯೊಬ್ಬ ವ್ಯಕ್ತಿಯೂ ಒಳಗಾಗುವ ಷೋಡಶ ಸಂಸ್ಕಾರಗಳ ಪೈಕಿ ಮದುವೆ ಒಂದು ಪ್ರಮುಖ ಸಂಸ್ಕಾರ. ಪುರುಷಾರ್ಥ ಸಾಧನೆಗಾಗಿ ಮದುವೆ ಮುಖಾಂತರ ಗೃಹಸ್ಥಾಶ್ರಮ ಸ್ವೀಕಾರ ಮಾಡುವುದು ವಿವಾಹದ ಪ್ರಮುಖ ಉದ್ದೇಶ. ಕುಡುಬಿಯರು ಒಂದು ಬುಡಕಟ್ಟು ಜನಾಂಗ. ಸರಕಾರೀ

ದಾಖಲೆಗಳ ಪ್ರಕಾರ ಬುಡಕಟ್ಟು ಪಟ್ಟಿಯಲ್ಲಿ ಪರಿಗಣಿಸಲ್ಪಟ್ಟಿಲ್ಲವಾದರೂ ಬುಡಕಟ್ಟು ಸಮುದಾಯದ ಹೆಚ್ಚಿನ ಲಕ್ಷಣಗಳು ಕುಡುಬಿ ಜನಾಂಗದ ಸಂಪ್ರದಾಯಗಳಲ್ಲಿ ಕಂಡುಬರುವುದು ವಾಸ್ತವ. ಬಹಳ ಹಿಂದಿನ ಕಾಲದಿಂದಲೂ ವಿವಾಹ ಸಂಪ್ರದಾಯಗಳಲ್ಲಿ ಕುಡುಬಿಯರು ಬುಡಕಟ್ಟು ಮೂಲದ ಈ ಪರಂಪರೆಯನ್ನು ಉಳಿಸಿಕೊಂಡು ಬಂದವರಾಗಿದ್ದಾರೆ.

ನಾನು ಕುಡುಬಿ ಸಮುದಾಯದ ಒಂದು ಸಾಂಪ್ರದಾಯಿಕ ಮತ್ತು ಸಾಧಾರಣ ಮಟ್ಟಿಗೆ ಅನುಕೂಲಸ್ಥ, ಗೌರವಸ್ಥ ಮನೆತನದಲ್ಲಿ ಜನಿಸಿದವನು. ಆದರೆ, ನಾನು 'ನಾನಾಗುವ' ಕಾಲಕ್ಕೆ ಆ ಯಾವ ಗೃಹಸ್ಥಿಕೆ, ಘನಸ್ಥಿಕೆಗಳೂ ನನ್ನ ಪಾಲಿಗೆ ಉಳಿದಿರಲಿಲ್ಲ. ಹುಟ್ಟಿರುವುದಕ್ಕೆ ಬದುಕಲೇಬೇಕಾದ ಅನಿವಾರ್ಯತನದಿಂದ ನಾನು ಪ್ರಾಪ್ತಿಸಿಕೊಂಡ ಶಿಕ್ಷಣಭಾಗ್ಯ ಹನ್ನೆರಡರಿಂದ ಮುಂದೆ ತಟಸ್ಥವಾಗಬೇಕಾಯಿತು. ಬಾಲ್ಯದಿಂದಲೂ ಕುಡುಬಿ ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳು ಮತ್ತು ಮೌಖಿಕ ಸಾಹಿತ್ಯ ಕಲೆಹಾಕುವ ಆಸಕ್ತಿಯುಳ್ಳವನಾದುದರಿಂದ ನಮ್ಮ ಸಮುದಾಯದ ಮದುವೆಯ ವಿಶೇಷ ಆಚರಣೆಗಳಿಂದ ಆಕರ್ಷಿತನಾಗಿ ಇಂತಹ ವಿಷಯಗಳು ಎಲ್ಲಿ ಲಭ್ಯವಾದರೂ ದಾಖಲಿಸಿ ಇಡುವ ಹವ್ಯಾಸವಿತ್ತು. ನನ್ನ ಸುಮಾರು 20 ವರ್ಷ ಪ್ರಾಯದಲ್ಲಿ, ಅಂದರೆ ನಾನು ವಿವಾಹಿತನಾಗುವ ಮೊದಲೇ ಕುಟುಂಬದಲ್ಲಿನ ಹಾಗೂ ಆಪ್ತರ ಮದುವೆ ಮಾತುಕತೆಗಳಲ್ಲಿ, ಮದುವೆ ಕಾರ್ಯಕ್ರಮ ಸುಧಾರಿಸುವುದರಲ್ಲಿ ಭಾಗವಹಿಸುವ ಅವಕಾಶಗಳು ಲಭಿಸಿದವು. ಇಲ್ಲಿನ ಬಹುಸಂಖ್ಯಾತ ಸಮಾಜದಲ್ಲಿನ ಮದುವೆಯ ಆಚರಣಾ ವಿಧಿಗಳಿಗಿಂತ ಕುಡುಬಿಯರ ಮದುವೆಯಲ್ಲಿ ವಿಶೇಷತೆ / ಪ್ರತ್ಯೇಕತೆಗಳನ್ನು ಕಂಡು ನಾನು ಕೌತುಕ ಪಡುತ್ತಿದ್ದೆ. ನಮ್ಮ ರೀತಿ ರಿವಾಜುಗಳೇಕೆ ಇತರರಿಗಿಂತ ಭಿನ್ನ? ಎಂಬ ಪ್ರಶ್ನೆ ನನ್ನನ್ನು ಕಾಡಿಸುತ್ತಿತ್ತು. ನಮ್ಮ ಸಂಪ್ರದಾಯದ ಮಾಹಿತಿ ಮತ್ತು ಅರಿವನ್ನು ಮುಂದಿನ ಪೀಳಿಗೆಗೆ, ಅದರಲ್ಲೂ ವಿಶೇಷವಾಗಿ ಕೊಂಕಣಿ ಮಾತೃಭಾಷೆಯ ಇತರ ಸಮುದಾಯಗಳಿಗೆ ಉಂಟು ಮಾಡಲು ನಮ್ಮ ಸಮಾಜದ ಅನುಭವೀ ಹಿರಿಯರನ್ನು ಭೇಟಿ ಮಾಡಿ ಸಂದರ್ಶನ ಮಾಡುವುದಕ್ಕಾಗಿ ಒಂದು ಪ್ರಶ್ನಾವಳಿಯನ್ನು ತಯಾರು ಮಾಡಿದೆ. 1997ರ ಸುಮಾರಿಗೆ ನಮ್ಮ ಬಹುಪ್ರತಿಭೆಯ ಕಲಾವಿದ, ಕುಡುಬಿಯರಲ್ಲಿ ಪ್ರಥಮ ವಕೀಲ ವಿಜಯಗೌಡ ಹಾಗೂ ನಾನು ವಾಡೆಯಿಂದ ವಾಡೆಗೆ ಭೇಟಿ ನೀಡುತ್ತಾ ಮಾಹಿತಿಗಳನ್ನು ಸಂಗ್ರಹಿಸಿದೆವು. ನಾನು ಸಂಪನ್ಮೂಲ ವ್ಯಕ್ತಿಗಳ ಸಂದರ್ಶನಗೈಯುವಾಗ ವಿಜಯಗೌಡರು ದಾಖಲಿಸಿಕೊಳ್ಳುತ್ತಿದ್ದರು. ಯಾವುದೇ ವಿದ್ವಾಂಸರ ನೆರವು ಮತ್ತು ಮಾರ್ಗದರ್ಶನ ಪಡೆಯದೆ ನಾವು ಸಂಗ್ರಹಿಸಿದ ಈ ಮಾಹಿತಿ ಕುಡುಬಿ ಸಮಾಜದಲ್ಲಿ ಈ ವರೆಗೆ ಯಾರೂ ಮಾಡದ ಒಂದು ದಾಖಲೆಯಾಯಿತು.

ಮಾಹಿತಿ ಸಂಗ್ರಹಕ್ಕಾಗಿ ಕ್ಷೇತ್ರಕಾರ್ಯ ಕೈಗೊಳ್ಳುವಾಗ ಸಂಗ್ರಹಕಾರನಿಗೆ ಮತ್ತು ನಿರೂಪಕನಿಗೆ ಒಬ್ಬರಿಂದೊಬ್ಬರಿಗೆ ಅನ್ಯೋನ್ಯತೆ ಇರಬೇಕು. ಸಂಪನ್ಮೂಲ ವ್ಯಕ್ತಿಯ ಸ್ಮರಣಶಕ್ತಿ ನಿಸ್ಸತ್ವಕ್ಕೆ ತಲುಪುವಾಗ ನಮ್ಮ ಯುಕ್ತಿ, ತಂತ್ರಗಳ ಮುಖಾಂತರ ಅವರಲ್ಲಿ ನವಚೈತನ್ಯ ತುಂಬಿ ಅರಳುವಂತೆ ಮಾಡಬೇಕು. ಈ ಪ್ರಕಾರ ಸಂದರ್ಶನಗೈಯಲು

ಸಂದರ್ಶಕನಿಗೆ ನಿರೂಪಕನೊಂದಿಗೆ ಅಷ್ಟೇ ಸಲುಗೆ, ಸ್ನೇಹತ್ವ ಮತ್ತು ತಾಳ್ಮೆ ಇರಬೇಕು. ಈ ಎಲ್ಲಾ ಲೆಕ್ಕಾಚಾರಗಳನ್ನು ಹಾಕಿ ನಾವು ಆರಿಸಿದ ಹಿರಿಯ ವ್ಯಕ್ತಿಗಳು ಮೂವರು. ಈ ಪೈಕಿ ಮೊದಲ ಸ್ಥಾನದಲ್ಲಿರುವವರು ಕೊಂಪದವು ಸಂಕೇಶ ಶ್ರೀ ಪುತ್ತು ಗೌಡರು. ನಾವು ಸಂದರ್ಶನಕ್ಕೆ ಹೋದಾಗ ಅಸೌಖ್ಯದಿಂದಾಗಿ ಅವರು ತಿರುಗಾಡಲೂ ಆಗದ ಪರಿಸ್ಥಿತಿಯಲ್ಲಿದ್ದು ಈಗ ದಿವಂಗತರು. ಅವರ ಜ್ಞಾನ ಮತ್ತು ನೆನಪು ಶಕ್ತಿ ಅಪಾರವಾಗಿತ್ತು. ನಾವು ಯಾವುದೇ ಪ್ರಶ್ನೆ ಕೇಳಿದರೂ ವಿವರಣೆಯನ್ನು ತಾಳ್ಮೆ ಮತ್ತು ಸಂಯಮದಿಂದ ನೀಡುತ್ತಿದ್ದರು. ನಾವು ಸಂದರ್ಶನಗೈದ ಇನ್ನಿಬ್ಬರು ನಿರೂಪಕರೆಂದರೆ ಪಾಡಿಯಾರು ಕಿಂಡೇಲಿನ ಶ್ರೀ ಲಿಂಗಪ್ಪ ಗೌಡರು ಮತ್ತು ಮರಕಡ ಮೈಂದೇರಿ ಶ್ರೀ ಬಾಬಣ್ಣ. 1997ರಲ್ಲೊಮ್ಮೆ ನಾವು ಬಾಬಣ್ಣರವರ ಸಂದರ್ಶನ ಕೈಗೊಂಡಿದ್ದೆವು. ಆ ನಂತರ ಕೊಂಕಣಿಯಲ್ಲಿ ಈ ಪುಸ್ತಕದ ಪ್ರಥಮ ಆವೃತ್ತಿ ಪ್ರಕಟಣೆಯ 2012ರಲ್ಲಿ ಬಾಬಣ್ಣರೊಂದಿಗೆ ಮೂರು ಪ್ರತ್ಯೇಕ ದಿನಗಳಲ್ಲಿ ಸಂದರ್ಶನ ಕೈಗೊಳ್ಳಬೇಕಾಯಿತು. ಈ ಪೈಕಿ ತಾ. 29-7-2012ರಂದು ಬೆಳಿಗ್ಗೆ 9 ಗಂಟೆಗೆ ಪ್ರಾರಂಭಿಸಿ ಸಂಜೆ 6 ಗಂಟೆವರೆಗೆ ಇಡೀ ದಿವಸ ಊಟವನ್ನೂ ಬಿಟ್ಟು ಅವಿರತವಾಗಿ ಮತ್ತು ತಾ. 7-11-2012ರಂದು ರಾತ್ರಿ 7 ಗಂಟೆಯಿಂದ 10 ಗಂಟೆವರೆಗೆ ಸಂದರ್ಶನ ಪಡೆದದ್ದು ಮರೆಯಲಾಗದ ಘಟನೆ. ಈ ಹಿಂದಿನ ನನ್ನ ಪುಸ್ತಕಗಳು ಪ್ರಕಟಣೆ ಆಗುವ ಸಂದರ್ಭದಲ್ಲೂ ಬಾಬು ಗೌಡರು ತನ್ನ ಯಥಾಸಾಧ್ಯ ಸಹಕಾರ, ಮಾಹಿತಿ ಮತ್ತು ಮಾರ್ಗದರ್ಶನ ನೀಡಿದ್ದರು. ಪ್ರಕೃತ ಮದುವೆ ಸಂಪ್ರದಾಯಗಳ ಈ ಪುಸ್ತಕದಲ್ಲಿನ ಕ್ಲಿಷ್ಟ ವಿಚಾರಗಳ ವಿವರಣೆಗಳಿಗೆ ಸ್ಪಷ್ಟ ರೂಪ ನೀಡಲು ಬಾಬು ಗೌಡರೊಂದಿಗೆ ಮಾಡಿದ ಚರ್ಚೆಯ ಸಾರಾಂಶವೇ ಕಾರಣ. ಆದುದರಿಂದ ಬಾಬಣ್ಣರಿಗೆ ಯಾವ ರೀತಿ ಕೃತಜ್ಞತೆ ಸಲ್ಲಿಸಿದರೂ ಋಣ ಬಾಕಿಯುಳಿಯುತ್ತದೆ. ಮದುವೆ ಸಂಪ್ರದಾಯಗಳ ಆಚಾರವಿಚಾರಗಳ ವಿವರಣೆ ಒದಗಿಸಿದ ಈ ಮೂವರೂ ಹಿರಿಯ ವಕ್ತಾರರಿಗೆ ಹೃದಯದಾಳದ ಕೃತಜ್ಞತೆಗಳು.

ಪ್ರಸ್ತುತ ಆಧುನೀಕರಣ, ಸುಧಾರಿತ ಸಮಾಜದ ಅನುಕರಣೆ, ಸಂಪ್ರದಾಯಗಳ ವೈಭವೀಕರಣಗಳ ನೆವದಲ್ಲಿ ಕ್ರಮೇಣ ಕುಡುಬಿ ಸಮುದಾಯದಲ್ಲಿಯೂ ಮದುವೆ ಸಂಪ್ರದಾಯಗಳ ಮೇಲೆ ಪ್ರಭಾವವಾಗಿ ಬದಲಾವಣೆ ಆಗುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ. ಈ ಬದಲಾವಣೆಗಳ ಮೂಲ ಅಸ್ತಿತ್ವದ ಉಳಿವಿಗೆ ಕುಡುಬಿಯರು ಹೆಣಗಾಡುತ್ತಿರುವುದೂ ಸುಳ್ಳಲ್ಲ. ನಮ್ಮ ಪರಿಸರದಲ್ಲಿ ಕುಡುಬಿಯರನ್ನು ಹೊರತಾದ ಕೊಂಕಣಿ ಮಾತೃಭಾಷಿಗರ ಸಂಖ್ಯೆ ಹೆಚ್ಚು ಇದೆ. ಅಂತಹ ಸಮುದಾಯಗಳಿಗೆ ಕುಡುಬಿಯರ ಮದುವೆ ಸಂಪ್ರದಾಯಗಳ ಅರಿವಾಗಲೆಂಬ ಉದ್ದೇಶದಿಂದ ಕೊಂಕಣಿ ಭಾಷೆಯಲ್ಲಿ ನಾನು ಬರೆದ ಪುಸ್ತಕವನ್ನು ಕರ್ನಾಟಕ ಕೊಂಕಣಿ ಅಕಾಡೆಮಿಯು 2013ರಲ್ಲಿ 'ವ್ಹಾಡಿಗ್' ಶೀರ್ಷಿಕೆಯಲ್ಲಿ ಪ್ರಕಟಿಸಿತು.

ಒಂದು ಬುಡಕಟ್ಟು ಜನಾಂಗವಾದ, ಕೊಂಕಣಿ ಮಾತೃಭಾಷೆಯ ಕುಡುಬಿಯರು ಗೋವಾ ಮೂಲದಿಂದ ಸ್ಥಳಾಂತರಗೊಂಡು ಕರ್ನಾಟಕದಲ್ಲಿ ನೆಲೆ ಕಂಡುಕೊಂಡವರು.

ಆಡಳಿತಾತ್ಮಕ ಭಾಷೆಯಲ್ಲಿ ಹೇಳುವುದಾದರೆ ಭಾಷಾ ಅಲ್ಪಸಂಖ್ಯಾತರು. ಇಲ್ಲಿನ ಬಹುಸಂಖ್ಯಾ ಸಮಾಜಕ್ಕೆ ಕೊಂಕಣಿ ಭಾಷೆ ಅರ್ಥವಾಗುವುದು ಕಷ್ಟ. ಕುಡುಬಿಯರ ಮದುವೆ ಸಂಪ್ರದಾಯದಲ್ಲಿ ಬುಡಕಟ್ಟು ಮೂಲದ ಎಷ್ಟೊಂದು ಆಚರಣೆಗಳಿವೆ? ಇಲ್ಲಿನ ಶಿಷ್ಟ ಸಮಾಜ ಅಥವಾ ವೈದಿಕ ಸಮುದಾಯದ ಪ್ರಭಾವದಿಂದ ಕುಡುಬಿ ಬುಡಕಟ್ಟಿನ ಆಚರಣೆಗಳ ಮೇಲೆ ಯಾವ ಪರಿಣಾಮಗಳಾಗುತ್ತಿವೆ? ಪ್ರಸ್ತುತ ತಮ್ಮ ಸಂಪ್ರದಾಯಗಳನ್ನು ಎಷ್ಟರ ಮಟ್ಟಿಗೆ ಮೂಲ ರೂಪದಲ್ಲಿ ಉಳಿಸಿಕೊಳ್ಳಲಾಗಿದೆ? ಎಷ್ಟು ಸಂಪ್ರದಾಯಗಳು ಬದಲಾಗಿವೆ ಅಥವಾ ಅಳಿದಿವೆ?..... ಮುಂತಾದ ವಿಷಯಗಳು ಇಲ್ಲಿನ ಪ್ರಧಾನ ಸಮಾಜಕ್ಕೂ ತಿಳಿಯಲೆಂಬ ಉದ್ದೇಶದಿಂದ ಕೆಲವು ಅವಶ್ಯ ಮಾಹಿತಿಗಳ ಹೆಚ್ಚಿನ ವಿವರಣೆಯೊಂದಿಗೆ ಕನ್ನಡದಲ್ಲಿ ಈ ಪುಸ್ತಕವನ್ನು ಪ್ರಕಟಿಸಲಾಗಿದೆ.

ನನ್ನ ಈ ಐದನೇ ಕೃತಿಯಲ್ಲಿ ಕುಡುಬಿಯರ ಶಾಸ್ತ್ರೋಕ್ತ ಮದುವೆ ಸಂಪ್ರದಾಯಗಳ ಬಗ್ಗೆ ಸಾಧ್ಯವಾದಷ್ಟು ಹೆಚ್ಚಿನ ವಿವರಣೆ ನೀಡಲು ಪ್ರಯತ್ನಿಸಿರುತ್ತೇನೆ. ನೆಂಟಸ್ತಿಕೆ, ವಿವಾಹ ಪೂರ್ವ ತಯಾರಿ, ಮದುವೆ ದಿನದ ಆಚರಣೆಗಳು, ಮರುಸೇಸೆ, ಜೀಗರ ಔತಣ, ನಿಷೇಕ ಪ್ರಸ್ತ..... ಇತ್ಯಾದಿ ಸಂಗ್ತಿಗಳ ಅನಾವರಣ ಮಾಡಲಾಗಿದೆ. ವಿವರಣೆ ನೀಡುವಾಗ ಪ್ರಥಮದಲ್ಲಿ ಕುಡುಬಿಯರ ಮೂಲ, ವಲಸೆ, ಪ್ರಸರಣ, ಕುಡುಬಿ ವಾಡೆಗಳು, ಕುಡುಬಿಯರ ಕುಲಗೋತ್ರಗಳ ಮಾಹಿತಿಯನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಕೊನೆಗೆ ಮದುವೆಗೆ ಸಂಬಂಧಪಟ್ಟಂತೆ ಕೆಲವು ಪೂರಕ ವಿಷಯಗಳ ವಿವರಣೆಯನ್ನೂ ನೀಡಿರುತ್ತೇನೆ. ಈ ಪೂರಕ ವಿಷಯಗಳು ಮದುವೆ ಸಂಪ್ರದಾಯಕ್ಕೆ ನೇರವಾದ ಸಂಬಂಧ ಹೊಂದಿಲ್ಲವಾದರೂ ಪರೋಕ್ಷವಾಗಿ ಸಂಬಂಧಿಸಿದವುಗಳಾಗಿವೆ. ಕುಟುಂಬದಲ್ಲಿ ಹಿರಿಯಕ್ಕನ ಪಾತ್ರ, ವಿನಿಮಯ ವಿವಾಹ, ಅವಳಿ ಜವಳಿಗಳ ಮದುವೆ, ಮರುಮದುವೆ, ಸಾಮೂಹಿಕ ವಿವಾಹ, ಮನೆಅಳಿಯ, ತೊಟ್ಟಿಲ ಮದುವೆ, ಅನೈತಿಕ ಸಂಬಂಧ, ಮದುವೆ ಸಂಪ್ರದಾಯದಲ್ಲಿ ಪಂಚ ಸಂಖ್ಯೆಯ ಮಹತ್ವ, ಮದುವೆ ಸಂಪ್ರದಾಯದಲ್ಲಿ ವೀಳ್ಯದ ಸ್ಥಾನ, ಮರುನಾಮಕರಣ, ಕವಳ, ನೈಸರ್ಗಿಕ ವಸ್ತುಗಳ ಉಪಯೋಗ, ಆಭರಣ ಧಾರಣೆಯ ಮಹತ್ವ, ವಿಧವೆ ಮಹಿಳೆಯರ ಸ್ಥಾನ, ಕನ್ಯೆಯರ ಪ್ರೌಢಾವಸ್ಥೆಯ ಆಚರಣೆಗಳು, ಮುಟ್ಟು, ಹೊಲೆಸೂತಕಗಳು...... ಇತ್ಯಾದಿ ವಿಷಯಗಳನ್ನು ವಿವರಿಸಿರುತ್ತೇನೆ. ಮದುವೆ ಸಂಪ್ರದಾಯಾಚರಣೆಗಳ ಅನುಷ್ಠಾನದಲ್ಲಿ ಸಮಕಾಲೀನ ಸಂದರ್ಭದಲ್ಲಿ ಆದ ಬದಲಾವಣೆ ಮತ್ತು ಸಂಪ್ರದಾಯಗಳ ಈಗಿನ ರೂಪ.... ಈ ವಿಷಯಗಳ ವಿಮರ್ಶೆ ನೀಡಿರುತ್ತೇನೆ. ಆದರೆ, ಇದೊಂದು ಆಳವಾದ ಅಧ್ಯಯನವಲ್ಲ ಎಂಬ ಅರಿವು ನನಗಿದೆ. ಪ್ರಯತ್ನಪಟ್ಟಲ್ಲಿ ಈ ಒಂದೊಂದು ವಿಷಯಗಳ ಮೇಲೂ ಪ್ರತ್ಯೇಕ ಅಧ್ಯಯನ ಕೈಗೊಳ್ಳಬಹುದು ಎಂದು ನನ್ನ ಅನಿಸಿಕೆ.

ನಾನು ಕೊಡಿಯಾಲ್ ಕುಡುಬಿ ಉಪಪಂಗಡದಲ್ಲಿ ಜನಿಸಿದವನಾದುದರಿಂದ ಮತ್ತು ನನ್ನ ಮುಖ್ಯ ಉದ್ದೇಶವೂ ಕೊಡಿಯಾಲ್ ಕುಡುಬಿ ಪಂಗಡದ ಮದುವೆ ಸಂಪ್ರದಾಯಗಳ ಅನಾವರಣ ಆದುದರಿಂದ ತತ್ಸಂಬಂಧದ ವಿವರಣೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿರುತ್ತೇನೆ. ನನ್ನ ಸ್ವಂತ ತಿಳುವಳಿಕೆ ಮತ್ತು ಅನುಭವೀ ಸಂಪನ್ಮೂಲ

ವ್ಯಕ್ತಿಗಳ ಸಂದರ್ಶನ – ಕ್ಷೇತ್ರಕಾರ್ಯ ಮುಖಾಂತರ ಮಾಹಿತಿ ಪಡೆದು ಕೃತಿಗಿಳಿಸಿದ್ದೇನೆ. ಆದರೆ, ಇದನ್ನು ಗ್ರಂಥಸ್ಥಗೊಳಿಸುವಾಗ ತಜ್ಞರ ಮಾರ್ಗದರ್ಶನ ಪಡಕೊಂಡಿಲ್ಲ ಎಂಬ ಕೀಳರಿಮೆ ನನ್ನನ್ನು ಕಾಡುತ್ತಿದೆ.

ಕೊಡಿಯಾಲ್ ಕುಡುಬಿಯರ ಬಗ್ಗೆ ಈ ಪುಸ್ತಕ ಪ್ರಕಟಿಸುವಾಗ, ಎರಡೂ ಪಂಗಡದವರು ಒಂದೇ ಮೂಲ, ಒಂದೇ ಮಾತೃಭಾಷೆಯವರಾದುದರಿಂದ ಉಡುಪಿ ಕಡೆಯ ಗೋವಾ ಕುಡುಬಿಯರ ಮದುವೆ ಸಂಪ್ರದಾಯಗಳನ್ನೂ ಸಂಗ್ರಹಿಸಲಾಗಿದೆ. ಕೊಡಿಯಾಲ್ ಕುಡುಬಿ ಪಂಗಡದಲ್ಲಿ ಆಚರಣೆಯಲ್ಲಿ ಇರದ, ಗೋವಾ ಕುಡುಬಿ ಸಂಪ್ರದಾಯಗಳಲ್ಲಿ ಚಾಲ್ತಿಯಲ್ಲಿರುವ ವಿಶೇಷ ಆಚರಣೆಗಳನ್ನು ಮಾತ್ರ ಉಲ್ಲೇಖಿಸಲಾಗಿದೆ. ಕೊಡಿಯಾಲ್ ಕುಡುಬಿ ಸಂಪ್ರದಾಯಗಳಿಗೆ ತಾಳೆಯಾಗುವ ಸಂಗತಿಗಳ ಹೆಚ್ಚಿನ ವಿವರಣೆ ನೀಡಲು ಹೋಗಿಲ್ಲ. ಗೋವಾ ಕುಡುಬಿಯರ ಸಂಪ್ರದಾಯಗಳ ವಿವರಣೆ ನೀಡುವಾಗ, ಹೆಚ್ಚಿನ ಕ್ಷೇತ್ರಕಾರ್ಯ ಮಾಡುವ ಅವಕಾಶ ನನಗೆ ಲಭಿಸಿಲ್ಲವಾದುದರಿಂದ ಈ ಹಿಂದೆ ಅಧ್ಯಯನಕಾರರು ಪ್ರಕಟಿಸಿದ್ದ ಆಧಾರ ಸಾಹಿತ್ಯಗಳಿಂದ ವಿಚಾರಗಳನ್ನು ಎತ್ತುಗಡೆ ಮಾಡಿದ್ದೇನೆ. ಅಲ್ಲದೆ, ತಾ. 25–1–2013ರಲ್ಲಿ ಉಡುಪಿ ಜಿಲ್ಲೆಯ ಮಂದರ್ತಿಯಲ್ಲಿ ಮೂವರು ಸಂಪನ್ಮೂಲ ವ್ಯಕ್ತಿಗಳಿಂದ ಖುದ್ದು ಸಂದರ್ಶನ ಮೂಲಕ ಅಭಿಪ್ರಾಯ ಪಡೆದು ಸಂಗ್ರಹಿಸಿದ ಮಾಹಿತಿಯನ್ನು ದಾಖಲಿಸಿರುತ್ತೇನೆ. ಮಂದರ್ತಿಯ ವಕ್ತೃಗಳಾಗಿ ಸಹಕರಿಸಿದ ಪುರುಷನಾಯ್ಕ್, ಗೋಪಾಲ ನಾಯ್ಕ್ ಮತ್ತು ನರಸಿಂಹ ನಾಯ್ಕ್‌ರವರಿಗೆ ಕೃತಜ್ಞತೆ ಸಲ್ಲಿಸುತ್ತಿದ್ದೇನೆ. ಈ ಕ್ಷೇತ್ರ ಕಾರ್ಯಕ್ಕಾಗಿ ಮಂದರ್ತಿಗೆ ಹೋಗಬೇಕಾದಾಗ ನಮ್ಮ ಯುವ ಕಲಾವಿದ ಎಡಪದವು ಕಣ್ಣೋರಿ ನಡುಮನೆಯ ಶ್ರೀನಿವಾಸನು ತನ್ನದೇ ವಾಹನ ಮತ್ತು ಖರ್ಚಿನಲ್ಲಿ ಕರೆದುಕೊಂಡು ಹೋಗಿರುವುದಕ್ಕೆ ಮತ್ತು ನನ್ನೊಂದಿಗೆ ಕ್ಷೇತ್ರಕಾರ್ಯಕ್ಕೆ ಸಹಕರಿಸಿರುವುದಕ್ಕೆ ಉಪಕಾರ ಸ್ಮರಣೆ ಮಾಡದಿದ್ದರೆ ನಾನು ತಪ್ಪಿತಸ್ಥನಾಗುತ್ತೇನೆ.

ನಮ್ಮ ಮೂಲನೆಲೆ ಗೋವಾದ ಕುಡುಬಿಯರ ಬಗ್ಗೆ ಮಾಹಿತಿ ಕಲೆಹಾಕುವ ಮತ್ತು ನಮ್ಮ ಕುಲದೇವರಾದ ಕಾನಾಕೋನಾ ಮಲ್ಲಿಕಾರ್ಜುನ ದೇವರ ದರ್ಶನ ಮಾಡುವ ಉದ್ದೇಶವಿರಿಸಿಕೊಂಡು ತಾ. 18–3–2000ರಂದು ನಮ್ಮ ಕಲಾವಿದರೊಡಗೂಡಿ ಗೋವಾಕ್ಕೆ ಅಧ್ಯಯನ ಪ್ರವಾಸ ಕೈಗೊಂಡಿದ್ದೆವು. ಗೋವಾ ಕೊಂಕಣಿ ಅಕಾಡೆಮಿಯ ಸಹಕಾರ್ಯದರ್ಶಿ ಹಾಗೂ ಸಂಶೋಧಕರಾದ ಕಮಲಾಕರ ಮ್ಹಾಳ್‌ಶಿಯವರು ನಮಗೆ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಸಂಬಂಧಪಟ್ಟ ಅಸಾಳಿ ವಾಡೆಯ ಕುಡುಬಿ ಗುರಿಕಾರ ಶ್ರೀ ಗೋವಿಂದ ವೆಳಿಪ್‌ರ ಪರಿಚಯ ಮಾಡಿಕೊಟ್ಟು ಮಾರ್ಗದರ್ಶನವನ್ನೂ ನೀಡಿದ್ದರು. ಅಸಾಳಿ ವಾಡೆಯಲ್ಲಿ ನಾವು ಕ್ಷೇತ್ರ ಕಾರ್ಯ ಕೈಗೊಂಡಾಗ ಗೋವಿಂದ ವೆಳಿಪ್ ಮತ್ತು ವಾಡೆಸದಸ್ಯರು ಅಲ್ಲಿನ ಕುಡುಬಿಯರ ಮದುವೆ ಬಗ್ಗೆ ಹಲವಾರು ಮಾಹಿತಿ ಒದಗಿಸಿದ್ದರು. ಅಲ್ಲದೆ ಕಾನಕೊನಾದ ಕಾರ್ತ್ಯಿಪಾಯಿಕ್ ಆದಿನಾಥೇಶ್ವರ ದೇವಸ್ಥಾನದ ವೇದಿಕೆಯಲ್ಲಿ ಆ ರಾತ್ರಿ ಅಸಾಳಿ ವಾಡೆಯ ಪುರುಷ–ಮಹಿಳೆಯರು 50–60 ಜನರೊಂದಿಗೆ ಏರ್ಪಡಿಸಿದ

ಸಂದರ್ಶನದಿಂದ ಮದುವೆ ಬಗ್ಗೆ ಸಂಗ್ರಹಿಸಿದ ಸಾರಾಂಶವನ್ನೂ ಈ ಪುಸ್ತಕದಲ್ಲಿ ಸಂಕ್ಷಿಪ್ತವಾಗಿ ಅಡಕಗೊಳಿಸಿದ್ದೇನೆ. ಈ ಮಾಹಿತಿ ಒದಗಣೆಗೆ ಕಾರಣರಾದ ಶ್ರೀ ಕಮಲಾಕರ ಮ್ಹಾಳ್ಶಿ, ಗುರಿಕಾರ ಗೋವಿಂದ ವೆಳಿಪ್ ಹಾಗೂ ಅಸಾಳಿ ವಾಡೆಯ ಕುಡುಬಿ ಬಂಧುಗಳಿಗೆ ಕೃತಜ್ಞತಾರ್ಪಣೆ.

ಸಂಪನ್ಮೂಲ ವ್ಯಕ್ತಿಗಳಿಂದ ಅಭಿಪ್ರಾಯಗಳನ್ನು ನನ್ನ ಜ್ಞಾನ ತೃಷೆಗಾಗಿ ಸಂಗ್ರಹಿಸಿರುವುದಾದರೂ ಈ ಜ್ಞಾನ ಸಂಚಯ ಸ್ಥಳೀಯ ಮತ್ತು ವಿದೇಶೀ ಅಧ್ಯಯನಕಾರರಿಗೆ ವಿವಿಧ ಸಂದರ್ಭಗಳಲ್ಲಿ ಪ್ರಯೋಜನವಾಗಿರುತ್ತದೆ. ಆಧಾರ ಸಾಹಿತ್ಯ ಹಾಗೂ ವಕ್ತೃಗಳಿಂದ ಪಡೆದ ಮಾಹಿತಿಗಳೊಂದಿಗೆ ನನ್ನದನ್ನೂ ಧಾರೆಯರೆದು ಈ ಪುಸ್ತಕದಲ್ಲಿ ವಿವರಣೆಯನ್ನು ನೀಡಲಾಗಿದೆ. ಈ ವಿವರಣೆ ಕುಡುಬಿ ಸಂಪ್ರದಾಯಗಳ ಪ್ರಾರಂಭದ್ದೂ ಅಲ್ಲ. ಕೊನೆಯದ್ದೂ ಅಲ್ಲ. ವಾಸ್ತವ ಸಂಗತಿಗಳ ಅನಾವರಣ ಮಾಡಲಾಗಿದೆ ಹೊರತು ನನ್ನದೇ ಪ್ರತ್ಯೇಕ ಸಿದ್ಧಾಂತ ಸ್ಥಾಪನೆ ಮಾಡುವ ಉದ್ದೇಶವಲ್ಲ. ದಾಖಲಿಸಿದ ಕೆಲವು ಸಂಗತಿಗಳು ಕ್ಷುಲ್ಲಕ, ಸಣ್ಣ ಸಣ್ಣ ವಿಷಯಗಳ ವಿವರಣೆ ನೀಡುವ ಅವಶ್ಯವಿರಲಿಲ್ಲ ಎಂಬುದಾಗಿ ಕೆಲವರಿಗೆ ಅನ್ನಿಸೀತು. ಈ ಕೆಲವರಿಗೆ ಸರಿಕಾಣಲಿಕ್ಕಿಲ್ಲ ಅಂತ ಬರೆಯದೇ ಇರಲು ನನ್ನ ಒಳಮನಸ್ಸು ಕೇಳಲಿಲ್ಲ. ಸಾರ್ವಜನಿಕ ಅಡುಗೆ ತಯಾರು ಮಾಡುವಾಗ ಉಪ್ಪು, ಹುಳಿ, ಖಾರ ಸ್ವಲ್ಪ ಸ್ವಲ್ಪ ಹೆಚ್ಚು ಕಡಿಮೆ ಆದೀತು. ಕೆಲವರಿಗೆ ಉಪ್ಪು ಹೆಚ್ಚು ಅಂತ ಕಂಡರೆ ಇನ್ನು ಕೆಲವರಿಗೆ ಹುಳಿ ಹೆಚ್ಚು ಅಂತ ಕಾಣಬಹುದು. ಮಾಂಸದ ಪದಾರ್ಥದಿಂದ ಎಲುಬುಗಳನ್ನು ಹೇಗೆ ಪ್ರತ್ಯೇಕ ತೆಗೆದಿಡುವೆವೋ ಹಾಗೆ ಒಗ್ಗದುದನ್ನು ಓದುಗರು ಒತ್ತಟ್ಟಿಗಿಟ್ಟು, ರುಚಿಸಿದುದನ್ನು ಮಾತ್ರ ಸ್ವೀಕರಿಸುವ ಹಿರಿಮನ ತೋರಬೇಕೆಂದು ಕೋರಿಕೆ.

ಗುಡಿಗೆ ಕಲಶ ಶೋಭೆ, ಮುಡಿಗೆ ಮಲ್ಲಿಗೆ ಶೋಭೆ ಹೇಗೊ ಹಾಗೆ ಪುಸ್ತಕಕ್ಕೆ ಸೂಕ್ತ ಮುನ್ನುಡಿ ಇದ್ದರೇನೆ ಶೋಭೆ. ನಾನು ಸ್ವ–ಆಸಕ್ತಿಯಿಂದ ಸಂಗ್ರಹಿಸಿದ ಮಾಹಿತಿಯನ್ನು ಕೃತಿಗಿಳಿಸಲು ಸುಮಾರು ಎರಡು ವರ್ಷ ವ್ಯಯಿಸಿದ ನನ್ನ ಈ ಪುಸ್ತಕಕ್ಕೆ ಮುನ್ನುಡಿ ಯಾರಿಂದ ಪಡೆಯುವುದೆಂಬ ಪ್ರಶ್ನೆ ಉದ್ಭವಿಸಿದಾಗ, ನಾನು ಕೆಲಸ ಮಾಡುತ್ತಿರುವ ಕೊಂಕಣಿ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರೂ, ನಮ್ಮ ಸಂಶೋಧಿತ ಷಣ್ಮಾಸಿಕ 'ಅಮರ್ ಕೊಂಕಣಿ'ಯ ಸಂಪಾದಕರೂ, ನನ್ನ ಹಿತೈಷಿ ಮತ್ತು ಮಾರ್ಗದರ್ಶಕರೂ ಆಗಿರುವ ಶ್ರೀ ಎಡ್ವಿನ್ ಜೆ. ಎಫ್. ಡಿಸೋಜಾರವರು ತಕ್ಷಣ ಸೂಚಿಸಿದ ಹೆಸರು ಶ್ರೀ ಬಿ.ಎ. ವಿವೇಕ ರೈಯವರದು.

ವಿವೇಕ ರೈಯವರು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಉಪಕುಲಪತಿ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದವರು, ಕನ್ನಡ ಸಾಹಿತ್ಯ ಸಂಶೋಧಕರು ಹಾಗೂ ಜಾನಪದ ತಜ್ಞರಾಗಿ ಜರ್ಮನಿಯ ವ್ಯೂರ್ಜ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಗೌರವ ಅತಿಥಿ ಪ್ರಾಧ್ಯಾಪಕರಾಗಿ ಭಾರತೀಯ ಶಾಸ್ತ್ರ ಬೋಧಿಸಿದ

ಹಿರಿಯ ವಿದ್ವಾಂಸರು. ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಸ್ತರಗಳಲ್ಲಿ ವ್ಯಕ್ತಿಗತವಾಗಿ ವಿವೇಕ ರೈಯವರ ಮುಂದೆ ನಾನು ತುಂಬಾ ಕಿರಿಯವನು. ನಾನು ಅವರನ್ನು ಸಂಪರ್ಕಿಸಿರುವುದು ಅಥವಾ ಅವರ ಬಗ್ಗೆ ತಿಳಿದುಕೊಂಡಿರುವುದು ಕಡಿಮೆ. ಹೀಗಿರುವಾಗ ಸ್ವಾಭಾವಿಕವಾಗಿಯೇ ಅವರಲ್ಲಿ ಹೇಗೆ ಕೇಳಲಿ? ಎಂಬ ಕೀಳರಿಮೆಯ ಹಿಂಜರಿಕೆ ನನ್ನನ್ನು ಕಾಡಿದ್ದು ಸುಳ್ಳಲ್ಲ.

ಎಡ್ವಿನ್‌ರವರು ಕೊಂಕಣಿಯ ಖ್ಯಾತ ಕಾದಂಬರಿಕಾರ ಹಾಗೂ ಕೊಂಕಣಿ ಸಾಹಿತ್ಯ ದಿಗ್ಗಜರ ಪೈಕಿ ಈಗ ಇರುವವರಲ್ಲಿ ಅಗ್ರಗಣ್ಯರು. ಪ್ರಕೃತ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಶ್ರೀ ಎ. ಬಿ. ಇಬ್ರಾಹಿಮ್‌ರವರ ಮಾರ್ಗದರ್ಶನದಲ್ಲಿ ವಿವೇಕ ರೈಯವರ ಸಂಪಾದಕತ್ವದಲ್ಲಿ ತಯಾರಾಗುತ್ತಿರುವ 'ಮಂಗಳೂರು ದರ್ಶನ' ಎಂಬ ಬೃಹತ್ ಗ್ರಂಥ ರಚನಾ ಕಾರ್ಯದಲ್ಲಿ ವಿವೇಕ ರೈಯವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಎಡ್ವಿನ್‌ರವರು ವಿವೇಕ ರೈಯವರಿಂದ ಮುನ್ನುಡಿ ತೆಗೆಸಿಕೊಡುವ ಜವಾಬ್ದಾರಿ ವಹಿಸಿದಾಗ ನನಗಾದ ಸಂತೋಷಕ್ಕೆ ಪಾರವಿರಲಿಲ್ಲ.

ನಾನು ಎಡ್ವಿನ್‌ರವರೊಂದಿಗೆ ವಿವೇಕ ರೈಯವರನ್ನು ಈ ಬಗ್ಗೆ ಭೇಟಿ ಮಾಡಿದಾಗ 'ತುಂಬಾ ತುರ್ತಿನ ಕೆಲಸವಿದೆ, ವಿರಾಮ ಕಡಿಮೆ, ಆದರೆ ಎಡ್ವಿನ್‌ರವರು ಕೇಳಿದಾಗ ಇಲ್ಲವೆನ್ನಲಾಗದು' ಎಂದು ತಮ್ಮ ಎಡೆಬಿಡದ ಕಾರ್ಯಕ್ರಮಗಳ ಹೊರತಾಗಿಯೂ ಬಿಡುವು ಮಾಡಿಕೊಂಡು, ಸುಮಾರು 200 ಪುಟಗಳಷ್ಟಿರುವ ನನ್ನ ಈ ಪುಸ್ತಕವನ್ನು ಓದಿ, ತಿದ್ದ ಬೇಕಾದಲ್ಲಿ ತಿದ್ದಿ, ಚಿಕ್ಕದಾದರೂ ಚೊಕ್ಕದಾದ ಮುನ್ನುಡಿ ಬರೆದುಕೊಟ್ಟು ಪ್ರೋತ್ಸಾಹಿಸಿದ ಮಾನ್ಯ ವಿವೇಕ ರೈಯವರಿಗೆ ಹಾಗೂ ಇದಕ್ಕೆ ಕಾರಣರಾದ ಶ್ರೀ ಎಡ್ವಿನ್ ಜೆ. ಎಫ್. ಡಿಸೋಜಾರವರಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

ಕುಡುಬಿ ಜಾನಪದ ಕಲಾವೇದಿಕೆ 1973ರಿಂದ ನಮ್ಮ ಸಂಸ್ಕೃತಿಯ ಧಾರ್ಮಿಕ ಹಿನ್ನೆಲೆಯ ಜಾನಪದ ಪ್ರಕಾರವಾದ ಗುಮಟೆ ಕೋಲಾಟ ನೃತ್ಯ ಪ್ರದರ್ಶನಗಳನ್ನು ನೀಡಿ ಈ ಮೊದಲು 'ಮನೆಯ ಮಲ್ಲಿಗೆಯಂತೆ' ಅಷ್ಟೊಂದು ಪ್ರಚಾರ, ಪ್ರಸಾರಗಳನ್ನು ಪಡೆದಿರದ ಈ ಕಲೆಯ ಪ್ರದರ್ಶನಗಳ ಮೂಲಕ ಪ್ರಶಸ್ತಿ ಪುರಸ್ಕಾರಗಳಿಗೆ ಪಾತ್ರವಾಗಿ ಕಲೆಗೊಂದು ಮೌಲ್ಯವನ್ನು ತಂದುಕೊಟ್ಟ ಒಂದು ಸಣ್ಣ ಸಂಸ್ಥೆ. ಎಡಪದವಿನಲ್ಲಿ ಚಿಕ್ಕದೊಂದು ಕಾರ್ಯಾಲಯ ಮತ್ತು ಕಲಾ ತರಬೇತಿ ಶಾಲೆ ನಿರ್ಮಿಸಿ ಅದರ ಉದ್ಘಾಟನೆ ಹಾಗೂ ಕೊಂಕಣಿ ಕುಡುಬಿ ಜಾನಪದ ಕಲಾಮೇಳವನ್ನು ತಾ. 17-4-2011ರಲ್ಲಿ 5000ಕ್ಕೂ ಮೇಲ್ಪಟ್ಟು ಸಭಿಕರ ಉಪಸ್ಥಿತಿಯಲ್ಲಿ ಎಡೆಬಿಡದ ಕಾರ್ಯಕ್ರಮಗಳೊಂದಿಗೆ ಜರಗಿಸಲಾಗಿತ್ತು. ಈ ಸಂದರ್ಭ ನನ್ನ 'ಗುಮಟ್' ಎಂಬ ಪರಿಚಯಾತ್ಮಕ ಮತ್ತು 'ಕೊಂಕಣಿ ಕುಡುಬಿ ಗಾದೆ'ಗಳ ಸಂಗ್ರಹದ ಪುಸ್ತಕಗಳನ್ನು ಕೊಂಕಣಿ ಅಕಾಡೆಮಿ ವತಿಯಿಂದ ಪ್ರಕಟಿಸಿ ಬಿಡುಗಡೆಗೊಳಿಸಲಾಗಿತ್ತು. ಇದರ ಐದನೇ ವರ್ಷದ ಸವಿನೆನಪಿಗಾಗಿ ನನ್ನ ಈ ಪಂಚಮ ಕೃತಿಯನ್ನು ನಮ್ಮ ಕಲಾವೇದಿಕೆಯ ಹೆಸರಲ್ಲಿ ಪ್ರಕಟಿಸಲಾಗಿದೆ. ಕಲಾವೇದಿಕೆಯ ಈ

ಕಾರ್ಯದಲ್ಲಿ ಕೈಜೋಡಿಸಿದ ಎಲ್ಲಾ ಹಾಲಿ ಮತ್ತು ವಿಶ್ರಾಂತ ಸದಸ್ಯರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಇದು ಕುಡುಬಿಯರ ಮದುವೆ ಸಂಪ್ರದಾಯಗಳ ಬಗ್ಗೆ ಕನ್ನಡ ಭಾಷೆಯಲ್ಲಿ ಹೊರಬರುತ್ತಿರುವ ಪ್ರಥಮ ಪುಸ್ತಕ. ಪ್ರಥಮ ಗರ್ಭಧಾರಣೆಯಲ್ಲಿ ವಾಕರಿಕೆಯೂ ಹೆಚ್ಚು. ಪ್ರಸವ ವೇದನೆಯೂ ಹೆಚ್ಚು. ನನಗೆ ಮನವರಿಕೆಯಾದ ಸಂಗತಿಗಳನ್ನು ನನ್ನ ತಿಳುವಳಿಕೆಯ ಪರಿಮಿತಿಯಲ್ಲಿ ಅಷ್ಟೊಂದು ಸುಲಲಿತವಾಗಿ ನಿರೂಪಣೆ ಮಾಡಲು ತಿಳಿಯದುದರಿಂದ ನಾನು ಬರೆದುದರಲ್ಲಿ ಅಲ್ಲಿ ಇಲ್ಲಿ ತಪ್ಪುಗಳು ಗೋಚರಿಸಿದ ಸಂದರ್ಭದಲ್ಲಿ ಅರಿತವರು ನನಗೆ ಮನವರಿಕೆ ಮಾಡಿಕೊಟ್ಟಲ್ಲಿ ತಿದ್ದಿಕೊಂಡು ಸರಿಪಡಿಸಲು ನಾನು ಯಾವತ್ತೂ ತಯಾರಿದ್ದೇನೆ.

ಕೊನೆಯಲ್ಲಿ, ಈ ಪುಸ್ತಕದ ಪ್ರಕಟಣಾ ಪೂರ್ವ ಕ್ಷೇತ್ರ ಕಾರ್ಯ ಕೈಗೊಂಡಾಗ ಸಂದರ್ಶನ ಮತ್ತು ಮಾಹಿತಿ ಸಂಗ್ರಹಕ್ಕೆ ಸಹಕಾರ ನೀಡಿದ ನಮ್ಮ ಕಲಾವಿದರಾದ ವಕೀಲ ವಿಜಯ ಗೌಡ, ರಘುರಾಮ, ಶ್ರೀನಿವಾಸ, ಕುಡುಬಿ ಜಾನಪದ ಕಲಾ ವೇದಿಕೆಯ ಸಹಕಲಾವಿದರು ಮತ್ತು ಪರೋಕ್ಷ ರೀತಿ ಮಾಹಿತಿ ಒದಗಿಸಿದ ಸರ್ವ ಕುಡುಬಿ ಬಾಂಧವರಿಗೆ ಕೃತಜ್ಞತೆ ಅರ್ಪಿಸುತ್ತಿದ್ದೇನೆ. ಕುಡುಬಿಯರ ವಿವಾಹ ಸಂಪ್ರದಾಯಗಳ ವಿವರಣೆಯ ನನ್ನ ಈ ಪುಸ್ತಕ ಮುಂದೆ ಈ ನಿಟ್ಟಿನಲ್ಲಿ ಆಳವಾದ ತಲಸ್ಪರ್ಶಿ ಅಧ್ಯಯನ ಮತ್ತು ಸಂಶೋಧನೆ ಕೈಗೊಳ್ಳುವವರಿಗೆ ಆಧಾರ ಸಾಹಿತ್ಯವಾಗಲಿ, ಇನ್ನಷ್ಟು ಮೌಲ್ಯಯುತ ವಿಚಾರಗಳು ಅನಾವರಣಗೊಂಡು ಕುಡುಬಿ ಸಂಸ್ಕೃತಿಯ ಅಸ್ತಿತ್ವವನ್ನು ಸಮಾಜ ಅರಿಯುವಂತಾಗಲೆಂದು ಹಾರೈಸುತ್ತೇನೆ.

ಯಂ. ಗೋಪಾಲ ಗೌಡ

ಪಟ್ಲಚಿಲ್, ಎಡಪದವು, **2016**

ವಿಷಯಸೂಚಿ

****

1. ಕುಡುಬಿಯರ ಮೂಲ, ವಲಸೆ, ನೆಲೆ, ಪ್ರಭೇದ ಮತ್ತು ಒಳವಿಭಜನೆಗಳು

ಈ ಜಗತ್ತಿನ ಸೃಷ್ಟಿಯಾಗಿ ಭೂಮಿಯ ಮೇಲೆ ಮಾನವ ಮೊತ್ತ ಮೊದಲು ಕಣ್ಣುಬಿಟ್ಟಾಗ ಅವನಿಗೆ ಕೆಲವು ವಿಶೇಷ ಪ್ರಾಕೃತಿಕ ಶಕ್ತಿಗಳು ಗೋಚರಿಸಿದವು. ಹಗಲಲ್ಲಿ ಉರಿಯುವ ಸೂರ್ಯ, ರಾತ್ರಿ ಹಾಲು ಚೆಲ್ಲಿದಂತಹ ಬೆಳದಿಂಗಳು, ಬೀಸುವ ಗಾಳಿ, ಹರಿಯುವ ನೀರು, ಅನಂತ ಆಕಾಶ, ಭೋರ್ಗರೆವ ಅಗಾಧ ಸಮುದ್ರ, ಮೋಡ, ಮಿಂಚು, ಗುಡುಗು, ಮಳೆ, ದೈತ್ಯಗಾತ್ರದ ಮರಗಿಡ ಕಲ್ಲುಗಳು, ಪರ್ವತ, ಝರಿ, ಗ್ರಹಣ, ಉಲ್ಕಾಪಾತ, ಜ್ವಾಲಾಮುಖಿ.... ಇತ್ಯಾದಿ ತನ್ನ ಆಲೋಚನಾ ಶಕ್ತಿಯ ಹೊರಗಿನ ಗೋಚರ ಅಗೋಚರ ಸಂಗತಿಗಳನ್ನು ಭಯ ಮತ್ತು ಕೌತುಕ ದೃಷ್ಟಿಯಿಂದ ನೋಡಿ ಭಕ್ತಿಯಿಂದ ನಡೆದುಕೊಳ್ಳಲು ಪ್ರಾರಂಭಿಸಿದ. ಪ್ರಕೃತಿಯ ವಿಕೋಪ ಮತ್ತು ಅನುಗ್ರಹ ವಿಶೇಷವನ್ನು ಕಂಡು ಬೆರಗಾದ ಮಾನವ ಪ್ರಕೃತಿಯಲ್ಲಿ ಸರ್ವೋತ್ಕೃಷ್ಟ ಚೈತನ್ಯವನ್ನು ಗುರುತಿಸಿದ. ತಾನೆಷ್ಟು ಪ್ರಯತ್ನಪಟ್ಟರೂ ಈ ವಿಶೇಷ ಶಕ್ತಿಗಳ ಪ್ರಭಾವಲಯದಿಂದ ತಪ್ಪಿಸಿಕೊಂಡು ಜೀವಿಸಲು ಅಸಾಧ್ಯ ಅಂತ ಮನಗಂಡು ಆ ಶಕ್ತಿಗಳಲ್ಲಿ ದೇವತ್ವ, ದೈವತ್ವವನ್ನು ಅವಾಹನೆಗೈದು ಆರಾಧನಾ ಭಾವದಿಂದ ನೋಡಲು ಪ್ರಾರಂಭಿಸಿದ. ಅಂತಹ ಶಕ್ತಿಗಳ ಪ್ರಭಾವ ತನ್ನ ಮೇಲಾಗುತ್ತದೆ ಹೊರತು ತಾನು ಆ ಶಕ್ತಿಗಳನ್ನು ನಿಯಂತ್ರಿಸಲು ಅಸಮರ್ಥ ಅಂತ ಅರಿವಾದಾಗ ಆ ಶಕ್ತಿಗಳನ್ನು ಪೂಜ್ಯಭಾವದಿಂದ ನೋಡಲುಪಕ್ರಮಿಸಿದ. ಈ ರೀತಿ ವಿವಿಧ ಆಕಾರದ ಕಲ್ಲು, ಬೃಹದ್ಗಾತ್ರದ ಪರ್ವತ, ಗಿಡಮರ ಬಳ್ಳಿಗಳು, ಮೃಗಪಕ್ಷಿಗಳು ಹುತ್ತ, ಗಾಳಿ, ನೀರು... ಮುಂತಾದ ಪ್ರಾಕೃತಿಕ ವಸ್ತುಗಳನ್ನು ಆರಾಧಿಸುವ ಸಮುದಾಯದ ಜನರನ್ನು 'ಬುಡಕಟ್ಟು ಜನಾಂಗ' ಅನ್ನುತ್ತಾರೆ. ಅತಿ ಮಾನುಷ ಶಕ್ತಿಗಳ ಪ್ರಭಾವದಿಂದಲೇ ಲೋಕದ ವ್ಯವಹಾರವೆಲ್ಲ ನಡೆಯುವುದೆಂದು ಭಾವಿಸುವ ಬುಡಕಟ್ಟು ಸಮುದಾಯಗಳಿಗೆ ನಿಸರ್ಗವೇ ಶಕ್ತಿದೇವತೆ.

ಇಂಗ್ಲೀಷಿನ TRIBE ಎಂಬುದಕ್ಕೆ ಸಂವಾದಿಯಾಗಿ 'ಬುಡಕಟ್ಟು' ಶಬ್ದ ನಾಗರಿಕತೆಯ ದೃಷ್ಟಿಯಿಂದ ಇನ್ನೂ ಪ್ರಾಥಮಿಕ ಅವಸ್ಥೆಯಲ್ಲೇ ಇರುವ ಜನಾಂಗವನ್ನು ಸೂಚಿಸುತ್ತದೆ. ಬುಡಕಟ್ಟು ಕೈಗಾರಿಕಾ ಪೂರ್ವಯುಗದ ಒಂದು ಸ್ವತಂತ್ರ, ಸರಳ, ಸ್ವಾವಲಂಬೀ ಸಮಾಜ. ಈ ಬುಡಕಟ್ಟುಗಳ ಜೀವನ ವಿಧಾನ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸಂಪ್ರದಾಯಗಳಲ್ಲಿ ಇರುವ ಕೆಲಮಟ್ಟಿನ ಹೋಲಿಕೆಗಳು ಇವುಗಳ ಸಾಮಾನ್ಯ ವೈಶಿಷ್ಟ್ಯಗಳನ್ನು ಬಿಂಬಿಸುತ್ತವೆ. ಅಂದರೆ ಈ ಬುಡಕಟ್ಟುಗಳು ಬೆಟ್ಟದ ತಪ್ಪಲಲ್ಲಿ, ನದೀ ಬಯಲಲ್ಲಿ ನೆಲಸಿ ಬೇಸಾಯ ಮಾಡುತ್ತಾ ಬೇಟೆಯಾಡಿ, ಕಾಡುತ್ಪತ್ತಿಗಳನ್ನು ಆಹಾರವಾಗಿ ಉಪಯೋಗಿಸುತ್ತಾ, ನಿಸರ್ಗದ ಸರ್ವ ಚೇತನಗಳಲ್ಲಿ ದೇವರ ಅಸ್ತಿತ್ವವನ್ನು ಕಂಡು ಆರಾಧಿಸುತ್ತಾ, ತಮ್ಮ ಬದುಕಿನ ಸಾರ್ಥಕತೆಗಾಗಿ ಹಾಡು ಕುಣಿತಗಳಲ್ಲಿ ಮೈಮರೆಯುತ್ತ ಬರುವ ಇವರ ಕ್ರಮಗಳೆಲ್ಲ

ಹೆಚ್ಚಿನ ಬುಡಕಟ್ಟುಗಳಲ್ಲಿ ಕಾಣಬರುವ ಸಮಾನ ಲಕ್ಷಣಗಳಾಗಿವೆ. ಕುಡುಬಿ ಜನಾಂಗವೂ ಇವೆಲ್ಲವುಗಳಿಂದ ಹೊರತಾಗಿಲ್ಲ. ಕುಡುಬಿಯರ ಶಾರೀರಿಕ ರಚನೆ, ಮುಖಲಕ್ಷಣ, ಭಾಷೆ, ಉಡುಗೆ ತೊಡುಗೆ, ಜೀವನಕ್ರಮ, ಆಚಾರವಿಚಾರ, ನಂಬಿಕೆ, ದೈಹಿಕ ಶ್ರಮ, ಧಾರ್ಮಿಕ ಸಂಸ್ಕೃತಿ ಸಂಪ್ರದಾಯಗಳು, ಮುಗ್ಧ ಮತ್ತು ಸರಳ ಸ್ವಭಾವ – ಈ ಎಲ್ಲಾ ವಿಷಯಗಳಲ್ಲಿ ಕುಡುಬಿಯರದೇ ಆದ, ಬುಡಕಟ್ಟು ಜನಾಂಗದ ಪ್ರತ್ಯೇಕತೆಯಿದೆ.

ಸ್ವಾತಂತ್ರ್ಯಪೂರ್ವದಲ್ಲಿ, ಅಂದರೆ ಬ್ರಿಟಿಷರ ಕಾಲದಲ್ಲಿ ನಡೆದ ವರದಿಗಳ ಆಧಾರದಲ್ಲಿ ತಯಾರಿಸಿದ ದಾಖಲೆಗಳ ಪ್ರಕಾರ ಕರ್ನಾಟಕದಲ್ಲಿ ಐವತ್ತು ಬಗೆಯ ಬುಡಕಟ್ಟು ಸಮುದಾಯಗಳನ್ನು ಗುರುತಿಸಲಾಗಿದೆ. ಸ್ವಾತಂತ್ರ್ಯಾನಂತರ ಬುಡಕಟ್ಟುಗಳ ಸಮಗ್ರ ಮತ್ತು ವೈಜ್ಞಾನಿಕವಾದ ಸಮೀಕ್ಷೆ ನಡೆದಿಲ್ಲ. ಇದರಿಂದಾಗಿ ಕೆಲವು ಅರ್ಹವಲ್ಲದ ಸಮುದಾಯಗಳು ಪಟ್ಟಿಯಲ್ಲಿ ಸೇರಿವೆ. ಕೆಲವು ಬುಡಕಟ್ಟುಗಳ ಹೆಸರು ಎರಡು... ಮೂರು ರೀತಿಯಲ್ಲಿ ಬಳಕೆಯಾಗಿದ್ದು ತಿಳಿದುಬರುತ್ತದೆ. ಸೂಕ್ತ ಅಧ್ಯಯನ ಮತ್ತು ಸಮೀಕ್ಷೆಯ ಕೊರತೆಯಿಂದ ನಿಜವಾಗಿ ಬುಡಕಟ್ಟು ಲಕ್ಷಣಗಳುಳ್ಳ ಹಾಗೂ ಪರಂಪರೆಯಿಂದ ವಿಶಿಷ್ಟ ಜೀವನ ನಡೆಸಿಕೊಂಡು ಬಂದಿರುವ ಕೆಲವು ಅರ್ಹ ಬುಡಕಟ್ಟು ಸಮುದಾಯಗಳು ಸರಕಾರದ ದಾಖಲೆಗಳಲ್ಲಿ ಬುಡಕಟ್ಟುಗಳೆಂದು ಪರಿಗಣಿಸಲ್ಪಟ್ಟಿಲ್ಲ ಎಂಬುದು ತಜ್ಞರ ಅಭಿಪ್ರಾಯ. ಇಂತಹ ನಿರ್ಲಕ್ಷಕ್ಕೊಳಗಾದ ಸಮುದಾಯಗಳಲ್ಲಿ ಕುಡುಬಿ ಸಮುದಾಯವೂ ಒಂದು.

ಕುಡುಬಿಯರು ವಾಸ್ತವ್ಯವಿರುವ ನೆಲೆಗಳು, ಒಂದು ಕಾಲದಲ್ಲಿ ಕಾಡೇ ನಾಡಾಗಿದ್ದ ಅವರಿಗೆ ಮತ್ತು ಕಾಡಿಗೆ ಇರುವ ಸಂಬಂಧಗಳು, ಆಹಾರ ಸಂಗ್ರಹಣೆ, ಬೇಟೆ ಮತ್ತು ಕುಮರಿ ವ್ಯವಸಾಯದಂತಹ ಆದಿಮ ಪದ್ಧತಿಗಳು, ಸಮೂಹ ಜೀವನಕ್ರಮ, ಪ್ರತ್ಯೇಕ ಭಾಷೆ ಹಾಗೂ ಅವರ ವಿಶಿಷ್ಟವಾದ ಸಾಂಸ್ಕೃತಿಕ ಆಚರಣೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವರು ಖಂಡಿತವಾಗಿ ಬುಡಕಟ್ಟು ಜನಾಂಗ ಎಂಬುದರಲ್ಲಿ ಎರಡು ಮಾತಿಲ್ಲ. ಸರಕಾರೀ ದಾಖಲೆಗಳಲ್ಲಿ ನಮೂದಾಗಿರದಿದ್ದರೂ ಬುಡಕಟ್ಟು ಜನಾಂಗದ ಹೆಚ್ಚಿನ ಲಕ್ಷಣಗಳನ್ನು ಕುಡುಬಿಯರು ಹೊಂದಿದ್ದಾರೆ ಎನ್ನುವುದು ಅಧ್ಯಯನಕಾರರು ಮತ್ತು ಸಂಶೋಧಕರ ಅಭಿಪ್ರಾಯಗಳಿಂದ ವ್ಯಕ್ತವಾಗುತ್ತದೆ.

ಈ ಅಧ್ಯಯನಕಾರರು ಮತ್ತು ಸಂಶೋಧಕರು ಕುಡುಬಿಯರನ್ನು, ಅವರ ಗ್ರಂಥಗಳಲ್ಲಿ 'ಬೇಟೆಯಾಡುವ ಬುಡಕಟ್ಟು', 'ಜಾಗ ಸ್ಥಳಾಂತರ ಮಾಡಿ ಕೃಷಿ ಮಾಡುವ ಬುಡಕಟ್ಟು' 'ಮೂಲನಿವಾಸಿ ವಂಶದ ಭೂರಹಿತ ಕಾರ್ಮಿಕರು' ಎಂಬುದಾಗಿ ವಿವಿಧ ರೀತಿಯಲ್ಲಿ ವರ್ಣಿಸಿದ್ದಾರೆ. ಭಾರತದ ಖ್ಯಾತ ಸಮಾಜ ಶಾಸ್ತ್ರಜ್ಞ ಜಿ.ಎಸ್.ಘುರ್ಯೆ ಮತ್ತು ಇಂಗ್ಲೆಂಡಿನ ಸಾಮಾಜಿಕ ಮಾನವ ಶಾಸ್ತ್ರಜ್ಞ ಜೆ.ಹೆಚ್. ಹಟನ್ – ಇವರ ಪ್ರಕಾರ 'ಕುಡುಬಿ' ಶಬ್ದ ಒಂದು ಸಮಾಜದ ಕೃಷಿ ಕಾರ್ಯಕ್ಕೆ ಸಂಬಂಧಿಸಿದ್ದು ಆದಿವಾಸಿ

ಬುಡುಕಟ್ಟು ಮೂಲಕ್ಕೆ ಸೇರಿದೆ ಎಂಬುದಾಗಿ ಕುಡುಬಿಯರ ಬಗ್ಗೆ ಪಿ.ಹೆಚ್.ಡಿ. ಮಾಡಿದ ಬ್ರಹ್ಮಾವರದ ಸಂಶೋಧಕ ಡಾ। ವೈ. ರವೀಂದ್ರನಾಥ ರಾವ್‌ರವರು ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ. ಮದರಾಸು ಸರಕಾರ 1941ರಿಂದ 1956ರ ವರೆಗೆ 'ಪರಿಶಿಷ್ಟ ಜಾತಿ' ಎಂತ ಪರಿಗಣಿಸಿತ್ತು. 1993ರ ವರೆಗೆ ಕರ್ನಾಟಕ ಸರಕಾರ 'ಬಿ' ವರ್ಗದಲ್ಲಿ ಮತ್ತು ಆ ನಂತರ 1994ರ ಚಿನ್ನಪ್ಪ ರೆಡ್ಡಿ ಆಯೋಗದ ಶಿಫಾರಸು ಪ್ರಕಾರ 'ಅತೀ ಹಿಂದುಳಿದ ಜಾತಿ' ಪಟ್ಟಿಯಲ್ಲಿ ಪುನರ್ವರ್ಗೀಕರಣ ಮಾಡಿ ಪ್ರಸ್ತುತ ಪ್ರವರ್ಗ 1ರಲ್ಲಿ ಸೇರಿಸಿದೆ. (ಡಾ। ವೈ. ರವೀಂದ್ರನಾಥ ರಾವ್ – ಕುಡುಬಿ ಬುಡಕಟ್ಟು ಜನಾಂಗ – 2005 ಪುಟ 5) – (ಸರಕಾರದ ಆದೇಶ ಸಂಖ್ಯೆ : ಸಕಇ 150 ಬಿಸಿಎ 94. ತಾ. 17–9–1994 ಕ್ರ.ಸಂ. 27)

1894ರಲ್ಲಿ ಮದರಾಸಿನಿಂದ ಪ್ರಕಟವಾದ ಜೆ. ಸ್ಟರಕ್‌ರವರ Madras District Manual of South Kanara ಭಾಗ 1ರಲ್ಲಿ ಕುಡುಬಿಯರ ಬುಡಕಟ್ಟು ಲಕ್ಷಣವನ್ನು ಹೀಗೆ ವಿವರಿಸಿದ್ದಾರೆ– 'They shift their dwellings from place to place in the forests for the purpose of Kumari cultivation, which consists infalling and burning the forest cultivating the clearing for a few years and then passing on to the another path'. ಎಚ್. ವಿ. ನಂಜುಂಡಯ್ಯ ಮತ್ತು ಎಲ್.ಕೆ.ಅನಂತಕೃಷ್ಣ ಅಯ್ಯರ್‌ರವರು (1928 ಸಂ.2:740) ತಮ್ಮ ಅರೆಕುಡುಬಿಯರ ಕುರಿತ ವಿಶ್ಲೇಷಣೆಯಲ್ಲಿ ಈ ಜನವರ್ಗವು ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಸ್ಥಳ ಬದಲಿಕೆಯ ಬೇಸಾಯ ಮಾಡಿಕೊಂಡು ದಟ್ಟಡವಿಗಳಲ್ಲಿ ಮತ್ತು ಗುಡ್ಡಬೆಟ್ಟ ಕಣಿವೆಗಳಲ್ಲಿ ವಾಸಿಸುವ ಅಲೆಮಾರಿ ಬುಡಕಟ್ಟು ಜನಾಂಗ ಎಂದು ಬರೆದಿದ್ದಾರೆ. ಸ್ಟೀಫನ್ ಫ್ರುಚ್ (1973:246)ರವರು 'ಕುಡುಬಿಯರು ದಕ್ಷಿಣ ಭಾರತದಲ್ಲಿರುವ ಆಹಾರ ಸಂಗ್ರಹಣೆಯ ಹಂತದಲ್ಲಿರುವ ಮತ್ತು ಬೇಟೆಯಾಡುವ ಬುಡಕಟ್ಟು ಸಮುದಾಯ' ಎಂದು ಉಲ್ಲೇಖಿಸಿದ್ದಾರೆ. ಕುಡುಬಿಯರು 'ಜಾತಿ' ಸಮಾಜಕ್ಕೆ ಸೇರಿದವರೆಂದು ಬಗೆದು ಕರ್ನಾಟಕ ಹಿಂದುಳಿದ ಆಯೋಗದ ವರದಿ (ಎಲ್.ಜಿ. ಹಾವನೂರ ಸಮಿತಿ ವರದಿ ಸಂಪುಟ 1. ಪುಟ 252. ಕ್ರ.ಸಂ. 15) ಇವರನ್ನು ಹಿಂದುಳಿದ ಜಾತಿಯ ಪಟ್ಟಿಯಲ್ಲಿ ಸೇರಿಸಿದೆ. ಹೀಗಿದ್ದರೂ ಹಾವನೂರ ವರದಿಯಲ್ಲಿ ಕುಡುಬಿಯರ ಬಗೆಗೆ ಹೀಗೆ ಬರೆದಿದೆ– ದಕ್ಷಿಣ ಕನ್ನಡದ ಕುಡುಬಿಯರು ಗುಡ್ಡಗಾಡು ಜನರು. ಅವರು ಪ್ರತ್ಯೇಕವಾಗಿ ಕಾಡುಗಳಲ್ಲಿ ವಾಸಿಸುತ್ತಾರೆ. ಅವರ ಭಾಷೆ ಮರಾಠಿ ಮಿಶ್ರಿತ ಕೊಂಕಣಿ. ಇತರ ಸಮುದಾಯದ ಸಂಸ್ಕೃತಿಗಿಂತ ಭಿನ್ನವಾದ ತಮ್ಮದೇ ಆದ ಒಂದು ಸಂಸ್ಕೃತಿ ಇವರಲ್ಲಿ ಇದೆ. ಕರ್ನಾಟಕ ರಾಜ್ಯ ಮರುವಿಂಗಡಣೆ ಆಗುವ ಮೊದಲು ಅವರನ್ನು ಅನುಸೂಚಿತ ಜಾತಿ ಎಂದು ಪರಿಗಣಿಸಲಾಗಿತ್ತು. ಈಗ ಅವರನ್ನು ಅನುಸೂಚಿತ ಜಾತಿಗಳ ಪಟ್ಟಿಯಿಂದ ತೆಗೆದು ಹಾಕಲಾಗಿದೆ. ಅವರು ಮುಳ್ಳು ಹಂದಿಯನ್ನು ಮತ್ತು ಮೊಲಗಳನ್ನು ಹಿಡಿಯುತ್ತಾರೆ. ಅವರು ಕಾಡಿನಲ್ಲಿರುವ ಗಿಡಮೂಲಿಕೆಗಳನ್ನು ಸಂಗ್ರಹಿಸಿ ಮಾರುಕಟ್ಟೆಗಳಲ್ಲಿ ಮಾರಿ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಾರೆ (ಹಾವನೂರ ವರದಿ –ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ ವರದಿ ಸಂಪುಟ 1 ಭಾಗ 1,

1975). ಹಾವನೂರು ಅವರು ಕುಡುಬಿಯರನ್ನು ಗುಡ್ಡಗಾಡು ಜನಾಂಗ ಎಂದು ಕರೆದು, ಅವರಿಗೆ ಪ್ರತ್ಯೇಕವಾದ ಒಂದು ಸಂಸ್ಕೃತಿ ಇದೆ ಎಂದು ಒಪ್ಪಿಕೊಂಡು ತಮ್ಮ ವರದಿಯಲ್ಲಿ ಅವರನ್ನು ಹಿಂದುಳಿದ ವರ್ಗಗಳ ಯಾದಿಯಲ್ಲಿ ಸೇರಿಸಿದ್ದು – ಇದು ಕುಡುಬಿಯರಿಗೆ ತುಂಬಾ ನೋವನ್ನು ತಂದಿದೆ (ಪ್ರೊ. ಎ.ವಿ.ನಾವಡ – ಕೊಂಕಣದ ಕುಡುಬಿಯರು– 2008 ಪುಟ 12–13).

ಫೇರ್‌ಚೈಲ್ಡ್ ಎಂಬ ಮಾನವ ಶಾಸ್ತ್ರಜ್ಞರು ಹೇಳುವಂತೆ 'ಅಲ್ಪಸಂಖ್ಯಾತ ರಕ್ತ ಸಂಬಂಧಿಗಳನ್ನು, ಗ್ರಾಮಗಳನ್ನು ಇಲ್ಲವೇ ಉಪತಂಡಗಳನ್ನು, ನಿಶ್ಚಿತ ಭೂಪ್ರದೇಶವನ್ನು, ತನ್ನದೇ ಆದ ಖಚಿತ ಭಾಷೆಯನ್ನು, ತದೇಕ ಸಂಸ್ಕೃತಿಯನ್ನು ಮತ್ತು ಒಂದೇ ಸಮನಾದ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಹೊಂದಿ ಹೊರಗಿನವರಿಗೂ ನಮಗೂ ವ್ಯತ್ಯಾಸವಿದೆ ಎಂಬ ಭಾವನೆಯುಳ್ಳ ಸಾಮಾಜಿಕ ಗುಂಪು ಆದಿವಾಸಿ ಅಥವಾ ಬುಡಕಟ್ಟು ಸಮಾಜ ಎನಿಸಿಕೊಳ್ಳುತ್ತದೆ' (ಉಲ್ಲೇಖ : ಎ.ವಿ.ನಾವಡ – ಕರ್ನಾಟಕ ಬುಡಕಟ್ಟುಗಳು ಸಂಪುಟ 1, ಪುಟ 270)

ಕುಡುಬಿ ಸಮುದಾಯವನ್ನು ಕೆಲವು ಸಂಶೋಧಕರು ಮತ್ತು ಅಧ್ಯಯನಕಾರರು 'ಆದಿವಾಸಿ' ಎಂಬುದಾಗಿ ನಮೂದಿಸಿದ್ದಾರೆ. ಆದಿವಾಸಿ ಅಂದಾಕ್ಷಣ ನಮ್ಮ ಜ್ಞಾನಕ್ಕೆ ಅರಿವಾಗುವುದು– ಒಂದು ಅತೀ ಚಿಕ್ಕ, ಇತರ ಸಮುದಾಯಗಳೊಂದಿಗೆ ಮಿಳಿತವಾಗದ, ಒಬ್ಬರಿಂದೊಬ್ಬರಿಗೆ ಗಾಢವಾದ ಕೌಟುಂಬಿಕ ಸಂಬಂಧ ಹೊಂದಿದ, ನಾಗರಿಕ ಸಮುದಾಯಕ್ಕಿಂತ ಭಿನ್ನವಾದ ಸಮುದಾಯ. ಇಲ್ಲಿ ರಕ್ತ ಸಂಬಂಧದ ಪಾತ್ರ ಹಿರಿದು. ಪ್ರಕೃತಿಯಲ್ಲಿನ ಅಸಾಮಾನ್ಯ, ಅಲೌಕಿಕ ಮತ್ತು ಪವಿತ್ರ ಶಕ್ತಿಗಳಲ್ಲಿ ಅವರ ನಂಬಿಕೆ ಅಪಾರ. ನಿಸರ್ಗದಲ್ಲಿ ದೈವತ್ವವನ್ನು ಸಾಕಾರಗೊಳಿಸುವ ಸಮಾಜ. ಪ್ರಪಂಚದಲ್ಲಿನ ಸರ್ವಜೀವಿಗಳ ಅಸ್ತಿತ್ವವೂ ಅಶರೀರ/ಅಗೋಚರವಾದ ಒಂದು ಚೈತನ್ಯದಿಂದ ಆಗುತ್ತದೆ. ಆ ಶಕ್ತಿಯ ವಿರೋಧ ಹೋಗುವುದು ಅಸಾಧ್ಯ ಎಂದು ನಂಬುತ್ತಾರೆ.

ಅಂದರೆ 'ಆದಿವಾಸಿ' ಶಬ್ದಕ್ಕೆ ಅನೇಕ ಕಾರಣಗಳಿಂದ ನಕಾರಾತ್ಮಕ ಅರ್ಥ ವ್ಯಕ್ತವಾಗುತ್ತದೆ. ಆದಿವಾಸಿ ಪಂಗಡ ನಾಗರೀಕ ಪ್ರಕ್ರಿಯೆಯ ಪ್ರಭಾವಕ್ಕೆ ಒಳಗಾಗುವುದಿಲ್ಲ. ಆದುದರಿಂದ ಆಧುನಿಕ ಮೌಲ್ಯಗಳ ದೃಷ್ಟಿಯಿಂದ 'ಮೌಢ್ಯ' ಪಂಗಡವಾಗಿ ಗುರುತಿಸಲ್ಪಡುತ್ತದೆ. ಈ ಕಾರಣದಿಂದಾಗಿ ಕುಡುಬಿಯರಂತಹ ಬುಡಕಟ್ಟು ಪಂಗಡಕ್ಕೆ ಪೂರ್ವಾಗ್ರಹ ಪೀಡಿತವಾಗಿ 'ಆದಿವಾಸಿ' ಹೆಸರು ತಗಲಿಕೊಂಡಿದೆ. ಸಾಮಾನ್ಯರಿಗೂ 'ಆದಿವಾಸಿ' ಎಂಬಾಗ ವಿಕೃತ ಅಥವಾ ಚಾರಿತ್ರ್ಯಹೀನ ಮನುಷ್ಯರ ಪಂಗಡ ಎಂದು ಭಾಸವಾಗುತ್ತದೆ. ಕುಡುಬಿಯರನ್ನು ಅಜ್ಞಾನಿಗಳು, ಬುದ್ದು –ಹೆಡ್ಡ ಸ್ವಭಾವದವರು ಎಂದು ಪರಿಗಣಿಸಲು ಇದೇ ಕಾರಣ. 'ಆದಿವಾಸಿ' ಎಂದರೆ ನಾಗರೀಕರ ಸಮಾನರಲ್ಲದ ಸಮುದಾಯ ಅಂತ ಅರ್ಥಬರುತ್ತದೆ. ಅನ್ವರ್ಥ ರೀತಿಯಲ್ಲಿ ಅನಾಗರಿಕ, ಕಾಡುಮನುಷ್ಯ ಎಂದೂ ಅರ್ಥಮಾಡಬಹುದು.

ಕುಡುಬಿಯರ ಸಮಾಜ ಶಾಸ್ತ್ರೀಯ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ಅವಲೋಕಿಸಿದರೆ ಎಲ್ಲಾ ರೀತಿಯಿಂದಲೂ ಕುಡುಬಿಯರು ಆದಿವಾಸಿಗಳಿಗಿಂತ ಸುಧಾರಿತ, ಸುಸಂಸ್ಕೃತ ಜೀವನ ಸಾಗಿಸುತ್ತಿದ್ದಾರೆ.

ಭೌತಿಕ ಮಾನವ ಶಾಸ್ತ್ರ ಮತ್ತು ಸಾಂಸ್ಕೃತಿಕ ಮಾನವ ಶಾಸ್ತ್ರದ ದೃಷ್ಟಿಯಿಂದ ಕುಡುಬಿಯರನ್ನು ಬುಡಕಟ್ಟು ಎಂದೇ ಒಪ್ಪಿಕೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ ಒಂದು ಬುಡಕಟ್ಟು ಸಮುದಾಯ ತನ್ನ ಪರಿಸರಕ್ಕಿಂತ ಪ್ರತ್ಯೇಕವಾದ ಭಾಷೆ, ಆಚಾರವಿಚಾರಗಳನ್ನು ಹೊಂದಿರುತ್ತದೆ. ಈ ಬುಡಕಟ್ಟುಗಳು ವೈದಿಕ ಧರ್ಮದ ಪ್ರಭಾವದಿಂದ ತಪ್ಪಿಸಿಕೊಂಡದ್ದರಿಂದ ತಮ್ಮದೇ ವಿಶಿಷ್ಟವಾದ ಸಂಸ್ಕೃತಿಯನ್ನು ರೂಪಿಸಿಕೊಂಡವು. ಈ ವಿಶಿಷ್ಟ ಅವಕಾಶ ಜಾತಿ ಸಮಾಜಗಳಿಗೆ ದೊರಕಲಿಲ್ಲ. ಆಧುನಿಕ ಕಾಲದಲ್ಲಿ ಉಂಟಾಗುತ್ತಿರುವ ಸಾಂಸ್ಕೃತಿಕ ಸಂಮಿಶ್ರಣದ ಫಲವಾಗಿ ಈ ಬುಡಕಟ್ಟು ಸಮುದಾಯ ವೈದಿಕ ಧರ್ಮದ ತೆಕ್ಕೆಯೊಳಗೆ ಬರುತ್ತಿವೆ. ಹೀಗಾಗಿ ಇವರ ರೀತಿನೀತಿ ನಡಾವಳಿಗಳಲ್ಲಿ ವೈದಿಕ ಧರ್ಮದ ಅನೇಕ ಗುಣಧರ್ಮಗಳನ್ನು ಗುರುತಿಸಬಹುದಾಗಿದೆ. ಜೊತೆಗೆ ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳಲು ಹೆಣಗುತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. (ಪ್ರೊ. ಎ.ವಿ.ನಾವಡ – ಕೊಂಕಣದ ಕುಡುಬಿಯರು – 2008 ಪುಟ 13) ಈ ಎಲ್ಲಾ ಕಾರಣಗಳಿಂದ ಕುಡುಬಿಯರಿಗೆ 'ಬುಡಕಟ್ಟು–ಜನಾಂಗ' ಶಬ್ದವೇ ಹೆಚ್ಚು ಸೂಕ್ತವಾಗಿದೆ.

ಆದಿಮ ಸಂಸ್ಕೃತಿ ಅಥವಾ ಬುಡಕಟ್ಟು ಸಂಸ್ಕೃತಿ –ಶಹರ ಅಥವಾ ಗ್ರಾಮ ಸಂಸ್ಕೃತಿಗಿಂತ ಭಿನ್ನವಾದ ಒಂದು ಸಂಸ್ಕೃತಿ. "ಸಂಸ್ಕೃತಿ ವಿಶ್ವವ್ಯಾಪಿ" ಅನ್ನುವಾಗ 'ಒಂದು ಸಂಸ್ಕೃತಿ' ಎಂಬುದೂ ಪ್ರಮುಖವಾಗುತ್ತದೆ. ಇಲ್ಲಿ ಮನುಷ್ಯ ಬಡವನೋ– ಧನಿಕನೋ, ಮೇಲ್ವರ್ಗದವನೊ –ಕೆಳವರ್ಗದವನೋ? –ಈ ಯಾವ ಲೆಕ್ಕಾಚಾರವೂ ಇರುವುದಿಲ್ಲ. ಸಂಸ್ಕೃತಿ ಎಂಬ ಪರಿಕಲ್ಪನೆಯಲ್ಲಿ ಮೇಲು ಸಂಸ್ಕೃತಿ – ಕೀಳುಸಂಸ್ಕೃತಿ ಎಂಬ ಭೇದವಿಲ್ಲ. ಹರ್ಸ್‌ಕೊವಿಟ್ಸ್ ಎಂಬ ಸಂಶೋಧಕರು ಹೇಳುವ ಪ್ರಕಾರ 'ಮನುಷ್ಯನ ಜೀವನ ವಿಧಾನವೇ ಸಂಸ್ಕೃತಿ' (Cultural anthropology by HERKOVITS). ಈ ವ್ಯಕ್ತಿ ಯಾರೂ ಆಗಬಹುದು, ಅವರು ಎಲ್ಲಿಯೂ ವಾಸ್ತವ್ಯವಿರಬಹುದು. ಮನುಷ್ಯನಿದ್ದಲ್ಲಿ ಒಂದು ಸಂಸ್ಕೃತಿ ಇರುತ್ತದೆ. ಈ ಸಂಸ್ಕೃತಿ ಒಂದೇ ರೀತಿ, ಒಂದೇ ವಿನ್ಯಾಸದ್ದು ಆಗಿರುವುದಿಲ್ಲ. ಒಂದೊಂದು ಪ್ರದೇಶದಲ್ಲಿ ಒಂದೊಂದು ಜನಾಂಗದವರ ಒಂದೊಂದು ಸಂಸ್ಕೃತಿ ಇರಬಹುದು. 'ಒಂದು ಸಂಸ್ಕೃತಿ' ಎಂಬ ಪರಿಕಲ್ಪನೆ ಉದ್ಭವಿಸುವುದು ಅಥವಾ ಪ್ರಚಲಿತವಾಗುವುದು ಇದೇ ನೆಲೆಗಟ್ಟಿನಲ್ಲಿ. ತನ್ನದೇ ಸಂಸ್ಕೃತಿಯ ಪರಂಪರೆ ಇರುವ ಕುಡುಬಿ ಬುಡಕಟ್ಟು ಜನಾಂಗ ಇತರರಿಗಿಂತಲೂ ವಿಭಿನ್ನ ರೀತಿಯ ಜೀವನ ಕ್ರಮ ಮತ್ತು ಆಚರಣೆಗಳ ಸಂಪ್ರದಾಯವನ್ನು ಪಾಲಿಸುತ್ತಾ ಬಂದಿದೆ.

ಗೋವಾ ಆಸುಪಾಸಿನ ಪ್ರದೇಶಗಳ ಮೂಲನಿವಾಸಿಗಳಾಗಿದ್ದ ಜನಾಂಗೀಯರು ಹದಿಮೂರನೇ ಶತಮಾನದಿಂದ ಹದಿನೇಳನೇ ಶತಮಾನ ಪರ್ಯಂತ ಅಲ್ಲಿನ ವಿವಿಧ ಕಷ್ಟನಷ್ಟ, ಪ್ರಾಕೃತಿಕ ವೈಪರೀತ್ಯ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಸಮತೋಲನ, ದಬ್ಬಾಳಿಕೆಯ ಮತಾಂತರ ಮುಂತಾದ ಕಾರಣಗಳಿಂದ ನೆರೆಯ ರಾಜ್ಯಗಳಿಗೆ ಸ್ಥಳಾಂತರಗೊಳ್ಳಬೇಕಾಯಿತು. ದೆಹಲಿಯ ಖಿಲ್ಜಿ, ತೆಂಕಣದ ಬಹಮನಿ, ಬಿಜಾಪುರದ ಸುಲ್ತಾನ..... ಈ ಮುಸ್ಲಿಮ್ ರಾಜರ ಆಡಳಿತ ಕಾಲದಲ್ಲಿ ಎಡೆಬಿಡದೆ ಯುದ್ಧಗಳಾಗುತ್ತಿದ್ದವು. ಮುಸ್ಲಿಮ್ ದೊರೆಗಳು ಅಧಿಕಾರದ ಬಲದಿಂದ ಗೋವಾದ ಮೂಲ ನಿವಾಸಿಗರನ್ನು ಬಲಾತ್ಕಾರದಿಂದ ಮತಾಂತರ ಮಾಡುತ್ತಿದ್ದರು. ಕೊನೆಗೆ ಗೋವಾ ಪೋರ್ಚುಗೀಸರ ಕೈವಶವಾಯಿತು. ಪೋರ್ಚುಗೀಸರ ಆಡಳಿತ ಮುಸ್ಲಿಮರಿಗಿಂತಲೂ ಕಠಿಣವಾಗಿದ್ದು, ಮತಾಂತರ ಕಾರ್ಯವನ್ನು ತೀವ್ರಗೊಳಿಸಿದ್ದರು. 1560ರಲ್ಲಿ 'ಇಂಕ್ವಿಸಿಷನ್' ಎಂಬ ಕಾನೂನು ತಂದು ಮತಾಂತರ ಗೊಂಡವರ ಹಿಂದೂ ರೀತಿಯ ಧಾರ್ಮಿಕ ಆಚರಣೆಗಳಿಗೆ ಬಹಿಷ್ಕಾರ ಹಾಕಿದರು. ಹಿಂದೂಗಳ ದೇವಸ್ಥಾನಗಳನ್ನು, ಧಾರ್ಮಿಕ ಪರಂಪರೆಯ ತಾಣಗಳನ್ನು ನಾಶಗೊಳಿಸಿದರು ಅಥವಾ ಅಪವಿತ್ರಗೊಳಿಸಿದರು. ಜನರಿಂದ ಮಿತಿಮೀರಿದ ಸುಂಕವನ್ನು ವಸೂಲು ಮಾಡಲಾಯಿತು. ತಪ್ಪಿದವರಿಗೆ ಕಠಿಣ ದಂಡನೆ ವಿಧಿಸಲಾಗುತ್ತಿತ್ತು. ಮತಾಂತರಕ್ಕೆ ಒಪ್ಪದವರ ಬಾವಿಗಳಲ್ಲಿ ಪ್ರಾಣಿಗಳ ಮಾಂಸ, ರಕ್ತ ಎಲುಬುಗಳನ್ನು ಹಾಕಲಾಯಿತು. ಪೋರ್ಚುಗೀಸ್ ರೀತಿಯ ಉಡುಗೆ ತೊಡುಗೆ ಧರಿಸಲು ಮತ್ತು ಪೋರ್ಚುಗೀಸ್ ರೀತಿಯ ಸಂಸ್ಕೃತಿ ಸಂಪ್ರದಾಯ ಆಚರಣೆಗೆ ಒತ್ತಡ ಹೇರಲಾಯಿತು. ಮಹಿಳೆಯರು ಮಾನವಂತರಾಗಿ ಬಾಳಲು ಕಷ್ಟವಾಯಿತು.

ಆ ಕಾಲದಲ್ಲಿ ಕಠಿಣ ಸಂಪ್ರದಾಯವಾದಿಗಳಾದ, ಪ್ರಾಣವನ್ನಾದರೂ ಬಿಡಲು ತಯಾರಿರುವ, ಜಾತಿ ಬಿಡಲೊಲ್ಲದ ಮೂಲನಿವಾಸಿಗರು ಈ ದಬ್ಬಾಳಿಕೆ ಮತ್ತು ಮತಾಂತರಕ್ಕೆ ಒಪ್ಪದೇ, ಮನೆಮಠ, ಆಸ್ತಿಪಾಸ್ತಿ, ಕೊನೆಯಲ್ಲಿ ತಮ್ಮ ಮೂಲ ವಾಸಸ್ಥಾನವನ್ನೇ ತ್ಯಜಿಸಿ ತಮ್ಮ ದೈವದೇವರು, ಕುಟುಂಬ ಸಂಸಾರ, ಮಡದಿ ಮಕ್ಕಳು ಬಂಧುವರ್ಗದವರ ಸಹಿತ ನೆರೆಯ ಕರ್ನಾಟಕದ ಕರಾವಳಿ ಪ್ರದೇಶಗಳಿಗೆ ಸ್ಥಳಾಂತರಗೊಂಡು ನೆಲೆನಿಂತ ಹಲವು ಸಮುದಾಯಗಳಲ್ಲಿ ಕುಡುಬಿ ಸಮುದಾಯವೂ ಒಂದು. ತಮ್ಮ ಆಚರಣೆಗಳ ಅನುಷ್ಠಾನಕ್ಕೆ ಧಕ್ಕೆ ಉಂಟಾದಾಗ ಮೂಲ ಸ್ಥಳ ಬಿಟ್ಟು ವಲಸೆ ಬಂದು ಕಳೆದ ನಾಲ್ಕೈದು ಶತಮಾನಗಳಿಂದ ಈ ಮಣ್ಣಿನಲ್ಲಿ ಬಾಳಿ ಬದುಕಿದವರು ಕುಡುಬಿಯರು. ದೀರ್ಘಕಾಲ ಇನ್ನೊಂದು ಪ್ರದೇಶದಲ್ಲಿ ತೀರಾ ಆಪ್ತರಾಗಿ ಜೀವಿಸಿದರೂ ಇವರ ಮೂಲ ನೆಲೆಯ ಸಾಂಸ್ಕೃತಿಕ ಅಂಶಗಳು- ಗುಂಪುವಾಸ, ವಿಶೇಷ ಕೃಷಿ ವಿಧಾನ, ಧಾರ್ಮಿಕ ನಂಬಿಕೆ, ಆಹಾರದಲ್ಲಿನ ವಿಧಿನಿಷೇಧ, ಬೇಟೆಗಾರಿಕೆ, ವೇಷಭೂಷಣಗಳಲ್ಲಿ ನಿಚ್ಚಳವಾಗಿ ಗೋಚರಿಸುತ್ತವೆ.

ದೈಹಿಕ ಲಕ್ಷಣಗಳಲ್ಲಿ ದ್ರಾವಿಡರನ್ನು ಹೋಲುವ ಕುಡುಬಿಯರ ಸ್ತ್ರೀಯರು ಕೃಷ್ಣ ಸುಂದರಿಯರು. ಭಾಷೆ, ಆಚಾರ ವಿಚಾರಗಳಲ್ಲಿ ಆರ್ಯರ ಲಕ್ಷಣಗಳನ್ನು ಹೊಂದಿರುವ 'ಪ್ರೋಟೋ ಆಸ್ಟ್ರೋಲಾಯಿಡ್' ವರ್ಗಕ್ಕೆ ಸೇರಿದವರು ಎಂಬುದಾಗಿ ಸಂಶೋಧಕರು ಅಭಿಪ್ರಾಯಪಡುತ್ತಾರೆ. ಕರ್ನಾಟಕದಲ್ಲಿ ನೆಲೆನಿಂತು ಶತಮಾನಗಳೇ ಸಂದರೂ, ಇಂದಿಗೂ ತಮ್ಮ ಮೂಲ ಮಾತೃಭಾಷೆ ಕೊಂಕಣಿ ಮಾತನಾಡುತ್ತಾರೆ. ಕರ್ನಾಟಕದ ಇತರ ಹಿಂದೂ ಸಮಾಜ ಆಚರಣೆ ಮಾಡುವ ಎಲ್ಲಾ ಹಬ್ಬಗಳನ್ನು ಆಚರಣೆ ಮಾಡುತ್ತಾರಾದರೂ ಕುಡುಬಿಯರದೇ ವಿಶೇಷ ಆಚರಣೆ 'ಶಿಗ್ಮೊ' ಉತ್ಸವಕ್ಕೆ ಪ್ರತ್ಯೇಕ ಮಹತ್ವವಿದೆ. 'ಶಿಗ್ಮೊ' ಅಥವಾ 'ಹೋಳಿ' ಸಂದರ್ಭ ಕುಡುಬಿಯರು ಗುಮಟೆ ಬಾರಿಸಿ, ಕೋಲಾಟವಾಡಿ, ರಾಮಾಯಣ–ಮಹಾಭಾರತ ಮುಂತಾದ ಪುರಾಣಗಳ ಕೊಂಕಣಿ ಹಾಡುಗಳನ್ನು ಹಾಡುತ್ತಾ ಪ್ರತೀ ವರ್ಷ ಕಂಗು ಸುಡುವ ಮೂಲಕ ಕಾಮದಹನದ ಕ್ರಮಗೈದು ಹೋಳಿಯನ್ನು ವಿಧ್ಯುಕ್ತವಾಗಿ ಆಚರಿಸುತ್ತಾರೆ. ಈ ಆಚರಣೆಯೇ ಇವರನ್ನು 'ಕುಡುಬಿಯರು' ಎಂಬುದಾಗಿ ಗುರುತು ಮಾಡಲು ಒಂದು ಕಾರಣವೂ ಆಗಿದೆ. ಹಬ್ಬಗಳನ್ನು ಆಚರಣೆ ಮಾಡುವಲ್ಲಿ ಕುಡುಬಿಯರು ಚಾಂದ್ರಮಾನ ಪದ್ಧತಿ ಅನುಸರಿಸುತ್ತಾರೆ. 'ಮಕ್ಕಳ ಕಟ್ಟು' ಸಂಪ್ರದಾಯ ಪಾಲಿಸುವ ಇವರಲ್ಲಿ ಪಿತೃಪ್ರಧಾನ ಸಂಸ್ಕೃತಿ ಪ್ರಕಾರ ತಂದೆಯ ಅಧಿಕಾರ ಮಗನಿಗೆ ಹಸ್ತಾಂತರವಾಗುತ್ತದೆ. ಕೂಡುಕುಟುಂಬ (Joint Family) ಪದ್ಧತಿಗೆ ಮಾನ್ಯತೆಯಿದೆ. ಇಂದಿಗೂ ಕುಡುಬಿಯರು 'ವಾಡೆ' ಎಂಬ ಸಾಮಾಜಿಕ ವ್ಯವಸ್ಥೆಯಲ್ಲಿ ಸಂಘಟನಾತ್ಮಕ ರೀತಿಯಲ್ಲಿ ಜೀವನ ಸಾಗಿಸುತ್ತಾರೆ.

ನಮ್ಮ ಪರಿಸರದಲ್ಲಿ ಅನೇಕ ಜಾತಿ, ಜನಾಂಗದ ಜನರಿದ್ದಾರೆ. ಇಲ್ಲಿ ಇರುವವರ ಮೇಲೆ ಇತರ ಪ್ರದೇಶಗಳಿಂದ ವಿವಿಧ ಕಾರಣಗಳಿಂದಾಗಿ ಸ್ಥಳಾಂತರ ಬಂದು ನೆಲೆನಿಂತವರ ಪ್ರಭಾವ, ಹಾಗೆ ಬಂದವರ ಮೇಲೆ ಇಲ್ಲಿ ಈಗಾಗಲೇ ಇರುವವರ ಪ್ರಭಾವ ಆಗಿ ಪರಸ್ಪರ ಮತ, ಧರ್ಮಗಳಲ್ಲಿ ಒಂದು ರೀತಿಯ ಸಂಕೀರ್ಣ ಪರಿಸ್ಥಿತಿ ಉಂಟಾಗಿದೆ. ಆದರೂ ನಾಗರೀಕ ಸಮಾಜದಿಂದ ದೂರ, ಪ್ರತ್ಯೇಕವಾದ ಜೀವನಕ್ರಮ ರೂಢಿಸಿಕೊಂಡು, ತಮ್ಮ ವಿಶಿಷ್ಟ ಸಾಂಸ್ಕೃತಿಕ ಮೌಲ್ಯಗಳನ್ನು ಜೀವಂತವಿರಿಸಿಕೊಂಡು, ತಮ್ಮದೇ ಪ್ರಪಂಚದಲ್ಲಿ ಜೀವನ ಸಾಗಿಸುತ್ತಾ ತಮ್ಮ ಸಮಾಜದ ಪುರಾತನ ಧಾರ್ಮಿಕ ಸಂಪ್ರದಾಯಗಳನ್ನು ಕುಡುಬಿಯರು ಜತನ ಮಾಡಿಕೊಂಡು ಬಂದವರಾಗಿದ್ದಾರೆ.

ನಮ್ಮ ಆತ್ಮ ಸಂತೋಷಕ್ಕೆ ಪರಂಪರೆಯಿಂದ ಆಯ್ದ ಎಷ್ಟೋ ಸಂಗತಿಗಳಲ್ಲಿ, ಆಚಾರ –ವಿಚಾರಗಳಲ್ಲಿ ಮನೋಶಾಸ್ತ್ರದ ಪಾತ್ರ ಬಹಳವಿದೆ. ಜಲಚರಗಳು ನೀರಿನಲ್ಲೇ ಜೀವಿಸುತ್ತಿದ್ದರೂ ಅವುಗಳಿಗೆ ನೀರಿನ ಅರಿವು ಹೇಗೆ ಇರುವುದಿಲ್ಲವೋ ಹಾಗೆ ಮನೋಶಾಸ್ತ್ರವೂ ನಮಗೆ ಅರಿವಿಲ್ಲದೇ ದುಡಿಸಿಕೊಳ್ಳುತ್ತದೆ. ಕುಡುಬಿಯರ ಆಚಾರವಿಚಾರಗಳು ಅಜ್ಞಾನ, ಈಗಿನ ವೈಜ್ಞಾನಿಕ ದೃಷ್ಟಿಯಿಂದ ಅವೆಲ್ಲಾ ಮೂಢನಂಬಿಕೆ ಎಂಬ ಅಭಿಪ್ರಾಯಗಳಿರಬಹುದು. ಆದರೆ ಆಚಾರಗಳ ಅನುಷ್ಠಾನದಿಂದ ಮನೋತೃಪ್ತಿ

ಲಭಿಸುತ್ತದೆ, ಆತಂಕ ದೂರವಾಗುತ್ತದೆ ಎಂಬುದರಲ್ಲಿ ಏನೂ ಸಂಶಯವಿಲ್ಲ. ಸಂಪ್ರದಾಯಗಳಲ್ಲಿ ಬರುವ ಎಲ್ಲಾ ವಿಚಾರಗಳನ್ನು ಅಜ್ಞಾನ ಅಂತ ಕಡೆಗಣಿಸಲಾಗದು. ಯಾವುದೂ ಒಂದು ಮಿತಿಯಲ್ಲಿರುವಾಗ, ಮಾಡುವ ಕಾರ್ಯದ ಹಿಂದಿನ ಉದ್ದೇಶ ಸ್ಪಷ್ಟವಾಗಿರುವಾಗ ಮಾಡುವ ಆಚರಣೆ ಮೂಢನಂಬಿಕೆ ಆಗುವುದಿಲ್ಲ. ಬದಲಿಗೆ ಗಾಢ ವಿಶ್ವಾಸವಾಗುತ್ತದೆ. ದೇವಸ್ಥಾನದಲ್ಲಿ ದೇವರ ಎದುರು ಅಡ್ಡಬೀಳುವುದು, ಇಷ್ಟಾರ್ಥ ಸಿದ್ಧಿಗಾಗಿ ತನ್ಮಯತೆಯಿಂದ ಪ್ರಾರ್ಥಿಸುವುದು, ಆರತಿ ಮಾಡುವುದು, ತೀರ್ಥಸೇವನೆ, ಗಂಧ ಹಣೆಗೆ ಹಚ್ಚುವುದು.... ಈ ರೀತಿಯ ಒಂದು ಸಾಮಾನ್ಯ ಆಚರಣೆಯ ಹಿಂದೆ ಆಧುನಿಕ ವಿಜ್ಞಾನದಿಂದಲೂ ಸಾಧಿಸಲಾಗದಂತಹ ಕಾರ್ಯವ್ಯಾಪ್ತಿಯಿದೆ. ದೇವರ ಎದುರು ಕಣ್ಣುಮುಚ್ಚಿ, ಧ್ಯಾನಸ್ಥರಾಗಿ ನಾವು ನಂಬಿದ ದೇವರ ರೂಪವನ್ನು ನಮ್ಮ ಅಂತಃದೃಷ್ಟಿಯಿಂದ ಅನುಭವಿಸಿ, ನಮ್ಮ ಕಷ್ಟ ಪರಿಹಾರಕ್ಕಾಗಿ ಪ್ರಾರ್ಥಿಸುವಾಗ ಶಾಂತಿ ಸಮಾಧಾನದ ತರಂಗಗಳು ಉದ್ಭವಿಸಿ, ಕಷ್ಟ ಪರಿಹಾರವಾಗುತ್ತದೆ ಎಂಬ ಆತ್ಮವಿಶ್ವಾಸ ಹುಟ್ಟುತ್ತದೆ. ಆತ್ಮ ವಿಶ್ವಾಸ ಹುಟ್ಟಿದರೆ ತನ್ನಿಂತಾನೇ ಕಾರ್ಯ ಸಫಲವಾಗುತ್ತದೆ ಮತ್ತು ಜೀವನದಲ್ಲಿ ಉಲ್ಲಾಸ ತುಂಬಿ ಸಂತೋಷವಾಗುತ್ತದೆ. ನಾವು ಮಾಡುವ ಆಚರಣೆಗಳು ನಮ್ಮ ಅರಿವಿಗೆ ಬಾರದ ರೀತಿ ನಮ್ಮ ಜೀವನದಲ್ಲಿ ಒಂದು ರೀತಿಯ ಶಕ್ತಿವರ್ಧಕ (TONIC), ಉಲ್ಲಾಸ ಪ್ರೇರಕವಾಗಿ ಕೆಲಸ ಮಾಡುತ್ತವೆ. ಕುಡುಬಿ ಸಮುದಾಯವೂ ಈ ಎಲ್ಲಾ ಲಕ್ಷಣದ ಆಚಾರ ವಿಚಾರಗಳನ್ನು ಪಾಲಿಸುವ ಜನಾಂಗ.

ಒಂದು ಸಮುದಾಯದ ರೀತಿ ರಿವಾಜುಗಳು ಇನ್ನೊಂದು ಸಮುದಾಯದವರಿಗೆ ಮೂಢನಂಬಿಕೆ, ಗೊಡ್ಡು ಸಂಪ್ರದಾಯ ಅಂತ ಅನ್ನಿಸಬಹುದು. ಇದೇ ರೀತಿ ಕುಡುಬಿಯರ ಸಂಪ್ರದಾಯಗಳು ಇತರ ಪಂಗಡಗಳವರಿಗೆ 'ಕಾಟು ಸಂಸ್ಕೃತಿ' ಅಂತ ಕಂಡಲ್ಲಿ ವಿಶೇಷವೇನಿಲ್ಲ. ಕುಡುಬಿಯರು ಗುಡ್ಡಗಾಡು ಜನಾಂಗವಾದುದರಿಂದ ಒಂದು ಕಡೆ ವ್ಯವಸ್ಥಿತವಾಗಿ ನೆಲೆನಿಂತು ಜೀವಿಸುವ ಪ್ರವೃತ್ತಿಯವರಾಗಿರಲಿಲ್ಲ. ಕಾಡುಮೇಡುಗಳಲ್ಲಿ ಸ್ವಚ್ಛಂದವಾಗಿ ಅಲೆಯುತ್ತಾ, ಕಂದಮೂಲಾದಿಗಳನ್ನು ಉಪಯೋಗಿಸುತ್ತಾ, ಬೇಟೆಯಾಡಿ, ಕೃಷಿಯನ್ನು ಜಾಗದಿಂದ ಜಾಗಕ್ಕೆ ಬದಲಾಯಿಸುತ್ತಾ ಜೀವನ ಸಾಗಿಸುತ್ತಿದ್ದವರು. ಹೆಚ್ಚಾಗಿ ಭವಿಷ್ಯತ್ತಿನ ಸ್ವಪ್ನವನ್ನು ಕಾಣದೆ, ಸಂಪತ್ತು ಸಂಗ್ರಹ ಮಾಡದೆ, ವರ್ತಮಾನ ಕಾಲದ ಅವಶ್ಯಕತೆಗಳಿಗೆ ಹೆಚ್ಚಿನ ಶ್ರಮವಹಿಸುವ ಅಲ್ಪ ತೃಪ್ತ ಸಮಾಜ. ತಮ್ಮದೇ ರೀತಿ ದೇವರು, ದೈವಗಳನ್ನು ನಂಬಿ, ತಮ್ಮದೇ ರೀತಿಯ ಆರಾಧನಾ ವಿಧಾನಗಳನ್ನು ಅನುಸರಿಸಿ, ಹಾಡುಗಾರಿಕೆ, ವಾದನ, ನರ್ತನಗಳ ಮುಖಾಂತರ ಹಬ್ಬ ಹರಿದಿನಗಳನ್ನು ಆಚರಿಸುತ್ತಾ, ತಮ್ಮ ಮುಖಂಡರ ನಿರ್ದೇಶನಗಳನ್ನು ಪ್ರಶ್ನಿಸದೇ ಪಾಲಿಸುತ್ತಾ, ತಮ್ಮದೇ ಸಾಹಿತ್ಯ, ಕಲಾ ಸೃಷ್ಟಿಗೈಯುತ್ತಾ, ತಮ್ಮ ಸಮಾಜದಲ್ಲಿ ಪರಸ್ಪರ ಸಹಕಾರ, ಸಂಬಂಧ, ಸೌಹಾರ್ದತೆಗಳಿಗಾಗಿ ಅನ್ಯೋನ್ಯ ರೀತಿಯ ಜೀವನ ಸಾಗಿಸುವ ಜನಾಂಗ 'ಕುಡುಬಿ'.

ಒಂದು ಪ್ರದೇಶದಲ್ಲಿ ಅನಾದಿಕಾಲದಿಂದ ವಾಸ್ತವ್ಯ ಹೊಂದಿದ ಸಮಾಜ ವಿವಿಧ ಕಾರಣಗಳಿಂದಾಗಿ ವಾಸಯೋಗ್ಯ ಪ್ರದೇಶಕ್ಕೆ ಸ್ಥಳಾಂತರಗೊಂಡು ವಾಸ್ತವ್ಯ ಹೊಂದಿದಾಗ ಅಲ್ಲಿ ಈಗಾಗಲೇ ಬೇರೂರಿದ್ದ 'ಪ್ರಧಾನ ಸಂಸ್ಕೃತಿ'ಯ ಪ್ರಭಾವ ಈ 'ಅಧೀನ ಸಂಸ್ಕೃತಿಯ' ಮೇಲಾಗುವುದು ಸ್ವಾಭಾವಿಕ. ಬಲಾಢ್ಯ ಸಂಸ್ಕೃತಿಯ ಒಳಗೆ ಬುಡಕಟ್ಟು ಸಂಸ್ಕೃತಿ ಲೀನವಾಗುತ್ತದೆ ಅಥವಾ ಗೌಣವಾಗುತ್ತದೆ. ಒಂದು ಜನಾಂಗವು ಬಹಳ ಕಾಲ ಬೇರೊಂದು ಸಂಸ್ಕೃತಿಯ ಜನರೊಂದಿಗೆ ಸಾಮಾಜಿಕವಾಗಿ ಹೊಂದಿಕೊಂಡು ಹೋಗಬೇಕಾದ ಪರಿಸ್ಥಿತಿ ಬಂದಾಗ ಅನಿವಾರ್ಯವಾಗಿ ಹೊಸ ಸಂಸ್ಕೃತಿಯ ಸಂವರ್ಧನೆಯಾಗುತ್ತದೆ ಎಂಬುದು ಸಮಾಜಶಾಸ್ತ್ರ ಪಂಡಿತರ ಅಭಿಪ್ರಾಯ. ಆದರೂ, ಇದೇ ಪರಿಸ್ಥಿತಿಗೆ ಒಳಗಾದ ಕುಡುಬಿಯರು ತಮ್ಮ ಮೂಲ ಸಂಸ್ಕೃತಿಯ ಸತ್ವ, ಮೌಲ್ಯ, ಘನತೆ ಗಾಂಭೀರ್ಯಗಳನ್ನು ಉಳಿಸಿಕೊಂಡು ಬಂದಿರುವುದೇ ವಿಶೇಷ.

'ಒಂದೇ ತೆರನಾದ ರೆಕ್ಕೆಯ ಹಕ್ಕಿಗಳು ಒಟ್ಟು ಸೇರುತ್ತವೆ' ಎಂಬುದೊಂದು ನಾಣ್ಣುಡಿ ಇದೆ. ಇದೇ ರೀತಿ ಕುಡುಬಿಯರು 'ವಾಡೆ' ಎಂಬ ಸಂಘಟನೆಗಳಲ್ಲಿ ವ್ಯವಸ್ಥಿತ ರೀತಿಯ ಸಹಜೀವನ ಸಾಗಿಸುತ್ತಿದ್ದಾರೆ. ನಿರ್ದಿಷ್ಟ ಪ್ರಾದೇಶಿಕ ವ್ಯಾಪ್ತಿಯೊಳಗೆ, ಸ್ವಜಾತಿಯ ವಿವಿಧ ಬೆಡಗುಗಳ ಕುಡುಬಿ ಜನರು ಒಟ್ಟಾಗಿ, ಒಂದೇ ವೇದಿಕೆಯಲ್ಲಿ, ಒಂದೇ ದೈವೀಶಕ್ತಿಯನ್ನು ನಂಬಿ ಆರಾಧಿಸುತ್ತಾ 'ಗುರಿಕಾರ' ಎಂಬ ಧಾರ್ಮಿಕ ಮುಖಂಡನೊಬ್ಬನ ಮುಂದಾಳ್ತನದಲ್ಲಿ ಪಂಗಡದ ಸಂಪ್ರದಾಯಗಳನ್ನು ಆಚರಿಸಿಕೊಂಡು ಬರುವ ವ್ಯವಸ್ಥೆಯೇ 'ವಾಡೆ'ಯ ಪರಿಕಲ್ಪನೆ. ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲರೂ ಮುಂದಾಳ್ತನ ವಹಿಸುವುದಕ್ಕಿಂತ ಒಬ್ಬ ಅನುಭವಸ್ಥ, ನ್ಯಾಯ ನೀತಿ ಅರಿತ ಸಮರ್ಥ ಹಿರಿಯ ವ್ಯಕ್ತಿ ಮುಖಂಡನಾಗಿರುವುದು ಸಾಮಾಜಿಕ ಹಿತದೃಷ್ಟಿಯಿಂದ ಶ್ರೇಯಸ್ಕರ ಎಂಬ ಇವರ ದೂರಾಲೋಚನೆಯಿಂದಾಗಿ ಈ ವಾಡೆ, ಗುರಿಕಾರ.... ಈ ಎಲ್ಲದರ ರಚನೆಯಾಗಿರಬಹುದು.

ಆಧ್ಯಾತ್ಮಿಕ ಸಂಪ್ರದಾಯದ ಚೌಕಟ್ಟಿನೊಳಗಿನ ಒಳಾಡಳಿತ ವ್ಯವಸ್ಥೆಯ ಧಾರ್ಮಿಕ ಜೀವನ ನಡೆಸುವವರು ಕುಡುಬಿಯರು. ಒಗ್ಗಟ್ಟಾಗಿರುವುದೇ ವಾಡೆ ಪದ್ಧತಿಯ ಲಕ್ಷಣ. ತನ್ನ ವ್ಯಾಪ್ತಿಗೊಳಪಟ್ಟವರಿಗೆ ಸಹಾಯ ಮಾಡುವುದರ ಜೊತೆಗೆ ರಕ್ಷಣೆಯನ್ನು ಒದಗಿಸುವುದು ಅದರ ಹೊಣೆಗಾರಿಕೆಯಾಗಿರುತ್ತದೆ. ತನ್ನ ಸದಸ್ಯರಿಗೆ ತೊಂದರೆಯಾದಾಗ ತೊಂದರೆ ಕೊಟ್ಟವರ ಮೇಲೆ ಪ್ರತೀಕಾರ ತೀರಿಸಿಕೊಳ್ಳುತ್ತದೆ. ವ್ಯಕ್ತಿಯ ಮಾನಕ್ಕಿಂತಲೂ ತಮ್ಮ ಸಂಘಟನೆ–ವಾಡೆಯ ಮಾನ ದೊಡ್ಡದೆಂದು ಪರಿಭಾವಿಸುತ್ತದೆ. ತನ್ನ ಗುಂಪಿನವನೊಬ್ಬನದೇ ತಪ್ಪಾಗಿದ್ದರೂ ಇನ್ನೊಂದು ವಾಡೆಯವನೆದುರು ಅಥವಾ ಇತರರೆದುರು ಅದನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತದೆ. ಆದರೆ ತಲೆಬಾಗಲು ಒಪ್ಪುವುದಿಲ್ಲ. ಏನೇ ಕಷ್ಟ ಬಂದರೂ ಸಂಘಟನೆಯ ಮೂಲಕ ಎದುರಿಸುವುದು ಬುಡಕಟ್ಟಿನ ವಾಡೆ ಪದ್ಧತಿಯ ಲಕ್ಷಣ. ವಾಡೆ ತನ್ನ ಸದಸ್ಯರ ನಡೆನುಡಿಯ ಮೇಲೆ ಹತೋಟಿಯನ್ನು ಇಟ್ಟುಕೊಂಡಿರುತ್ತದೆ. ಕಟ್ಟುನಿಟ್ಟಾದ ಕಟ್ಟುಪಾಡುಗಳನ್ನು ಹೇರಿರುತ್ತದೆ. ವಾಡೆಯ ವಿಧಿವಿಧಾನಗಳಿಗೆ ವಿರುದ್ಧವಾಗಿ

ನಡೆದವರನ್ನು ವಾಡೆಯ ಕೂಟದಿಂದ ಹೊರಹಾಕುತ್ತಾರೆ. ಅವರಿಗೆ ಯಾವುದೇ ಸಹಾಯ ಸಿಗದಂತೆ ಮಾಡುತ್ತಾರೆ. ಆದುದರಿಂದ ವಾಡೆಯವರನ್ನು ಎದುರು ಹಾಕಿಕೊಳ್ಳುವ ದುಸ್ಸಾಹಸ ಯಾರೂ ಮಾಡಲಾರರು. ವಾಡೆ ಪದ್ಧತಿ ಅಂದರೆ ಸಮೂಹ ಸಮ್ಮತ ಜೀವನ ಪದ್ಧತಿ.

ಕುಡುಬಿಯರ 'ವಾಡೆ' ವ್ಯವಸ್ಥೆಯಲ್ಲಿ ಗುರಿಕಾರನ ಬೆಡಗಿನಲ್ಲಿ ಹೊಲೆ ಸೂತಕಗಳ (ಅದು ಜನನದ ವೃದ್ಧಿ ಸೂತಕ ಅಥವಾ ಮರಣದ ಕ್ಷಯ ಸೂತಕ-ಯಾವುದೇ ಆಗಿರಲಿ) ಅಶೌಚ ಸಂಭವಿಸಿದಾಗ ವಾಡೆಯೊಳಗಿನ ಧಾರ್ಮಿಕ ಆಚರಣೆಗಳು ಬಾಕಿ ಉಳಿಯಬಾರದು ಎಂಬ ಉದ್ದೇಶದಿಂದ ಗುರಿಕಾರನಿಗೆ ಸಹಾಯಕರಾಗಿ ಪ್ರತ್ಯೇಕ ಬೆಡಗಿನ ಒಬ್ಬ 'ರಾಯಭಾರಿ' ಅಥವಾ 'ಒತ್ತುಗುರಿಕಾರ' ಮತ್ತು ಐವರು ಸಹಾಯಕ ಸದಸ್ಯರು ಆ ಆಚರಣೆಗಳ ಅನುಷ್ಠಾನದ ಹಕ್ಕುದಾರರಾಗಿ ಇರುತ್ತಾರೆ. ವಾಡೆಯೊಳಗಿನ ಜನನ ಮರಣಗಳು, ಮದುವೆ ಶೋಭನಗಳು, ಹೋಳಿ ಮೇಳಗಳು, ವನಭೋಜನ, ಸುವಾಸಿನಿ ಪೂಜೆ, ಹರಿಸೇವೆ, ಸೀಮಂತ, ತಾಂತ್ರಿಕ ವಿದ್ಯೆಯ ಘಾಡಿಗತನ.... ಮುಂತಾದ ಆಚರಣೆಗಳಲ್ಲಿ ಈ ಧಾರ್ಮಿಕ ವ್ಯಕ್ತಿಗಳು ಮುಂದಾಳ್ತನ ವಹಿಸಿ ಕಾರ್ಯನಿರ್ವಹಿಸಿಕೊಡಬೇಕು. ವಾಡೆಯೊಳಗಿನ ಪ್ರತೀ ಮನೆಯಲ್ಲಿ ಜರಗುವ ಚಟುವಟಿಕೆಗಳಲ್ಲಿ ಈ ಮುಖಂಡರಿಗೆ ಗೌರವ, ಮಾನ್ಯತೆ ಸಲ್ಲುತ್ತದೆ. ವಾಡೆಯಲ್ಲಿ ಈ ಪಾರಂಪರಿಕ ವ್ಯಕ್ತಿಗಳೇ ಧರ್ಮದರ್ಶಿಗಳು ಎನ್ನಬಹುದು.

ಕುಡುಬಿಯರು ಅವಿಭಕ್ತ ಕುಟುಂಬ ಪದ್ಧತಿಯನ್ನು ಪಾಲಿಸುವುದರಿಂದ ಒಂದೊಂದು ಮನೆಯಲ್ಲಿ ಒಂದೇ ಅಡುಗೆಯನ್ನು ಹೊಂದಿಕೊಂಡು 50-60 ಜನರು ಒಟ್ಟಿಗೆ ವಾಸಿಸುವ ದೃಷ್ಟಾಂತಗಳು ಈಗಲೂ ಸಿಗುತ್ತವೆ. ಇಂತಹ ಕೂಡುಕುಟುಂಬದ ಹಿರಿಯ ವ್ಯಕ್ತಿ ಯಜಮಾನನಾಗಿದ್ದರೆ ಅವನ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಒಟ್ಟಿಗೇ ಜೀವನ ಸಾಗಿಸುತ್ತಾರೆ. ಕುಡುಬಿಯರ ಮುಖ್ಯ ಕಸುಬು ವ್ಯವಸಾಯವಾದುದರಿಂದ ಕೃಷಿಕಾರ್ಯಗಳಿಗೆ ಹೀಗೆ ಒಟ್ಟಾಗಿರುವ ಅನಿವಾರ್ಯತೆಯೂ ಇದೆ. ಯಜಮಾನನ ಆಜ್ಞಾನುವರ್ತಿಗಳಾಗಿ ಕುಟುಂಬಿಕರು ನಡೆಯುತ್ತಾರೆ. ಕುಟುಂಬಸ್ಥರೆಲ್ಲರೂ ತಮ್ಮ ಸಂಪಾದನೆಯನ್ನು ಯಜಮಾನನ ಕೈಗೆ ಕೊಡುತ್ತಾರೆ. ಯಜಮಾನ ಕೂಡಾ ಕುಟುಂಬಸ್ಥರಿಗಾಗಿ ಖರ್ಚು ಮಾಡಲು ಬಾಧ್ಯಸ್ಥನಿರುತ್ತಾನೆ. ಕುಟುಂಬಿಕರ ಊಟೋಪಚಾರ, ವಸತಿ, ಉಡುಗೆತೊಡುಗೆ, ಒಳಿತು ಕೆಡುಕುಗಳಲ್ಲಿ ಯಜಮಾನನ ತೀರ್ಮಾನ ಅಂತಿಮ. ದೈನಂದಿನ ಕೆಲಸ ಕಾರ್ಯಗಳು, ಮದುವೆ ಮುಂಜಿಗಳು, ಹಬ್ಬ ಹರಿದಿನಗಳು, ಕುಟುಂಬದಲ್ಲಿನ ಕಷ್ಟಕೋಟಲೆಗಳು, ಭಿನ್ನಾಭಿಪ್ರಾಯ ವೈಮನಸ್ಯಗಳು ಉದ್ಭವಿಸಿದಾಗ ನ್ಯಾಯ ಒದಗಿಸುವುದು ಯಜಮಾನನ ಜವಾಬ್ದಾರಿ.

ಕುಡುಬಿಯರದು 'ಪಿತೃಪ್ರಧಾನ ಸಂಸ್ಕೃತಿ'ಯಾದುದರಿಂದ ಪುರುಷರಿಗೆ ಪ್ರಾಮುಖ್ಯತೆ ಹೆಚ್ಚು. ಕುಟುಂಬದಲ್ಲಿ ಸ್ತ್ರೀಯರಿಗೆ ಧಾರ್ಮಿಕ ಯಾ ಸಾಮಾಜಿಕ ಸ್ತರಗಳಲ್ಲಿ ಪುರುಷರಷ್ಟು ಸಮಾನ ಸ್ಥಾನಮಾನ, ಜವಾಬ್ದಾರಿ, ಗೌರವಗಳಿಲ್ಲ. ಒಂದು ಹೆಣ್ಣನ್ನು ಮದುವೆ ಮಾಡಿ ಕೊಟ್ಟಾಕ್ಷಣ ಆಕೆ ತವರಿನ ಆಸ್ತಿ ಬದುಕು, ಸಾಮಾಜಿಕ ಅಥವಾ ಧಾರ್ಮಿಕ ರೀತಿಯ ಯಾವುದೇ ಅಧಿಕಾರಗಳನ್ನು ಕಳೆದುಕೊಂಡು ಈ ಎಲ್ಲಾ ಅಧಿಕಾರಗಳಿಗೆ ಪತಿಯ ಕುಟುಂಬದಲ್ಲಿ ಬಾಧ್ಯಸ್ಥಳಾಗುತ್ತಾಳೆ. ತಂದೆ ತಾಯಿ ಮರಣಿಸಿದಾಗಲೂ ಆವಳಿಗೆ ತವರಿನ ಅಥವಾ ತವರಿನ ಕುಟುಂಬದ ಸೊಲೆ ಸೂತಕಗಳು, ಮೈಲಿಗೆಗಳು ಅನ್ವಯವಾಗುವುದಿಲ್ಲ. ತಂದೆಯ ಅಧಿಕಾರಗಳಿಗೆ ಮಗ ವಾರೀಸುದಾರನಾಗಿ ಪಿತೃಗಳ ಸದ್ಗತಿಗೆ ಉತ್ತರಕ್ರಿಯೆ, ಪಿಂಡಪ್ರದಾನಾದಿಗಳನ್ನು ಮಗನೇ ಮಾಡಬೇಕಾಗುತ್ತದೆ. ಒಂದು ವೇಳೆ ಮಗ ಇಲ್ಲದಿದ್ದಲ್ಲಿ ಸಮೀಪ ಕುಟುಂಬಿಕರು ಈ ಕ್ರಿಯೆಗಳನ್ನು ನೆರವೇರಿಸಬೇಕು ಹೊರತು ಮಗಳು ಮಾಡಲು ಅರ್ಹಳಾಗಿರುವುದಿಲ್ಲ.

ಅಂತರ್ಮುಖಿ ಸ್ವಭಾವದವರಾದುದರಿಂದ ಸಾಮಾನ್ಯವಾಗಿ ಕುಡುಬಿಯರು ತಮ್ಮ ಸಂಕೋಚಶೀಲ ಪ್ರವೃತ್ತಿಯಿಂದ ಹೊರಬಂದು ಇತರ ಜಾತಿಯವರೊಂದಿಗೆ ಅಷ್ಟು ಸುಲಭವಾಗಿ ಬೆರೆಯುವುದಿಲ್ಲ. ತಮ್ಮ ಸಂಸ್ಕೃತಿಯ ಆಚಾರವಿಚಾರಗಳನ್ನು ಬಿಟ್ಟು ಮುಖ್ಯವಾಹಿನಿಯ ನಾಗರಿಕ ಬದುಕಿಗೆ, ಇತರ ಶಿಷ್ಟ ಸಂಸ್ಕೃತಿಗೆ ತಕ್ಷಣ ತೆರೆದುಕೊಳ್ಳುವುದಿಲ್ಲ. ಬ್ರಾಹ್ಮಣರಲ್ಲಿ ಹೊರತು ಇತರ ಜಾತಿಯವರಲ್ಲಿ ಇವರಿಗೆ ಊಟ ತಿಂಡಿ ನಿಷಿದ್ಧ. ಈಗಲೂ ಕೆಲವು ಕಡೆ ತಮ್ಮದಲ್ಲದ ಜಾತಿಯವರನ್ನು ತಮ್ಮ ಮನೆಯೊಳಗೆ ಬಿಟ್ಟುಕೊಳ್ಳುವುದಿಲ್ಲ. ಇತರ ಜಾತಿಯವರು ತಮ್ಮ ಪಾತ್ರೆಗಳನ್ನು ಮುಟ್ಟಿದಲ್ಲಿ, ಆ ಪಾತ್ರೆಗಳನ್ನು ಇವರು ಮುಟ್ಟುತ್ತಿರಲಿಲ್ಲ ಮಾತ್ರವಲ್ಲ ಮನೆಯೊಳಗೂ ತರುತ್ತಿರಲಿಲ್ಲ. ಸಾರ್ವಜನಿಕ ಸಮಾರಂಭಗಳಲ್ಲಿ ಕುಡುಬಿಯರಿಗಾಗಿ ಪ್ರತ್ಯೇಕ ಪಂಕ್ತಿ ವ್ಯವಸ್ಥೆ ಇತ್ತೀಚಿನವರೆಗೂ ಇತ್ತು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಡುಬಿಯರ ಹಲವು ಒಳಪಂಗಡಗಳಿವೆ ಎಂದು ಕುಡುಬಿಯರ ಬಗ್ಗೆ ಪಿ.ಹೆಚ್.ಡಿ ಮಾಡಿದ ಬ್ರಹ್ಮಾವರದ ಸಂಶೋಧಕ ಡಾ। ವೈ. ರವೀಂದ್ರನಾಥ್ ರಾವ್‌ರವರು ಈ ಕೆಳಗಿನಂತೆ ಪ್ರಭೇದಗಳನ್ನು ವಿಂಗಡಿಸಿದ್ದಾರೆ.

1. ಗೋವಾ ಕುಡುಬಿ 2. ಕೊಡಿಯಾಲ್ ಕುಡುಬಿ 3. ಜೋಗಿ ಕುಡುಬಿ
4. ಅರೆಕುಡುಬಿ 5. ನಾಡಕುಡುಬಿ 6. ಜಾತಿಕುಡುಬಿ

ಈ ಪೈಕಿ ಗೋವಾ ಕುಡುಬಿ ಮತ್ತು ಕೊಡಿಯಾಲ್ ಕುಡುಬಿ – ಇವೆರಡು ಪ್ರಮುಖ ಪ್ರಭೇದಗಳು. ಮಂಗಳೂರು, ಕಾರ್ಕಳ, ಬಂಟ್ವಾಳ, ಉಡುಪಿ ತಾಲೂಕುಗಳ ಸುಮಾರು 30–40 ವಾಡೆಗಳಲ್ಲಿ ಕೊಡಿಯಾಲ್ ಕುಡುಬಿ ಹಾಗೂ ಕಾರ್ಕಳ, ಉಡುಪಿ, ಕುಂದಾಪುರ ತಾಲೂಕುಗಳ ಅಂದಾಜು 40–50 ವಾಡೆಗಳಲ್ಲಿ ಗೋವಾ ಕುಡುಬಿಯರು

ವಾಸ್ತವ್ಯವಿದ್ದಾರೆ. ಕೊಡಿಯಾಲ್ ಕುಡುಬಿಯರು 'ಗೌಡ' ಹಾಗೂ ಗೋವಾ ಕುಡುಬಿಯರು 'ನಾಯ್ಕ್' ಉಪನಾಮವನ್ನು ಹೊಂದಿದ್ದು ಇವರೆಲ್ಲರ ಮಾತೃಭಾಷೆ ಕೊಂಕಣಿಯಾಗಿದೆ. ಈ ಪುಸ್ತಕದಲ್ಲಿ ಕೊಡಿಯಾಲ್ ಕುಡುಬಿಯರ ಬಗೆಗಿನ ಅಧ್ಯಯನ ಮಾಹಿತಿಗೆ ಪ್ರಾಶಸ್ತ್ಯ ನೀಡಿರುತ್ತೇನೆ.

ಗೋವಾದಲ್ಲಿ ಊರಿನ ಅಥವಾ ವಾಡೆಯ ಮುಖ್ಯಸ್ಥನಿಗೆ 'ಬುಧವಂತ' ಎಂದು ಹೆಸರು. ಈ ರೀತಿಯ ವ್ಯವಸ್ಥೆಗೆ 'ಗಾಂವ್ಪಣ್' ಅನ್ನುತ್ತಾರೆ. ಹನ್ನೆರಡು 'ಗಾಂವ್ಪಣ್'ಗಳ ಮುಖ್ಯಸ್ಥರ ಒಂದು ಸಮೂಹ ಮಾಡಿ ಅದಕ್ಕೊಬ್ಬ ನಾಯಕನನ್ನು ನೇಮಿಸುವ ವ್ಯವಸ್ಥೆ ಗೋವಾದಲ್ಲಿ ಇದೆ. ಇವನಿಗೆ ಕೆಂಪುಪಟ್ಟಿ ಧಾರಣೆ ಮಾಡುತ್ತಾರೆ. ಆದುದರಿಂದ ಇವನಿಗೆ 'ಪಟ್ಟೇದಾರ' ಅಂತ ಹೆಸರು. ವಾಡೆಗಳ ಮಧ್ಯೆ ವೈಮನಸ್ಸು, ಭಿನ್ನಾಭಿಪ್ರಾಯ ಉದ್ಭವಿಸಿದಾಗ ಹನ್ನೆರಡೂ ಗಾಂವ್ಪಣ್‌ಗಳ ಬುಧವಂತರನ್ನು ಕರೆದು ಅವನು ನ್ಯಾಯ ತೀರ್ಮಾನ ನೀಡುತ್ತಾನೆ – ಎಂಬುದಾಗಿ ಗೋವಾದ ಕೆಪಂ ತಾಲೂಕಿನ ಡೆಪ್ಯುಟಿ ಕಲೆಕ್ಟರ್ ಮತ್ತು ಸಬ್‌ಜ್ಯುಡಿಶಿಯಲ್ ಮೆಜಿಸ್ಟ್ರೇಟ್ ಆಗಿರುವ ಕುಡುಬಿ, ಶ್ರೀ ಪ್ರತಾಪಸಿಂಹ ವೆಳಿಪ್ ಕನಕರ್ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. (THE KURMIS - KUNBIS OF INDIA 2006 - PAGE 66-67)

ಇದೇ ರೀತಿಯ ಸಾಮಾಜಿಕ ವ್ಯವಸ್ಥೆ ಇಲ್ಲಿಯೂ ಇದ್ದು ಕೊಡಿಯಾಲ್ ಕುಡುಬಿಯರಿಗೆ 'ಹನ್ನೆರಡು ವಾಡೆ' ಎಂಬ ನಿಶ್ಚಿತ ಲೆಕ್ಕವಿದೆ. ಹನ್ನೆರಡು ವಾಡೆಗಳಲ್ಲಿ ಪ್ರಥಮ ಸ್ಥಾನದಲ್ಲಿರುವ 'ಕೊಂಪದವು' ವಾಡೆಯ ಮುಖ್ಯಸ್ಥನಿಗೆ 'ಹನ್ನೆರಡು ವಾಡೆಗಳ ಗುರಿಕಾರ' ಎಂಬ ಗೌರವದ ಸ್ಥಾನವಿದೆ. ಮದುವೆ ಮತ್ತು ಇತರ ಸಮಾರಂಭಗಳಲ್ಲಿ ಕೊಂಪದವು ವಾಡೆಯ ಗುರಿಕಾರನಿಗೆ ಪ್ರಥಮ ಮರ್ಯಾದೆ ಸಲ್ಲುತ್ತದೆ. ಹಿಂದೆ ಹನ್ನೆರಡು ವಾಡೆಗಳ ನ್ಯಾಯ ತೀರ್ಮಾನವನ್ನು ಕೊಂಪದವು ವಾಡೆಯ ಗುರಿಕಾರರು ಮಾಡುತ್ತಿದ್ದರು. ವಾಡೆಯಲ್ಲಿನ ಜನಸಂಖ್ಯೆ ಹೆಚ್ಚಿದಂತೆ ವಾಡೆ–ವಾಡೆಗಳ ನಡುವಿನ ಭಿನ್ನಾಭಿಪ್ರಾಯಗಳಿಂದಾಗಿ ಮತ್ತು ತಮ್ಮ ಸಾಮಾಜಿಕ ವ್ಯವಸ್ಥೆಗಳ ಅನುಕೂಲಕ್ಕಾಗಿ ವಾಡೆಗಳು ವಿಭಜನೆಯಾಗಿ ಪ್ರಸ್ತುತ ಅನೇಕ ವಾಡೆಗಳಾಗಿರುವುದನ್ನು ಗಮನಿಸಬಹುದು.

2. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕುಡುಬಿ ವಾಡೆಗಳು :

ಕೊಡಿಯಾಲ್ ಕುಡುಬಿ (ಗುರಿಕಾರರ ಹೆಸರು ಮತ್ತು ಅವರ ಕುಲವಾಚಿಗಳ ಹೆಸರನ್ನು ಮುಂದುಗಡೆ ನೀಡಲಾಗಿದೆ)

ಮಂಗಳೂರು

1. ಪರಿಯೆಗಳ್ (ಕಂಡ್ಲ – ದೇರಳಕಟ್ಟೆ) – ದೂದ ಗೌಡ– ಬಾಮ್ಲಾಲೆ
2. ಕುತ್ತಾರು (ಮುನ್ನೂರು) – ಮೋನಪ್ಪ ಗೌಡ–ಬೇತ್‌ಕಾರ್ (ಬೇತಾಳ್‌ಕಾರ್?)
3. ಬೊಂಳ್ಯ (ಕೋಣಾಜೆ) – ಕೃಷ್ಣಗೌಡ – ಗೊಂಯ್ಕಾರ್ (ಗಾಂವ್ಕರ್?)
4. ಬಜೋಡಿ(ಪ್ರೇಮ್‌ನಗರ, ಮಂಗಳೂರು)–ಮಂಜುನಾಥ ಗೌಡ– ಗೊಂಯ್ಕಾರ್

5. ಕಂದ್ರಿಗಾ (ಕಾನಡ್ಕ, ಮಂಗಳೂರು)- ವಾಸುಗೌಡ (ವಾಸುದೇವ)- ಕಾಮತ್?
6. ಸ್ವಾಮಿಲಪದವು(ಬಜ್ಪೆ)-ಮೋಹನ ಗೌಡ-ಕೊಂದೊಡಿಕಾರ್ (ಪೊಕ್ಕೊಜಿಕಾರ್)
7. ಘೊಡ್ರಾ ಬಾಂಯ್ಕಡೆ (ಪೆರ್ಮುದೆ)-ಲಿಂಗಪ್ಪ ಗೌಡ-ನರ್ಗಾಡ್ಯಾಲೆ (ಬಾಮ್ಲಾಲೆ)
8. ಘೆರಾರ್ (ಮೂಡುಪೆರಾರ) – ಶಿವರಾಯ ಗೌಡ- ಮೊರ್ಲ್ಯಾಲೆ
9. ಕೊಂಪದವು – ಅಪ್ಪು ಗೌಡ- ಕೊಂದೊಡಿಕಾರ್
10. ಮುಚ್ಚೂರುಕಾನ – ಈಶ್ವರ ಗೌಡ- ಪನೆಲ್‌ಕಾರ್
11. ಕಣ್ಣೋರಿ 1 (ಎಡಪದವು) – ಕೇಶವ ಗೌಡ – ಕೊಚಿಕಾರ್ (ಕೊತ್ಕಾರ್)
12. ಕಣ್ಣೋರಿ 2 (ಎಡಪದವು)- ಜನಾರ್ಧನ ಗೌಡ- ಕೊಚಿಕಾರ್ (ಕೊತ್ಕಾರ್)
13. ಕಿಂಡೇಲ್ (ಬಡಗಎಡಪದವು)- ತಿಮ್ಮಪ್ಪ ಗೌಡ- ದೊಂಗ್ರಾಕಾರ್
14. ಕಿಂಡೇಲ್ ಸಮಾಜ ಮಂದಿರ (ಬಡಗಎಡಪದವು)-ಅಣ್ಣಪ್ಪ ಹಾಸ್ಯಗಾರ-
ಕೊಂದೊಡಿಕಾರ್
15. ಕಿಂಡೇಲ್ ಅಂಚಿಕಟ್ಟೆ (ಬಡಗ ಎಡಪದವು)- ರಯ್ಯು ಗೌಡ-ಪನೆಲ್‌ಕಾರ್
16. ಪಯರಪೆಟ್ಟು (ಬಡಗ ಎಡಪದವು)- ಮೋನಪ್ಪ ಗೌಡ- ಜೋಟಯಾಲೆ

ಕಾರ್ಕಳ :

17. ಕರಿಕುಮೇರು (ತೆಂಕಮಿಜಾರು) –
18. ಪೂಮಾವರ (ತೆಂಕಮಿಜಾರು) –
19. ವಂಟಿಮಾರ್ 1 (ಅಶ್ವತ್ಥಪುರ) ಕೃಷ್ಣ ಗೌಡ- ಸಾನ್ಸಾಕಾರ್
20. ವಂಟಿಮಾರ್ 2 (ಅಶ್ವತ್ಥಪುರ) – ರಾಮ ಗೌಡ- ದೀವಾಡ್ಕಾರ್
21. ಮ್ಯಂದೇರಿ ಮರಕಡ (ಬಡಗ ಮಿಜಾರು) ಜಯರಾಮ ಗೌಡ- ಕೊಚಿಕಾರ್
(ಕೊತ್ಕಾರ್)
22. ಪುತ್ತಿಗೆಪದವು (ಬಡಗಮಿಜಾರು)- ಯಾದವ ಗೌಡ- ಮೆಸ್ತಾಲೆ
23. ಪುತ್ತಿಗೆಬೀಡು ಶಕ್ತಿಪುರ-ಲೋಕನಾಥ ಗೌಡ-ಕೊಂದೊಡಿಕಾರ್
24. ಕಡಂದಲೆ – ಶ್ರೀಧರ ಗೌಡ-ಕುಟ್ಟೊರಿಕಾರ್.

ಬಂಟ್ವಾಳ :

25. ಎಲಿಯಾ (ಸಿದ್ಧಕಟ್ಟೆ)- ಗೋಪಾಲ ಗೌಡ- ಮೆಸ್ತಾಲೆ

ಉಡುಪಿ :

26. ಸೂರಾಲು (ಕೆಂಜೂರು ಬಾಳೆಗುಂಡಿ) – ಪಯ್ಯ ನಾಯ್ಕ್
27. ಕೊಂಡೆಜಡ್ಡು (ಕಾರಾಡಿ-ಹೆಬ್ರಿ) – ಚೇಜು ನಾಯ್ಕ್
28. ಕುಚ್ಚೂರು (ಮುಳ್ಕಾಡ)- ಚಿನ್ನಪ್ಪ ನಾಯ್ಕ್

29. ಬುಕ್ಕಿ ಗುಡ್ಡೆ (ಹೆಬ್ರಿ) – ಗಣಪ ನಾಯ್ಕ್
30. ಹನಿಯಾಲು (ಹೆಬ್ರಿ)– ಬಾಬು ನಾಯ್ಕ್
31. ಕಡಂಬಳೆ ಇರ್ವತ್ತೂರು (ಪೆರ್ಡೂರು) – ಬುಲ್ಲಾ ನಾಯ್ಕ್
32. ದೇವಸ (ಪೆರ್ಡೂರು– ದೊಂಡೇರಂಗಡಿ)– ಬೂದ ನಾಯ್ಕ್
33. ಶಿವಪುರ (ಹೆಬ್ರಿ)– ಪುಟ್ಟ ನಾಯ್ಕ್
34. ಕುಕ್ಕೇಳಿ ಕರ್ಜೆ (ಪೇತ್ರಿ)
35. ಬನ್ನೊಳೆ (ಪೆರ್ಡೂರು)

ಗೋವಾ ಕುಡುಬಿ ವಾಡೆಗಳು :

ಉಡುಪಿ :

1. ಗೋಳಿಅಂಗಡಿ (ಹಿಲಿಯಾಣ) – ಶಂಕರ ನಾಯ್ಕ್
2. ಆಮ್ರಕಲ್ಲು (ಹಿಲಿಯಾಣ) – ಮಾಧನಾಯ್ಕ್
3. ನರಿಕೊಡ್ಲು (ಹಿಲಿಯಾಣ) – ಸಿದ್ಧನಾಯ್ಕ್
4. ಹೆಸ್ಗುಂದ ಧೂಳಿಮನೆ (ನಂಚಾರು)– ಬೋಳನಾಯ್ಕ್
5. ಜೊಂಜಿಮನೆ (ನಂಚಾರು) – ಜೊಂಜಿ ನಾಯ್ಕ್
6. ಕಲ್ಮನೆ (ನಂಚಾರು)– ಕೃಷ್ಣ ನಾಯ್ಕ್
7. ತಾರಿಕಟ್ಟೆ (ನಂಚಾರು)– ಆದು ನಾಯ್ಕ್
8. ಮುದ್ರಬೈಲು (ನಾಲ್ಕೂರು) ಸುಬ್ರಾಯ ನಾಯ್ಕ್
9. ಕಿರಾಡಿ (ಆವರ್ಸೆ) ನಾಗಾ ನಾಯ್ಕ್
10. ದೊಡ್ಡಕಲ್ ಹೆಮ್ಮಳಿಕೆ (ಶಿರೂರು) – ಕಾಳುನಾಯ್ಕ್
11. ಹೊಳೆಜಡ್ಡು (ಶಿರೂರು)– ಕುಷ್ಟನಾಯ್ಕ್
12. ಮೂಡುಗುಡ್ಡೆ (ಶಿರೂರು) – ಬಾಜಿ ನಾಯ್ಕ್
13. ನಕ್ತನಕೊಡಿ (ಹೆಗ್ಗುಂಜೆ) ಮೋಹನ ನಾಯ್ಕ್
14. ಬಾರಾಳಿ (ಹೆಗ್ಗುಂಜೆ)– ಬಸವಾ ನಾಯ್ಕ್
15. ಹೊರಳಿಜಡ್ಡು (ಹೆಗ್ಗುಂಜೆ)– ಕೃಷ್ಣ ನಾಯ್ಕ್
16. ಕ್ಯಾದಿಗೆರೆ (ಯಡ್ತಾಡಿ)– ಲಕ್ಷ್ಮಣ ನಾಯ್ಕ್
17. ನಡಿಕೇರಿ (ಯಡ್ತಾಡಿ)– ರಾಮ ನಾಯ್ಕ್
18. ಕ್ಯಾಸಾಪುರ (ಯಡ್ತಾಡಿ) – ರಾಮ ನಾಯ್ಕ್
19. ತಂತ್ರಾಡಿ ಕಂಪದಕೆರೆ (ಕಾಡೂರು)– ಸಾಂತ ನಾಯ್ಕ್
20. ಕಂಡಿಕೆ (ನಡೂರು)– ಗೋವಿಂದ ನಾಯ್ಕ್

21. ಕೊಳ್ಕೆಬೈಲು (ಶಿರಿಯಾರ)– ಶೀನ ನಾಯ್ಕ್
22. ಜಡ್ಡಿನಮನೆ (ಜಿಲ್ಲಾಡಿ)– ನಂದಿ ನಾಯ್ಕ್
23. ಕೋಟಂಬಯ್ಲ್ (ಕುದಿಗ್ರಾಮ) – ಪುರುಷಾ ನಾಯ್ಕ್
24. ವಡ್ಡಪಿ (ಕುದಿಗ್ರಾಮ)– ನರಸಿಂಹ ನಾಯ್ಕ್
25. ಹೊರ್ಲಾಳಿ ಜಿಯಾಳಿ (ಕುದಿಗ್ರಾಮ)– ನಾಗಾ ನಾಯ್ಕ್
26. ಒಳಬೈಲು (ಪೆಜಮೊಗರು) – ಸಾಂತನಾಯ್ಕ್
27. ಗುಂಡಾಲು (ಪೆಜಮೊಗರು)–ಗಾಡು ನಾಯ್ಕ್
28. ಮಾರ್ಪಿ (ವಂಡಾರು)– ಸುಬ್ರಾಯ ನಾಯ್ಕ್
29. ಸೆಟ್ಟೊಳಿ (ಬೆಳ್ವೆ)– ಉತ್ತರ ನಾಯ್ಕ್
30. ಯಳಂತೂರು (ಬೆಳ್ವೆ)– ಸಪ್ಪು ನಾಯ್ಕ್
31. ಕಲ್ಮರ್ಗಿ (ಆಲ್ಬಾಡಿ) – ಬೆಳ್ಳ ನಾಯ್ಕ್
32. ಕುಸಿನತೋಟ (ಆಲ್ಬಾಡಿ) – ರಾಮ ನಾಯ್ಕ್
33. ಕರ್ಪಾಡಿ (ಶೇಡಿಮನೆ) – ಭೋಜನಾಯ್ಕ್
34. ತೊಂಭತ್ತು (ಹೆಂಗವಳ್ಳಿ) – ಪಾಂಡುನಾಯ್ಕ್
35. ಬೆಳಿನಬೆಟ್ಟು (ಹಾಲಾಡಿ)– ಹತ್ತು ಸಮಸ್ತರು
36. ಗೋರಾಜೆ (ಹಾಲಾಡಿ) – ಬಾಬಣ್ಣ ನಾಯ್ಕ್
37. ನೆಲ್‌ಮಕ್ಕಿ (ಕಕ್ಕುಂಜೆ) – ಮಲ್ಲು ನಾಯ್ಕ್
38. ಬೇಳಂಜೆ (ಬೇಳಂಜೆ) – ಗಾಡುನಾಯ್ಕ್
39. ಕಮ್ಮು (ಬೇಳಂಜೆ)– ಬಜ್ಜ ನಾಯ್ಕ್
40. ಬಾದ್ಲು (ಕುಚ್ಚೂರು)–ಗೋಪಾಲನಾಯ್ಕ್
41. ಕೊಂಡೆಜಡ್ಡು (ಚಾರ) – ಆನಂದ ನಾಯ್ಕ್
42. ಖಜಾನೆ (ಶಿವಪುರ)– ಓಬಯ್ಯ ನಾಯ್ಕ್
43. ಕಡಂಬಳ್ಳಿ (ಎಳ್ಳಾರೆ) – ಶಿವಯ್ಯ ನಾಯ್ಕ್

ಈ ವಾಡೆಗಳ ಕುಡುಬಿಯರು ಕೊಕ್ಕರ್ಣೆ, ಮಂದರ್ತಿ, ಹೆಗ್ಗುಂಜೆ, ಆವರ್ಸೆ, ತಂತ್ರಾಡಿ, ಕಜೆಬಯ್ಲ್, ಗುಂಡಾಲ, ಹೊರಳಿಜಡ್ಡು, ಸಾಯ್ಬರಕಟ್ಟೆ, ಗೋಳಿಯಂಗಡಿ, ಜಿಲ್ಲಾಡಿ, ಹೆಸ್ಗುಂದ, ಹಾಲಾಡಿ, ಶಿರಿಯಾರ, ನಡೂರು, ಕೊಲ್ಲೂರು, ಮೆತ್ತಗೋಳಿ, ಹಳುವಳ್ಳಿ, ಚೇರ್ಕಾಡಿ, ವಂಡಾರು, ಬೆಳ್ವೆ, ಆರ್ಡಿ, ಕಲ್ಮರಿಗೆ, ಬಾರ್ಕೂರು, ಕಕ್ಕುಂಜೆ, ವಂಡ್ಸೆ, ಬಿದ್ಕಲ್‌ಕಟ್ಟೆ, ಚಾಂತಾರು, ಕುಮ್ರಗೋಡು, ಮಟಪಾಡಿ, ಶೇಡಿಮನೆ, ಹಿಲಿಯಾಣ, ನಂಚಾರು, ನಾಲ್ಕೂರು, ಶಿರೂರು, ಯಡ್ತಾಡಿ, ಕಾಡೂರು, ಕುದಿಗ್ರಾಮ, ಪೆಜಮೊಗರು,

ಆಲ್ಪಾಡಿ, ಹೆಂಗವಳ್ಳಿ, ಬೇಳಂಜೆ, ಕುಚ್ಚೂರು, ಚಾರ, ಶಿವಪುರ, ಎಳ್ಳಾರೆ..... ಮುಂತಾದ ಊರುಗಳಲ್ಲಿ ಚದರಿದಂತೆ ವಾಸ್ತವ್ಯ ಹೂಡಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ, ಹೊನ್ನಾವರ, ಅಂಕೋಲಾ, ಕಾರವಾರ ತಾಲೂಕುಗಳ ಊರುಗಳಲ್ಲೂ ಕುಡುಬಿಯರು ಇದ್ದಾರೆ ಅಂತ ತಿಳಿದುಬರುತ್ತದೆ.

ಭಟ್ಕಳ : ಉತ್ತರಕೊಪ್ಪ, ಕೊಳಗೇರಿ, ಕಕ್ಕೆ, ಗುಜಮಾವು, ಬಂಗ್ಲೋಡಿ, ಕಾಮೇಶ್ವರ, ಚಂಪಳ್ಳಿ, ಹೆಂಜಿಲೆ, ಅನಂತವಾಡಿ, ಚಿಮನೂರು, ಬೇಲೂರು, ಅಪ್ರೆ, ಶಿರಾಣಿ, ಮುಲ್ಲೆಮನೆ, ಕಾಸಗೇರಿ, ಮೇಘಾನೆ, ಕುಳವಾಡಿ, ಹೆಜ್ಜಿಲು, ಕೆಕ್ಕೊಡ, ಹೇರಬುಡ್ಕಿ, ಸಾತ್‌ಕೇರಿ, ದೇವಗಾರ, ಬಚ್ಚೋಡಿ.

ಕಾರವಾರ : ಜೈತಕೋಲ್, ಕೋಣಿ, ಕೋಡಿಭಾಗ, ನಂದನಗದ್ದೆ, ಕಟಣಕೋಣ, ಸುಂಕೇರಿ, ಕುಡಾರ.

ಜೊಯಿಡಾ: ಕುಂಬಾರವಾಡ್, ವೈಜಗಾಂವ್, ಮಾಲಂಜೆ, ಅಮಶೇಟ್, ಕೊನ್‌ಶೆತ್, ಕುವೇಶಿ, ನಂದಿಗದ್ದೆ. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನಲ್ಲಿಯೂ ಕುಡುಬಿಯರು ವಾಸ್ತವ್ಯ ಹೊಂದಿದ್ದಾರೆ ಎಂಬುದಾಗಿ ತಿಳಿದುಬರುತ್ತದೆ. ಆದರೆ ನನ್ನ ಗಮನಕ್ಕೆ ಬಂದಂತೆ ಉತ್ತರಕನ್ನಡದಲ್ಲಿ ವಾಸ್ತವ್ಯ ಹೊಂದಿದ ಇವರೆಲ್ಲರನ್ನೂ 'ಕುಣಬಿಯರು' ಎಂಬುದಾಗಿ ಉಲ್ಲೇಖಿಸಲಾಗಿದೆ.

3. ಕುಡುಬಿಯರ ಕುಲವಾಚಿಗಳು (ಬೆಡಗುಗಳು ಅಥವಾ ಬಳಿಗಳು) :

ಬುಡಕಟ್ಟುಗಳು ತಮ್ಮ ಹಾಗೂ ಪ್ರಕೃತಿಯಲ್ಲಿನ ಚೇತನಾಚೇತನ ವಸ್ತುಗಳ ನಡುವೆ ಸಂಬಂಧಗಳನ್ನು ಕಲ್ಪಿಸುತ್ತವೆ. ಕೆಲವರು ತಮ್ಮ ವಂಶಮೂಲವನ್ನು ಕಂಡುಕೊಳ್ಳುವ ಕುಲವಾಚಿಗಳನ್ನು ಪ್ರಾಣಿಸಂಕೇತಗಳಾಗಿ, ಸಸ್ಯ ಸಂಕೇತಗಳಾಗಿ ಗುರುತಿಸಿಕೊಳ್ಳುತ್ತಾರೆ. ಕೆಲವರು ಪಶುಪಕ್ಷಿ, ಸಸ್ಯ, ನೆಲ, ಸೂರ್ಯಚಂದ್ರ.... ಇತರ ಭೌತಿಕ ವಸ್ತುಗಳನ್ನು ತಮ್ಮ ಮೂಲಪುರುಷರೆಂದು, ಕುಲದೇವತೆಗಳೆಂದು ಪರಿಗಣಿಸಿ ವಿಶೇಷ ಗೌರವ ಸೂಚಿಸುವುದರ ಮೂಲಕ ಪೂಜ್ಯಭಾವದಿಂದ ನೋಡುತ್ತಾರೆ. ತಮ್ಮ ವಂಶಾವಳಿಯನ್ನು ಒಂದು ಪ್ರಾಣಿ, ಸಸ್ಯ ಅಥವಾ ಕಲ್ಲಿನಿಂದ ಸೂಚಿಸಿ ತಾವು ಆ ಮೂಲದಿಂದ ಅಥವಾ ಸಂತತಿಯಿಂದ ಬಂದವರೆಂದು ನಂಬುತ್ತಾರೆ. ಆ ಪ್ರಾಣಿಯನ್ನು ಅಥವಾ ಸಸ್ಯವನ್ನು ತಮ್ಮ ಕುಲದೇವತೆಯ ಚಿಹ್ನೆಯಾಗಿ ಪರಿಗಣಿಸುತ್ತಾರೆ. ಅವರಲ್ಲಿ ಆ ಜಾತಿಗೆ ಸೇರಿದ ಪ್ರಾಣಿಗಳನ್ನು ಕೊಲ್ಲಬಾರದು, ಕೊಂದು ಮಾಂಸ ತಿನ್ನಬಾರದು, ಮರಗಳನ್ನು ಕಡಿದು ನಾಶ ಮಾಡಬಾರದು, ಉರಿಸಬಾರದು ಎಂಬಿತ್ಯಾದಿ ನಂಬಿಕೆಗಳಿರುತ್ತವೆ. ಸರ್ವಜೀವಿಗಳ ಸೃಷ್ಟಿ ಮೂಲವನ್ನು ದೈವೀಶಕ್ತಿಯಲ್ಲಿ ಕಾಣುವ ಇವರ ಚಿಂತನೆ ಭಾವನಾತ್ಮಕ ಮತ್ತು ಕಲ್ಪನಾಶೀಲವಾದುದು. ತಮ್ಮ ಕುಲ ಹಾಗೂ ಒಳವಿಭಜನೆಗಳಿಗೆ ಗಿಡಮರಗಳ ಮತ್ತು ಪ್ರಾಕೃತಿಕ ವಸ್ತುಗಳ ಹೆಸರನ್ನು ಇಟ್ಟುಕೊಂಡು, ಅವುಗಳ ಮೂಲಕವೇ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡು ಎಂದಿಗೂ ಆ ಪರಂಪರೆಯನ್ನು ಉಳಿಸಿಕೊಂಡು ಬರುತ್ತಾರೆ. ವೈದಿಕ ಸಮುದಾಯ ಮತ್ತು ಕೊಂಕಣಿಯ ಇತರ ಸುಧಾರಿತ ಸಮಾಜಗಳಲ್ಲಿ ಗೋತ್ರಗಳಿರುವ ಪ್ರಕಾರ

ಕುಡುಬಿ ಸಮುದಾಯದಲ್ಲಿಯೂ ಹಲವಾರು ಕುಲವಾಚಿಗಳು ಅಥವಾ ಬೆಡಗುಗಳಿರುವುದನ್ನು ಕಾಣಬಹುದು. ಅವರ ಬಳಿಗಳು ದೈವಮೂಲ, ಪ್ರಾಣಿಮೂಲ, ಸಸ್ಯಮೂಲ, ಪ್ರಾದೇಶಿಕ ಮೂಲ, ವ್ಯಕ್ತಿಮೂಲ, ವೃತ್ತಿ ಹಾಗೂ ವಸ್ತುಮೂಲಗಳಿಂದ ಗುರುತಿಸಲ್ಪಡುತ್ತವೆ.

ಕುಡುಬಿಯರಲ್ಲಿ 'ಬಾರಾ ವಾಡೆ, ತೇರಾ ಕುಳಿ' ಅಂದರೆ 'ಹನ್ನೆರಡು ವಾಡೆ, ಹದಿಮೂರು ಬೆಡಗು' ಎಂಬ ನಾಣ್ಣುಡಿಯೇ ಬಳಕೆಯಲ್ಲಿದೆ. ಆದರೆ, ಅನೇಕ ಕಾರಣಗಳಿಂದ ಈ ಹದಿಮೂರು ಬೆಡಗುಗಳ ಲೆಕ್ಕ ವಿಭಜನೆಗೊಂಡು ಪ್ರಸ್ತುತ ಹಲವಾರು ಬೆಡಗುಗಳಾಗಿರುವುದನ್ನು ಗಮನಿಸಬಹುದು. ಕೆಲವರು ಗಿಡಮರ ಮೂಲಗಳ ಬೆಡಗಿನವರಾದರೆ, ಕೆಲವರು ಅವರು ಆರಾಧಿಸಿಕೊಂಡು ಬಂದಿರುವ ದೇವ ಮೂಲದವರು. ಕೆಲವರು ಗೋವಾದ ಯಾವ ಮೂಲಸ್ಥಳದಿಂದ ಸ್ಥಳಾಂತರ ಬಂದಿದ್ದರೊ, ಆ ಪ್ರದೇಶದ ಹೆಸರನ್ನು ತಮ್ಮ ಕುಲನಾಮವಾಗಿ ಉಪಯೋಗಿಸಿದ್ದಾರೆ. ಗೋವಾದಲ್ಲಿನ ವಿಶೇಷತೆ ಎಂದರೆ ಆಯಾ ಊರಿನ ಹೆಸರನ್ನು ತಮ್ಮ ನೈಜ ಹೆಸರಿನ ಉಪನಾಮವಾಗಿ ಬಳಸುವುದು. ಕುಡುಬಿಯರು ಗೋವಾದಿಂದ ಕರ್ನಾಟಕಕ್ಕೆ ಸ್ಥಳಾಂತರಗೊಂಡ ಮೇಲೂ, ಇಲ್ಲಿಯೂ ಕೂಡಾ ತಮ್ಮ ಮೂಲ ಊರಿನ ಹೆಸರುಗಳನ್ನು ಕುಲನಾಮವಾಗಿ ತಗಲಿಸಿಕೊಂಡಿರುವುದನ್ನು, ಇಲ್ಲಿ ನೆಲೆನಿಂತ ಊರುಗಳಿಗೆ ಗೋವಾ ಮೂಲದ ಹೆಸರುಗಳನ್ನೇ ಇಟ್ಟಿರುವುದನ್ನು ಕಾಣಬಹುದು. ಉದಾಹರಣೆಗೆ ಗೋವಾದ 'ಕುತ್ತಲ್' ಎಂಬ ಊರು ಇಲ್ಲಿ ಕುತ್ತಾರು, 'ಪನ್ನೇಲಿ=ಪನೇಲಿ, ಪರಿಯೆಕಾರ್=ಪರಿಯೆಗಳ್ ಊರುಗಳಾಗಿರಬಹುದು. ದೀವಾಡ್‌ನಿಂದ ಬಂದವ ದೀವಾಡ್ಕಾರ್, ಪನ್ನೇಲ್‌ನಿಂದ ಬಂದವ ಪನ್ನೇಲ್‌ಕಾರ್, ಮಡ್ಕೈನಿಂದ ಬಂದವ ಮಡ್ಕೈಕಾರ್, ಕುಶಸ್ಥಳಿಯಿಂದ ಬಂದವ ಕೊಸ್‌ಕಾರ್, ಬಾರ್ದೇಸದ ಕಾಂದೋಳೆಂಯಿಂದ ಬಂದವ ಕೊಂದೂಡಿಕಾರ್, ಚಿಂಚೋಣೆ ಅಥವಾ ಚಿಂಚೇಮಳ್‌ನಿಂದ ಬಂದವರು ಚಿಂಚೇ ಪೊಂದ್ಲೆ, ಜುಂವಾದಿಂದ (ಜುಂವ್ರೊ= ಕುದ್ರು, ದ್ವೀಪ) ಬಂದವ ಜುಂವಾಕಾರ್, ಕವಳೇಯಿಂದ ಬಂದವ ಕವಳೇಕಾರ್, ಪಣ್ಣಲೆಂಯಿಂದ ಬಂದವ ಪೊಣ್ಣಾಪೊಂದ್ಲೆ.... ಹೀಗೆ ಆಯಾ ಊರಿನ ಉಪನಾಮ ಹೊಂದಿದ ಕುಡುಬಿಯರು ಇಲ್ಲಿ ವಾಸ್ತವ್ಯವಿದ್ದಾರೆ. ಜುಂವಾಕಾರ್ = ನೊಗ ತಯಾರಿಸುವುದರಲ್ಲಿ ಪರಿಣತರು, ಕೇಳ್ಕಾರ್=ಮದುವೆಗೆ ಬಾಳೆಮಂಟಪ ಹಾಕುವ ಪರಿಣಿತರು, ಮೆಸ್ತ್ರಾಲೆ = ಮೇಸ್ತ್ರಿ (ಮುಂದಾಳು) ಕೆಲಸದವರು – ಇವು ಆಯಾ ವೃತ್ತಿ ಮೂಲದ ಕುಲನಾಮಗಳು. ವಾಘ್ರಾಲೆ, ವಾಘಣ್‌ಕಾರ್ = ಪ್ರಾಣಿಮೂಲ, ದೊಂಗ್ರಾಕಾರ್, ಗುಡ್ಡ್ಯಾಕಾರ್, ಕುಪ್ರಿಕಾರ್ = ಅರಣ್ಯಮೂಲ, ಶಿರೋಡ್ ಮಂಕಿ ಮಾಯಚೆ, ಮ್ಹಾಳ್‌ಸೆ ಮಾಯಚೆ = ಆರಾಧಿಸಲ್ಪಡುವ ದೇವಮೂಲ; ಘಾಡಿಯಾಲೆ, ಕಪೋಜಿಲೆ, ಪಾಯ್ಕೋಜಿಲೆ, ನರ್ಗ್ಗಡ್ಯಾಲೆ, ಕುಪ್ರಲು ಗೌಡಾಲೆ = ವ್ಯಕ್ತಿ ಮೂಲಗಳ ಕುಲನಾಮವನ್ನು ಹೊಂದಿದ ಕುಡುಬಿಯರಿದ್ದಾರೆ. ಕುಡುಬಿಯರ ಕುಲಗೋತ್ರಗಳ ಮೂಲದ ಬಗ್ಗೆ ಲಭ್ಯವಾದ ಮಾಹಿತಿ ಅಸ್ಪಷ್ಟ ಮತ್ತು ಅಪೂರ್ಣವಾಗಿರುವುದರಿಂದ ಈ ಬಗ್ಗೆ ಆಳವಾದ ಅಧ್ಯಯನ ನಡೆಯಬೇಕಾದ ಅವಶ್ಯಕತೆಯಿದೆ.

ಕೊಡಿಯಾಲ್ ಕುಡುಬಿಯರ ಕುಲನಾಮಗಳು :

1. ಕೊತ್ಕಾರ್ / ಕೊಚಿಕಾರ್/ ಮಂಜೆಸರ್‌ಕಾರ್
2. ಪನೇಲ್‌ಕಾರ್/ ದುಂಬ್ಲೆಕಾರ್/ ವಾಘ್ರ್ಯಾಲೆ/ ಜೋಳ್ಗೆಕಾರ್/ ಗೊತ್ರ್‌ಕಾರ್/ ಪೊಣ್ಸಾಪೊಂದ್ಲೆ
3. ಕೊಂದೊಡಿಕಾರ್ / ಪೊಕ್ಕೊಜಿಕಾರ್ / ಪೊಕ್ಕ್ಯಾಲೆ
4. ಕೇಳ್ಕಾರ್/ ಬೊಳ್ಗೊಡ್ಯಾಕಾರ್/ ಫೆರಾರ್‌ಕಾರ್
5. ಸಾನ್ಲಾಕಾರ್
6. ಜೊಟಿಯಾಲೆ/ ಜೊಟ್ಕಾರ್
7. ಮೇಸ್ತಾಲೆ / ನೊಪಡ್‌ಕಾರ್/ ನಾಪಾಡಿಕಾರ್
8. ಹುನರ್‌ಕಾರ್/ ತಲಶ್ಯೇರಿಕಾರ್
9. ಎಳ್ಕೆಕಾರ್ / ಅಳಿಕೆಕಾರ್/ ಅಳ್ಕೆಕಾರ್
10. ಸರಂಗಿಕಾರ್/ ಮೊತ್ಕಾರ್/ಸಂಕೇಸ್‌ಕಾರ್/ಹಟಿಯೆಗಾರ್/ ಅಂಜಾಡ್ಯಾಪೊಂದ್ಲೆ
11. ಮೊರ್ಲ್ಯಾಲೆ/ ಚಿಂಚೇಪೊಂದ್ಲೆ
12. ಜುಂವಾಕಾರ್
13. ಉಯಿಲ್ಯಾಲೆ/ನರ್ರ್ಯಾಕಾರ್/ವೊವ್ರುಳ್ಯಾಕಡ್ಡೆ
14. ಎಳ್ಣೆಗಾರ್/ ಘಾಡಿಯಾಲೆ
15. ಮೊರ್ಲೆಡ್ಡೆ
16. ಕಾನ್ಸೆಕಾರ್/ ಮಡ್ಕ್ಯೆಕಾರ್/ ಮೊಡ್ಕೆಕಾರ್/ರಾವ್ಹೊಜಿಲೆ/ಗೌಂಡ್ಯಾಲೆ/ಬಿಡ್ಕೆಕಡ್ಡೆ
17. ಮೊಳಿಯೆಕಾರ್
18. ದೊಂಗ್ರಾಕಾರ್/ ಧೊಲ್ಕಾರ್
19. ಗುಡ್ಯಾಕಾರ್ / ಬೆರ್ಕೆಗಾರ್
20. ಕರಿಕುಮ್ರಿಕಾರ್ / ಕೊಡಿಯಾಳ್‌ಕಾರ್/ ಕುಪ್ರುಲು ಗೌಡಾಲ್ಯಾ ಕುಟ್ಮಾಚೆ
21. ಕಾವಳೆಗಾರ್/ ಕಾಳ್ಗಡ್ಯಾಲೆ/ ದೀವಾಡ್ಕರ್
22. ನರ್ಗಾಡ್ಯಾಲೆ/ ಬಾಮ್ಲಾಲೆ/ ನರಸಿಂಹ ದೇವಾಚೆ
23. ಪಾಯ್ಕೊಜಿಲೆ.
24. ಕೆಮೋಜಿಲೆ
25. ಬೊರ್ರ್ಯಾಲೆ/ ಕಾರ್ರ್ಯಾಕಡ್ಡೆ
26. ಗೊಂಯ್ಕಾರ್/ ಗಾಂವ್ಕಾರ್/ ಗೊರ್ರ್ಯಾಕಾರ್
27. ಬೇತಾಳ್‌ಗಾರ್/ ಬೇತ್‌ಕಾರ್

28. ಆನ್ಸೆಕಾರ್
29. ಕುಮ್ರಿಕಾರ್
30. ಕಾಮತ್
31. ಕೋಸ್‌ಕಾರ್
32. ಕುಟೋರಿಕಾರ್
33. ಶಿರೋಡ್‌ಮಂಕಿ ಮಾಯೆಚೆ
34. ಮ್ಹಾಳ್‌ಸೆ ಮಾಯೆಚೆ
35. ಸಾಂವ್ಕಾಕಾರ್

ಗೋವಾ ಕುಡುಬಿಯರ ಕುಲನಾಮಗಳು :

1. ಕದಕಾರ್
2. ಮಟಕಾರ್
3. ವಾಘಣಕಾರ್
4. ಬಣಸ್ಕಾರ್
5. ಮಲಕಾರ್
6. ಗಣಕಾರ್
7. ಕಡಕಾರ್
8. ರಾಯ್‌ಕಾರ್
9. ಮೊಕ್ಕಾರ್
10. ಪತ್ಕಾರ್
11. ಕುತ್ಕಾರ್
12. ದ್ಯುತ್ಕಾರ್
13. ಬಟ್ಕಾರ್
14. ಮೊರಕಾರ್
15. ಬಳ್ಕಾರ್
16. ಬಸ್ಕಾರ್
17. ಸೊಂಸ್ಕಾರ್
18. ಫಲ್ಕಾರ್
19. ನಯ್ಕಾರ್
20. ಉಣಸ್ಕಾರ್
21. ಆಮ್ಕಾರ್
22. ನೆವ್ಕಾರ್
23. ದೆಕ್ಕಾರ್
24. ತೊಡ್ಕಾರ್
25. ಜಮ್ರಾಕಾರ್
26. ಧನ್ಕಾರ್
27. ಷಳ್ಳಾಕಾರ್
28. ಸಂತಕಾರ್
29. ಉಳಷ್ಕಾರ್
30. ಜನಕಾರ್
31. ರಣಕಾರ್
32. ಮೇರ್‌ಕಾರ್
33. ಹುತಕಾರ್
34. ವೈಸ್ಕಾರ್
35. ಒಳ್‌ಗಾರ್
36. ಭಂಟ್ಕಾರ್
37. ಪೊಳ್‌ಕಾರ್
38. ಮೆಟ್ಕೆಕಾರ್
39. ಪುಕ್ರೆಕಾರ್
40. ಉಣ್ಕಾರ್
41. ಮಂಡ್ಕಾರ್
42. ಸಾವ್‌ಕಾರ್
43. ಜುತ್ಕಾರ್
44. ಪೋಡ್ಕಾರ್
45. ಮಲ್ಲಾರ್
46. ಕೋಲ್ಕಾರ್

[ಉಡುಪಿ ಜಿಲ್ಲೆಯ ಗೋವಾ ಕುಡುಬಿಯರ ವಾಡೆ ಮತ್ತು ಕುಲನಾಮಗಳ ಸಂಗ್ರಹಕ್ಕೆ ಕುಡುಬಿ ಸಮಾಜೋದ್ಧಾರಕ ಸಂಘ ಅಲ್ತಾರು. ಯಡ್ತಾಡಿ, ಉಡುಪಿ – ಇವರು 2010ರಲ್ಲಿ ಪ್ರಕಟಿಸಿದ ವಾರ್ಷಿಕ ಮಹಾಸಭೆಯ ಪುಸ್ತಕದ ಆಧಾರ ಪಡೆಯಲಾಗಿದೆ]

ಗೋವಾ ಕಾನಾಕೊನಾ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಹತ್ತಿರದ 'ಆಸಾಳಿ' ಹೆಸರಿನ ವಾಡೆಯಲ್ಲಿ ವೆಳಿಪ್, ಗಾಂವ್ಕರ್, ಭಗತ್, ನೆವ್ಕಾರ್ ಮತ್ತು ಜಲ್ಮಿ ಎಂಬ ಬೆಡಗುಗಳ ಕುಡುಬಿಯರು ಇರುವುದು ಕಂಡುಬರುತ್ತದೆ. ಕ್ಷೇತ್ರ ಕಾರ್ಯದ ಸಂದರ್ಭ ಲಭಿಸಿದ ಮಾಹಿತಿ ಪ್ರಕಾರ ವೆಳಿಪ್ ಪಂಗಡದವರು ಗೋವಾಕ್ಕೆ ಮೊದಲು ಬಂದವರು ಅಥವಾ ಅಲ್ಲಿಯ ಮೂಲನಿವಾಸಿಗರು. ಗಾಂವ್ಕರ್ ಬೆಡಗಿನವರು ವೆಳಿಪರ ನಂತರ ಅಥವಾ ಹೊರಗಿನಿಂದ ಬಂದವರು. ಇಲ್ಲಿಯ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ವೆಳಿಪರಿಗೆ ಹೆಚ್ಚಿನ ಗೌರವದ ಸ್ಥಾನಮಾನವಿದೆ. ದೇವರ ಪೂಜೆ, ದೈವಿಕ ಆಚರಣೆಗಳಲ್ಲಿ ಆರಾಧನೆಯ ಅಧಿಕಾರ ವೆಳಿಪರಿಗಾದರೆ ಈ ವಿಷಯದಲ್ಲಿ ಗಾಂವ್ಕರನು ವೆಳಿಪರಿಗೆ ಸಹಾಯಕನಾಗಬಹುದು. ವೆಳಿಪರು ಊರೊಳಗಿನ ಗಾಂವ್ಕರ್‌ರೊಡನೆ ನೆಂಟಸ್ತಿಕೆ ಮಾಡುವುದಿಲ್ಲ. ಆದರೆ ಊರ ಹೊರಗಿನ ಗಾಂವ್ಕರ್‌ರೊಡನೆ ವಿವಾಹ ಸಂಬಂಧ ಮಾಡಲಡ್ಡಿಯಿಲ್ಲ. ವೆಳಿಪರಲ್ಲಿಯೂ ಆಮ್ಯೆಡ್‌ಕಾರ್ ಮತ್ತು ಭಣ್ಗೆ ವೆಳಿಪ್ ಎಂಬ ಬೆಡಗಿನೊಳಗಿನ ಬೆಡಗಿನವರೂ ಇದ್ದಾರೆ.

ನಮ್ಮ ಮೂಲ ನೆಲೆ ಗೋವಾದಲ್ಲಿ ಕುಡುಬಿಯರನ್ನು 'ಕುಳಮಿ' ಎಂದು ಗುರುತಿಸಿ ಅವರ ಪೈಕಿ ವೆಳಿಪ್, ಜಲ್ಮಿ, ಗಾಂವ್ಕರ್, ಗಾವ್ಡಾ, ಗಾವ್ಡೆ ಉಪಪಂಗಡಗಳ ಕುಡುಬಿಯರು ವಾಸ್ತವ್ಯವಿರುವುದನ್ನು ಕಾಣಕೋಣ್ ಖೆತಿಗಾಂವ್‌ನ ಯುವ ಕುಡುಬಿ ಅಧ್ಯಯನಕಾರ ದೇವಿದಾಸ್ ಗಾಂವ್ಕರ್ ಎಂಬವರು ತಮ್ಮ 'ಗೋವ್ಯಾತೀಲ್ ಆದಿವಾಸಿ –ರಚನಾ ಆಣಿ ಜೀವನ್ ಶೈಲಿ' ಎಂಬ ಮರಾಠಿ ಪುಸ್ತಕದಲ್ಲಿ ವಿವರಣೆ ನೀಡಿದ್ದಾರೆ. ಅವರ ಪ್ರಕಾರ ಅಲೆಮಾರಿ ಆದಿವಾಸಿ ಎಂದು ಗುರುತಿಸಲ್ಪಟ್ಟ ಜನಾಂಗದವರು ಪ್ರಾರಂಭದಲ್ಲಿ ಒಂದು ಸುಸ್ಥಿರ ಜೀವನ ಪ್ರಾರಂಭಿಸಿದಾಗ ಕುಮರಿ ಕೃಷಿಗಾಗಿ ಕಾಡು ಸವರಿ ಜಮೀನನ್ನು ದಹಿಸಿ ಫಲವತ್ತಾಗಿ ಮಾಡಿ ಮರದ ಕೊಕ್ಕೆಯೊಂದರಿಂದ ಭೂಮಿ ಅಗತೆ ಮಾಡಿ ವ್ಯವಸಾಯ ಮಾಡುತ್ತಿದ್ದರು. ಕ್ರಮೇಣ ಮರದ ಹಿಡಿಯ ತುದಿಗೆ ಕಬ್ಬಿಣದ ಕತ್ತಿಯಂತಹ ಆಯುಧವನ್ನು ಜೋಡಿಸಿ ಭೂಮಿಯನ್ನು ಅಗೆಯಲು ಪ್ರಾರಂಭಿಸಿದರು. ಪ್ರಾಣಿಗಳ ಸಹಾಯವಿಲ್ಲದೆ ಅಗತೆ ಮಾಡುವ ಈ ಆಯುಧಕ್ಕೆ 'ಕುಡವಣ್' ಮತ್ತು ಅದರ ಸಹಾಯದಿಂದ ಮಾಡಲ್ಪಡುವ ಕೃಷಿಗೆ 'ಕುಡ್ವಣ್' 'ಕುಡೊವಪ್' ಹೆಸರು ಬಂತು. ಆ ಪ್ರದೇಶದಲ್ಲಿ ಕೃಷಿ ಮಾಡಿ ಸ್ವಂತ ಜೀವನ ನಿರ್ವಹಣೆ ಮಾಡುವ ಈ ಕಾಯಕಕ್ಕೆ 'ಕುಳವಾಡಿ' ಮತ್ತು ಈ ಕಾಯಕ ಮಾಡುವವರು 'ಕುಳಮಿ'ಯಾದರು. ಕುಮರಿ ಕಾಯಕದೊಂದಿಗೆ ಅಲ್ಲಿ ಗ್ರಾಮ (ಗಾಂವ್) ಸ್ಥಾಪನೆಯಾಯಿತು. ಈ ಗ್ರಾಮ ಸ್ಥಾಪನೆ ಮಾಡಿದವರು 'ಗಾವ್ಡಾ' ಅಂತ ಕರೆಯಲ್ಪಟ್ಟರು. ಆದುದರಿಂದ ಈ ಎರಡೂ ಶಬ್ದಗಳಿಗೆ ಅರ್ಥವ್ಯತ್ಯಾಸವಿಲ್ಲ. ಇವರ ದಂಧೆ, ದೈವದೇವರು, ಸಾಮಾಜಿಕ ಜೀವನ ಮುಂತಾದುವುಗಳಲ್ಲಿ ಪ್ರತ್ಯೇಕತೆ ಕಾಣುವುದಿಲ್ಲ.

'ಗಾವ್ಡಾ' – ಈ ಪೈಕಿ 'ಗಾಂವ್ಡಣ್' ಅಂದರೆ ಊರಿನ ಯಜಮಾನಿಕೆಗೆ ನೇಮಿಸಲ್ಪಟ್ಟವರಿಗೆ 'ಜಲ್ಮಿ' ಅಂತ ಹೆಸರು ಬಂತು. 'ಕುಳಮಿ' ಪೈಕಿ ಮುಖ್ಯಸ್ಥನಾಗಿ ನೇಮಿಸಲ್ಪಟ್ಟವನಿಗೆ 'ವೆಳಿಪ್' ಹೆಸರಾಯಿತು. ಗಾಂವ್ಕರ್ ಊರಿನ ನಿವಾಸಿಗಳು. ಆದುದರಿಂದ ಇವರು ಕುಳಮಿ ಮತ್ತು ಗಾವ್ಡಾ ಈ ಎರಡೂ ವಿಭಾಗಗಳಲ್ಲಿ ಇದ್ದು ಇವರ ಪೀಳಿಗೆಯವರು ಮುಂದಕ್ಕೆ ಅದೇ "ಗಾಂವ್ಕರ್" ಹೆಸರಿನಿಂದ ಗುರುತಿಸಲ್ಪಟ್ಟರು.

ದೈವ ಅಂದರೆ ಪ್ರಕಟಿಸಲ್ಪಡುವ ವಸ್ತುವಲ್ಲ. ಅದೊಂದು ಅಂತರಂಗದ ಭಾವನಾತ್ಮಕ ವಿಚಾರ. ಅದನ್ನು ಸಾಂಕೇತಿಕವಾದ ಸರಳ ರೂಪದಿಂದ ಗ್ರಹಿಸಬಹುದು. ಇದು ಎಲ್ಲಾ ಬುಡಕಟ್ಟುಗಳಿಗೂ ಅನ್ವಯಿಸುತ್ತದೆ. ಅವರೆಂದಿಗೂ ತಮ್ಮ ದೈವಗಳನ್ನು ವೈಭವೀಕರಿಸುವುದಿಲ್ಲ. ಭೌತಿಕವಾದ ಒಂದು ರೂಪವನ್ನು ಅದಕ್ಕೆ ಕೊಡುತ್ತಾರಾದರೂ ಅದು ನಿಸರ್ಗದ ಒಂದು ಭಾಗವಾಗಿ ಮಾತ್ರ ನಮಗೆ ಗೋಚರಿಸುತ್ತದೆ. ಪ್ರಕೃತಿಯ ಚರಾಚರ ವಸ್ತುಗಳೂ ಅವರಿಗೆ ದೈವವೇ. ಹಾಗಾಗಿ ಪ್ರಕೃತಿಯಲ್ಲಿನ ಒರಟು ಕಲ್ಲು, ಮಣ್ಣು, ಹುತ್ತ, ನೀರಿನ ಆಸರೆಯ ಕೊಳಗಳು, ಮರಗಿಡಗಳಾದ ಅತ್ತಿ, ಆಲ, ಗೋಳಿ, ಮಾವು ಮುಂತಾದವು ಪವಿತ್ರ ಮರಗಳು; ಗುಡ್ಡ ಬೆಟ್ಟ, ಮೀಸಲು ನಾಗನಡೆಗಳು ಅವರ ದೈವರೂಪಗಳೇ. ಕುಡುಬಿಯರೂ ಇದೇ ರೀತಿ ಪ್ರಾಕೃತಿಕ, ಗೋಚರಾಗೋಚರ, ಚೇತನಾಚೇತನ ಶಕ್ತಿಗಳನ್ನು ಆರಾಧಿಸುವ ಜನಾಂಗ.

ಕಿರಾತಾರ್ಜುನ ಪ್ರಸಂಗದಲ್ಲಿ ಅರ್ಜುನನ ವಿರುದ್ಧ ಕುಬೇರನ ಮುಂದಾಳ್ತನದಲ್ಲಿ ಶಿವನ ಕಡೆಯಿಂದ ಹೋರಾಡಿದ ಕಿರಾತಪಡೆ ಕುಡುಬಿಯರು ಎಂಬುದಾಗಿ ಈ ಸಮುದಾಯ ನಂಬಿದೆ. [ಗೋವಾದ ಅಧ್ಯಯನಕಾರ ಪ್ರೊ| ಪ್ರಜಲ್ ಸಾಖಿರ್‌ದಾಂಡೆಯವರು ಏಪ್ರಿಲ್-ಜೂನ್ 2011ರ ಕೊಂಕಣ್ ಟ್ಯಾಮ್ಸ್ ಪತ್ರಿಕೆಯಲ್ಲಿ ಗ್ಯೊಂಚೊ ಇತಿಹಾಸ್ ಎಂಬ ಲೇಖನದಲ್ಲಿ ಕುಡುಬಿಯರನ್ನು "ಪ್ರೋಟೋ ಆಸ್ಟ್ರೋಲಾಯಿಡ್" ಪಂಗಡದವರು, ಋಗ್ವೇದದಲ್ಲಿ ಅವರನ್ನು 'ಶಬರರು' ಎಂದಿದ್ದಾರೆ ಎಂದು ಉಲ್ಲೇಖಿಸಿದ್ದಾರೆ]. ಗೋವಾಕ್ಕೆ ಕೂಡಾ ಕುಡುಬಿಯರು ಆರ್ಯರ ಒಟ್ಟಿಗೆ ಬಂದವರು ಎಂದು ಕೆಲವು ಸಂಶೋಧಕರು ಅಭಿಪ್ರಾಯ ನೀಡಿರುತ್ತಾರೆ. ಕಿರಾತಾರ್ಜುನೀಯ ಪ್ರಸಂಗದಿಂದ ನಿಷ್ಪನ್ನವಾಗುವ ಈ ವಿಚಾರವನ್ನು ಸ್ವಲ್ಪ ಮಟ್ಟಿಗೆ ನಾವು ಒಪ್ಪಬಹುದು. ಈ ಪ್ರಸಂಗದಲ್ಲಿ ಶಿವ ಆರ್ಯನಾದರೆ ಶಬರ ಪಡೆಯಾಗಿದ್ದ ಕುಡುಬಿಯರು ಆರ್ಯರ ಆಜ್ಞಾನುವರ್ತಿಗಳು ಅಥವಾ ಆರ್ಯರಿಗೆ ಸಹಾಯಕರಾಗಿದ್ದ ಆರ್ಯ ಮತ್ತು ದ್ರಾವಿಡ ಜನಾಂಗದವರ ಮಧ್ಯದ ಜನಾಂಗ ಎಂದು ಅಂದಾಜು ಮಾಡಬಹುದು. ಆದುದರಿಂದಲೇ ಕುಡುಬಿಯರ ದೈಹಿಕ ಲಕ್ಷಣ ಮತ್ತು ಕೆಲವು ವಿಧಿನಿಷೇಧಗಳು ದ್ರಾವಿಡ ನಮೂನೆಯವಾದರೆ, ಭಾಷೆ, ಜನಿವಾರ ಧಾರಣೆ, ಇತರ ಸಮಾಜದವರನ್ನು ಮನೆಯೊಳಗೆ ಬಿಟ್ಟುಕೊಳ್ಳದಿರುವುದು, ಬ್ರಾಹ್ಮಣರಲ್ಲಿ ಹೊರತು ಬೇರೆ ಜಾತಿಯವರಲ್ಲಿ ಭೋಜನ ಸ್ವೀಕರಿಸದಿರುವುದು ಮುಂತಾದ ಹೆಚ್ಚಿನ ಲಕ್ಷಣಗಳು ಆರ್ಯರ ರೀತಿಯದಾಗಿವೆಯೇನೋ?

ಅರ್ಜುನನಿಗೆ ಪಾಶುಪತಾಸ್ತ್ರ ನೀಡಿದ ಮೇಲೆ ಅರ್ಜುನನಿಂದ ಪೂಜಿಸಲ್ಪಟ್ಟ ಶಿವಲಿಂಗವನ್ನು ಶಿವನು ಕುಡುಬಿಯರಿಗೆ ನೀಡಿ 'ಇನ್ನು ಮುಂದೆ ಈ ಮಲ್ಲಿಕಾರ್ಜುನ ನಿಮಗೆ ಕುಲದೇವರು' ಎಂಬುದಾಗಿ ಆಶೀರ್ವಾದ ನೀಡಿದುದರಿಂದ ಎಲ್ಲಾ ಕುಡುಬಿಯರೂ ಮಲ್ಲಿಕಾರ್ಜುನನನ್ನು ಕುಲದೇವರು ಅಂತ ನಂಬುತ್ತಾರೆ. ಕಾನಾಕೊನಾದ ಮಲ್ಲಿಕಾರ್ಜುನ ಶಿವಲಿಂಗ ಕುಡುಬಿಯರಿಗೆ ಸಿಕ್ಕಿದ್ದು ಎಂಬ ನಂಬಿಕೆ. ಅದರಿಂದಾಗಿ ಈ ದೇವಸ್ಥಾನದಲ್ಲಿ ವರ್ಷದಲ್ಲಿ ಎರಡು ತಿಂಗಳ ಪೂಜೆ ಕುಡುಬಿಯರೇ ಮಾಡುವುದು ಮತ್ತು ಕುಲದೇವರ ನೆಲೆಯಲ್ಲಿ ಕಾನಕೊನಾ ಮಲ್ಲಿಕಾರ್ಜುನ ದೇವರಿಗೇ ನಡೆದುಕೊಳ್ಳುವುದನ್ನು ಕಾಣಬಹುದು. ಶಿವನೊಂದಿಗೆ ಹಂದಿ ರೂಪದ ರಾಕ್ಷಸನನ್ನು ಬೇಟೆಯಾಡಿ ಸಂಹರಿಸಲು ಸಹಕಾರ ನೀಡಿದ್ದರಿಂದ ಮುಂದೆ ಬೇಟೆ ಮುಖಾಂತರವೇ ಮಾಂಸಾಹಾರಿಗಳಾಗಬೇಕೆನ್ನುವುದು ಶಿವನ ವರ ಅಂತ ಕುಡುಬಿಯರು ನಂಬುತ್ತಾರೆ. ಇದರಿಂದಾಗಿ ಇಂದಿಗೂ ಕುಡುಬಿಯರು ಬೇಟೆ ಮೂಲಕವೇ ಮಾಂಸಾಹಾರಿಗಳಾಗಿದ್ದಾರೆ. ಅದರಲ್ಲೂ ಕೇವಲ ಬಲೆ, ಈಟಿ, ಭರ್ಚಿಗಳನ್ನು ಉಪಯೋಗಿಸಿ ಹಂದಿ ಬೇಟೆಯಾಡುವುದೆಂದರೆ ಎಲ್ಲಿಲ್ಲದ ಉತ್ಸಾಹ. ಸಾಕಿದ ಪ್ರಾಣಿಗಳನ್ನು ಮಾಂಸಕ್ಕಾಗಿ ಉಪಯೋಗಿಸುವುದು ಕುಡುಬಿಯರಿಗೆ ನಿಷಿದ್ಧ. ಬುಡಕಟ್ಟೊಂದರ ಆಹಾರ ಸಂಗ್ರಹಣೆ ಮತ್ತು ಜೀವನೋಪಾಯದ ಸ್ವಾಭಾವಿಕ ಹವ್ಯಾಸ ಒಂದಕ್ಕೆ ಪೌರಾಣಿಕ ಪ್ರಸಂಗವೊಂದು ತಳುಕು ಹಾಕಿಕೊಂಡು ಆ ಜನಾಂಗದ ನಂಬಿಕೆಯನ್ನು ಇನ್ನಷ್ಟು ಬಲಿಷ್ಠಗೊಳಿಸಿರುವುದು ಕುಡುಬಿಯರಲ್ಲಿ ಸ್ಪಷ್ಟವಾಗುತ್ತದೆ. ಕಾಡುಪ್ರಾಣಿಗಳನ್ನು ಬೇಟೆಯಾಡಲು ನಿಷೇಧವಿರುವ ಸರಕಾರದ ಇಂದಿನ ಕಾನೂನಿನಿಂದ ಇವರ ಈ ಸ್ವಾಭಾವಿಕ ಹವ್ಯಾಸಕ್ಕೆ ಹಿನ್ನಡೆಯಾಗಿದೆ.

******

ಮದುವೆ

4. ಮದುವೆಯ ಅರ್ಥ ಮತ್ತು ವ್ಯಾಪ್ತಿ : ಮನುಷ್ಯ ಸ್ವಭಾವದಲ್ಲಿ ನೈಸರ್ಗಿಕವಾಗಿ ಪಶುತ್ವವಿರುವುದು ಸ್ವಾಭಾವಿಕ ಮತ್ತು ಪ್ರಕೃತಿ ಸಹಜ ನಿಯಮ. ಈ ಮೃಗತ್ವ ಪ್ರವೃತ್ತಿಯನ್ನು ನಿಯಂತ್ರಣಕ್ಕೊಳಪಡಿಸಿ, ಮಾನವತ್ವದ ಒಂದು ಶಿಷ್ಟ ರೂಪ ನೀಡಿ, ಮಾನವತ್ವದಿಂದ ಮಾಧವತ್ವ ತಲುಪಲು ಸಹಕಾರವಾಗುವುದು ಸಂಸ್ಕಾರಗಳಿಂದ. ಮನುಷ್ಯ ತನ್ನದಾಗಿಸಿಕೊಂಡ ಸಂಸ್ಕಾರಗಳ ಪೈಕಿ ಸರ್ವಸಾಮಾನ್ಯ ಆದರೂ ಪ್ರಮುಖ, ಭೋಗ ಮತ್ತು ಯೋಗಗಳ ಮಹತ್ವದ ಸ್ಥಾನ ಹೊಂದಿದ ವಿವಾಹ ಸಂಸ್ಕಾರವನ್ನು ಇಡೀ ಜಗತ್ತು ಮಾನ್ಯ ಮಾಡಿದೆ.

ಮನುಷ್ಯ ಅಲೆಮಾರಿಯಾಗಿದ್ದ ಕಾಲದಲ್ಲಿ ಬೇಟೆಯಾಡುತ್ತಾ, ಕಂದಮೂಲ, ಗೆಡ್ಡೆಗೆಣಸು, ಚಿಗುರುಸೊಪ್ಪು, ಫಲವಸ್ತುಗಳನ್ನು ತಿಂದು ಜೀವಿಸುತ್ತಿದ್ದ ಕಾಲದಲ್ಲಿಯೂ, ಲೈಂಗಿಕ ಭೋಗ ಮತ್ತು ಸಂತಾನಾಪೇಕ್ಷೆ ಆತನಿಗೆ ಸಹಜೀವನದ ಪ್ರೇರಣೆಯನ್ನು ಅನಿವಾರ್ಯವಾಗಿ ನೀಡಿರಬೇಕು. ಈ ಪ್ರೇರಣೆ ಪಕ್ಷಿ ಸಂಕುಲ, ಮೃಗ ಉರಗ ಜಾತಿಯಲ್ಲೂ ಇರುವ ಪ್ರಕೃತಿ ಸಹಜ ನಿಯಮ. ಕಾಲಾಂತರದಲ್ಲಿ ಮಾತನಾಡುವ ಮತ್ತು ಆಲೋಚನಾ ಶಕ್ತಿ ಹೊಂದಿರುವ ಮನುಷ್ಯನಲ್ಲಿ ಸಭ್ಯತೆಯ ವಿಕಾಸವಾಗುವಾಗ, ದನಕರು ಮುಂತಾದ ಜಾನುವಾರುಗಳನ್ನು ಸಾಕುವಾಗ, ಕೃಷಿ ವ್ಯವಸಾಯ ಕಾರ್ಯಗಳನ್ನು ನಡೆಸುವಾಗ ಕೆಲವು ಸಮಯವಾದರೂ ಒಂದೇ ಜಾಗದಲ್ಲಿ ನೆಲೆಗೊಳ್ಳಬೇಕಾಯಿತು. ಈ ಸಂದರ್ಭ ಒಬ್ಬರಿಗೊಬ್ಬರು ಕಷ್ಟಸುಖ ವಿನಿಮಯ ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂಬುದಾಗಿ ಅನುಭವದಿಂದ ತಿಳಿದು ಬಂತು. ಈ ರೀತಿ ಮುಂದುವರಿದ ಸಹಜೀವನದ ಕ್ರಮ ದೃಢವಾಗಿ ಬೇರುಬಿಟ್ಟು 'ಕುಟುಂಬ' ಎಂಬ ಸಂಸ್ಥೆ ಸ್ಥಾಪನೆಯಾಗಲು ಕಾರಣವಾಯಿತು.

ಮನುಷ್ಯ ತನ್ನ ಆಚರಣೆಗಳಲ್ಲಿ ಅಳವಡಿಸಿಕೊಂಡ ಸಂಸ್ಥೆಗಳ ಪೈಕಿ 'ಮದುವೆ' ಮತ್ತು 'ಕುಟುಂಬ' ಅತಿ ಪ್ರಾಚೀನವಾದುದು. ಸಮಾಜದಿಂದ ಈ ಸಂಸ್ಥೆಗಳನ್ನು ಹೊರಗಿಡಲು ಮನುಷ್ಯ ಶಕ್ತನಾಗುವುದಿಲ್ಲ. ಮನುಷ್ಯನ ಸಾಮಾಜಿಕ ವ್ಯವಸ್ಥೆಗೆ ಮತ್ತು ಅದರ ಅಭಿವೃದ್ಧಿಗೆ ಈ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿರುತ್ತದೆ. ಕುಟುಂಬ ಜೀವನದ ಬುನಾದಿಯಾಗಿರುವ ಮದುವೆಯ ಪ್ರಮುಖ ಉದ್ದೇಶ ಮನುಷ್ಯನಲ್ಲಿ ಸದಾ ಜಾಗೃತವಾಗಿರುವ ಲೈಂಗಿಕ ಪ್ರವೃತ್ತಿಯನ್ನು ನಿಯಂತ್ರಣದಲ್ಲಿಡುವುದು ಮತ್ತು ಸಂತತಿ ಬೆಳೆಸುವುದು. ಮದುವೆಯಿಂದ ಕುಟುಂಬದ ಪ್ರಾರಂಭವಾಗುತ್ತದೆ ಮತ್ತು ಕುಟುಂಬದಿಂದ ಮದುವೆ ಪೋಷಣೆಯಾಗುತ್ತದೆ. ಮದುವೆ ಮತ್ತು ಕುಟುಂಬದೊಳಗಿನ ಸಂಬಂಧಗಳನ್ನು ಒಂದರಿಂದ ಇನ್ನೊಂದನ್ನು ಬೇರ್ಪಡಿಸಲಾಗುವುದಿಲ್ಲ. ಒಂದು ಗಂಡು ಮತ್ತು ಹೆಣ್ಣಿನ ನಡುವೆ ಏರ್ಪಡುವ ಕುಟುಂಬ ಜೀವನದ ಪವಿತ್ರ ಬಂಧನವೇ 'ಮದುವೆ'. ಮಕ್ಕಳು ಅಥವಾ ಸಂತಾನಪ್ರಾಪ್ತಿ ಮತ್ತು ಆ ಮುಖಾಂತರ ಸದ್ಗತಿ ಹೊಂದಿ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಲು ಪೂರಕವಾಗುವ ಸಂಸ್ಥೆ. ಮದುವೆಯಿಂದ ಒಬ್ಬ ವ್ಯಕ್ತಿಗೆ ಮಾತ್ರವಲ್ಲ, ಸಮಾಜಕ್ಕೂ ಒಳ್ಳೆಯದಾಗುತ್ತದೆ. ಮದುವೆಯಿಂದಾಗಿ ವ್ಯಕ್ತಿಗೆ ಜೈವಿಕ, ದೈಹಿಕ ಮತ್ತು ಮಾನಸಿಕ ತೃಪ್ತಿ ಲಭಿಸುತ್ತಾದಾದರೆ, ಸಮಾಜಕ್ಕೆ ಸಾಂಸ್ಕೃತಿಕ ಮೌಲ್ಯ ಒದಗಿಸುತ್ತದೆ.

ಮನುಷ್ಯ ಜೀವನದಲ್ಲಿನ ವಿವಾಹ ಸಂಸ್ಕಾರವನ್ನು ಜಗತ್ತಿನ ಎಲ್ಲಾ ಜನಾಂಗಗಳೂ ಒಪ್ಪಿಕೊಂಡ ಒಂದು ಸಾಮಾಜಿಕ ವ್ಯವಸ್ಥೆ. ಮದುವೆಯ ವಿಧಿ-ವಿಧಾನಗಳು, ಪದ್ಧತಿ ಮತ್ತು ಸಂಪ್ರದಾಯಗಳು ದೇಶ, ಕಾಲ, ಸಮುದಾಯಗಳಿಗನುಗುಣವಾಗಿ ವ್ಯತ್ಯಾಸ ಹೊಂದಿರಬಹುದು. ಆದರೆ 'ವಿವಾಹ' ಎಂಬ ಒಂದು ಕಲ್ಪನೆ ಅದರ ಬಂಧ ಸಾರ್ವತ್ರಿಕವಾಗಿ ಒಂದೇ ಆಗಿರುವುದು ತಿಳಿಯುತ್ತದೆ. ಪುರಾತನ ಕಾಲದಿಂದಲೂ ಆಚರಣೆಯಲ್ಲಿ ಬಂದಿರುವ ಮದುವೆಯ ಕ್ರಮ ಹೆಚ್ಚಾಗಿ ಸಾಮಾಜಿಕ, ಧಾರ್ಮಿಕ ಮತ್ತು ಮಾನಸಿಕ ಬುನಾದಿಯಲ್ಲಿ

ಆವಿರ್ಭವಿಸಿ ಕಾಲಾಂತರದಲ್ಲಿ ಲೋಕರೂಢಿ ಮತ್ತು ಪ್ರಾದೇಶಿಕ ವಿಶೇಷತೆಗಳ ಪ್ರಭಾವದಿಂದಾಗಿ ಸಂಪ್ರದಾಯ ಮತ್ತು ಸಂಸ್ಕಾರಗಳ ಆಚರಣೆಯು ವಿವಿಧ ರೀತಿಗಳಲ್ಲಿ ಸೃಷ್ಟಿಯಾಗಿರಲೂಬಹುದು ಮತ್ತು ಅಳಿದಿರಲೂಬಹುದು. ಗಂಡಹೆಂಡಿರ ನಡುವೆ ಪವಿತ್ರ ಹಾಗೂ ಸ್ಥಿರ ಸಂಬಂಧ, ಸಂರಕ್ಷಣೆ ಮತ್ತು ಸಂವರ್ಧನೆ ಮಾಡಿ. ಆ ಮುಖಾಂತರ ಕುಟುಂಬ ಸಂಬಂಧದ ಚೌಕಟ್ಟು ಸುಧೃಡ ಮತ್ತು ಸಾಮರಸ್ಯಭರಿತ ಮಾಡುವುದು ಮದುವೆಯ ಮೂಲ ಉದ್ದೇಶ.

ಮನುಷ್ಯನ ಸಾಮುದಾಯಿಕ ಜೀವನದಲ್ಲಿ ವಿವಾಹ ಒಂದು ಸಂಕ್ರಮಣ ಕಾಲ. ಗಂಡು ಮತ್ತು ಹೆಣ್ಣು ಬಾಲ್ಯಾವಸ್ಥೆ ಕಳೆದು ಪ್ರೌಢಾವಸ್ಥೆ ತಲುಪುವಾಗ ಜೀವನದ ಸಾಮಾಜಿಕ ಮತ್ತು ಕೌಟುಂಬಿಕ ಜವಾಬ್ದಾರಿಯನ್ನು ಹೆಗಲಮೇಲೆ ಹೊರಿಸುವ ಕುರುಹಾಗಿ ನಮ್ಮ ವ್ಯವಸ್ಥೆಯಲ್ಲಿ ವಿವಾಹವು ಪ್ರಮುಖ ಪಾತ್ರ ವಹಿಸಿದೆ. ಗಂಡು, ಹೆಣ್ಣು ಹಿರಿಯರ ಆಶೀರ್ವಾದ ಪಡೆದು ಧರ್ಮ ನೀತಿಗಳ ಚೌಕಟ್ಟು ಮೀರದೆ, ತಮ್ಮ ಲೈಂಗಿಕ ಆಸೆ-ಆಕಾಂಕ್ಷೆಗಳನ್ನು ಹದ್ದು ಬಸ್ತಿನಲ್ಲಿಡಲು, ತನ್ನ ಸಂತತಿ ಮುಂದುವರಿಸಲು ಸಮಾಜದ ಹತ್ತು ಸಮಸ್ತರ ಸಮ್ಮುಖ, ಇಷ್ಟದೇವರೆದುರು ಮಾಡಿಕೊಳ್ಳುವ ಒಡಂಬಡಿಕೆ, ಪವಿತ್ರ ಪ್ರಮಾಣದ ಮದುವೆ ಒಂದು ಪವಿತ್ರ ಸಂಸ್ಕಾರ. ಮದುವೆಯಿಂದಾಗಿ ಎರಡು ಜೀವ, ಎರಡು ಜೆಡಗು, ಎರಡು ಕುಟುಂಬ, ಎರಡು ಮನೋಸ್ಥಿತಿ ಐಕ್ಯಗೊಳ್ಳುತ್ತವೆ. ವಿವಾಹ ಕೇವಲ ಗಂಡುಹೆಣ್ಣಿನ ನಡುವಿನ ಲೈಂಗಿಕ ತೃಷೆಯ ತೃಪ್ತಿಗಾಗಿ ನಡೆಯುವ ಒಂದು ಒಪ್ಪಂದ ಮಾತ್ರವಾಗಿರದೆ ಅದೊಂದು ಧಾರ್ಮಿಕ ಮಹತ್ವವುಳ್ಳ ಕರ್ತವ್ಯವೂ ಹೌದು. ಮನುಷ್ಯನ ಎಲ್ಲಾ ಮನೋದೈಹಿಕ ಆಸೆ ಆಕಾಂಕ್ಷೆಗಳನ್ನು ನ್ಯಾಯ ಸಮ್ಮತ ರೀತಿಯಲ್ಲಿ ಪರಿಹರಿಸಿಕೊಳ್ಳುವ ಒಂದು ಸುವ್ಯವಸ್ಥಿತ ಸಾಮಾಜಿಕ ಕಾರ್ಯ 'ಮದುವೆ'.

ಒಂದು ಕಾಲದಲ್ಲಿ ವೈಯಕ್ತಿಕ ಹೊಂದಾಣಿಕೆ ಮಾತ್ರವಾಗಿದ್ದ ಅಥವಾ ಸಾಮಾಜಿಕ ಒಪ್ಪಂದ ಮಾತ್ರವಾಗಿದ್ದ ಮದುವೆ ಸಂಪ್ರದಾಯ ಸಮಾಜದಲ್ಲಿ ಒಂದು ಧಾರ್ಮಿಕ ಸಂಸ್ಕಾರದ ರೂಪ ಪಡೆದು ಪ್ರತಿಷ್ಠಾಪಿತವಾಯಿತು. ಧಾರ್ಮಿಕ ಪ್ರಜ್ಞೆ ಮತ್ತು ವೈದಿಕ-ಪುರೋಹಿತಶಾಹೀ ಪ್ರಭಾವದಿಂದಾಗಿ ಜೀವನಕ್ಕೆ ದೇವರ ಅನುಗ್ರಹ, ಹಿರಿಯರ ಆಶೀರ್ವಾದ, ಪುರೋಹಿತರ ಪ್ರಾರ್ಥನೆ ಅಗತ್ಯವೆನ್ನುವ ಅಭಿಪ್ರಾಯ ಉದ್ಭವಿಸಿ ಮದುವೆ ಸಂಪ್ರದಾಯದ ಮೇಲೆ ಧಾರ್ಮಿಕ ಪ್ರಭಾವವಾಯಿತು. ಮತ್ತು ಹೆಚ್ಚಿನ ವೈದಿಕ ರೀತ್ಯಾ ವಿಧಿವಿಧಾನಗಳು ಪ್ರಾರಂಭವಾದವು ಎನ್ನಬಹುದು. ಹೀಗೆ ಸಮ್ಮಿಳಿತವಾದ ಧಾರ್ಮಿಕ ಪ್ರಭಾವಲಯ ವೃದ್ಧಿಯಾಗುವಾಗ ಲೋಕರೂಢಿ, ಪ್ರಾದೇಶಿಕ, ಸಾಮಾಜಿಕ, ಸಾಮುದಾಯಿಕ ಮತ್ತು ಸಾಂದರ್ಭಿಕ ವೈಶಿಷ್ಟ್ಯಗಳ ಪ್ರಭಾವದಿಂದಾಗಿ ವಿವಿಧ ಸಂಪ್ರದಾಯಗಳು ರೂಪುಗೊಂಡವು.

****

5. ಕುಡುಬಿಯರ ವಿವಾಹ ಪದ್ಧತಿ

(ಕೊಂಕಣಿ ಕೊಡಿಯಾಲ್ ಕುಡುಬಿಯರ ಮದುವೆ ಸಂಪ್ರದಾಯಗಳು) :

ಕುಡುಬಿಯರ ಸಂಸ್ಕೃತಿ ಬಹುಪ್ರಾಚೀನ ಸಂಸ್ಕೃತಿ. ಕುಡುಬಿಯರ ನಿತ್ಯ ಜೀವನದಲ್ಲಿ, ಕಷ್ಟಸುಖದಲ್ಲಿ, ಸಂಭ್ರಮಾಚರಣಾ ಕಾರ್ಯಗಳಲ್ಲಿ ಈ ಸಂಸ್ಕೃತಿ ಪ್ರತಿಬಿಂಬಿತವಾಗುತ್ತದೆ. ಮದುವೆ ಸಂಪ್ರದಾಯಗಳಲ್ಲಿ ಕುಡುಬಿಯರದೇ ಸ್ವಂತಿಕೆ ಗೋಚರಿಸುತ್ತದೆ. ಮದುವೆ ನೆಂಟಸ್ತಿಕೆಯ ರೂಢಿಗಳಲ್ಲಿ ಕುಡುಬಿ ಸಂಸ್ಕೃತಿಯ ಅಪ್ಪಟ ರೂಪಗಳನ್ನು ಕಾಣಬಹುದು. ಕುಡುಬಿ ಬುಡಕಟ್ಟು ಸಂಸ್ಕೃತಿಯ ಒಂದು ಬಲವಾದ ನಿದರ್ಶನ ಮದುವೆ. ಇವರ ಮದುವೆ ಸಂಪ್ರದಾಯಗಳಲ್ಲಿ ಪ್ರಾಚೀನ ಕಾಲದಿಂದ ಆಚರಣೆಯಲ್ಲಿ ಬಂದಿರುವ ಪದ್ಧತಿ, ರೀತಿ ರಿವಾಜುಗಳಿವೆ. ಧರ್ಮ ಶಾಸ್ತ್ರೋಕ್ತ ವಿಧಿನಿಷೇಧಗಳಿಗಿಂತ ಇವರಲ್ಲಿ ಜಾನಪದ ಸಂಪ್ರದಾಯಗಳು ಹೆಚ್ಚು ಪ್ರಾಶಸ್ತ್ಯ ಪಡೆಯುತ್ತವೆ. ಈ ಆಚರಣೆಗಳಲ್ಲಿ ಬುಡಕಟ್ಟು ಜನಾಂಗದ ಲಕ್ಷಣಗಳು ಮತ್ತು ನೈಸರ್ಗಿಕ ಮೌಲ್ಯಗಳು ಪ್ರತಿಯೊಂದು ಸಂದರ್ಭಗಳಲ್ಲೂ ಎದ್ದು ಕಾಣುತ್ತವೆ. ಈಗಿನ ಆಧುನಿಕ ಕಾಲದ ನಾಗರೀಕತನದ ಪರಿಸರದಲ್ಲಿ ಇತರ ಜನಾಂಗದವರ ಆಚಾರವಿಚಾರಗಳ ಪ್ರಭಾವದಿಂದಾಗಿ, ಪರಿಸ್ಥಿತಿ ಮತ್ತು ಸಂದರ್ಭಗಳ ಒತ್ತಡಕ್ಕೆ ಸಿಲುಕಿ ಕುಡುಬಿಯರ ಮದುವೆ ಸಂಪ್ರದಾಯದಲ್ಲೂ ಕೆಲಮಟ್ಟಿನ ಬದಲಾವಣೆಯಾಗಿರುವುದನ್ನು ಅಲ್ಲಗಳೆಯುವಂತಿಲ್ಲವಾದರೂ, ಪ್ರವಾಹದ ನೀರಿನಲ್ಲಿ ಎಷ್ಟು ಕೊಚ್ಚಿ ಹೋದರೂ ಬಂಡೆಗಲ್ಲು ಹೇಗೆ ಅಲುಗದೋ ಹಾಗೆ ಮೂಲ ಸಂಪ್ರದಾಯಗಳನ್ನು ಕುಡುಬಿಯರು ಉಳಿಸಿಕೊಂಡು ಬಂದಿದ್ದಾರೆ. ಇಂದಿನ ಬಹುಜನ ಸಮಾಜದಲ್ಲಿ ಮದುವೆ ಸಂಪ್ರದಾಯಗಳಲ್ಲಿ ವಿದೇಶೀ ಪ್ರಭಾವ ಬಿದ್ದಿರುವುದು ಕಂಡುಬಂದರೂ ಕುಡುಬಿಯರ ವಿವಾಹ ಸಂಪ್ರದಾಯಗಳಲ್ಲಿ ವಿದೇಶೀ ಆಚರಣೆಗಳ ಅನುಕರಣೆ ಅಷ್ಟಾಗಿ ಆಗಿರುವುದು ವಿರಳ ಎಂಬುದಾಗಿ ಧೈರ್ಯದಿಂದ ಹೇಳಬಹುದು.

ಕುಡುಬಿ ಕೊಂಕಣಿ ಉಪಭಾಷೆಯಲ್ಲಿ ಮದುವೆಗೆ 'ವ್ಹಾರ್ಡಿಗ್' (ವಾಡ್ಡಿಗ್) ಅನ್ನುತ್ತಾರೆ. ಬಸ್ತಿ ಪುಂಡಲೀಕ ವೆಂಕಟೇಶ ಶೆಣ್ಯೆಯವರು ತಮ್ಮ 'ಕೊಂಕಣಿ ಮತ್ತು ಮರಾಠಿ –ಇವುಗಳ ತುಲನಾತ್ಮಕ ವಿಮರ್ಶೆ' ಎಂಬ ಗ್ರಂಥದಲ್ಲಿ (ಪುಟ 101) 'ವ್ಹಾರ್ಡಿಕ್' (ವಿವಾಹ) ಎಂಬ ಶಬ್ದಕ್ಕೆ ಈ ರೀತಿ ವ್ಯಾಖ್ಯಾನ ನೀಡಿದ್ದಾರೆ– ವರ= ಗಂಡು (ಮದುಮಗ), ಹಾಡಿಕ್= ತರುವಿಕೆ ಎಂಬ ಎರಡು ಶಬ್ದಗಳು ಸೇರಿ 'ವ್ಹಾರ್ಡಿಕ್' ಶಬ್ದವಾಗಿದೆ. ವ್ಹರ್= ವ್ಹೊಕಾಲ್ ಹೊರ್ಕೈದ್+ಹಾಡಿಕ್ (ಹಾಡ್ಡುಂ) = ವ್ಹಾರ್ಡಿಕ್. ಅಂದರೆ ವರ ಮತ್ತು ವಧುವನ್ನು ವೈವಾಹಿಕ ಬಂಧನದಲ್ಲಿ ತರುವುದು = ಮದುವೆ. ಜೈಂದೂರು ದೇವರಾಯ ಅಯ್ಯಗಳ್ ಎಂಬ ಅಧ್ಯಯನಕಾರರು ಹೇಳುವ ಪ್ರಕಾರ 'ವ್ಹಾರ್ಡಿಗ್' ಶಬ್ದ 'ವಧು+ವರ–ವಿವಾಹ ದೀಕ್ಷಾ = ವ್ಹಾರ್ಡಿಗ್ ಎಂದಾಗಿದೆ. ಒಬ್ಬ ಗಂಡು ಮತ್ತು ಹೆಣ್ಣನ್ನು ಸಾಂಸಾರಿಕ ಬಂಧನದಲ್ಲಿ ಒಂದು ಮಾಡುವುದು ಎಂದರ್ಥ. ಕುಡುಬಿ ಉಪಭಾಷೆಯಲ್ಲಿ ಇದು ತದ್ಭವಗೊಂಡು

'ವಾಡ್ಡಿಗ್' ಆಗಿದೆ. ಅಂತೆಯೇ 'ವ್ಹರ್+ಯಾನ್=ವ್ಹೊರಾಣ್'. ಅಂದರೆ ವರನ ಯಾನ ಅಥವಾ ದಿಬ್ಬಣ. ವ್ಹೊವೊರ್ ಅಂದರೆ ವಧೂವರರ ಜೋಡಿ ಎಂಬುದರ ರೂಪಾಂತರ ಅಂತ ಅರ್ಥೈಸಬಹುದು.

5.1. ನೆಂಟಸ್ತಿಕೆ/ ವಧುವರಾನ್ವೇಷಣೆ :

ಕುಡುಬಿಯರ ಪೂರ್ವಿಕರು ಕೃಷಿ ಪ್ರಧಾನ ಹಿನ್ನೆಲೆಯುವರಾದುದರಿಂದ ಅವರಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಗೆ ಹೆಚ್ಚಿನ ಪ್ರಾಶಸ್ತ್ಯವಿತ್ತು. ಒಬ್ಬ ತಂದೆತಾಯಿಗೆ ಎಷ್ಟೇ ಜನ ಮಕ್ಕಳಿದ್ದರೂ ಅವರೆಲ್ಲಾ ಹಿರಿಮನೆಯೊಂದರಲ್ಲೇ ವಾಸ್ತವ್ಯವಿರುತ್ತಿದ್ದರು. ಒಂದೇ ಅಡುಗೆಯನ್ನು ಹೊಂದಿಕೊಂಡು ಜೀವಿಸುತ್ತಿದ್ದರು. ಕುಟುಂಬದ ಹಿರಿಯ ವ್ಯಕ್ತಿ ಯಜಮಾನಿಕೆ ನಡೆಸುತ್ತಿದ್ದನು. ಕುಟುಂಬ ಸದಸ್ಯರೆಲ್ಲರ ಸಂಪಾದನೆ ಯಜಮಾನನ ಅಧೀನ ನೀಡಬೇಕಾಗಿತ್ತು. ಸದಸ್ಯರ ವೈಯಕ್ತಿಕ ಖರ್ಚುವೆಚ್ಚಗಳ ಅವಶ್ಯಕತೆಯನ್ನು ಯಜಮಾನನೇ ಪೂರೈಸುತ್ತಿದ್ದ. ಕುಟುಂಬಿಕರ ಒಳಿತು ಕೆಡುಕು, ಸಂಭ್ರಮಾಚರಣೆ, ಕಷ್ಟಸಂಕಷ್ಟಗಳಿಗೆ ಯಜಮಾನನೇ ಪೂರಕವಾಗಿ ಸ್ಪಂದಿಸುತ್ತಿದ್ದನು. ಕುಟುಂಬಿಕರೂ ಯಜಮಾನನ ಮುಖಂಡತ್ವದಲ್ಲಿ ವಿಧೇಯರಾಗಿ ನಡೆದು ಗೌರವ ಮತ್ತು ಜವಾಬ್ದಾರಿಯಿಂದ ಜೀವನ ನಡೆಸುತ್ತಿದ್ದರು. ಕೌಟುಂಬಿಕ ವ್ಯವಹಾರಗಳಲ್ಲಿ ಹಿರಿಯರ ಮಾತಿಗೆ, ಯಜಮಾನನ ಅಂತಿಮ ನಿರ್ಧಾರಕ್ಕೆ ಗೌರವ ಕೊಡುತ್ತಿದ್ದರು. ಈ ಪದ್ಧತಿ ವೈವಾಹಿಕ ನೆಂಟಸ್ತಿಕೆಯಲ್ಲೂ ಚಾಲ್ತಿಯಲ್ಲಿತ್ತು.

ಎರಡು ಭಿನ್ನ ಬೆಡಗುಗಳ ಮತ್ತು ಕುಟುಂಬಗಳ ಬೆಸುಗೆಯಾದ ಇವರ ಮದುವೆಯಲ್ಲಿ ಗಂಡುಹೆಣ್ಣಿನ ಹೊಂದಾಣಿಕೆ ಕೌಟುಂಬಿಕ ಮತ್ತು ಸಾಮುದಾಯಿಕ ಅಂಶಗಳಿಂದ ಆಗುತ್ತದೆ. ಕುಡುಬಿ ಸಮಾಜವ್ಯವಸ್ಥೆ ಅಂತರ್ಜಾತೀಯ ವಿವಾಹವನ್ನು ಪ್ರೋತ್ಸಾಹಿಸುವುದಿಲ್ಲ. ವಿವಾಹ ಜಾತಿಯೊಳಗೇ ನಡೆಯುತ್ತದೆ ಮಾತ್ರವಲ್ಲ, ವಧೂವರರ ಆಯ್ಕೆಯಲ್ಲಿ ಬುಡಬಳ್ಳಿಗಳ ಕಡೆಗೆ ಹೆಚ್ಚಿನ ಗಮನವೀಯಲಾಗುತ್ತದೆ. ವ್ಯಕ್ತಿಯ ಇಷ್ಟ ಅನಿಷ್ಟಗಳಿಗಿಂತ ಹೆಚ್ಚು ಮದುವೆಯ ವ್ಯವಸ್ಥೆಯಲ್ಲಿ ತಮ್ಮ ಸಮುದಾಯದ, ಕುಟುಂಬದ ಒಟ್ಟು ಮೌಲ್ಯಗಳು ಪ್ರತಿಬಿಂಬಿತವಾಗುತ್ತವೆ. ಇಲ್ಲಿನ ಆಚರಣೆಗಳು ನಿಖರವಾಗಿ ಬುಡಕಟ್ಟು ಜನಾಂಗದ ಕುರುಹುಗಳು.

ಹಿಂದಿನ ಕ್ರಮ ಪ್ರಕಾರ ಕುಡುಬಿಯರಲ್ಲಿ ಗಂಡು ತಾನೇ ಸ್ವತಃ ಹೆಣ್ಣು ನೋಡುವ ಕ್ರಮವಿರಲಿಲ್ಲ. ಹುಡುಗನಿಗೆ ಸರಿಜೋಡಿಯಾಗಬಹುದಾದ ಹುಡುಗಿಯನ್ನು ಆತನ ಹಿರಿಯರೇ ಆಯ್ಕೆ ಮಾಡುತ್ತಿದ್ದರು. ಹಿರಿಯರು ಆಯ್ಕೆ ಮಾಡಿದ ಹುಡುಗಿಯನ್ನೇ ಹುಡುಗ ಮದುವೆಯಾಗಬೇಕಿತ್ತು, ಮದುವೆಯಾಗುತ್ತಿದ್ದ. ಮದುವೆ ವಿಚಾರದಲ್ಲಿ ಗಂಡು ಅಥವಾ ಹೆಣ್ಣಿನ ಅಭಿಪ್ರಾಯ ಮತ್ತು ಆಯ್ಕೆಗಳಿಗೆ ಹೆಚ್ಚಿನ ಮಹತ್ವವಿರಲಿಲ್ಲ. ಹುಡುಗನೇ ಹುಡುಗಿಯನ್ನು ಆಯ್ಕೆ ಮಾಡಿ ಮದುವೆ ಆದಲ್ಲಿ ಆ ಸಂಸಾರ ಸಾರ್ಥಕ ರೀತಿಯಲ್ಲಿ

ನಡೆಯುವುದಿಲ್ಲ ಎಂಬ ನಂಬಿಕೆ ಇತ್ತು. ಚಿಕ್ಕ ಪ್ರಾಯದಲ್ಲೇ ಮದುವೆ ಆಗುತ್ತಿತ್ತು ಆದುದರಿಂದ ತನ್ನ ಬಾಳಸಂಗಾತಿಯನ್ನು ಆಯ್ಕೆ ಮಾಡುವ ಪ್ರಾಯಪ್ರಬುದ್ಧತೆ ಮತ್ತು ಜವಾಬ್ದಾರಿಗಳೂ ಅವರಲ್ಲಿರಲಿಲ್ಲ. ಹಿರಿಯರು ಏರ್ಪಡಿಸಿದ ನೆಂಟಸ್ತಿಕೆ ತಿರಸ್ಕರಿಸಿದರೆ ಕುಟುಂಬದಲ್ಲಿ ಕಷ್ಟನಷ್ಟಗಳಿಗೆ ಸಿಲುಕುತ್ತಿದ್ದರು. ಹಿರಿಯರೂ ನೆಂಟಸ್ತಿಕೆ ನಡೆಸುವಾಗ ಜಾಗ್ರತೆ ವಹಿಸಿ, ಚಾಕಚಕ್ಯತೆಯಿಂದ ತಮ್ಮ ಎಲ್ಲಾ ಬುದ್ಧಿವಂತಿಕೆ ಉಪಯೋಗಿಸಿಯೇ ನೆಂಟಸ್ತಿಕೆ ಕುದುರಿಸುತ್ತಿದ್ದರು. ಗಂಡುಹೆಣ್ಣಿನ ಕೌಟುಂಬಿಕ ಹಿನ್ನೆಲೆ, ಗುಣಾವಗುಣ, ಸ್ವಭಾವ, ಪ್ರಾಯ, ದೈಹಿಕ ಲಕ್ಷಣ, ಆರ್ಥಿಕ ಸ್ಥಿತಿ, ವಿದ್ಯಾಭ್ಯಾಸ, ಉದ್ಯೋಗ, ವ್ಯವಹಾರ, ಹವ್ಯಾಸ... ಇತ್ಯಾದಿಗಳು ನೆಂಟಸ್ತಿಕೆಯ ಅರ್ಹತೆಗಳಾಗಿದ್ದುವು. ಹೆಚ್ಚಾಗಿ ಪರಿಚಯಸ್ಥರ ನೆಂಟಸ್ತಿಕೆಗೇ ಹೆಚ್ಚಿನ ಆದ್ಯತೆ ನೀಡುತ್ತಿದ್ದರು.

ಗಂಡಿನ ಕಡೆಯವರು ಹೆಣ್ಣಿನ ರೂಪ ಮಾತ್ರ ಗಣನೆಗೆ ತೆಗೆದುಕೊಳ್ಳದೆ ಗುಣ ಮತ್ತು ಕೆಲಸದ ಅನುಭವಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿದ್ದರು. ಉಣ್ಣಲು ತಿನ್ನಲು ತತ್ವಾರವಿದ್ದ ಹಿಂದಿನ ಕಾಲದಲ್ಲಿ ಕನ್ಯಾಪಿತೃಗಳೂ ಕೃಷಿ–ಸಾಗುವಳಿ ಇಲ್ಲದ ಮನೆಗಳ ಗಂಡಿಗೆ ಹೆಣ್ಣು ಕೊಡಲು ಹಿಂಜರಿಯುತ್ತಿದ್ದರು. ಕೃಷಿಕ ಗಂಡಿಗೆ ಹೆಣ್ಣು ಕೊಟ್ಟರೆ ಗದ್ದೆಯಲ್ಲಿ ಕೆಲಸ ಮಾಡಿಯಾದರೂ ತಮ್ಮ ಮಗಳು ಉಂಡು ತಿಂದು ಸುಖವಾಗಿರಬಹುದು ಎಂಬುದು ಅವರ ದೂರಾಲೋಚನೆಯಾಗಿತ್ತು. ಗಂಡಿನ ಕಡೆಯವರೂ ಗದ್ದೆಯ, ವ್ಯವಸಾಯ ಕೆಲಸದ ಅನುಭವವಿದ್ದ ಹೆಣ್ಣನ್ನೇ ಆಯ್ಕೆ ಮಾಡುತ್ತಿದ್ದರು. ಸಾಗುವಳಿ ಕೆಲಸ ಅರಿಯದ ಸೊಸೆಯನ್ನು ಗಂಡನ ಒಪ್ಪಿಗೆ ಇಲ್ಲದೆಯೇ ಮನೆಯಿಂದ ತವರಿಗಟ್ಟಿ ಮಗನಿಗೆ ಪುನಃ ಮದುವೆ ಮಾಡಿದ ದೃಷ್ಟಾಂತಗಳೂ ಸಿಗುತ್ತವೆ. 'ಹೆಣ್ಣು ತರಬೇಕು ಬಡವರ ಮನೆಯಿಂದ, ಹೆಣ್ಣು ಕೊಡಬೇಕು ಶ್ರೀಮಂತರ ಮನೆಗೆ' ಎಂಬ ನಾಣ್ಣುಡಿ ಇದೆ. ಬಡವರ ಹೆಣ್ಣು ತಂದಲ್ಲಿ ಕಷ್ಟಪಟ್ಟು ದುಡಿದು ಗೌರವದಿಂದ ಬಾಳಬಹುದು ಎಂಬುದು ಹಿಂದಿನ ಕಾಲದವರ ಅನುಭವದ ಲೆಕ್ಕಾಚಾರ. ತಲೆಗಿಂತ ಮುಂಡಾಸು ದೊಡ್ಡದಾಗಬಾರದೆಂಬ ಮಾತಿನಂತೆ ಶ್ರೀಮಂತರ ಹುಡುಗಿಯನ್ನು ತಂದರೆ ಆಕೆಯನ್ನು ಸುಧಾರಿಸುವುದು ಕಷ್ಟ. ಆಕೆ ಆ ಮನೆಗೆ ಹೊಂದಿಕೊಳ್ಳಲಾರಳೆಂಬ ಸತ್ಯದ ಅರಿವು ಹಿಂದಿನವರಿಗೆ ಸ್ಪಷ್ಟವಿತ್ತು. ಆದುದರಿಂದ ಹೆಣ್ಣಿನ ರೂಪಲಕ್ಷಣಗಳಿಗಿಂತಲೂ, ಗುಣ ಅವಗುಣಗಳಿಗಿಂತಲೂ ಆಕೆಯ ದುಡಿಯುವ ಶಕ್ತಿ ಮತ್ತು ಜಾಣ್ಮೆಗೆ ಹೆಚ್ಚಿನ ಗಮನ ನೀಡುತ್ತಿದ್ದರು. ಕುಡುಬಿ ಹೆಮ್ಮಕ್ಕಳೂ 8–10 ವರ್ಷದವರಿರುವಾಗಲೇ ತಾಯಿಯೊಂದಿಗೆ ಮನೆಯ ಮತ್ತು ಗದ್ದೆಯಲ್ಲಿನ ಕೆಲಸಗಳನ್ನು ಕಲಿತು ಪಳಗಿರುತ್ತಾರೆ. ಮದುವೆ ಆದ ನಂತರವೂ ಗಂಡ ನಿರುದ್ಯೋಗಿ, ಆಲಸಿ ಅಥವಾ ಕಡಿಮೆ ಸಂಪಾದನೆಯವನಾದರೂ, ತಾನು ಸ್ವತಃ ದುಡಿದು ಸಂಪಾದಿಸಿ ಸಂಸಾರ ಸರಿದೂಗಿಸುವ ದಿಟ್ಟ ಮಹಿಳೆಯರಿಗೇನೂ ಕುಡುಬಿಯರಲ್ಲಿ ಕೊರತೆಯಿಲ್ಲ. ಕುಡುಬಿಯರಲ್ಲಿ ಯಾವತ್ತೂ ಹೆಣ್ಣಿನ ಪ್ರಾಯ ಗಂಡಿಗಿಂತ ಕಡಿಮೆಯೇ ಇರುತ್ತದೆ/ ಇರಬೇಕು. ಆದರೂ ಹಿಂದಿನ ಕಾಲದಲ್ಲಿ, ಹುಡುಗಿ ದುಡಿಮೆಯಲ್ಲಿ ನುರಿತವಳಾದರೆ, ಗಂಡಿಗಿಂತ ಒಂದೆರಡು ವರ್ಷ ಹೆಚ್ಚಾಗಿದ್ದರೂ ಮದುವೆ ಮಾಡಿದ ನಿದರ್ಶನಗಳಿವೆ.

ಕುಡುಬಿಯರಲ್ಲಿಯೂ ಹಿಂದಿನ ಕಾಲದಲ್ಲಿ ಎಳೆಪ್ರಾಯದಲ್ಲಿ, ಋತುಮತಿಯಾಗುವ ಮೊದಲು, ಬಾಲ್ಯವಿವಾಹ ಪದ್ಧತಿಯಲ್ಲಿ ವಿವಾಹ ಏರ್ಪಡಿಸುತ್ತಿದ್ದರು. ರಾಜರ ಆಳ್ವಿಕೆಯ ಕಾಲದಲ್ಲಿ ಗೆದ್ದ ರಾಜರು ಮತ್ತವರ ಸೈನಿಕರು ಸೋತ ರಾಜ್ಯದ ಪ್ರಜೆಗಳ ಮೇಲೆ, ಅವರ ಹೆಮ್ಮಕ್ಕಳ ಮೇಲೆ ಬಲಾತ್ಕಾರ, ದೌರ್ಜನ್ಯ ಮಾಡುವುದು; ಅವರ ಕಾಮತೃಷೆಗೆ ಸೋತ ರಾಜ್ಯದ ಹೆಮ್ಮಕ್ಕಳನ್ನು ಬಲಿತೆಗೆದುಕೊಳ್ಳುವುದು ಸಾರ್ವತ್ರಿಕ ಮತ್ತು ಸಾಮಾನ್ಯ ಸಂಗತಿಯಾಗಿತ್ತು. ತಮ್ಮ ಹೆಮ್ಮಕ್ಕಳ ಮಾನರಕ್ಷಣೆಗಾಗಿ ಮದುವೆ ಎಂದರೇನೆಂದು ಅರಿಯದ, ಅದೊಂದು ಬಾಲ್ಯದ ಆಟವೆಂದೇ ತಿಳಿಯುವ ಪ್ರಾಯದಲ್ಲಿ ಹೆಮ್ಮಕ್ಕಳನ್ನು ವೈವಾಹಿಕ ಬಂಧನಕ್ಕೆ ಅನಿವಾರ್ಯವಾಗಿ ಒಳಗಾಗಿಸುವ ಕ್ರಮ ರೂಢಿಗೆ ಬಂದಿರಬಹುದು. ಅಲ್ಲದೆ ಬಾಲ್ಯವಿವಾಹ ಮಾಡುವುದರಿಂದ ಅನೈತಿಕ ವ್ಯವಹಾರದಲ್ಲಿ ತೊಡಗುವುದು, ಸೂಳೆಗಾರಿಕೆ ಮತ್ತು ಇತರ ಸಮುದಾಯದ ದಬ್ಬಾಳಿಕೆ, ಬಲಾತ್ಕಾರ.... ಮುಂತಾದ ರಗಳೆಗಳಿಂದ ಸ್ವಲ್ಪಮಟ್ಟಿಗಾದರೂ ಸ್ವತಂತ್ರವಾದ ರಕ್ಷಣಾತ್ಮಕ ಜೀವನ ನಡೆಸಬಹುದೆಂಬುದು ಹಿಂದಿನವರ ಆಲೋಚನೆಯಾಗಿತ್ತು. ಆ ಕಾಲದ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಹಾಗೂ ಮನೋಸ್ಥಿತಿಯೂ ಹಾಗಿತ್ತು. ಹೆಣ್ಣು ಪ್ರೌಢಾವಸ್ಥೆಗೆ ತಲುಪುವ ಮೊದಲು ಮದುವೆ ಮಾಡದಿದ್ದಲ್ಲಿ ಸಮಾಜವು ಆ ಹೆಣ್ಣನ್ನು ಮತ್ತು ಆ ಕುಟುಂಬವನ್ನು ಸಂಶಯದ ದೃಷ್ಟಿಯಿಂದ ನೋಡುತ್ತಿತ್ತು. ಜನಸಂಖ್ಯೆ ಕೂಡಾ ಕಡಿಮೆಯಿದ್ದ ಆ ಕಾಲದಲ್ಲಿ ಕೃಷಿ ವಿನಃ ಜೀವನೋಪಾಯ ಉದ್ಯೋಗಗಳೂ ಕಡಿಮೆ ಇದ್ದುದರಿಂದ ಸಾಗುವಳಿ ಕೆಲಸಕ್ಕೆ ಜನಬಲದ ಅವಶ್ಯಕತೆಯಿತ್ತು. ಗುಡ್ಡಗಳನ್ನು ಅಗೆದು ಕೃಷಿಯೋಗ್ಯ ಗದ್ದೆಗಳನ್ನಾಗಿ ಮಾಡಿ ದುಡಿಯುತ್ತಿದ್ದ ಆ ಕಾಲದಲ್ಲಿ ಹುಡುಗಿಗೆ ಪೂರ್ತಿ ಹನ್ನೆರಡು ವರ್ಷ ಆಗಿರದಿದ್ದರೂ ಗರ್ಭಾವಸ್ಥೆಯ ಮಾಸಗಳನ್ನೂ ಲೆಕ್ಕಕ್ಕೆ ಸೇರಿಸಿಕೊಂಡು, ಹನ್ನೆರಡು ವರ್ಷ ಭರ್ತಿ ಮಾಡಿ ಮದುವೆ ಮಾಡುವ ಸಂದರ್ಭಗಳಿದ್ದವು. ಈ ರೀತಿಯ ಮದುವೆಯಾಗುವಾಗ ದೂರದ ಪ್ರದೇಶಗಳಿಗೆ ದಿಬ್ಬಣ ಕಾಲ್ನಡಿಗೆಯಲ್ಲಿ ಸಾಗುವ ಸಂದರ್ಭ ಮದುಮಗಳನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಹೋಗುತ್ತಿದ್ದರು ಎಂಬ ವಿಷಯ ಕೇಳಲು ಸಿಗುವುದು ಅಪರೂಪವೇನಲ್ಲ. ಎಲ್ಲಾ ಹನ್ನೆರಡು ವರ್ಷ ತುಂಬದೇ ಮದುವೆಯಾದ ಬಾಲೆ ಅತ್ತೆ ಮನೆಯಲ್ಲಿ ಎಷ್ಟು ದುಡಿದಾಳು ? ದುಡಿಮೆ ಬಾರದ ಸೊಸೆಯನ್ನು ಅತ್ತೆ ದಂಡಿಸಿ, ಮಗನಲ್ಲಿ ಚಾಡಿ ಹೇಳಿ ಶಾಶ್ವತವಾಗಿ ತಾಯಿ ಮನೆಗೆ ಅಟ್ಟುವ ಪ್ರಸಂಗಗಳೂ ಇದ್ದವು. ಈ ಪ್ರಕಾರ ಋತುಮತಿಯಾಗುವ ಮೊದಲೇ ಮದುವೆ ಆದರೂ ಹುಡುಗಿ ತಾಯಿ ಮನೆಯಲ್ಲೇ ಇರುತ್ತಿದ್ದಳು. ಋತುಮತಿಯಾದ ಮೇಲೆ ಧಾರ್ಮಿಕ ಸ್ನಾನದ ಶಾಸ್ತ್ರ ಮಾಡಿ ಗಂಡನ ಮನೆಗೆ ಕಳುಹಿಸಿಕೊಡುವ ವ್ಯವಸ್ಥೆ ಚಾಲ್ತಿಯಲ್ಲಿತ್ತು. ಹೀಗೆ ಋತುಮತಿಯಾಗುವ ವರೆಗೆ ಪತಿ ಪತ್ನಿ ನಡುವಿನ ಲೈಂಗಿಕ ಸಂಪರ್ಕ ತಡೆಯಲಾಗುತ್ತಿತ್ತು.

ಕುಟುಂಬದಲ್ಲಿ ಹಿರಿಕವಲಿನಲ್ಲಿ ಮದುವೆ ಆಗದೆ ಕಿರಿಯ ಕವಲಿನಲ್ಲಿ ಮದುವೆ ನಿಶ್ಚಯವಾಗುವುದು ತೀರಾ ವಿರಳ. ಕಿರಿಕವಲಿನವರಿಗೆ ಮೊದಲು ಮದುವೆ ಆಗಿ, ನಂತರ ಅವರಿಗೆ ಹುಟ್ಟುವ ಮಕ್ಕಳು ಹಿರಿಕವಲಿನವರ ಮಕ್ಕಳಿಗಿಂತ ಹಿರಿಯವರಾಗದಂತೆ

ಈ ವ್ಯವಸ್ಥೆ, ಒಬ್ಬ ತಂದೆತಾಯಿಗೆ ಸಹೋದರ -ಸಹೋದರಿ ಮಕ್ಕಳು ಇದ್ದಲ್ಲಿ ಮದುವೆಗೆ ತಯಾರಾದ ಸಹೋದರಿಯರಿಗೆ ಮದುವೆ ಆಗದೆ, ಸಹೋದರ ಪ್ರಾಯದಲ್ಲಿ ಹಿರಿಯನಾದರೂ, ಅವನು ಮದುವೆಗೆ ತಯಾರಾಗುವ ಸಂದರ್ಭಗಳು ಕಡಿಮೆ. ಸಹೋದರಿ ವಿವಿಧ ಕಾರಣಗಳಿಂದ ಮದುವೆಯಾಗದೇ ಉಳಿದ ಸಂದರ್ಭ ಹೇಗಾದರೂ ಸಹೋದರಿಗೆ ಮದುವೆ ಮಾಡಬೇಕೆಂಬ ಉದ್ದೇಶದಿಂದ ಸಹೋದರ, ಕೊಡುಕೊಳ್ಳುವ 'ವಿನಿಮಯ ವಿವಾಹ'ಕ್ಕೆ ತಯಾರಾಗುವ ಅನೇಕ ಸಂದರ್ಭಗಳಿರುತ್ತವೆ. ಒಂದೇ ಬೆಡಗಿನೊಂದಿಗೆ, ದಾಯಾದಿ ಬೆಡಗಿನವರೊಂದಿಗೆ ಅಥವಾ ಸಗೋತ್ರ ಸಂಬಂಧ ನಡೆಯುವುದಿಲ್ಲ. ವಿಗೋತ್ರ ಸಂಬಂಧ, ಅಂದರೆ ಹುಟ್ಟು ಬಳಿ ಮತ್ತು ದಾಯಾದಿ ಬಳಿ ಬಿಟ್ಟು ಇತರ ಬಳಿಗಳವರೊಂದಿಗೆ ನೆಂಟಸ್ತಿಕೆ ಆಗಬಹುದು. ಮಕ್ಕಳ ಕಟ್ಟು ಸಂಪ್ರದಾಯದವರಾಗಿರುವುದರಿಂದ ತಂದೆಯ ಬೆಡಗಿನಲ್ಲಿ ನೆಂಟಸ್ತಿಕೆ ಜರಗುವುದಿಲ್ಲ. ತಂದೆಯ ಸಹೋದರಿ ಸೋದರತ್ತೆ ಆಗುವುದರಿಂದ ಆಕೆಯ ಮಕ್ಕಳೊಂದಿಗಿನ ನೆಂಟಸ್ತಿಕೆ ಸಮ್ಮತವಾಗುತ್ತದೆ. ತಾಯಿಯ ಸಹೋದರರು ಸೋದರ ಮಾವಂದಿರಾಗುವುದರಿಂದ, ತಾಯಿಯ ಬೆಡಗಿನಲ್ಲಿ ಪುರುಷರ ಪೈಕಿ ನೆಂಟಸ್ತಿಕೆ ನಡೆಸಬಹುದು. ಆದರೆ ತಾಯಿಯ ಬೆಡಗಿನ ಮಹಿಳೆಯರ ಪೈಕಿ ನೆಂಟಸ್ತಿಕೆ ನಡೆಯುವುದಿಲ್ಲ. ತಾಯಿಯ ಸಹೋದರಿಯ ಬೆಡಗು ಪ್ರತ್ಯೇಕವಾದರೂ ಸಂಬಂಧದಲ್ಲಿ ಚಿಕ್ಕಮ್ಮ ಅಥವಾ ದೊಡ್ಡಮ್ಮಳಾಗುತ್ತಾಳೆ. ಇದೇ ರೀತಿ ವಿಜಾತಿ ಸಂಬಂಧ, ಅನ್ಯಧರ್ಮೀಯ ಸಂಬಂಧಗಳಿಗೆ ನಿಷೇಧವಿದೆ. ಸಹೋದರ ಸಹೋದರಿಯರ ಮಕ್ಕಳ ನಡುವಿನ 'ಸೋದರಿಕೆ' ಸಂಬಂಧಗಳು ಹಕ್ಕಿನಲ್ಲಿ ಜರಗುತ್ತವೆ. ಸಹೋದರ ಅಥವಾ ಸಹೋದರಿಯ ಮಗಳನ್ನು ತಂದುಕೊಳ್ಳುವುದು ಕುಡುಬಿಯರಲ್ಲಿ ಹಕ್ಕಿನ ನೆಂಟಸ್ತಿಕೆ. ಈ ರೀತಿ ತಾಯಿಯ ಸಹೋದರ ಹಾಗೂ ತಂದೆಯ ಸಹೋದರಿಯ ಮಕ್ಕಳ ನಡುವಿನ ನೆಂಟಸ್ತಿಕೆ ಸರ್ವಸಾಮಾನ್ಯ. ಇದನ್ನು ಮಿಶ್ರದಾಯಾದಿ ವಿವಾಹ (CROSS COUSIN MARRIAGE) ಅನ್ನುತ್ತಾರೆ. ಕುಟುಂಬದಲ್ಲಿನ ಸುಸಂಗತಿಗಳು ಪರರ ಪಾಲಾಗಬಾರದೆಂಬ ಉದ್ದೇಶದಿಂದ ಕುಡುಬಿಯರು ಪಾಲಿಸಿಕೊಂಡು ಬಂದಿರುವಂತಹ ಇದೊಂದು ಬಂದೋಬಸ್ತಿನ ಕಟ್ಟುಪಾಡು ಎನ್ನಬಹುದು. ಸಹೋದರ ಸಹೋದರಿಯರ ನಡುವೆ ಪ್ರೀತಿಯ ಕೌಟುಂಬಿಕ ಬಂಧನವಿರುತ್ತದೆ. 'ಭಾವ್ ಭೊಯ್ಣಿಕ್ ಕಳೆ, ಭೊಯ್ಣಿಕ್ ಭಾವ್ ದೊಳೆ' (ಸಹೋದರ ಸಹೋದರಿಗೆ ಮಲ್ಲಿಗೆ ಮೊಗ್ಗು, ಸಹೋದರಿಗೆ ಸಹೋದರ ಕಣ್ಣು) ಎಂಬ ಪ್ರಾಸ ಮತ್ತು ಅರ್ಥಭರಿತ ನಾಣ್ಣುಡಿಯೇ ಕುಡುಬಿಯರಲ್ಲಿದೆ.

ಮಿಶ್ರದಾಯಾದಿ ವಿವಾಹ (CROSS COUSIN MARRIAGE) ಬಗ್ಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1998ರಲ್ಲಿ ಪ್ರಕಟಿಸಿದ ಕರ್ನಾಟಕ ಬುಡಕಟ್ಟುಗಳ ಸಂಪುಟ 1ರ ಪುಟ 330ರಲ್ಲಿ ಡಾ। ಚಂದ್ರು ಕಾಳೇನಹಳ್ಳಿಯವರ ಸೋಲಿಗ ಬುಡಕಟ್ಟಿನ ಕುರಿತ ಲಿಖಿತದಲ್ಲಿ ಬಹಳ ಸುಂದರವಾದ ವಿವರಣೆ ಈ ಕೆಳಗಿನಂತಿದೆ–

"ಹುಡುಗ ತನ್ನ ತಾಯಿಯ ಸಹೋದರನ ಮಗಳನ್ನಾಗಲೀ ಅಥವಾ ತನ್ನ ತಂದೆಯ ಸಹೋದರಿಯ ಮಗಳನ್ನಾಗಲೀ ಮದುವೆಯಾಗುವುದು ವಿಶ್ವಾದ್ಯಂತ ಬುಡಕಟ್ಟುಗಳಲ್ಲಿ ಪ್ರಚಲಿತವಿರುವ ಕ್ರಮ. ರಾಬರ್ಟ್ ಲೊಪಿಯವರು ಮಿಶ್ರದಾಯಾದಿ ಯಾರು? ಎಂಬುದನ್ನು ಸ್ಪಷ್ಟಪಡಿಸುತ್ತಾ– 'When primitive people favour in marriage, this is nearly always limited to these relatives technically known as Cross-cousins while parallel or identical cousins are barred from intermarrying by the incest rule.'

ಈ ಮಿಶ್ರದಾಯಾದಿ ಎಂಬ ಮಾತೇ ತುಂಬಾ ಅರ್ಥಗರ್ಭಿತವಾಗಿದೆ. ಒಬ್ಬ ಯುವಕನ ತಂದೆಯ ಸಹೋದರನ ಮಗಳು ಆ ಯುವಕನಿಗೆ ದಾಯಾದಿ (cousin)ಯೂ, ತಂಗಿಯೂ, ಒಂದೇ ಕುಲದವಳೂ ಆಗುತ್ತಾಳೆ. ಇವೇ ಮಾತುಗಳು ಆ ಯುವಕನ ತಾಯಿಯ ಸಹೋದರಿಯ ಮಗಳಿಗೂ ಅನ್ವಯವಾಗುತ್ತದೆ. ಆದರೆ ಆ ಯುವಕನ ತಂದೆಯ ಸಹೋದರಿಯ ಮಗಳು ಅಥವಾ ಅವನ ತಾಯಿಯ ಸಹೋದರನ ಮಗಳು ಮಿಶ್ರದಾಯಾದಿ (cross cousin)ಯೂ, ಬೇರೊಂದು ಕುಲಕ್ಕೆ ಸೇರಿದವಳೂ, ಪತ್ನಿಯಾಗಿ ಸ್ವೀಕರಿಸಲು ಯಾವುದೇ ಅಡ್ಡಿ ಆತಂಕವಿಲ್ಲದವಳೂ ಆಗುತ್ತಾಳೆ. ಈ ಬಗೆಯ ಮಿಶ್ರದಾಯಾದಿ ವಿವಾಹ ಹೆಚ್ಚಾಗಿ 'ಕುಲ'ವನ್ನು ಅವಲಂಬಿಸಿ ತೀರ್ಮಾನವಾಗುತ್ತದೆ. 'The daughter of a father's brother or of a mother's sister were member's of the same group i.e. 'clan sister' while daughters of mother's brother or of father's sister were members of different groups.'

ಮಿಶ್ರ ದಾಯಾದಿಗಳನ್ನು ವಿಂಗಡಿಸುವಲ್ಲಿ ಜೈವಿಕವಾದ ಯಾವುದೇ ಕಾರಣವಿಲ್ಲದೆ ಕುಲಕ್ಕೆ ಸಂಬಂಧಪಟ್ಟ ವಿಷಯ ಇಲ್ಲಿ ಪ್ರಾಮುಖ್ಯವಾಗುವುದನ್ನು ಕಾಣಬಹುದು. ಈ ಬಗೆಯ ವಿವಾಹ ಪದ್ಧತಿ ದ್ರಾವಿಡ ಬುಡಕಟ್ಟು ಜನಾಂಗದ ಒಂದು ವಿಶಿಷ್ಟ ಲಕ್ಷಣ ಎಂದು ಕೆ. ಎಂ. ಕಪಾಡಿಯವರು ಹೇಳಿದ್ದಾರೆ. ಇಂತಹ ವಿವಾಹಗಳಿಂದ–

1. ಕುಟುಂಬಗಳ ನಡುವಿನ ಬಾಂಧವ್ಯ ಧೃಡವಾಗುವುದು.
2. ಬಂಧುಗಳನ್ನು ಬಿಟ್ಟು ಕುಟುಂಬದ ಆಸ್ತಿ ಹೊರಗಿನವರಿಗೆ ಹೋಗುವುದಿಲ್ಲ.
3. ಕುಟುಂಬದ ಜೈವಿಕಾಂಶಗಳು, ಒಳ್ಳೆಯ ವಂಶವಾಹಿಗಳು ಕುಟುಂಬದೊಳಗೇ ಸುರಕ್ಷಿತವಾಗಿರುತ್ತವೆ.
4. ಮದುವೆ ಖರ್ಚಿನಲ್ಲಿ ಎರಡೂ ಕಡೆಯವರಿಗೆ ಹೆಚ್ಚಿನ ಹೊರೆಬೀಳುವುದಿಲ್ಲ.
5. ಸಹೋದರ–ಸಹೋದರಿಯರ ನಡುವಿನ ಪ್ರೀತಿ–ವಾತ್ಸಲ್ಯ ವಿಸ್ತೃತ ಮತ್ತು ಬಲಗೊಳ್ಳುತ್ತವೆ.

6. ಈ ಬಗೆಯ ವಿವಾಹಗಳಲ್ಲಿ ವಿಚ್ಛೇದನಗಳಾಗುವ ಸಂಭವ ಕಡಿಮೆ."

[ಕರ್ನಾಟಕ ಬುಡಕಟ್ಟುಗಳು ಸಂ.1 ಪು. 330 ಸೋಲಿಗರು - ಡಾ। ಚಂದ್ರು ಕಾಳೇನಹಳ್ಳಿ, 1998]

ಪುರುಷ ಮೂಲದಿಂದ ನಿಷ್ಪನ್ನಗೊಳ್ಳುವ ಕುಡುಬಿಯರ ಕುಟುಂಬ ವ್ಯವಸ್ಥೆ ಇಂತಹ ಕೆಲವು ವಿಧಿ ನಿಷೇಧಗಳನ್ನು ಹೇರಿಕೊಂಡು ವಂಶೋತ್ಪತ್ತಿಯನ್ನು ನಿಯಂತ್ರಿಸುವ ಮೂಲಕ ಬುಡಕಟ್ಟಿನ ಅನ್ಯೋನ್ಯತೆಯನ್ನು ಕಾಪಾಡಿಕೊಂಡು ಬರುತ್ತದೆ. ದಾಯಾದಿ ಬೆಡಗುಗಳಲ್ಲಿ ವಿವಾಹವನ್ನು ನಿಷೇಧಿಸುವ ಮೂಲಕ ವಂಶೋತ್ಪತ್ತಿಯನ್ನು ಕಾಪಾಡಿಕೊಂಡು ರಕ್ತ ಸಂಕರದ ತೊಂದರೆಗಳಿಗೆ ತಡೆಯೊಡ್ಡುತ್ತಾರೆ.

ಒಬ್ಬ ತಂದೆತಾಯಿಗೆ ಜನಿಸಿದ ಸಹೋದರ ಸಹೋದರಿಯರಿಗೆ ಇನ್ನೊಂದು ಪ್ರತ್ಯೇಕ ಕುಟುಂಬದ ಸಹೋದರ ಸಹೋದರಿಯರ ನಡುವೆ ನೆಂಟಸ್ತಿಕೆ ಏರ್ಪಡುವ ಸಂದರ್ಭಗಳಿವೆ. ಸಹೋದರ ಸಹೋದರಿಯರ ಮಕ್ಕಳಿಗೆ ಇನ್ನೊಂದು ಕುಟುಂಬದ ಸಹೋದರ ಮತ್ತು ಸಹೋದರಿಯರ ಮಕ್ಕಳೊಂದಿಗೆ ಮದುವೆ ಏರ್ಪಡುವ ಸಂದರ್ಭಗಳೂ ಇರುತ್ತವೆ. ಇಂತಹ ನೆಂಟಸ್ತಿಕೆಗೆ 'ವಿನಿಮಯ ವಿವಾಹ ಪದ್ಧತಿ' ಎಂದು ಹೆಸರು. ಈ ವಿನಿಮಯ ವಿವಾಹದ ನೆಂಟಸ್ತಿಕೆ ಇನ್ನೊಂದು ರೀತಿಯಲ್ಲೂ ನೆರವೇರುತ್ತದೆ. ಮಾವ (ಸೋದರ ಮಾವ) ಮತ್ತು ಸೊಸೆ (ಸೋದರ ಸೊಸೆ) ಹುಡುಗ ಹುಡುಗಿ ಒಂದು ಕುಟುಂಬದಲ್ಲಿ ಇದ್ದರೆ, ಇನ್ನೊಂದು ಕುಟುಂಬದ ಒಬ್ಬ ತಂದೆತಾಯಿಯ ಮಕ್ಕಳು-ಸಹೋದರ ಸಹೋದರಿಯರ ನಡುವೆ ಅವರಿಗೆ ನೆಂಟಸ್ತಿಕೆ ಏರ್ಪಡುತ್ತದೆ. ಇಂತಹ ನೆಂಟಸ್ತಿಕೆಯಲ್ಲಿ ದ್ವಿಪಕ್ಷೀಯ ವಧೂವರರ ಬೆಡಗು ಬದಲಾಗುವುದರಿಂದ ಈ ರೀತಿಯ ಸಂಬಂಧ ಮಾಡಲು ಕುಡುಬಿಯರಲ್ಲಿ ಅವಕಾಶವಿದೆ. ಈ ಥರದ ನೆಂಟಸ್ತಿಕೆಗೆ 'ಮಾವ ಸೊಸೆ ನೆಂಟಸ್ತಿಕೆ' (ಮಾವ್ಯಾ ಭಾಚ್ಚಿ ಸಯ್ರಿಗ್) ಎಂದು ಹೆಸರು. ಉತ್ತರ ಕರ್ನಾಟಕ ಮತ್ತು ಘಟ್ಟದ ಮೇಲಿನ ಬಯಲು ಪ್ರದೇಶಗಳಲ್ಲಿ ಹುಡುಗಿಯೊಬ್ಬಳನ್ನು ತಾಯಿಯ ಸಹೋದರನಿಗೇ ಕೊಟ್ಟು ಮದುವೆ ಮಾಡುವ ಕ್ರಮ ಚಾಲ್ತಿಯಲ್ಲಿದೆ. ಇದು ಕೂಡಾ ಒಂದು ರೀತಿಯಲ್ಲಿ 'ಮಾವ ಸೊಸೆ ನೆಂಟಸ್ತಿಕೆ' ಹೌದಾದರೂ ಸಂಬಂಧ - ಕಾರಣಗಳು ಬೇರೆ ಬೇರೆ. ಇಂತಹ ನೆಂಟಸ್ತಿಕೆಗೆ ಕುಡುಬಿಯರಲ್ಲಿ ಅವಕಾಶವಿಲ್ಲ.

ವಿವಾಹ ಪೂರ್ವ ಲೈಂಗಿಕ ಸಂಪರ್ಕ ಪಾಪ, ಅಪಮಾನ; ವಿವಾಹಾ ನಂತರ ಅನೈತಿಕ ಸಂಬಂಧ ಅಥವಾ ಅಗಮ್ಯಗಮನ ಅಗೌರವ, ನೈತಿಕ ಅಪರಾಧ ಎಂಬ ನಂಬಿಕೆ ಇರುವುದರಿಂದ ಈ ಥರದ ನಡವಳಿಕೆಗಳಿಗೆ ಕುಡುಬಿಯರಲ್ಲಿ ನಿಷೇಧವಿದೆ. ಗುರುತು ಪರಿಚಯ ಇಲ್ಲದ ಕಡೆ ಹೆಣ್ಣು ಕೊಡುವ ಪದ್ಧತಿಯೂ ಕಡಿಮೆ. ಹೆಣ್ಣು ತಂದುಕೊಳ್ಳುವ ಪ್ರಸಂಗಗಳೂ ಅಪರೂಪ. ವಾಡೆಯೊಳಗಿನ ಹತ್ತಿರದ ಊರುಗಳಲ್ಲಿನ, ಪರಿಚಯಸ್ಥರ ಹೆಣ್ಣು ನೋಡಿಯೇ ನೆಂಟಸ್ತಿಕೆ ಕುದುರಿಸುತ್ತಾರೆ. ವಾಡೆಯ ಒಳಗಿನದ್ದೇ ನೆಂಟಸ್ತಿಕೆ ಮಾಡಲು ಇನ್ನೊಂದು ಪ್ರಬಲ ಕಾರಣವೂ ಇದೆ. ಕುಡುಬಿಯರಿಗೆ ದಿನನಿತ್ಯದ

ಹಸಿವು ನೀಗಿಸುವ ಪ್ರಶ್ನೆಗಿಂತಲೂ ಧಾರ್ಮಿಕ ಆಚಾರವಿಚಾರಗಳನ್ನು ಅನೂಚಾನವಾಗಿ ನಡೆಸುವುದು ಹೆಚ್ಚು ಮಹತ್ವದ್ದು. ಎಷ್ಟೇ ಅಡ್ಡಿ ಆತಂಕ ಎದುರಾದರೂ ಅವುಗಳನ್ನು ಕಾಲಕಾಲಕ್ಕೆ ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಕುಟುಂಬದಲ್ಲಿ ಹೊಲೆಸೂತಕ, ಮೈಲಿಗೆಗಳನ್ನು ಆಚರಿಸಬೇಕಾದ ಸಂದರ್ಭಗಳಲ್ಲಿ ಧಾರ್ಮಿಕ ಆಚರಣೆಗಳನ್ನು ಬಾಕಿ ಇಡುವುದಿಲ್ಲ. ದೈವೀಕ ಆಚರಣೆಗಳಿಗೆ ವಟು (ಬ್ರಹ್ಮಚಾರಿ ಹುಡುಗ) ಪೂಜೆ ಮತ್ತು ದೇವರ ಸ್ವರೂಪದಲ್ಲಿ ದಂಪತಿಪೂಜೆ, ಸುವಾಸಿನಿ ಪೂಜೆಗಳಿಗೆ ಉಪವಾಸ ವ್ರತದಲ್ಲಿ ಪೂಜೆಯನ್ನು ಸ್ವೀಕರಿಸಲು ಭಾಗವಹಿಸುವವರ ಅವಶ್ಯಕತೆಯಿದೆ. ಇದೇ ಪ್ರಕಾರ ಮೃತಾತ್ಮಗಳಿಗೆ ಸದ್ಗತಿ ಸಿಗಬೇಕಾದರೆ ಸತ್ತವರ ಆತ್ಮಗಳ ರೂಪದಲ್ಲಿ ವಿಧಿಗಳನ್ನು ಸ್ವೀಕರಿಸಲು ಕುಟುಂಬದ ಹೊರಬೆಡಗಿನ ಪುರುಷ ಹಾಗೂ ಮಹಿಳೆಯರ ಅಗತ್ಯವಿದೆ. ಹೆಣ್ಣೊಬ್ಬಳನ್ನು ಮದುವೆ ಮಾಡಿಕೊಟ್ಟ ತಕ್ಷಣ ಆಕೆ ಕುಟುಂಬದಿಂದ ಬೇರ್ಪಟ್ಟ ಪ್ರತ್ಯೇಕ ಬಳಿಯವಳಾಗುತ್ತಾಳೆ. ಹೊರಗಿನ ವಾಡೆಯವರನ್ನು ಅಥವಾ ದೂರದ ಊರಿನವರನ್ನು ಕರೆದು ನೇಮಿಸುವುದು ತ್ರಾಸದಾಯಕ ಮಾತ್ರವಲ್ಲ ಎಲ್ಲರೂ ಇದಕ್ಕೆ ತಯಾರಾಗುವ ಮನೋಸ್ಥಿತಿಯವರಾಗಿರುವುದಿಲ್ಲ. ಆದುದರಿಂದ ಸಂಬಂಧದೊಳಗಿನ ಜನರನ್ನೇ ಕರೆಯುತ್ತಾರೆ. ದೂರದ ಹೆಣ್ಣನ್ನು ಕುಡುಬಿಯರು ಒಪ್ಪುವುದು ಕಡಿಮೆ. ವಾಹನ ಸೌಕರ್ಯವಿಲ್ಲದ ಕಾಲದಲ್ಲಂತೂ ಸಮೀಪದ ಊರಿನ ಹೆಣ್ಣನ್ನೇ ಹುಡುಕುತ್ತಿದ್ದರು. ಕೂಗಳತೆಯಲ್ಲಿ ಬೀಗರಿದ್ದರೆ ವಾಸಿ ಎಂದು ಅವರ ವ್ಯವಹಾರ ಜ್ಞಾನ ಲೆಕ್ಕಹಾಕುತ್ತಿತ್ತು. ಆಪತ್ತು ವಿಪತ್ತು ಬಂದಾಗ ಒಮ್ಮೆಲೇ ಬಂಧುಬಳಗದವರು ಕೂಡಬೇಕೆಂಬುದು ಅವರ ಇಚ್ಛೆ. ಹೀಗಾಗಿ ಕುಡುಬಿಯರು ವಾಡೆಯೊಳಗಿನ ಅಥವಾ ಊರೊಳಗಿನ ನೆಂಟಸ್ತಿಕೆಗೇ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾರೆ.

ಏಕಪತ್ನಿ, ಏಕಪತಿ ಪದ್ಧತಿ ಪಾಲಿಸುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಪುರುಷರಿಗೆ ಮರುವಿವಾಹ ಅಥವಾ ವಿಧುರವಿವಾಹ ಆಗುವ ಅವಕಾಶಗಳಿವೆ. ಆದರೆ ಈ ಅವಕಾಶ ಮಹಿಳೆಯರಿಗಿಲ್ಲ. ಹೆಂಡತಿ ಜೀವಂತವಿರುವಾಗ ವಿವಿಧ ಕಾರಣಗಳಿಂದ ಪುರುಷನಿಗೆ ಪುನಃ ವಿವಾಹ ಆಗುವುದಕ್ಕೆ 'ಮರುವಿವಾಹ (ದುಸ್ರ್ಯಾ ಪಣಾಚಿ ವ್ಹಾಡಿಂಗ್)' ಎಂದು ಹೆಸರು. ಧರ್ಮಪತ್ನಿಯ ಮರಣಾನಂತರ ಪತಿ ಪುನಃ ಮದುವೆ ಆಗುತ್ತಾನಾದರೆ ಅದಕ್ಕೆ 'ಕೂಡಿಕೆ ವಿವಾಹ (ಧಾಕ್ಟ್ಯಾ ಪಣಾಚಿ ವ್ಹಾಡಿಂಗ್)' ಅನ್ನಬಹುದು. ಹೆಂಡತಿ ಗಂಡನನ್ನು ಅಥವಾ ಗಂಡ ಹೆಂಡತಿಯನ್ನು ಬಿಟ್ಟಲ್ಲಿ, ಹೆಂಡತಿಗೆ ಮಕ್ಕಳಾಗದಿದ್ದಲ್ಲಿ, ಹೆಂಡತಿ ಮನೆ ಸುಧಾರಿಸಲು ಅಸಮರ್ಥಳಾದಲ್ಲಿ, ಕುಲಟೆ ಅಥವಾ ಮಾನಸಿಕ ಅಸ್ವಸ್ಥಳಾಗಿದ್ದಲ್ಲಿ, ಪತಿಪತ್ನಿಯರ ನಡುವೆ ಹೊಂದಾಣಿಕೆಯಾಗದಿದ್ದಲ್ಲಿ, ಪುರುಷ ಮರುಮದುವೆಯಾಗುವ ಸಂದರ್ಭಗಳಿವೆ. ಪತ್ನಿ ತೀರಿಕೊಂಡಾಗ ಮಕ್ಕಳು ಎಳೆಯ ಪ್ರಾಯದವರಾಗಿದ್ದರೆ, ಮೃತ ಪತ್ನಿಯ ಮಕ್ಕಳು ಮುಂದಕ್ಕೆ ತಂದೆಯ ಕೊನೆಯ ದಿವಸಗಳಲ್ಲಿ ಆತನನ್ನು ನೋಡಿಕೊಳ್ಳುವ ಭರವಸೆ ಇಲ್ಲದಿದ್ದಲ್ಲಿ, ತಂದೆ ಪ್ರಾಯಸ್ಥನಾಗಿದ್ದು ಮೃತ ಪತ್ನಿಯ ಮಕ್ಕಳು ಬೇರೆ ಮನೆ ಮಾಡಿ ಜೀವಿಸುತ್ತಿದ್ದರೆ ಪುರುಷನೊಬ್ಬ ಪುನಃ ಮದುವೆ ಆಗುವುದಾದಲ್ಲಿ ಅದು 'ಕೂಡಿಕೆ ವಿವಾಹ'. ಮೊದಲ ಪತ್ನಿ ಬಂಜೆಯಾಗಿದ್ದು, ತಂದೆಯ ಆಸ್ತಿಗೆ ವಾರಿಸುದಾರರು ಬೇಕೆಂದು

ಆಗುವ ಮದುವೆ ಮರುವಿವಾಹ. ಈ ಎರಡೂ ಸಂದರ್ಭಗಳಲ್ಲಿ ತಂದೆಯ ಆಸ್ತಿ ಬದುಕು ಪರರ ಪಾಲಾಗಬಾರದೆಂಬ ಉದ್ದೇಶದಿಂದ ಮೊದಲ ಪತ್ನಿಯ ತಂಗಿಯನ್ನೇ ಮದುವೆಯಾಗುವ ಸಂದರ್ಭಗಳೂ ಇವೆ. ಮರುಮದುವೆಯಾದಾಗ ಮೊದಲ ಪತ್ನಿಯೂ ಪತಿಯೊಂದಿಗೇ ಜೀವಿಸುತ್ತಾಳೆ. ಈ ರೀತಿ ವಿವಾಹವಾಗುವಾಗ ಮೊದಲ ಪತ್ನಿಯ ಮಕ್ಕಳಿದ್ದಲ್ಲಿ ಅವರಿಗೆ ತಂದೆಯ ಆಸ್ತಿಯಲ್ಲಿ ಸಮಾನ ಹಕ್ಕು ಬಾಧ್ಯತೆಗಳಿರುತ್ತವೆ.

ಮಕ್ಕಳನ್ನು ಪಡೆಯದಿರುವುದಕ್ಕೆ ಗಂಡನ 'ಷಂಡತನ' ಕಾರಣವಾಗಿ, ಆತನಿಗೆ ಮರುಮದುವೆ ಆದರೂ ಕೂಡಾ ಇಲ್ಲಿ ಪತ್ನಿಯರೇ ಅಸಹಾಯಕರಾಗುವುದು ವಿಪರ್ಯಾಸ. ಆದುದರಿಂದ ವಿವಾಹಿತ ಹೆಣ್ಣುಮಕ್ಕಳು ಗಂಡನನ್ನು ತ್ಯಜಿಸುವ ಅಥವಾ ವಿಚ್ಛೇದನ ನೀಡುವ ಸಂದರ್ಭಗಳು ಕುಡುಬಿಯರಲ್ಲಿ ವಿರಳ. ಎಷ್ಟೇ ಕಷ್ಟವಾದರೂ, ಯಾವುದೇ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ ಗಂಡನೊಂದಿಗೇ ಸಂಸಾರ ಸಾಗಿಸುವ ಆತ್ಮಸ್ಥೈರ್ಯವುಳ್ಳವರು ಕುಡುಬಿ ಮಹಿಳೆಯರು. ಖಡ್ಡಾಯವಾಗಿ ಅವರು ಏಕಪತಿತ್ವ ಪದ್ಧತಿ ಪಾಲಿಸುತ್ತಾರೆ. ಪುರುಷರಿಗೆ ಬಹುಪತ್ನಿತ್ವಕ್ಕೆ ಪರವಾನಿಗೆ ಇಲ್ಲದಿದ್ದರೂ ವಿವಿಧ ಕಾರಣಗಳಿಂದಾಗಿ ಅಪರೂಪಕ್ಕೆ ಒಂದೊಂದು ಕಡೆ ಇಬ್ಬರು–ಮೂವರು ಹೆಂಡಿರಿರುವ ದಾಖಲೆಗಳು ಸಿಗುತ್ತವೆ. ವಿವಾಹ ವಿಚ್ಛೇದನಗಳು, ಗಂಡ–ಹೆಂಡತಿಯನ್ನು, ಹೆಂಡತಿ–ಗಂಡನನ್ನು ಬಿಟ್ಟು ಬಿಡುವ ಪ್ರಸಂಗಗಳು ಅಪರೂಪವಾದರೂ ಖಡಾಖಂಡಿತವಾಗಿ ಇಲ್ಲವೆನ್ನುವಂತಿಲ್ಲ.

ಮದುವೆ ಆಗುವಲ್ಲಿವರೆಗೆ ಕುಟುಂಬ ಅಥವಾ ವಾಡೆಗೆ ಸೇರಿಲ್ಲದವರಾದರೆ, ಮದುವೆ ಆಗಬೇಕಾದಲ್ಲಿ ಅವರು ಕುಟುಂಬಕ್ಕೆ ಅಥವಾ ಯಾವುದಾದರೊಂದು ವಾಡೆಗೆ ಸೇರಬೇಕು. ಸೇರದಿದ್ದಲ್ಲಿ ಕುಟುಂಬದ ಹಿರಿಯ ಮತ್ತು ವಾಡೆಯ ಗುರಿಕಾರ, ಪಂಚಪ್ರಧಾನರು ಅಂತಹ ಮದುವೆಗಳಲ್ಲಿ ಭಾಗವಹಿಸುವುದಿಲ್ಲ. ಹೀಗಾದಲ್ಲಿ ದೇವರ ಅನುಗ್ರಹವೂ ಇರುವುದಿಲ್ಲ ಎಂಬ ನಂಬಿಕೆ ಕುಡುಬಿಯರಲ್ಲಿದೆ. ಮಾತ್ರವಲ್ಲ, ಅಂಥವರ ಮದುವೆ ಸಮಾರಂಭಗಳಲ್ಲಿ ಸಮಾಜಬಾಂಧವರೂ ಭಾಗವಹಿಸಲು ಹಿಂಜರಿಯುತ್ತಾರೆ. ಆದುದರಿಂದ ಕುಟುಂಬಕ್ಕೆ ಸೇರದ, ಕುಟುಂಬದ ದೇವರಿಗೆ ನಡಕೊಳ್ಳದ, ವಾಡೆಗೆ ಸೇರಿರದವರ ನೆಂಟಸ್ತಿಕೆ ಮಾಡಲು ಕುಡುಬಿಯರು ತಯಾರಾಗುವುದಿಲ್ಲ. ಕುಟುಂಬಕ್ಕೆ, ವಾಡೆಗೆ ಸೇರಿಲ್ಲವೆಂಬುದು ನಿಶ್ಚಿತಾರ್ಥವಾದ ಕೊನೇ ಘಳಿಗೆಯಲ್ಲಿ ತಿಳಿದು ಮದುವೆ ತಪ್ಪಿಹೋದ ಅಥವಾ ನಿಂತುಹೋದ ಎಷ್ಟೋ ನಿದರ್ಶನಗಳಿವೆ. ವ್ಯಭಿಚಾರಿಗಳ, ವ್ಯಭಿಚಾರದಿಂದಾಗಿ ಜನಿಸಿದವರ, ಅನ್ಯಜಾತೀಯ, ಕುಟುಂಬದಲ್ಲಿ ಅಥವಾ ವಾಡೆಯಲ್ಲಿ ವೈಮನಸ್ಯವಿರುವವರ, ಪಾರಂಪರ್ಯದ ಗುಣಪಡಿಸಲಾಗದ ವ್ಯಾಧಿ, ರೋಗರುಜಿನ ಉಳ್ಳವರ, ಮದ್ಯವ್ಯಸನಿಗಳ, ಕಾಲುಕೆದರಿ ಜಗಳಕ್ಕೆ ನಿಲ್ಲುವವರ ನೆಂಟಸ್ತಿಕೆ ಮಾಡಲು ಹಿಂಜರಿಯುತ್ತಾರೆ. ಕೆಳವರ್ಗದವರಿಂದ ಪೆಟ್ಟು ತಿಂದ, ಚಪ್ಪಲಿ ಏಟಿನ ಥಳಿತಕ್ಕೊಳಗಾದ, ಕಳ್ಳತನಗೈದ ಹುಡುಗರಿಗೆ, ಸಮಾಜದಲ್ಲಿ ಚಾರಿತ್ರ್ಯಹೀನರಿಗೆ ಹೆಣ್ಣುಕೊಡಲು ಯಾರೂ

ತಯಾರಾಗುವುದಿಲ್ಲ. ಕುಲಶುದ್ಧವಾದ ಕನ್ಯೆ ದೊರೆತರೆ ವರನ ಕಡೆಯವರಿಗೂ ಇಲ್ಲದ ಹರ್ಷ. ಮದುವೆಯಾದ ಮೇಲೆ ಪತಿ ಅಥವಾ ಪತ್ನಿಗೆ ಮರಣಯೋಗದ ಗಂಡಾಂತರ ಇದ್ದಲ್ಲಿ ಅವರಿಗೆ ಬಾಳೆಗಿಡ ಅಥವಾ ಮಾವಿನಗಿಡದೊಂದಿಗೆ ಮೊದಲು ಸಾಂಕೇತಿಕವಾಗಿ ಮದುವೆ ಶಾಸ್ತ್ರ ಮಾಡಿ, ತದನಂತರ ವಿಧಿಪ್ರಕಾರ ಮದುವೆ ಮಾಡುವ ಪರಿಪಾಠವಿತ್ತು ಎಂಬುದಾಗಿ ತಿಳಿದುಬರುತ್ತದೆ.

ಕುಡುಬಿಯರು ಕೃಷಿ ಮತ್ತು ವ್ಯವಸಾಯಗಳಲ್ಲಿ ನಿರತರಾಗುವ ಕಷ್ಟಜೀವಿಗಳಾಗಿರುವುದರಿಂದ ಸಾಧಾರಣ ಸಂವತ್ಸರ ಯುಗಾದಿ (ಚಾಂದ್ರಮಾನ ಯುಗಾದಿ)ಯ ನಂತರ ಅವರಿಗೆ ಕೃಷಿಕಾರ್ಯ ವಿರಾಮ ಕಾಲ. ಬೆಳೆಯ ಫಸಲಿನ ದಾಸ್ತಾನಿದ್ದು ಈ ವೇಳೆ ಆದಾಯವೂ ಬರುತ್ತದೆ. ಚಾಂದ್ರಮಾನ ಪದ್ಧತಿ ಅನುಸರಿಸುವುದರಿಂದ ಹೊಸ ವರುಷವೂ ಪ್ರಾರಂಭವಾಗುತ್ತದೆ. ಜನರಲ್ಲಿ ಉಲ್ಲಾಸ ಪ್ರಚೋದನೆಯ ಈ ಕಾಲ ಪ್ರಕೃತಿಯಲ್ಲೂ ಫಲವಂತಿಕೆಯ ಪ್ರೇರಕ ಲಕ್ಷಣಗಳನ್ನು ಉಂಟುಮಾಡುತ್ತದೆ. ಕುಡುಬಿಯರ ವನಭೋಜನ, ಹೋಳಿ ಮುಂತಾದ ಜನಸಂಪರ್ಕ ಆಗುವ ಸಮಾರಂಭ, ಉತ್ಸವಗಳು ಮುಗಿಯುವುದರಿಂದ ಕುಡುಬಿಯರ ಮದುವೆಗಳು ಯುಗಾದಿಯ ನಂತರವೇ ಜರಗುವ ಪರಿಪಾಠ ಅನಾದಿ ಕಾಲದ ಬಳುವಳಿ. ಈ ಸಂಪ್ರದಾಯಕ್ಕೆ ಇನ್ನೊಂದು ಬಲವಾದ ಕಾರಣವೂ ಇದೆ. ಕುಡುಬಿಯರ ಮುಖ್ಯ ಕಸುಬು ಕೃಷಿ, ವ್ಯವಸಾಯ ಹೌದಾದರೂ ಅವರಿಗೆ ಸ್ವಂತ ಜಾಗವಿರಲಿಲ್ಲ. ಗೋವಾದಿಂದ ಈ ನೆಲಕ್ಕೆ ಸ್ಥಳಾಂತರಗೊಂಡಾಗ ಇಲ್ಲಿನ ಹಿಡುವಳಿದಾರರು ಅವರಿಗೆ ಗೇಣಿ ಸಾಗುವಳಿಗೆ ಜಾಗ ನೀಡಿದ್ದರು. 'ಶ್ರೀಮಂತರು ತಿಲಕವಿಡುವುದು ಬಡವರ ದುಡಿಮೆಯಿಂದ' ಎಂಬ ನಾಣ್ಣುಡಿಯಂತೆ ಇಲ್ಲಿಯ ಜಮೀನುದಾರರು ಅವರನ್ನು ಯಥೇಚ್ಛವಾಗಿ ದುಡಿಸುತ್ತಿದ್ದರು. ಕುಡುಬಿಯರು ಸತ್ಯ ಧರ್ಮ ನ್ಯಾಯ ನೀತಿಯಿಂದ, ಭಯಭಕ್ತಿಯಿಂದ, ಪ್ರಾಮಾಣಿಕ ವ್ಯಕ್ತಿತ್ವದಿಂದ, ಸೀದಾ ಸಾದಾ ಜೀವನ ನಡೆಸಿ, ದಿನರಾತ್ರಿ ದೈಹಿಕ ಶ್ರಮವಹಿಸಿ ವ್ಯವಸಾಯ ನಿರತರಾಗಿ ನಿಗದಿಗೊಳಿಸಿದ ಗೇಣಿಯನ್ನು ಕ್ಲಪ್ತ ಸಮಯಕ್ಕೆ ಪಾವತಿಸುತ್ತಿದ್ದರು. ಇದೇ ಕಾರಣದಿಂದ ಅವರಿಗೆ ಸುಲಭವಾಗಿ ಗೇಣಿಗೆ ಜಾಗ ಸಿಗುತ್ತಿತ್ತು. ಗೇಣಿ ಪಾವತಿಸಲು ಫಾಲ್ಗುಣ ಅಮಾವಾಸ್ಯೆ ವಾಯಿದೆ. ಧಣಿಗೆ ಗೇಣಿ ಸಂದಾಯ ಮಾಡಿ ಪುನಃ ಸಾಗುವಳಿ ಮಾಡಲು ಪರವಾನಗಿ ಪಡೆಯಬೇಕಾಗಿತ್ತು. ಗೇಣಿ ಸಲ್ಲಿಸಿ ಉಳಿಕೆ ಆದಾಯದಲ್ಲಿ ಮುಂದಿನ ಜೀವನಕ್ಕೆ ಸಾಕಾಗುವಷ್ಟು ಖರ್ಚು ಹೊಂದಾಣಿಕೆ ಮಾಡಿ, ಉಳಿದಿರುವುದರಲ್ಲಿ ಮದುವೆ ಖರ್ಚು ಸರಿದೂಗಿಸಲು ಸಾಧ್ಯ ಅಂತ ಕಂಡಲ್ಲಿ ಮಾತ್ರ ಮದುವೆ ಕಾರ್ಯಕ್ಕೆ ಉಪಕ್ರಮಿಸುತ್ತಿದ್ದರು. ಮದುವೆ ಮಾಡುವುದಕ್ಕಿಂತಲೂ ಧಣಿಯ ನಿಶ್ಚಿತ ಗೇಣಿ ಪಾವತಿಸಿ ಉಳಿದುದರಲ್ಲಿ ಮುಂದಿನ ಜೀವನ ಸಾಗಿಸುವುದನ್ನು ಮನೆಯ ಯಜಮಾನ ಲೆಕ್ಕಹಾಕಬೇಕಾಗಿತ್ತು. ಗೇಣಿ ಪೂರ್ತಿ ಪಾವತಿಯಾಗದಿದ್ದಲ್ಲಿ ಆ ನಂತರ ಧಣಿಯು ಸಾಗುವಳಿಗೆ ಜಾಗ ನೀಡುವ ಭರವಸೆ ಇರಲಿಲ್ಲ. ಒಕ್ಕಲೆಬ್ಬಿಸುವ ಸಂದರ್ಭಗಳೂ ಇದ್ದವು.

ಈ ಕಾರಣದಿಂದ ಕುಡುಬಿಯರ ಮದುವೆಗಳು ಯುಗಾದಿಯ ನಂತರವೇ ಆಗುವ ಕ್ರಮ ವಾಡಿಕೆಯಲ್ಲಿ ಬಂತು ಎನ್ನಬಹುದು.

ಈಗ ಆಟಿ (ಆಷಾಢ ಮಾಸ) ಮತ್ತು ಹೋಳಿ ಆಚರಣೆಯ ಫಾಲ್ಗುಣ ಮಾಸ- ಅಂದರೆ ಶಿವರಾತ್ರಿಯಿಂದ ಚಾಂದ್ರಮಾನ ಯುಗಾದಿ ವರೆಗಿನ- ಈ ಎರಡು ತಿಂಗಳು ಬಿಟ್ಟು ಉಳಿದಂತೆ ವರ್ಷವಿಡೀ ಮದುವೆಗಳು ಜರಗುತ್ತವೆ. ಕುಡುಬಿ ಸಂಸ್ಕೃತಿಯಲ್ಲಿ ಆಟಿ ತಿಂಗಳ ಆಚರಣೆ ಇಲ್ಲ. ಆದರೆ ತುಳುನಾಡಿನ ಸಂಪ್ರದಾಯ ಪ್ರಕಾರ ಆಟಿ ತಿಂಗಳು ಅಶುಭ, ಮೃತಾತ್ಮಗಳ ತಿಂಗಳು ಎಂಬ ನಂಬಿಕೆ ಬಲವಾಗಿದೆ. ಇಲ್ಲಿ ಆಟಿ ತಿಂಗಳಲ್ಲಿ ಯಾವುದೇ ಮಂಗಲಾಚರಣೆಗಳು ಜರಗುವುದಿಲ್ಲ. ಫಾಲ್ಗುಣ ಮಾಸ ಕುಡುಬಿ ಸಂಸ್ಕೃತಿಯಲ್ಲಿ ಬಹಳ ಪವಿತ್ರ ಎಂಬ ನಂಬಿಕೆಯಿದೆ. ಈ ಅವಧಿ ಹೋಳಿಯ ವಿವಿಧ ಆಚರಣೆಗಳಿಗೇ ಮೀಸಲು. ಇತರ ಯಾವುದೇ ಶುಭಾಶುಭ ಕಾರ್ಯಗಳನ್ನು ಕುಡುಬಿಯರು ಈ ತಿಂಗಳಲ್ಲಿ ಜರಗಿಸುವುದಿಲ್ಲ. ಕುಡುಬಿಯರು ಆಚರಿಸುವ ಹಬ್ಬಗಳಲ್ಲೇ ಹೋಳಿಹಬ್ಬಕ್ಕೆ ವಿಶೇಷ ಸ್ಥಾನವಿದೆ. ಈ ಸಂದರ್ಭ ತಮ್ಮ ವಿಶೇಷ ವೇಷಭೂಷಣಗಳಿಂದ ಅಲಂಕೃತರಾಗಿ ಗಾಯನ, ವಾದನ, ನರ್ತನಗಳ ಗುಮಟೆ ಕೋಲಾಟಗಳನ್ನಾಡಿ, ವಿಧಿಪೂರ್ವಕ ಹೋಳಿಯನ್ನು ಆಚರಿಸಲು, ವಸಂತ ಋತುವನ್ನು ಸ್ವಾಗತಿಸುವ ಸಂಭ್ರಮದಲ್ಲಿ ಇರುತ್ತಾರೆ. ಇವರನ್ನು 'ಕುಡುಬಿಯರು' ಎಂದು ಪ್ರತ್ಯೇಕವಾಗಿ ಗುರುತಿಸಲು ಹೋಳಿ ಆಚರಣೆ ಒಂದು ಕಾರಣವೂ ಆಗಿರುತ್ತದೆ. ಈ ಅವಧಿಯಲ್ಲಿ ಮರಣ ಅಥವಾ ಅಪಘಾತಗಳು ಸಂಭವಿಸಿದರೂ ಆ ಕಡೆ ಹೆಚ್ಚಿನ ಗಮನ ನೀಡುವುದಿಲ್ಲ. ಜನನ ಮರಣಗಳ ಹೊಲೆ ಸೂತಕಗಳು ಬಂದರೂ ಹೋಳಿ ಆಚರಣೆ ನಿಡ್ತಾಯ. ಹಾಗಾಗಿ, ಈ ಎರಡು ತಿಂಗಳು ಬಿಟ್ಟು, ಉಳಿದ ಸಮಯದಲ್ಲಿ ಮದುವೆಗಳು ಜರಗುತ್ತವೆ.

5.2 ವಧುಪ್ರೇಷಣ :

ಹುಡುಗನೊಬ್ಬನಿಗೆ ಮದುವೆ ಮಾಡಲು ಯೋಜನೆ ಹಾಕಿದ ಕುಡುಬಿ, ಅವನಿಗೆ ಸರಿಜೋಡಿಯಾಗುವ ಹುಡುಗಿ ಎಲ್ಲಿ ಸಿಗಬಹುದೆಂಬುದನ್ನು ಮುಂಚಿತವಾಗಿಯೇ ಅಂದಾಜು ಮಾಡಿರುತ್ತಾನೆ. ಹುಡುಗನ ತಂದೆ, ಸೋದರ ಮಾವ, ಭಾವ, ಚಿಕ್ಕಪ್ಪ, ಅಜ್ಜ.... ಹೀಗೆ ಹಿರಿಯರು ಕೂಡಿ ನೆಂಟಸ್ತಿಕೆಗಾಗಿ ಹೊರಡುತ್ತಾರೆ. ಕುಡುಬಿಯರಲ್ಲಿ ಸೋದರ ಮಾವನ ಮಗಳನ್ನೇ ಮದುವೆಯಾಗುವುದು ಸಾಮಾಜಿಕ ಹಕ್ಕು. ಸೋದರ ಮಾವನ ಮಗಳನ್ನೇ ಮದುವೆ ಆಗುವುದಿದ್ದರೂ ಸಂಪ್ರದಾಯವನ್ನು ಬಿಡುವಂತಿಲ್ಲ. ಸೋದರ ಮಾವ, ಸೋದರ ಮಾವನ ಮಗಳ ಬಗ್ಗೆ ಎಲ್ಲ ವಿಚಾರ ಮೊದಲೇ ತಿಳಿದಿದ್ದರೂ ಸಂಪ್ರದಾಯವನ್ನು ಪಾಲಿಸಲೇಬೇಕು. ನೆಂಟಸ್ತಿಕೆಗೆ ಹೋಗುವಾಗ ಹೆಚ್ಚಾಗಿ ಐದುಜನ ಹೋಗುವುದು ವಾಡಿಕೆ. ಇದು ಶುಭ ಶಕುನ ಎಂಬ ನಂಬಿಕೆಯಿದೆ. ಯುಗಾದಿ ಕಳೆದ ಮೇಲೆ ಕುಡುಬಿಯರು ಐದರ ಸಂಖ್ಯೆಯಲ್ಲಿ ಹೊರಟರೆಂದರೆ ನೆಂಟಸ್ತಿಕೆಗೆಂದೇ ಅರ್ಥ. ಮೂವರು ನೆಂಟಸ್ತಿಕೆಗೆ ಹೋಗುವ ಕ್ರಮವಿಲ್ಲ. ಅದು ಶುಭಶಕುನಲವಲ್ಲ.

ನೆಂಟಸ್ತಿಕೆಗೆ ಹೊರಡುವಾಗ ಅಶುಭ ಶಕುನಗಳಾದರೆ ಮುಂದುವರಿಯುವುದಿಲ್ಲ. ಪ್ರಯಾಣವನ್ನು ಮೊಟಕುಗೊಳಿಸುತ್ತಾರೆ. ನೆಂಟಸ್ತಿಕೆಗೆ ಹೊರಟಾಗ ನಾಗರಹಾವು, ಒಬ್ಬಂಟಿ ಬ್ರಾಹ್ಮಣ, ವಿಧವೆ, ಹೊಸ ಮಡಕೆ, ಕಟ್ಟಿಗೆ ಹೊರೆ, ಹೆಣ, ಬೆಕ್ಕು.... ಇತ್ಯಾದಿ ಎದುರಾದರೆ ಅಪಶಕುನ ಎಂಬ ನಂಬಿಕೆಯಿದೆ. ಆಕಳು, ತುಂಬಿದ ಕೊಡ, ಸುಮಂಗಲಿ, ಕೇರೆಹಾವು, ಮುಂಗುಸಿ, ಮದುಮಗಳು, ಗರ್ಭಿಣಿ ಮಹಿಳೆ ಎದುರಾದರೆ ಶುಭ ಸಂಕೇತ. ಮೂವರು ಹುಡುಗರ ನಂತರ ಜನಿಸಿದ, ಮೂಲಾ ನಕ್ಷತ್ರದಲ್ಲಿ ಜನಿಸಿದ ಹುಡುಗಿಯ ನೆಂಟಸ್ತಿಕೆಗೆ ಹೋಗಲು ಹಿಂಜರಿಯುತ್ತಾರೆ. ಮೂವರು ಗಂಡು ಮಕ್ಕಳ ನಂತರ ಜನಿಸಿದ ಒಂದು ಹೆಣ್ಣು ಅಶುಭ ಎಂಬ ನಂಬಿಕೆಯಿದೆ. ಹಿರಿಹಿರಿಯರೂ ಮದುವೆಯಾಗುವ ಕ್ರಮವಿಲ್ಲ. ಯಾಕಂದರೆ ಅವರಿಗೆ ಕಿರಿಯರನ್ನು ಬೆಳೆಸುವ, ಅವರ ಒಳಿತು ಕೆಡುಕುಗಳನ್ನು ನಿಭಾಯಿಸುವ ಜವಾಬ್ದಾರಿಯಿರುತ್ತದೆ. ನೆಂಟಸ್ತಿಕೆ ಏನಿದ್ದರೂ ಪುರುಷರ ಜವಾಬ್ದಾರಿ. ಸ್ತ್ರೀಯರು ನೆಂಟಸ್ತಿಕೆಗೆ ಹೋಗುವ ಕ್ರಮವಿಲ್ಲ. ಗಂಡಿನ ಕಡೆಯವರು ವಧುಪ್ರೇಕ್ಷಣಕ್ಕೆ ಹೊರಡುವುದೇ ಮದುವೆಯ ಪ್ರಥಮ ಹಂತ.

ಎರಡೂ ಕಡೆಯವರು ಒಬ್ಬರಿಗೊಬ್ಬರ ಮನೆ ನೋಡುವ ನೆವದಿಂದ ಹುಡುಗ ಮತ್ತು ಹುಡುಗಿಯನ್ನು ನೋಡುತ್ತಾರೆ. ಹುಡುಗಿ ಒಪ್ಪಿಗೆಯಾದಲ್ಲಿ ಆ ನಂತರದ ಒಂದು ನಿಶ್ಚಿತ ದಿನ ಪ್ರಥಮವಾಗಿ ಹುಡುಗನ ಕಡೆಯವರು ಹುಡುಗಿಯ ಮನೆಗೆ ಹೋಗುತ್ತಾರೆ. ನೆಂಟರು ಬರುವ ಅಂದಾಜು ಇರುವ ಹೆಣ್ಣಿನ ಕಡೆಯವರು ಆ ದಿನ ತಮ್ಮ ಹತ್ತಿರದ ಬಂಧುಗಳನ್ನು, ಹಿರಿಯರನ್ನು ಕರೆದಿರುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಮನೆಗೆ ಆಗಮಿಸಿದ ಅತಿಥಿಗಳನ್ನು ಆದರದಿಂದ ಸ್ವಾಗತಿಸುವುದು ವಿಶೇಷ ಲಕ್ಷಣ. ಇಲ್ಲಿಯೂ ಹೆಣ್ಣು ನೋಡಲು ಬಂದಿರುವ ನೆಂಟರನ್ನು, ಹೆಣ್ಣಿನ ಕಡೆಯ ಯಜಮಾನನನ್ನು ಮುಂದಿಟ್ಟುಕೊಂಡು ಅಲ್ಲಿ ಸೇರಿದವರೆಲ್ಲರೂ ಕೈಮುಗಿದು, ಕಾಲು ತೊಳೆಯಲು ನೀರು ಕೊಡುತ್ತಾರೆ. ನಂತರ ಅವರನ್ನು ಮನೆಯೊಳಗೆ ಕರೆದು ಚಾಪೆಹಾಸಿ ಕುಳಿತುಕೊಳ್ಳುವ ವ್ಯವಸ್ಥೆ ಮಾಡುತ್ತಾರೆ. ಹಿಂದಿನ ಕಾಲದಲ್ಲಿ ಚಾಪೆ ಹಾಸಿ ಕೂರಿಸುವ ಪದ್ಧತಿಯೇ ಚಾಲ್ತಿಯಲ್ಲಿತ್ತು. ಚಾಪೆ ಹಾಸಿ ಕೂರಿಸುವುದು ಗೌರವದ ಸಂಕೇತ ಕೂಡಾ ಆಗಿತ್ತು. ಈಗಿನಂತೆ ಸುಧಾರಿತ ಆಸನಗಳ ಅಲಭ್ಯತೆ ಇದಕ್ಕೆ ಕಾರಣವಿರಬಹುದು. ನೆಂಟರಿಗೆ ಬೆಲ್ಲ ನೀರು, ತಾಂಬೂಲಗಳ ಮರ್ಯಾದೆ ಸಂದ ಮೇಲೆ, ಹೆಣ್ಣಿನ ಕಡೆಯವರೂ ಚಾಪೆ ಹಾಸಿ ಕುಳಿತು ನೆಂಟಸ್ತಿಕೆ ಪ್ರಸ್ತಾವದ ಮಾತುಕತೆಗೆ ಪ್ರಾರಂಭಿಸುತ್ತಾರೆ. ಚಾಪೆ ಹಾಸಿ ಕುಳಿತ ಮೇಲೆ ಮಾತುಕತೆ ಒಂದು ಹಂತಕ್ಕೆ ತಲುಪದೆ ಚಾಪೆ ಬಿಟ್ಟು ಏಳುವಂತಿಲ್ಲ. ಹಾಗೆ ಮಧ್ಯೆ ಎದ್ದು ಹೋದರೆ ಸಂಭಾವಿತತನ ಅಲ್ಲ, ಅವಲಕ್ಷಣ ಎಂಬ ನಂಬಿಕೆಯಿದೆ. ಚಾಪೆಯಲ್ಲಿ ಕುಳಿತು ಮಾತುಕತೆ ನಡೆಸುವವರಿಗೆ ತಾಂಬೂಲದ ಗೌರವ ಗರಿಷ್ಠ. ಹಿಂದಿನ ಕಾಲದಲ್ಲಿ ಕವಳ ಜಗಿದವರಿಗೆ ರಸ ಉಗುಳಲು ಪೀಕದಾನಿ ಇಡುತ್ತಿದ್ದರು. ಪೀಕದಾನಿ ಇಲ್ಲದ ಕಡೆಗಳಲ್ಲಿ ಹಾಳೆಯಲ್ಲಿ ಅಥವಾ ಕೈದಂಬೆ (ನೀರು ಹಾಯಿಸುವ ಸೇಪಲೆ)ಯಲ್ಲಿ ಭತ್ತದ ಹೊಟ್ಟು ಹಾಕಿ ಇಡುತ್ತಿದ್ದರು.

ನೆಂಟಸ್ತಿಕೆಯ ಮಾತುಕತೆ ಪ್ರಸ್ತಾಪವಾಗುವಾಗ ಎಲ್ಲರೂ ಮಾತು ಪ್ರಾರಂಭಿಸುವ ಕ್ರಮವಿಲ್ಲ. ಇದ್ದವರಲ್ಲಿ ಜವಾಬ್ದಾರಿಯ ಹಿರಿಯ ವ್ಯಕ್ತಿ ಪ್ರಸ್ತಾಪ ತೆಗೆಯುವುದು ಗೌರವ. ಪ್ರಥಮದಲ್ಲಿ ಹೆಣ್ಣಿನ ಕಡೆಯವರು "ಏನು ಆಗಮನವಾಯ್ತು ನೆಂಟರೆ?" ಎಂದು ಪ್ರಶ್ನಿಸುತ್ತಾರೆ. ನೆಂಟರು ಬಂದಿರುವುದು ನೆಂಟಸ್ತಿಕೆಗೇ ಎಂಬ ಅರಿವಿದ್ದರೂ, ಹೀಗೆ ಪ್ರಶ್ನೆ ಹಾಕುವುದು ಸಾಂಪ್ರದಾಯಿಕ ಕ್ರಮ. ಅವರು ಸಭೆಯಲ್ಲಿ ಎಲ್ಲರಿಗೆ ತಿಳಿಯುವ ಹಾಗೆ ಪ್ರಕಟಪಡಿಸಬೇಕು. ಆಗ ಗಂಡಿನ ಕಡೆಯವರು "ನಾವು ಹೆಣ್ಣು ಕೇಳಲು ಬಂದವರು" ಎಂದು ನೇರವಾಗಿ ಹೇಳುವುದು ಭೂಷಣವಲ್ಲ. 'ನಿಮ್ಮಲ್ಲಿ ಒಂದು ಕಡಸು ಇದೆ, ಎಂದು ನಾವು ಸುದ್ದಿ ಕೇಳಿದ್ದೇವೆ. ನಮಗೆ ಕೊಡುವಿರಾ? ಎಂದು ಕೇಳಲು ಬಂದಿದ್ದೇವೆ' ಅಥವಾ 'ನಿಮ್ಮಲ್ಲಿ ಒಂದು ಕಡಸು ಇದೆ ಅಂತ ನಾವು ಕೇಳಿದ್ದೇವೆ. ನಮ್ಮಲ್ಲಿ ಒಂದು ಹೋರಿ ಇದೆ, ಒಂದೇ ಹಟ್ಟಿಯಲ್ಲಿ ಕಟ್ಟೋಣವೆ?' ಎಂಬುದಾಗಿ ಪರೋಕ್ಷ ರೀತಿಯಲ್ಲಿ ಕೇಳುತ್ತಾರೆ. ಈ ಸಂದರ್ಭ ಎರಡೂ ಕಡೆಯವರು ಹುಡುಗ ಮತ್ತು ಹುಡುಗಿಯ ಬೆಡಗು, ಕುಲದೇವರು, ಕುಲಲಾಂಛನ, ಕುಲಬಹರೆ, ವಾಡೆ ಮುಂತಾದ ವಿವರಗಳನ್ನು ಒಬ್ಬರಿಗೊಬ್ಬರು ಕೇಳಿ ತಿಳಿದುಕೊಳ್ಳುತ್ತಾರೆ.

ಪ್ರತಿಯೊಂದು ಕುಟುಂಬದಲ್ಲಿ ಜನಿಸಿದವರಿಗೆ ಒಂದು ಬೆಡಗು ಅಥವಾ ಗೋತ್ರವನ್ನು ಹೋಲುವ ಬಳಿ ಇರುತ್ತದೆ. ಪ್ರತೀ ಬಳಿಯ ಕುಲದೇವರಿಗೆ (ಮಾಯಾ) ಒಂದು ಹೆಸರಿರುತ್ತದೆ. ಪ್ರತೀ ಬಳಿಗಳಲ್ಲಿನ ಸಾಮಾಜಿಕ ಮತ್ತು ಧಾರ್ಮಿಕ ವಿಧಿಗಳು (ಧುಮ್ಮಾ=ಧೂಮಿಕೆ?) ವ್ಯತ್ಯಾಸವಿರುತ್ತದೆ. ಪ್ರತೀ ಬೆಡಗಿನವರಿಗೆ ಒಂದು ವಿಶೇಷ ಲಕ್ಷಣ (ಜೊಮ್ಮೋ=ಜನ್ಮಲಕ್ಷಣ)ವಿರುತ್ತದೆ. ಪ್ರತಿಯೊಬ್ಬ ಕುಡುಬಿಯೂ ಯಾವುದಾದರೊಂದು ವಾಡೆಯ ಸದಸ್ಯನಾಗಿರುತ್ತಾನೆ. ಈ ಎಲ್ಲಾ ವಿಷಯಗಳು ತೃಪ್ತಿದಾಯಕವೆನಿಸಿದಲ್ಲಿ ಹುಡುಗ ಮತ್ತು ಹುಡುಗಿಗೆ 'ಸಾಲಾವಳಿ' ಹೊಂದಾಣಿಕೆಯಾಗುತ್ತದೆಯೇ? 'ವಧೂವರ ಸಾಮ್ಯ' ತಾಳೆಯಾಗುತ್ತದೆಯೇ? ಎಂಬುದನ್ನು ದೃಢಪಡಿಸಿಕೊಳ್ಳುತ್ತಾರೆ. ಬುಡಕಟ್ಟು ಸಮಾಜದವರಾದುದರಿಂದ ಕುಡುಬಿಯರಲ್ಲಿ ಜಾತಕ ಮಾಡಿಸುವ ಕ್ರಮವಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಹುಡುಗ ಮತ್ತು ಹುಡುಗಿಯ ಜನನ ನಾಮದ ಪ್ರಥಮಾಕ್ಷರಗಳ ನಕ್ಷತ್ರ ಮತ್ತು ರಾಶಿಗಳು ಒಂದಕ್ಕೊಂದು ಕೂಡಿ ತಾಳೆಯಾಗುವುದೋ? ಎಂಬುದನ್ನು ಖಾತ್ರಿ ಮಾಡಿಕೊಳ್ಳುತ್ತಾರೆ. ಇದನ್ನು 'ಸಾರಾವಳಿ' ಅಥವಾ 'ಸಾಲಾವಳಿ' ನೋಡುವುದು ಅನ್ನುತ್ತಾರೆ. ಕೆಲವು ಸಂದರ್ಭಗಳಲ್ಲಿ ನೆಂಟಸ್ತಿಕೆಗೆ ಹೊರಡುವ ಮೊದಲೇ ವಧೂವರ ಸಾಮ್ಯ ನೋಡಿ ದೃಢಪಡಿಸಿಕೊಳ್ಳುತ್ತಾರೆ. ಸಾಲಾವಳಿ ಹೊಂದಾಣಿಕೆಯಾಗದಿದ್ದರೆ ದೇವಸ್ಥಾನಗಳಿಗೆ ಹೋಗಿ ಹೂ ಪ್ರಶ್ನೆ ಕೇಳುವ ವಾಡಿಕೆ ಇದೆ. ಹೂ ಪ್ರಶ್ನೆ ನೋಡುವ ವ್ಯವಸ್ಥೆ ಕೆಲವು ದೇವಸ್ಥಾನಗಳಲ್ಲಿ ಇರುತ್ತದೆ. ದೇವರ ಮೂರ್ತಿಯ ತಲೆಯಲ್ಲಿಟ್ಟ ಹೂವು ಸಾಲಾವಳಿ ಬಗ್ಗೆ ಪ್ರಾರ್ಥಿಸಿಕೊಂಡಾಗ ಬಲಗಡೆ ಬಿದ್ದರೆ ಸಾಲಾವಳಿ ಕೂಡಿಬರುವುದೆಂದೂ, ಎಡಗಡೆ ಬಿದ್ದರೆ ಈ ಸಂಬಂಧಕ್ಕೆ ದೇವರ ಒಪ್ಪಿಗೆಯಿಲ್ಲವೆಂದೂ ನಂಬಲಾಗುತ್ತದೆ.

ನೆಂಟಸ್ತಿಕೆಯ ಮಾತುಕತೆಯ ಚರ್ಚೆಯಲ್ಲಿ ಈ ಎರಡು ಬೆಡಗುಗಳವರ ನಡುವೆ ಈ ಮೊದಲು ಮದುವೆ ಸಂಬಂಧಗಳು ಏರ್ಪಟ್ಟಿವೆಯೇ? ಹೌದಾದಲ್ಲಿ ಅಂಥವರ ಸಂಸಾರ ಸಾರ್ಥಕ ರೀತಿ, ಏನೂ ಅಡೆತಡೆಗಳಲ್ಲಿದೆ ಸಾಗಿದೆಯೆ? ಎಂಬುದನ್ನು ಖಚಿತಪಡಿಸಿಕೊಳ್ಳುತ್ತಾರೆ. ಈ ಹಿಂದಿನ ಸಂಬಂಧಗಳಲ್ಲಿ ಮದುವೆ –ಸಂಸಾರ ಕಡಿದು ಬಿದ್ದಿದ್ದರೆ, ಮದುವೆಯಾದ ಮೇಲೂ ಸಂತಾನಪ್ರಾಪ್ತಿಯಾಗದಿದ್ದರೆ, ಹುಟ್ಟಿದ ಮಕ್ಕಳು ಅಪಾಂಗ, ಮಾನಸಿಕ ಅಸ್ವಸ್ಥರಾಗಿದ್ದರೆ, ಪತಿಪತ್ನಿಯರ ನಡುವೆ ಹೊಂದಾಣಿಕೆ ಇರದಿದ್ದರೆ, ಮದುವೆಯ ನಂತರ ಅಪಚಾರ, ಅವಘಡ ಸಂಭವಿಸುವ ಘಟನೆಗಳು ನಡೆದಿದ್ದರೆ, ಎರಡು ಕುಟುಂಬಗಳ ನಡುವೆ ವಾಕ್‌ದೋಷಗಳಿದ್ದಲ್ಲಿ, ವಾದೆ–ವಾದೆಗಳ ಮಧ್ಯೆ ವೈಮನಸ್ಸುಗಳಿದ್ದಲ್ಲಿ ನೆಂಟಸ್ತಿಕೆಗೆ ಹಿಂದೆ ಸರಿಯುತ್ತಾರೆ. ಹಿಂದಿನ ಕಾಲದಲ್ಲಿ ಹೆಣ್ಣು ಕೇಳಲು ಹೋಗುವಾಗ ಹುಡುಗಿ ಮನೆಗೆ ಹೆಚ್ಚಾಗಿ ಹುಡುಗ ಹೋಗುವ ಕ್ರಮವಿರಲಿಲ್ಲ. ಕನ್ಯಾಪಿತೃಗಳು ಹುಡುಗನ ಮನೆ ನೋಡಲು ಹೋದಾಗಲೇ ಎಲ್ಲಾ ಮಾಹಿತಿಯನ್ನು ಕಲೆಹಾಕಬೇಕಿತ್ತು. ಈಗೀಗ ನೆಂಟಸ್ತಿಕೆಯ ಪ್ರಸ್ತಾಪದ ವೇಳೆ ಹುಡುಗನೂ ಹೋಗಿರುತ್ತಾನೆ. ಹುಡುಗನ ರೂಪಲಕ್ಷಣ, ಉದ್ಯೋಗ ಗುಣಾವಗುಣಗಳು ಹುಡುಗಿಯ ಕಡೆಯವರಿಗೆ ಸಮಾಧಾನಕರವಾಗಿ ಕಂಡಲ್ಲಿ 'ಹೆಣ್ಣು ಕೊಡುತ್ತೇವೆ' ಎಂದು ಒಪ್ಪುತ್ತಾರೆ. ಆಗ ಗಂಡಿನ ಕಡೆಯವರು 'ನಮಗೆ ಹುಡುಗಿಯನ್ನು ನೋಡಬೇಕು, ತೋರಿಸುತ್ತೀರಾ ?' ಎಂಬುದಾಗಿ ಕೇಳುತ್ತಾರೆ. ಹುಡುಗನ ಕಡೆಯವರು ಹುಡುಗಿಯನ್ನು ನೋಡಿ ಚೆನ್ನಾಗಿ ಪರೀಕ್ಷಿಸುವುದೂ ಅಗತ್ಯವೇ. ಯಾಕೆಂದರೆ, ಹೆಣ್ಣು ದೈಹಿಕವಾಗಿ ಅಪಾಂಗಳಾಗಿರಲು ಶಕ್ಯವಿದೆ. ಹುಡುಗಿ ಯಾವುದಾದರೂ ಊನ ಹೊಂದಿದ್ದರೆ ತಿಳಿಯುವುದಿಲ್ಲ. "ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು' ಎಂಬ ಗಾದೆಯ ಮಾತಿನಂತೆ ಹೆಣ್ಣಿನ ಕಡೆಯವರು ಈ ಎಲ್ಲಾ ವಿಷಯಗಳನ್ನು ಗುಪ್ತವಾಗಿಟ್ಟು, ಕೆಲವು ಸಲ ಒಬ್ಬಳು ಹುಡುಗಿಯನ್ನು ತೋರಿಸಿ ಇನ್ನೊಬ್ಬಳನ್ನು, ಅಂದರೆ ಕಿರಿಯುವಳನ್ನು ತೋರಿಸಿ ಹಿರಿಯುವಳನ್ನು ಮದುವೆ ಮಾಡಿಕೊಡುವ ಮೋಸದ ಮದುವೆಗಳ ಉದಾಹರಣೆಗಳಿರುತ್ತವೆ. ಈ ಎಲ್ಲಾ ದೃಷ್ಟಿಯಿಂದ, ಮತ್ತೆ ತಕರಾರಿಗೆ ಅವಕಾಶ ಕೊಡುವುದಕ್ಕಿಂತ, ಮೊದಲೇ ಸರಿಯಾದ ವಧುಪರೀಕ್ಷೆ ಕೈಗೊಳ್ಳುವುದು ಗಂಡಿನ ಕಡೆಯವರ ಜವಾಬ್ದಾರಿ.

ಕುಡುಬಿ ಸಮಾಜ ವ್ಯವಸ್ಥೆಯಲ್ಲಿ ಅವಿವಾಹಿತ ಹೆಮ್ಮಕ್ಕಳಿಗೆ ಅಬ್ಬಲಿಗೆ (ಕನಕಾಂಬರ) ಹೂವು ಮುಡಿಯುವ ಅವಕಾಶ, ಧಾರ್ಮಿಕ ಪರವಾನಗಿ ಇಲ್ಲ. ಕನಕಾಂಬರ ಮುಡಿಯುವುದು ಕುಡುಬಿ ಮಹಿಳೆಯರಿಗೆ ಮುತ್ತೈದೆತನದ ಸಂಕೇತ. ಕನಕಾಂಬರ ಮುಡಿದಿರದ ಯುವತಿಯರು ಅವಿವಾಹಿತರೆಂದೇ ಪರಿಗಣಿಸಬಹುದು. ಹೀಗೆ ಅವಿವಾಹಿತ ಯುವತಿಯರು ಅಥವಾ ಹೆಮ್ಮಕ್ಕಳು ಅಬ್ಬಲಿಗೆ ಮುಡಿದುದನ್ನು ಕಂಡರೆ ಹಿರಿಯರು "ಏನು ಗಂಡನ ಮನೆಗೆ ಹೋಗಲು ಹೊರಟದ್ದೀಯಾ?" ಅಂತ ಗದರಿಸುತ್ತಿದ್ದರು. ಬಹಳ ಸಂಕೋಚ ಸ್ವಭಾವದವರೂ ಆಗಿರುವುದರಿಂದ ಮದುವೆಯಾಗದ ಹೆಮ್ಮಕ್ಕಳು ಅಪರಿಚಿತರಿಗೆ ಮುಖ ತೋರಿಸುವುದೂ ಅಪರೂಪ. ವಿವಾಹಿತ ಮಹಿಳೆಯರು ಹೆಚ್ಚಾಗಿ

ತುರುಬು ಕಟ್ಟಿ ಅಬ್ಬಲಿಗೆ ಮುಡಿಯುತ್ತಾರೆ. ಮದುವೆಯಾಗದ ಹುಡುಗಿಯರು ತಲೆಬಾಚಿ, ಜಡೆಹಣೆದು, ಅಬ್ಬಲಿಗೆ ಹೊರತು ಇತರ ಹೂವುಗಳನ್ನು ಮುಡಿಯುವುದು ವಾಡಿಕೆ. ವಿವಾಹಿತ ಸ್ತ್ರೀಯರು ಕಾಲ್ಬೆರಳಿಗೆ ಕಾಲುಂಗುರ, ಮೂಗಿಗೆ ಮೂಗುತಿ ಅಥವಾ ಮೂಗುಬಟ್ಟು, ಕುತ್ತಿಗೆಯಲ್ಲಿ ಕರಿಮಣಿ, ಕೂದಲಿಗೆ ತಲೆಮುಡಿ ಕಟ್ಟಿ ಅದಕ್ಕೆ ಸರಿಗೆಮುಳ್ಳು ಚುಚ್ಚಿಕೊಳ್ಳುತ್ತಾರೆ. ಕುಡುಬಿ ಸುಮಂಗಲೆಯರು ಯಾವ ಕಾರಣಕ್ಕೂ ಮಾಂಗಲ್ಯವನ್ನು ಬಿಚ್ಚಿಡುವುದಿಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಮಾಂಗಲ್ಯವನ್ನು ಕಳಚಬೇಕಾದಾಗ ಬೇರೊಂದು ಕರಿಮಣಿಯನ್ನು ಧರಿಸಿದ ಮೇಲೆಯೇ ಮೂಲ ಮಾಂಗಲ್ಯವನ್ನು ಕಳಚುತ್ತಾರೆ. ವಿಧವೆಯರು ಹೂವು ಮುಡಿಯುವುದು, ಕರಿಮಣಿ ಹಾಗೂ ಮುತ್ತೈದೆಯರು ಉಪಯೋಗಿಸುವ ಗಾಜಿನ ಬಳೆ, ಮೂಗುತಿ, ಕುಂಕುಮ ಮುಂತಾದ ಪ್ರಸಾಧನ ಸಾಮಗ್ರಿಗಳನ್ನು ಧರಿಸುವಂತಿಲ್ಲ. ಮಾತ್ರವಲ್ಲ, ಅವರು ವಿವಾಹ, ಸೀಮಂತ, ಜನನ ಮುಂತಾದ ಶುಭ ಸಮಾರಂಭಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತಿಲ್ಲ. ಇವು ಕುಡುಬಿ ಯುವತಿಯವರು ಮತ್ತು ಮಹಿಳೆಯರ ಸಾಮಾನ್ಯ ಲಕ್ಷಣಗಳು.

ಈ ಹಿಂದೆಯೇ ವಿವರಿಸಿರುವಂತೆ ಕುಡುಬಿಯರ ಹೆಮ್ಮಕ್ಕಳು ಸಂಕೋಚ ಸ್ವಭಾವದವರು ಆಗಿರುವುದರಿಂದ ನೋಡುಲು ಸಿಗುವುದು, ಗಂಡಸರ ಅಥವಾ ಅಪರಿಚಿತರ ಎದುರು ಬರುವುದು ಅಪರೂಪ. ಆದರೆ ನೆಂಟಸ್ತಿಕೆಗೆ ಬಂದವರಿಗೆ ಹೆಣ್ಣು ನೋಡದೆ ನಿರ್ವಾಹವಿಲ್ಲ. ಒತ್ತಾಯಿಸಿ ನೇರವಾಗಿ ಕರೆದು ತಂದರೆ ಹುಡುಗಿ ಹೊರಬಂದು ಒಂದು ಕ್ಷಣ ಮುಖತೋರಿಸಿ ಓಡಿ ಮನೆಯೊಳಗೆ ಸೇರಿಕೊಳ್ಳುತ್ತಾಳೆ. ಅದಕ್ಕಾಗಿ ಹುಡುಗಿಯನ್ನು ಬಾವಿಯಿಂದ ನೀರು ಸೇದಿ ತರಲು, ದನಕರುಗಳನ್ನು ಅಟ್ಟಲು, ತೆಂಗಿನಕಾಯಿ ಹೆಕ್ಕಲು ಅಥವಾ ಯಾವುದಾದರೂ ವಸ್ತುವನ್ನು ಹೊರಗಿನಿಂದ ಮನೆಯೊಳಗೆ ತರುವ ನೆವದಿಂದ ಹೊರಗೆ ಕಳುಹಿಸಿ ನೆಂಟರು ನೋಡುವಂತೆ ವ್ಯವಸ್ಥೆ ಮಾಡುತ್ತಾರೆ. ಹುಡುಗಿ ಒಂದು ತಂಬಿಗೆ ನೀರು ತಂದು ನೆಂಟರೆದುರು ಇಟ್ಟು ಅಥವಾ ಬಾಯಾರಿಕೆಯ ಪಾನೀಯವನ್ನು ನೆಂಟರಿಗೆ ವಿತರಿಸಿ, ಒಂದು ಕ್ಷಣ ನಿಂತು, ಒಳಗೆ ಹೋಗುವ ಸ್ವಲ್ಪ ಸುಧಾರಿತ ಕ್ರಮ ಈಗೀಗ ಹೆಣ್ಣು ತೋರಿಸುವ ಸಂಪ್ರದಾಯವೇ ಆಗಿದೆ. ಈ ಸಂದರ್ಭ ಬಂದಿರುವ ನೆಂಟರ ಪೈಕಿ ಕೆಲವರು ಹಾಸ್ಯ ಚಟಾಕಿ ಹಾರಿಸುತ್ತಾರೆ. ಈ ಹಾಸ್ಯ ಚಟಾಕಿ ಕೇಳಿದ ಹುಡುಗಿ 'ಕಿಸಕ್ಕನೆ' ನಕ್ಕಾಗ ಆಕೆಯ ಹಲ್ಲು ಕಾಣಿಸುತ್ತದೆ ಅಥವಾ ನಾಚಿಕೆಯಿಂದ ಸಟಕ್ಕನೆ ಒಳಗೆ ಓಡುತ್ತಾಳೆ. ನಗುವಾಗ ಹಲ್ಲುಗಳು ಸರಿ ಇವೆಯೇ? ಮುಖಲಕ್ಷಣ ಚೆನ್ನಾಗಿದೆಯೇ? ಅಥವಾ ಒಳಗೆ ಓಡುವಾಗ ಹೆಣ್ಣು ನಡೆಯುವ ಚಲನೆ ಸರಿಯಾಗಿದೆಯೇ?... ಎಂಬುದನ್ನು ಪರೀಕ್ಷೆ ಮಾಡುವ ಈ ಹಾಸ್ಯ ಚಟಾಕಿಯೂ ಪರೋಕ್ಷವಾಗಿ ವಧುಪರೀಕ್ಷೆಯ ಒಂದು ಪೂರಕ ಪದ್ಧತಿಯಾಗಿ ಇಲ್ಲಿ ಕಾರ್ಯವೆಸಗುತ್ತದೆ. ವರನ ಕಡೆಯವರಿಗೆ ಸಮಾಧಾನವಾದರೆ ಅವರು ನೆಂಟಸ್ತಿಕೆಗೆ ಒಪ್ಪಿಗೆ ನೀಡುತ್ತಾರೆ. ಆದರೆ ಅವರು ಒಪ್ಪಿದ ತಕ್ಷಣ ಮದುವೆ ನಿಶ್ಚಿತವಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಹೆಣ್ಣು ನೋಡುವ ಈ ಪ್ರಥಮ ಭೇಟಿಯಲ್ಲಿ ಗಂಡು ಉಪಸ್ಥಿತನಿರುವುದೇ ಇಲ್ಲ.

ಹಿರಿಯರು ಮಾತ್ರ ಬಂದಿರುತ್ತಾರೆ. ಹುಡುಗನನ್ನು, ಹುಡುಗನ ಮನೆಯನ್ನು ನೋಡಬೇಕೆಂಬುದಾಗಿ ಕನ್ಯಾಪಿತೃಗಳು ಅಪೇಕ್ಷಿಸುತ್ತಾರೆ. ಇದಕ್ಕಾಗಿ ಉಭಯ ತಂಡದವರಿಗೆ ಅನುಕೂಲವಾಗುವ ಒಂದು ದಿನ ನಿಶ್ಚಯಿಸಿ ಆ ದಿನ ಬರುವಂತೆ ಗಂಡಿನ ಕಡೆಯವರು ಹೆಣ್ಣಿನ ಕಡೆಯವರನ್ನು ಆಮಂತ್ರಿಸಿ, ಬಂದಿರುವವರು ವಾಪಸಾಗುತ್ತಾರೆ.

ನಿಶ್ಚಿತ ದಿನ ಗಂಡಿನ ಮನೆಗೆ ಹೆಣ್ಣಿನ ಕಡೆಯ ನೆಂಟರು ಬರುವಾಗ, ಹೆಣ್ಣಿನ ಮನೆಯಲ್ಲಿ ಗಂಡಿನ ಕಡೆಯವರಿಗೆ ಯಾವ ರೀತಿ ಗೌರವ, ಆದರಾತಿಥ್ಯ ನೀಡಿದ್ದರೋ, ಅದೇ ಪ್ರಕಾರ ಇಲ್ಲಿಯೂ ಗೌರವ ನೀಡಿ ಬರಮಾಡಿಕೊಳ್ಳಬೇಕು. ನೆಂಟರಿಗೆ ಕೈಮುಗಿದು ವಂದಿಸಿ, ಕಾಲು ತೊಳೆಯಲು ನೀರು ಕೊಟ್ಟು, ಮನೆಯೊಳಗೆ ಕರೆದು ಚಾಪೆ ಹಾಸಿ ಕೂರಿಸುತ್ತಾರೆ. ಕಾಲು ತೊಳೆಯಲು ನೀರು ಕೊಡುವಾಗಲೂ ಆದ್ಯತೆಯ ಕ್ರಮದಲ್ಲಿ, ಅಂದರೆ ಗುರಿಕಾರ, ರಾಯಭಾರಿ, ಪಂಚಪ್ರಧಾನರು, ಮಾವ, ದೇವರ ಮನೆಯ ಹಿರಿಯ ವ್ಯಕ್ತಿ ಇದ್ದಲ್ಲಿ ಕ್ರಮಪ್ರಕಾರವಾಗಿ ಅವರಿಗೆ ನೀರು ಕೊಟ್ಟು ಸ್ವಾಗತಿಸಬೇಕು. ಈ ಕ್ರಮ ಹಿಂದುಮುಂದಾದಲ್ಲಿ ಎಷ್ಟೋ ಸಲ ಪ್ರಥಮ ಮರ್ಯಾದೆ ಸಲ್ಲಬೇಕಾದ ವ್ಯಕ್ತಿ ಮುನಿಸಿಕೊಂಡು ಹಿಂದೆ ಹೋಗುವುದು, ಯಜಮಾನ ಆತನನ್ನು ಸಮಾಧಾನಪಡಿಸಿ ವಾಪಾಸು ಕರೆದುಕೊಂಡು ಬರುವುದು –ಮುಂತಾದ ಘಟನೆಗಳು ಸಂಭವಿಸಿದ್ದೂ ಕೇಳಲು ಸಿಗುತ್ತವೆ. ಆದುದರಿಂದ ಮನೆಯ ಯಜಮಾನ ಬಹಳ ಜಾಗ್ರತೆಯಿಂದ ಈ ನೆಂಟರನ್ನು ಆದರಿಸುವ ಕೆಲಸವನ್ನು ಮಾಡುತ್ತಾನೆ.

ಬಂದ ನೆಂಟರಿಗೆ ಆಧುನಿಕ ಆಸನದ ವ್ಯವಸ್ಥೆ ಇದ್ದರೂ, ಚಾಪೆ ಹಾಸಿ ಕೂರಿಸುವುದು ಸಂಪ್ರದಾಯ. ಹೀಗೆ ಕುಳಿತವರಿಗೆ ಬಾಯಾರಿಕೆಗೆ ಬೆಲ್ಲ ನೀರು, ತಾಂಬೂಲದ ವ್ಯವಸ್ಥೆ ಮಾಡುತ್ತಾರೆ. ಇದೂ ಕೂಡಾ ಸಂಪ್ರದಾಯದ ಅಂಗವೇ. ಆ ನಂತರವಷ್ಟೆ ನೆಂಟಸ್ತಿಕೆಯ ಮಾತುಕತೆ – ಈ ಹಿಂದೆ ಹೆಣ್ಣಿನ ಮನೆಯಲ್ಲಿ ನಡೆದ ಕ್ರಮ ಪ್ರಕಾರವೇ ಇಲ್ಲಿಯೂ ಜರಗುತ್ತದೆ. ಹುಡುಗನನ್ನು ಕರೆಸಿ 'ಇವನೇ ನಮ್ಮ ಹುಡುಗ' ಅಂತ ಬಂದ ನೆಂಟರಿಗೆ ಪರಿಚಯಿಸುತ್ತಾರೆ. ಹೆಣ್ಣಿನ ಕಡೆಯವರು ಹುಡುಗನ ರೂಪಲಕ್ಷಣ, ವೃತ್ತಿ ಆದಾಯ, ಮನೆಹಿತ್ತಿಲು, ಕೌಟುಂಬಿಕ ಸಂಬಂಧಗಳು, ಭೂಮಿ ವ್ಯವಸಾಯ ಇತ್ಯಾದಿಗಳನ್ನು ಮನವರಿಕೆ ಮಾಡಿಕೊಂಡು, ಆ ಮೂಲಕ ಅಳಿಯನಾಗುವ ಹುಡುಗನ ಆರ್ಥಿಕ ಹೊಣೆಗಾರಿಕೆಯ ತಾತ್ವಿಕ ಪರೀಕ್ಷೆಗೈದು ಹೊಂದಾಣಿಕೆಯಾದಲ್ಲಿ ನೆಂಟಸ್ತಿಕೆಗೆ ಒಪ್ಪಿಗೆ ಸೂಚಿಸುತ್ತಾರೆ. ಈ ಪ್ರಕಾರ ಉಭಯ ಪಕ್ಷೀಯರೂ ಒಪ್ಪಿದಲ್ಲಿ ಮದುವೆಯ 'ವಿವಾಹ ವಾಗ್ದಾನ' (ಉತಾರ್ ಘಟ್ಟ) ಆಗಬೇಕು. ಇದಕ್ಕಾಗಿ ಇನ್ನೊಂದು ಅನುಕೂಲ ದಿನ ನಿಶ್ಚಯಿಸುತ್ತಾರೆ. ಇದರಂತೆ 'ಹೆಣ್ಣು ಒಪ್ಪಿಗೆ' ಅಂತ ಗಂಡಿನ ಕಡೆಯವರು ಮೊದಲು ವಾಗ್ದಾನ ನೀಡಬೇಕು ಮತ್ತು ಈ ವಾಗ್ದಾನ ಕ್ರಮ ಹೆಣ್ಣಿನ ಮನೆಯಲ್ಲೇ ಮೊದಲು ಆಗಬೇಕು. ಆದುದರಿಂದ ಹೆಣ್ಣಿನ ಕಡೆಯವರು ದಿನ ನಿಗದಿಗೊಳಿಸಿ ಗಂಡಿನ ಕಡೆಯವರನ್ನು ಆಮಂತ್ರಿಸಿ ಅಲ್ಲಿಂದ ವಾಪಸಾಗುತ್ತಾರೆ. ಇಲ್ಲಿ ನೆನಪಿನಲ್ಲಿಡಬೇಕಾದ ಅಂಶ ಅಂದರೆ,

ಮೇಲೆ ವಿವರಿಸಿದ ಎರಡೂ ಸಂದರ್ಭಗಳಲ್ಲಿ ಆಗಮಿಸಿದ ನೆಂಟರಿಗೆ ಫಲಾಹಾರವಿರುತ್ತದೆ ಹೊರತು ಊಟದ ಕ್ರಮವಿರುವುದಿಲ್ಲ.

5.3. ವಿವಾಹ ವಾಗ್ದಾನ (ಉತಾರ್ ಘಟ್ಟಿ) :

ನಿಗದಿಗೊಳಿಸಿದ ದಿನದಂದು ಗಂಡಿನ ಕಡೆಯವರು ಆಪ್ತೇಷ್ಟರನ್ನು ಕೂಡಿಕೊಂಡು ಹೆಣ್ಣಿನ ಮನೆಗೆ ಬರುತ್ತಾರೆ. ಅಲ್ಲಿ ಹೆಣ್ಣಿನ ಕಡೆಯವರೂ ತಮಗೆ ಬೇಕಾದ, ಬಾಂಧವ್ಯವುಳ್ಳವರನ್ನು ಆಮಂತ್ರಿಸಿರುತ್ತಾರೆ. ಬಂದ ನೆಂಟರನ್ನು ಕೈಮುಗಿದು, ಕಾಲು ತೊಳೆಯಲು ನೀರು ನೀಡಿ ಗೌರವಪೂರ್ವಕ ಎದುರುಗೊಳ್ಳುತ್ತಾರೆ. ಅವರನ್ನು ಒಳಗೆ ಕರೆದು, ಚಾಪೆ ಹಾಸಿ ಕುಳ್ಳಿರಿಸಿ, ಬಾಯಾರಿಕೆಗೆ ಬೆಲ್ಲ ನೀರು ತಾಂಬೂಲಾದಿ ಕ್ರಮಪ್ರಕಾರ ನೀಡಿ ಸತ್ಕರಿಸುತ್ತಾರೆ. ಆ ನಂತರ ಉಭಯತ್ರರೂ ವಿವಾಹ ವಾಗ್ದಾನದ ಮಾತುಕತೆಗೆ ಪ್ರಾರಂಭಿಸುತ್ತಾರೆ. ಮಾತುಕತೆಯಲ್ಲಿ ಎರಡೂ ಕಡೆಯವರು ಪೂರಕವಾಗಿ ಒಪ್ಪಿದಲ್ಲಿ ಗಂಡಿನ ಕಡೆಯವರು ಹೆಣ್ಣಿನ ಕಡೆಯವರಿಗೆ 'ವಿವಾಹ ವಾಗ್ದಾನ' (ಉತಾರ್ ಘಟ್ಟಿ) ನೀಡಿ ಭೋಜನ ಸ್ವೀಕರಿಸಬೇಕು. ನೆಂಟರು ಊಟ ಮಾಡಿದರೆ ನೆಂಟಸ್ತಿಕೆ ಗಂಡಿನ ಪಕ್ಷದವರ ಕಡೆಯಿಂದ ನಕ್ಕಿಯಾದಂತೆ ಎಂಬುದು ತೀರ್ಮಾನ. ಈ ವಾಗ್ದಾನ ಯಶಸ್ವಿಯಾಗಿ ಆಗುತ್ತದೆ ಎಂಬ ಪೂರ್ವ ಸೂಚನೆ ಹೆಣ್ಣಿನ ಕಡೆಯವರಿಗೆ ಇದ್ದಲ್ಲಿ ಅಡುಗೆಯನ್ನೂ ನೆಂಟರ ಆಗಮನಕ್ಕೆ ಮುಂಚಿತವಾಗಿಯೇ ತಯಾರು ಮಾಡಿರುತ್ತಾರೆ. ಸಂಶಯವಿದ್ದಲ್ಲಿ ವಿವಾಹ ವಾಗ್ದಾನ ನೆರವೇರಿದ ಮೇಲೆ ಅಡುಗೆ ತಯಾರಿಸಿ ಭೋಜನ ನೀಡುತ್ತಾರೆ. ಕೆಲವು ಸಂದರ್ಭಗಳಲ್ಲಿ ನೆಂಟಸ್ತಿಕೆಯ ಈ ಮಾತುಕತೆಯ ಘಟ್ಟದಲ್ಲಿ ಅಭಿಪ್ರಾಯ ಭೇದಗಳಿದ್ದಲ್ಲಿ ಕ್ಷುಲ್ಲಕ ಕಾರಣಗಳಿಗೂ ನೆಂಟಸ್ತಿಕೆ ಮುರಿದು ಬೀಳುವ ಸಂದರ್ಭಗಳಿರುತ್ತವೆ. ಮಾಡಿಟ್ಟ ಅಡುಗೆಯನ್ನು ಬಿಟ್ಟು, ಗಂಡಿನ ಕಡೆಯವರು ನೆಂಟಸ್ತಿಕೆಯನ್ನು ನಿರಾಕರಿಸಿ ವಾಪಾಸು ಹೋಗುವ ಪ್ರಸಂಗಗಳು ಎದುರಾಗುತ್ತವೆ. ಆದುದರಿಂದ ಹೆಣ್ಣಿನ ಕಡೆಯವರು ಬಹಳ ಸೂಕ್ಷ್ಮವಾಗಿ ಇದನ್ನು ನಿಭಾಯಿಸಬೇಕಾಗುತ್ತದೆ. ಹೆಣ್ಣಿನ ಮನೆಯಲ್ಲಿ ವಿವಾಹ ವಾಗ್ದಾನದ ಭೋಜನ ಮಾಡಿದರೆ ಗಂಡಿನ ಕಡೆಯಿಂದ ಅಧಿಕೃತವಾಗಿ ಮದುವೆಗೆ ಒಪ್ಪಿಗೆ ನೀಡಿದಂತೆ.

ಇದೇ ಕ್ರಮಪ್ರಕಾರ ಇನ್ನೊಂದು ದಿನ ಹುಡುಗಿ ಕಡೆಯವರು ಹುಡುಗನ ಮನೆಗೆ ಹೋಗಿ ಅಲ್ಲಿ ಅವರ ಹುಡುಗಗೆ ತಮ್ಮ ಹುಡುಗಿಯನ್ನು ಮದುವೆ ಮಾಡಿಕೊಡುತ್ತೇವೆ ಎಂಬುದಕ್ಕೆ ವಾಗ್ದಾನ (ಉತಾರ್ ಘಟ್ಟಿ) ನೀಡಿ, ಭೋಜನ ಸ್ವೀಕರಿಸಬೇಕು. ಈ ಹಂತದಲ್ಲಿಯೂ ವಾಗ್ದಾನದ ಮಾತುಕತೆಗಳು ಪೂರಕವಾಗಿರದಿದ್ದಲ್ಲಿ, ಭೋಜನ ಸ್ವೀಕರಿಸಿದ ಮೇಲೆಯೂ ನೆಂಟಸ್ತಿಕೆ ತಪ್ಪಿಹೋಗುವ ಸಾಧ್ಯತೆಗಳಿವೆ. ಮಾತುಕತೆ ಯಶಸ್ವಿಯಾಗಿ ನಡೆದು ಊಟವಾದಲ್ಲಿ ಹೆಣ್ಣಿನ ಕಡೆಯವರು ಗಂಡಿನ ಕಡೆಯವರನ್ನು 'ತಾಂಬೂಲ ನಿಶ್ಚಿತಾರ್ಥಕ್ಕೆ (ಸಾಕ್ಷಮೊ)ದಿನ ನಿಗದಿಗೊಳಿಸಿ ಆಮಂತ್ರಿಸಬೇಕು. ತಾಂಬೂಲ ನಿರ್ಣಯ

ಅಥವಾ ಒಪ್ಪು ವೀಳ್ಯ ಶಾಸ್ತ್ರವನ್ನು ಹೆಣ್ಣಿನ ಮನೆಯಲ್ಲಿ ಮಾಡಿಕೊಡುವ ಜವಾಬ್ದಾರಿ ಮತ್ತು ಸಂಪ್ರದಾಯ ಹೆಣ್ಣಿನ ಕಡೆಯವರದು.

ಇಲ್ಲಿ ಉಭಯ ಕಡೆಗಳಲ್ಲಿ ಜರಗುವ ಊಟೋಪಚಾರ, ನೆಂಟರ ಆಗಮನ ನಿರ್ಗಮನ ಸಂದರ್ಭದ ಆಚಾರಗಳ ಪಾಲನೆಯ ಕೆಲವು ವಿಧಿಗಳನ್ನು ವಿವರಿಸಲೇಬೇಕು. ಕುಡುಬಿಯರ ಮದುವೆಯ ಪೂರ್ವಭಾವೀ ಅಥವಾ ಮದುವೆ ಸಂಭ್ರಮದ ಊಟೋಪಚಾರಗಳ ಪೈಕಿ ಮದುವೆಯ ಮರುದಿನದ ಮರುವರಿ ಶಾಸ್ತ್ರ (ಬಲಗೊಡೆಯರೂಟ= ಧೆಡ್ಯಾಂ ಜೆವ್ಣೋಣ್) ಒಂದು ಹೊರತು ಮಿಕ್ಕೆಲ್ಲಾ ಊಟಗಳು ಶಾಕಾಹಾರಿಯೇ ಆಗಿರುತ್ತವೆ. ಊಟದ ಬಗೆಗಳಲ್ಲಿ ಅನ್ನ, ಪಾಯಸ, ಸಾರು, ಸಾಂಬಾರು, ಪಲ್ಯ, ಉಪ್ಪಿನಕಾಯಿ, ಪಪ್ಪಡ, ಜೇನು, ಸಿಹಿತಿಂಡಿ ಇತ್ಯಾದಿಗಳಿರುತ್ತವೆ. ಪಂಗ್ತಿಗಳಲ್ಲಿ ಕುಳ್ಳಿರಿಸಿ ಕುಡಿ ಬಾಳೆಲೆಗಳಲ್ಲಿ ಬಡಿಸುತ್ತಾರೆ. ಪ್ರಥಮವಾಗಿ ನೆಂಟರನ್ನೇ ಕುಳ್ಳಿರಿಸಿ ಬಡಿಸಬೇಕು. ಎಲ್ಲರಿಗೆ ಎಲ್ಲಾ ವ್ಯಂಜನಗಳನ್ನು ಬಡಿಸಿ ಆಗುವವರೆಗೆ ಯಾವೊಬ್ಬನೂ ಊಟ ಪ್ರಾರಂಭಿಸುವಂತಿಲ್ಲ. ಬಡಿಸುವಿಕೆ ಪೂರ್ತಿಗೊಂಡ ಮೇಲೆ ಯಜಮಾನ ತಲೆಗೆ ರುಮಾಲು ಸುತ್ತಿ ಪೂರ್ವಾಭಿಮುಖವಾಗಿ ಎದ್ದು ನಿಂತು ಸಭೆಗೆ ಕೈಮುಗಿದು 'ಸಮಸ್ತರು ಭೋಜನ ಸ್ವೀಕರಿಸಬೇಕು' ಎಂಬುದಾಗಿ ಘೋಷಿಸಿದ ಮೇಲೆಯೇ ಊಟವನ್ನು ಪ್ರಾರಂಭಿಸಬೇಕು. ಭೋಜನ ಪ್ರಾರಂಭಿಸಲು ಹೀಗೆ ಹೇಳುವ ಮುನ್ನ ಬಡಿಸಿ ಆಗಿದ್ದರೂ ಯಾರೂ ಕೈಹಾಕುವಂತಿಲ್ಲ. ಎಲ್ಲರ ಊಟ ಪೂರ್ತಿಯಾಗದೆ, ಯಜಮಾನ 'ಏಳಬಹುದು' ಎಂಬ ಸೂಚನೆ ನೀಡದೆ ಪಂಗ್ತಿ ಬಿಟ್ಟು ಏಳುವಂತಿಲ್ಲ. ಹೀಗೆ ಸೂಚನೆ ಬರುವ ಮೊದಲೇ ಊಟ ಪ್ರಾರಂಭಿಸುವುದು ಅಥವಾ ಊಟವಾದ ಮೇಲೆ ಪಂಗ್ತಿ ಮಧ್ಯೆ ಎದ್ದು ಹೋಗುವುದು ಸಂಭಾವಿತ ಲಕ್ಷಣವಲ್ಲ ಮತ್ತು ಅವರಿಗೇ ಅದು ಅವಮಾನ ಎಂಬ ನಂಬಿಕೆಯಿದೆ. ನೆಂಟರ ಊಟ ತೀರಿದ ಮೇಲೆ, ಆ ಮನೆಗೆ ಸಂಬಂಧಿಸಿದ ಕುಟುಂಬಿಕರ, ವಾಡೆಯವರ ಹಾಗೂ ಆಪ್ತೇಷ್ಟರ ಊಟವಾಗುತ್ತದೆ.

ಬೀಗರ ಊಟೋಪಚಾರವಾಗಿ ಹೊರಡುವ ಪ್ರತಿಯೊಂದು ಸಂದರ್ಭದಲ್ಲೂ ನೆಂಟರು ಎದ್ದು ಪೂರ್ವಪಶ್ಚಿಮಾಭಿಮುಖವಾಗಿ ನಿಂತು, ತಲೆಗೆ ರುಮಾಲು ಸುತ್ತಿ 'ಸಮಸ್ತರು ಹೋಗಿ ಬರುತ್ತೇವೆ' ಎಂದು ಆ ಮನೆಯ ಯಜಮಾನ ಮತ್ತು ಅವರ ಕಡೆಯವರಿಗೆ ಕೈಮುಗಿದು ಹೇಳಬೇಕು. ರುಮಾಲು ಸುತ್ತಿ ನಿಂತ ಅವರೂ ಪ್ರತಿಯಾಗಿ ದ್ವಿಪಕ್ಷೀಯರಿಗೆ 'ದೇವರ ಇಚ್ಛೆ' ಎಂಬುದಾಗಿ ಕೈಮುಗಿದು ಗೌರವ ನೀಡುತ್ತಾರೆ. ಈ ಉಭಯತ್ರ ಬೀಗರು ಒಬ್ಬರಿಗೊಬ್ಬರು ಗೌರವ ನೀಡುವ ಸಂಪ್ರದಾಯವನ್ನು ಕುಡುಬಿಯರು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಾರೆ.

5.4. ವಿವಾಹದ ದಿನ ನಿಶ್ಚಯ :

ವಿವಾಹದ ದಿನ ಮತ್ತು ಮುಹೂರ್ತವನ್ನು ತಾಂಬೂಲ ನಿಶ್ಚಿತಾರ್ಥದ ದಿನವೇ ನಿಶ್ಚಯಿಸಬೇಕು. ಪ್ರಥಮವಾಗಿ ಬ್ರಾಹ್ಮಣ ಪುರೋಹಿತರಲ್ಲಿ ವಿಚಾರಿಸಿ ಎರಡು ಮೂರು

ದಿನ ಮತ್ತು ಮುಹೂರ್ತಗಳನ್ನು ಆಯ್ಕೆ ಮಾಡಲಾಗುತ್ತದೆ. ಕುಟುಂಬದಲ್ಲಿ ಅಥವಾ ಹಾಡಿಯಲ್ಲಿ, ಅಪ್ತೇಷ್ಟರಲ್ಲಿ ಈಗಾಗಲೇ ಒಂದು ಮದುವೆ ನಿಶ್ಚಯ ಆಗಿದ್ದಲ್ಲಿ, ಆ ದಿನವೇ ಇನ್ನೊಂದು ಮದುವೆ ಸಮಾರಂಭ ಇಡುವುದಿಲ್ಲ. ಹುಡುಗಿ, ಧಾರೆ ಎರೆಯುವ ಶಾಸ್ತ್ರದಲ್ಲಿ ಪಾಲ್ಗೊಳ್ಳುವ ಹುಡುಗಿಯ ಹಾಗೂ ಹುಡುಗನ ತಾಯಿಯರ ತಿಂಗಳ ಪಾಳಿಯ ದಿನಗಳನ್ನು ತಪ್ಪಿಸಿ, ದ್ವಿಪಕ್ಷೀಯರಿಗೂ ಅನುಕೂಲವಾಗುವ ದಿನವನ್ನೇ ನಿಗದಿಗೊಳಿಸುತ್ತಾರೆ.

ಮದುವೆ ದಿನವನ್ನು ನಿಶ್ಚಯಿಸುವಾಗ ನಿಶ್ಚಿತ ದಿನ ಕುಟುಂಬಿಕರಿಗೆ ಜನನ ಅಥವಾ ಮರಣದ ಪೊಲೆ ಸೂತಕಗಳು ಇರಬಾರದು. ಇದ್ದರೆ ಅಡುಗೆ ಮತ್ತಿತರ ವೈವಾಹಿಕ ವಿಧಿಗಳಲ್ಲಿ ಅವರು ಭಾಗವಹಿಸುವಂತಿಲ್ಲ. ಗಂಡುಹೆಣ್ಣಿನ ಜನ್ಮನಕ್ಷತ್ರ, ಜನ್ಮರಾಶಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಶನಿವಾರ, ಮಂಗಳವಾರ, ಅಮಾವಾಸ್ಯೆ, ಸಂಕ್ರಮಣದ ಮಾರನೇ ದಿನ (ಸಿಂಗೊಡೆ) ಭರಣಿ, ಕೃತ್ತಿಕೆ, ಗ್ರಹಣ..... ಇತ್ಯಾದಿ ಅಶುಭ ದಿನಗಳಂದು ಮದುವೆಯ ದಿನ ನಿಗದಿಪಡಿಸುವುದಿಲ್ಲ. ಅದೇ ರೀತಿ ಊರಿನ ದೇವಸ್ಥಾನ, ದೈವಸ್ಥಾನಗಳಲ್ಲಿ ಉತ್ಸವ ಮುಹೂರ್ತ ಆಗಿದ್ದಲ್ಲಿ, ಧ್ವಜಾರೋಹಣ, ಬಾಳೆಗೊನೆ ಮುಹೂರ್ತಗಳು ಆಗಿದ್ದಲ್ಲಿ ಆ ಉತ್ಸವಗಳು ಮುಗಿಯದೆ ಮದುವೆಯ ದಿನ ನಿಶ್ಚಯಿಸುವುದಿಲ್ಲ. ತಂದೆ ತಾಯಿ ಅವಸಾನವಾದರೆ ಅಥವಾ ಕುಟುಂಬದಲ್ಲಿ, ಮನೆಯಲ್ಲಿ ಸಮೀಪ ಬಂಧುಗಳು ಮರಣಿಸಿದರೆ ಒಂದು ವರ್ಷದೊಳಗೆ ಮದುವೆಯಾಗಬೇಕು. ಒಂದು ವರ್ಷ ಅವಧಿಯೊಳಗೆ ಮದುವೆ ಆಗದಿದ್ದಲ್ಲಿ ಮೂರು ವರ್ಷ ಕಳೆಯುವವರೆಗೆ ಮದುವೆಯಾಗುವಂತಿಲ್ಲ. ಮೂರು ವರ್ಷ ಕಳೆದ ಮೇಲೆ ಯಾವಾಗಲೂ ಮದುವೆಯಾಗಬಹುದು. ಆದರೆ ತುಳುನಾಡಿನ ಪದ್ಧತಿ ಪ್ರಕಾರ ವರ್ಷದಲ್ಲಿ ಆಟಿ (ಆಷಾಢ) ಒಂದು ತಿಂಗಳು ಮತ್ತು ಕುಡುಬಿ ಸಂಪ್ರದಾಯ ಪ್ರಕಾರ ಪವಿತ್ರವಾದ ಫಾಲ್ಗುಣ ಮಾಸ – ಈ ಎರಡು ತಿಂಗಳುಗಳಲ್ಲಿ ಮದುವೆ ಮಾಡುವಂತಿಲ್ಲ. ಹಿಂದಿನ ಕಾಲದಲ್ಲಿ ಕುಡುಬಿಯರ ಮದುವೆಗಳೆಲ್ಲಾ ಗೋಧೂಳಿ ಲಗ್ನ, ಅಥವಾ ಉದಯ ಲಗ್ನದಲ್ಲಿ ಆಗುತ್ತಿದ್ದವು. ಧಾರೆಯ ಮುಹೂರ್ತವನ್ನು ಪುರೋಹಿತರಲ್ಲಿ ಕೇಳುವ ಕ್ರಮ ಇರಲಿಲ್ಲ. ಗೋಧೂಳಿ ಲಗ್ನ, ಉದಯಲಗ್ನದಲ್ಲಿ ಮದುವೆ ಆಗುವುದು, ವೈದಿಕ ಆಚರಣೆಗಳನ್ನು ಅವಲಂಬಿಸದೇ ಇರುವುದು ಬುಡಕಟ್ಟು ಜನಾಂಗದ ಲಕ್ಷಣ. ಕುಡುಬಿಯರು ಒಂದು ಬುಡಕಟ್ಟು ಜನಾಂಗವಾಗಿ ಇರುವುದರಿಂದಲೇ ಈ ಲಕ್ಷಣಗಳು ಕುಡುಬಿಯರ ಮದುವೆ ಚಡಂಗಗಳಲ್ಲಿ ಕಂಡುಬರುತ್ತವೆ.

5.5. ನಿಶ್ಚಯ ತಾಂಬೂಲ / ಒಪ್ಪು ವೀಳ್ಯ (ಸಾಕ್ಷಿಡೊ) :

ಕುಡುಬಿಯರ ಮದುವೆ ನಿರ್ಣಯ ಸಂಪ್ರದಾಯದಲ್ಲಿ ಹೆಣ್ಣಿನ ಕಡೆಯವರು ತಮ್ಮ ಹೆಣ್ಣನ್ನು ಮದುವೆ ಮಾಡಿಕೊಡುತ್ತೇವೆ ಎಂದು, ಗಂಡಿನ ಕಡೆಯವರು ತಮ್ಮ ಹುಡುಗನಿಗೆ ಆ ಹೆಣ್ಣನ್ನು ಮದುವೆ ಮಾಡಿಕೊಳ್ಳುತ್ತೇವೆ ಎಂದು "ವೀಳ್ಯ ಸಾಕ್ಷಿ"ಯಾಗಿ ಒಪ್ಪುವ ಬಹಳ ಮಹತ್ವದ ಹಂತ ಈ ತಾಂಬೂಲ ನಿಶ್ಚಯ (ಸಾಕ್ಷಿಡೊ). ತಾಂಬೂಲ ನಿಶ್ಚಯ ಆದಲ್ಲಿ, ಕಾಗದ ಪತ್ರಗಳಲ್ಲಿ ಬರಹ ರೂಪದಲ್ಲಿ ಅಥವಾ ಇತರ ಯಾವುದೇ

ರೀತಿಯ ದಾಖಲೆ, ರುಜುವಾತುಗಳ ಅವಶ್ಯಕತೆ ಇರುವುದಿಲ್ಲ. ಹಿರಿಯರ ಉಪಸ್ಥಿತಿಯಲ್ಲಿ ಮತ್ತು ದೇವರ ಸಮ್ಮುಖದಲ್ಲಿ ಮದುವೆಗೆ ಉಭಯಪಕ್ಷಗಳು ನೀಡಿದ ಒಪ್ಪಿಗೆಗೆ ವೀಳ್ಯವೇ ಸಾಕ್ಷಿ. (ಸಾಕ್ಷಿಡೊ=ವೀಳ್ಯ ಸಾಕ್ಷಿ). ಕುಡುಬಿಯರ ಮೂಲಪೀಠ ಗೋವಾದಲ್ಲಿಯೂ ಈ ನಿಶ್ಚಯ ತಾಂಬೂಲದ ಕ್ರಮ ಯಥಾವತ್ ಚಾಲ್ತಿಯಲ್ಲಿದೆ. ಇದಕ್ಕೆ ಅಲ್ಲಿ "ಸಾಕರ್‌ಪುಡೊ" ಅಂತ ಹೆಸರು. ಇದು ಒಂದು ರೀತಿಯಲ್ಲಿ ಅಲಿಖಿತ ಅಧಿಕೃತ ಪ್ರಮಾಣದ ಒಪ್ಪಂದ. ಈ ಸಂಪ್ರದಾಯದಲ್ಲಿ ಗಂಡು ಹೆಣ್ಣಿಗೆ ಮತ್ತು ಹೆಣ್ಣು ಗಂಡಿಗೆ ಉಂಗುರ ತೊಡಿಸುವ ಶಾಸ್ತ್ರ ಕುಡುಬಿಯರಲ್ಲಿಲ್ಲ. ಇತ್ತೀಚೆಗೆ ಕೆಲವು ಕಡೆ ಉಂಗುರ ತೊಡಿಸುವ ಕ್ರಮ ಆಚರಿಸುತ್ತಾರಾದರೂ, ಮೂಲದಲ್ಲಿ ಇದು ಕುಡುಬಿಯರ ಸಂಪ್ರದಾಯ ಅಲ್ಲ.

ನಿಶ್ಚಯ ತಾಂಬೂಲ ಶಾಸ್ತ್ರದ ವಿಧಿಗಳು ನಡೆಯುವುದು ಹೆಣ್ಣಿನ ಮನೆಯಲ್ಲಿ ಮತ್ತು ಇದನ್ನು ನಡೆಸಿಕೊಡುವುದು ಕನ್ಯಾಪಿತೃಗಳ ಜವಾಬ್ದಾರಿ. ವಿವಾಹ ವಾಗ್ದಾನದ ಸಂದರ್ಭ ಗುರಿಕಾರ, ರಾಯಭಾರಿ ಮತ್ತು ಪಂಚರು ಉಪಸ್ಥಿತರಿಲ್ಲದಿದ್ದರೂ, ಕುಟುಂಬ ಸದಸ್ಯರು ಹಾಜರಿದ್ದರೆ ಸಾಕಾಗುತ್ತದೆ. ಆದರೆ ನಿಶ್ಚಯ ತಾಂಬೂಲ ಕ್ರಮಕ್ಕೆ ಇವರೆಲ್ಲರ ಉಪಸ್ಥಿತಿ ಅತ್ಯವಶ್ಯ. ತಾಂಬೂಲ ನಿಶ್ಚಯ ಆದಮೇಲೆ ಹೆಣ್ಣಿನ ಕಡೆಯವರಾಗಲೀ, ಗಂಡಿನ ಕಡೆಯವರಾಗಲೀ, ವೀಳ್ಯ ಸಾಕ್ಷಿ ಪ್ರಕಾರ ಒಪ್ಪಿದ ಮದುವೆಗೆ ತಪ್ಪಲಿಕ್ಕಿಲ್ಲ. ಒಂದು ವೇಳೆ ತಪ್ಪಿದರೆ ಎರಡೂ ವಾಡೆಗಳ ಗುರಿಕಾರರು ತಮ್ಮ ಅಧಿಕಾರ ಚಲಾಯಿಸಿ ತಪ್ಪಿತಸ್ಥರಿಗೆ ದಂಡ ಹಾಕಬಹುದು ಅಥವಾ ದಂಡನೆ ವಿಧಿಸಬಹುದು. ಕುಟುಂಬದೊಳಗಿನ, ವಾಡೆಯೊಳಗಿನ ಅಥವಾ ವಾಡೆ-ವಾಡೆಗಳ ನಡುವಿನ ವೈಮನಸ್ಯಗಳು, ಮನೆಯೊಳಗೇ ತಂದೆ ಮಕ್ಕಳ ಸಮಸ್ಯೆಗಳಿದ್ದಲ್ಲಿ ಅವುಗಳು ಅಂತಿಮ ಹಾಗೂ ಪೂರಕ ಪರಿಹಾರ ಕಾಣದೆ ಗುರಿಕಾರ ರಾಯಭಾರಿಯವರು ತಾಂಬೂಲ ನಿಶ್ಚಯ ಮಾಡಿಕೊಡಲು ಒಪ್ಪುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಆಕ್ಷೇಪಿಸುವ ಅಧಿಕಾರ ಈ ಮುಖಂಡರಿಗಿದೆ. ಆದರೆ ನೆಂಟಸ್ತಿಕೆ ಕುದುರಿದ ಮೇಲೆ ಖಂಡಿತ ಮದುವೆಗೆ ತಪ್ಪುವುದಿಲ್ಲ ಎಂಬ ವಿಶ್ವಾಸವಿದ್ದಲ್ಲಿ ಮತ್ತು ಸಮಯದ ಅಭಾವವಿದ್ದ ಸಂದರ್ಭಗಳಲ್ಲಿ ತಾಂಬೂಲ ನಿರ್ಣಯವನ್ನು ಮದುವೆ ದಿನವೇ, ಮದುವೆ ಚಪ್ಪರದಲ್ಲಿ ನೆರವೇರಿಸುವ ಅನೇಕ ದೃಷ್ಟಾಂತಗಳು ಸಿಗುತ್ತವೆ. ನಿಶ್ಚಯ ತಾಂಬೂಲ ಜರಗಿದ ನಂತರ ಮದುವೆಗೆ ತಪ್ಪಿದಲ್ಲಿ ಹನ್ನೆರಡು ವಾಡೆಗಳ ನ್ಯಾಯ ಕೂಟ ನಡೆಯುವಾಗ ಗುರಿಕಾರರು ನ್ಯಾಯವನ್ನು ಎತ್ತಿಹಿಡಿಯಬಹುದು. ಹಾಗಾಗಿ ನಿಶ್ಚಯ ತಾಂಬೂಲದ ನಂತರ ಸಾಮಾನ್ಯವಾಗಿ ಮದುವೆ ತಪ್ಪುವ ಪ್ರಸಂಗಗಳು ವಿರಳ. ಮದುವೆ ತಪ್ಪಿಸಿದಲ್ಲಿ, ಮುಂದೆ ಇನ್ನೊಂದು ನೆಂಟಸ್ತಿಕೆಗೆ ಹೋಗುವಾಗ ತಪ್ಪಿಸಿದ ವಾಡೆಯವರಿಗೆ ಅವಮಾನವಾಗುವ ಸಂದರ್ಭಗಳಿರುತ್ತವೆ. ಇನ್ನೊಂದೆಡೆ ದೈವದೇವರ ಅವಕೃಪೆಗೆ ಒಳಗಾಗುವ ಭೀತಿಯೂ ಇರುತ್ತದೆ. ನಿಶ್ಚಯ ತಾಂಬೂಲವಾದ ಮೇಲೂ ಮದುವೆ ತಪ್ಪುವಂತಹ ಸನ್ನಿವೇಶಗಳು ಇಲ್ಲವೆಂದಲ್ಲ. ಅಂತಹ ಸಂದರ್ಭಗಳು ಕಡಿಮೆ. ಈ ರೀತಿ ನಿಶ್ಚಯ ತಾಂಬೂಲದ ನಂತರ ಮದುವೆ ತಪ್ಪುವುದು ಕುಟುಂಬ-ಕುಟುಂಬಗಳೊಳಗೆ, ವಾಡೆ-ವಾಡೆಗಳೊಳಗೆ ಅಸಮಾಧಾನಕ್ಕೆ ಕಾರಣವಾಗುತ್ತದೆ.

ವಾಡೆಗಳಲ್ಲಿನ ಮನೆಗಳು ದೂರ ದೂರ ಪ್ರದೇಶಗಳಲ್ಲಿ ಹರಡಿಕೊಂಡಿದ್ದು ಜನಸಂಖ್ಯೆ ಜಾಸ್ತಿ ಇರುವ ವಾಡೆಗಳಲ್ಲಿ ಅಥವಾ ಒಂದೇ ದಿನ ವಾಡೆಯಲ್ಲಿ ಒಂದಕ್ಕಿಂತ ಹೆಚ್ಚು ತಾಂಬೂಲ ನಿಶ್ಚಿತಾರ್ಥ ಆಗುವುದಿದ್ದಲ್ಲಿ ಗುರಿಕಾರ ರಾಯಭಾರಿಯವರಿಗೆ ಆ ಎಲ್ಲಾ ಕಡೆಗಳಲ್ಲಿ ಭಾಗವಹಿಸಲು ಕಷ್ಟವಾಗುತ್ತದೆ. ಆದುದರಿಂದ ಕೆಲವು ವಾಡೆಗಳಲ್ಲಿ ಈ ಸಂಪ್ರದಾಯ ಗುರಿಕಾರರ ಮನೆಯಲ್ಲೇ ಜರಗುತ್ತದೆ. ಕೆಲವು ಕಡೆ ಸ್ಥಳದ ಗೌರವ ಸೂಚಕವಾಗಿಯೂ ತಾಂಬೂಲ ನಿಶ್ಚಿತಾರ್ಥ ಗುರಿಕಾರರ ಮನೆಯಲ್ಲೇ ಜರಗುವ ಕ್ರಮವಿದೆ. ಇಂತಹ ಸಂದರ್ಭಗಳಲ್ಲಿ ಮದುವೆ ವ್ಯವಸ್ಥೆಯ ಪೂರಕ ಮಾತುಕತೆ ಹಾಗೂ ನಿಶ್ಚಿತಾರ್ಥದ ಬೀಗರೂಟ ಹೆಣ್ಣಿನ ಮನೆಯಲ್ಲಿ ಜರಗುತ್ತದೆ.

ತಾಂಬೂಲ ನಿಶ್ಚಿತಾರ್ಥಕ್ಕೆ ಹೆಣ್ಣಿನ ಕಡೆಯವರು ಗಂಡಿನ ಕಡೆಯವರಿಗೆ ಆಮಂತ್ರಣ ನೀಡಬೇಕು. ಇಂತಹದೇ ದಿನ ಎಂಬುದಾಗಿ ಹೆಣ್ಣಿನ ಮಾತಾಪಿತೃಗಳು ಅವರ ದೇವರ ಮನೆಯ ಹಿರಿಯ, ಗುರಿಕಾರ ರಾಯಭಾರಿ ಹಾಗೂ ಸಂಬಂಧಪಟ್ಟ ಆಪ್ತೇಷ್ಟರೊಂದಿಗೆ ಚರ್ಚಿಸಿ ಗಂಡಿನ ಕಡೆಯವರಿಗೆ ತಿಳಿಸಬೇಕು. ಗಂಡಿನ ಕಡೆಯವರೂ ಒಪ್ಪಿದಲ್ಲಿ ತಾಂಬೂಲ ನಿಶ್ಚಿತಾರ್ಥದ ದಿನ ನಿಗದಿಯಾದಂತೆ. ಈ ದಿನವೂ ಶುಭಕರ ದಿನವಾಗಿರಬೇಕು. ಹೆಚ್ಚಾಗಿ ಗಂಡಿನ ಕಡೆಯವರಿಗೆ ಆ ಆಮಂತ್ರಣವನ್ನು ಹೆಣ್ಣಿನ ಕಡೆಯವರು ಗಂಡಿನ ಮನೆಯಲ್ಲಿ ವಿವಾಹ ವಾಗ್ದಾನವಾದ ದಿನವೇ ನೀಡುತ್ತಾರೆ.

ಇದರ ನಂತರ ಕನ್ಯಾಪಿತೃಗಳು ಆದ್ಯತೆಯ ಕ್ರಮದಲ್ಲಿ ಪ್ರಥಮವಾಗಿ ಹೆಣ್ಣಿನ ಸೋದರ ಮಾವನಿಗೆ ವೀಳ್ಯಪಟ್ಟ ನೀಡಿ ತಾಂಬೂಲ ನಿಶ್ಚಿತಾರ್ಥಕ್ಕೆ ಆಮಂತ್ರಿಸುತ್ತಾರೆ. ಇಲ್ಲಿ ಸೋದರ ಮಾವನ ಒಪ್ಪಿಗೆ ಅತೀ ಅವಶ್ಯ. ಯಾಕೆಂದರೆ ಸೋದರ ಮಾವನ ಮಗ ಸೋದರತ್ತೆಯ ಮಗಳನ್ನು ಅಧಿಕಾರದಿಂದ ಕೇಳುವವ. ಸೋದರಮಾವನ ಒಪ್ಪಿಗೆ ಇಲ್ಲದೆ ನಡೆದ ನಿಶ್ಚಿತಾರ್ಥಗಳು ಮುರಿದು ಬಿದ್ದ ಉದಾಹರಣೆಗಳಿವೆ. ಸೋದರ ಮಾವನ ನಂತರ ದೇವರ ಮನೆಯ ಹಿರಿಯ ವ್ಯಕ್ತಿ, ಅಜ್ಜ, ಕುಟುಂಬ ದಾಯಾದಿಗಳು ಮತ್ತು ಹತ್ತಿರ ಸಂಬಂಧಿ ನೆಂಟರಿಷ್ಟರಿಗೆ ತಾಂಬೂಲ ನಿಶ್ಚಿತಾರ್ಥದ ಆಮಂತ್ರಣ ನೀಡುತ್ತಾರೆ. ತಾಂಬೂಲ ನಿಶ್ಚಿತಾರ್ಥವನ್ನು ಗುರಿಕಾರ ರಾಯಭಾರಿಯವರ ಸಮ್ಮುಖದಲ್ಲಿ, ಗುರಿಕಾರ ರಾಯಭಾರಿಯವರೇ ಖುದ್ದು ನಿಂತು ನಡೆಸಿಕೊಡುವ ಕಾರ್ಯಕ್ರಮ. ಇವರೆಲ್ಲರಿಗೆ ಅವರ ಮನೆಗೇ ಹೋಗಿ, ವೀಳ್ಯ ನೀಡಿ, ಕಾಲಿಗೆರಗಿ ಕನ್ಯಾಪಿತೃ ಆಮಂತ್ರಿಸುವುದು ಸಂಪ್ರದಾಯ. ಗಂಡಿನ ಕಡೆಯವರೂ ಇದೇ ಕ್ರಮದಲ್ಲಿ ತಮ್ಮವರನ್ನು ಆಮಂತ್ರಿಸುತ್ತಾರೆ.

ಕುಡುಬಿಯರ ಸಂಪ್ರದಾಯ ಪ್ರಕಾರ ವೀಳ್ಯ ಸಾಕ್ಷಿಯಾಗಿ ತಾಂಬೂಲ ನಿಶ್ಚಯದ ಕ್ರಮ ಅವರ ಅರ್ಧ ಮದುವೆ ಆದಂತೆ. ನಿಶ್ಚಯ ತಾಂಬೂಲ ಕ್ರಮಕ್ಕೆ ಗಂಡು, ಹೆಣ್ಣಿನ ಮನೆಗೆ ಹೋಗುವುದು, ಒಪ್ಪ ವೀಳ್ಯದಲ್ಲಿ ಭಾಗವಹಿಸುವುದು ಮತ್ತು ಹೆಣ್ಣಿನ ಮನೆಯಲ್ಲಿ ಆ ದಿನದ ಭೋಜನ ಸ್ವೀಕರಿಸುವ ಕ್ರಮವಿಲ್ಲ. ಹಿರಿಯರು ನಿಶ್ಚಯ ಮಾಡುವ ಮದುವೆ ಸಂಬಂಧವನ್ನು ಗಂಡು ಒಪ್ಪುತ್ತಾನೆ ಎಂಬುದಕ್ಕೆ ಇದು ನಿದರ್ಶನ.

ತಾಂಬೂಲ ನಿಶ್ಚಿತಾರ್ಥದ ತಯಾರಿಗಳನ್ನು ಹೆಣ್ಣಿನ ಕಡೆಯವರು ವಿವಾಹ ವಾಗ್ದಾನವಾದ ದಿನದಿಂದಲೇ ಪ್ರಾರಂಭಿಸಿರುತ್ತಾರೆ. ತಾಂಬೂಲ ನಿರ್ಣಯದಂದಿನ ಅಡುಗೆ ಸಾಮಗ್ರಿಗಳನ್ನು ಕಲೆಹಾಕಲು ಪ್ರಾರಂಭಿಸಿರುತ್ತಾರೆ. ಹುಡುಗನ ಕಡೆಯವರೂ ಅವರ ಕಡೆಯ ಗುರಿಕಾರ ರಾಯಭಾರಿ, ಪಂಚರು, ಸಮೀಪ ಬಂಧುಗಳನ್ನು ಮತ್ತು ವಾಡೆಕಾರರನ್ನು ನಿಶ್ಚಿತ ದಿನದಂದು ಹೆಣ್ಣಿನ ಮನೆಗೆ ಕರೆದುಕೊಂಡು ಬರುತ್ತಾರೆ. ಮಧ್ಯಾಹ್ನಕ್ಕೆ ಮೊದಲು ಈ ಸಂಪ್ರದಾಯ ಜರಗಬೇಕೆಂಬ ನಂಬಿಕೆ ಇರುವುದರಿಂದ ಈ ಕಾರ್ಯವನ್ನು ಬೆಳಗ್ಗಿನ ಹೊತ್ತಿನಲ್ಲಿಯೇ ಇಡುತ್ತಾರೆ. ಮಧ್ಯಾಹ್ನ ನಂತರ ಈ ಕ್ರಮ ಜರಗಿಸುವುದು ಶ್ರೇಯಸ್ಕರವಲ್ಲ ಎಂಬ ನಂಬಿಕೆ ಇದೆ. ಜನಸಂಖ್ಯಾ ಬಾಹುಳ್ಯವಿರುವ ವಾಡೆಗಳಲ್ಲಿ ನಾಲ್ಕೈದು ನಿಶ್ಚಿತಾರ್ಥಗಳು ಒಂದೇ ದಿನ ಜರಗುವುದುಂಟು.

ನೆಂಟರು ಹುಡುಗಿಯ ಮನೆಗೆ ಬರುವಾಗ ಹುಡುಗಿಯ ತಂದೆ ಅಥವಾ ಅವಳ ಮದುವೆ ಮಾಡುವ ಅಧಿಕಾರ ಹೊಂದಿದ ಯಜಮಾನನು ಅವರನ್ನು ಕೈಮುಗಿದು ಸ್ವಾಗತಿಸಿ, ಕಾಲು ತೊಳೆಯಲು ನೀರು ನೀಡಿ ಬರಮಾಡಿಕೊಳ್ಳಬೇಕು. ಅವರನ್ನು ಮನೆಯೊಳಗೆ ಅಥವಾ ಚಪ್ಪರದಲ್ಲಿ ಕುಳ್ಳಿರಿಸಬೇಕು. ಬಾಯಾರಿಕೆಗೆ ಬೆಲ್ಲನೀರು, ಕವಳ ನೀಡಿ ಗೌರವದಿಂದ ಉಪಚರಿಸಬೇಕು. ಸಾಧ್ಯವಾದರೆ ಫಲಾಹಾರ ನೀಡಿಯೂ ಸತ್ಕರಿಸಬೇಕು. ಆ ನಂತರ ದ್ವಿಪಕ್ಷೀಯ ಗುರಿಕಾರರ ಮುಖಾಂತರ ಅಥವಾ ಮಾತುಗಾರಿಕೆಯಲ್ಲಿ ಪಳಗಿದ ಹಿರಿಯರ ಮುಖಾಂತರ ಮಾತುಗಾರಿಕೆ ಪ್ರಾರಂಭವಾಗುತ್ತದೆ. ತಾಂಬೂಲ ನಿಶ್ಚಿತಾರ್ಥಕ್ಕೆ ಮಹಿಳೆಯರು ಹೋಗುವುದು ಅಥವಾ ಮಾತುಗಾರಿಕೆಯಲ್ಲಿ ಭಾಗವಹಿಸುವ ಕ್ರಮವಿಲ್ಲ.

ಉಭಯ ಕಡೆಯ ಯಜಮಾನರು ನೆಂಟಸ್ತಿಕೆಯ, ವಿವಾಹ ವಾಗ್ದಾನದ ವಿಷಯ ಸಭೆಯ ಮುಂದಿಡುತ್ತಾರೆ ಮತ್ತು ತಾಂಬೂಲ ನಿಶ್ಚಯಕ್ಕೆ ಒಪ್ಪಿಗೆ ಕೇಳುತ್ತಾರೆ. ಎರಡೂ ಕಡೆಯ ಗುರಿಕಾರ ರಾಯಭಾರಿಯವರು ಗಂಡು ಮತ್ತು ಹೆಣ್ಣಿನ ಪಕ್ಷವವರ ಒಪ್ಪಿಗೆಯಿದೆ ಎಂದು ಮನವರಿಕೆ ಮಾಡಿಕೊಂಡ ಮೇಲೆ ತಾಂಬೂಲ ನಿಶ್ಚಿತಾರ್ಥಕ್ಕೆ ಪರವಾನಗಿ ನೀಡುತ್ತಾರೆ. ಹೆಣ್ಣಿನ ಕಡೆಯ ಯಜಮಾನನು ಎಲ್ಲರನ್ನು ಮನೆಯೊಳಗೆ ಕರೆದು ಚಾಪೆ ಹಾಸಿ ಕುಳ್ಳಿರಿಸುತ್ತಾನೆ. ನಡುವೆ ಒಂದೇ ಚಾಪೆ ಹಾಸಿ ಅದರಲ್ಲಿ ಎರಡೂ ಕಡೆಯ ಯಜಮಾನರು ಕೂರುತ್ತಾರೆ. ಇಲ್ಲಿ ಯಜಮಾನರು ಅಂದರೆ ಧಾರೆ ಎರೆಯುವ ಮತ್ತು ಎರೆಸಿಕೊಳ್ಳುವ ಅಧಿಕಾರ ಹೊಂದಿದವರು. ತಂದೆಯ ಅನುಪಸ್ಥಿತಿಯಲ್ಲಿ ಗಂಡು ಹೆಣ್ಣಿನ ಸೋದರಮಾವ, ಚಿಕ್ಕಪ್ಪ ದೊಡ್ಡಪ್ಪ ಅಥವಾ ವಿವಾಹಿತ ಹಿರಿಯ ಸಹೋದರ ಯಜಮಾನಿಕೆ ವಹಿಸಬಹುದು. ಹಿರಿಯ ಸಹೋದರ ಮತ್ತು ಆತನ ಪತ್ನಿಗೆ ತಂದೆತಾಯಿಯ ಸಮಾನ ಗೌರವವನ್ನು ಕುಡುಬಿಯರು ನೀಡುತ್ತಾರೆ. ಧಾರೆ ಎರೆಯುವ, ಎರೆಸಿಕೊಳ್ಳುವ ಯಜಮಾನರುಗಳೇ ತಾಂಬೂಲ ನಿಶ್ಚಿತಾರ್ಥದ ವಿಧಿಗಳನ್ನು ನೆರವೇರಿಸಬೇಕು.

ಯಜಮಾನರಿಬ್ಬರೂ ಎರಡು ಪ್ರತ್ಯೇಕ ಹರಿವಾಣ ಅಥವಾ ಕಂಚಿನ ಬಟ್ಟಲುಗಳಲ್ಲಿ ತಮ್ಮ ತಮ್ಮ ಐದೈದು ವೀಳ್ಯಪಟ್ಟ (5 ವೀಳ್ಯದೆಲೆ + 1 ಅಡಕೆ) ಇಟ್ಟು ಅದರ ಮೇಲೆ ಮಲ್ಲಿಗೆ -ಅಬ್ಬಲಿಗೆ ಹೂವು, ಕುಂಕುಮ ಮುಂತಾದ ಮಂಗಲದ್ರವ್ಯಗಳನ್ನು ಇರಿಸುತ್ತಾರೆ. ಗುರಿಕಾರರ, ಇಲ್ಲಿ ಮುಖ್ಯವಾಗಿ ಹೆಣ್ಣಿನ ಕಡೆಯ ಗುರಿಕಾರರ ಸೂಚನೆ ಪ್ರಕಾರ ಎಲ್ಲರೂ ಎದ್ದು ನಿಲ್ಲುತ್ತಾರೆ. ಇಬ್ಬರೂ ಯಜಮಾನರು ದೇವರಿಗೆ, ದೈವಾದಿಗಳಿಗೆ ಮತ್ತು ತುಳಸೀಕಟ್ಟೆಯಲ್ಲಿ ವೀಳ್ಯಪಟ್ಟ ಇಟ್ಟು ತಾಂಬೂಲ ನಿಶ್ಚಯಕ್ಕೆ ಆಶೀರ್ವಾದ ಬೇಡುತ್ತಾರೆ. ಯಜಮಾನರು ಎದ್ದುನಿಂತು ಹೆಣ್ಣಿನ ಯಜಮಾನ ಪೂರ್ವಾಭಿಮುಖವಾಗಿ, ಅವನಿಗೆ ಎದುರಾಗಿ ಗಂಡಿನ ಯಜಮಾನ ನಡುವೆ ಹಾಕಿದ ಒಂದೇ ಚಾಪೆಯ ಮೇಲೆ ನಿಲ್ಲುತ್ತಾರೆ. ಈ ಒಪ್ಪು ವೀಳ್ಯದ ವಿಧಿಗೆ ತಾಂಬೂಲ ಹಿಡಿದ ಎರಡೂ ಕಡೆಯ ಯಜಮಾನರು ಒಂದೇ ಚಾಪೆಯ ಮೇಲೆ ನಿಲ್ಲಬೇಕೆಂಬ ನಿಯಮವಿದೆ. ಪ್ರಥಮವಾಗಿ ಹೆಣ್ಣಿನ ಕಡೆಯ ಗುರಿಕಾರ, ದೇವರ ಮನೆಯ ಹಿರಿಯವ್ಯಕ್ತಿ ಅಥವಾ ಉಪಸ್ಥಿತರಿದ್ದವರ ಪೈಕಿ ಹಿರಿಯ ಅನುಭವಿ 'ನಮ್ಮ ಗುರು ಹಿರಿಯರು ಪಾಲಿಸಿಕೊಂಡು ಬಂದ ಧರ್ಮ ಮತ್ತು ಸಂಪ್ರದಾಯ ಪ್ರಕಾರ, ಈ ದಿವಸ ತಾಂಬೂಲ ನಿಶ್ಚಿತಾರ್ಥ ನಡೆಸಿಕೊಡುತ್ತಿದ್ದೇವೆ. ಮದುವೆ ಕಾರ್ಯಕ್ಕೆ ಯಾವುದೇ ವಿಘ್ನಗಳು ಬರದ ರೀತಿ ನಾವು ನಂಬಿ ಆರಾಧಿಸಿಕೊಂಡು ಬಂದಿರುವ ದೇವರು ದೈವಾದಿಗಳು ಕೃಪೆ ಒದಗಿಸಬೇಕು. ಈ ದಿವಸ ದೇವರ ಹೆಸರಲ್ಲಿ ನಾವು ನೀಡಿದ ಮಾತಿಗೆ ಈ ವೀಳ್ಯವೇ ಸಾಕ್ಷಿ. ಈ ಮಾತಿಗೆ ತಪ್ಪುವುದಿಲ್ಲ. ಮುಂದಿನ ಲಗ್ನದ ಶುಭಕಾರ್ಯ ಯಶಸ್ವಿಯಾಗಿ ನೆರವೇರುವಂತೆ ದೇವರು ನಮಗೆ ಅನುಗ್ರಹಿಸಬೇಕು' ಎಂಬುದಾಗಿ ಪ್ರಾರ್ಥಿಸುತ್ತಾರೆ. ನಿಶ್ಚಯ ತಾಂಬೂಲದಲ್ಲಿ ಕೊಟ್ಟ ಮಾತಿಗೆ ತಪ್ಪುವುದಿಲ್ಲ ಎಂದು ಗಂಡಿನ ಕಡೆಯವರೂ ಇದೇ ಮಾತುಗಳನ್ನು ಪುನರುಚ್ಚರಿಸುತ್ತಾರೆ. ಇಬ್ಬರೂ ಗುರಿಕಾರರು ವೀಳ್ಯದ ಹರಿವಾಣಗಳನ್ನು ಆಯಾಯ ಯಜಮಾನರ ಕೈಯಲ್ಲಿ ನೀಡುತ್ತಾರೆ. ಯಜಮಾನರು ಆ ಹರಿವಾಣಗಳನ್ನು ಹಿಡಿದುಕೊಂಡು ನಿಂತಲ್ಲೇ ಪಂಚಪ್ರದಕ್ಷಿಣೆಗಳನ್ನು ಹಾಕುತ್ತಾರೆ. ಈರ್ವರೂ ತಮ್ಮ ಕಡೆಯವರಲ್ಲಿ ವೀಳ್ಯ ಬದಲಾಯಿಸಲು ಒಪ್ಪಿಗೆ ಕೇಳುತ್ತಾರೆ. ಪ್ರಥಮದಲ್ಲಿ ಹೆಣ್ಣಿನ ಕಡೆಯ ಯಜಮಾನ ಸಭೆಗೆ ಕೈಮುಗಿದು 'ಸಮಸ್ತರೆಲ್ಲಾ ಕೇಳಿ, ಒಪ್ಪು ವೀಳ್ಯ ನೀಡುತ್ತೇನೆ' ಎಂಬುದಾಗಿ ಹೇಳುತ್ತಾನೆ. ಇದೇ ರೀತಿ ಗಂಡಿನ ಕಡೆಯ ಯಜಮಾನನೂ ತನ್ನ ಗುರಿಕಾರ ರಾಯಭಾರಿ, ಆಪ್ತೇಷ್ಟರಲ್ಲಿ ಒಪ್ಪಿಗೆ ಪಡೆದು, ಸಭೆಗೆ ಕೈಮುಗಿದು 'ಸಮಸ್ತರೆಲ್ಲಾ ಕೇಳಿ, ಒಪ್ಪು ವೀಳ್ಯ ಪಡೆಯುತ್ತೇನೆ' ಎಂಬುದಾಗಿ ಹೇಳುತ್ತಾನೆ. ಹೆಣ್ಣಿನ ಯಜಮಾನ ಬಲಗೈಯಿಂದ ಮೇಲ್ಗಡೆಯಿಂದ, ಗಂಡಿನ ಯಜಮಾನ ಬಲಗೈಯಿಂದ ಕೆಳಗಡೆಯಿಂದ ವೀಳ್ಯದ ಹರಿವಾಣಗಳನ್ನು ಒಬ್ಬರಿಗೊಬ್ಬರು ಬದಲಾಯಿಸುವಾಗ ಇಬ್ಬರೂ ಎಡಗೈಗಳಿಂದ ಸ್ವೀಕರಿಸುತ್ತಾರೆ. ಈ ಕ್ರಮದಲ್ಲಿ ವೀಳ್ಯದ ಹರಿವಾಣಗಳು ಐದು ಬಾರಿ ಅದಲುಬದಲಾಗುತ್ತವೆ. ಐದನೇ ಬಾರಿ ಬದಲಾಯಿಸಿದಾಗ ಹೆಣ್ಣಿನ ಕಡೆಯ ಹರಿವಾಣ ಗಂಡಿನ ಯಜಮಾನನಲ್ಲಿಯೂ, ಗಂಡಿನ ಕಡೆಯ ಹರಿವಾಣ ಹೆಣ್ಣಿನ ಯಜಮಾನನಲ್ಲಿಯೂ ಅದಲುಬದಲಾಗಿ ಉಳಿಯುತ್ತವೆ. ಆ ಹರಿವಾಣಗಳನ್ನು ಅವರು ಚಾಪೆಯ ಮೇಲಿರಿಸುತ್ತಾರೆ

ಹಾಗೂ ಎಲ್ಲರೂ ಕುಳಿತುಕೊಳ್ಳುತ್ತಾರೆ. ಈ ರೀತಿ ಹರಿವಾಣಗಳನ್ನು ಬದಲಾಯಿಸುತ್ತಿರುವಾಗ ಹರಿವಾಣಗಳಲ್ಲಿನ ಮಂಗಲವಸ್ತುಗಳು ಕೆಳಗೆ ಬೀಳದಂತೆ ಜಾಗ್ರತೆ ವಹಿಸಬೇಕು. ಕೆಳಗೆ ಬಿದ್ದರೆ ಅಪಶಕುನ ಎಂಬ ನಂಬಿಕೆ ಇದೆ.

ಎರಡೂ ಹರಿವಾಣಗಳಿಂದ ಸ್ವಲ್ಪ ಸ್ವಲ್ಪ ಹೂವು ಹಾಗೂ ಕುಂಕುಮ ತೆಗೆದು ಮದುವೆ ಹೆಣ್ಣಿಗೆ ಕೊಡಲಾಗುತ್ತದೆ. ಎರಡೂ ಹರಿವಾಣಗಳಿಂದ ಒಂದೊಂದು ಅಡಿಕೆಗಳನ್ನು ಹೋಳು ಮಾಡಿ ಎಲ್ಲರೂ ಕವಳ ಹಾಕುತ್ತಾರೆ. ಹೀಗೆ ಕವಳ ಹಾಕುವುದು ತಾಂಬೂಲ ನಿಶ್ಚಯದ ಗೌರವದ ಸಂಕೇತ. ಕವಳ ಹಾಕಿದಲ್ಲಿ ಮದುವೆ ನಿಶ್ಚಯವಾಗಿರುವುದು ಎಲ್ಲರಿಗೆ ಸಮ್ಮತ ಅಂತ ಲೆಕ್ಕ. ನಂತರ ಎರಡೂ ಕಡೆಯ ಯಜಮಾನರು ದ್ವಿಪಕ್ಷೀಯ ಗುರಿಕಾರ ರಾಯಭಾರಿಯವರಿಗೆ, ಪಂಚರಿಗೆ, ಸೋದರ ಮಾವಂದಿರು, ಹಿರಿಯರು, ಹೊಸನೆಂಟರು (ಬೀಗರು) ಹಾಗೂ ನೆಂಟಸ್ತಿಕೆಗೆ ಕಾರಣರಾದ ಸಮಸ್ತರಿಗೆ ವೀಳ್ಯಪಟ್ಟಿ ನೀಡಿ, ಕೈಮುಗಿದು ಗೌರವ ನೀಡುತ್ತಾರೆ. ಇದಾದ ಮೇಲೆ ಮದುವೆ ವ್ಯವಸ್ಥೆಯ ಬಗ್ಗೆ ತೀರ್ಮಾನಗಳ ಮಾತುಕತೆಗೆ ಪ್ರಾರಂಭಿಸುತ್ತಾರೆ. ಈ ಮಾತುಕತೆ ಒಂದು ಹಂತಕ್ಕೆ ತಲುಪದೆ ಯಾರೂ ಕುಳಿತಲ್ಲಿಂದ ಏಳಲಿಕ್ಕಿಲ್ಲ. ಕುಳಿತವರಿಗೆ ಮಾತುಕತೆ ನಡೆಸುವಾಗ ಕವಳ ಹಾಕಲು ಧಾರಾಳ ವ್ಯವಸ್ಥೆ ಇರುತ್ತದೆ. ಅವರಿಗೆ ಕವಳ ರಸ ಉಗುಳಲು ಅಲ್ಲಿಯೇ ಪೀಕದಾನಿಯನ್ನು ಇಟ್ಟಿರುತ್ತಾರೆ. ಪೀಕದಾನಿ ಇಲ್ಲದ ಕಡೆಗಳಲ್ಲಿ ಅಡಿಕೆಗಿಡಗಳಿಗೆ ನೀರು ಹಾಯಿಸುವ ಕೈದಂಬೆ ಅಥವಾ ಅಡಿಕೆ ಹಾಳೆಗಳಲ್ಲಿ ಭತ್ತದ ಹೊಟ್ಟು ಹಾಕಿ ಇಟ್ಟಿರುತ್ತಾರೆ. ಮಾತುಕತೆಯಲ್ಲಿ ಒಬ್ಬರಿಂದೊಬ್ಬರು ಮಿಗಿಲಾಗಬೇಕೆಂದು ಮಾತಿನ ಪ್ರೌಢಿಮೆ ತೋರಿಸುವುದುಂಟು. ಮಾತಿನಲ್ಲಿ ತರ್ಕಗಳು ಉಂಟಾದರೆ ತುಂಬಾ ಸಮಯ ವ್ಯರ್ಥವಾಗುವುದು ಮತ್ತು ತರ್ಕ ವಿತರ್ಕದ ಹಾದಿ ಹಿಡಿದು ಅತಿರೇಕಕ್ಕೆ ತಲುಪಿ, ಒಬ್ಬರಿಂದೊಬ್ಬರ ಚಾರಿತ್ರ್ಯಹನನವಾಗಿ ಸಭೆಯಿಂದ ಎದ್ದು ಹೋಗುವ ಸಂದರ್ಭಗಳೂ ಇಲ್ಲದಿಲ್ಲ. ಈ ಹಂತದಲ್ಲೂ ನೆಂಟಸ್ತಿಕೆ ಕಡಿದುಹೋಗುವ ಸಂಭವವಿದೆ.

ಮಾತುಕತೆಯಲ್ಲಿ ಹಲವು ವಿಚಾರಗಳ ಬಗ್ಗೆ ಚರ್ಚೆಯಾಗುತ್ತದೆ. ಕುಡುಬಿಯರಲ್ಲಿ ಹೆಣ್ಣಿನ ಮನೆಯಲ್ಲಿ ಮದುವೆ ಸಮಾರಂಭ ಜರಗಿಸುವುದೇ ಸರಿಯಾದ ಸಂಪ್ರದಾಯ. ಆದರೆ ಕೆಲವು ಸಂದರ್ಭಗಳಲ್ಲಿ ಅನುಕೂಲ ಮತ್ತು ಪ್ರತಿಷ್ಠೆಗಾಗಿ ಗಂಡಿನ ಮನೆಯಲ್ಲೇ ಸಮಾರಂಭ ಜರಗಬೇಕೆಂಬ ವಾದ ಬೀಳುತ್ತದೆ. ಹೆಣ್ಣಿನ ಕಡೆಯವರು ಮದುವೆ ಸಮಾರಂಭದ ಖರ್ಚುಗಳನ್ನು ಸರಿದೂಗಿಸಲು ಆರ್ಥಿಕವಾಗಿ ಅಸಮರ್ಥರಾದರೆ, ಅವರಿಗೆ ಜನಬೆಂಬಲದ ಕೊರತೆಯಿದ್ದರೆ, ಸ್ಥಳಾವಕಾಶ ಕಡಿಮೆ ಇದ್ದರೆ, ಸಾಮಗ್ರಿ ಸಂಗ್ರಹಣೆಗೆ ಅಶಕ್ತರಾದರೆ ಗಂಡಿನ ಮನೆಯಲ್ಲೂ ಮದುವೆ ಜರಗುತ್ತದೆ. ಕೆಲವು ಸಂದರ್ಭಗಳಲ್ಲಿ ಗಂಡಿನವರು ತಮ್ಮ ದೌಲತ್ತು ತೋರಿಸಲು ತಮ್ಮ ಮನೆಯಲ್ಲೇ ಮದುವೆ ಜರಗಬೇಕೆಂದು ಹಠಹಿಡಿಯುವುದುಂಟು. ಮದುವೆ ಸಮಾರಂಭ ಎಲ್ಲಿ ಜರಗಿಸುವುದು? ಮದುವೆಗೆ

ಸೇರಬಹುದಾದ ಜನಸಂಖ್ಯೆ ಎಷ್ಟು ? ಎಷ್ಟು ಜನಕ್ಕೆ ಯಾವ ರೀತಿಯ ಅಡುಗೆ? ತಾಲಿಗ, ನಾಂದಿ, ದಿಬ್ಬಣ ಸ್ವಾಗತ, ಬಿಡದಿ ಮನೆಯೂಟ (ಗಂಜಿ ಊಟ), ದಿಬ್ಬಣ ಆಹ್ವಾನ ನಿರ್ಣಯ, ಗಂಡಿನ ಕಡೆಯಿಂದ ಅರಸಿನ ಬಾಗಿನ ಕಳುಹಿಸುವಿಕೆ, ಧಾರೆಯ ವ್ಯವಸ್ಥೆ, ಮುಯ್ಯಿ ಉಡುಗೊರೆಗಳು, ಅಕ್ಷತಾ ಬಟ್ಟಲು, ಬಲಗೊಡೆಯರ ಮರುವರಿ, ಔತಣ, ತ್ರೈಲಾಭ್ರಂಜನ, ಮರುಸೇಸೆ, ಪಂಚಾವರ್ತನ.... ಇತ್ಯಾದಿ ಹಲವು ವಿಚಾರಗಳ ಅಂತಿಮ ತೀರ್ಮಾನಕ್ಕಾಗಿ ಚರ್ಚೆ ನಡೆಯುತ್ತದೆ. ಇಲ್ಲಿ ಚರ್ಚೆಗೆ ಒಳಗಾಗದ ಕುತೂಹಲಕರ ವಿಷಯವೆಂದರೆ ವರದಕ್ಷಿಣೆ ಮಾತ್ರ. ಕುಡುಬಿಯರಲ್ಲಿ ಗಂಡನ್ನು ಕ್ರಯಕ್ಕೆ ಪಡೆಯುವ ಸಾಮಾಜಿಕ ಪಿಡುಗು ವರದಕ್ಷಿಣೆಯ ಸಂಪ್ರದಾಯವೇ ಇಲ್ಲ. ಬದಲಿಗೆ ಸಾಂಕೇತಿಕ ಮೌಲ್ಯ ಮತ್ತು ವಸ್ತು ರೂಪೀ ತೆರ ಅಥವಾ ವಧುದಕ್ಷಿಣೆಯ ಸಂಪ್ರದಾಯ ಚಾಲ್ತಿಯಲ್ಲಿದೆ. ಆದರೆ ಈ ವಿಷಯ ಇಲ್ಲಿ ಚರ್ಚೆಗೊಳಪಡುವುದಿಲ್ಲ. ವರನೇ ವಧುವಿಗೆ ಬೇಕಾದ ಧಾರೆ ಸೀರೆ, ಮೇಲುಸೀರೆ, ಮಾಂಗಲ್ಯ ಮತ್ತಿತರ ಪೂರಕ ಪ್ರಸಾಧನ ಸಾಮಗ್ರಿಗಳನ್ನು ಕೊಡಬೇಕು. ಧಾರೆಯ ವಿಧಿಯ ಖರ್ಚು ಸಹಿತ ವರನ ಕಡೆಯವರೇ ಭರಿಸಬೇಕು. ಈ ಎಲ್ಲಾ ಸಂಗತಿಗಳು ತಾಂಬೂಲ ನಿಶ್ಚಿತಾರ್ಥದ ಮಾತುಕತೆಯಲ್ಲಿ ವಿಚಾರವಿನಿಮಯವಾಗಿ ಅಂತಿಮ ತೀರ್ಮಾನಕ್ಕೆ ಬರುತ್ತಾರೆ.

ಈ ಮಾತುಕತೆ ಯಶಸ್ವಿಯಾಗಿ ಮುಗಿದಂತೆ ಹೆಣ್ಣಿನ ಕಡೆಯ ಯಜಮಾನ ಎರಡು ತಂಬಿಗೆಗಳಲ್ಲಿ ನೀರು ತಂದಿಟ್ಟು, ಕೈಮುಗಿದು ಎಲ್ಲರೂ ಭೋಜನಕ್ಕೆ ಏಳಬೇಕಾಗಿ ಹೇಳುತ್ತಾನೆ. ಜೀಗರು ಮತ್ತು ನೆರೆದ ಸಮಸ್ತ ನೆಂಟರಿಷ್ಟರನ್ನು ಪಂಗ್ತಿಗಳಲ್ಲಿ ಕುಳ್ಳಿರಿಸಿ ಎಲ್ಲರಿಗೂ ಪಾಯಸದೂಟ ಬಡಿಸುತ್ತಾರೆ. ಭೋಜನದ ಪ್ರಥಮ ಪಂಗ್ತಿಯಲ್ಲಿ ಮದುವೆ ಹೆಣ್ಣನ್ನು ಕೂರಿಸುತ್ತಾರೆ. ನಿಶ್ಚಯ ತಾಂಬೂಲದ ದಿನ ಹೆಣ್ಣನ್ನು ಪ್ರತ್ಯೇಕವಾಗಿ ತೋರಿಸುವ ಕ್ರಮ ಇಲ್ಲದುದರಿಂದ ಜೀಗರಲ್ಲಿ ಈ ದಿನವೇ ಪ್ರಥಮವಾಗಿ ಬಂದವರಿಗೆ ಹೆಣ್ಣು ನೋಡಲು ಇದೊಂದು ಪರ್ಯಾಯ ವ್ಯವಸ್ಥೆ ಎನ್ನಬಹುದು. ಹಿರಿಯರು ಏರ್ಪಡಿಸಿದ ಮದುವೆ ಸಂಬಂಧ ಮತ್ತು ನಿರ್ಣಯಗಳನ್ನು ಹೆಣ್ಣೂ ಒಪ್ಪುವ ಇದೊಂದು ಪರೋಕ್ಷ ರೀತಿಯೂ ಆಗಿದೆ.

ತಾಂಬೂಲ ನಿಶ್ಚಿತಾರ್ಥದ ಎಲ್ಲಾ ವಿಧಿಗಳು ನಡೆಯುವಾಗಲೂ ದ್ವಿಪಕ್ಷೀಯ ಯಜಮಾನರು ತಲೆಗೆ ರುಮಾಲು ಸುತ್ತಿರಬೇಕು. ಕಾರ್ಯಗಳೆಲ್ಲಾ ಪೂರ್ವ ಪಶ್ಚಿಮಾಭಿಮುಖವಾಗಿ ಜರಗಬೇಕು ಹೊರತು ಉತ್ತರ ದಕ್ಷಿಣಾಭಿಮುಖವಾಗಿ ಜರಗಬಾರದು. ವೀಳ್ಯದೆಲೆ + ಅಡಿಕೆ (ವೀಳ್ಯಪಟ್ಟಿ) ಪ್ರಕೃತಿ ಪುರುಷ ಸಂಕೇತವಾಗಿರುವುದರಿಂದ ಪ್ರತಿಯೊಂದು ಸಂಪ್ರದಾಯದಲ್ಲೂ ವೀಳ್ಯಕ್ಕೆ ಮಹತ್ವದ ಸ್ಥಾನವಿದೆ. ಅಡಿಕೆ ವೀಳ್ಯದೆಲೆಗಳು ಲೈಂಗಿಕಾಸಕ್ತಿ ಪ್ರಚೋದಕಗಳೆಂದು ವೈದ್ಯಕೀಯ ವಿಜ್ಞಾನವೂ ಒಪ್ಪುತ್ತದೆ ಎಂಬುದನ್ನು ಗಮನಿಸಬೇಕು. ಕುಡುಬಿಯರಲ್ಲಿ ಮದುವೆ ನಿಶ್ಚಿತಾರ್ಥಕ್ಕೆ ತಾಂಬೂಲ ಮಾತ್ರ ಸಾಕ್ಷಿಯಾಗಿದೆ. ಬರಹ ರೂಪದ ಅಥವಾ ಇತರ ಯಾವುದೇ ದಾಖಲೆಗಳು ಇಲ್ಲಿ ಅವಶ್ಯವಿಲ್ಲ. ಈ ಒಪ್ಪು

ವೀಳ್ಯ ಮುಖಾಂತರ ನಿಶ್ಚಯವಾದಂತೆ ಮಾತಿಗೆ ಅಥವಾ ಮದುವೆಗೆ ತಪ್ಪಿದವರು ಸಮಾಜದಲ್ಲಿ ನಂಬಿಕೆಗೆ ಅನರ್ಹರಾಗುತ್ತಾರೆ. ಕುಟುಂಬ, ವಾಡೆ ಮತ್ತು ಬಂಧುವರ್ಗದಲ್ಲಿ ಯಾರೂ ಅವರನ್ನು ಗೌರವದಿಂದ ಕಾಣುವುದಿಲ್ಲ. ಮಾತ್ರವಲ್ಲ, ಅದೊಂದು ದೈವನಿಂದನೆ, ಪಾತಕದೋಷ ಎಂಬ ನಂಬಿಕೆ ಇದೆ. ತಾಂಬೂಲ ನಿರ್ಣಯ ಅಂದರೆ ಉಭಯತ್ರರು ಮದುವೆಯ ಪ್ರಮಾಣ ಸ್ವೀಕರಿಸುವ ಸಂಪ್ರದಾಯ. ಈ ಎಲ್ಲಾ ಕಾರಣಗಳಿಂದ ತಾಂಬೂಲ ನಿಶ್ಚಿತಾರ್ಥಕ್ಕೆ ಕುಡುಬಿ ಮದುವೆ ಸಂಪ್ರದಾಯದಲ್ಲಿ ಪ್ರಾಮುಖ್ಯತೆ ನೀಡಲಾಗಿದೆ. ತಾಂಬೂಲ ನಿಶ್ಚಿತಾರ್ಥ ಆದಮೇಲೆ ಮದುವೆ ತಪ್ಪುವ ಸಂದರ್ಭಗಳು ವಿರಳ ಆದರೂ ಕೆಲವು ಅನಪೇಕ್ಷಿತ ಘಟನೆ, ಸಂದರ್ಭಗಳಲ್ಲಿ ಈ ಅಂತಿಮ ಹಂತದಲ್ಲೂ ಮದುವೆ ತಪ್ಪಿಹೋಗುವ ಅವಕಾಶಗಳು ಇಲ್ಲದಿಲ್ಲ. ತಾಂಬೂಲ ನಿಶ್ಚಿತಾರ್ಥವಾದ ಒಂದೆರಡು ತಿಂಗಳೊಳಗೆ ಮದುವೆ ನಡೆದು ಹೋಗಿರುತ್ತದೆ. ನಿಶ್ಚಯವಾದ ಮೇಲೆ ಮದುವೆಯನ್ನು ವರ್ಷಗಟ್ಟಳೆ ಬಾಕಿ ಇಡುವ ಕ್ರಮ ಕುಡುಬಿಯರಲ್ಲಿಲ್ಲ.

ತಾಂಬೂಲ ನಿಶ್ಚಯದ ಭೋಜನ ತೀರಿದ ಮೇಲೆ ಗಂಡಿನ ಕಡೆಯವರು ಕವಳ ಹಾಕುವವರು ಕವಳ ಹಾಕಿ ಸ್ವಲ್ಪ ವಿಶ್ರಾಂತಿ ಪಡೆದು ಹೊರಡಲನುವಾಗುತ್ತಾರೆ. ಯಥಾ ಪ್ರಕಾರ ಹೆಣ್ಣಿನ ಕಡೆಯ ಯಜಮಾನ ಮತ್ತಿತರರು ತಲೆಗೆ ರುಮಾಲು ಸುತ್ತಿ ನಿಂತಿರುತ್ತಾರೆ. ಅವರಿಗೆದುರಾಗಿ ಗಂಡಿನ ಯಜಮಾನ ಮತ್ತು ಅವರ ಪಕ್ಷದ ಮುಖಂಡರು ನಿಂತು ಕೈಮುಗಿದು 'ನಾವು ಹೋಗಿ ಬರುತ್ತೇವೆ' ಅನ್ನುತ್ತಾರೆ. ಹೆಣ್ಣಿನ ಕಡೆಯವರು 'ದೇವರ ಇಚ್ಛೆ' ಅನ್ನುತ್ತಾರೆ. ಗಂಡಿನ ಕಡೆಯವರು ಮರಳುವುದರೊಂದಿಗೆ ತಾಂಬೂಲ ನಿಶ್ಚಿತಾರ್ಥದ ವಿಧಿಗಳು ಕೊನೆಗೊಳ್ಳುತ್ತವೆ. ಈ ನಂತರವೇ ವಿವಾಹ ಆಮಂತ್ರಣ ಮುಂತಾದ ಇತರ ವ್ಯವಸ್ಥೆಗಳಿಗೆ ತೊಡಗುತ್ತಾರೆ.

5.6. ವಿವಾಹ ಆಮಂತ್ರಣ (ವೊಫ್ಳಿಗ್):

ಕುಡುಬಿಯರಲ್ಲಿ ವಿವಾಹಕ್ಕೆ ತಾಂಬೂಲ ಅಥವಾ ವೀಳ್ಯಪಟ್ಟಿ ನೀಡುವ ಮೂಲಕ ಆಮಂತ್ರಿಸುವುದು ಸಂಪ್ರದಾಯ. ಗುರಿಕಾರ ರಾಯಭಾರಿ, ಕುಟುಂಬದ ದೇವರ ಮನೆಯ ಹಿರಿಯ ವ್ಯಕ್ತಿ, ವಾಡೆಯ ಪಂಚ ಪ್ರಮುಖರು ಮುಂತಾದವರಿಗೆ ಪ್ರಥಮವಾಗಿ ನಿಯಮಾನುಸಾರ ವೀಳ್ಯಪಟ್ಟಿ ನೀಡುವ ಮೂಲಕವೇ ಆಮಂತ್ರಣ ನೀಡಬೇಕು. ಗಂಡಿನ ಕಡೆಯವರು ಸೋದರ ಮಾವ, ಭಾವ, ಅಜ್ಜ, ಮುತ್ತಜ್ಜ ಮುಂತಾದವರಿಗೆ ವೀಳ್ಯಪಟ್ಟಿ ನೀಡಿಯೇ ಆಮಂತ್ರಿಸಬೇಕು. ಜೀಗರು-ಜೀಗರಿಗೆ, ಜೀಗರ ನೆಂಟರಿಷ್ಟರಿಗೆ ಮತ್ತು ನೆಂಟಸ್ತಿಕೆಯಲ್ಲಿ ಪೂರಕ ಪಾತ್ರ ವಹಿಸಿದವರಿಗೆ ಇದೇ ಕ್ರಮದಲ್ಲಿ ಆಮಂತ್ರಣ ನೀಡಬೇಕು.

ಮದುಮಗನಿಗೆ ಬಲಗೊಡೆಯ (ವರಸಹಾಯಕ, ಓರಗಗಾರ)ನಾಗಿ ಸೋದರ ಮಾವ ಅಥವಾ ಭಾವ ಕಾರ್ಯ ನಿರ್ವಹಿಸಬೇಕಾಗುವುದರಿಂದ ಅವರನ್ನು ವೀಳ್ಯಪಟ್ಟಿ ನೀಡಿ ಪ್ರತ್ಯೇಕವಾಗಿ ವರನೇ ಸ್ವತಃ ಆಮಂತ್ರಿಸಬೇಕು. ಇತರ ನೆಂಟರಿಷ್ಟರಿಗೆ ತಾಂಬೂಲ

ಮೂಲಕ ಹೇಳಿಕೆ ನೀಡಿ ವಿವಾಹಕ್ಕೆ ಆಮಂತ್ರಿಸಿದರೆ ಸಾಕು. ಇದಕ್ಕೆ ವರನೇ ಹೋಗಬೇಕಾಗಿಲ್ಲ. ಎಲ್ಲರಿಗೆ ವೀಳ್ಯಪಟ್ಟ ನೀಡಿಯೇ ಹೇಳುವ ಅವಶ್ಯಕತೆಯಿರುವುದಿಲ್ಲ. ಬದಲಿಗೆ ಒಂದೆರಡು ವೀಳ್ಯದೆಲೆ, ಅಡಿಕೆ ಹೋಳು, ಸುಣ್ಣ, ತಂಬಾಕು ಚೂರು - ಇತ್ಯಾದಿ ಕವಳ ಹಾಕಲು ಬೇಕಾದ ಎಲ್ಲಾ ವಸ್ತುಗಳನ್ನು ಆ ಮನೆಯಲ್ಲಿ ಕವಳ ಹಾಕುವ ಅಭ್ಯಾಸವಿರುವ ಎಲ್ಲರಿಗೂ ನೀಡಬೇಕು. ಇದರಿಂದಾಗಿ ಕುಡುಬಿಯರಲ್ಲಿ ವಿವಾಹ ಆಮಂತ್ರಣಕ್ಕೆ ತಾಂಬೂಲದ [illegible] ಬಹಳ. ಗಂಡಿನ ತಂದೆ, ಗಂಡು ಅಥವಾ ಗಂಡಿನ ಕಡೆಯ ಜವಾಬ್ದಾರಿಯುಳ್ಳ ವ್ಯಕ್ತಿ ಆಮಂತ್ರಣ ನೀಡಲು ಹೋಗುತ್ತಾರೆ. ಕುಡುಬಿಯರಲ್ಲಿ ಮದುವೆ ಆಮಂತ್ರಣ ನೀಡುವುದು ಗಂಡಸರ ಜವಾಬ್ದಾರಿ. ಸ್ತ್ರೀಯರು ಮದುವೆ ಆಮಂತ್ರಣ ನೀಡುವ ಕ್ರಮವಿಲ್ಲ. ಮಹಿಳೆಯೇ ಆಮಂತ್ರಣ ನೀಡಬೇಕಾಗುವ ಅನಿವಾರ್ಯ ಸಂದರ್ಭದಲ್ಲಿ ಕುಟುಂಬದಲ್ಲಿನ ಒಬ್ಬ ಹುಡುಗನನ್ನು ಜೊತೆಗೆ ಕರೆದುಕೊಂಡು ಹೋಗಿ ಆತನ ಮುಖಾಂತರ ಆಮಂತ್ರಣ ನೀಡಲಾಗುತ್ತದೆ. ಆಮಂತ್ರಣ ನೀಡಲು ಒಬ್ಬರೇ ಹೋಗುವ ಕ್ರಮವಿಲ್ಲ. ಜೊತೆಯಲ್ಲಿ ಯಾರೊಬ್ಬನಾದರೂ ಇರಬೇಕು. ಆಮಂತ್ರಣ ನೀಡುವಾಗಲೂ ಕೆಲವು ನಿಯಮಗಳಿವೆ. ತಾಂಬೂಲ ಆಮಂತ್ರಣವನ್ನು ಮನೆಯ ಯಜಮಾನನ ಕೈಯಲ್ಲೇ ನೀಡಬೇಕು. ಇತರರಲ್ಲಿ ಆಮಂತ್ರಣ ನೀಡಿದರೆ ಯಜಮಾನನಿಗೆ ಅವಮಾನ ಮಾಡಿದಂತೆ ಮಾತ್ರವಲ್ಲ, ಆ ಮನೆಯವರು ಮದುವೆಗೆ ಆಗಮಿಸುವ ಸಂಭವ ಕಡಿಮೆ.

ವರನ ಕಡೆಯಿಂದ ತಾಂಬೂಲ ಮುಖಾಂತರ ಹೇಳಿಕೆ ನೀಡುವಾಗ ಮದುವೆಯ ದಿನ, ಮದುವೆ ಸಮಾರಂಭದ ಜಾಗ, ದಿಬ್ಬಣ ಹೊರಡುವ ಸಮಯ, ಮುಹೂರ್ತ ಭೋಜನ, ಧಾರೆಯ ಮುಹೂರ್ತ, ಮರುವಲಿ ಶಾಸ್ತ್ರದ ಬೀಗರೂಟದ ದಿನ ಮತ್ತು ಸಮಯ, ದಿಬ್ಬಣ ಮತ್ತು ಮರುವಲಿ ಶಾಸ್ತ್ರಕ್ಕೆ ಬರಬೇಕೆ? ಮದುವೆಗೆ ಬಂದು ಆ ಮನೆಯವರು ಸಮಾರಂಭದಲ್ಲಿ ಭಾಗಿಗಳಾಗಿ ಯಾವ ರೀತಿ ಸುಧಾರಿಸಿಕೊಡಬೇಕು?.... ಎಂಬಿತ್ಯಾದಿ ವಿಷಯಗಳನ್ನು ಸವಿವರವಾಗಿ, ಮನದಟ್ಟಾಗುವಂತೆ, ನೆನಪಲ್ಲಿ ಉಳಿಯುವಂತೆ ಹೇಳಬೇಕು. ಯಾಕೆಂದರೆ ಈಗ್ಗೆ ಸುಮಾರು 50–60 ವರ್ಷಗಳ ಹಿಂದೆ ಕುಡುಬಿಯರಲ್ಲಿ ಆಮಂತ್ರಣ ಪತ್ರಗಳನ್ನು ಮುದ್ರಿಸುವ ಕ್ರಮವೇ ಇರಲಿಲ್ಲ. ಮದುವೆ ದಿನವನ್ನು ಯಾವುದೋ ಹಬ್ಬ, ಊರಜಾತ್ರೆ, ಋತು ಬದಲಾವಣೆಯ ಕಾಲ, ಅಮಾವಾಸ್ಯೆ ಹುಣ್ಣಿಮೆಗಳ, ಸಂಕ್ರಮಣ ತಿಂಗಳುಗಳ, ಗ್ರಾಮ್ಯ ಅಥವಾ ಬುಡಕಟ್ಟು ಮೂಲದ ಹೆಸರುಗಳಿಂದ ನೆನಪಿನಲ್ಲಿ ಉಳಿಯುವಂತೆ ಹೇಳುತ್ತಿದ್ದರು.

ಹೆಣ್ಣಿನ ಕಡೆಯವರು ಬಲಗೊಡತಿ (ವಧುಸಹಾಯಕಿ)ಯನ್ನು ಪ್ರತ್ಯೇಕವಾಗಿ ಆಮಂತ್ರಿಸಬೇಕು. ಹೀಗೆ ಆಮಂತ್ರಿಸುವಾಗ ಕಂಕಣಧಾರಣೆಗೂ ಆಕೆ ಉಪಸ್ಥಿತಳಿರುವಂತೆ ನೋಡಿಕೊಳ್ಳಬೇಕು. ಬಲಗೊಡತಿಯ ಜವಾಬ್ದಾರಿ ವಹಿಸುವ ಅಧಿಕಾರ ಸೋದರತ್ತೆ ಅಥವಾ ವಿವಾಹಿತ ಸಹೋದರಿಗೆ ಇರುತ್ತದೆ. ಹೆಣ್ಣಿನ ಕಡೆಯಿಂದ ಬಲಗೊಡತಿ ಅಥವಾ ಇತರರನ್ನು ಆಮಂತ್ರಿಸುವಾಗ ಸ್ವತಃ ವಧುವೇ ಹೋಗುವ ವಾಡಿಕೆ ಇಲ್ಲ. ವಧುವಿನ

ತಂದೆ, ಸಹೋದರ ಅಥವಾ ಸೋದರ ಮಾವ ಈ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ.

ವಿವಾಹ ಆಮಂತ್ರಣ ನೀಡಲು ಕಡಿಮೆ ಪಕ್ಷ ಒಂದೆರಡು ತಿಂಗಳ ಅವಧಿ ಬೇಕಾಗುತ್ತದೆ. ಆದುದರಿಂದ ಅಷ್ಟು ಮುಂಚಿತವಾಗಿ ಮದುವೆ ದಿನ ನಿಗದಿಗೊಳಿಸಿ ಆಮಂತ್ರಣ ನೀಡಲು ಪ್ರಾರಂಭಿಸುತ್ತಾರೆ. ಧಾರೆ ವರನ ಮನೆಯಲ್ಲಿ ಆಗುವುದಾದಲ್ಲಿ, ವಧುವಿನ ಮನೆಗೆ ಬಲಗೊಡೆಯರ ಮರುವರಿ ಮತ್ತು ಮರುಸೇಸೆ ಇದೆಯೇ? ಎಂಬುದನ್ನು ಆಮಂತ್ರಿಸುವವರು ಸ್ಪಷ್ಟಪಡಿಸಬೇಕು. ವಧುವಿನ ಮನೆಗೆ ಹಿಂದಿಬ್ಬಣ ಬರುವುದಿದ್ದಲ್ಲಿ ಅಲ್ಲಿ ಮರುಸೇಸೆ, ಮುಯ್ಯಿ, ಉಡುಗೊರೆಗಳು ಆಗುವುದಕ್ಕಿದೆ. ಇದರೊಂದಿಗೆ ಬಲಗೊಡೆಯರಿಗೆ ತೈಲಾಭ್ಯಂಜನ, ಔತಣವೂ ಇರುತ್ತದೆ. ವರನ ಮನೆಯಲ್ಲಿಯೇ ಎಲ್ಲಾ ಶಾಸ್ತ್ರಗಳನ್ನು ತೀರಿಸುವುದಾದಲ್ಲಿ ವಧುವಿನ ಮುಯ್ಯಿ ಉಡುಗೊರೆಗಳನ್ನು ಅಲ್ಲಿಯೇ ಮಾಡುತ್ತಾರೆ. ಈ ಕ್ರಮ ವಧುವಿನ ಕಡೆಯವರು ಮದುವೆ ಖರ್ಚು ಭರಿಸಲು ಅಸಮರ್ಥರಾದರೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಅನುಸರಿಸಲಾಗುತ್ತದೆ. ಈ ಸಂದರ್ಭದಲ್ಲಿ ವಧುವಿಗೆ ಸಲ್ಲಲಿರುವ ಮುಯ್ಯಿ ಹಾಗೂ ಉಡುಗೊರೆಗಳನ್ನು ವಧುವಿನ ಕೈಯಲ್ಲಿ ಪ್ರತ್ಯೇಕವಾಗಿ ನೀಡಬೇಕು. ವಧುವಿನ ಮುಯ್ಯಿಯನ್ನು ವರನ ಮುಯ್ಯಿ ಬಟ್ಟಲಲ್ಲಿ ಇಡಲಾಗುವುದಿಲ್ಲ. ವಧುವಿಗೆ ಪ್ರತ್ಯೇಕವಾದ ಮುಯ್ಯಿ ಬಟ್ಟಲು ಇಡುವ ಕ್ರಮ ಇಲ್ಲ. ಈ ರೀತಿ ವಧುವಿನ ಮುಯ್ಯಿ ಶಾಸ್ತ್ರ ವರನ ಮನೆಯಲ್ಲೇ ಮುಗಿದಿದ್ದರೂ ಬಲಗೊಡೆಯರ ಮರುವರಿ ಶಾಸ್ತ್ರ ಆಗಬೇಕಾದದ್ದು ಖಡ್ಡಾಯ. ಸಾಮಾನ್ಯವಾಗಿ ಮುಯ್ಯಿಯನ್ನು ಮುಯ್ಯಿ ಬಟ್ಟಲಲ್ಲಿ ಮತ್ತು ಉಡುಗೊರೆಗಳನ್ನು ವಧೂವರರ ಕೈಯಲ್ಲಿ ನೀಡುವುದು ಕ್ರಮ. ಮರುಸೇಸೆಯ ಸಂಪ್ರದಾಯ ಆಚರಿಸುವುದಿದ್ದಲ್ಲಿ ಈ ಎಲ್ಲಾ ವಿಷಯಗಳನ್ನು ಹೆಣ್ಣಿನ ಕಡೆಯಿಂದ ಆಮಂತ್ರಣ ನೀಡುವವರು ಆಮಂತ್ರಿತರಿಗೆ ವಿವರಿಸಬೇಕಾಗುತ್ತದೆ.

ಇದೀಗ ಹೆಚ್ಚು ಕಡಿಮೆ 50 ವರ್ಷದಿಂದೀಚೆ ಆಹ್ವಾನ ಪತ್ರಗಳನ್ನು ಮುದ್ರಿಸಿ ಆಮಂತ್ರಿಸುವ ಕ್ರಮವೇ ಖಾಯಮ್ಮಾಗಿ ಚಾಲ್ತಿಗೆ ಬಂದಿರುವುದರಿಂದ ತಾಂಬೂಲ ಮೂಲಕ ಆಮಂತ್ರಣ ನೀಡುವ ಸಂಪ್ರದಾಯ ಅಳಿದಿದೆ. ಮೌಖಿಕವಾಗಿ ವಿವರಿಸುವ ಎಲ್ಲಾ ವಿಚಾರಗಳು ಆಹ್ವಾನ ಪತ್ರದಲ್ಲಿರುತ್ತದೆ. ಅವಶ್ಯ ಗೌರವಾನ್ವಿತರಿಗೆ ಮಾತ್ರ ತಾಂಬೂಲ ಮುಖಾಂತರವೇ ಆಮಂತ್ರಣ ನೀಡಿ, ಉಳಿದಂತೆ ಎಲ್ಲರನ್ನೂ ಆಮಂತ್ರಣ ಪತ್ರಗಳ ಮೂಲಕ ಆಹ್ವಾನಿಸಲಾಗುತ್ತದೆ. ತಾಂಬೂಲ ನೀಡಿ ಆಹ್ವಾನಿಸುವ ಕಾಲದಲ್ಲಿ ಒಂದೆರಡು ತಿಂಗಳು ಮುಂಚಿತವಾಗಿ ಆಹ್ವಾನಿಸಲು ಹೊರಡಬೇಕಿತ್ತು. ಆಮಂತ್ರಣ ಪತ್ರಗಳನ್ನು ಮುದ್ರಿಸುವುದರಿಂದ ಸಮಯದ ಉಳಿತಾಯವಾಗಿರುವುದು ಸತ್ಯ. ವಿವರಿಸಿ ದಿನ, ಮುಹೂರ್ತಗಳನ್ನು ಹೇಳಬೇಕಾಗಿಲ್ಲದಿರುವುದೂ ನಿಜ. ಎಲ್ಲಾ ವಿಷಯಗಳು ಆಹ್ವಾನ ಪತ್ರದಲ್ಲಿ ಮುದ್ರಿಸಲ್ಪಟ್ಟಿರುತ್ತವೆ. ಆದರೆ, ತಾಂಬೂಲ ನೀಡಿ ಆಮಂತ್ರಿಸುವ ಸಂದರ್ಭ, ಆಮಂತ್ರಿಸಲು ಹೋಗಿರುವ ವ್ಯಕ್ತಿ ಆ ಮನೆಯಲ್ಲಿ ಸ್ವಲ್ಪ ಸಮಯವಾದರೂ ಕಳೆಯುತ್ತಿದ್ದ, ಸುಖದುಃಖ ವಿನಿಮಯ ಮಾಡಿಕೊಳ್ಳುತ್ತಿದ್ದ, ಕೌಟುಂಬಿಕ, ಆತ್ಮೀಯ ವಿಚಾರಗಳನ್ನು

ಅರ್ಜಿಸುತ್ತಿದ್ದ. ಈಗಿನಂತೆ ಆಹ್ವಾನ ಪತ್ರ ನೀಡುವ ವ್ಯಕ್ತಿ ಆಮಂತ್ರಣ ನೀಡಿ ಕ್ಷಣ ಮಾತ್ರದಲ್ಲಿ ಹೊರಟಾಗಿರುತ್ತದೆ. ಆದುದರಿಂದ ತಾಂಬೂಲ ಆಮಂತ್ರಣ ಕಾಲದಲ್ಲಿದ್ದ ಮನುಷ್ಯ -ಮನುಷ್ಯರ ನಡುವಿನ ಮಾನವೀಯ ಬಾಂಧವ್ಯದ ಕೊಂಡಿ ಕಳಚಿಹೋಗಿದೆ.

ಹಿಂದಿನ ಕಾಲದಲ್ಲಿ ಕುಡುಬಿಯರಲ್ಲಿ ಹೆಚ್ಚಿನವರು ಇಲ್ಲಿನ ಭೂಮಾಲಿಕರ ಗೇಣಿ ಒಕ್ಕಲಾಗಿದ್ದರು. ಧಣಿಗೆ ವಿವಾಹ ಆಮಂತ್ರಣ ನೀಡಲು ಹೋಗುವಾಗ ಬಾಳೆಗೊನೆ ಅಥವಾ ಇತರ ಯಾವುದಾದರೂ ಫಲವಸ್ತುಗಳನ್ನು ಕೊಂಡುಹೋಗಿ ಅರ್ಪಿಸುವ ವಾಡಿಕೆ ಇತ್ತು. ಮದುವೆಯ ವಿಚಾರ ಅರಿತ ಧಣಿಯೂ ಪೂರಕ ಮನೋವೃತ್ತಿ ಹೊಂದಿದ್ದರೆ ಮದುವೆ ಖರ್ಚಿಗೆ ವಸ್ತುರೂಪದಲ್ಲಿ ಅಥವಾ ಆರ್ಥಿಕವಾಗಿ ಏನಾದರೂ ಸಹಾಯ ಮಾಡುತ್ತಿದ್ದರು.

6. ವಿವಾಹಪೂರ್ವ ತಯಾರಿಗಳು :

ತಾಂಬೂಲ ನಿಶ್ಚಿತಾರ್ಥ ಆದ ಮೇಲೆ ಮದುವೆಯ ಇತರ ತಯಾರಿಗಳನ್ನು ಪ್ರಾರಂಭಿಸುತ್ತಾರೆ. ವಿವಾಹಪೂರ್ವ ಸಂಪ್ರದಾಯಗಳು ಮತ್ತು ತಯಾರಿಗಳು ವಧೂವರರಿಗೆ ಮತ್ತವರ ಹೆತ್ತವರಿಗೆ ಮಾನಸಿಕ ದೃಢತೆ ಹಾಗೂ ಸ್ಥಿರತೆಗಳಿಗೆ ಪೂರಕವಾಗುತ್ತವೆ. ವರನು ಮದುವೆ ಕಾರ್ಯದಲ್ಲಿ ತನಗೆ ಸಹಾಯಕನಾಗುವ, ಬಲಗೊಡೆಯನಾಗಿ ಜವಾಬ್ದಾರಿವಹಿಸುವ ಅಧಿಕಾರದ ಸೋದರಮಾವ ಅಥವಾ ಭಾವನನ್ನು ನೇಮಿಸಬೇಕು. ಅದಕ್ಕಾಗಿ ಸ್ವತಃ ಹೋಗಿ ಒಂದು ರಾತ್ರಿ ಅವರಲ್ಲಿ ತಂಗಬೇಕು. ಹೆಚ್ಚಿನ ಸಂದರ್ಭಗಳಲ್ಲಿ ಬಲಗೊಡೆಯನಾಗುವವನು ತನ್ನ ಮನೆಯಲ್ಲಿ ವರನಿಗೆ ವಿವಾಹಪೂರ್ವ ಕೋರಿ ಊಟ (ಸಮ್ಮಾನದೂಟ) ಮಾಡಿಸಿ ಸತ್ಕರಿಸುತ್ತಾನೆ. ವರನು ಅವನಲ್ಲಿ 'ನನ್ನ ಮದುವೆಗೆ ಬಲಗೊಡೆಯತನ ವಹಿಸಿ ವಿವಾಹ ಸಮಾರಂಭವನ್ನು ಯಶಸ್ವಿಯಾಗಿ ನೆರವೇರಿಸಿಕೊಡಬೇಕು' ಎಂದು ವೀಳ್ಯಪಟ್ಟ ನೀಡಿ, ಕಾಲಿಗೆರಗಿ ವಿನಂತಿಸಿಕೊಳ್ಳುತ್ತಾನೆ. ವರನಿಗೆ ಕೋರಿ ಊಟ ಏರ್ಪಡಿಸಿದ್ದಲ್ಲಿ, ಬಲಗೊಡೆಯನಾಗುವುದಕ್ಕೆ ಆತನ ಒಪ್ಪಿಗೆಯಿದೆ ಎಂದರ್ಥ. ಈ ಈರ್ವರಲ್ಲಿ ಮನಸ್ತಾಪಗಳಿದ್ದಲ್ಲಿ ಬಲಗೊಡೆಯತನಕ್ಕೆ ಒಪ್ಪದಿರುವುದಿದೆ. ವೈಮನಸ್ಯಗಳಿದ್ದಲ್ಲಿ ಸೋದರಮಾವ ಮತ್ತು ಭಾವನ ಈ ಜವಾಬ್ದಾರಿಯನ್ನು ಆ ನಂತರದ ಆದ್ಯತೆಯ ವ್ಯಕ್ತಿ ವಹಿಸುತ್ತಾನೆ.

ವಧು ಸಹಾಯಕಿ ಅಥವಾ ಬಲಗೊಡತಿಯಾಗಿ ಕಾರ್ಯನಿರ್ವಹಿಸುವ ಸೋದರತ್ತೆ ಅಥವಾ ವಿವಾಹಿತ ಸಹೋದರಿಗೂ ಸಾಕಷ್ಟು ಮುಂಚಿತವಾಗಿಯೇ ಹೇಳಿಟ್ಟಿರಬೇಕು. ಬಲಗೊಡತಿಯೂ ವಧುವಿಗೆ ವಿವಾಹ ಪೂರ್ವ ಕೋರಿಊಟ ನೀಡುವ ಸಂಪ್ರದಾಯವಿದೆ. ವಧೂವರದ್ವಯರಿಗೂ ಈ ಸಮ್ಮಾನದೂಟಗಳನ್ನು ಬಲಗೊಡೆಯ ಬಲಗೊಡತಿ ಮಾತ್ರವಲ್ಲದೆ ಇತರ ಬಂಧುಗಳೂ ನೀಡುತ್ತಾರಾದರೂ ವಧುವಿಗೆ ವರನಿಗಿಂತ ಹೆಚ್ಚು ಸಂಖ್ಯೆಯಲ್ಲಿ ಇರುತ್ತವೆ. ಮದುವೆಯಾದ ಮೇಲೆ ಸಮ್ಮಾನದೂಟಕ್ಕೆ ಮದುಮಗಳು

ಹೆಣ್ಣಿನ ಕಡೆಯವರಿಗೆ ಲಭ್ಯವಾಗುವ ಅವಕಾಶಗಳು ಕಡಿಮೆಯಾದುದರಿಂದ ಮದುವೆಗೆ ಮುಂಚಿತವಾಗಿಯೇ ಮಾತಾಪಿತೃಗಳ ಕಡೆಯವರು ವಧುವಿಗೆ ಸಮ್ಮಾನದೂಟ ಹಾಕುವ ಸಂದರ್ಭಗಳು ಹೆಚ್ಚು.

ಹಲವು ಸಂದರ್ಭಗಳಲ್ಲಿ ಸೋದರಮಾವ ಸೋದರತ್ತೆಯರೇ ಬೀಗರಾಗಿರುವುದುಂಟು. ಇಂತಹ ಸಂದರ್ಭಗಳಲ್ಲಿ ಮತ್ತು ಮನಸ್ತಾಪ, ಹೊಲೆಸೂತಕಗಳಂತಹ ಅನನುಕೂಲ ಪರಿಸ್ಥಿತಿಗಳಲ್ಲಿ ಅವರು ಬಲಗೊಡೆಯ ಬಲಗೊಡತಿ ಸ್ಥಾನ ವಹಿಸದಿದ್ದಲ್ಲಿ, ಆ ಸಂಬಂಧ ಹೊಂದಿರುವ ಕಿರಿಯ ಕವಲಿನವರು ಕಾರ್ಯನಿರ್ವಹಿಸುತ್ತಾರೆ. ತಂದೆತಾಯಿ ಇಲ್ಲದ ವಧೂವರರ ಮದುವೆ ವಿಧಿಗಳನ್ನು ನಿರ್ವಹಿಸುವ ಅಧಿಕಾರ ಸೋದರಮಾವನಿಗಿರುತ್ತದೆ. ಆವಾಗ ಸೋದರಮಾವನೇ ಮುಂದಾಳ್ತನ ವಹಿಸಿ ಮದುವೆ ಮಾಡಿಸುವ ಅನೇಕ ದೃಷ್ಟಾಂತಗಳಿರುತ್ತವೆ.

ಮದುವೆಯ ಧಾರೆಶಾಸ್ತ್ರದ ವ್ಯವಸ್ಥೆ ಗಂಡಿನ ಪಕ್ಷದವರ ಜವಾಬ್ದಾರಿ. ಆದುದರಿಂದ ಪುರೋಹಿತರ ನೇಮಕವನ್ನು ಗಂಡಿನ ಕಡೆಯವರು ಮಾಡಬೇಕು. ಧಾರೆಗೆ ಬೇಕಾದ ಸಾಮಗ್ರಿಗಳನ್ನು ಅವರೇ ತಯಾರು ಮಾಡಬೇಕು. ಕುಡುಬಿಯರ ಮದುವೆಯ ವಿಧಿಗಳನ್ನು ತಿಳಿದಿರುವ ವೈದಿಕರನ್ನೇ ನೇಮಿಸಬೇಕಾಗುತ್ತದೆ.

ಅನಾದಿಕಾಲದಲ್ಲಿ ಕುಡುಬಿಯರ ಮದುವೆಗೆ ವೈದಿಕ ವಿಧಿಗಳ, ಪುರೋಹಿತರ ಉಪಸ್ಥಿತಿ ಅವಶ್ಯವಿರಲಿಲ್ಲ ಎಂದು ತಿಳಿದುಬರುತ್ತದೆ. ಆಧುನೀಕರಣದ ಪ್ರಭಾವ, ಬಹುಸಂಖ್ಯಾತ ಸಂಸ್ಕೃತಿಯ ಅನುಕರಣೆ, ಪುರೋಹಿತರ ಮುಖಾಂತರ ಮದುವೆ ವಿಧಿಗಳನ್ನು ಜರಗಿಸದಿದ್ದರೆ ನಾವು ಕೆಳಮಟ್ಟದವರಾಗುತ್ತೇವೆ ಎಂಬ ಕೀಳರಿಮೆಯಿಂದ ಹಾಗೂ ಇತರ ವಿವಿಧ ಕಾರಣಗಳಿಂದ ವೈದಿಕ ಆಚರಣೆ ಪ್ರಾರಂಭವಾಗಿ ಮೊದಲಿಗೆ ಕರ್ಹಾಡ ಬ್ರಾಹ್ಮಣ ಪುರೋಹಿತರನ್ನು ಅವಲಂಬಿಸಲಾಯಿತು. ಕರ್ಹಾಡ ಪುರೋಹಿತರು ಕುಡುಬಿಯರ ಬುಡಕಟ್ಟು ರೀತಿಯ ವಿಧಿಗಳೊಂದಿಗೆ ತಮ್ಮದನ್ನೂ ಸ್ವಲ್ಪ ಸೇರಿಸಿ ಒಂದು ಹೊಸ ಆಚರಣೆಯನ್ನು ಅನುಷ್ಠಾನಕ್ಕೆ ತಂದರು. ಇವರು ಮದುವೆ ಮಾತ್ರವಲ್ಲದೆ ಕುಡುಬಿಯರ ಇತರ ಧಾರ್ಮಿಕ ವಿಧಿಗಳಲ್ಲೂ ತಮ್ಮ ವೈದಿಕ ರೀತಿಗಳನ್ನು ಅನುಸರಿಸುವಂತೆ ಪ್ರೇರೇಪಿಸಿದರು.

ಹಿಂದಿನ ಕಾಲದಲ್ಲಿ ಕುಡುಬಿಯರು ನಿತ್ಯ ಜನಿವಾರಧಾರಣೆ ಮಾಡುವ ಜನಾಂಗ. ಪ್ರತೀ ನೂಲ ಹುಣ್ಣಿಮೆಗೆ ಕರ್ಹಾಡ ಪುರೋಹಿತರು ಒದಗಿಸಿದ ಜನಿವಾರವನ್ನು ಕುಡುಬಿಯರು ಧಾರಣೆ ಮಾಡುತ್ತಿದ್ದರು. ಜನಿವಾರ ತಂದುಕೊಟ್ಟದ್ದಕ್ಕೆ ಕುಡುಬಿಯರಿಂದ ಅವರಿಗೆ 'ಅನ್ನಪಡಿ' (ಒಂದು ಸೇರು ಅಕ್ಕಿ, ತೆಂಗಿನಕಾಯಿ, ವೀಳ್ಯಪಟ್ಟಿ, ಕಾಣಿಕೆ+ಲಭ್ಯವಿದ್ದಲ್ಲಿ ತರಕಾರಿಯ ತಳಿಗೆ) ಸಲ್ಲುತ್ತಿತ್ತು. ಇದೇ ಕಾರಣದಿಂದ ಕರ್ಹಾಡ ಪುರೋಹಿತರಿಗೆ 'ಪಡಿಭಟ್ರು' ಎಂಬ ಉಪನಾಮವೂ ರೂಢಿಗೆ ಬಂದಿತ್ತು.

ಮದುವೆಯ ಮುಂಚಿನ ರಾತ್ರಿ ವರನ ಮತ್ತು ದಿಬ್ಬಣದವರ ಗಡ್ಡಮೀಸೆ ಒಪ್ಪ ಓರಣಗೊಳಿಸುವ ಸಂಪ್ರದಾಯಕ್ಕೆ 'ಪಸ್ಕೆಶಾಸ್ತ್ರ' (ರೇಗ್) ಅಂತ ಹೆಸರು. ಪಸ್ಕೆ ಮಾಡುವುದಕ್ಕೆ ಕಿಲೇಶಿ (ಕ್ಷೌರಿಕ)ಯನ್ನು ಗಂಡಿನ ಕಡೆಯವರು ನೇಮಿಸಬೇಕು. ಧಾರೆ ಹೆಚ್ಚಾಗಿ ಹೆಣ್ಣಿನ ಮನೆಯಲ್ಲೇ ಜರಗುವುದರಿಂದ ಧಾರೆ ಮಂಟಪಕ್ಕೆ 'ಕೂಡಿ' (ಬಿಳಿಯ ಬಟ್ಟೆಯ ಮೇಲ್ಕಟ್ಟು) ಹಾಕಲು, ವಧೂವರರ ಆಸನಕ್ಕೆ ಮಡಿಬಟ್ಟೆ ಹೊದಿಸಲು ಮತ್ತು ವರಾಗಮನದ ಸಮಯ ಚಪ್ಪರದ ತೋರಣದ ಹೊರಬದಿಯಲ್ಲಿ ಶಕುನ ದೀಪದ ಅಡಿಯಲ್ಲಿ 'ನಡೆಮಡಿ' ಹಾಸಲು ಮಡಿವಾಳನನ್ನೂ ನೇಮಿಸಬೇಕು.

ಮಡಿವಾಳ ಸಮುದಾಯದಲ್ಲಿ – 'ಮಡಿವಾಳ' ಮತ್ತು 'ಕಿಲೇಶಿ' ಎಂಬ ಎರಡು ಉಪಪಂಗಡಗಳಿವೆ. ಮಡಿವಾಳ ಉಪಪಂಗಡದಲ್ಲಿ 'ಪರೆಲ್ ಮಡಿವಾಳ' (ದೈವ ದೇವರ ಚಾಕರಿಯವರು) ಮತ್ತು 'ಮಡ್ಡೆಲ' (ಬಟ್ಟೆ ಮಡಿ ಮಾಡುವ ಅಗಸ ವೃತ್ತಿಯವರು) ಎಂಬ ಪಂಗಡದೊಳಗಿನ ಪಂಗಡಗಳಿವೆ. ಈ ಅಗಸವೃತ್ತಿಯ ಮಡಿವಾಳರು ಕುಡುಬಿಯರ ಪ್ರತೀ ನೈರ್ಮಲೀಕರಣದ ಕಾರ್ಯಗಳಿಗೆ ಅವಶ್ಯ. ವೈದಿಕರ ಉಪಸ್ಥಿತಿಗಿಂತಲೂ ಇಲ್ಲಿ ಮಡಿವಾಳರಿಗೇ ಹೆಚ್ಚು ಪ್ರಾಶಸ್ತ್ಯ. ಸಾಮಾನ್ಯವಾಗಿ ಮಡಿವಾಳನನ್ನು ಹೆಣ್ಣಿನ ಕಡೆಯವರು ನೇಮಿಸಬೇಕು. ಆದರೆ ಕೆಲವು ಪೇಟೆ ಮತ್ತು ವಾಡೆಗಳಲ್ಲಿ ವರನ ದಿಬ್ಬಣಕ್ಕೆ 'ದೀವಟಿಗೆ' ಹಿಡಿಯುವ ಸಂಪ್ರದಾಯವಿದೆ. ದೀವಟಿಗೆ ಹಿಡಿಯುವವರು ಮಡಿವಾಳರು. ಇಂತಹ ಸಂದರ್ಭಗಳಲ್ಲಿ ಮಡಿವಾಳನನ್ನು ಗಂಡಿನ ಕಡೆಯವರು ನೇಮಿಸುತ್ತಾರೆ.

ಮದುವೆಯ ಈ ಎಲ್ಲಾ ಕೈಂಕರ್ಯಗಳಿಗೆ ಪ್ರತಿಯಾಗಿ ಪುರೋಹಿತರಿಗೆ, ಕಿಲೇಶಿಗೆ, ಮಡಿವಾಳರಿಗೆ 'ಅನ್ನಪಡಿ' ಸಲ್ಲುತ್ತದೆ. ಆಯಾಯ ಊರು ಅಥವಾ ವಾಡೆಗಳಲ್ಲಿ ಇವರಿಗೆ ಕೇಣಿ ಅಥವಾ ಅಜಲು ಇತ್ತು. ಇವರೆಲ್ಲರಿಗೆ ಆ ಕಾರಣದಿಂದಲೇ ಊರಿನಲ್ಲಿ ವಾಸಾಶ್ರಯ ಇರುತ್ತಿತ್ತು. ಊರಿನಲ್ಲಿ ಆಯಾಯ ಕಸುಬಿನವರ ಪ್ರತ್ಯೇಕ ಕೇರಿಗಳಿದ್ದುವು. ಮದುವೆಯ ಹೊರೆಕಾಣಿಕೆ ಹೊತ್ತು ತಲುಪಿಸಲು ಊರಿನ ದಲಿತವರ್ಗದ ಕೊರಗ ಸಮುದಾಯದವರು ಬರಬೇಕಿತ್ತು. ಅವರಿಗೂ ಒಂದು ರೀತಿಯ ಕೇಣಿ ಅಥವಾ ಆ ಕೆಲಸ ಮಾಡಲು ಆಯಾಯ ಪ್ರಾದೇಶಿಕ ವ್ಯಾಪ್ತಿಯೊಳಗೆ ಆಯಾಯ ಪಂಗಡದವರಿಗೇ ಸಾರ್ವಭೌಮತ್ವವಿತ್ತು. ತಮ್ಮ ಸ್ವಂತ ಆಸ್ಥೆ ಮತ್ತು ಆತ್ಮ ಸಂತೋಷದಿಂದಲೇ ಈ ಕೆಲಸವನ್ನು ಅವರು ಮಾಡುತ್ತಿದ್ದರು. ಇದಕ್ಕಾಗಿ ಪಕ್ಕದ ಊರಿನ ತಮ್ಮದೇ ಸಮಾಜದವರು ಬಂದರೆ, ಪೂರ್ವ ನಿರ್ಧಾರಿತ ಗಡಿರೇಖೆಯನ್ನು ಉಲ್ಲಂಘಿಸಿದರೆ ಇವರು ಸಹಿಸುತ್ತಿರಲಿಲ್ಲ. ಹೊಲೆಯ, ಕೊರಗ ಮುಂತಾದ ಸಮುದಾಯದವರಲ್ಲಿ ತಾವು ಮೇಲ್ವರ್ಗದವರ ಚಾಕರಿ ಮಾಡಿದರೆ, ಉಚ್ಚಿಷ್ಟ ಸೇವಿಸಿದರೆ ಮುಂದಿನ ಜನ್ಮದಲ್ಲಿ ಆ ಮೇಲ್ವರ್ಗದವರ ಜಾತಿಯಲ್ಲಿ ತಾವು ಹುಟ್ಟುತ್ತೇವೆ ಎಂಬ ನಂಬಿಕೆ ಇತ್ತು ಎಂಬುದಾಗಿ ಅಧ್ಯಯನಕಾರರ ಅಭಿಪ್ರಾಯ. (ಪ್ರೊ. ಎ. ವಿ. ನಾವಡ–ಕೊರಗರು–ಕರ್ನಾಟಕ ಬುಡಕಟ್ಟುಗಳು ಸಂಪುಟ 1 ಪುಟ 279). ನನ್ನ ಎಳವೆಯಲ್ಲಿ

ನಾನು ಕಂಡಂತೆ ಕುಡುಬಿಯರ ಮದುವೆ ಊಟಕ್ಕೆ ಎಂಜಲೆಲೆಗೆ ಈ ಕೆಳವರ್ಗದವರನ್ನೂ ಮೌಖಿಕವಾಗಿ ಆಹ್ವಾನಿಸುತ್ತಿದ್ದರು.

ಕುಡುಬಿಯರ ಮದುವೆ ವಧುವಿನ ಮನೆಯಲ್ಲೇ ಜರಗುವುದಾದಲ್ಲಿ ಪುರೋಹಿತರನ್ನು ನೇಮಿಸಿಕೊಂಡು ಅಲ್ಲಿಗೆ ಕರೆದುಕೊಂಡು ಗಂಡಿನ ಕಡೆಯವರು ಹೋಗಬೇಕು. ಧಾರೆ ವರನ ಮನೆಯಲ್ಲಿ ಜರಗುವ ಸಂದರ್ಭಗಳಲ್ಲಿ ಚಪ್ಪರಕ್ಕೆ ವರನನ್ನು ಬರಮಾಡಿಕೊಳ್ಳುವಾಗ ಹೆಣ್ಣಿನ ಕಡೆಯ ಯಜಮಾನ ಶಕುನದೀಪ ಮಾಡಿ ಸ್ವಾಗತಿಸುತ್ತಾನೆ. ಆವಾಗ ವರ ತನ್ನ ಪ್ರಥಮ ಹೆಜ್ಜೆ ಇರಿಸಲು ಮಡಿವಾಳ ನಡೆಮಡಿ ಹಾಸುವುದಕ್ಕೆ ಮಡಿವಾಳನನ್ನು ಹೆಣ್ಣಿನ ಕಡೆಯವರು ಕರೆದುಕೊಂಡು ಬಂದಿರಬೇಕು.

ನಿರ್ದಿಷ್ಟ ವಿಧಿಗಳಲ್ಲಿ ಗಂಡಿನ ಮತ್ತು ಹೆಣ್ಣಿನ ಕಡೆಯವರು ಈ ಸೇವಾದಾರರಿಗೆ 'ಪಡಿ'ಯನ್ನು ಸಲ್ಲಿಸುತ್ತಾರಾದರೂ ಕೆಲವು ಬಾರಿ ಒಬ್ಬರ ಪರವಾಗಿ ಇನ್ನೊಬ್ಬರು ಸಲ್ಲಿಸುವುದೂ ಇದೆ. ಇಲ್ಲಿ ಮಡಿವಾಳನಿಗೆ ಹೆಣ್ಣಿನ ಕಡೆಯವರು ಪಡಿ ನೀಡಬೇಕಾಗಿದ್ದರೂ, ತಮ್ಮ ಜವಾಬ್ದಾರಿ ಮತ್ತು ಮರ್ಯಾದೆಗಾಗಿ ಗಂಡಿನವರೂ ನೀಡುವುದಿದೆ.

ಹಿಂದಿನ ಕಾಲದಲ್ಲಿ ವಾಹನಗಳ ಸೌಕರ್ಯವಿಲ್ಲದುದರಿಂದ ವರ ಅಥವಾ ವಧುವಿನ ದಿಬ್ಬಣ ನಡೆದುಕೊಂಡೇ ಹೋಗಬೇಕಾಗಿತ್ತು. ಈ ನಡೆದಿಬ್ಬಣ ಬ್ಯಾಂಡು ವಾಲಗದೊಂದಿಗೆ ಸಾಗುತ್ತಿತ್ತು. ವಾಲಗದವರನ್ನು ದ್ವಿಪಕ್ಷೀಯರೂ ನೇಮಿಸುತ್ತಾರೆ. ವರನ ದಿಬ್ಬಣ ವಾಲಗದೊಂದಿಗೆ ಹೋದಲ್ಲಿ, ವಧುವಿನ ಮನೆಯಲ್ಲಿ ಪ್ರತ್ಯೇಕ ವಾಲಗದ ವ್ಯವಸ್ಥೆ ಮಾಡಿರುತ್ತಾರೆ. ಅಥವಾ ವರನ ದಿಬ್ಬಣ ತಲುಪಿಸಿದ ವಾಲಗದವರೇ, ಹೆಣ್ಣಿನ ಮನೆಯಲ್ಲಿ ಧಾರೆಯ ಕಾರ್ಯಕ್ರಮಗಳು ಮುಗಿಯುವ ವರೆಗೆ ವಾಲಗ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ವಧೂವರರ ದಿಬ್ಬಣ ಮರುಸೇಸೆಗೆ ವಧುವಿನ ಮನೆಗೆ ಬರುವಾಗಲೂ ವಾಲಗದೊಂದಿಗೇ ಬರುವುದುಂಟು. ಊರಿನಲ್ಲಿ ಹೀಗೆ ಖಾಯಮ್ಮಾಗಿ ವಾಲಗ ಊದುವವರು ಇರುತ್ತಾರೆ. ಅವರಿಗೂ ಇದೊಂದು ರೀತಿಯ ಅಜಲಿನಂತೆಯೇ. ಬೇರೆ ಊರಿನವರಿಂದ ವಾಲಗ ಮಾಡಿಸಿದಲ್ಲಿ ಈ ಊರಿನ ವಾಲಗಗಾರರು ಸಹಿಸುವುದಿಲ್ಲ. ತಾಂಬೂಲ ನಿಶ್ಚಿತಾರ್ಥ ಆದ ತಕ್ಷಣ ಅವರಿಗೆ ತಿಳಿಸಬೇಕು. ಇಂತಹ ಕಾರ್ಯಗಳಲ್ಲಿ ಸಂಬಳ ಅಥವಾ ಫಲಾಪೇಕ್ಷೆಯ ಲೆಕ್ಕಹಾಕದೆ ಅವರು ಮದುವೆ ಸಮಾರಂಭದಲ್ಲಿ ತಮ್ಮ ಕರ್ತವ್ಯ ಎಂಬಂತೆ ಸೇವೆ ಸಲ್ಲಿಸುತ್ತಾರೆ. ವಾಲಗದವರಿಗೂ 'ಅನ್ನಪಡಿ' ಸಂದಾಯವಾಗುತ್ತದೆ.

ಮದುವೆಗೆ ಕೆಲವು ದಿವಸ ಮೊದಲು ಚಿನಿವಾರ ಕಟ್ಟೆಗೆ ಹೋಗಿ ಒಡವೆ ಮಾಡಿಸುತ್ತಾರೆ ಅಥವಾ ಖರೀದಿಸುತ್ತಾರೆ. ವರನ ಕಡೆಯವರು ಚಿನಿವಾರರಲ್ಲಿ ಹೇಳಿ ತಮ್ಮ ಖುಷಿಯ ಚಿನ್ನದ ಅಥವಾ ಬೆಳ್ಳಿಯ ಮಾಂಗಲ್ಯ ಮಾಡಿಸುತ್ತಾರೆ. ವಧುವಿಗೆ ತವರಿನ ಕಡೆಯಲ್ಲೂ ಅಲ್ಪಸ್ವಲ್ಪ ಚಿನ್ನದೊಡವೆ ಮಾಡಿಸುತ್ತಾರೆ. ಆರ್ಥಿಕವಾಗಿ ಸಶಕ್ತರಲ್ಲದವರು ಮದುವೆ ಪ್ರಾಯದವರೆಗೆ ಮಗಳಿಗೆ ಯಾವುದೇ ಒಡವೆ ಮಾಡಿಸಿರದಿದ್ದರೂ ವಧು

ಮಡಿಯುವವಳಾದರೆ ಅವಳ ಸಂಪಾದನೆಯಿಂದಲಾದರೂ. ಯಾವುದಾದರೂ ರೀತಿಯ ಚಿನ್ನದೊಡವೆ ಮಾಡಿಸಿಯೇ ಮಾಡುತ್ತಾರೆ. ಆದರೆ ಕುಡುಬಿಯರಲ್ಲಿ ವಧುವಿಗೆ ತವರಿನ ಕಡೆಯಿಂದ ಒಡವೆ ಹಾಕಲೇಬೇಕೆಂಬ ಕಡ್ಡಾಯವೇನಿಲ್ಲ. ಈ ಬಗ್ಗೆ ಗಂಡಿನ ಕಡೆಯವರು ಬೇಡಿಕೆ ಇಡುವಂತಿಲ್ಲ. ಅಥವಾ ಒತ್ತಡ ಹಾಕುವಂತಿಲ್ಲ. ಆದರೆ ಕಾಲ್ಬೆರಳಿನ ಬೆಳ್ಳಿಯ ಉಂಗುರಗಳನ್ನು ತವರಿನವರೇ ಹಾಕಬೇಕು. ವಧುವಿಗೆ ಕಾಲುಂಗುರ, ಮೂಗುತಿ, ಕಾಲ್ಗೆಜ್ಜೆಗಳನ್ನು ಗಂಡಿನ ಕಡೆಯವರು ಹಾಕುವ ಸಂಪ್ರದಾಯವಿಲ್ಲ. ಈ ಪೈಕಿ ಕಾಲುಂಗುರಗಳನ್ನು ಮದುವೆಯ ದಿನ ಹತ್ತಿರ ಬರುತ್ತಿರುವಾಗ ಮಾಡಿಸಿದರೂ ತೊಡುವಂತಿಲ್ಲ. ಮದುವೆಯ ಹಿಂದಿನ ದಿನ ದೇವಕಾರ್ಯ ನಡೆಯುವ ಸಂದರ್ಭ ಅಥವಾ ಮದುವೆ ದಿನ ವಧು ಶೃಂಗಾರವಾಗಿ ಹೊರಡುವಾಗ ಕಾಲುಂಗುರಗಳನ್ನು ಧರಿಸುವುದು ಸಂಪ್ರದಾಯ. ಮೂಗುತಿ, ಕಾಲ್ಗೆಜ್ಜೆಗಳನ್ನು ಮದುವೆಗೆ ಮೊದಲು ಯಾವಾಗಲೂ ತೊಡಬಹುದು. ಆರ್ಥಿಕವಾಗಿ ಸಶಕ್ತನಾದ ಗಂಡು ಮಾಂಗಲ್ಯವಲ್ಲದೆ ತನ್ನ ಇಚ್ಛೆಯ ಚಿನ್ನದ ಒಡವೆಯನ್ನು ವಧುವಿಗೆ ಉಡುಗೊರೆ ರೂಪದಲ್ಲಿ ಕೊಡುವುದಿದೆ.

6.1. ಜವುಳಿ ಖರೀದಿ :

ಮದುವೆಗೆ ಬೇಕಾದ ಜವುಳಿಯನ್ನು ವರ ಮತ್ತು ವಧುವಿನ ಕಡೆಯವರು ಪ್ರತ್ಯೇಕ ಪ್ರತ್ಯೇಕವಾಗಿಯೇ ಖರೀದಿಸುತ್ತಾರೆ. ದ್ವಿಪಕ್ಷೀಯರೂ ಒಂದೇ ದಿನ, ಒಂದೇ ಕಡೆಯಿಂದ, ಒಟ್ಟಿಗೆ ಹೋಗಿ ಜವುಳಿ ಖರೀದಿಸುವ ಕ್ರಮವಿಲ್ಲ. ಜವುಳಿ ಖರೀದಿಗೂ ಪ್ರಶಸ್ತವಾದ ದಿನ, ಮುಹೂರ್ತ ನೋಡುವ ಕ್ರಮವಿದೆ. ಕುಡುಬಿಯರು ಹಿಂದಿನ ಸಂಪ್ರದಾಯ ಪ್ರಕಾರ ಅರಶಿನ ವರ್ಣದ ಧಾರೆ ಸೀರೆಯನ್ನೇ ಆಯ್ಕೆ ಮಾಡುತ್ತಿದ್ದರು. ಈಗ ಈ ಪ್ರದೇಶದ ವಾಡಿಕೆಯಂತೆ ಕುಂಕುಮ ವರ್ಣದ ಸೀರೆ ಖರೀದಿಸುತ್ತಾರೆ. ಕೆಲವು ಬಟ್ಟೆಗಳನ್ನು ಹೊಲಿಯಬೇಕಾಗುವುದರಿಂದ ಹೊಲಿಯಲು ಬೇಕಾದ ಅವಧಿಯನ್ನು ಲೆಕ್ಕ ಹಾಕಿ ಅದಕ್ಕಿಂತ ಮೊದಲು ಒಂದು ಶುಭದಿನ, ಸುಮುಹೂರ್ತದಲ್ಲಿ, ಜವುಳಿ ಖರೀದಿಯ ಅನುಭವವಿರುವವರನ್ನು ಕರೆದುಕೊಂಡು ಹೋಗಿ ಜವುಳಿ ಖರೀದಿಸುತ್ತಾರೆ. ವಧುವಿನ ಧಾರೆಸೀರೆ, ಮೇಲುಸೀರೆ, ಅದಕ್ಕೆ ಬೇಕಾದ ಪೂರಕ ವಸ್ತ್ರಗಳು, ವರನಿಗೆ ಕಚ್ಚೆ ಹಾಕಲು ಬೇಕಾದ ಧೋತಿ, ಶಾಲು, ರುಮಾಲು, ಆಪ್ತೇಷ್ಟರಿಗೆ ಉಡುಗೊರೆ ನೀಡಲು ಬೇಕಾದ ಬಟ್ಟೆಗಳು, ಮಕ್ಕಳು ಮರಿಗಳಿಗೆ, ಬೀಗರಿಗೆ, ಗುರಿಕಾರ ರಾಯಭಾರಿಯವರಿಗೆ, ಧಾರೆಗೆ, ಮದುವೆಯ ಜವಾಬ್ದಾರಿ ನಿರ್ವಹಿಸಿದವರಿಗೆ ಉಡುಗೊರೆಯಾಗಿ ನೀಡಲು ಬೇಕಾದ ಜವುಳಿಯನ್ನು ಗಂಡಿನ ಕಡೆಯವರು ಖರೀದಿಸುತ್ತಾರೆ. ಹುಡುಗಿ ಕಡೆಯವರು ತವರಿನದೆಂದು ದಿಬ್ಬಣ ಸೀರೆ (ವಾಡಿ ಸೀರೆ), ಅದಕ್ಕೆ ಬೇಕಾದ ಪೂರಕ ವಸ್ತ್ರಗಳು, ಬಂಧುವರ್ಗದವರಿಗೆ, ಬೀಗರಿಗೆ, ಮಕ್ಕಳು ಮರಿ ಮತ್ತು ಮದುವೆಯಲ್ಲಿ ಜವಾಬ್ದಾರಿಯ ಕಾರ್ಯನಿರ್ವಹಿಸಿದವರಿಗೆ ಉಡುಗೊರೆಯಾಗಿ ನೀಡಲು ಬೇಕಾದ ಜವುಳಿ ಖರೀದಿ ಮಾಡುತ್ತಾರೆ. ಮದುವೆಗೆ ಜವುಳಿ ಖರೀದಿಸುವುದಕ್ಕಿಂತ ಉಣ್ಣಲು ತಿನ್ನಲು ಮತ್ತು

ಜೀವನ ನಡೆಸುವುದೇ ಕಷ್ಟವಿದ್ದ ಹಿಂದಿನ ಕಾಲದಲ್ಲಿ ಕೆಲವು ಕುಟುಂಬಗಳಲ್ಲಿ ಜೋಪಾನವಾಗಿಟ್ಟ ತಾಯಿಯ ಧಾರೆಯ ಸೀರೆಯೇ ಮಗಳ ಧಾರೆಯ ಸೀರೆಯಾಗಿ ಉಪಯೋಗವಾಗುತ್ತಿತ್ತು ಎಂಬ ದೀನ ಪರಿಸ್ಥಿತಿಯ ವಿಚಾರ ಕೇಳಲು ಸಿಗುತ್ತದೆ. ಬಟ್ಟೆಗಳನ್ನಿಡಲು ಪೆಟ್ಟಿಗೆಗಳು ಇರದಿದ್ದ ಆ ಕಾಲದಲ್ಲಿ ಬಟ್ಟೆಗಳನ್ನು ಮಣ್ಣಿನ ಮಡಕೆಗಳಲ್ಲಿ ಮಡಚಿಟ್ಟು, ಹುಳಜೀಳದ ಹಾಗೆ ಲಾವಂಚದ ಬೇರುಗಳನ್ನಿಟ್ಟು ಬಾಯಿಕಟ್ಟಿ ಇಡುತ್ತಿದ್ದರು ಎಂಬ ಕುತೂಹಲಕರ ವಿಷಯವೂ ಕೇಳಲು ಸಿಗುತ್ತದೆ. ವಧೂವರರಿಗೆ ಚಪ್ಪಲಿ, ಛತ್ರಿ ಹಾಗೂ ವಧುವಿಗೆ ಬಟ್ಟೆಗಳನ್ನಿಡಲು ಪೆಟ್ಟಿಗೆಗಳನ್ನೂ ಇದೇ ಸಂದರ್ಭ ಖರೀದಿಸಲಾಗುತ್ತದೆ.

ಅವಿಭಜಿತ ಅಥವಾ ಜಂಟಿಕುಟುಂಬ ವ್ಯವಸ್ಥೆ ಚಾಲ್ತಿಯಲ್ಲಿದ್ದ ಕಾಲದಲ್ಲಿ ಕುಟುಂಬದ ಕರ್ತೃ/ ಯಜಮಾನ, ತನಗೆ ಆಪ್ತರಾದ ಹಂಚರನ್ನು ಕರೆದುಕೊಂಡು ಹೋಗಿ ಜವುಳಿ ಖರೀದಿಸುತ್ತಿದ್ದ. ಮಹಿಳೆಯರು ಜವುಳಿ ಖರೀದಿಗೆ ಹೋಗುತ್ತಿರಲಿಲ್ಲ. ಕರ್ತೃ ಯಾವ ಜವುಳಿ ಖರೀದಿಸಿ ತಂದರೂ ಯಾರೂ ಆಕ್ಷೇಪಿಸುತ್ತಿರಲಿಲ್ಲ. ಅದಕ್ಕೆ ವಧೂವರರ ಮತ್ತವರ ಮನೆಮಂದಿಯ ಸಮ್ಮತಿ, ಸಂತೋಷ ಇರುತ್ತಿತ್ತು. ಮದುವೆಯ ಜವುಳಿ ಖರೀದಿಸುವ ಜವಾಬ್ದಾರಿ ಮತ್ತು ಖರ್ಚು ಯಜಮಾನನದ್ದು. ಈಗ ಪರಿಸ್ಥಿತಿ ಬದಲಾಗಿದೆ. ವಧೂವರರೂ ಜವುಳಿ ಖರೀದಿಗೆ ಹೋಗುವುದು ಮಾಮೂಲಾಗಿದೆ. ವಧೂವರರಿಗೆ ಅವರವರ ಪಸಂದಿನ ಜವುಳಿ ಆಯ್ಕೆ ಮಾಡುವ ಸ್ವಾತಂತ್ರ್ಯ ಮತ್ತು ಅವಕಾಶಗಳಿವೆ.

6.2. ಇತರ ತಯಾರಿಗಳು :

ಸಾಮಾನ್ಯವಾಗಿ ಬುಡಕಟ್ಟುಗಳ ಮದುವೆ ಒಂದು ಕುಟುಂಬದ ಪರಿಧಿಯನ್ನು ಮೀರಿ ಇಡೀ ಸಮುದಾಯದ ಸಂಭ್ರಮವೆಂಬಂತೆ ಆಚರಿಸಲ್ಪಟ್ಟು ಸಮುದಾಯ ಪ್ರಜ್ಞೆಯನ್ನು ಬಲಗೊಳಿಸುತ್ತದೆ. ಪ್ರತಿಯೊಂದು ಕುಟುಂಬದವರು ಒಂದು ಕುಟುಂಬದ ಮದುವೆಯಲ್ಲಿ, ತಮ್ಮದೇ ಮನೆಯಲ್ಲಿ ಜರಗುವ ಮದುವೆ ಎಂಬಂತೆ ಸಡಗರದಿಂದ ಭಾಗವಹಿಸುತ್ತಾರೆ. ಪ್ರತಿಯೊಂದು ಕೆಲಸಗಳನ್ನು ಸ್ವಪ್ರೇರಣೆ ಮತ್ತು ಉಲ್ಲಾಸಭರಿತರಾಗಿ ನಿರ್ವಹಿಸುತ್ತಾರೆ. ಇನ್ನೊಂದು ಕುಟುಂಬದ ಮದುವೆಯಲ್ಲಿ ಸಕ್ರಿಯ ಪಾತ್ರವಹಿಸಿದರೆ ಮುಂದಕ್ಕೆ ತಮ್ಮ ಮನೆಯಲ್ಲಿ ಜರಗಬಹುದಾದ ಮದುವೆ ಸಂಭ್ರಮದಲ್ಲಿ ಆ ಮನೆಯವರೂ ಬಂದು ಸಹಕರಿಸುತ್ತಾರೆ ಎಂಬ ಗಾಢ ವಿಶ್ವಾಸ ಬುಡಕಟ್ಟು ಸಮುದಾಯದಲ್ಲಿರುತ್ತದೆ. ಈ ಮನೋವೃತ್ತಿಯಿಂದ ಕುಡುಬಿಯರೂ ಹೊರತಾಗಿಲ್ಲ. ಅವರು ಬದುಕುವ ನೆಲೆಗಳು ಮತ್ತು ವ್ಯವಸ್ಥೆಗಳು ಅವರ ಮನೋವೃತ್ತಿಗೆ ಪೂರಕವಾಗಿರುತ್ತವೆ. ಅವರ ಸಾಮೂಹಿಕ ಬದುಕೇ ಈ ಮೌಲ್ಯಗಳನ್ನು ಕಲಿಸಿರುತ್ತದೆ.

ಮದುವೆ ದಿನ ಸಮೀಪವಾಗುತ್ತಿದೆ ಅನ್ನುವಾಗ ಮನೆಯ ಪರಿಸರವನ್ನು ನಿರ್ಮಲಗೊಳಿಸುವ ಕೆಲಸಗಳಿರುತ್ತವೆ. ಕಲ್ಯಾಣ ಮಂಟಪಗಳಲ್ಲಿ , ಸಭಾಭವನಗಳಲ್ಲಿ ಮದುವೆಗಳು ಜರಗುವ ಸಂಪ್ರದಾಯ ಚಾಲ್ತಿಗೆ ಇನ್ನೂ ಬಾರದ ಹಿಂದಿನ ದಿನಗಳಲ್ಲಿ,

ಕುಡುಬಿಯರ ಮದುವೆಗಳು ಮನೆಯ ಅಂಗಳದಲ್ಲೇ ಜರಗುತ್ತಿದ್ದವು. ಮನೆಯ ಮಾಡು ಮುಳಿ ಹುಲ್ಲಿನದಾಗಿದ್ದಲ್ಲಿ ಮಾಡಿಗೆ ಹೊಸದಾಗಿ ಮುಳಿಹುಲ್ಲು ಹೊದೆಸುವುದು. ಮನೆಗೋಡೆಗಳಿಗೆ ಸುಣ್ಣಬಣ್ಣ ಬಳಿಯುವುದು. ಅಂಗಳಕ್ಕೆ ಮಣ್ಣು ಹಾಕಿ ಕಲಸಿ ಸಮತಟ್ಟು ಮಾಡುವುದು. ಸೆಗಣಿ ಸಾರಿಸುವುದು.... ಮುಂತಾದ ಕೆಲಸಗಳು ಇರುತ್ತಿದ್ದವು. ಬೇಕಾದಷ್ಟು ನೀರಿನ ಸೌಲಭ್ಯವಿಲ್ಲದಿದ್ದರೆ ನೀರಿನ ವ್ಯವಸ್ಥೆ. ಕುಳಿತುಕೊಳ್ಳಲು ಬೆಂಚು. ಕುರ್ಚಿ. ಚಾಪೆಗಳ ವಸನ ವ್ಯವಸ್ಥೆ. ಊಟಕ್ಕೆ ಕುಳಿತುಕೊಳ್ಳಲು ಪಂಕ್ತಿಗಳ ವ್ಯವಸ್ಥೆಗಳನ್ನು ಮುಂಚಿತವಾಗಿಯೇ ತಯಾರು. ತಲಾಸು ಮಾಡಿಡುತ್ತಾರೆ. ವಸ್ತುಗಳನ್ನು ಮತ್ತು ಪರಿಕರಗಳನ್ನು ನೆರೆಕರೆ ಮತ್ತು ಸಂಬಂಧಿಕರಲ್ಲಿಂದ ಎರವಲು ಪಡೆದಾದರೂ ಒಟ್ಟು ಮಾಡಿಡುತ್ತಾರೆ. ಈ ಎಲ್ಲಾ ಪೂರ್ವ ತಯಾರಿಯ ಕೆಲಸಗಳನ್ನು ಕುಟುಂಬಸ್ಥರು. ವಾಡೆಯವರು ಮತ್ತು ಬಂಧುಗಳು ಸಾಮೂಹಿಕವಾಗಿ ಒಬ್ಬರಿಗೊಬ್ಬರು ಸಹಕಾರದಿಂದ ಮಾಡುತ್ತಾರೆ.

ಮದುವೆಯ ಪ್ರತಿಯೊಂದು ಸಂಭ್ರಮದ ಸಂದರ್ಭದಲ್ಲೂ ಗರ್ನಾಲು ಬಿಡಲು ಗರ್ನಾಲು ಖರೀದಿಸಬೇಕು. ಹಾಗೆಯೇ ಪ್ರತಿಯೊಂದು ಆಚರಣೆಗಳಲ್ಲಿ ವೀಳ್ಯಪಟ್ಟಿಗೆ ಮತ್ತು ಕವಳಕ್ಕೆ ಬೇಕಾದ ವೀಳ್ಯದೆಲೆ. ಅಡಿಕೆಗಳು ಬೇಕು. ಹೂವು-ಮಲ್ಲಿಗೆ ಮತ್ತು ಅಬ್ಬಲಿಗೆಗಳು ಅವಶ್ಯ. ಸಂದರ್ಭಕ್ಕೆ ಲಭ್ಯವಾಗದ ಈ ವಸ್ತುಗಳನ್ನು ಖರೀದಿಸಲು ಮುಂಚಿತವಾಗಿಯೇ ಕಾದಿರಿಸಬೇಕು. ಪಾತ್ರೆ ಪಗಡಿ, ಕಡೆಯುವ ಕಲ್ಲುಗಳು, ಬೀಸ್ಕಲ್ಲುಗಳು, ಹೆರೆಮಣೆ, ಮೆಟ್ಟುಕತ್ತಿ, ಕತ್ತಿ, ಚಾಪೆ, ಬಾಳೆಎಲೆ, ತೆಂಗಿನ ಮಡಲು...... ಇತ್ಯಾದಿ ಅಗತ್ಯ ವಸ್ತುಗಳನ್ನು ನೆರೆಹೊರೆಯಿಂದ ತಂದು ತಯಾರಿಡುತ್ತಾರೆ. ಮದುವೆಯ ಅಡುಗೆಯಲ್ಲಿ ಪರಿಣಿತ ಪುರುಷ ಬಾಣಸಿಗರು ಪ್ರತಿಯೊಂದು ಕುಟುಂಬ ಮತ್ತು ವಾಡೆಗಳಲ್ಲಿ ಇರುತ್ತಾರೆ. ಮದುವೆ ಸಮಾರಂಭದ ಅಡುಗೆಯಲ್ಲಿ ಪುರುಷರದೇ ಮಹತ್ತರ ಪಾತ್ರ. ಮಹಿಳೆಯರು ಪುರುಷರಿಗೆ ಸಹಕಾರ ನೀಡುತ್ತಾರೆ. ಅಡುಗೆಗೆ ಎಲ್ಲರ ಸಹಕಾರವಿದ್ದರೂ ಮುಖ್ಯ ಬಾಣಸಿಗನನ್ನು ಪ್ರತ್ಯೇಕವಾಗಿ ಆಹ್ವಾನಿಸಿರುತ್ತಾರೆ. ಮದುವೆಯ ಪೂರ್ವಾಲೋಚನೆ ಇದ್ದವರು ಅಡುಗೆಗೆಂದೇ ಕೆಸುವಿನ ಗಡ್ಡೆ. ಚೀನಿಕಾಯಿ. ಕುಂಬಳ. ಸೌತೆ. ಮಾವಿನಕಾಯಿಗಳನ್ನು ತಲಾಸು ಮಾಡಿಡುತ್ತಾರೆ. ಹಿಂದಿನ ಕಾಲದಲ್ಲಿ ಸ್ವಂತ ಕೃಷಿ ಮಾಡಿ, ಒಂದೊಂದು ಮನೆಯಲ್ಲಿ 400–500 ಸೌತೆಕಾಯಿಗಳನ್ನು ತೆಂಗಿನ ಎಳೆಗರಿಗಳ ಬುರುಳಿನಲ್ಲಿ ಮನೆಯ ಮಾಡಿನ ಬಂತಿಗಳಿಗೆ ತೂಗು ಹಾಕಿರುವ ದೃಶ್ಯ ಪ್ರತೀ ಕುಡುಬಿಯರ ಮನೆಯಲ್ಲಿ ಸಾಮಾನ್ಯವಾಗಿತ್ತು. 25–50ರಷ್ಟು ಚೀನಿಕಾಯಿ. ಕುಂಬಳಗಳು ಇರುತ್ತಿದ್ದವು. ಮದುವೆಯ ಅಡುಗೆಗೆಂದೇ ವರ್ಷಗಳ ಮೊದಲೇ ಕೆಸುವಿನ ಗಡ್ಡೆ ನೆಟ್ಟು ಬೆಳೆಸುತ್ತಿದ್ದರು. ಜೇಷ (ವೃಷಭ) ತಿಂಗಳ ನಂತರವೂ ಸೌತೆಕಾಯಿ ತೂಗುಹಾಕಿದ್ದರೆ ಆ ಮನೆಯಲ್ಲಿ ಮದುವೆ ಜರಗಲಿಕ್ಕಿದೆ ಎಂದೇ ಅರ್ಥ. ಒಂದೆರಡಾದರೂ ಬಾಳೆಗೊನೆ ಹುಡುಕಿ ತಯಾರಿಡುತ್ತಾರೆ. ತೆಂಗಿನಕಾಯಿ ಇರುವವರು ಗಾಣದಲ್ಲಿ ಹಾಕಿ ಎಣ್ಣೆ ತೆಗೆದು ಇಡುತ್ತಿದ್ದರು. ಹಿಂದಿನ ಮದುವೆ ಊಟದಲ್ಲಿ ಸಿಹಿತಿಂಡಿ (sweets) ಕ್ರಯಕ್ಕೆ ತರುವ ಅಥವಾ ಮಾಡಿಸುವ ಕ್ರಮವಿರಲಿಲ್ಲ. ಊಟದೆಲೆಗೆ ಪಾಯಸ ಬಡಿಸುವಾಗ, ಪಾಯಸದ ಮೇಲೆ ಧಾರಾಳ

ಜೇನು ಬಡಿಸುವುದು ಮಾಮೂಲಾಗಿತ್ತು. ಇದಕ್ಕಾಗಿಯೇ ಜೇನನ್ನು ವರ್ಷಗಳ ಹಿಂದೆ ಭರಣಿಗಳಲ್ಲಿ ಸಂಗ್ರಹಿಸಿಡುತ್ತಿದ್ದರು. ಊಟಕ್ಕೆ ಬೇಕಾದ ಉಪ್ಪಿನಕಾಯಿಯನ್ನೂ ಮದುವೆಗೆ ಮುಂಚಿತವಾಗಿ ಹಾಕಿಡುತ್ತಾರೆ. ಅಡುಗೆಗೆ ಬೆಂಕಿ ಉರಿಸಲು ತಿಂಗಳ ಮೊದಲು ಕಟ್ಟಿಗೆ ತಯಾರು ಮಾಡಿಡುತ್ತಾರೆ. ಧಾರೆಗೆ ಬಾಳೆ ಮಂಟಪ ಹಾಕುವುದು ಕುಡುಬಿಯರ ಸಂಪ್ರದಾಯ. ಬಾಳೆ ಮಂಟಪ ಪರಿಣತ ಕುಡುಬಿಯರಿರುತ್ತಾರೆ. ಅವರ ಬೆಡಗಿನ ಹೆಸರು ಇದೇ ಕಾರಣದಿಂದ ಬಂದಿರುವ ಶಕ್ಯತೆ ಇದೆ. ಬಾಳೆಮಂಟಪ ಇಲ್ಲದಿದ್ದಲ್ಲಿ ಇತರ ಅಲಂಕಾರದ ಮೂರು ದ್ವಾರಗಳ ಮಂಟಪ ಹಾಕಿಸುತ್ತಿದ್ದರು. ಅಡುಗೆಗೆ ಐದು ಒಲೆಗಳನ್ನು ಹಾಕುವುದು ಸಂಪ್ರದಾಯ. ಒಲೆಗಳು ಪಂಚ ಸಂಖ್ಯೆಯಲ್ಲಿರುವುದು ಶುಭಕರ ಎಂಬುದು ನಂಬಿಕೆ. ಅದಕ್ಕಿಂತ ಹೆಚ್ಚು, ಕಡಿಮೆ ಅಥವಾ ಸಮಸಂಖ್ಯೆಯ ಒಲೆಗಳನ್ನು ಹಾಕುವ ಕ್ರಮವಿಲ್ಲ. ಐದು ಒಲೆಗಳೂ ಒಂದೇ ಸಾಲಿನಲ್ಲಿರಬೇಕು. ಮದುವೆಯ ಒಂದು ವಾರಕ್ಕೆ ಮೊದಲು ಅಥವಾ ಚಪ್ಪರ ಹಾಕುವ ದಿನ ಒಲೆಗಳನ್ನು ಹಾಕುತ್ತಾರೆ. ಅಡುಗೆಗೆಂದೇ ಪ್ರತ್ಯೇಕವಾದ ಚಪ್ಪರ ಹಾಕಿಡುತ್ತಾರೆ.

ಬಾಣಸಿಗನಿಗೆ ಹೇಳಿಕೆ ನೀಡಿದಾಗ ಆತ ಅಡುಗೆಗೆ ಬೇಕಾದ ಸಾಮಾನಿನ ಪಟ್ಟಿ ನೀಡುತ್ತಾನೆ. ಆ ಪ್ರಕಾರ ತಯಾರು ಮಾಡಿದ ಸಾಮಾನು ಗೇರಿ ಸ್ವಚ್ಛಗೊಳಿಸಿ ಇಡುತ್ತಾರೆ. ನಂತರ ಅವೆಲ್ಲವನ್ನು ಬಿಸಿಲಲ್ಲಿ ಒಣಗಿಸಿ, ಬೀಸಿ, ಕುಟ್ಟಿ ಹುಡಿ ಮಾಡಿಡುತ್ತಾರೆ. ಮದುವೆಯ ವಿಧಿಗಳಿಗೆ ಮೃತ್ತಿಕ ಕಲಶಗಳು ಮತ್ತು ಅಡುಗೆ ಚಪ್ಪರದಲ್ಲಿ ಕುಂಭ ಮುಹೂರ್ತಕ್ಕೆ (ಘಡಿಗೆ ಮುಹೂರ್ತ) ಮಣ್ಣಿನ ಕುಂಭವೇ ಆಗಬೇಕು. ಈ ಶಾಸ್ತ್ರಕ್ಕೆ ತಾಮ್ರ, ಹಿತ್ತಾಳೆ, ಸ್ಟೀಲ್, ಅಲ್ಯುಮೀನಿಯಂ ಪಾತ್ರಗಳನ್ನು ಬಳಸುವುದು ನಿಷಿದ್ಧ. ಇದಕ್ಕಾಗಿಯೇ ಮದುವೆಯ ವಿಷಯ ತಿಳಿದ ಕೂಡಲೇ ಕೇಕದ (ಅಜಲು) ಕುಂಬಾರರು ಮಣ್ಣಿನ ಮಡಕೆಗಳನ್ನು ತಂದುಕೊಡುತ್ತಾರೆ. ಇತ್ತೀಚೆಗೆ ಮಣ್ಣಿನ ಮಡಕೆಗಳು ಕ್ರಯಕ್ಕೆ ಸಿಗುವುದು ಸ್ವಲ್ಪ ಕಷ್ಟವೇ. ಆದರೂ ಕುಡುಬಿಯರ ಮದುವೆ ಸಂಪ್ರದಾಯದಲ್ಲಿ ಇವು ಅವಶ್ಯವಾಗಿ ಬೇಕಾಗುವುದರಿಂದ ಲಭ್ಯವಿದ್ದಲ್ಲಿಂದ ಖರೀದಿಸಿ ತರುತ್ತಾರೆ.

6.3. ಚಪ್ಪರ :

ಕುಡುಬಿಯರ ಮದುವೆಗೆ ಅಂಗಳ ತುಂಬಾ ಚಪ್ಪರ ಹಾಕುತ್ತಾರೆ. ಪೂರ್ವ ಪರಂಪರೆಯಲ್ಲಿ ಮದುವೆಗೆ ಹನ್ನೆರಡು ಕಂಭಗಳುಳ್ಳ ಚಪ್ಪರ ಬೇಕಿತ್ತು ಎಂಬ ಕುತೂಹಲಕರ ವಿಚಾರ ತಿಳಿದುಬರುತ್ತದೆ. ಅರಸಿನ ಶಾಸ್ತ್ರದ ಹಿಂದಿನ ದಿನ ಚಪ್ಪರ ಹಾಕುತ್ತಿದ್ದರು. ಇದರಲ್ಲಿ ಒಂದು ಕಂಭವನ್ನು ಅಂಗಳದಲ್ಲಿ ಮನೆಯ ಮುಖ್ಯ ಬಾಗಿಲ ಎಡಪಾರ್ಶ್ವದ ಮೆಟ್ಟಲ ಹತ್ತಿರ ಹಾಕುತ್ತಾರೆ. ಇದಕ್ಕೆ 'ಮುಹೂರ್ತಕಂಭ' ಅಂತ ಹೆಸರು. ಅರಸಿನ ಶಾಸ್ತ್ರದಂದು ಇದೇ ಕಂಭಕ್ಕೆ ಬೂರುಗ ನೆಟ್ಟು ಹಾಲುಗಂಭ ಶಾಸ್ತ್ರ ಮಾಡಲಾಗುತ್ತದೆ. ಇದೇ ದಿನ ಅಡುಗೆ ಚಪ್ಪರವನ್ನೂ ಹಾಕುತ್ತಾರೆ. ಅಡುಗೆ ಚಪ್ಪರಕ್ಕೆ ಕೆಲವು ಕಡೆ ಬಗಿನಿ

ಮರದ ಸೋಗೆಗಳನ್ನು ಉಪಯೋಗಿಸುತ್ತಾರೆ. ಅಡುಗೆ ಚಪ್ಪರದಲ್ಲಿ ಐದು ಒಲೆಗಳನ್ನೂ ಹಾಕುತ್ತಾರೆ. ಇವರಲ್ಲಿ ಒಂದು ಒಲೆ 'ಕುಂಭಮುಹೂರ್ತಕ್ಕೆ' ಮೀಸಲಿರುತ್ತದೆ. ಹಿಂದಿನ ಸಂಪ್ರದಾಯ ಪ್ರಕಾರ ಚಪ್ಪರ ಹಾಕಿದ ರಾತ್ರಿ 'ವಡೆ ಕಾಯಿಸುವ' ಪದ್ಧತಿಯಿತ್ತು. ಅರ್ಧಮುಡಿ, ಒಂದು ಮುಡಿ ಅಕ್ಕಿಯ ವಡೆಗಳನ್ನು ಕಾಯಿಸುವುದಿತ್ತು. ಚಪ್ಪರ ಹಾಕಿದ ಮರುದಿನ ವಡೆಪಾಯಸದ 'ಚಪ್ಪರದೂಟ'ವಿತ್ತು. ಈ ವಡೆ ಪಾಯಸದ ಊಟ, ವಡೆಗಳನ್ನು ಜಗಿದು ಜಗಿದು ಮಾಡಬೇಕಾದುದರಿಂದ ಊಟಕ್ಕೆ ತುಂಬಾ ಸಮಯ ತಗಲುತ್ತಿತ್ತು. ಇದೇ ಕಾರಣದಿಂದ ಎಳೆಯ ಮಕ್ಕಳು ಊಟ ಮಾಡುವಾಗ ತುಂಬಾ ತಡ ಮಾಡಿದಲ್ಲಿ 'ಏನು? ನಿನ್ನದು ವಡೆ ಪಾಯಸದ ಊಟವಾ?' ಅಂತ ಹಿರಿಯರು ಗದರಿಸುತ್ತಿದ್ದರು.

ಮದುವೆಯ ಈ ಎಲ್ಲಾ ಪೂರ್ವ ತಯಾರಿಗಳಲ್ಲದೆ ಈಗ್ಗೆ 40–50 ವರ್ಷಗಳಿಂದೀಚೆ ಕೆಲವು ಹೆಚ್ಚಿನ (ಅನಗತ್ಯ ?) ತಯಾರಿಗಳನ್ನು ಮಾಡುವುದು ವಾಡಿಕೆಯೇ ಆಗಿದೆ. ಮದುವೆಯ ಮೂರು ನಾಲ್ಕು ದಿನವೂ ಮೈಕ್ ಇಡುತ್ತಾರೆ. ಮೊದಮೊದಲು ಬ್ಯಾಟರಿ ಚಾಲಿತ, ಗ್ರಾಮಫೋನ್‌ನಂತಹ, ನಂತರ ಕ್ಯಾಸೆಟ್ ರೆಕಾರ್ಡರ್ ಮತ್ತು ಈಗ ಕಂಪ್ಯೂಟರ್ ಸಿ.ಡಿ/ ಡಿ.ಜೆಗಳಂತಹ ಆಧುನಿಕ ಸೌಂಡ್ ಸಿಸ್ಟಮ್‌ಗಳು ಬಳಕೆಯಲ್ಲಿ ಬಂದಿವೆ. ಹಿಂದಿನ ಮದುವೆಗಳಲ್ಲಿ ಫೋಟೊ ತೆಗೆವ ಕ್ರಮವೇ ಇರಲಿಲ್ಲ. ಪ್ರಾರಂಭದಲ್ಲಿ ಕರಿ–ಬಿಳಿ ಫೋಟೊ ತೆಗೆಯಲು ಶುರುವಾಯಿತು. ನಂತರ ಕಲರ್‌ಫೋಟೋ ಚಾಲ್ತಿಗೆ ಬಂತು. ಈಗ ವಿಡಿಯೋ ಕ್ಯಾಸೆಟ್, ಸಿ.ಡಿ., ಡಿಜಿಟಲ್ ಫೋಟೊ, ಆಡಿಯೋ ವಿಡಿಯೋ ಸಿ.ಡಿ. ಮುಂತಾದವುಗಳಿಲ್ಲದ ಮದುವೆಗಳೇ ವಿರಳ. ಈ ಫೋಟೊ ವಿಡಿಯೋ ತೆಗೆವ ಕಾರ್ಯಕ್ರಮದಲ್ಲೇ ಮದುವೆಯ ಅರ್ಧಸಮಯ ಕಳೆದಿರುತ್ತದೆ. ಮತ್ತು ಹಣವೂ ವ್ಯಯವಾಗುತ್ತದೆ. ಹಿಂದಿನ ಕಾಲದಲ್ಲಿ ಚಪ್ಪರ ಮತ್ತು ಮಂಟಪಗಳಿಗೆ ಹೆಚ್ಚೆಂದರೆ ಮಾವಿನ ತೋರಣ ಕಟ್ಟುತ್ತಿದ್ದರು. ಬಗಿನಿ ಮರದ ಸೋಗೆಗಳಿಂದ ಅಲಂಕರಿಸುತ್ತಿದ್ದರು. ಈ ತರದ ಅಲಂಕಾರಕ್ಕೆ ನೈಸರ್ಗಿಕ ಶೋಭೆಯೂ ಇತ್ತು. ರಾತ್ರಿ ಹೊತ್ತಿನ ಬೆಳಕಿನ ವ್ಯವಸ್ಥೆಗೆ ಸೀಮೆಎಣ್ಣೆಯ ಪೆಟ್ರೋಮೆಕ್ಸ್ ಲೈಟುಗಳು ವ್ಯಾಪಕವಾಗಿ ಬಳಕೆಯಾಗುತ್ತಿದ್ದವು. ಈಗ ಮದುವೆಯ ಎರಡು ಮೂರು ದಿನವೂ ಝಗಮಗಿಸುವ ದೀಪಾಲಂಕಾರ, ಶಾಮಿಯಾನ ಚಪ್ಪರವಲ್ಲದೆ ಮನೆಗೆ ಸಹಿತ ವಿದ್ಯುದ್ದೀಪಾಲಂಕಾರ ಮಾಡುತ್ತಾರೆ.

ಮದುವೆಯ ಈ ಪೂರ್ವಭಾವೀ ತಯಾರಿಗಳನ್ನು ಕುಡುಬಿಯರು ತಮ್ಮ ಸಮುದಾಯದವರ, ವಾಡೆಯ ಸದಸ್ಯರ, ನೆರೆಹೊರೆಯ ಆಪ್ತರ ಸಹಕಾರದಿಂದ ಮಾಡುತ್ತಾರೆ. ಅವರ್ಯಾರೂ ಸಂಬಳಕ್ಕಾಗಿ ಶ್ರಮವಹಿಸುವುದಿಲ್ಲ. ಹೀಗೆ ಸಹಕಾರ ನೀಡಿದವರ ಶ್ರಮಕ್ಕೆ ಆರ್ಥಿಕ ಮೌಲ್ಯ ಕಟ್ಟಲಾಗುವುದಿಲ್ಲ. ಇಲ್ಲಿ ಮಾನವೀಯ ಸಂಬಂಧಗಳಿಗೇ ಹೆಚ್ಚಿನ ಪ್ರಾಶಸ್ತ್ಯ. ಈ ಎಲ್ಲಾ ಕೆಲಸ ಕಾರ್ಯಗಳಲ್ಲಿ ಭಾಗಿಯಾದವರಿಗೆ ಊಟೋಪಚಾರ ಮಾತ್ರ ಮದುವೆ ಮನೆಯಲ್ಲೇ ಸಾಮೂಹಿಕವಾಗಿ ನಡೆಯುತ್ತದೆ. ಇಲ್ಲಿ ಬಂದು ಶ್ರಮ ವಹಿಸಿದವರ ಮನೆಯಲ್ಲಿ ಮದುವೆಗಳಾಗುವಾಗ ಈ ಮನೆಯವರೂ ಹೋಗಿ ಇದೇ

ರೀತಿಯಲ್ಲಿ ಸಹಕರಿಸುತ್ತಾರೆ. ಈ ಭರವಸೆಯಿಂದಲೇ ಬುಡಕಟ್ಟಿನ ಸಾಮುದಾಯಿಕ ಜೀವನ ನಿರಂತರ ಸುಭದ್ರ ಮತ್ತು ಕ್ರಿಯಾಶೀಲವಾಗಿದೆ. ಹೀಗೆ ಒಬ್ಬರ ಮೇಲೆ ಇನ್ನೊಬ್ಬರಿಗೆ ಇರುವ ನಂಬಿಕೆಗಳು ಬುಡಕಟ್ಟು ಸಮಾಜದ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಬುನಾದಿಯನ್ನು ಘಟ್ಟಗೊಳಿಸುತ್ತವೆ. ಈ ರೀತಿ ಸಹಕರಿಸಿದವರಿಗೆ ವಧೂವರರು ಮದುವೆ ಸಮಾರಂಭದಲ್ಲಿ ಉಡುಗೊರೆಗಳನ್ನು ನೀಡಿ ಗೌರವಿಸುತ್ತಾರೆ. ಮದುವೆಯ ತಯಾರಿಗಳನ್ನು ಗಂಡು ಮತ್ತು ಹೆಣ್ಣಿನ ಕಡೆಯವರು ಅವರವರ ಅನುಕೂಲ ಹಾಗೂ ಶಕ್ತ್ಯಾನುಸಾರ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಒಬ್ಬರಿಂದೊಬ್ಬರು ಮಿಗಿಲಾಗಬೇಕೆಂದು ಹೆಚ್ಚಿನ ಆಡಂಬರದ ಏರ್ಪಾಡುಗಳನ್ನು ಮಾಡುವುದೂ ಇದೆ.

6.4 ನಾಂದಿ :

ಮದುವೆಗೆ ವೃದ್ಧಿಸೂತಕ(ಜನನ) ಅಥವಾ ಕ್ಷಯಸೂತಕ(ಮರಣ)ಗಳ ಹೊಲೆ ಬಂದು ಅಶೌಚ ಸಂಭವಿಸುವ ಅಂದಾಜು ಮೊದಲೇ ಇದ್ದರೆ 'ನಾಂದಿ' ಎಂಬ ಪರಿಹಾರೋಪಾಯದ ಪೂಜೆಯನ್ನು ಆಚರಿಸುತ್ತಾರೆ. ಆದರೆ ಈ ಕ್ರಮ ಕಡ್ಡಾಯವೇನಲ್ಲ. ಕುಟುಂಬಿಕರಲ್ಲಿ ತಿಂಗಳು ತುಂಬಿದ ಗರ್ಭಿಣಿಯರು ಹೆರಿಗೆಗೆ ಇದ್ದರೆ, ಅಥವಾ ಯಾರಾದರೂ ಮರಣ ಶಯ್ಯೆಯಲ್ಲಿ ಇದ್ದರೆ ಮಾತ್ರ 'ನಾಂದಿ' ಇಡಲಾಗುತ್ತದೆ.

ಮದುವೆಯ ಹತ್ತು ದಿನ ಮೊದಲು ಪುರೋಹಿತರು ನಾಂದಿ ಪೂಜೆ ಮಾಡಿಕೊಟ್ಟು ಧಾರೆಯ ಶಾಸ್ತ್ರದಲ್ಲಿ ಭಾಗವಹಿಸುವವರಿಗೆ ಮತ್ತು ವಧೂವರರಿಗೆ ನಾಂದಿಯ ಕಂಕಣವನ್ನು ಕಟ್ಟಲಾಗುತ್ತದೆ. ನಾಂದಿ ಕಟ್ಟಿದ ಮೇಲೆ ಹೊಲೆ ಸೂತಕ ಸಂಭವಿಸಿದರೆ ನಾಂದಿ ಕಟ್ಟಿದವರು ಆಚರಣೆ ಮಾಡಬೇಕಾಗಿಲ್ಲ. ನಾಂದಿ ಧರಿಸಿದವರು ಪವಿತ್ರರಾಗಿಯೇ ಇರುತ್ತಾರೆ. ನಿಶ್ಚಿತ ದಿನಕ್ಕೆ ಮದುವೆ ಮಾಡಬಹುದು. ಇದರಿಂದ ದೋಷಗಳೇನೂ ಇರುವುದಿಲ್ಲ. ಆದರೆ ಕುಟುಂಬ ಸಂಬಂಧಿಕರು ಮದುವೆಯ ಅಡುಗೆ ಮಾತ್ರವಲ್ಲದೆ ಇತರ ಯಾವುದೇ ಸಂಪ್ರದಾಯಗಳಲ್ಲಿ ಭಾಗವಹಿಸುವಂತಿಲ್ಲ. ಈ ಎಲ್ಲಾ ವಿಧಿಗಳನ್ನು ವಾಡೆಯ ಇತರ ಬೆಡಗಿನವರು ಪೂರೈಸಬೇಕು. ನಾಂದಿ ಮಾಡದೆ, ಹೊಲೆ ಸೂತಕಗಳು ಬಂದು ಮದುವೆ ಮುಂದೂಡಲ್ಪಡುವ ಎಷ್ಟೋ ಉದಾಹರಣೆಗಳು ಸಿಗುತ್ತವೆ.

ಧಾರೆ ಮತ್ತು ಇತರ ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸುವ ವಧು, ವರ ಮತ್ತು ಅವರ ತಂದೆತಾಯಿಯವರಿಗೆ ನಾಂದಿ ಕಟ್ಟುವುದರಿಂದಾಗಿ, ಮದುವೆಯ ಎಲ್ಲಾ ಸಂಪ್ರದಾಯಗಳು ಮುಗಿದು, ನಾಂದಿ ವಿಸರ್ಜನೆ ಮಾಡುವವರೆಗೆ ಹೊಲೆ ಲಗಾವಾಗುವುದಿಲ್ಲ. ನಾಂದಿ ಕಟ್ಟಿದ ಕ್ಷಣದಿಂದ ನಾಂದಿ ವಿಸರ್ಜನೆ ಮಾಡುವವರೆಗೂ ಅವರು ಶುದ್ಧಾಚಾರವನ್ನು ಪಾಲಿಸಬೇಕಾಗುತ್ತದೆ. ಅವರು ಸ್ನಾನ ಮಾಡಿ ಶುಚಿರ್ಭೂತರಾಗಿ, ದಿನಕ್ಕೊಂದು ಬಾರಿ ಊಟ ಮಾಡುವ ಏಕಭೋಜನ ವ್ರತದಲ್ಲಿರಬೇಕು. ಹೊಲೆ ಸೂತಕವಿರುವ ಇತರರೊಂದಿಗೆ ಬೆರೆಯಬಾರದು. ಮೀನು, ಮಧುಮಾಂಸಾದಿಗಳನ್ನು

ವರ್ಜಿಸಿ ಶಾಕಾಹಾರವನ್ನು ಮಾತ್ರ ಸ್ವೀಕರಿಸಬೇಕು. ನಾಂದಿ ಕಟ್ಟಿದ ಮೇಲೆ ಕಟ್ಟಿಸಿಕೊಂಡವರಿಗೆ ಣ ಹಾಯಬಾರದು. ನಾಯಿ ಕಚ್ಚಬಾರದು. ಯಾವುದೇ ಅಶೌಚವಾಗಬಾರದು. ದುದರಿಂದ ಅವರು ಮನೆಬಿಟ್ಟು ಹೊರಗೆ ತಿರುಗಾಡುವಂತಿಲ್ಲ. ವರನ ಮನೆಯಲ್ಲಿ ನಾಗೋಲಿ ಶಾಸ್ತ್ರದ ಕೊನೆಯಲ್ಲಿ ಪುರೋಹಿತರು 'ಕಂಕಣದಾರ' ಬಿಡಿಸುವಾಗ ನಾಂದಿಯನ್ನೂ ಬಿಚ್ಚಿ ವಿಸರ್ಜಿಸುತ್ತಾರೆ. ಹೀಗೆ ಕುಡುಬಿಯರು ಹೊಲೆಸೂತಕದ ಪ್ರತಿಕೂಲ ಪರಿಸ್ಥಿತಿಯನ್ನು ವೈದಿಕ ಸಂಪ್ರದಾಯದ 'ನಾಂದಿ' ಶಾಸ್ತ್ರ ಅಳವಡಿಸಿಕೊಳ್ಳುವ ಮೂಲಕ ತಮ್ಮ ಬುಡಕಟ್ಟಿನ ಆಚರಣೆಯಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆಯೊಂದಿಗೆ ಒಂದು ಹೊಸ ಸಂಪ್ರದಾಯಕ್ಕೂ 'ನಾಂದಿ' ಹಾಡಿದಂತಾಗಿದೆ. ಮೂಲದಲ್ಲಿ 'ನಾಂದಿ' ಕುಡುಬಿಯರ ಸಂಪ್ರದಾಯವೇ ಅಲ್ಲ. ಅದು ಅನಿವಾರ್ಯ ಆವಾಹನೆ. ಇತ್ತೀಚೆಗೆ ಹೇರಿಕೊಂಡ ಇಲ್ಲಿನ ವೈದಿಕ ಪುರೋಹಿತಶಾಹಿ ಮತ್ತು ಪ್ರಾದೇಶಿಕ ಸಂಸ್ಕೃತಿಯ ಪ್ರಭಾವದ ಪರಿಣಾಮ.

6.5 ಹೊರೆಕಾಣಿಕೆ (ಹೊರೆ ಕಟ್ಟುವಿಕೆ) :

ಮದುವೆಗೆ ಹೊರೆಕಾಣಿಕೆ ಕಳುಹಿಸುವುದು ಕುಡುಬಿ ಸಂಸ್ಕೃತಿಯಲ್ಲಿ ಗೌರವದ ಸಂಕೇತ. ಬುಡಕಟ್ಟು ಮೂಲದ ಸಮುದಾಯ ಪ್ರಜ್ಞೆಯ ಪ್ರತ್ಯಕ್ಷಾನುಷ್ಠಾನ. ಮುಖ್ಯವಾಗಿ ಸೋದರ ಮಾವ, ಭಾವ, ಅಳಿಯ, ಮಗಳು ಮತ್ತಿತರ ಬಂಧುಗಳು ಹೊರೆಕಟ್ಟುವ ವಾಡಿಕೆ ಇದೆ. ಸಾಮಾನ್ಯವಾಗಿ ವಸ್ತುರೂಪದ ಹೊರೆಗಳನ್ನು ಕಳುಹಿಸುತ್ತಾರೆ. ಈ ರೀತಿ ಹೊರೆ ಕಳುಹಿಸುವುದರಿಂದ ವಿವಾಹ ಆಯೋಜಕರಿಗೆ ಖರ್ಚಿಗೆ ಆಧಾರವಾಗುತ್ತದೆ. ಅವರ ನಡುವಿನ ಬಾಂಧವ್ಯ ವೃದ್ಧಿಯಾಗುತ್ತದೆ. ಕುಟುಂಬ ಸಂಬಂಧದ ಬಂಧನ ಬಲಿಷ್ಠಗೊಂಡು ಲವಲವಿಕೆ ಹೊಂದಿರುತ್ತದೆ. ವಿವಾಹ ಸಂಭ್ರಮದ ಖರ್ಚುವೆಚ್ಚಗಳನ್ನು ಸಂಭಾಳಿಸಲು ಆರ್ಥಿಕ ರೀತಿಯಲ್ಲಿ ಅಸಮರ್ಥರಾದವರಿಗೆ ಆಧಾರವಾಗಲು ಈ ಹೊರೆಕಳುಹಿಸುವ ಸಂಪ್ರದಾಯ ಪ್ರಾರಂಭವಾಗಿದ್ದಿರಬಹುದು.

ಮದುವೆ ಖರ್ಚಿಗೆ ಅವಶ್ಯವಿರುವ ಅಕ್ಕಿ, ತೆಂಗಿನಕಾಯಿ, ತರಕಾರಿ, ಬಾಳೆಗೊನೆ, ಬಾಳೆಎಲೆ, ಸೀಯಾಳ, ಅಡಿಕೆ ಮುಂತಾದ ವಸ್ತುಗಳ ಹೊರೆ ಕಳುಹಿಸುತ್ತಾರೆ. ಹೊರೆಗಳನ್ನು ಸಮಾಜದ ದಲಿತ ವರ್ಗದ (ಕೊರಗ) ಸಮುದಾಯದವರ ಮುಖಾಂತರ ತಲೆಹೊರೆಯಲ್ಲಿ ಕಳುಹಿಸುವುದು ಸಂಪ್ರದಾಯ. ಮದುವೆ ಮನೆಗೆ ಹೊರೆ ತಲುಪಿಸಲು ಅವರು ಸ್ವಖುಷಿಯಿಂದಲೇ ಬರುತ್ತಿದ್ದರು. ಹೊರೆ ತಲುಪಿಸಿದಾಗ ಅವರಿಗೆ ತಲೆಗೆ ಎಣ್ಣೆ, ಅನ್ನಪಡಿ ಮತ್ತು ನಿಶ್ಚಿತ ಸಂಭಾವನೆ ಮದುವೆ ಮನೆಯವರು ಸಲ್ಲಿಸುತ್ತಾರೆ. ಹೀಗೆ ಹೊರೆ ತಲುಪಿಸಿದ ಹೆಡಿಗೆ ಅಥವಾ ಬುಟ್ಟಿಗಳನ್ನು ವಾಪಾಸು ತರುವ ಕ್ರಮವಿಲ್ಲ. ಕೆಲವರು ತಮ್ಮ ಶ್ರೀಮಂತಿಕೆ, ಆರ್ಥಿಕ ಮಟ್ಟ, ಪ್ರತಿಷ್ಠೆ ಪ್ರಕಟಗೊಳಿಸುವ ಉದ್ದೇಶದಿಂದ 10–12 ಹೊರೆಗಳನ್ನು ಕಳುಹಿಸುವವರಿದ್ದಾರೆ. ತಮಗಾಗದವರನ್ನು ಹೀನಾಯಿಸಲಿಕ್ಕಾಗಿಯೂ, ಹೊರೆಕಳುಹಿಸಿ, ಇತರರಿಗಿಂತ ಹೆಚ್ಚು ಹೊರೆ ಕಳುಹಿಸಿ, ತಾನು ಇತರರಿಗಿಂತ ಮೇಲು ಎಂಬಂತೆ ಆಡಂಬರ ಪ್ರಕಟಿಸುವವರೂ ಇದ್ದಾರೆ. ಹೀಗೆ ಹೊರೆ ಕಳುಹಿಸಿದವರ ಮನೆಯಲ್ಲಿ

ಮದುವೆಗಳಾಗುವಾಗ, ಕೊಟ್ಟಿರುವ ಹೊರೆಗಳನ್ನು ವಾಪಾಸು ಸಲ್ಲಿಸಬೇಕು ಹಿಂದಿರುಗಿಸುತ್ತಾರೆ ಎಂಬ ವಿಶ್ವಾಸದಿಂದಲೇ ಹೊರೆಗಳನ್ನು ಕಳುಹಿಸುತ್ತಾರೆ. ಈ ರೀತಿ ಮರುಹೊರೆಗಳನ್ನು ನೀಡುವುದು ಅವರ ಋಣಭಾರದಿಂದ ಮುಕ್ತರಾದಂತೆ.

6.6. ಕಂಕಣಧಾರಣೆ (ಬಳೆ ತೊಡುವಿಕೆ) :

ಕುಡುಬಿಯರಲ್ಲಿ ಮದುವೆಗೆ ವಧು ಹಾಗೂ ವರನ ಕಡೆಯ ಹೆಮ್ಮಕ್ಕಳಿಗೆ ಬಳೆ ತೊಡುವಿಕೆ ಅಥವಾ ಕಂಕಣಧಾರಣೆಯ ಸಂಭ್ರಮದ ಸಂಪ್ರದಾಯವಿದೆ. ಹಿಂದಿನ ಕಾಲದಲ್ಲಿ ಪಿಂಗಾಣಿ (china clay) ಬಳೆಗಳು ಲಭ್ಯವಿದ್ದವು ಮತ್ತು ಅವುಗಳನ್ನೇ ತೊಡುತ್ತಿದ್ದರು. ಪಿಂಗಾಣಿ ಬಳೆಗಳನ್ನು ತೊಡುವುದು ಮುತ್ತೈದೆತನದ ಲಕ್ಷಣ, ಆರೋಗ್ಯಕ್ಕೆ ಒಳ್ಳೆಯದು ಎಂಬ ನಂಬಿಕೆ ಇತ್ತು. ಪಿಂಗಾಣಿ ಬಳೆಗಳು ಅಳಿದು ಈಗ ಗಾಜಿನ ಬಳೆಗಳು ಅವ್ಯಾಹತವಾಗಿ ಬಳಕೆಯಾಗುತ್ತಿವೆ. ಪ್ರತಿಯೊಂದು ಊರಿನಲ್ಲೂ ಬಿಲೇಕಾರರು (ಬಳೆಗಾರ) ಇರುತ್ತಿದ್ದರು. ಮದುವೆಗೆ ಎರಡು–ಮೂರು ದಿನ ಮುಂಚಿತವಾಗಿ ಬಳೆಗಾರನನ್ನು ಮನೆಗೆ ಆಹ್ವಾನಿಸುತ್ತಿದ್ದರು. ಬಳೆಗಾರ ಬಂದು ವಧು, ಬಲಗೂಡತಿ, ವಧುವಿನ ಮನೆಯ ಹೆಮ್ಮಕ್ಕಳು, ಸ್ತ್ರೀಯರು, ಆಪ್ತೇಷ್ಟ ನಿಕಟ ಸಂಬಂಧಿ ಹಾಗೂ ನೆರೆಹೊರೆಯ ಮಹಿಳೆಯರಿಗೆ ಬಳೆ ತೊಡಿಸುತ್ತಾರೆ. ಬಳೆ ತೊಡಿಸುವುದು ಮದುವೆಯ ಮಂಗಲಕಾರ್ಯಗಳಲ್ಲಿ ಒಂದು. ಆದುದರಿಂದ, ವಧುವಿನ ಮನೆಗೇ ಬಳೆಗಾರ ಬಂದು ಬಳೆ ತೊಡಿಸುವುದಾದರೆ, ಬಳೆ ತೊಡಿಸಲು ಪ್ರಾರಂಭಿಸುವ ಮೊದಲು ಅಕ್ಕಿ, ತೆಂಗಿನಕಾಯಿ, ವೀಳ್ಯಪಟ್ಟಿ, ಕಾಣಿಕೆಯ ಸ್ವಸ್ತಿಕೆ ಇಡಬೇಕು. ಬಳೆಗಾರನಿಗೆ ಬಳೆ ತೊಡಿಸಿದ ಗೌರವಾರ್ಥವಾಗಿ 'ಅನ್ನಪಡಿಯೂ' ಸಲ್ಲಬೇಕು. ಬಳೆಯ ಸಂಪೂರ್ಣ ಖರ್ಚು ವಧುವಿನ ಕಡೆಯದು. ಈ ಖರ್ಚನ್ನು ಸೋದರ ಮಾವ ಕೊಡುವ ಪದ್ಧತಿಯೂ ಕೆಲವು ಕಡೆ ಆಚರಣೆಯಲ್ಲಿದೆ.

ಸಾಮಾನ್ಯವಾಗಿ ವಧುವಿಗೆ ಕೈತುಂಬಾ ಗಾಜಿನ ಕೆಂಪು ಮತ್ತು ಹಸಿರು ರಂಗಿನ ಬಳೆಗಳನ್ನು ತೊಡಿಸುತ್ತಾರೆ. ಕೆಂಪು ಹಸಿರು ರಂಗಿನ ಬಳೆಗಳು ಮುತ್ತೈದೆತನದ ಲಕ್ಷಣ. ಕಪ್ಪು ಬಳೆ ತೊಡುವ ಕ್ರಮವಿಲ್ಲ. ವಧುವು ಬಳೆತೊಟ್ಟ ಮೇಲೆ ಆ ಬಳೆಗಳು ಒಡೆಯಬಾರದು. ಒಡೆದಲ್ಲಿ ಅವಲಕ್ಷಣ, ಅಪಶಕುನ ಎಂಬ ನಂಬಿಕೆ ಪ್ರಚಲಿತವಿದೆ. ಅದಕ್ಕಾಗಿ ಮದುವೆಯ ಎರಡು ಅಥವಾ ಮೂರುದಿನ ಮುಂಚಿತವಾಗಿ ಮಾತ್ರ ಬಳೆ ತೊಡಿಸುತ್ತಾರೆ. ಬಳೆತೊಟ್ಟ ಮೇಲೆ ವಧುವನ್ನು ಹೊರಗೆ ಕಳುಹಿಸಲೂ, ಯಾವುದೇ ಕೆಲಸ ಮಾಡಲೂ ಬಿಡುವುದಿಲ್ಲ. ನೆಂಟರಿಷ್ಟರ ಕೋರಿ ಊಟಗಳಿದ್ದರೆ ಬಳೆ ತೊಡುವ ಮೊದಲೇ ತೀರಿಸಿರುತ್ತಾರೆ. ಬಳೆತೊಟ್ಟ ಮೇಲೆ ವಧುವನ್ನು ಕೋರಿ ಊಟಕ್ಕೆ ಕಳುಹಿಸುವ ಕ್ರಮವಿಲ್ಲ.

ಹಿಂದಿನ ಹೆಮ್ಮಕ್ಕಳಿಗೆ ಸಮಯ ಕಳೆಯಲು ಅಥವಾ ಮನೋರಂಜನೆಗೆ ಈಗಿನಂತೆ ಆಧುನಿಕ ಮಾಧ್ಯಮಗಳು ಇರಲಿಲ್ಲ. ಅವರು ಹಳ್ಳಿಯ ಒಳಾಂಗಣ ಆಟವಾದ 'ಕಲ್ಲಾಟ' ಆಡುತ್ತಿದ್ದರು. ಈ ಕಲ್ಲಾಟ ಆಡುವುದು ಹೆಮ್ಮಕ್ಕಳ ಆಟವೆಂದೇ ಖ್ಯಾತಿ ಪಡೆದಿದೆ. ಕಲ್ಲಾಟ

ಆಡುವ ಅಭ್ಯಾಸದ ಹೆಮ್ಮಕ್ಕಳ ಮುಂಗೈ ಕೂಡಾ ಕಲ್ಲಿನಂತೇ ಗಡುಸಾಗಿರುತ್ತದೆ. ಮದುವೆಗೆ ಗಾಜಿನ ಬಳೆ ತೊಡುವಾಗ ಕಲ್ಲಾಟವಾಡಿದ ಹೆಣ್ಣಿಗೆ ತೊಡಿಸಿದ ಬಳೆಗಳು ಒಡೆಯುತ್ತವೆ. ಆದುದರಿಂದ ಚಿಕ್ಕವರಿರುವಾಗ ಹೆಮ್ಮಕ್ಕಳು ಕಲ್ಲಾಟವಾಡಲು ಹಿರಿಯರು ಬಿಡುತ್ತಿರಲಿಲ್ಲ. ಆದರೂ ಹಿರಿಯರ ಕಣ್ತಪ್ಪಿಸಿ ಹೇಗಾದರೂ ಕಲ್ಲಾಟ ಆಡಿಯೇ ಆಡುತ್ತಿದ್ದರು. ಸುಮಾರು 50 ವರ್ಷ ಹಿಂದೆಲ್ಲಾ ಕುಡುಬಿ ಹೆಮ್ಮಕ್ಕಳು ಶಾಲೆಗೆ ಹೋಗುವ ವ್ಯವಸ್ಥೆಯೇ ಇರಲಿಲ್ಲ. ಮದುವೆ ಪ್ರಾಯದವರೆಗೂ ಕೃಷಿ ಕೆಲಸವಿಲ್ಲದ ವೇಳೆಯಲ್ಲಿ ದನಕರುಗಳನ್ನು ಮೇಯಿಸುವ, ಸೆಗಣಿ–ಚರಣಿ ಹೆಕ್ಕಿ ರಾಶಿ ಒಡ್ಡುವ ಕಾಯಕದಲ್ಲಿ ತೊಡಗುತ್ತಿದ್ದರು. ಈ ಸಂದರ್ಭ ಸಮಯ ಕಳೆಯಲು ಹೆಮ್ಮಕ್ಕಳೆಲ್ಲಾ ಸೇರಿ ಕಲ್ಲಾಟವಾಡುವ ವಾಡಿಕೆಯೇ ಇತ್ತು. ಮದುವೆಗೆ ಬಳೆ ತೊಡುವಾಗ ತೊಡಿಸಿದ ಬಳೆಗಳೆಲ್ಲಾ ಒಡೆಯಲು ಪ್ರಾರಂಭಿಸಿದರೆ 'ಚಿಕ್ಕವಳಿರುವಾಗ ಕಲ್ಲಾಟವಾಡಿದ್ದೀಯಾ?' ಅಂತ ಅಪಹಾಸ್ಯ ಮಾಡುತ್ತಾರೆ. ವಧುವಿಗೆ ಬಳೆ ತೊಡಿಸುವಾಗ ಕಡಿಮೆ ಪಕ್ಷ ಪಂಚ ಮುತ್ತೈದೆಯರಾದರೂ ಒಟ್ಟಿಗೆ ಬಳೆತೊಡಬೇಕು.

ಮದುಮಗಳ ಶೃಂಗಾರಕ್ಕೆ ಎಷ್ಟು ಒಡವೆಗಳಿದ್ದರೂ ಸಾಕಾಗುವುದಿಲ್ಲ. ಅದಕ್ಕಾಗಿ ಕೃತಕ (Artificial) ಒಡವೆಗಳನ್ನು ಬಾಡಿಗೆಗೆ ತರುವ ಕ್ರಮವಿದೆ. ಈ ಬಾಡಿಗೆ ಬಂಗಾರವನ್ನು ಹೆಚ್ಚಾಗಿ ಬಳೆಗಾರರೇ ಒದಗಿಸುತ್ತಾರೆ ಅಥವಾ ಚಿನಿವಾರ ಕಟ್ಟೆಯಲ್ಲಿಯೂ ಸಿಗುತ್ತವೆ. ಸಾಮಾನ್ಯವಾಗಿ ಬಳೆ ಇಡುವ ಸಂದರ್ಭದಲ್ಲಿಯೇ ಬಾಡಿಗೆಯ ಒಡವೆಗಳನ್ನು ಕಾಯ್ದಿರಿಸುತ್ತಾರೆ ಮತ್ತು ಮದುವೆಯ ಮೊದಲ ದಿನ ತರುತ್ತಾರೆ.

ಗಂಡಿನ ಮನೆಯಲ್ಲೂ ಅವರ ಹೆಮ್ಮಕ್ಕಳು ಮತ್ತು ಮಹಿಳೆಯರಿಗೆ ಬಳೆಗಾರರನ್ನು ಆಹ್ವಾನಿಸಿ ಅಥವಾ ಬಳೆಗಾರನಿದ್ದಲ್ಲಿಗೇ ಹೋಗಿ ಕಂಕಣಧಾರಣೆಯ ಕ್ರಮವಿದೆ. ಬಳೆಗಾರನನ್ನು ಆಹ್ವಾನಿಸಿದರೆ ಇಲ್ಲಿ ಸ್ವಸ್ತಿಕೆ ಇಡಬೇಕಾಗಿಲ್ಲ. ತಳಿಗೆಗೆ ಬೇಕಾದ ವಸ್ತುಗಳನ್ನು ಈ ಸಂದರ್ಭದಲ್ಲಿ ಖರೀದಿಸಬೇಕಾಗುತ್ತದೆ. ಕುಡುಬಿಯರಲ್ಲಿ ವರದಕ್ಷಿಣೆಯ ಪದ್ಧತಿ ಇಲ್ಲದಿರುವುದು ಮಹತ್ವದ ಸಂಗತಿ. ಬದಲಿಗೆ ವರನೇ ತಳಿಗೆಯಲ್ಲಿ ಕೆಲವು ವಸ್ತುಗಳನ್ನು ವಧುವಿಗೆ ಕೊಡಬೇಕು. ಇದನ್ನು ವಸ್ತುರೂಪದ ವಧುದಕ್ಷಿಣೆ ಅಥವಾ ಕನ್ಯಾಶುಲ್ಕ ಅನ್ನಬಹುದು. ಇದು ಕುಡುಬಿಯರು ಕಡ್ಡಾಯವಾಗಿ ಪಾಲಿಸುತ್ತಾ ಬಂದಿರುವ ಸಂಪ್ರದಾಯ. ಮಾಂಗಲ್ಯ, ಧಾರೆಯ ಪಟ್ಟೆಸೀರೆಗಳನ್ನು ವರನು ಹೇಗೆ ಕೊಡಬೇಕೊ ಹಾಗೇ ಶೃಂಗಾರ ಸಾಧನಗಳನ್ನೆಲ್ಲಾ ತಳಿಗೆ ಮೇಲಿಟ್ಟು ವಧುವಿಗೆ ನೀಡಬೇಕು. ಅದಕ್ಕಾಗಿ ಕಾಡಿಗೆ, ಕುಂಕುಮ, ಕನ್ನಡಿ, ಮರದ ಹಣಿಗೆ, ಚೌರಿ, ಎಣ್ಣೆ, ಪೌಡರ್... ಇತ್ಯಾದಿ ಮಂಗಲದ್ರವ್ಯಗಳನ್ನು ಬಳೆ ತೊಡುವಾಗಲೇ ಹುಡುಗನ ಕಡೆಯವರು ಖರೀದಿಸುತ್ತಾರೆ.

6.7. ದೇವಕಾರ್ಯ :

ಕುಡುಬಿ ಜನಾಂಗದಲ್ಲಿ ಪ್ರತಿಯೊಂದು ಮನೆಯಲ್ಲೂ ದೇವರ ಮನೆ ಇರುವುದಿಲ್ಲ. ಚೆಡಗಿನ ಹಿರಿಮನೆಯಲ್ಲಿ ಮಾತ್ರ ದೇವರ ಮನೆ ಇರುತ್ತದೆ. ಇದು ಕುಡುಬಿಯರ

ಅವಿಭಜಿತ ಅಥವಾ ಕೂಡುಕುಟುಂಬ ಪದ್ಧತಿಯ ಒಂದು ನಿದರ್ಶನ ಹಾಗೂ ಬುಡಕಟ್ಟು ವ್ಯವಸ್ಥೆಯ ಸಂಕೇತ. ಒಂದು ಬೆಡಗಿನ ವಿಭಾಗಕ್ಕೆ ಸೇರಿದ ಮನೆಗಳು ಎಷ್ಟಾದರೂ ಇರಲಿ, ಪ್ರತಿಯೊಂದು ಧಾರ್ಮಿಕ ಕಾರ್ಯಗಳಿಗೂ ಕುಟುಂಬಿಕರು ಆ ವಿಭಾಗಕ್ಕೆ ಸೇರಿದ ಮೂಲ ಮನೆಯಲ್ಲೇ ಸೇರಬೇಕು. ಮದುವೆ ಆಗುವಾಗ ವಧೂವರರು ಅವರವರ ದೇವರ ಮನೆಗೆ ಹೋಗಿ ದೇವರಿಗೆ ಮೊಡಮಟ್ಟು ಬರಬೇಕು. ದೇವರ ನಿತ್ಯ ನೈಮಿತ್ತಗಳನ್ನು ನೆರವೇರಿಸುವ ಹಿರಿಯ ವ್ಯಕ್ತಿ ಅವರನ್ನು ವಿಧಿಪ್ರಕಾರ ದೇವರಿಗೆ ಮೊಡಮಡಿಸಿ ಮದುವೆಯ ಮಂಗಲಕಾರ್ಯ ಶುಭದಾಯಕವಾಗಲು ಆಶೀರ್ವಾದ ಬೇಡಿ ಗಂಧಪ್ರಸಾದ ನೀಡಬೇಕು. ಈ ವಿಧಿಯನ್ನು ಹಗಲು ಹೊತ್ತಿನಲ್ಲಿ ಜರಗಿಸಬಹುದು. ಆದರೆ ಈ ವಿಧಿಯನ್ನು ನೆರವೇರಿಸಿದ ನಂತರ ಮೈಲಿಗೆಯಾಗಬಾರದು. ಆದುದರಿಂದ ಹೆಚ್ಚಾಗಿ ಮದುವೆಯ ಮುಂಚಿನ ದಿನ ಗೋಧೂಳಿ ಸಮಯದಲ್ಲಿ ಅಥವಾ ರಾತ್ರಿ ಹೊತ್ತಿನಲ್ಲಿ, ಇತರ ಕ್ರಮಗಳನ್ನು ಪ್ರಾರಂಭಿಸುವುದಕ್ಕೆ ಮುಂಚಿತವಾಗಿ ದೇವಕಾರ್ಯವನ್ನು ನೆರವೇರಿಸಲಾಗುತ್ತದೆ.

ಮದುಮಗನು ಧಾರೆಸೀರೆ, ಮಾಂಗಲ್ಯ, ಮದುವೆಗಾಗಿ ಮಾಡಿಸಿದ ಚಿನ್ನದ ಒಡವೆಗಳು, ಹೂವು, ತೆಂಗಿನಕಾಯಿ, ವೀಳ್ಯವಟ್ಟೆ ಮತ್ತು ತನ್ನ ಉಡುಗೆತೊಡುಗೆಗಳನ್ನು ಹಿಡಕೊಂಡು ಮನೆಯ ಹಿರಿಯರನ್ನೊಡಗೂಡಿ ಕಡಿಮೆ ಪಕ್ಷ ಐವರಾದರೂ ದೇವರ ಮನೆಗೆ ಹೋಗುತ್ತಾರೆ. ಇದು ಕುಟುಂಬದ ಖಾಸಗಿ ಕಾರ್ಯವಾದುದರಿಂದ ದೇವಕಾರ್ಯದ ಈ ವಿಧಿಯಲ್ಲಿ ಕುಟುಂಬದ ಮಹಿಳೆಯರೂ ಭಾಗವಹಿಸುತ್ತಾರೆ.

ದೇವರ ಮನೆಯ ಹಿರಿಯ ವ್ಯಕ್ತಿ ಎಲ್ಲಾ ವಸ್ತುಗಳನ್ನು ದೇವರ ಪೀಠದ ಎದುರು ಇಟ್ಟು ಪೂಜೆ ಮಾಡಿ, ಪ್ರಾರ್ಥಿಸಿಕೊಂಡು ಪ್ರಸಾದ ನೀಡುತ್ತಾನೆ. ಮದುಮಗ ದೇವ ದೈವಾದಿಗಳಿಗೆ ವೀಳ್ಯವಟ್ಟೆ ಸಲ್ಲಿಸಿ ಕೈಮುಗಿಯುತ್ತಾನೆ. ಆ ನಂತರ ಅಲ್ಲಿರುವ ಹಿರಿಯರೆಲ್ಲರಿಗೆ ವೀಳ್ಯವಟ್ಟೆ ನೀಡಿ ಕಾಲಿಗೆರಗುವ ಮೂಲಕ ಆಶೀರ್ವಾದ ಪಡೆಯುತ್ತಾನೆ.

ಮದುಮಗಳನ್ನು ತವರಿನ ದಿಬ್ಬಣದ ಸೀರೆ, ಕಾಲ್ಬೆರಳ ಉಂಗುರ, ಮೂಗುತಿ, ಸರಗಳು ಅಥವಾ ಹೊಸದಾಗಿ ಮಾಡಿಸಿದ ಒಡವೆಗಳೊಂದಿಗೆ ಹಿರಿಯರು ದೇವರ ಮನೆಗೆ ಕರೆದುಕೊಂಡು ಹೋಗುತ್ತಾರೆ. ದೇವರ ಮನೆಯ ಹಿರಿಯ ಈ ಎಲ್ಲಾ ವಸ್ತುಗಳನ್ನು ದೇವರೆದುರು ಇಟ್ಟು, ವಧು ದೇವರಿಗೆ ಅಡ್ಡ ಬೀಳುತ್ತಾಳೆ. ನಂತರ ಆಕೆಯ ಕಾಲ್ಬೆರಳುಗಳಿಗೆ ಉಂಗುರ, ಮೂಗಿನ ಮೂಗುತಿ ತೊಡಿಸಲಾಗುತ್ತದೆ. ಕುಡುಬಿ ಹೆಮ್ಮಕ್ಕಳಿಗೆ ಈ ದೇವಕಾರ್ಯ ಆಗುವಲ್ಲಿವರೆಗೆ ಕಾಲ್ಬೆರಳ ಉಂಗುರ ಹಾಗೂ ಮೂಗುತಿ ಧರಿಸಲು ಅವಕಾಶವಿಲ್ಲ. ಮದುವೆಯಾದ ಮೇಲೆ ಕಾಲ್ಬೆರಳ ಉಂಗುರ, ಮೂಗುತಿ, ಮಾಂಗಲ್ಯಗಳನ್ನು ಧರಿಸುವುದು ಮುತ್ತೈದೆತನದ ಕುರುಹು. ಹೆಣ್ಣೊಬ್ಬಳಿಗೆ ಕನಕಾಂಬರ (ಅಬ್ಬಲಿಗೆ) ಹೂವು ಮುಡಿಯುವ ಅಧಿಕಾರವೂ, ಮದುವೆಯ ಹೂಮಾಲೆಯಲ್ಲಿ ಅಬ್ಬಲಿಗೆ ಪೋಣಿಸಿ ವಧೂವರರು ಹೂಮಾಲೆಗಳನ್ನು ವಿನಿಮಯ ಮಾಡಿಕೊಂಡ ಮೇಲೆಯೇ ಪ್ರಾಪ್ತವಾಗುತ್ತದೆ. ಗಾಜಿನ ಬಳೆಗಳನ್ನು ತೊಡುವುದೂ ಮದುವೆಯಾದ ಮೇಲೆಯೇ. ಹಿಂದಿನ ಕ್ರಮದಂತೆ ಮದುವೆಗೆ

ಮೊದಲು ಗಾಜಿನ ಬಳೆ ತೊಡಲೂ ಧಾರ್ಮಿಕ ರೀತಿಯಲ್ಲಿ ಅವಕಾಶವಿರಲಿಲ್ಲ. ಈ ಲಕ್ಷಣಗಳಿಂದಲೇ ಕುಡುಬಿಯರ ಹೆಮ್ಮಕ್ಕಳು ವಿವಾಹಿತರೊ ಅವಿವಾಹಿತರೊ ಎಂಬುದನ್ನು ಅಂದಾಜು ಮಾಡಬಹುದು. ಕೆಲವು ಕುಟುಂಬಗಳಲ್ಲಿ ದೇವರ ಮನೆಯ ಹಿರಿಯ ವ್ಯಕ್ತಿಯೇ ಕಾಲುಂಗುರ ತೊಡಿಸಬೇಕು ಎಂಬ ನಿಯಮವಿದೆ. ದೇವರಿಗೆ ಕೈ ಮುಗಿವ ಈ ವ್ಯವಸ್ಥೆಗೆ 'ದೇವಕಾರ್ಯ' ಅಂತ ಹೆಸರು. ದೇವಕಾರ್ಯ ಸಂದರ್ಭ ಬಲಿಗೊಡೆಯ ಬಲಿಗೊಡತಿಯರೂ ಮದುಮಕ್ಕಳೊಂದಿಗೆ ಉಪಸ್ಥಿತರಿರಬೇಕು. ದೇವಕಾರ್ಯದ ಪ್ರಯುಕ್ತ ಹೆಚ್ಚಿನ ಕಡೆಗಳಲ್ಲಿ, ಆಗಮಿಸಿದವರಿಗೆ ಊಟದ ಏರ್ಪಾಡು ಇರುತ್ತದೆ. ದೇವಕಾರ್ಯ ಮುಗಿದ ಮೇಲೆಯೇ ಮದುವೆಯ. ಕುಡುಬಿ ಸಂಪ್ರದಾಯದ ಉಳಿದ ಚಡಂಗಗಳು ಪ್ರಾರಂಭವಾಗುತ್ತವೆ.

6.8. ಅರಸಿನ ಬಾಗಿನ (ವೀಳ್ಯ ಬಾಗಿನ) :

ಮದುವೆಯ ಹಿಂದಿನ ದಿನ ದೇವಕಾರ್ಯ ಮುಗಿದು ವಧುವಿನ ಮನೆಯಲ್ಲಿ ಅರಸಿನ ಲೇಪನ ಶಾಸ್ತ್ರ ಪ್ರಾರಂಭಿಸಬೇಕಾದಲ್ಲಿ ವರನ ಕಡೆಯಿಂದ ಅರಸಿನ ಬಾಗಿನ ವಧುವಿನ ಮನೆಗೆ ಕಳುಹಿಸಿಕೊಡಬೇಕು. ಈ ಅರಸಿನ ಬಾಗಿನ ಹೊಸತು ಮತ್ತು ಬಿಳಿಯದೇ ಆಗಿರಬೇಕು. ರಂಗುರಂಗಿನ ಬಾಗಿನ ಬಳಸತಕ್ಕದ್ದಲ್ಲ. ಬಾಗಿನವನ್ನು ವರನ ಕಡೆಯವರೇ ಕಳುಹಿಸಿರಬೇಕು. ಹುಡುಗಿ ಕಡೆಯವರು ತಮ್ಮಿಷ್ಟ ಪ್ರಕಾರ ಖರೀದಿಸಿ ತರತಕ್ಕದ್ದಲ್ಲ. ವಧುವಿನ ಮನೆಯಲ್ಲಿ ಧಾರೆ ಆಗುವುದಾದಲ್ಲಿ –ಮದುವೆಯ ದಿನ ವರನ ದಿಬ್ಬಣ ಹೋಗುವಾಗ ಈ ಅರಸಿನ ಬಾಗಿನವನ್ನು ಕೊಂಡುಹೋಗುವ ಕ್ರಮವಿದೆ. ಹೀಗೆ ವರನ ದಿಬ್ಬಣದೊಂದಿಗೆ ಅರಸಿನ ಬಾಗಿನ ಕೊಂಡುಹೋದಲ್ಲಿ, ವರನ ದಿಬ್ಬಣ ನೇರವಾಗಿ ಧಾರೆಯ ಚಪ್ಪರ ಪ್ರವೇಶ ಮಾಡುವಂತಿಲ್ಲ. ವರನ ದಿಬ್ಬಣಿಗರಿಗೆ ಮದುವೆ ಚಪ್ಪರದ ಹೊರಗೆ ಪ್ರತ್ಯೇಕವಾದ ಬಿಡದಿ ಚಪ್ಪರದಲ್ಲಿ ಉಳಕೊಳ್ಳುವ ವ್ಯವಸ್ಥೆ ಮಾಡಬೇಕು. ಅರಸಿನ ಬಾಗಿನವನ್ನು ವಧುವಿನ ಕಡೆಯವರಿಗೆ ಬಿಡದಿ ಚಪ್ಪರದಲ್ಲೇ ಹಸ್ತಾಂತರಿಸಬೇಕು. ವಧುವಿನ ಅರಸಿನ ಲೇಪನ, ಕಲಶ ಸ್ನಾನ ಆಗುವಲ್ಲಿವರೆಗೆ ವರ ಮತ್ತು ದಿಬ್ಬಣಿಗರಿಗೆ ಧಾರೆಯ ಚಪ್ಪರ ಪ್ರವೇಶ ನಿಷಿದ್ಧ.

ಧಾರೆ ವರನ ಮನೆಯಲ್ಲಿ ಆಗುವುದಾದಲ್ಲಿ ಮದುವೆಯ ಮುಂಚಿನ ದಿನ ದೇವಕಾರ್ಯವಾದ ನಂತರ ಅರಸಿನ ಬಾಗಿನ ಕಳುಹಿಸುವುದು ಸಾಮಾನ್ಯ ವಾಡಿಕೆ. ಒಂದು ವೇಳೆ ಕಳುಹಿಸಿಕೊಡದಿದ್ದಲ್ಲಿ ವಧುವಿನ ದಿಬ್ಬಣ ವರನ ಮನೆಗೆ ತಲುಪಿದಾಗ ವರನು ತನ್ನ ಮನೆಸಹಿತ ಚಪ್ಪರವನ್ನು ವಧುವಿನವರ ಸುಪರ್ದಿಗೆ ಬಿಟ್ಟು ಕೊಡಬೇಕು. ಅದಕ್ಕಿಂತ ಮೊದಲು ವರ ಅಲಂಕೃತನಾಗಿ ತಳಿಗೆ ಸಹಿತ ಧಾರೆ ಚಪ್ಪರದ ಹೊರಗೆ ಹೋಗಿ, ಬಿಡದಿ ಚಪ್ಪರದಲ್ಲಿ ವಧುವಿನ ಕಡೆಯವರಿಗೆ ಅರಸಿನ ಬಾಗಿನವನ್ನು ನೀಡಬೇಕು. ಧಾರೆಯ ಚಪ್ಪರದಲ್ಲಿ ವಧುವಿನ ಅರಸಿನ ಶಾಸ್ತ್ರ, ಕಲಶ ಸ್ನಾನಗಳಾಗಬೇಕು. ಇದಾದ ಮೇಲೆ ವಧುವಿನ ಕಡೆಯವರು ವರನನ್ನು ಶಕುನದೀಪ, ಆರತಿ ಅಕ್ಷತೆಗಳಿಂದ ಧಾರೆ

ಚಪ್ಪರಕ್ಕೆ ಸ್ವಾಗತಿಸಿ, ವರನ ಕಡೆಯ ಮಂಗಲದ್ರವ್ಯಗಳ ತಳಿಗೆಯನ್ನು ವಧುವಿನ ಕಡೆಯವರಿಗೆ ನೀಡಬೇಕು. ಅರಸಿನ ಬಾಗಿನ ನೀಡುವ ಮೊದಲು ದ್ವಿಪಕ್ಷೀಯರು ವೀಳ್ಯಪಟ್ಟಿಗಳನ್ನು (ಪಂಚವೀಳ್ಯ) ಪರಸ್ಪರ ಬದಲಾಯಿಸಿಕೊಳ್ಳುವ ಕ್ರಮವಿದೆ. ಆದುದರಿಂದ ಈ ಕ್ರಮಕ್ಕೆ 'ವೀಳ್ಯಬಾಗಿನ' 'ವೀಳ್ಯ ಕಳುಹಿಸುವುದು' ಎಂದೂ ಹೆಸರಿದೆ.

ಅರಸಿನ ಬಾಗಿನ ಕಳುಹಿಸುವಾಗ ಐದು ಜನ ಪುರುಷರಿರಬೇಕು. ಈ ಐವರಲ್ಲಿ ಗಂಡಿನ ತಂದೆ ಅಥವಾ ಒಬ್ಬ ಜವಾಬ್ದಾರಿಯ ವ್ಯಕ್ತಿ, ವರನ ಕಿರಿಯ ಅವಿವಾಹಿತ ಸಹೋದರ; ಕಿರಿಯ ಸಹೋದರನಿಲ್ಲದಿದ್ದರೆ ಕುಟುಂಬದ ವಾವೆಯಲ್ಲಿ ಕಿರಿಸಹೋದರನಾಗುವ ಅವಿವಾಹಿತ, ಉಳಿದವರಲ್ಲಿ ವರನ ಹತ್ತಿರದ ಬಂಧುಗಳು ಹೋಗಬಹುದು. ಅರಸಿನ ಬಾಗಿನದೊಂದಿಗೆ ವೀಳ್ಯಪಟ್ಟಿಗಳು, ಒಂದು ಒಡವೆ, ಸ್ವಲ್ಪ ಹೂವು, ಕುಂಕುಮ.... ಇತ್ಯಾದಿಗಳನ್ನು ಕೊಂಡುಹೋಗಬೇಕು. ಒಡವೆ ಸಾಮಾನ್ಯವಾಗಿ ಸರ ಅಥವಾ ಕಂಠೀಹಾರವಾಗಿರುತ್ತದೆ. ಈ ಹಾರ ಮದುಮಗಳಿಗೇ ಸಲ್ಲುತ್ತದೆ. ಅದನ್ನಾಕೆ ಹಿಂದಿರುಗಿಸಬೇಕಾಗಿಲ್ಲ. ಈ ಕ್ರಮಕ್ಕೆ 'ಹೂವು ಒಡವೆ' 'ವೀಳ್ಯ ಪಂಚೆ' ಶಾಸ್ತ್ರ ಅಂತಲೂ ಹೆಸರಿದೆ. ಪುರುಷರು ಮಾತ್ರ ಇದರಲ್ಲಿ ಭಾಗವಹಿಸಬಹುದು. ಹೆಚ್ಚಾಗಿ ಗೋಧೂಳಿ ಸಮಯದಲ್ಲಿ ಈ ರಿವಾಜು ನಡೆಯುತ್ತದೆ. ಅರಸಿನ ಬಾಗಿನದವರು ವಧುವಿನ ಮನೆ ತಲುಪಿದಾಗ, ಅವರು ಬಂದು ತಲುಪಿದರು ಎಂಬುದನ್ನು ಸೂಚಿಸಲು ಗರ್ನಾಲು ಬಿಡುತ್ತಾರೆ. ವಧುವಿನ ಚಪ್ಪರಕ್ಕೆ ಈ ವರೆಗೆ ಬಾರದಿದ್ದ, ಅಗತ್ಯವಿದ್ದವರು ಬರಲು ಇದೊಂದು ಸೂಚನೆ. ವೀಳ್ಯಬಾಗಿನ ಬಂದು ತಲುಪಿದರೆ ಜೀಗರು ಕೊಟ್ಟ ಮಾತಿಗೆ ತಪ್ಪಿಲ್ಲ ಹಾಗೂ ವಧುವಿನ ಚಪ್ಪರದ ಚಡಂಗಗಳನ್ನು ಧೈರ್ಯವಾಗಿ ಮುಂದುವರಿಸಬಹುದು ಎಂಬುದರ ಸಂಕೇತ.

ಅರಸಿನ ಬಾಗಿನ ಮತ್ತು ವೀಳ್ಯದೊಂದಿಗೆ ನೆಂಟರು ಬಂದು ತಲುಪಿದಾಗ ವಧುವಿನ ಕಡೆಯ ಯಜಮಾನ ಅವರಿಗೆ ನಮಸ್ಕರಿಸಿ, ಕಾಲು ತೊಳೆಯಲು ನೀರು ನೀಡಿ ಗೌರವದಿಂದ ಸ್ವಾಗತಿಸಬೇಕು. ಅವರನ್ನು ಚಪ್ಪರಕ್ಕೆ ಕರೆದು ಚಾಪೆ ಹಾಸಿ ಕೂರಿಸಿ ಬೆಲ್ಲ ನೀರು, ತಾಂಬೂಲ ನೀಡಿ ಸತ್ಕರಿಸಬೇಕು. ಎರಡೂ ಕಡೆಯವರು ಎರಡು ಪ್ರತ್ಯೇಕ ಹರಿವಾಣಗಳಲ್ಲಿ ಅವರವರ ಐದೈದು ವೀಳ್ಯಪಟ್ಟಿ, ಕುಂಕುಮ ಹೂವುಗಳನ್ನಿಟ್ಟು, ಮನೆಯ ಚಾವಡಿಯಲ್ಲಿ ಅಥವಾ ಚಪ್ಪರದಲ್ಲಿ ಒಂದೇ ಚಾಪೆಯ ಮೇಲೆ ಪೂರ್ವಪಶ್ಚಿಮಾಭಿಮುಖವಾಗಿ ನಿಂತು ಆ ವೀಳ್ಯದ ಹರಿವಾಣಗಳನ್ನು ಐದು ಬಾರಿ ಕೈ ಬದಲಾಯಿಸಬೇಕು. ವರನ ಕಡೆಯವರು ಐದು ವೀಳ್ಯಪಟ್ಟಿಯನ್ನು ಸ್ಥಳದ ಮರ್ಯಾದೆಯಾಗಿ ಚಪ್ಪರದ ಹೊರಗೆ ಕೊಂಡು ಹೋಗಿ ಇಟ್ಟು ನಮಸ್ಕರಿಸಬೇಕು. ಹೂವು ಮತ್ತು ಕಂಠೀಹಾರವನ್ನು ಒಂದು ಹರಿವಾಣದಲ್ಲಿಟ್ಟು ವಧುವಿನ ಕಡೆಯ ಯಜಮಾನನಲ್ಲಿ ಕೊಡಬೇಕು. ಆ ಹರಿವಾಣದಿಂದ ಹೂವು ಮತ್ತು ಕಂಠೀಹಾರವನ್ನು ವರನ ಕಿರಿಸಹೋದರನು ತೆಗೆದು ಒಳಕೋಣೆಯ ಚಾಪೆಯ ಮೇಲೆ ಪೂರ್ವಾಭಿಮುಖವಾಗಿ

ಳಿತಿರುವ ವಧುವಿಗೆ ಆ ಹೂವು ಮುಡಿಸಿ ಕಂಠೀಹಾರವನ್ನು ತೊಡಿಸಬೇಕು. ಅರಸಿನ ಬಾಗಿನ ತಂದಿರುವ ನೆಂಟರು ವಧುವಿನ ಅರಸಿನ ಶಾಸ್ತ್ರ ಆಗುವಲ್ಲಿವರೆಗೆ ನಿಂತು ಂತರದ ಭೋಜನ ಸ್ವೀಕರಿಸಬೇಕು. ಈಗ ಬಂದಿರುವ ಅರಸಿನ ಬಾಗಿನದ ನೆಂಟರಿಗೆ ಉಪಾಹಾರ ನೀಡಿ ಸುಧಾರಿಸಿ ಕಳುಹಿಸುತ್ತಾರೆ. ಧಾರೆ ಶಾಸ್ತ್ರ ವರನ ಮನೆಯಲ್ಲಿ ಆಗುವುದಾದಲ್ಲಿ ಹೀಗೆ ಬಂದಿರುವವರ ಪೈಕಿ ಒಬ್ಬ ಅಥವಾ ಇಬ್ಬರು ಮರುದಿನ ವಧುವಿನ ದಿಬ್ಬಣ ಕರೆದುಕೊಂಡು ಹೋಗಲು ನಿಲ್ಲಬೇಕು. ಒಂದು ವೇಳೆ ವಧುವಿನ ಮನೆಯಲ್ಲಿ ಧಾರೆ ಶಾಸ್ತ್ರ ಆಗುವುದಾದಲ್ಲಿ ಅರಸಿನ ಬಾಗಿನದೊಂದಿಗೆ ಆಗಮಿಸಿದ ನೆಂಟರೊಂದಿಗೆ ವರನ ದಿಬ್ಬಣ ಕರೆತರಲು ವಧುವಿನ ಕಡೆಯಿಂದ ಒಂದಿಬ್ಬರು ಹೋಗಬೇಕು. ಇದು ಹಿಂದಿನ ಕಾಲದಲ್ಲಿ ದೂರದ ಊರುಗಳ ಹಾದಿಯ ಪರಿಚಯವಿರುವವರು ವಿರಳವಿದ್ದುದರಿಂದ ದಾರಿಯ ಮಾಹಿತಿ ಇರುವವರು ದಿಬ್ಬಣ ಕರೆದುಕೊಂಡು ಹೋಗಲು ಮಾಡಿಕೊಂಡ ವ್ಯವಸ್ಥೆ. ದಿಬ್ಬಣ ಕರೆದುಕೊಂಡು ಹೋಗಲು ನಿಲ್ಲುವುದು ಸ್ವಪಕ್ಷೀಯರು ಒಬ್ಬರನ್ನೊಬ್ಬರು ಗೌರವಿಸುವ ಕ್ರಮವೂ ಆಗಿರುತ್ತದೆ.

7. ವಧೂಗೃಹದಲ್ಲಿನ ಸಂಪ್ರದಾಯಗಳು :

7.1 ಅರಸಿನ ಮುಹೂರ್ತ (ಅರಸಿನ ಲೇಪನ ಶಾಸ್ತ್ರ) :

ದೇವಕಾರ್ಯ ಆದನಂತರ ಬಲಗೊಡತಿ ವಧುವನ್ನು ಒಬ್ಬಂಟಿಗಳನ್ನಾಗಿ ಬಿಟ್ಟಿರಬಾರದು. ಹೊರಗೆ ಹೋಗುವಾಗ, ವಿಧಿಗಳ ಸಂದರ್ಭ, ಶೌಚ ಮುಂತಾದ ನಿತ್ಯಾಹ್ನಿಕ, ನಿದ್ರೆ, ಸ್ನಾನ ಮುಂತಾದ ಸಂದರ್ಭಗಳಲ್ಲೂ ಜೊತೆಯಲ್ಲಿರಬೇಕು. ವರನ ಕಡೆಯಿಂದ ಅರಸಿನ ಬಾಗಿನ ಬಂದ ನಂತರ ವಧುವಿನ ಅರಸಿನ ಲೇಪನ ಶಾಸ್ತ್ರದ ತಯಾರಿ ನಡೆಯುತ್ತದೆ. ಈ ಶಾಸ್ತ್ರಕ್ಕೆ ವಧುವನ್ನು ತಯಾರು ಮಾಡುವ ಜವಾಬ್ದಾರಿ ಬಲಗೊಡತಿಯದ್ದು. ಕಲಶ ಸ್ನಾನಕ್ಕಾಗಿ ಚಪ್ಪರ ಚೌಕಟ್ಟು (ಮಾಟೊಟ). ಅರಸಿನ ಲೇಪನಕ್ಕೆ 'ಬಾಲ್', ಕುಂಭ ಮುಹೂರ್ತಕ್ಕೆ ಮಣ್ಣಿನ ಕುಂಭ, ಒಟ್ಟುಕುಟ್ಟುವ ಶಾಸ್ತ್ರಕ್ಕೆ ಒನಕೆ ಮತ್ತು ಮರಿಗೆ, ಹಾಲುಗಂಭ ಶಾಸ್ತ್ರಕ್ಕೆ ಬೂರುಗದ ಗೆಲ್ಲು ಮತ್ತು ಮೊಳಕೆ ಬರಿಸಿದ ಪಂಚಧಾನ್ಯ, ಪೀಳ್ಯಪಟ್ಟ, ಕಾಣಿಕೆ, ಕಲಶ ಸ್ನಾನಕ್ಕೆ ಮೃತ್ತೀಕ ಕಲಶ ಮತ್ತು ತಣ್ಣೀರು, ಕುಳಿತುಕೊಳ್ಳಲು ಮರದ ಮಣೆ.... ಮುಂತಾದವುಗಳನ್ನು ತಯಾರು ಮಾಡಿ ಇಡಬೇಕು.

ಮುಖ್ಯ ಚಪ್ಪರದ ಹೊರಗೆ ಮನೆಯ ಎದುರುಗಡೆ ಒಂದು ಸ್ಥಳದಲ್ಲಿ ಸುಮಾರು ಮೂರು-ನಾಲ್ಕು ಅಡಿ ಚಚ್ಚೌಕದ ಪರಿಧಿಯಲ್ಲಿ ನಾಲ್ಕು ಮೂಲೆಗೆ ನಾಲ್ಕು ಅಂಡಿಲು (ಸಸ್ಯ ಶಾಸ್ತ್ರೀಯ ಹೆಸರು LEEA INDICA, ಕನ್ನಡ = ದೊಡ್ಡ ಮದ್ದೆ ಗಿಡ, ತುಳು= ಸೆಡ್ಲ) ಎಂಬ ಗಿಡದ ಗೇಣುದ್ದ ನಾಲ್ಕು ಗೂಟಗಳನ್ನು ನೆಟ್ಟು, ಅದಕ್ಕೆ ಮಾವಿನೆಲೆಯ

ಕುಚ್ಚು ಮತ್ತು ತೋರಣ ಕಟ್ಟಿ ಒಂದು ಚಿಕ್ಕ ಚಪ್ಪರದಾಕೃತಿ ನಿರ್ಮಿಸುತ್ತಾರೆ. ಮೇಲ್ಗ ಮುಚ್ಚದ ಈ ಆಕೃತಿಗೆ 'ಮಾಟೊಟೆ' ಅಂತ ಹೆಸರು. ನಾಲ್ಕು ಅಡಿ ಉದ್ದದ ಅಂಡಿ ಗಿಡದ ಕೋಲಿನ ತುದಿಗೆ ಐದು ಮಾವಿನೆಲೆಯ ಕುಚ್ಚು ಕಟ್ಟಿ ಮಾಡಿದ ಸಾಧನವೆ 'ಬಾಲ್'. ಇದು ಅರಸಿನ ಕಲಸಲು ಮತ್ತು ಲೇಪನಕ್ಕೆ ಉಪಯೋಗವಾಗುತ್ತದೆ. ಓಟ ಕುಟ್ಟಲು ಒನಕೆ ಮತ್ತು ಅನ್ನ ಬಸಿಯುವ ಮರದ ಮರಿಗೆ 'ಕೊಟೊ ಉಪಯೋಗವಾಗುತ್ತದೆ. ಕುಂಭ ಮುಹೂರ್ತದ ಘಡಿಗೆ, ಮೃತ್ತೀಕ ಕಲಶಗಳ ಕಂಠ ಮತ್ತು ಓಟ್ಟು ಕುಟ್ಟುವ ಒನಕೆಗಳಿಗೆ 'ಸುರಗಿಸುತ್ತು' ಸುತ್ತಿ ಕಂಕಣ ಕಟ್ಟಬೇಕು. ಮಾವಿನೆಲೆಯ ಅರಸಿನ ಕೊಂಬನ್ನು ಸೇರಿಸಿ ನೂಲಿನಿಂದ ಕಟ್ಟುವುದಕ್ಕೆ 'ಸುರಗಿಸುತ್ತು' ಅಂತ ಹೆಸರು ಈ ತಯಾರಿಗಳನ್ನೆಲ್ಲಾ ಮಾಡಿಡಬೇಕಾದದ್ದು ಬಲಗೊಡತಿಯ ಜವಾಬ್ದಾರಿ.

ಮದುಮಗಳು ವರನ ಮನೆಯಿಂದ ಬಂದಿರುವ ಅರಸಿನ ಬಾಗಿನದ ಹೊ ಪಂಚೆಯನ್ನು ಸೀರೆಯಂತೆ ಉಡಬೇಕು. ಮದುಮಗಳನ್ನು ಮನೆಯ ಆಯದೊಳ ಅಥವಾ ಚಾವಡಿಯಲ್ಲಿ ಅರಸಿನ ಲೇಪನಕ್ಕೆ ಕುಳ್ಳಿರಿಸುತ್ತಾರೆ. ಕುಳಿತುಕೊಳ್ಳುವ ನೇರಕ್ಕೆ ಮೇಲೆ ಅಟ್ಟದ ಜಂತಿಗೆ ಮಾವಿನೆಲೆಯ ಒಂದು ಗೊಂಚಲನ್ನು ಕೆಳಮುಖವಾಗಿ ಕಟ್ಟಿರುತ್ತಾರೆ ಅರಸಿನ ಲೇಪನ ಶಾಸ್ತ್ರವನ್ನು ಪೂರೈಸುವುದು ಪಂಚ ಮುತ್ತೈದೆಯರು. ಗುರುಕಾರ್ತಿ ರಾಯಭಾರ್ತಿ, ಯಜಮಾನ್ತಿ, ಸೋದರತ್ತೆ, ಹಿರಿಯ ವಿವಾಹಿತ ಸಹೋದರಿ – ಹೀಗೆ ಆದ್ಯತಾ ಕ್ರಮದಲ್ಲಿ ಐವರಾದರೂ ಇರಲೇಬೇಕು.

ಅರಸಿನ ಲೇಪನ ಒಂದು ಶುದ್ಧೀಕರಣದ, ನಿರ್ಮಲೀಕರಣದ ಕ್ರಮ. ಅರಸಿನಕ್ಕೆ ರೋಗನಿರೋಧಕ ಮತ್ತು ಕ್ರಿಮಿನಾಶಕ ಶಕ್ತಿಯಿದೆ ಎಂದು ವೈಜ್ಞಾನಿಕವಾಗಿಯೂ ದೃಢಪಟ್ಟಿರುತ್ತದೆ. ಅರಸಿನ ಪೂಸಿದ ಮೇಲೆ ಪವಿತ್ರವಾಯಿತು ಎಂಬ ಸಂಜ್ಞೆ– ಮುಂದಕ್ಕೆ ಆಗುವ ಎಲ್ಲಾ ಕಾರ್ಯಗಳು ಮಂಗಲಕರವಾಗುತ್ತವೆ ಎಂಬ ಮನೋಶಾಸ್ತ್ರಕ್ಕೆ ಪೂರಕ ಆಶಯವನ್ನು ಹೊಂದಿದೆ.

ಈಗ ಅರಸಿನದ ಹುಡಿ ಕ್ರಯಕ್ಕೆ ಸಿಗುತ್ತದೆ. ಹಿಂದೆ ಅರಸಿನದ ಕೊಂಬುಗಳನ್ನು ಜಜ್ಜಿ ಅರೆದು ಕಣಕ (PASTE) ತಯಾರು ಮಾಡುತ್ತಿದ್ದರು. ಯಜಮಾನ್ತಿ ಅರಸಿನ ತಂದು ಗುರುಕಾರ್ತಿಯಲ್ಲಿ ಕೊಡುತ್ತಾಳೆ. ಗುರಿಕಾರ್ತಿ ರಾಯಭಾರ್ತಿಯಲ್ಲಿ, ರಾಯಭಾರ್ತಿ ಉಳಿದ ಸ್ತ್ರೀಯರಲ್ಲಿ – ಈ ರೀತಿ ಐವರು ಮುತ್ತೈದೆಯರು ಸೇರಿ ಸಾಣೆ ಕಲ್ಲಲ್ಲಿ ಹಾಕಿ ಅರಸಿನವನ್ನು ಅರೆಯುತ್ತಾರೆ. ಅರೆದ ಅರಸಿನವನ್ನು ಒಂದು ಕಂಚಿನ ಬಟ್ಟಲಲ್ಲಿ ತೆಗೆದು ತೆಂಗಿನೆಣ್ಣೆ ಅಥವಾ ತೆಂಗಿನಹಾಲು ಬೆರಸಿ ಕಲಸುತ್ತಾರೆ. ಬಲಗೊಡತಿ ಮದುಮಗಳನ್ನು ಮಾವಿನೆಲೆಯ ಗೊಂಚಲು ಕಟ್ಟಿದ ಅಡಿಯಲ್ಲಿ, ನೆಲದ ಮೇಲೆ ಮರದ ಮಣೆ ಇಟ್ಟು, ಗುರಿಕಾರ ರಾಯಭಾರಿ ಮತ್ತು ಸೇರಿದ ಸಭೆಗೆ 'ಮದುಮಗಳನ್ನು ಅರಸಿನ ಲೇಪನಕ್ಕೆ ಕುಳ್ಳಿರಿಸುತ್ತೇನೆ' ಎಂದು ಕೈಮುಗಿದು ಹೇಳಿ ಕೂರಿಸಬೇಕು. ಹೀಗೆ ಹೇಳುವುದು ಹಿರಿಯರ ಮತ್ತು ಸಭಿಕರ ಒಪ್ಪಿಗೆ ಪಡೆಯುವ ಹಾಗೂ ಅವರಿಗೆ ಗೌರವ ಸಲ್ಲಿಸುವ ಕ್ರಮ.

ಅವರೂ 'ಹಾಂ ಅನ್ನುತ್ತೇವೆ' ಎಂಬ ಸಮ್ಮತಿಯ ಮಾರುತ್ತರ ನೀಡಬೇಕು. ಮದುಮಗಳು ಕೈಯಲ್ಲಿ ವೀಳ್ಯಪಟ್ಟ ಹಿಡಕೊಂಡು, ಕೈಮುಗಿದು ಮಣೆಯ ಮೇಲೆ ಪೂರ್ವಾಭಿಮುಖವಾಗಿ ಕುಕ್ಕರಗಾಲಲ್ಲಿ ಕುಳಿತುಕೊಳ್ಳಬೇಕು. ವಧುವಿನ ತಾಯಿ (ಯಜಮಾನ್ತಿ) ಗುರಿಕಾರ ರಾಯಭಾರಿ, ಹಿರಿಯರು ಹಾಗೂ ಸಭಿಕರಿಗೆ ಕೈಮುಗಿದು 'ಅರಸಿನ ಬಟ್ಟಲು ಇಡುತ್ತೇನೆ' ಎಂಬುದಾಗಿ ಹೇಳಿ, ಪಂಚ ಮುತ್ತೈದೆಯರು ಹಿಡಿದು ವಧುವಿನ ಎದುರುಗಡೆ ಮಣೆಯ ಮೇಲೆ ಅರಸಿನ ಬಟ್ಟಲನ್ನು ಇಡುತ್ತಾರೆ. ಅರಸಿನ ಶಾಸ್ತ್ರ ಪ್ರಾರಂಭಿಸುವಾಗ ಜನರಿಗೆ ಸೂಚನೆಯಾಗಿ ಗರ್ನಾಲು ಬಿಡುವ ಕ್ರಮವಿದೆ.

ಅರಸಿನ ಬಟ್ಟಲು ಕಂಚಿನದ್ದೇ ಆಗಿರಬೇಕು. ಕಂಚಿನ ಬಟ್ಟಲಲ್ಲಿ ತೆಂಗಿನಹಾಲು ಹಾಕಿ (ಹಿಂದೆ ತೆಂಗಿನ ಹಾಲೇ ಉಪಯೋಗವಾಗುತ್ತಿತ್ತು ಅಂತ ಹಿರಿಯರ ಹೇಳಿಕೆ) ಅಥವಾ ತೆಂಗಿನೆಣ್ಣೆಯೊಂದಿಗೆ ಅರಸಿನ ಕಲಸಿ ಮಾಡುವ ಕ್ರಿಯೆಯಿಂದ ದೇಹಕ್ಕೆ ಲೇಪನ ಮಾಡಿದಾಗ ರಾಸಾಯನಿಕ ಪರಿಣಾಮ ಪೂರಕವಾಗಿ ಆಗುವುದು ಎಂಬ ನಂಬಿಕೆ. (ಕಂಚಿನ ಬಟ್ಟಲು ಉಪಯೋಗಿಸುವುದು ಪವಿತ್ರ ಎಂಬ ಭಾವನೆ ಇದೆ. ಊಟಕ್ಕೂ ಕಂಚಿನ ಬಟ್ಟಲೇ ಉಪಯೋಗವಾಗುತ್ತಿತ್ತು. ಮದುವೆಯ ಸೇಸೆ ಮತ್ತು ಮುಯ್ಯಿ ಇಡಲೂ ಕಂಚಿನ ಬಟ್ಟಲನ್ನೇ ಬಳಸುತ್ತಾರೆ) ಸುಮಾರು ನಾಲ್ಕು ಅಡಿ ಉದ್ದದ 'ಅಂಡಿಲು' ಗಿಡದ ಕೋಲಿನ ತುದಿಗೆ ಐದು ಮಾವಿನೆಲೆಗಳನ್ನು ನೂಲಿನಿಂದ ಕಟ್ಟಿ ಬಲಗೊಡತಿ ಮೊದಲೇ 'ಜಾಲ್' ತಯಾರಿಸಿಟ್ಟಿರುತ್ತಾಳೆ. ಈ 'ಜಾಲ್' ಎಂಬ ಸಲಕರಣೆಯಿಂದ ಪಂಚಸುಮಂಗಲೆಯರು ಸೇರಿ ಬಟ್ಟಲಿನಲ್ಲಿಯ ಅರಸಿನ ಕಲಸುತ್ತಾರೆ. ಈ ರೀತಿ ಕಲಸುತ್ತಿರುವಾಗ ಅನುಭವೀ ಮಹಿಳೆಯರು ಅರಸಿನ ಸಂಪ್ರದಾಯದ ಹಾಡನ್ನು ಹಾಡುತ್ತಾರೆ. ಈ ಜಾನಪದ ಹಾಡಿನಲ್ಲಿ ಅರಸಿನ ಲೇಪನದ ಕ್ರಮ ಮತ್ತು ಆಚರಣೆಯ ವಾಸ್ತವಿಕ ವಿವರಣೆಯೊಂದಿಗೆ ವೈಭವೀಕರಿಸಿದ ವಸ್ತುಸ್ಥಿತಿಯ ವಿವರಣೆಯೂ ಸಮ್ಮಿಳಿತವಾಗಿದೆ. ಸುದೀರ್ಘವಾದ ಈ ಹಾಡು ಮುಗಿವವರೆಗೆ ಅರಸಿನವನ್ನು ಕಲಸುತ್ತಾ ಇರುತ್ತಾರೆ.

ಹಾಡು ಮುಗಿಯುತ್ತಿದ್ದಂತೆ ವಧುವಿನ ತಾಯಿ, ಗುರಿಕಾರ್ತಿ, ರಾಯಭಾರ್ತಿ ಹಾಗೂ ಇತರ ಸುಮಂಗಲಿಯರು ಮದುಮಗಳ ಬಲ ಉಂಗುಷ್ಠದಿಂದ ಪ್ರಾರಂಭಿಸಿ ಗಲ್ಲ ಪರ್ಯಂತ ಮೂರು ಅಥವಾ ಐದು ಜಾಗಗಳಲ್ಲಿ, ಮೂರು ಅಥವಾ ಐದು ಬಾರಿ ಏರಿಕೆ ಕ್ರಮದಲ್ಲಿ, ಎಡಮಗ್ಗುಲಿಂದ ಉಂಗುಷ್ಠವರೆಗೆ ಇಳಿಕೆ ಕ್ರಮದಲ್ಲಿ 'ಜಾಲ್'ನಿಂದ ಅರಸಿನ ಹಚ್ಚುತ್ತಾರೆ. ಆ ನಂತರ ಒಬ್ಬರಾದ ಮೇಲೊಬ್ಬರಂತೆ ಸರದಿ ಪ್ರಕಾರ ಎರಡೂ ಅಂಗೈಗಳನ್ನು ಬಟ್ಟಲಲ್ಲಿ ಕಲಸಿದ್ದ ಅರಸಿನದಲ್ಲಿ ಅದ್ದಿ ಎರಡೂ ಮಗ್ಗುಲುಗಳಲ್ಲಿ ಏರಿಕೆ ಕ್ರಮದಲ್ಲಿ ಅರಸಿನ ಹಚ್ಚುತ್ತಾರೆ. ಅರಸಿನ ಶಾಸ್ತ್ರಕ್ಕೆ ವಾಡೆಯ, ಕುಟುಂಬದ, ನೆರೆಹೊರೆಯ, ಬಂಧುವರ್ಗದವರೆಲ್ಲಾ ಕೂಡಿ ಚಪ್ಪರ ತುಂಬಾ ಜನ ಸೇರಿರುತ್ತಾರೆ. ಬಲಗೊಡತಿ ಅರಸಿನ ಕಲಸಿದ 'ಜಾಲ್' ತೆಗೆದು, ವಧುವಿನ ತಾಯಿಯಲ್ಲಿ ಕೊಟ್ಟು, ಅದನ್ನು ಬಾಗಿಲ ಬಳಿ ಮಾಡಿಗೆ ಸಿಕ್ಕಿಸುತ್ತಾರೆ. ಯಜಮಾನ್ತಿ 'ಅರಸಿನ ಬಟ್ಟಲು ತೆಗೆಯುತ್ತೇನೆ' ಅಂತ

ಸಭೆಗೆ ಕೈಮುಗಿದು ಹೇಳಿ ಬಟ್ಟಲು ತೆಗೆಯುತ್ತಾಳೆ. ಬಲಗೊಡತಿ 'ಮದುಮಗಳನ್ನು ಅರಸಿನದಿಂದ ಎಬ್ಬಿಸುತ್ತೇನೆ' ಅಂತ ಕೈಮುಗಿದು ಹೇಳಿ ಮದುಮಗಳನ್ನು ಕೈಹಿಡಿದು ಎಬ್ಬಿಸುತ್ತಾಳೆ.

7.2. ಮೃತ್ತೀಕ ಕಲಶ ಸ್ನಾನ :

ಅರಸಿನ ಶಾಸ್ತ್ರದಿಂದ ಮದುಮಗಳನ್ನು ಎಬ್ಬಿಸಿ ಬಲಗೊಡತಿ ಕೈಹಿಡಿದು ಅವಳನ್ನು ಮನೆಯ ಮುಖ್ಯಬಾಗಿಲಿನ ಮೂಲಕ ಹೊರಗೆ ಕರೆದುಕೊಂಡು ಬರುತ್ತಾಳೆ. ಕಲಶ ಸ್ನಾನಕ್ಕಾಗಿ ಮನೆಯೆದುರು ತಯಾರಿಸಿಟ್ಟಿದ್ದ ಚಚ್ಚೌಕ 'ಮಾಟೊಟ'ಯ ಹತ್ತಿರ ಕರಕೊಂಡು ಬಂದು, ಈಶಾನ್ಯ ದಿಕ್ಕಿನಲ್ಲಿ, ಅಂದರೆ ಪೂರ್ವಾಭಿಮುಖವಾಗಿ ಕುಳಿತುಕೊಳ್ಳುವಾಗ ಎಡಮೂಲೆಯಲ್ಲಿ ಮದುಮಗಳು ಪೀಳ್ಯಪಟ್ಟೆ ಇಟ್ಟು, ನಡುವೆ ಮಣೆಯ ಮೇಲೆ ಕುಳಿತುಕೊಳ್ಳುತ್ತಾಳೆ. ಕಲಶಸ್ನಾನದ ಸಮಯ ಮದುಮಗಳು ಅರಸಿನ ಲೇಪನದ ಪಂಚೆಯನ್ನೇ ಧರಿಸಿರಬೇಕು. ಅರಸಿನ ಹಚ್ಚಿದ ಬಟ್ಟೆ ಬದಲಾಯಿಸುವಂತಿಲ್ಲ. ಇಲ್ಲಿಯೂ ಸುಮಂಗಲಿಯರು ಅರಸಿನ ಲೇಪನ ಮಾಡಿದ ಕ್ರಮದಲ್ಲಿಯೇ ಸುರಗಿ ಸುತ್ತಿನ ಕಂಕಣ ಕಟ್ಟಿದ ಐದು ಮೃತ್ತೀಕ ಕಲಶಗಳಿಂದ ಮದುಮಗಳಿಗೆ ಸ್ನಾನ ಮಾಡಿಸಬೇಕು. ಕಲಶ ಸ್ನಾನಕ್ಕೆ ಬಾವಿಯಿಂದ ಸೇದಿದ ನೈಸರ್ಗಿಕ ತಣ್ಣೀರನ್ನು ಮಾತ್ರ ಉಪಯೋಗಿಸಬೇಕು. ಕಾಯಿಸಿದ ನೀರನ್ನು ಉಪಯೋಗಿಸುವಂತಿಲ್ಲ. ಸ್ನಾನ ಮಾಡಿಸುವಾಗಲೂ ಬಲಉಂಗುಷ್ಠದಿಂದ ಪ್ರಾರಂಭಿಸಿ ತಲೆಯ ವರೆಗೆ ಏರಿಕೆ ಕ್ರಮದಲ್ಲಿ, ಹಾಗೆಯೇ ಎಡಮಗ್ಗುಲಿಂದ ಉಂಗುಷ್ಠದ ವರೆಗೆ ಇಳಿಕೆ ಕ್ರಮದಲ್ಲಿ ಐದುಕಡೆ ಪಂಚಾವರ್ತಿ ನೀರೆರೆದು ಸ್ನಾನ ಮಾಡಿಸುತ್ತಾರೆ. ಸ್ನಾನ ಮಾಡಿಸಲು ಪ್ರಾರಂಭಿಸಿವಾಗ ಸುಮಂಗಲಿಯರು ಸಂಪ್ರದಾಯದ ಜಾನಪದ ಹಾಡುಗಳನ್ನು ಹಾಡಲು ಪ್ರಾರಂಭಿಸುತ್ತಾರೆ. ಐದೂ ಕಲಶಗಳು ಮಣ್ಣಿನವು ಸಿಗದಿದ್ದರೆ ಎರಡು ಕಲಶಗಳಾದರೂ ಮಣ್ಣಿನವೇ ಆಗಿರಬೇಕು. ಮತ್ತು ಸ್ನಾನಕ್ಕೆ ಪ್ರಥಮ ನೀರನ್ನು ಆ ಕಲಶಗಳಿಂದಲೇ ಎರೆಯಬೇಕು. ಈ ಎರಡು ಕಲಶಗಳು ನಂತರ ಪೀಳ್ಯಪಟ್ಟೆಯೊಂದಿಗೆ ಗುರಿಕಾರ ರಾಯಭಾರಿಯವರಿಗೆ ಸಲ್ಲುತ್ತವೆ. ಕೆಲವು ವಾಡೆಗಳಲ್ಲಿ ಐದೂ ಕಲಶಗಳನ್ನು ಪೀಳ್ಯಪಟ್ಟೆ ಸಹಿತ ಗುರಿಕಾರ, ರಾಯಭಾರಿ, ಬಲಗೊಡತಿ (ಸೋದರತ್ತೆ), ಪುರೋಹಿತರಿಗೆ ಒಂದೊಂದರಂತೆ ಕೊಟ್ಟು ಮತ್ತೊಂದು ಮನೆಯಲ್ಲಿ ಉಳಿಯುತ್ತದೆ. ಕಲಶವನ್ನು ಪುರೋಹಿತರಿಗೆ ಕೊಡುವಾಗ ಅವರಲ್ಲಿ ಕಾಣಿಕೆ ($1^1/_4$ ರೂ.)ಯೊಂದಿಗೆ ಕೊಡಬೇಕು. ಸಾಂಕೇತಿಕವಾಗಿ ಗೌರವ ನೀಡುವ ಈ ಪದ್ಧತಿ ಈಗಿನ ಪರಿಸ್ಥಿತಿಯಲ್ಲಿ ಅರ್ಥಹೀನವಾಗುತ್ತಿದೆ.

ಮಾಟೊಟಿಯಲ್ಲಿ ಕಲಶಸ್ನಾನ ಮಾಡಿಸುವಾಗ ಕೆಲವು ಬಾರಿ ಸೌತೆಬೀಜ, ಅಕ್ಕಿ ತೊಳೆದ ಅಕ್ಕಚ್ಚು, ಗಂಜಿ ತಿಳಿ, ಹಿಂಜಿದ ತೆಂಗಿನಕಾಯಿ ಸುಳಿ ಕಲಸಿ ಎರೆಯುವುದಿದೆ. ಇದಕ್ಕೆ 'ಬೋಳು ಮೀಯಿಸುವುದು' ಅನ್ನುತ್ತಾರೆ. ಇದು ಅಲ್ಲಿ ಸೇರಿದವರಿಗೆ

ಮನೋರಂಜನೆಯ ಪ್ರಸಂಗವಾದರೆ ಮದುಮಗಳಿಗೆ ಗೋಳು. ಅನ್ವರ್ಥವಾಗಿ ಮದುಮಗಳ ತಾಳ್ಮೆ, ಸಹನಶೀಲತೆಗಳನ್ನು ಒರೆಗೆ ಹಚ್ಚುವುದಕ್ಕಾಗಿ ಮಾಡುವ ಪರ್ಯಾಯ ಕ್ರಮ ಎನ್ನಬಹುದು. ಮದುಮಗಳು ಸಮಾಧಾನಿಯೊ, ಕೋಪಿಷ್ಟಳೊ? ಮುಂದಿನ ಸಾಂಸಾರಿಕ ಜೀವನದಲ್ಲಿ ಕಷ್ಟಕೋಟಲೆಗಳು ಉದ್ಭವಿಸಿದಾಗ ಹೇಗೆ ಸಂಯಮದಿಂದ ಎದುರಿಸುತ್ತಾಳೆ? ಎಂಬುದರ ಪರೀಕ್ಷಾರ್ಥವಾಗಿ ಈ ಆಚರಣೆ ಇದ್ದಿರಬಹುದು. ತಾಳ್ಮೆಯಿಂದ ಸಹಿಸಿಕೊಂಡಲ್ಲಿ, ಬರಲಿರುವ ಜೀವನದಲ್ಲಿ ಏನಾದರೂ ತೊಂದರೆಗಳು ಸಂಭವಿಸಿದಾಗ ಎದುರಿಸಲು ಧೈರ್ಯ ಬರುತ್ತದೆ ಎಂಬುದು ನಂಬಿಕೆ. ಕಲಶ ಸ್ನಾನ ಮಾಡಿಸುವಾಗ ಬಲಗೊಡತಿಯ ಮಾರ್ಗದರ್ಶನ ಮತ್ತು ಸಹಕಾರವಿರುತ್ತದೆ.

7.3. ಹಿಟ್ಟು ಕುಟ್ಟುವ ಶಾಸ್ತ್ರ (ಮುಸಲ ಮುಹೂರ್ತ):

ಕಲಶ ಸ್ನಾನ ಆದನಂತರ ಬಿಸಿನೀರಿನಿಂದ ಚೆನ್ನಾಗಿ ಸ್ನಾನ ಮಾಡಬಹುದು. ಒದ್ದೆಯಾದ ಬಟ್ಟೆಗಳನ್ನು ಹಿಂಡಿ ಪುನಃ ಅವುಗಳನ್ನೇ ಉಡಬೇಕು. ಬಟ್ಟೆಗಳನ್ನು ಬದಲಾಯಿಸುವಂತಿಲ್ಲ. ಆ ಒದ್ದೆ ಬಟ್ಟೆಗಳಲ್ಲೇ ಮುಂದಿನ ಕ್ರಮಗಳನ್ನು ಆಚರಿಸಬೇಕು. ಹಿಂದಿನ ಕಾಲದಲ್ಲಿ ಗಿರಣಿಗಳಿರಲಿಲ್ಲ. ಅಡುಗೆಗೆ ಬೇಕಾದ ಸಾಮಾನುಗಳನ್ನೆಲ್ಲಾ ಕುಟ್ಟಿ, ಬೀಸಿ ಹುಡಿ ಮಾಡುತ್ತಿದ್ದರು. ಈ ಕೆಲಸಗಳನ್ನು ಮದುವೆಯ ಕೆಲವು ದಿನ ಮುಂಚಿತವಾಗಿ ಮಾಡುತ್ತಿದ್ದರು. ಈಗ ಅದರ ಸಾಂಕೇತಿಕ ಆಚರಣೆ ಮಾತ್ರ ಚಾಲ್ತಿಯಲ್ಲಿದೆ. ಈ ಆಚರಣೆ ಮದುಮಗಳು ಮುಂದಿನ ಜೀವನದಲ್ಲಿ ನಿರ್ವಹಿಸಬೇಕಾದ ಕೆಲಸಗಳ ರೂಪಕವೂ ಆದುದರಿಂದ ಅದರ ಅನುಭವವಾಗಲು ತಿಳಿಯಪಡಿಸುವ ಸೂಚನೆಯೂ ಆಗಬಹುದು. ಅಂಗಳದಲ್ಲಿ ಒಂದು ಅನ್ನಬಸಿಯುವ ಮರದ ಮರಿಗೆ (ತಿಳಿಮರಿಗೆ = ಕೊಟ್ಟೊ) ಇಟ್ಟಿರುತ್ತಾರೆ. ಈ ಮರಿಗೆಯಲ್ಲಿ ಮದುಮಗಳು ಪ್ರಾರಂಭದಲ್ಲಿ ವೀಳ್ಯ,ಪಟ್ಟೆ ಮತ್ತು ಕಾಣಿಕೆ ಇಟ್ಟು ಕೈಮುಗಿಯಬೇಕು. ಮರಿಗೆಗೆ ಐದು ಬಾರಿ ಮುಷ್ಟಿ ಬೆಳ್ತಿಗೆ ಅಕ್ಕಿ ಹಾಕಿ, ಐದು ಬಾರಿ ನೀರೆರೆಯಬೇಕು. ಕುಟ್ಟುವ ಕಬ್ಬಿಣದ ತಳಭಾಗ ಹೊಂದಿದ ಒನಕೆಯೊಂದಕ್ಕೆ ಸುರಗಿ ಸುತ್ತಿನ ಕಂಕಣ ಕಟ್ಟಿ ಬಲಗೊಡತಿ ಮೊದಲೇ ತಯಾರಿಟ್ಟಿರುತ್ತಾಳೆ. ಆ ಒನಕೆಯಿಂದ ಮದುಮಗಳೊಂದಿಗೆ ಪಂಚ ಮುತ್ತೈದೆಯವರು ಸೇರಿ ಮರಿಗೆಗೆ ಹಾಕಿದ್ದ ಅಕ್ಕಿಯನ್ನು ಕುಟ್ಟಬೇಕು. ಕುಟ್ಟುವ ತಳಭಾಗವಿಲ್ಲದ ಮೊಂಡು ಒನಕೆಯಿಂದ ಹಿಟ್ಟು ಕಟ್ಟುವುದು ನಿಷಿದ್ಧ. ಹಾಗೆಯೇ ಸುರಗಿ ಸುತ್ತಿನ ಕಂಕಣ ಕಟ್ಟದ ಒನಕೆಯಿಂದಲೇ ಕುಟ್ಟಬೇಕು. ಈ ಶಾಸ್ತ್ರಕ್ಕೆ 'ಹಿಟ್ಟು ಕುಟ್ಟುವ ಶಾಸ್ತ್ರ' ಅಂತ ಹೆಸರು. ಗೋವಾದಲ್ಲಿ ಈ ಪದ್ಧತಿಯನ್ನು 'ಮುಸಲ ಮುಹೂರ್ತ' ಅನ್ನುತ್ತಾರೆ.

7.4. ಕುಂಭ ಮುಹೂರ್ತ (ಘಡಿಗೆ ಮುಹೂರ್ತ):

ಹಿಟ್ಟು ಕುಟ್ಟುವಿಕೆ ಆದನಂತರ ಅಡುಗೆ ಚಪ್ಪರದಲ್ಲಿ 'ಕುಂಭ ಮುಹೂರ್ತ' (ಘಡಿಗೆ ಮುಹೂರ್ತ ಅಥವಾ ಒಲೆ ಮುಹೂರ್ತ) ಆಗಬೇಕು. ಇದು ಮದುವೆ ಔತಣಕ್ಕೆ ಸಾಂಕೇತಿಕವಾಗಿ ಕೊಪ್ಪರಿಗೆ ಮುಹೂರ್ತ ಮಾಡುವ ಕ್ರಮ. ಐದನೇ ಒಲೆಯೆದುರು

ಮದುಮಗಳು ವೀಳ್ಯಪಟ್ಟಿಯನ್ನು ಕಾಣಿಕೆಯೊಂದಿಗೆ ಇಟ್ಟು ಕೈಮುಗಿಯಬೇಕು. ಈ ಶಾಸ್ತ್ರಕ್ಕೆ ಸುರಗಿಸುತ್ತಿನ ಕಂಕಣ ಕಟ್ಟಿದ ಮಣ್ಣಿನ ಕುಂಭವೇ ಆಗಬೇಕು. ಮದುಮಗಳು ಮತ್ತು ಪಂಚ ಮುತ್ತೈದೆಯರು ಹಿಡಿದು ಕುಂಭವನ್ನು ಒಲೆಯ ಮೇಲಿರಿಸಬೇಕು. ಮದುಮಗಳು ಈ ಕುಂಭಕ್ಕೆ ಐದು ಬಾರಿ, ಐದು ಮುಷ್ಠಿ ಬೆಳ್ತಿಗೆ ಅಕ್ಕಿ ಹಾಕಿ, ಐದು ಬಾರಿ ನೀರೆರೆಯಬೇಕು ಮತ್ತು ಒಲೆಗೆ ಬೆಂಕಿ ಹಚ್ಚಿ ಕೈಮುಗಿಯಬೇಕು.

7.5. ಹಾಲುಗಂಭ ಶಾಸ್ತ್ರ (ಬೂರುಗ ನೆಡುವ ಶಾಸ್ತ್ರ) :

ಕುಂಭ ಮುಹೂರ್ತ ಆದಮೇಲೆ ಹಾಲುಗಂಭ ಶಾಸ್ತ್ರ ಅಥವಾ ಬೂರುಗ (BOMBEX CEIBA) ನೆಡುವ ಶಾಸ್ತ್ರವನ್ನು ಮಾಡುತ್ತಾರೆ. ಬೂರುಗ ನೆಡುವುದು ಸುಖ ಶಾಂತಿ ನೆಮ್ಮದಿಯ ಸಂಕೇತ. ಮನೆಯ ಮುಖ್ಯಬಾಗಿಲಿನ ಎಡ ಮಗ್ಗುಲಿನಲ್ಲಿ ಅಂಗಳದಲ್ಲಿ ಚಪ್ಪರಕ್ಕೆ ಮುಹೂರ್ತ ಕಂಭ ಹಾಕಿರುತ್ತಾರೆ. ಈ ಕಂಭದ ಬುಡದಲ್ಲಿ ದನದ ಹಸಿ ಸೆಗಣಿಯಿಂದ ಚಿಕ್ಕದಾಗಿ ಕಟ್ಟೆ ಕಟ್ಟಿರುತ್ತಾರೆ. ಅದರ ಬದಿಯಲ್ಲಿ ವಧು ವೀಳ್ಯಪಟ್ಟಿ ಕಾಣಿಕೆ ಸಹಿತ ಇಟ್ಟು ಕೈಮುಗಿಯುತ್ತಾಳೆ. ಈ ಕಟ್ಟೆಯೊಳಗೆ ಕಂಭಕ್ಕಾನಿಸಿ ಒಂದು ಬೂರುಗದ ಗೆಲ್ಲನ್ನು ವಧು ನೆಡುತ್ತಾಳೆ. ಈ ಸಂದರ್ಭ ಕೂಡಾ ಸುಮಂಗಲಿಯರು ಬೂರುಗ ನೆಡುವ ಸಾಂಪ್ರದಾಯಿಕ ಹಾಡು ಹಾಡುತ್ತಾರೆ. ಬೂರುಗ ನೆಡುವಾಗಲೂ ಈ ಪಂಚ ಸುಮಂಗಲಿಯರು ಸಹಕಾರ ನೀಡುತ್ತಾರೆ. ನೆಟ್ಟ ಬೂರುಗದ ಗೆಲ್ಲನ್ನು ಬಲಗೊಡತಿಯ ಪತಿ ಆ ಕಂಭಕ್ಕೆ ನೂಲಿನಿಂದ ಕಟ್ಟುತ್ತಾನೆ. ಅಂಕುರಾರೋಪಣಗೈದ (ಮೊಳಕೆ ಬರಿಸಿದ) ಪಂಚಧಾನ್ಯವನ್ನು ಬೂರುಗದ ಬುಡಕ್ಕೆ ಸುರಿದು ವಧುವು ಅದಕ್ಕೆ ಐದು ಬಾರಿ ನೀರೆರೆಯುತ್ತಾಳೆ ಮತ್ತು 'ಬೂರುಗ ಸರಸರನೆ ಬೆಳೆಯಲಿ' ಎಂದು ಹೇಳುತ್ತಾಳೆ. ಪಂಚಧಾನ್ಯ ಮೊಳಕೆ ಬರಿಸಿರದಿದ್ದರೆ ಸಾಂಕೇತಿಕವಾಗಿ ಬೆಳ್ತಿಗೆ ಅಕ್ಕಿ ಉಪಯೋಗಿಸಲಾಗುತ್ತದೆ. ಮೊಳಕೆ ಬರಿಸಿದ ಧಾನ್ಯ, ಕೆಲವು ಗಿಡಮರಗಳು, ಬೆಂಕಿ, ನೀರು, ಕೆಲವು ಮಣಿಗಳು, ಬೆಳ್ತಿಗೆ ಅಕ್ಕಿ.... ಮುಂತಾದ ವಸ್ತುಗಳು ಶುಭಸಂಕೇತ, ಮಂಗಲಕಾರಕ ಮತ್ತು ಪರೋಕ್ಷವಾಗಿ ಮನುಷ್ಯ ಸಂತತಿಯ ಮೇಲೆ ಪ್ರಭಾವಬೀರುತ್ತವೆ ಎಂಬ ನಂಬಿಕೆ ಇದೆ. ಬುಡಕಟ್ಟು ಲಕ್ಷಣವುಳ್ಳ ಈ ಆಚರಣೆ ಫಲವಂತಿಕೆಯ, ಸಮೃದ್ಧಿಯ, ಸಂತಾನ ಪ್ರಾಪ್ತಿಯ ಉದ್ದೇಶದ ಪೂರ್ವಭಾವೀ ಸಂಪ್ರದಾಯ.

ಹಾಲುಗಂಭ ಶಾಸ್ತ್ರದ ನಂತರ ಮದುಮಗಳು ಹೊರಟ ಬಾಗಿಲಿನ ಮೂಲಕವೇ ಮನೆಯೊಳಗೆ ಹೋಗಿ ಉಟ್ಟ ಬಟ್ಟೆಗಳನ್ನು ಬದಲಾಯಿಸುತ್ತಾಳೆ. ಹಿಂದಿನ ಕ್ರಮ ಪ್ರಕಾರ ಮರುದಿನ ಮದುಮಗಳು ಶೃಂಗಾರಗೊಂಡು ಹೊರಡುವ ಮೊದಲು ವೀಳ್ಯಪಟ್ಟಿ ನೀಡಿ ಹಿರಿಯರ ಕಾಲು ಹಿಡಿದು ಆಶೀರ್ವಾದ ಪಡೆಯುವ ಪದ್ಧತಿ ಇತ್ತು. ಈಗ ಅವರೆಲ್ಲಾ ಸಮಯಕ್ಕೆ ಹಾಜರಾಗುವ ಸಂಭವ ಕಡಿಮೆ. ಆದುದರಿಂದ ರಾತ್ರಿಯೇ ಈ ಕ್ರಮವನ್ನು ಜರಗಿಸುತ್ತಾರೆ. ಪುಣ್ಯ ಸಂಪಾದನೆಗಾಗಿ ಈ ರೀತಿ ಆಶೀರ್ವಾದ ಪಡೆಯುವ ಪದ್ಧತಿ ಎಂಬುದು ನಂಬಿಕೆ. ಗುರಿಕಾರ ರಾಯಭಾರಿ, ದೇವರ ಮನೆಯ ಹಿರಿಯ,

ಕುಟುಂಬ ಸಂಬಂಧಿ ಬಂಧುಬಾಂಧವ ಹಿರಿಯರೆಲ್ಲರಿಗೆ ಕ್ರಮಪ್ರಕಾರವಾಗಿ ಮದುಮಗಳು ವಂದಿಸಿ ಆಶೀರ್ವಾದ ಪಡೆಯುತ್ತಾಳೆ.

ಮದುವೆಯ ಜವಾಬ್ದಾರಿಗಳನ್ನು ನಿರ್ವಹಿಸಿ ಸಹಕಾರ ನೀಡಿದವರಿಗೆ, ಕಷ್ಟಪಟ್ಟು ದುಡಿದವರಿಗೆ ಕೃತಜ್ಞತಾಭಾವದಿಂದ ಮತ್ತು ಬಂಧುವರ್ಗದ ಹಿರಿಯ ಕಿರಿಯರಿಗೆ ಸಂತೋಷಪೂರ್ವಕವಾಗಿ ಮದುವೆಯ ವಿಧಿಗಳೆಲ್ಲಾ ಮುಗಿದು ಔತಣಕ್ಕೆ ಮೊದಲು ಮದುಮಗಳು ಉಡುಗೊರೆಗಳನ್ನು ನೀಡುವುದು ವಾಡಿಕೆ. ಈ ಉಡುಗೊರೆಗಳನ್ನು ನೀಡುವುದಕ್ಕೇ ಸಾಕಷ್ಟು ಸಮಯ ವ್ಯಯವಾಗುತ್ತದೆ. ಮದುವೆಯ ಎಲ್ಲಾ ವಿಧಿಗಳನ್ನು ಪೂರೈಸದೆ ಊಟಕ್ಕೆ ಏಳುವಂತಿಲ್ಲ. ಆದುದರಿಂದ ಉಡುಗೊರೆ ನೀಡುವ ಕ್ರಮವನ್ನು ಹಿಂದಿನ ರಾತ್ರಿಯ ಅರಸಿನ ಶಾಸ್ತ್ರದ ಚಡಂಗಗಳೆಲ್ಲಾ ತೀರಿದ ತಕ್ಷಣ ಜರಗಿಸುತ್ತಾರೆ. ಉಡುಗೊರೆಗಳೆಲ್ಲಾ ವಸ್ತ್ರದಾನ ರೂಪದಲ್ಲಿರುತ್ತವೆ. ಚಪ್ಪರದಲ್ಲಿ ಕುರ್ಚಿ ಅಥವಾ ಬೆಂಚು ಇಟ್ಟು, ಪತಿಪತ್ನಿ ಜೋಡಿಗಳನ್ನು ಒಟ್ಟಿಗೆ ಕೂರಿಸಿ ಮದುಮಗಳು ಉಡುಗೊರೆ ನೀಡಿ ಕಾಲಿಗೆರಗಿ ಆಶೀರ್ವಾದ ಪಡೆಯುತ್ತಾಳೆ.

ಈ ಉಡುಗೊರೆ ನೀಡುವುದನ್ನೂ ಆದ್ಯತೆಯ ಮೇರೆಗೆಯೇ ಕೊಡಬೇಕು. ಕೊನೆಯ ಅಥವಾ ನಂತರದ ಆದ್ಯತೆಯವರಿಗೆ ಪ್ರಥಮದಲ್ಲಿ ಉಡುಗೊರೆ ನೀಡಿದಲ್ಲಿ ಪ್ರಥಮ ಆದ್ಯತೆಯ ವ್ಯಕ್ತಿಗೆ ಅವಮಾನ ಮಾಡಿದಂತಾಗುತ್ತದೆ. ಇದರಿಂದ ಬೇಸರಿಸಿಕೊಂಡ ಆತ ಉಡುಗೊರೆ ಸ್ವೀಕರಿಸದೇ ಇರಬಹುದು. ಹೀಗೆ ಮನಸ್ತಾಪಗೊಂಡವ ಉಡುಗೊರೆ ಪ್ರಸಂಗದಿಂದಲೇ ತಪ್ಪಿಸಿಕೊಂಡು ನಾಪತ್ತೆಯಾಗುವ ಸಂದರ್ಭಗಳಿರುತ್ತವೆ. ಅಂಥವರನ್ನು ಹುಡುಕಿ ತಂದು ಸಮಾಧಾನಪಡಿಸಿ ಉಡುಗೊರೆ ಸ್ವೀಕರಿಸುವಂತೆ ಮಾಡುವಾಗ ಯಜಮಾನನಿಗೆ ಸಾಕು ಸಾಕಾಗಿರುತ್ತದೆ. ಅಂಥವರನ್ನು ತಿರಸ್ಕರಿಸಿದರೆ ಮತ್ತೆ ಹಿಂದಿನಿಂದ ನಂಜಿನ ಮಾತಾಡುತ್ತಾರೆ. ದೂರುತ್ತಾರೆ ಅಥವಾ ಶಾಶ್ವತ ವೈರತ್ವವನ್ನು ಸಾಧಿಸುತ್ತಾರೆ.

ಉಡುಗೊರೆ ನೀಡಿ ಆದನಂತರ ಯಜಮಾನ ಭೋಜನಕ್ಕೆ ನೀರಿಡುತ್ತಾನೆ. ಇಲ್ಲಿಯೂ ತಲೆಗೆ ರುಮಾಲು ಸುತ್ತಿ, ಎರಡು ತಂಬಿಗೆ ನೀರು ಹಿಡಕೊಂಡು, ಸಭೆಗೆ ಕೈ ಮುಗಿದು 'ಸಮಸ್ತರೆಲ್ಲಾ ಭೋಜನಕ್ಕೆ ಏಳಿ' ಎಂಬುದಾಗಿ ಘಟ್ಟಿ ಸ್ವರದಲ್ಲಿ ಹೇಳುತ್ತಾನೆ. ಏಳಲು ಹೇಳದೆ ಮತ್ತು ನೀರು ಇಡದೆ ಊಟಕ್ಕೆ ಏಳುವುದು ಗೌರವದಾಯಕವೂ ಅಲ್ಲ ಮತ್ತು ಯಾರೂ ಏಳುವುದೂ ಇಲ್ಲ.

ಒಂದು ಕಡೆಯಿಂದ ಅರಸಿನ ಶಾಸ್ತ್ರ ಜರಗುತ್ತಿದ್ದಂತೆ ಅಡುಗೆ ಚಪ್ಪರದಲ್ಲಿ ಅಡುಗೆ ತಯಾರಾಗಿರುತ್ತದೆ. ತರಕಾರಿಯ ಈ ಸಾದಾ ಊಟಕ್ಕೆ ಉಪ್ಪಿನಕಾಯಿ, ಸಾರು, ಹಲಸಿನ ಗುಜ್ಜೆ, ಕೆಸುವು, ಹಿಡಿಹಲಸು, ತೊಂಡೆಕಾಯಿ – ಇವುಗಳಲ್ಲಿ ಯಾವುದಾದರೂ ಎರಡು ಮೂರು ವ್ಯಂಜನಗಳು ಇರುತ್ತವೆ. ಪಾಯಸ ಮಾಡುವ ಕ್ರಮವಿಲ್ಲ. ಯಜಮಾನ ಊಟದ ಸೂಚನೆ ನೀಡಿದಂತೆ ಪಂಗ್ತಿಗಳಲ್ಲಿ ಕುಳ್ಳಿರಿಸಿ ಕುಡಿಬಾಳೆಲೆಯಲ್ಲಿ ಬಡಿಸುತ್ತಾರೆ.

ಮದುಮಗಳನ್ನು ಪ್ರಥಮ ಪಂಗ್ತಿಯಲ್ಲಿ ಊಟಕ್ಕೆ ಕೂರಿಸುವ ಪದ್ಧತಿ ಇದೆ. ಗುರಿಕಾರ ರಾಯಭಾರಿ ಮುಂತಾದ ಗೌರವಸ್ಥರಿಗೆ ಪ್ರತ್ಯೇಕವಾಗಿ ಊಟಕ್ಕೆ ಕೂರಿಸುವ ವ್ಯವಸ್ಥೆ ಮಾಡುತ್ತಾರೆ. ಪಂಗ್ತಿಯಲ್ಲಿ ಕುಳಿತ ಎಲ್ಲರಿಗೆ ಎಲ್ಲ ಬಗೆಗಳನ್ನು ಬಡಿಸಿ ಆಗುವವರೆಗೆ ಮತ್ತು ಯಜಮಾನ ಕೈಮುಗಿದು 'ಸಮಸ್ತರು ಊಟ ಪ್ರಾರಂಭಿಸಿ' ಅಂತ ಹೇಳುವವರೆಗೆ ಯಾರೂ ಊಟ ಪ್ರಾರಂಭಿಸುವಂತಿಲ್ಲ. ಹಾಗೆಯೇ ಎಲ್ಲರ ಊಟವಾಗದೆ ಪಂಗ್ತಿ ಮಧ್ಯದಿಂದ ಏಳುವಂತಿಲ್ಲ. ಊಟವಾದವರಿಗೆ ತಾಂಬೂಲದ ಸರಬರಾಜು ಆಗುತ್ತದೆ. ಆ ನಂತರ ಹತ್ತಿರ ಸಂಬಂಧಿಗಳು ಅಲ್ಲಿಯೇ ನಿಂತು, ಉಳಿದವರು ಅವರವರ ಮನೆಗೆ ಹಿಂದಿರುಗುತ್ತಾರೆ. ಮರುದಿನ ಬೆಳಿಗ್ಗೆ ಮದುಮಗಳನ್ನು ಹೊರಡಿಸಿ ದಿಬ್ಬಣಕ್ಕೆ ಮತ್ತಿತರ ತಯಾರಿಗಳಿಗೆ ಬರಲು ಎಲ್ಲರನ್ನೂ ವಿನಂತಿಸಲು ಯಜಮಾನ ಮರೆಯುವುದಿಲ್ಲ. ಇಷ್ಟರಲ್ಲಿ ಮದುವೆಯ ಹಿಂದಿನ ರಾತ್ರಿಯ ಕಾರ್ಯಕ್ರಮಗಳು ಮುಗಿಯುತ್ತವೆ. ಧಾರೆ ವಧೂಗೃಹದಲ್ಲಿ ಜರಗುವುದಾದಲ್ಲಿ ಮರುದಿನದ ಮದುವೆ ಔತಣಕ್ಕೆ ಅಡುಗೆ ತಯಾರಿಗಳನ್ನು ಆ ರಾತ್ರಿಯೇ ಅಥವಾ ಮುಂಜಾವ ಬೇಗ ಎದ್ದು ಪ್ರಾರಂಭಿಸುತ್ತಾರೆ.

8. ವರನ ಮನೆಯಲ್ಲಿನ ಸಂಪ್ರದಾಯಗಳು :

8.1 ಅರಸಿನ ಬಾಗಿನ ಕಳುಹಿಸುವುದು :

ವರನ ಕಡೆಯ ದೇವಕಾರ್ಯ ಹಗಲಲ್ಲಾಗಲೀ, ರಾತ್ರಿಯಲ್ಲಾಗಲೀ–ವಧುವಿನ ಮನೆಗೆ ಅರಸಿನ ಬಾಗಿನವನ್ನು ಸಂಜೆಯಷ್ಟು ಹೊತ್ತಿಗೆ ಕಳುಹಿಸಲೇಬೇಕು. ಕಳುಹಿಸದಿದ್ದಲ್ಲಿ ವಧುವಿನ ಮನೆಯಲ್ಲಿ ಜರಗಲಿರುವ ವಿಧಿಗಳಿಗೆ ಅಡ್ಡಿಯಾಗುತ್ತದೆ. ವರನ ಕಡೆಯ ಯಜಮಾನ, ಅಥವಾ ಒಬ್ಬ ಜವಾಬ್ದಾರಿಯು, ಮದುವೆ ಸಂಪ್ರದಾಯ ಅರಿತ ವ್ಯಕ್ತಿ, ವರನ ಕಿರಿಯ ಮತ್ತು ಅವಿವಾಹಿತ ಸಹೋದರ ಅಥವಾ ವಾವೆಯಲ್ಲಿ ಕಿರಿಯ ಸಹೋದರ, ಸೋದರ ಮಾವ ಹಾಗೂ ಇನ್ನಿಬ್ಬರು ಈ ಅರಸಿನ ಬಾಗಿನವನ್ನು ಕೊಂಡುಹೋಗಬೇಕು. ಬಾಗಿನದೊಂದಿಗೆ ಒಂದು ಕಂಠೀಹಾರ, ಸ್ವಲ್ಪ ಹೂವು (ಮಲ್ಲಿಗೆ ಮತ್ತು ಅಬ್ಬಲಿಗೆ) ಕುಂಕುಮ ಮತ್ತು ವೀಳ್ಯಪಟ್ಟಿಗಳೊಂದಿಗೆ ವಧುವಿನ ಮನೆಗೆ ಹೋಗಿ, ಅಲ್ಲಿ ವಧುವಿನ ಕಡೆಯವರೊಂದಿಗೆ ಪರಸ್ಪರ ವೀಳ್ಯ ಬದಲಾಯಿಸಿಕೊಳ್ಳಬೇಕು. ಈ ವೀಳ್ಯ ಬದಲಾವಣೆಯ ಕ್ರಮ ತಾಂಬೂಲ ನಿಶ್ಚಿತಾರ್ಥದ ಪದ್ಧತಿಯಲ್ಲೇ ಇರುತ್ತದೆ. ಅರಸಿನ ಬಾಗಿನವನ್ನು ವಧುವಿನ ಕಡೆಯವರಿಗೆ ಕೊಟ್ಟು, ವರನ ಸಹೋದರ ವಧುವಿಗೆ ಹೂವು ಮುಡಿಸಿ ಕಂಠೀಹಾರವನ್ನು ತೊಡಿಸಬೇಕು. ವರನ ಕಡೆಯವರು ಪಂಚವೀಳ್ಯ ಪಟ್ಟಿಯನ್ನು ಚಪ್ಪರದ ಹೊರ ಜಾಗದಲ್ಲಿ ಸ್ಥಳದ ಮರ್ಯಾದೆಯಾಗಿ ಇಟ್ಟುಬರಬೇಕು. ಅವರು ನಂತರ ವಧುವಿನ ಅರಸಿನ ಶಾಸ್ತ್ರ ಆಗಿ ಭೋಜನ ಸ್ವೀಕರಿಸಬೇಕು. ಮರುದಿನ ವಧುವಿನ ದಿಬ್ಬಣ ಬರುವ ಸಂದರ್ಭಗಳಿದ್ದರೆ ದಿಬ್ಬಣ ಕರೆದುಕೊಂಡು ಬರಲು ಒಂದಿಬ್ಬರು ನಿಲ್ಲಬೇಕು. ವಧುವಿನ ಮನೆಯಲ್ಲಿ ಧಾರೆ ಆಗುವುದಾದಲ್ಲಿ ವಧುವಿನ ಕಡೆಯ ಇಬ್ಬರು ವರನ ದಿಬ್ಬಣ ಕರೆದುಕೊಂಡು ಬರಲು ವರನಲ್ಲಿಗೆ ಹೋಗಬೇಕು.

8.2. ಪನ್ನೆ ಶಾಸ್ತ್ರ (ರೇಗ್):

ವರನ ಕಡೆಯಿಂದ ದೇವಕಾರ್ಯ ಆದಮೇಲೆ, ರಾತ್ರಿಯ ಕಾರ್ಯಕ್ರಮಗಳಿಗೆ ಸುಮಾರು ಎಂಟು ಗಂಟೆಯಷ್ಟು ಹೊತ್ತಿಗೆ ವರನ ಚಪ್ಪರದಲ್ಲಿ ಜನ ಸೇರುತ್ತಾರೆ. ಈ ಕಾರ್ಯಕ್ರಮಕ್ಕೆ ದೇವರ ಮನೆಯ ಹಿರಿಯ, ಗುರಿಕಾರ, ರಾಯಭಾರಿ, ವಾಡೆಯ ಪಂಚಪ್ರಮುಖರು, ಸೋದರಮಾವ, ಕುಟುಂಬಸ್ಥರು, ಆಪ್ತೇಷ್ಟ ಪುರುಷರು, ಮಹಿಳೆಯರು ಮಕ್ಕಳಾದಿ ಎಲ್ಲರೂ ಸೇರಿರುತ್ತಾರೆ. ವರನಿಗೆ ಪ್ರಥಮ ವಿಧಿ 'ಪನ್ನೆ'. ವರನ ಮತ್ತು ಬಲಗೊಡೆಯನ 'ಗಡ್ಡಮೀಸೆ' ಒಪ್ಪ ಓರಣಗೊಳಿಸುವ ಮತ್ತು ಕ್ಷೌರ ಕ್ರಿಯೆಗೆ 'ಪನ್ನೆ' ಎಂತ ಹೆಸರು. ಪನ್ನೆಶಾಸ್ತ್ರದಿಂದ ಮೊದಲ್ಗೊಂಡು ಬಲಗೊಡೆಯ ಮದುವೆಯ ಎಲ್ಲಾ ವಿಧಿಗಳಲ್ಲೂ ವರನ ಸಂಗಾತಿಯಾಗಿರಬೇಕು. ಮದುವೆ ವಿಧಿ ಮಾತ್ರವಲ್ಲದೆ ಯಾವ ಸಂದರ್ಭದಲ್ಲೂ ವರನೊಬ್ಬನನ್ನೇ ಬಿಟ್ಟು ನಿಲ್ಲದೆ ಒಟ್ಟಿಗೇ ಇರಬೇಕು. ಊಟ, ತಿಂಡಿ, ನಿದ್ರೆ, ಶೌಚಾದಿಗಳಲ್ಲಿ ವರನನ್ನು ಒಬ್ಬಂಟಿಗನಾಗಿರಲು ಬಿಡಬಾರದು. ಈ ಸಾಂಗತ್ಯ ಮದುವೆಯ ನಾಗೋಲಿ, ಬೀಗರ ಕರೆ ಮತ್ತು ಶಯನೀ ಏಕಾದಶಿವರೆಗೂ ಇರುತ್ತದೆ. ಮೊದಲೇ ಹೇಳಿಟ್ಟಿರುವಂತೆ ಕಿಲೇಸಿ ಬಂದಿರುತ್ತಾನೆ. ಪನ್ನೆಯ ತಯಾರಿಗಳನ್ನು ಮಾಡುವುದು ಬಲಗೊಡೆಯನ ಜವಾಬ್ದಾರಿ. ವಿಧಿಗಳು ಪ್ರಾರಂಭವಾದವು ಎಂಬ ಸೂಚನೆಗಾಗಿ ಗರ್ನಾಲು ಹಿಡಿಸುತ್ತಾರೆ. ಚಪ್ಪರದಲ್ಲಿ, ಪೂರ್ವ-ಪಶ್ಚಿಮಾಭಿಮುಖವಾಗಿ ಬೆಂಚು ಅಥವಾ ಮಣೆಗಳನ್ನಿಟ್ಟು ಕಿಲೇಸಿ ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಕುಳಿತುಕೊಳ್ಳುತ್ತಾನೆ. ಬಲಗೊಡೆಯ ಒಂದು ಸೇರು ಕುಚ್ಚಲಕ್ಕಿ, ಒಂದು ಸಿಪ್ಪೆ ಸಹಿತ ತೆಂಗಿನಕಾಯಿ, ವೀಳ್ಯಪಟ್ಟ, ಕಾಣಿಕೆ, ಒಂದು ಬಿಳಿ ಪ್ಯಾಲಾಸು ಹಾಗೂ ಒಂದು ಕುಡ್ತೆ ತೆಂಗಿನಹಾಲು ಅಥವಾ ದನದ ಹಾಲು-ಇವಿಷ್ಟನ್ನು ಕುಡಿಬಾಳೆಲೆಯಲ್ಲಿ ಚಿಕ್ಕದೊಂದು ಹೆಡಿಗೆಯಲ್ಲಿಟ್ಟು ಕಿಲೇಸಿಯ ಹತ್ತಿರ ತಂದಿಡುತ್ತಾನೆ.

ಮದುಮಗ ಬಿಳಿ ಅಡ್ಡ ಪಂಚೆಯುಟ್ಟು ಖಾಲಿ ಮೈಯಲ್ಲಿರುತ್ತಾನೆ. ಬಲಗೊಡೆಯ ಅವನನ್ನು ಮನೆಯೊಳಗಿಂದ, ಕೈಹಿಡಿದು ಕರೆದುಕೊಂಡು ಬಂದು 'ಸಮಸ್ತರೆಲ್ಲಾ ಕೇಳಿ, ವರನನ್ನು ಪನ್ನೆಗೆ ಕೂರಿಸುತ್ತೇನೆ' ಎಂದು ಗುರಿಕಾರ ರಾಯಭಾರಿ ಹಾಗೂ ಸಭೆಯನ್ನುದ್ದೇಶಿಸಿ ಹೇಳಿ ಕೈಮುಗಿಯುತ್ತಾನೆ. ಸಭೆಯಿಂದಲೂ 'ಹಾಂ ಅನ್ನುತ್ತೇವೆ' ಎಂಬ ಒಪ್ಪಿಗೆಯ ಜವಾಬು ಬರುತ್ತದೆ. ಗುರಿಕಾರ ರಾಯಭಾರಿಯವರ ಮಾರ್ಗದರ್ಶನದಲ್ಲಿ ಈ ಪೂರ್ತಿ ಕಾರ್ಯಕ್ರಮ ನಡೆಯುತ್ತದೆ. ಮದುಮಗ ಕಿಲೇಸಿಗೆ ಎದುರಾಗಿ ಬೆಂಚಿನಲ್ಲಿ ಕುಳಿತುಕೊಳ್ಳುತ್ತಾನೆ. ಕಿಲೇಸಿ ಬಾಳನ್ನು ಸಾಣೆ ಕಲ್ಲಿನಲ್ಲಿ ಮಸೆದು, ವರನ ಗಲ್ಲ ಮೀಸೆಗಳಿಗೆ ತೆಂಗಿನಹಾಲು ಸವರಿ ಗಡ್ಡ ಮೀಸೆಗಳನ್ನು ಓರಣಗೊಳಿಸುತ್ತಾನೆ. ಪನ್ನೆಯ ಈ ಕ್ರಮ ಪ್ರಾರಂಭವಾದಾಗ ಸುಮಂಗಲಿಯರು ಪನ್ನೆಯ ಸಂಪ್ರದಾಯದ ಹಾಡು ಹಾಡಲು ಪ್ರಾರಂಭಿಸುತ್ತಾರೆ. ಪನ್ನೆಯ ವಿಧಿಗಳೆಲ್ಲಾ ಪುರುಷರದು. ಆದರೆ ಹಾಡು ಹಾಡುವ ಅಧಿಕಾರ ಮಹಿಳೆಯರದು. ಪನ್ನೆಯ ಎಲ್ಲಾ ವಿಧಿಗಳನ್ನು ಈ ಹಾಡಿನಲ್ಲಿ ವಿವರಿಸಲಾಗಿದೆ.

ವರ ಮಾತ್ರನಲ್ಲದೆ ಬಲಗೊಡೆಯ. ಸೋದರ ಮಾವ ಮತ್ತು ಇತರರು, ಕಡಿಮೆ ಪಕ್ಷ ಒಟ್ಟು ಐವರಿಗಾದರೂ ಪನ್ನೆ ಆಗಬೇಕು. ಪನ್ನೆ ಮುಗಿದ ಕೂಡಲೇ ಬಲಗೊಡೆಯ 'ಸಮಸ್ತರು ಕೇಳಿ, ವರನನ್ನು ಪನ್ನೆಯಿಂದ ಎಬ್ಬಿಸುತ್ತೇನೆ' ಎಂದು ಹೇಳಿ ಕೈಹಿಡಿದು ವರನನ್ನು ಎಬ್ಬಿಸುತ್ತಾನೆ. ಈವಾಗಲೂ ಸಭಿಕರು 'ಹಾಂ ಅಸ್ತುತ್ರೇವೆ' ಎಂಬ ಮಾರುತ್ತರ ನೀಡುತ್ತಾರೆ. ಪನ್ನೆಯ ಗೌರವವಾಗಿ ಅಲ್ಲಿ ತಂದಿಟ್ಟ ಅಕ್ಕಿ, ತೆಂಗಿನಕಾಯಿ, ವೀಳ್ಯಪಟ್ಟಿ, ಕಾಣಿಕೆ, ಬಿಳಿ ವಸ್ತ್ರಗಳು ಪನ್ನೆ ಮಾಡಿದ ಕಿಲೇಸಿಗೆ ಸಲ್ಲುತ್ತವೆ. ಕಿಲೇಸಿಗೆ ಅನ್ನಪಡಿ ಮತ್ತು ಪನ್ನೆಯ ಸಂಭಾವನೆಯನ್ನು ಪ್ರತ್ಯೇಕವಾಗಿ ಪಾವತಿಸಲಾಗುತ್ತದೆ.

8.3. ವರನ ಅರಸಿನ ಶಾಸ್ತ್ರ (ಅರಸಿನ ಲೇಪನ) :

ಪನ್ನೆ ಮಾಡಿಸಿದ ವರನನ್ನು ಬಲಗೊಡೆಯ ಕರೆದುಕೊಂಡು ಹೋಗಿ ತೆಂಗಿನ ಬುಡದ ಕಟ್ಟೆಯಲ್ಲಿ ಬಾವಿಯ ತಣ್ಣೀರಲ್ಲಿ ಸ್ನಾನಮಾಡಿಸಬೇಕು. ಸ್ನಾನಕ್ಕೆ ಬಿಸಿನೀರನ್ನು ಬಳಸುವಂತಿಲ್ಲ. ಮುಂದಿನ ಅರಸಿನ ಶಾಸ್ತ್ರಕ್ಕೆ ಪನ್ನೆಯ ಪಂಚೆ ಬದಲಾಯಿಸಿ ವರನು ಹೊಸ ಬಿಳಿಪಂಚೆಯನ್ನು ಉಟ್ಟುಕೊಳ್ಳಬೇಕು. ಅರಸಿನ ಶಾಸ್ತ್ರ ಪ್ರಾರಂಭವಾಯಿತು ಎಂಬ ಸೂಚನೆಗೆ ಗರ್ನಾಲು ಸಿಡಿಸಲಾಗುತ್ತದೆ. ಯಥಾ ಪ್ರಕಾರ ಈ ಶಾಸ್ತ್ರ ಮನೆಯ ನಡುಕೋಣೆ ಅಥವಾ ಚಾವಡಿಯಲ್ಲಿ ಜರಗುತ್ತದೆ. ವರನನ್ನು ಕೂರಿಸುವಲ್ಲಿ ಅಟ್ಟದ ಜಂತಿಗೆ ಮಾವಿನೆಲೆ ಗೊಂಚಲು ಕಟ್ಟಿರುತ್ತಾರೆ. ಕೆಳಗಡೆ ಒಂದು ಮಣೆ ಇಟ್ಟಿರುತ್ತಾರೆ. ಬಲಗೊಡೆಯ ವರನನ್ನು ಕೈಹಿಡಿದು ಕರೆದುಕೊಂಡು ಬಂದು 'ಸಮಸ್ತರು ಕೇಳಿ, ವರನನ್ನು ಅರಸಿನ ಶಾಸ್ತ್ರಕ್ಕೆ ಕುಳ್ಳಿರಿಸುತ್ತೇನೆ' ಎಂಬುದಾಗಿ ಗುರಿಕಾರ ರಾಯಭಾರಿ ಮತ್ತು ಸೇರಿದ ಸಭಿಕರಲ್ಲಿ ಪರವಾನಗಿ ಕೇಳುತ್ತಾನೆ. ಸಭೆಯಿಂದ 'ಹಾಂ ಅಸ್ತುತ್ರೇವೆ' ಎಂಬ ಮಾರುತ್ತರ ಬರುತ್ತದೆ. ಬಲಗೊಡೆಯ ವರನನ್ನು ಪೂರ್ವಾಭಿಮುಖವಾಗಿ ಕೂರಿಸುತ್ತಾನೆ. ವರ ಕೈಯಲ್ಲಿ ವೀಳ್ಯಪಟ್ಟಿ ಹಿಡಿದು ಕೈಮುಗಿದು ಕುಳಿತುಕೊಳ್ಳುತ್ತಾನೆ. ಯಜಮಾನ್ತಿ ವರನ ತಾಯಿ, ಧಾರೆ ಎರೆಯುವ ಅಧಿಕಾರದ ಕುಟುಂಬಸ್ಥಳು ಅಥವಾ ಸೋದರತ್ತೆ ಆಗಿರುತ್ತಾಳೆ. ಅವಳು ಕಂಚಿನ ಬಟ್ಟಲಲ್ಲಿ ಅರೆದ ಅರಸಿನವನ್ನು ಹಾಕಿ ತೆಂಗಿನೆಣ್ಣೆ ಬೆರೆಸಿ ತರುತ್ತಾಳೆ. ಗುರಿಕಾರ ರಾಯಭಾರಿ ಮತ್ತು ಸಭಿಕರಲ್ಲಿ 'ಸಮಸ್ತರು ಕೇಳಿ. ಅರಸಿನ ಬಟ್ಟಲನ್ನು ಇಡುತ್ತೇನೆ' ಎಂಬುದಾಗಿ ಕೈಮುಗಿದು ಹೇಳುತ್ತಾಳೆ. ಸಭೆಯಿಂದ 'ಹಾಂ ಅಸ್ತುತ್ರೇವೆ' ಎಂಬ ಪ್ರತಿ ಉತ್ತರ ಬಂದ ತಕ್ಷಣ ವರನೆದುರು ಆ ಬಟ್ಟಲನ್ನು ಇಡುತ್ತಾಳೆ. ಗುರಿಕಾರ್ತಿ, ರಾಯಭಾರ್ತಿ, ಯಜಮಾನ್ತಿ ಮತ್ತಿತರ ಪಂಚ ಮುತ್ತೈದೆಯರು ಅಂಡಿಲು ಕೋಲಿಗೆ ತುದಿಯಲ್ಲಿ ಕಟ್ಟಿದ ಮಾವಿನೆಲೆಯ 'ಬಾಲ್'ನಿಂದ ಬಟ್ಟಲಲ್ಲಿನ ಅರಸಿನವನ್ನು ಕಲಸಲು ಪ್ರಾರಂಭಿಸುತ್ತಾರೆ. ಸಂಪ್ರದಾಯದ ಅರಸಿನ ಶಾಸ್ತ್ರದ ಹಾಡನ್ನು ಹಾಡುತ್ತಾರೆ. ಹಾಡು ಮುಗಿವವರೆಗೆ ಅರಸಿನ ಕಲಸುವ ಕಾರ್ಯ ಮುಂದುವರಿಯುತ್ತವೆ.

ಪ್ರಾರಂಭದಲ್ಲಿ ಪಂಚಮುತ್ತೈದೆಯರು ಅಂಡಿಲು ಕೋಲಿನ ತುದಿಗೆ ಕಟ್ಟಿದ ಮಾವಿನ ಎಲೆಯ 'ಬಾಲ್'ನಿಂದ ವರನ ಬಲ ಉಂಗುಷ್ಠದಿಂದ ಪ್ರಾರಂಭಿಸಿ ಮೊಣಕಾಲು,

ಂಗೈ, ಭುಜ ಮತ್ತು ಕೆನ್ನೆಗಳಿಗೆ ಐದುಕಡೆ ಏರಿಕೆ ಕ್ರಮದಲ್ಲಿ ಅರಸಿನ ಹಚ್ಚಿ, ಅದೇ ಕಾರ ಎಡಮಗ್ಗುಲಿಂದ ಇಳಿಕೆ ಕ್ರಮದಲ್ಲಿ ಮೂರು ಅಥವಾ ಐದಾವರ್ತಿ ಹಚ್ಚುತ್ತಾರೆ. ಂತರ ಸರದಿಯಂತೆ ಒಬ್ಬರಾದ ಮೇಲೊಬ್ಬರು ಎರಡೂ ಅಂಗೈಗಳನ್ನು ಅರಸಿನ ಟ್ಟಲಲ್ಲಿ ಅದ್ದಿ, ಎರಡೂ ಕೈಗಳಿಂದ ಕ್ರಮಪ್ರಕಾರ ಕಾಲಿನಿಂದ ಗಲ್ಲ ಪರ್ಯಂತ ಅರಸಿನ ಚ್ಚುತ್ತಾರೆ.

ಅರಸಿನ ಹಚ್ಚುವ ಕ್ರಮವನ್ನು ಸ್ತ್ರೀಯರೇ ಮಾಡುವುದು ಸಂಪ್ರದಾಯ. ಐದು ನ ಮಾತ್ರವಲ್ಲ, ಅಲ್ಲಿ ಸೇರಿದವರೆಲ್ಲರೂ ಹಚ್ಚುತ್ತಾರೆ. ಆದರೆ ಇದರಲ್ಲಿ ಪುರುಷರ ತ್ರವಿಲ್ಲ. ವರನ ಓರಗೆಗೆ ಇರುವ ಗಂಡಸು ಬಲಗೊಡೆಯ ಮಾತ್ರ. ಎಲ್ಲರೂ ಅರಸಿನ ಚ್ಚಿ ಆದ ಮೇಲೆ ಬಲಗೊಡೆಯ ಬಾಲ್ ತಂದು ಬಾಗಿಲ ಎದುರಿನ ಮಾಡಿಗೆ ಕ್ಕಿಸುತ್ತಾನೆ. ಯಜಮಾನ್ತಿ ಸಭೆಗೆ ಕೈಮುಗಿದು 'ಸಮಸ್ತರು ಕೇಳಿ, ಅರಸಿನ ಬಟ್ಟಲು ಗೆಯುತ್ತೇನೆ' ಎಂದು ಹೇಳಿ ಅರಸಿನ ಬಟ್ಟಲು ತೆಗೆಯುತ್ತಾಳೆ. ಹಾಗೇ ಬಲಗೊಡೆಯ ಮುಗಿದು 'ಸಮಸ್ತರು ಕೇಳಿ, ವರನನ್ನು ಅರಸಿನ ಶಾಸ್ತ್ರದಿಂದ ಎಬ್ಬಿಸುತ್ತೇನೆ' ಅಂತ ಹೇಳಿ ಕೈಹಿಡಿದು ಎಬ್ಬಿಸುತ್ತಾನೆ. ಅವನನ್ನು ಮನೆಯ ಮುಖ್ಯ ಬಾಗಿಲ ಮುಖಾಂತರ ಹೊರಗೆ ಕರೆದುಕೊಂಡು ಬಂದು ಕಲಶ ಸ್ನಾನಕ್ಕೆ ಹೋಗುತ್ತಾರೆ.

8.4. ಮೃತ್ತಿಕ ಕಲಶ ಸ್ನಾನ :

ಮನೆಯ ಎದುರುಗಡೆ ಚಪ್ಪರದಿಂದ ಹೊರಗೆ ವರನ ವಿವಾಹಿತ ಸಹೋದರಿ ನಾಲ್ಕು ಅಂಡಿಲು ಗಿಡದ ಗೇಣುದ್ದ ಗೂಟಗಳ ತುದಿಗೆ ಮಾವಿನೆಲೆ ಕುಚ್ಚು ಕಟ್ಟಿ, ಆ ಗೂಟಗಳನ್ನು ಸೂತ್ರಬಂಧದ ತೋರಣದಿಂದ ಜೋಡಿಸಿ ಚೌಕಾಕಾರದ 'ಮಾಟೊಟಿ' (ಚಪ್ಪರದ ಆಕಾರ)ಯನ್ನು ಮೊದಲೇ ತಯಾರು ಮಾಡಿಟ್ಟಿರುತ್ತಾಳೆ. ಮಾಟೊಟಯೊಳಗೆ ವರನು ಈಶಾನ್ಯ ಮೂಲೆಯಲ್ಲಿ ಪೀಳ್ಯಪಟ್ಟಿ ಮತ್ತು ಕಾಣಿಕೆ ಇಟ್ಟು, ಅದರ ನಡುವಿನ ಮಣೆಯ ಮೇಲೆ ಪೂರ್ವಾಭಿಮುಖಿವಾಗಿ ಕೈಮುಗಿದು ಕುಳಿತುಕೊಳ್ಳುತ್ತಾನೆ. ಕಲಶ ಸ್ನಾನದ ಸಮಯ ಅರಸಿನ ಲೇಪನದ ವಸ್ತ್ರಗಳನ್ನು ವರನು ಬದಲಾಯಿಸುವಂತಿಲ್ಲ.

ಹಿಂದಿನ ಪದ್ಧತಿ ಪ್ರಕಾರ ಐದೂ ಮೃತ್ತಿಕ ಕಲಶಗಳೇ ಆಗಬೇಕಿತ್ತು. ಈಗ ಎರಡು ಮಣ್ಣಿನ ಕಲಶಗಳಿಗೆ ಸುರಗಿ ಸುತ್ತಿನ ಕಂಕಣ ಕಟ್ಟಿ, ಪ್ರಥಮ ಸ್ನಾನಕ್ಕೆ ಇವೇ ಕಲಶಗಳಿಂದ ನೀರು ಎರೆಯುತ್ತಾರೆ. ಯಜಮಾನ್ತಿ, ಗುರಿಕಾರ್ತಿ, ರಾಯಭಾರ್ತಿ... ಹೀಗೆ ಪಂಚಸುಮಂಗಲಿಯರು ಪಂಚ ಕಲಶಗಳಿಂದ ಸ್ನಾನ ಮಾಡಿಸಬೇಕು. ಸ್ನಾನ ಮಾಡಿಸುವಾಗ ಕಾಲಿನ ಉಂಗುಷ್ಟದಿಂದ ಪ್ರಾರಂಭಿಸಿ ತಲೆಯ ಪರ್ಯಂತ ಐದು ಜಾಗಗಳಲ್ಲಿ ನೀರೆರೆಯಬೇಕು. ಈ ನೀರು ನೈಸರ್ಗಿಕ ತಣ್ಣೀರಾಗಿರಬೇಕು. ಕಾಯಿಸಿದ ನೀರು ಬಳಸಲಾಗದು. ಈ ಸಂದರ್ಭವೂ ಸುಮಂಗಲಿಯರು ಸಂಪ್ರದಾಯದ ಹಾಡನ್ನು ಹಾಡುತ್ತಾರೆ. ಕಲಶ ಸ್ನಾನಕ್ಕೆ ಉಪಯೋಗವಾದ ಕಲಶಗಳು ನಂತರ ಗುರಿಕಾರ, ರಾಯಭಾರಿ,

ಬಲಗೊಡೆಯ. ಪುರೋಹಿತರಿಗೆ ಸಂದು. ಒಂದು ಕಲಶ ಮನೆಯಲ್ಲಿ ಉಳಿಯುತ್ತದೆ. ಈ ಪೈಕಿ ಕಲಶವನ್ನು ಪುರೋಹಿತರಿಗೆ ಕೊಡುವಾಗ ಕಾಣಿಕೆ, ಪೀಳ್ಯಪಟ್ಟೆಯೊಂದಿಗೆ ನೀಡಬೇಕು.

ಕಲಶಸ್ನಾನ ಮಾಡಿಸುವಾಗ ವರನಿಗೂ ಕೆಲವು ಕಡೆ ಸೌತೆಕಾಯಿ ಬೀಜ, ಅರ ತೊಳೆದ ಅಕ್ಕಚ್ಚು, ಹಿಂಜಿದ ತೆಂಗಿನಕಾಯಿ ಸುಳಿ ನೀರಿನಲ್ಲಿ ಕಲಸಿ ಜೋಳು ಮೀಯಿಸುವುದಿದೆ. ಇದೂ ವರನ ತಾಳ್ಮೆ, ಸಹನೆಗಳ ಪರೀಕ್ಷೆಗಾಗಿ ಮಾಡುವ ಕೀಟಲೆಗಳು ಮುಂದಿನ ಸಾಂಸಾರಿಕ ಜೀವನದ ಅಡೆತಡೆಗಳನ್ನು ವರ ಹೇಗೆ ನಿಭಾಯಿಸಬಹುದು ಎಂಬುದರ ಪರೀಕ್ಷೆಗಾಗಿ ಇದನ್ನು ರೂಢಿಸಿಕೊಂಡಿರಬಹುದು. ಆದರೆ ಇದು ಕಡ್ಡಾಯವೇನಲ್ಲ. ತೆಂಗಿನ ಹಾಲು ಅಥವಾ ತೆಂಗಿನೆಣ್ಣೆಯಲ್ಲಿ ಕಲಸಿ ಪೂಸಿದ ಅರಸಿನವನ್ನು ಅಷ್ಟು ಸುಲಭದಲ್ಲಿ ತೊಳೆದು ತೆಗೆಯಲು ಆಗುವುದಿಲ್ಲ. ಹಚ್ಚಿದ ಅರಸಿನದ ಜಿಡ್ಡನ್ನು ತೊಳೆದು ತೆಗೆಯಲು ಸುಲಭವಾಗುವುದೆಂದು ಜೋಳು ಮೀಯಿಸುವ ಕ್ರಮ ಶುರುವಾಯಿತೇ? ಎಂಬುದು ವಿಮರ್ಶೆಗೆ ಒಳಪಡಬೇಕಾದ ವಿಷಯ. ಕಾರಣ ಏನಾದರೂ ಆಗಿರಲಿ. ಕಲಶ ಸ್ನಾನದಿಂದ ದೈಹಿಕ ನೈರ್ಮಲ್ಯ, ಮಾನಸಿಕವಾಗಿ ಮದುವೆಯ ಕಾರ್ಯಕ್ಕೆ ತಯಾರಾಗಲು ಆಧಾರ ಮತ್ತು ಸ್ಥೈರ್ಯ ಲಭಿಸುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಈ ಜೋಳು ಮೀಯಿಸುವ ಪದ್ಧತಿ ಗೋವಾ ಮತ್ತು ಇಲ್ಲಿನ ಇತರ ಸಮಾಜದ ಮದುವೆ ಸಂಪ್ರದಾಯಗಳಲ್ಲಿಯೂ ಆಚರಣೆಯಲ್ಲಿವೆ ಎಂದು ತಿಳಿದುಬರುತ್ತದೆ.

8.5. ಹಿಟ್ಟು ಕುಟ್ಟುವ ಶಾಸ್ತ್ರ (ಮುಸಲ ಮುಹೂರ್ತ) :

ಕಲಶ ಸ್ನಾನವಾದ ನಂತರ ಬಿಸಿನೀರಿನಲ್ಲಿ ಚೆನ್ನಾಗಿ ಸ್ನಾನ ಮಾಡಬಹುದು. ಆದರೆ ಒದ್ದೆಯಾದ ಅದೇ ಬಟ್ಟೆಗಳನ್ನು ಹಿಂಡಿ ಪುನಃ ಧರಿಸಬೇಕು ವಿನಃ ಬಟ್ಟೆ ಬದಲಿಸುವಂತಿಲ್ಲ. ಇನ್ನುಳಿದ ವಿಧಿಗಳು ತೀರುವ ತನಕ ಮನೆಯೊಳಗೆ ಪ್ರವೇಶಿಸುವಂತಿಲ್ಲ. ಅದೇ ಒದ್ದೆ ಬಟ್ಟೆಯಲ್ಲಿ ಮುಂದಿನ ಹಿಟ್ಟು ಕುಟ್ಟುವ ಶಾಸ್ತ್ರ ಮಾಡಬೇಕು. ಚಪ್ಪರದಲ್ಲಿ ಒಂದು ಅನ್ನ ಬಸಿಯುವ ಮರದ ಮರಿಗೆಯನ್ನು (ತಿಳಿಮರಿಗೆ) ಇಟ್ಟಿರುತ್ತಾರೆ. ಆ ಮರಿಗೆಯಲ್ಲಿ ವರ ಪೀಳ್ಯಪಟ್ಟೆ ಮತ್ತು ಕಾಣಿಕೆಗಳನ್ನಿಟ್ಟು ಕೈಮುಗಿಯಬೇಕು. ಐದು ಬಾರಿ, ಐದು ಮುಷ್ಟಿ ಬೆಳ್ತಿಗೆ ಅಕ್ಕಿ ಹಾಕಿ, ಐದು ಬಾರಿ ನೀರೆರೆಯಬೇಕು. ಕುಟ್ಟುವ ತಳಭಾಗವಿರುವ, ಸುರಗಿಸುತ್ತು ಕಟ್ಟಿದ ಒನಕೆಯನ್ನು ವರ ಹಾಗೂ ಪಂಚ ಸುಮಂಗಲಿಯರು ಹಿಡಿದು ಅಕ್ಕಿಯನ್ನು ಕುಟ್ಟಬೇಕು. ತಳಭಾಗವಿಲ್ಲದ ಮೋಂಡು ಒನಕೆಯನ್ನು ಉಪಯೋಗಿಸಬಾರದು. ಕುಟ್ಟುವ ಕಾರ್ಯದಲ್ಲಿ ಪುರುಷರ ಪಾತ್ರ ಬಲಗೊಡೆಯನದು ಮಾತ್ರ. ಹಿಟ್ಟುಕುಟ್ಟುವ ಶಾಸ್ತ್ರ ಮದುವೆಯ ಅಡುಗೆ ತಯಾರಿಯ ಹಿಟ್ಟು, ಸಾಮಾನುಗಳನ್ನು ಕುಟ್ಟಿ ಹುಡಿ ಮಾಡಿ ಇಡುವುದರ ಸಾಂಕೇತಿಕ ಆಚರಣೆಯಾಗಿರುತ್ತದೆ.

8.6. ಕುಂಭ ಮುಹೂರ್ತ (ಘಡಿಗೆ ಮುಹೂರ್ತ):

ಓಟ್ಟುಕುಟ್ಟುವ ಶಾಸ್ತ್ರದ ನಂತರ ಅಡುಗೆ ಚಪ್ಪರದಲ್ಲಿ ಕುಂಭಮುಹೂರ್ತ ನಡೆಯುತ್ತದೆ. ಇದಕ್ಕೆ 'ಒಲೆಮುಹೂರ್ತ' 'ಕೊಪ್ಪರಿಗೆ ಮುಹೂರ್ತ' 'ಘಡಿಗೆ ಮುಹೂರ್ತ' ಎಂತಲೂ ಹೆಸರಿದೆ. ಇದನ್ನೇ ಒಲೆಯ ಪಕ್ಕ ವರನು ವೀಳ್ಯಪಟ್ಟೆ ಕಾಣಿಕೆಗಳನ್ನಿಟ್ಟು ಕೈಮುಗಿಯುತ್ತಾನೆ. ಪಂಚಸುಮಂಗಲಿಯರೊಂದಿಗೆ ಕುಂಭವನ್ನು ಒಲೆಯ ಮೇಲಿರಿಸುತ್ತಾರೆ. ಈ ಕುಂಭದ ಕಂಠಕ್ಕೆ ಸುರಗಿಸುತ್ತಿನ ಕಂಕಣ ಕಟ್ಟಿರಬೇಕು ಮತ್ತು ಆ ಕುಂಭ ಮಣ್ಣಿನದ್ದೇ ಆಗಿರಬೇಕು. ತಾಮ್ರ ಅಥವಾ ಇತರ ಯಾವುದೇ ಲೋಹದ ಕುಂಭವನ್ನು ಬಳಸಲಾಗದು. ವರನು ಆ ಕುಂಭಕ್ಕೆ ಐದು ಮುಷ್ಟಿ ಬೆಳ್ತಿಗೆ ಅಕ್ಕಿ ಹಾಕಿ, ಐದು ಬಾರಿ ನೀರೆರೆದು ಬೆಂಕಿ ಉರಿಸಬೇಕು. ಮದುವೆಯ ಔತಣಕ್ಕೆ ಇದು ಅಡುಗೆಯ ಸಾಂಕೇತಿಕ ಕ್ರಮ.

8.7. ಹಾಲುಗಂಭ ಶಾಸ್ತ್ರ (ಬೂರುಗ ನೆಡುವ ಶಾಸ್ತ್ರ) :

ಕುಂಭ ಮುಹೂರ್ತ ಆದನಂತರ ಬೂರುಗ ನೆಡುವ ಶಾಸ್ತ್ರ ಆಗಬೇಕು. ಮನೆವಾಗಿಲ ಅಂಗಳದಲ್ಲಿ ಎಡಮಗ್ಗುಲಿನಲ್ಲಿ ನೆಟ್ಟ ಮುಹೂರ್ತಕಂಭದ ಬುಡದಲ್ಲಿ ದನದ ಸೆಗಣಿಯಿಂದ ಚಿಕ್ಕ ಕಟ್ಟೆ ರಚಿಸಿರುತ್ತಾರೆ. ಅಲ್ಲಿ ವರನು ವೀಳ್ಯಪಟ್ಟೆಯೊಂದಿಗೆ ಕಾಣಿಕೆ ಇಡುತ್ತಾನೆ. ಆ ಕಟ್ಟೆಯಲ್ಲಿ ಬೂರುಗದ (ಬೂರುಗ= ಸಾವೂರ್ = RED SILK COTTON TREE = ಸಸ್ಯ ಶಾಸ್ತ್ರೀಯ ಹೆಸರು BOMBAX CEIBA) ಗೆಲ್ಲೊಂದನ್ನು ವರನು ಪಂಚ ಮುತ್ತೈದೆಯರ ಸಹಕಾರದಿಂದ ನೆಟ್ಟು ಕಂಭಕ್ಕೆ ಕಟ್ಟುತ್ತಾರೆ. ವರನು ಮೊಳಕೆ ಬರಿಸಿದ ಪಂಚಧಾನ್ಯವನ್ನು ಕಟ್ಟೆಯೊಳಗೆ ಹಾಕಿ, ಐದು ಬಾರಿ ನೀರೆರೆದು 'ಬೂರುಗ ಸರಸರನೆ ಬೆಳೆಯಲಿ' ಎಂದು ಕೈಮುಗಿಯಬೇಕು. ಮೊಳಕೆ ಬರಿಸಿದ ಪಂಚಧಾನ್ಯ ಇಲ್ಲದಿದ್ದಲ್ಲಿ ಸಾಂಕೇತಿಕವಾಗಿ ಬೆಳ್ತಿಗೆ ಅಕ್ಕಿಯನ್ನು ಉಪಯೋಗಿಸಬಹುದು. ಬೂರುಗ ನೆಡುವಾಗಲೂ ಸಂಪ್ರದಾಯದ ಹಾಡು ಹಾಡುವ ಪದ್ಧತಿಯಿದೆ. ಬೂರುಗ ನೆಡುವಿಕೆ ಮತ್ತು ಅಂಕುರಾರೋಪಣಗೈದ ಧಾನ್ಯ ಬಿತ್ತುವಿಕೆ ಫಲವಂತಿಕೆಯ ಮತ್ತು ಸಮೃದ್ಧಿಯ ಪ್ರತೀಕ.

ಆ ನಂತರ ವರನು, ಹೊರಟ ಪ್ರಮುಖ ಬಾಗಿಲ ಮೂಲಕವೇ ಮನೆಯೊಳಗೆ ಪ್ರವೇಶಿಸಿ ಬಟ್ಟೆ ಬದಲಿಸುತ್ತಾನೆ. ಗುರಿಕಾರ, ರಾಯಭಾರಿ, ಕುಟುಂಬ ಸಂಬಂಧಿಕರು, ಗುರುಹಿರಿಯರಿಗೆ ವೀಳ್ಯಪಟ್ಟೆ ನೀಡಿ ಕಾಲಿಗೆರಗಿ ಆಶೀರ್ವಾದ ಪಡೆಯುತ್ತಾನೆ. ಕೆಲವು ಬಾರಿ ಈ ಪದ್ಧತಿಯನ್ನು ಮರುದಿನ ಬೆಳಗ್ಗೆ ಅಂದರೆ ವರ ಶೃಂಗಾರಗೊಂಡು ದಿಬ್ಬಣ ಹೊರಡುವ ಮುನ್ನ ಮಾಡುತ್ತಾರೆ. ಹಿಂದಿನ ವಾಡಿಕೆ ಪ್ರಕಾರ ಮದುವೆಯ ಎಲ್ಲಾ ಚಡಂಗಗಳು ಮುಗಿದ ನಂತರ, ಔತಣಕ್ಕೆ ಮೊದಲು ಮದುವೆ ಚಪ್ಪರದಲ್ಲಿ ಹಿರಿಯರಿಗೆ, ಆಪ್ತೇಷ್ಟರಿಗೆ, ಮದುವೆ ಕಾರ್ಯ ಸುಧಾರಿಸಲು ಕಷ್ಟಪಟ್ಟವರಿಗೆ, ಜವಾಬ್ದಾರಿಗಳನ್ನು ಪೂರೈಸಿದವರಿಗೆ ಮತ್ತು ಮಕ್ಕಳಿಗೆ ವಸ್ತ್ರದಾನ ರೂಪದಲ್ಲಿ ಉಡುಗೊರೆ ನೀಡುವ ಕ್ರಮವಿತ್ತು.

ಈಗ ಮದುವೆಯ ಮುಂಚಿನ ರಾತ್ರಿಯ ಆಚರಣೆಗಳೆಲ್ಲಾ ಮುಗಿದು, ಊಟಕ್ಕೆ ಮೊದಲು ಈ ಉಡುಗೊರೆಗಳನ್ನು ನೀಡುತ್ತಾರೆ. ಈ ಎಲ್ಲಾ ಕ್ರಮಗಳು ನಡೆಯುತ್ತಿದ್ದಂತೆ ಅಡುಗೆಯೂ ತಯಾರಾಗಿರುತ್ತದೆ. ಉಡುಗೊರೆ ನೀಡಿ ಆದ ನಂತರ ಯಜಮಾನ, ತಲೆಗೆ ರುಮಾಲು ಸುತ್ತಿ, ಪೂರ್ವಾಭಿಮುಖವಾಗಿ ಎರಡು ತಂಬಿಗೆ ನೀರು ತಂದಿಟ್ಟು ಕೈಮುಗಿಯುತ್ತಾ 'ಸಮಸ್ತರು ಊಟಕ್ಕೆ ಏಳಬೇಕು' ಅಂತ ವಿನಂತಿಸುತ್ತಾನೆ.

ಎಲ್ಲರನ್ನು ಪಂಗ್ತಿಗಳಲ್ಲಿ ಕೂರಿಸಿ ಕುಡಿಬಾಳೆ ಎಲೆಗಳಲ್ಲಿ ಬಡಿಸುತ್ತಾರೆ. ಗುರಿಕಾರ ರಾಯಭಾರಿ ಮುಂತಾದ ಗೌರವಸ್ಥರಿಗೆ ಪ್ರತ್ಯೇಕ ಕುಳಿತುಕೊಳ್ಳುವ ವ್ಯವಸ್ಥೆ ಮಾಡಿರುತ್ತಾರೆ. ವರ ಬಲಗೊಡೆಯನೊಂದಿಗೆ ಪ್ರಥಮ ಪಂಗ್ತಿಯಲ್ಲಿ ಕುಳಿತುಕೊಳ್ಳಬೇಕು. ಊಟದ ಕ್ರಮದಲ್ಲಿ, ಕುಳಿತ ಎಲ್ಲರಿಗೆ ಎಲ್ಲಾ ಬಗೆಗಳನ್ನು ಬಡಿಸಿ ಆಗಿ ಯಜಮಾನನು ಕೈಮುಗಿದು 'ಸಮಸ್ತರು ಊಟ ಪ್ರಾರಂಭಿಸಿ' ಎಂದು ಹೇಳದೆ ಯಾರೂ ಊಟ ಪ್ರಾರಂಭಿಸಲಿಕ್ಕಿಲ್ಲ. ಊಟ ಮುಗಿದು ಏಳುವಾಗ ಕೂಡಾ 'ಏಳಿ' ಎಂಬ ಸೂಚನೆ ಯಜಮಾನನಿಂದ ಬರದೆ, ಊಟ ಮುಗಿದಿದ್ದರೂ ಯಾರೂ ಏಳುವ ಕ್ರಮವಿಲ್ಲ– ಇದು ಊಟದ ಮರ್ಯಾದೆ. ಊಟವಾದ ಮೇಲೆ ಕವಳ ಹಾಕಿ ಎಲ್ಲರೂ ಅವರವರ ಮನೆಗೆ ಹಿಂದಿರುಗುತ್ತಾರೆ. ಮನೆ ದೂರವಿರುವ ನೆಂಟರು ಅಲ್ಲಿಯೇ ಮಲಗುತ್ತಾರೆ. ದಿಬ್ಬಣ ಕರೆದುಕೊಂಡು ಹೋಗಲು ಬಂದ ವಧುವಿನ ಕಡೆಯ ನೆಂಟರಿದ್ದರೆ ಅವರ ಊಟೋಪಚಾರ ಮತ್ತಿತರ ಆದರಾತಿಥ್ಯಗಳಲ್ಲಿ ಹೆಚ್ಚಿನ ಮುತುವರ್ಜಿ ವಹಿಸಲಾಗುತ್ತದೆ. ವರನ ಯಜಮಾನ, ಮರುದಿನ ಬೆಳಿಗ್ಗೆ ಎಲ್ಲರಿಗೂ ದಿಬ್ಬಣಕ್ಕೆ ಬರಲು ಹೇಳುವುದಕ್ಕೆ ಮರೆಯುವುದಿಲ್ಲ. ವರನ ಮನೆಯಲ್ಲೇ ಧಾರೆ ಆಗುವುದಾದಲ್ಲಿ ಮರುದಿನದ ಮದುವೆ ಔತಣದ ಅಡುಗೆಯ ತಯಾರಿಗಳನ್ನು ರಾತ್ರಿಯೇ ಪ್ರಾರಂಭಿಸುತ್ತಾರೆ ಅಥವಾ ಮುಂಜಾವ ಬೇಗ ಎದ್ದು ತರಕಾರಿ ಹೆಚ್ಚುವ, ಕಡೆಯುವ ಹೆರೆಯುವ ಕೆಲಸಗಳನ್ನು ಪ್ರಾರಂಭಿಸುತ್ತಾರೆ.

****

ಅರಸಿನ ಲೇಪನ ಮತ್ತು ವರನ ಮನೆಯಲ್ಲಿನ ಪನ್ನೆ ಶಾಸ್ತ್ರವನ್ನು ರಾತ್ರಿ ಹೊತ್ತಿನಲ್ಲೇ ಮಾಡುವುದು ವಾಡಿಕೆ. ಹಗಲು ಹೊತ್ತು ಮಾಡುವುದು ಅಪರೂಪ. ಆದರೆ ಮದುವೆಯ ಮುಂಚಿನ ದಿವಸ ವರನ ಕಡೆಯಿಂದ ವಧುವಿನ ಮನೆಗೆ ಅರಸಿನ ಬಾಗಿನ ಕಳುಹಿಸದೇ ಇರುವ ಸಂದರ್ಭಗಳಲ್ಲಿ, ಮರುದಿನ ವರನ ದಿಬ್ಬಣ ಹೋಗುವಾಗ ಅರಸಿನ ಬಾಗಿನವನ್ನೂ ಕೊಂಡುಹೋಗಿ ವಧುವಿನ ಅರಸಿನ ಶಾಸ್ತ್ರ ಪೂರೈಸುವ ಕ್ರಮವೂ ಇದೆ. ಇದು ವರನ ದಿಬ್ಬಣ ವಧುವಿನ ಮನೆಗೆ ಹೋಗಿ ಮದುವೆ ಆಗುವುದಾದಲ್ಲಿ ಮಾತ್ರ. ಅದೇ ಪ್ರಕಾರ ಪನ್ನೆ ಶಾಸ್ತ್ರ ಮಾತ್ರ ರಾತ್ರಿ ಆಗಿ, ವರನಿಗೆ ಅರಸಿನ ಶಾಸ್ತ್ರವನ್ನು ಮರುದಿನ ಬೆಳಿಗ್ಗೆ ಮಾಡಿ, ಆನಂತರ ಹೊರಡುವ ಕ್ರಮವೂ ಇದೆ. ಇದಕ್ಕೆಲ್ಲಾ ಸಮಯಾವಕಾಶ ಹೆಚ್ಚು ಬೇಕಾಗುತ್ತದೆ.

ಕಂಚಿನ ಬಟ್ಟಲಲ್ಲಿ ತೆಂಗಿನಹಾಲು ಅಥವಾ ತೆಂಗಿನೆಣ್ಣೆಯೊಂದಿಗೆ ಅಂಡಿಲು ಗಿಡದ ಕೋಲಿಗೆ ಕಟ್ಟಿದ ಮಾವಿನೆಲೆಯ 'ಜಾಲ್'ನಿಂದ ಅರಸಿನವನ್ನು ಸುಮಾರು

ಒತ್ತು ಕಲಸುವಾಗ ಒಂದು ರೀತಿ ರಾಸಾಯನಿಕ ಕ್ರಿಯೆ ಉತ್ಪನ್ನವಾಗುತ್ತದೆ. ಈ ಪ್ರಕಾರ ಕಲಸಿದ ಅರಸಿನವನ್ನು ಹಚ್ಚುವುದರಿಂದ ದೈಹಿಕ ಶುದ್ಧಿಯಾಗಿ ಚರ್ಮಕ್ಕೆ ಹೊಳಪು, ಮೈಗೆ ತಂಪು, ಮುಖಕ್ಕೆ ಕಳೆ ಲಭಿಸಿ ಮನಸ್ಸೂ ಸಮೃದ್ಧಿ ಹೊಂದುತ್ತದೆ. ಅರಸಿನ ಹಚ್ಚುವುದರಿಂದ ಕೆಟ್ಟ ಗಾಳಿ, ಮೃತಾತ್ಮಗಳ ದೃಷ್ಟಿ ದೂರವಾಗುತ್ತದೆ ಎಂಬ ನಂಬಿಕೆಯಿದೆ. ವೈಜ್ಞಾನಿಕವಾಗಿಯೂ ಅರಸಿನಕ್ಕೆ ರೋಗ ನಿರೋಧಕ ಗುಣವಿದೆ ಎಂಬುದು ದೃಢವಾಗಿದೆ. ಚ್ಚಾರಿಯಾಗಿ ತೀರ್ಮಾನಿಸುವುದಾದಲ್ಲಿ ಇದೊಂದು ನಿರ್ಮಲೀಕರಣದ, ಶುದ್ಧೀಕರಣದ ವಿಧಿ ಅನ್ನಬಹುದು. ಈ ಶುದ್ಧೀಕರಣದ ಕ್ರಿಯೆ ಮದುವೆ ಸಂದರ್ಭ ವಧೂವರರಿಗೆ ಮಹತ್ವವೂ ಆಗಿರುತ್ತದೆ. ಅರಸಿನ ಹಚ್ಚಿ ಸ್ನಾನಾದಿಗಳಿಗೆ ಒಳಪಟ್ಟಾಗ ಮಾನಸಿಕವಾಗಿ ವಧೂವರರು ಮದುವೆಗೆ ಮತ್ತು ಮುಂದಿನ ಸಾಂಸಾರಿಕ ಜೀವನಕ್ಕೆ ತಯಾರಾಗಲು ಆತ್ಮಸ್ಥೈರ್ಯ ಲಭಿಸುತ್ತದೆ. ಕುಡುಬಿ ಸಮಾಜ ಅರಸಿನ ಹಚ್ಚುವ ಮತ್ತು ಪಸ್ತೆಶಾಸ್ತ್ರವನ್ನು ಕಡ್ಡಾಯವಾಗಿ ಆಚರಿಸುತ್ತಾ, ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದೆ. ವರನ ಮನೆಯಲ್ಲಿ ಮದುವೆಯ ಮುಂಚಿನ ರಾತ್ರಿ ಆಗುವ ವಿಧಿಗಳಲ್ಲಿ, ಹೆಚ್ಚಿನವು ಮಹಿಳೆಯರ ಮುಖಾಂತರ ಆಗುವಂಥವುಗಳು. ಆದರೆ ಕೆಲವು ಕುಟುಂಬ ಮತ್ತು ವಾಡೆಗಳಲ್ಲಿ ಶುಭಮುಹೂರ್ತ, ಓಟ್ಟುಕಟ್ಟುವ ಶಾಸ್ತ್ರ ಮತ್ತು ಹಾಲುಗಂಬ ಶಾಸ್ತ್ರಗಳನ್ನು ಪುರುಷರು ನಿರ್ವಹಿಸುವ ವಾಡಿಕೆಯೂ ಇದೆ.

ಮದುವೆಯ ಮೂರನೇ ದಿನ ಬೆಳಗಾಗುವಾಗ ಎಲ್ಲರೂ ಎದ್ದು ಪ್ರಾತಃವಿಧಿಗಳನ್ನು ತೀರಿಸಿ, ಮದುವೆಯ ದಿಬ್ಬಣ ಹೊರಡುವ ತಯಾರಿ ಮಾಡುತ್ತಾರೆ. ಅಲ್ಲಿ ಸೇರಿದ ಎಲ್ಲರಿಗೆ ಬೆಳಗಿನ ಉಪಾಹಾರ ಅಥವಾ ಗಂಜಿ ಊಟದ ವ್ಯವಸ್ಥೆ ಮಾಡಲಾಗಿರುತ್ತದೆ. ವಧೂವರರೂ ಉಣ್ಣಬಹುದು. ಅವರು ಊಟ ಮಾಡಿದಲ್ಲಿ ಶೃಂಗಾರಗೊಳ್ಳುವ ಮೊದಲು ಸ್ನಾನ ಮಾಡಬೇಕು. ಕೆಲವು ವಾಡೆಗಳಲ್ಲಿ ವಧೂವರರು ಉಪವಾಸ ವ್ರತದಲ್ಲೇ ಇರಬೇಕು ಎಂಬ ನಿಯಮವಿದೆ. ವಧೂವರರು ಅಲಂಕೃತರಾಗಿ ಹೊರಡುವ ಸಮಯದಲ್ಲಿ ಗುರಿಕಾರ ರಾಯಭಾರಿ, ದೇವಕಾರ, ಸೋದರಮಾವ, ವರನ ಭಾವ ಮತ್ತು ಜವಾಬ್ದಾರಿಯುತ ವ್ಯಕ್ತಿಗಳು ಅಲ್ಲಿ ಉಪಸ್ಥಿತರಿರಬೇಕು. ಕುಡುಬಿ ಸಮಾಜದ ಸಂಪ್ರದಾಯ ಪ್ರಕಾರ ವರನ ದಿಬ್ಬಣ ವಧುವಿನ ಮನೆಗೆ ಹೋಗಿ ಆಗುವ ಮದುವೆಯ ಕ್ರಮ ಹೆಚ್ಚು ಸರಿ–ಆದುದರಿಂದ ವರನು ಶೃಂಗಾರಗೊಂಡು ಹೊರಡುವ ಕ್ರಮದ ವಿವರಣೆಯನ್ನು ಮುಂದೆ ನೀಡಲಾಗಿದೆ.

8.8. ವರನ ಶೃಂಗಾರ :

ಸ್ನಾನ ಮಾಡಿ ಬಂದ ವರನು ಮನೆಯ ನಡು ಹಜಾರದಲ್ಲಿ ಅಥವಾ ಚಾವಡಿಯಲ್ಲಿ ಶೃಂಗಾರಗೊಳ್ಳಲು ತಯಾರಾಗುತ್ತಾನೆ. ಅವನನ್ನು ಶೃಂಗರಿಸುವ ಜವಾಬ್ದಾರಿ ಬಲಿಗೊಡೆಯನದು ಅಥವಾ ಸೋದರ ಮಾವನದು. ಶೃಂಗರಿಸಲು ಅವರಿಗೆ ತಿಳಿದಿಲ್ಲವಾದಲ್ಲಿ, ಅವರ ಉಪಸ್ಥಿತಿಯಲ್ಲಿ ಹೊರಗಿನ ಅನುಭವೀ ವ್ಯಕ್ತಿ ವರನ ಶೃಂಗಾರ ಕೈಗೊಳ್ಳಬಹುದು.

ನಿಶ್ಚಿತ ಜಾಗದಲ್ಲಿ ಪೂರ್ವಪಶ್ಚಿಮವಾಗಿ ಚಾಪೆ ಹಾಸಿ ವರನು ಅದರ ಮೇಲೆ ಪೂರ್ವಾಭಿಮುಖವಾಗಿ ನಿಲ್ಲುತ್ತಾನೆ. ಶೃಂಗರಿಸಲು ಪ್ರಾರಂಭಿಸಿದಾಗ ಸುಮಂಗಲಿಯರು ಹಾಡು ಹಾಡುವ ಸಂಪ್ರದಾಯವಿತ್ತು. ಈಗ ಈ ಹಾಡು ಹಾಡುವವರಿಲ್ಲದೆ ಮರೆತೇ ಹೋಗಿದೆ. ವರನನ್ನು ಶೃಂಗರಿಸಿ ಹೊರಡಿಸುವ ಕ್ರಮವನ್ನು ಈ ಹಾಡಿನಲ್ಲಿ ವಿವರಿಸಲಾಗಿದೆ. ಮದುಮಗನ ಕಚ್ಚೆ, ಅಂಗಿ, ರುಮಾಲು, ಶಾಲು ಇತ್ಯಾದಿ ಎಲ್ಲಾ ವಸ್ತ್ರಗಳು ಬಿಳಿಯ ಹೊಸ ಬಟ್ಟೆಗಳಾಗಿರಬೇಕು. ಇಲ್ಲಿನ ಪ್ರಾದೇಶಿಕ ಬಹುಜನ ಸಮಾಜದ ಪ್ರಭಾವದಿಂದ ಈಗ ಸ್ವಲ್ಪ ಮಟ್ಟಿನ ಬದಲಾವಣೆಯಾಗಿ ತಿಳಿ ಹಳದಿ ಬಣ್ಣದ ಬಟ್ಟೆಗಳನ್ನು ಉಪಯೋಗಿಸಲಾಗುತ್ತದೆ. ಬ್ರಾಹ್ಮಣರು ಹಾಕುವ ರೀತಿ ಕಚ್ಚೆ ಹಾಕುತ್ತಾರೆ. ಬಿಳಿಯಂಗಿಯ ಮೇಲೆ ಪಟ್ಟೆ ಶಾಲು ಜನಿವಾರದ ರೀತಿ ಅಥವಾ ಚೌಕಾಕಾರ, ಕತ್ತರಿಯಾಗಿ ಹಾಕುತ್ತಾರೆ. ಕುಡುಬಿ ಸಂಪ್ರದಾಯ ಪ್ರಕಾರ ಕನ್ಯಾದಾನದ ಸಮಯ ಮದುಮಗಳು ಮದುಮಗನ ರುಮಾಲಿನ ಕೊನೆ ಹಿಡಿದು ಬರಬೇಕು. ಆದಕ್ಕಾಗಿ ರುಮಾಲಿನ ತುದಿ ಬಿಡಿಸಲು ಅನುಕೂಲವಾಗುವ ರೀತಿ ಶೆಂಡಿ ರುಮಾಲು ಕಟ್ಟುತ್ತಿದ್ದರು. ಈ ರುಮಾಲಿಗೆ 'ಗರ್ಭಸುತ್ತು ರುಮಾಲು' ಅಂತ ಹೆಸರು. ಈ ರೀತಿಯ ರುಮಾಲು ಕಟ್ಟಲು ಅದರದೇ ಪ್ರತ್ಯೇಕ ರುಮಾಲು ಬಟ್ಟೆ ಸಿಗುತ್ತಿತ್ತು. ಈ ರುಮಾಲು ಕಟ್ಟಲು ಪರಿಣಿತರಿರಬೇಕು. ಕಟ್ಟಿದ ಮೇಲೆ ಬಿಡಿಸದೆ ತಾನಾಗಿ ಬಿಚ್ಚಿಕೊಳ್ಳಬಾರದು. ರುಮಾಲನ್ನು ಇಡಿಯಾಗಿ ಕಳಚಿ ಇಡುವಂತಿರಬೇಕು. ರುಮಾಲು ಕಟ್ಟುವ ಪರಿಣತ (EXPERTS) ಕುಡುಬಿಯರಿದ್ದರು. ರುಮಾಲು ಕಟ್ಟಲೆಂದೇ ಇವರನ್ನು ವಿಶೇಷವಾಗಿ ಆಹ್ವಾನಿಸುವುದಿತ್ತು. ಹಿಂದಿನ ಕಾಲದಲ್ಲಿ ಕುಡುಬಿಯರಲ್ಲಿ ಎಲ್ಲ ಪುರುಷರೂ ಜುಟ್ಟು ಬಿಡುವ, ಶೆಂಡಿ ಕಟ್ಟುವ ಮತ್ತು ವಿಶೇಷ ಸಂದರ್ಭಗಳಲ್ಲಿ ಹೂವು ಮುಡಿಯುವ ರೂಢಿ ಇತ್ತು. ಕುಟುಂಬದ ಶ್ರೇಷ್ಠತೆಯನ್ನು ಪ್ರತಿಬಿಂಬಿಸುವ ಜುಟ್ಟು ಗೃಹಸ್ಥತನದ ಸಂಕೇತ. ತಲೆಯ ಸೂಕ್ಷ್ಮ ಭಾಗಕ್ಕೆ ಸೂರ್ಯನ ಶಾಖದ ಪ್ರಭಾವ ಆಗಬಾರದು ಎಂಬುದು ಜುಟ್ಟು ಬಿಡುವ ಉದ್ದೇಶ. ಗರ್ಭಸುತ್ತು ರುಮಾಲು ಜುಟ್ಟು ಬಿಡುವ ಈ ಕಾರಣದಿಂದಲೂ ಚಾಲ್ತಿಗೆ ಬಂದಿರುವ ಸಾಧ್ಯತೆಯಿದೆ.

ರುಮಾಲು ಕಟ್ಟಿ ಅದಕ್ಕೆ ಬಾಸಿಂಗ ಕಟ್ಟುವ ಕ್ರಮವಿದೆ. ಐದು ಅಥವಾ ಏಳು ತುಂಡು ಮಲ್ಲಿಗೆ ಹಾಗೂ ಅಬ್ಬಲಿಗೆ ನೇಯ್ದು ಆ ಮಾಲೆಯನ್ನು ರುಮಾಲಿನ ಎದುರುಗಡೆ ಬಾಸಿಂಗವಾಗಿ ಕಟ್ಟುತ್ತಾರೆ. ಹಿಂದೆ ಈ ಬಾಸಿಂಗವನ್ನು ಧಾರೆಗೆ ಮೊದಲು ವರ ಹಾಗೂ ವಧು ಈರ್ವರಿಗೂ ಪುರೋಹಿತರೇ ಕಟ್ಟುತ್ತಿದ್ದರು. ಈಗ ವರನಿಗೆ ಶೃಂಗಾರ ಮಾಡುವಾಗ ಶೃಂಗರಿಸುವವರೇ ಕಟ್ಟುತ್ತಾರೆ. ಕೆಲವು ಕಡೆಗಳಲ್ಲಿ ವರ ಹೊರಡುವಾಗ ಪುರೋಹಿತರನ್ನು ಕರೆಸಿ ಬಾಸಿಂಗ ಕಟ್ಟಿಸುವ ಕ್ರಮವಿದೆ. ಈ ಬಾಸಿಂಗವನ್ನು ನಾಗೋಲೆ ಆದ ನಂತರ ಕಂಕಣದಾರ ವಿಮೋಚನೆಯ ಸಂದರ್ಭ ಪುರೋಹಿತರೇ ಬಿಡಿಸಬೇಕು. ರುಮಾಲು ಕಟ್ಟಿ ಯಜಮಾನ, ಬಲಗೊಡೆಯ, ಸೋದರ ಮಾವ, ಗುರಿಕಾರ ರಾಯಭಾರಿ, ಉಪಸ್ಥಿತರಿದ್ದಲ್ಲಿ ಪುರೋಹಿತರು ಮತ್ತು ಹಿರಿಯರೆಲ್ಲಾ ಸೇರಿ ದೇವರಲ್ಲಿ ಪ್ರಾರ್ಥಿಸಿ ಎಲ್ಲರೂ ಹಿಡಿದು ವರನ ತಲೆಗೆ ರುಮಾಲು ಏರಿಸುತ್ತಾರೆ. ವರನ ಸಹೋದರಿಯರು

ವರನಿಗೆ ಕಾಡಿಗೆ ಕುಂಕುಮ ಮತ್ತು ಗಂಧದ ತಿಲಕವಿಡುತ್ತಾರೆ. ಕೊರಳಿಗೆ ಚಿನ್ನದ ಸರ, ಬೆರಳಿಗೆ ಉಂಗುರ ತೊಡಿಸುತ್ತಾರೆ. ಈ ಆಭರಣಗಳನ್ನು ಇತರರಿಂದ ಎರವಲು ಪಡೆದಾದರೂ ವರನಿಗೆ ತೊಡಿಸುತ್ತಾರೆ.

ಒಂದು ಕಡೆಯಿಂದ ವರನ ಶೃಂಗಾರವಾಗುತ್ತಾ ಇರುವಾಗ ಇನ್ನೊಂದು ಕಡೆ ಯಜಮಾನ್ತಿ, ವರನ ತಾಯಿ, ಸಹೋದರಿಯರು ಮತ್ತು ಹತ್ತಿರ ಸಂಬಂಧಿ ಸುಮಂಗಲಿಯರು ಹೊರಟು, ತಳಿಗೆ ತಯಾರು ಮಾಡುತ್ತಾರೆ. ತಳಿಗೆಯಲ್ಲಿ ಮಾಂಗಲ್ಯ, ತಲೆಸೀರೆ, ಮೇಲುಸೀರೆ, ರವಿಕೆ, ಕಂಚುಕ, ಅದಕ್ಕೆ ಬೇಕಾದ ಪೂರಕ ವಸ್ತುಗಳು, ಹೂವು, ಕನ್ನಡಿ, ಮರದ ಹಣಿಗೆ, ಕಾಡಿಗೆ, ಚೌರಿ, ತೆಂಗಿನೆಣ್ಣೆ.... ಇತ್ಯಾದಿ ಮಂಗಲ ದ್ರವ್ಯಗಳು ಮತ್ತು ಪ್ರಸಾಧನ ಸಾಮಗ್ರಿಗಳನ್ನು ಇಟ್ಟು ತಳಿಗೆ ತಯಾರು ಮಾಡಿಡುತ್ತಾರೆ.

ಎಲ್ಲರೂ ದೇವರ ಕೋಣೆಯಲ್ಲಿ ಸೇರುತ್ತಾರೆ. ದೇವರಿಗೆ ದೀಪ ಹಚ್ಚಿ ಮದುವೆಕಾರ್ಯ ಮತ್ತು ಮುಂದಿನ ಸಾಂಸಾರಿಕ ಜೀವನ ಶ್ರೇಯಸ್ಕರವಾಗಲು ದೇವರ ಅನುಗ್ರಹಕ್ಕೆ ಪ್ರಾರ್ಥಿಸಿ ಆಶೀರ್ವಾದ ಬೇಡುತ್ತಾರೆ. ವರನು ದೇವರು ದೈವಾದಿಗಳಿಗೆ ಮತ್ತು ತುಳಸೀ ಮಾತೆಗೆ ಒಂದೊಂದು ವೀಳ್ಯಪಟ್ಟ ಇಟ್ಟು ಕೈಮುಗಿದು ಅಡ್ಡಬೀಳುತ್ತಾನೆ. ಆ ನಂತರ ಅಲ್ಲಿ ಸೇರಿದ ಎಲ್ಲಾ ಹಿರಿಯರಿಗೆ, ಮಾತಾಪಿತರಿಗೆ ಸಹಿತ ವೀಳ್ಯಪಟ್ಟ ನೀಡಿ ಕಾಲಿಗೆರಗಿ ಆಶೀರ್ವಾದ ಪಡೆಯುತ್ತಾನೆ. ತಳಿಗೆಯನ್ನು ವರನ ತಾಯಿ ಅಥವಾ ಯಜಮಾನ್ತಿ, ಬಲಸಗಿತ್ತಿ ಸಹೋದರಿ ಪ್ರತ್ಯೇಕ ಕಲಶ, ಧಾರೆಯ ಹಾಗೂ ಸೇಸೆಯ ಸಾಮಗ್ರಿಗಳನ್ನು ಇತರರು ಹಿಡಿದುಕೊಂಡಿರುತ್ತಾರೆ. ವರನ ಕೈಯಲ್ಲಿ ಕಂಕಣ ಕಟ್ಟಿದ ಚಂಡಿಕೆಯುಕ್ತ ಸುಲಿದ ತೆಂಗಿನಕಾಯಿ ಮತ್ತು ವೀಳ್ಯಪಟ್ಟ ಇರುತ್ತದೆ. ಬಲಗೊಡೆಯ ವರನ ಕೈಹಿಡಿದು, ಎತ್ತಿ ಅರಳಿಸಿ ಮುಖ್ಯದ್ವಾರದ ಹೊರಗೆ ಕರೆದುಕೊಂಡು ಬರುತ್ತಾನೆ.

ಹೊರಗೆ ಚಪ್ಪರದಲ್ಲಿ ವರನೊಂದಿಗೆ ಎಲ್ಲರೂ ತುಳಸಿಗೆ ವಂದಿಸಿ ಪ್ರದಕ್ಷಿಣೆ ಬರುತ್ತಾರೆ. ಮೊದಲೇ ತಯಾರಿಟ್ಟಿರುವ ತೋರಣವನ್ನು ವರ, ಬಲಗೊಡೆಯ ಸಹಿತ ಐವರು ಪುರುಷರು ಗುರಿಕಾರ ರಾಯಭಾರಿಯವರ ಮಾರ್ಗದರ್ಶನದಲ್ಲಿ ಚಪ್ಪರದ ಪೂರ್ವದಿಕ್ಕಿನಲ್ಲಿ ಚಪ್ಪರಕ್ಕಾನಿಸಿ ಇಟ್ಟು ತೋರಣ ಮುಹೂರ್ತ ಮಾಡುತ್ತಾರೆ. ಆ ತೋರಣ ಮೂಲಕ ವರನ ದಿಬ್ಬಣ ಹೊರಡುತ್ತದೆ. ಸಹೋದರ ಸಹೋದರಿಯರ ದಿಬ್ಬಣವಾದಲ್ಲಿ ಸಹೋದರಿ ಹಿರಿಯವಳಾಗಿರಲಿ ಅಥವಾ ಕಿರಿಯಳಾಗಿರಲಿ, ಮೊದಲಿಗೆ ಸಹೋದರಿಯ ತೋರಣ ಮುಹೂರ್ತ ಆಗಿ ನಂತರ ಸಹೋದರನ ತೋರಣ ಇಡಬೇಕು. ಪ್ರಥಮದಲ್ಲಿ ಸಹೋದರಿಯದೇ ದಿಬ್ಬಣ ಹೊರಟು ನಂತರ ಸಹೋದರನ ದಿಬ್ಬಣ ತೋರಣ ಮೂಲಕ ಹೊರಡಬೇಕು. ಕೆಲವು ವಾಡೆಗಳಲ್ಲಿ ಸಹೋದರ ಸಹೋದರಿಯರ ದಿಬ್ಬಣ ಒಂದೇ ತೋರಣ ಮೂಲಕ ಹೊರಡುವ ವಾಡಿಕೆಯಿದೆ.

ಬಲಗೊಡೆಯ ವರನಿಗೆ ಕಾಲಿಗೆ ಹಾಕಲು ಚರ್ಮದ ಚಪ್ಪಲಿ ಕೊಟ್ಟು, ಛತ್ರಿ ಹಿಡಿದಿರುತ್ತಾನೆ. ಒಂದೆ ವರನ ದಿಬ್ಬಣದೊಂದಿಗೆ ಪುರೋಹಿತರನ್ನೂ ಕರೆದುಕೊಂಡು

ಹೋಗುವ ಕ್ರಮವಿತ್ತು. ದಿಬ್ಬಣ ಹೊರಟ ಸೂಚನೆಯಾಗಿ ಗರ್ನಾಲು ಸಿಡಿಸುತ್ತಾರೆ. ದಿಬ್ಬಣ ಕರೆದುಕೊಂಡು ಹೋಗಲು ಬಂದ ಜೀಗರ ಕಡೆಯವರು ದಾರಿ ತೋರಿಸುತ್ತಾ ಸಾಗುತ್ತಾರೆ. ವಾಹನ ಸೌಕರ್ಯವಿಲ್ಲದ ಹಿಂದಿನ ಕಾಲದಲ್ಲಿ ದಿಬ್ಬಣ ನಡೆದುಕೊಂಡೇ ಸಾಗಬೇಕಾಗಿತ್ತು. ದಾರಿಯಲ್ಲಿ ಸಿಗುವ ದೇವಸ್ಥಾನ, ದೈವಸ್ಥಾನ, ಗಡು ಸ್ಥಳಗಳಲ್ಲಿ ವರ, ವೀಳ್ಯವಟ್ಟಿ ಇಟ್ಟು ಕೈಮುಗಿಯುತ್ತಾನೆ. ಹೀಗೆ ನಡೆದಿಬ್ಬಣ ಸಾಗುವಾಗ ಬ್ಯಾಂಡು ವಾಲಗಗಳಿರುತ್ತವೆ. ದಿಬ್ಬಣ ನಿರ್ದಿಷ್ಟ ಸ್ಥಳಕ್ಕೆ ತಲುಪಿತು ಎಂಬ ಸೂಚನೆಗೆ ಮತ್ತು ವಿಜೃಂಭಣೆಗಾಗಿಯೂ, ದಾರಿಯಲ್ಲಿ ಗರ್ನಾಲು ಸಿಡಿಸುತ್ತಾ, ವಾಲಗ ಊದುತ್ತಾ ಗೌಜಿ ಗದ್ದಲಗಳೊಂದಿಗೆ ದಿಬ್ಬಣ ಸಾಗುತ್ತದೆ. ಕೆಲವು ವಾಡೆ/ಕುಟುಂಬಗಳಲ್ಲಿ ದಿಬ್ಬಣ ಹೋಗುವಾಗ ವರನಿಗೆ ಮಡಿವಾಳ ದೀವಟಿಗೆ ಹಿಡಿಯುವ ಕ್ರಮವಿದೆ. ಕೆಲವು ಕಡೆ ತಾಡಛತ್ರ (ಮಂಗಲಛತ್ರ) ಹಿಡಿಯುವ, ಕೊಂಬು ಊದಿಸುವ ವಾಡಿಕೆಯೂ ಇದೆ. ಮಂಗಲಛತ್ರ, ದೀವಟಿಗೆ, ಕೊಂಬು.... ಇವೆಲ್ಲಾ ವ್ಯವಸ್ಥೆ, ಘನತೆಗಾಗಿ ಮತ್ತು ವಿಜೃಂಭಣೆಗಾಗಿ ಮಾಡುತ್ತಾರೆ. ದೂರದ ದಾರಿಯಾದಲ್ಲಿ, ಹಿಂದಿನ ಕಾಲದಲ್ಲಿ ದಿಬ್ಬಣ ಮುಂಜಾವವೇ ಹೊರಡಬೇಕಾಗಿತ್ತು. ಆಗೆಲ್ಲಾ ಬೆಳಕಿನ ವ್ಯವಸ್ಥೆಗೆ ಸೂಟೆಯ ಕಂದೀಲು, ಪೆಟ್ರೋಮೆಕ್ಸ್ ದೀಪಗಳು ಬಳಕೆಯಾಗುತ್ತಿದ್ದವು. ಧಾರೆಗೆ ಘಳಿಗೆ, ಮುಹೂರ್ತ ನೋಡುವ ಕ್ರಮ ಇಲ್ಲದ ಕಾಲದಲ್ಲಿ ಉದಯಲಗ್ನ ಅಥವಾ ಗೋಧೂಳಿ ಲಗ್ನದಲ್ಲಿ ಮದುವೆಯ ಧಾರೆಗೆ ಮುಹೂರ್ತ ಆರಿಸುತ್ತಿದ್ದರು. ದಿಬ್ಬಣ ಸಮಯಕ್ಕೆ ಸರಿಯಾಗಿ ತಲುಪಬೇಕಾಗಿತ್ತು. ಒಂದು ವೇಳೆ ದಿಬ್ಬಣ ಬಹಳ ಬೇಗ ತಲುಪಿ, ಧಾರೆಯ ಮುಹೂರ್ತ ತಡವಿದ್ದಲ್ಲಿ, ದಿಬ್ಬಣಿಗರಿಗೆ ಬಿಡದಿ ಚಪ್ಪರ ಮತ್ತು ಗಂಜಿ ಊಟದ ವ್ಯವಸ್ಥೆ ಮಾಡಲಾಗುತ್ತಿತ್ತು.

ಮದುವೆಯ ಹಿಂದಿನ ದಿನ ವಧುವಿಗೆ ಅರಸಿನ ಬಾಗಿನ ಕಳುಹಿಸಿಕೊಡದೇ ಇರುವ ಸಂದರ್ಭದಲ್ಲಿ ವರನ ದಿಬ್ಬಣದೊಂದಿಗೆ ಅರಸಿನ ಬಾಗಿನವನ್ನೂ ಒಯ್ಯಬೇಕು. ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ತಾಂಬೂಲ ನಿಶ್ಚಿತಾರ್ಥ ಆಗಿರುವುದಿಲ್ಲ. ನಿಶ್ಚಿತಾರ್ಥದ ಒಪ್ಪುವೀಳ್ಯ ಸಂಪ್ರದಾಯ ಆಗದೇ, ಉಳಿದ ವಿಧಿಗಳನ್ನು ಮುಂದುವರಿಸುವಂತಿಲ್ಲ. ಇಂತಹ ಘಟನೆಗಳಲ್ಲಿ ವಧುವಿನ ಚಪ್ಪರದಲ್ಲಿ ತಾಂಬೂಲ ನಿಶ್ಚಿತಾರ್ಥದ ಕ್ರಮವನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ವರನ ದಿಬ್ಬಣದೊಂದಿಗೆ ನಿಶ್ಚಯ ತಾಂಬೂಲಕ್ಕೆ ಬೇಕಾಗುವ ಸಾಮಗ್ರಿಗಳನ್ನು ಜೊತೆಗೆ ಒಯ್ದಿರಬೇಕು. ವಧುವಿನ ಮನೆ ದೂರವಿದ್ದಲ್ಲಿ, ಹಿಂದಿನ ಕಾಲದಲ್ಲಿ ವರನ ದಿಬ್ಬಣ ಮದುವೆಯ ಮೊದಲ ದಿನ ಅಥವಾ ಧಾರೆ ಮುಹೂರ್ತದ ತುಂಬಾ ಹೊತ್ತಿಗೆ ಮೊದಲೇ ಹೋಗಿ ತಲುಪುವುದಿತ್ತು. ಈ ರೀತಿ ಬೇಗ ತಲುಪಿದ ವರನ ದಿಬ್ಬಣಿಗರಿಗೆ ಪ್ರತ್ಯೇಕ ಚಪ್ಪರದಲ್ಲಿ ತಾತ್ಕಾಲಿಕ ವಿಶ್ರಮಿಸಲು ಮತ್ತು ಗಂಜಿ ಊಟದ ವ್ಯವಸ್ಥೆ ಮಾಡುತ್ತಿದ್ದರು. ಆ ಕಾಲದಲ್ಲಿ ಚಾ, ಕಾಫಿ, ಇರಲಿಲ್ಲ. ಉಪಾಹಾರ ಮಾಡುವ ಕ್ರಮವಿರಲಿಲ್ಲ. ಗಂಜಿ ಊಟ ತಯಾರಿಸಿ ಅದಕ್ಕೆ ಸೌತೆ, ಹಲಸಿನ ಗುಜ್ಜೆಯ ವ್ಯಂಜನಗಳು ಸಾಮಾನ್ಯವಾಗಿದ್ದವು. ತಾಂಬೂಲ ನಿಶ್ಚಿತಾರ್ಥವಾಗದಿರುವಲ್ಲಿ ಬಿಡದಿಚಪ್ಪರದಿಂದ ದಿಬ್ಬಣಿಗರಲ್ಲಿ ಅಗತ್ಯವಿರುವವರನ್ನು ಮದುವೆ ಚಪ್ಪರಕ್ಕೆ ಆಹ್ವಾನಿಸಿ ನಿಯಮ ಪ್ರಕಾರ

ಆಗಬೇಕಾದ ತಾಂಬೂಲ ನಿಶ್ಚಿತಾರ್ಥದ ಸಂಪ್ರದಾಯವನ್ನು ನೆರವೇರಿಸಬೇಕಾಗುತ್ತದೆ. ಅರಸಿನ ಬಾಗಿನವನ್ನು ಹಿಂದಿನ ದಿನ ಕಳುಹಿಸದೇ ಇರುವ ಪಕ್ಷದಲ್ಲಿ, ಈ ಸಂದರ್ಭ ಅರಸಿನ ಬಾಗಿನ ಹಸ್ತಾಂತರಿಸಿ ವಧುವಿನ ಅರಸಿನ ಶಾಸ್ತ್ರ ಆಗಬೇಕು. ಅಷ್ಟೂ ಹೊತ್ತು ವರನ ದಿಬ್ಬಣ ಬಿಡದಿ ಚಪ್ಪರದಲ್ಲೇ ವಿಶ್ರಮಿಸಬೇಕು.

9. ವರನ ದಿಬ್ಬಣ ಸ್ವಾಗತ (ವರಾಗಮನ) :

ವರನ ದಿಬ್ಬಣ ವಧುವಿನ ಚಪ್ಪರದ ಹತ್ತಿರ ತಲುಪಿದಾಗ ವಧುವಿನ ಕಡೆಯ ಯಜಮಾನ ಮತ್ತು ಇತರರು ದಿಬ್ಬಣಿಗರಿಗೆ ಕೈಮುಗಿದು, ಕಾಲು ತೊಳೆಯಲು ನೀರು ಕೊಟ್ಟು ಸ್ವಾಗತಿಸುತ್ತಾರೆ. ಇದೇ ಪ್ರಕಾರ ದಿಬ್ಬಣಿಗ ಸ್ತ್ರೀಯರನ್ನು ಯಜಮಾನ್ತಿ ಮತ್ತು ಇತರ ಮಹಿಳೆಯರು ಸ್ವಾಗತಿಸುತ್ತಾರೆ. ಬಂದ ನೆಂಟರಿಗೆ ಕಾಲು ತೊಳೆಯಲಿಕ್ಕೆಂದೇ ದೊಡ್ಡ ದೊಡ್ಡ ಗುಡಾಣಗಳಲ್ಲಿ ನೀರು ತುಂಬಿಸಿ ಇಟ್ಟಿರುತ್ತಾರೆ. ದಿಬ್ಬಣಿಗರಿಗೆ ಮಾತ್ರವಲ್ಲ, ಆಗಮಿಸುವ ಎಲ್ಲ ನೆಂಟರಿಗೂ ಕಾಲು ತೊಳೆಯಲು ನೀರು ಕೊಡುವುದು ಕುಡುಬಿ ಸಮಾಜದ ಸತ್ಸಂಪ್ರದಾಯ.

ವಧುವಿನ ಚಪ್ಪರಕ್ಕೆ ವರನ ದಿಬ್ಬಣವನ್ನು ಆರತಿ ಅಕ್ಷತೆಗಳ ಮುಖೇನ ಬರಮಾಡಿಕೊಳ್ಳಬೇಕು. ವಧುವಿನ ಕಡೆಯ ಮಹಿಳೆಯರು, ವರನ ಕಡೆಯ ಮಹಿಳೆಯರನ್ನು ಕೈ ಮುಗಿದು ಆರತಿಗೆ ಸಹಕರಿಸಲು ಕರೆಯುತ್ತಾರೆ. ವಧುವಿನ ಕಡೆಯ ಐವರು, ವರನ ಕಡೆಯಿಂದ ಐವರು ಸುಮಂಗಲಿಯರು ತೋರಣದ ಒಳಗಡೆಯಿಂದ ಆರತಿಗಳನ್ನು ಹಿಡಿದುಕೊಂಡು ಎರಡೂ ಮಗ್ಗುಲುಗಳಲ್ಲಿ ಸಾಲಾಗಿ ನಿಲ್ಲುತ್ತಾರೆ. ಇವರ ಕೈಯಲ್ಲಿರುವ ಆರತಿಗಳನ್ನು ವಧುವಿನ ತಂದೆ (ಯಜಮಾನ) ಪ್ರಜ್ವಲಿಸುತ್ತಾನೆ. ಹಾಗೂ ಆರತಿ ಹಿಡಿದ ಪ್ರತೀ ಹೆಂಗಳೆಯರ ಕೈಯಲ್ಲಿ ಮತ್ತು ಪ್ರತಿಯೊಬ್ಬ ದಿಬ್ಬಣಿಗನ ಕೈಯಲ್ಲಿ ಸೇಸೆಗಾಗಿ ಮುಷ್ಟಿಯಷ್ಟು ಕುಚ್ಚಲಕ್ಕಿ ಕೊಡುತ್ತಾನೆ. ವರ, ಬಲಗೊಡೆಯ, ಯಜಮಾನ, ತಳಿಗೆ ಹಿಡಿದ ಯಜಮಾನ್ತಿ, ಕಲಶಗಿತ್ತಿ ವರನ ಸಹೋದರಿ – ಇವರು ಮಾತ್ರ ಹೊರಗಡೆ ನಿಂತು, ಉಳಿದ ದಿಬ್ಬಣಿಗರು ತೋರಣ ಮೂಲಕ ಚಪ್ಪರ ಪ್ರವೇಶಿಸುತ್ತಾರೆ. ಅವರಿಗೆ ಆರತಿ ಹಿಡಿದ ಸುಮಂಗಲಿಯರು ಅಕ್ಷತೆ ಹಾಕಿ ಸ್ವಾಗತಿಸುವಾಗ, ದಿಬ್ಬಣಿಗರೂ ಪ್ರತಿಯಾಗಿ ಆರತಿ ಹಿಡಿದವರ ಮೇಲೆ ಅಕ್ಷತೆ ಹಾಕುತ್ತಾ ಚಪ್ಪರ ಪ್ರವೇಶಿಸುತ್ತಾರೆ. ಬ್ಯಾಂಡು ವಾಲಗದೊಂದಿಗೆ ದಿಬ್ಬಣ ಚಪ್ಪರಕ್ಕೆ ಆಗಮಿಸುತ್ತದೆ. ಕುಡುಬಿಯರ ಮದುವೆ ಆಚರಣೆಯಲ್ಲಿ ದಿಬ್ಬಣವನ್ನು ಸ್ವಾಗತಿಸುವ ವಿಶೇಷ ರೀತಿಯಿದು. ದಿಬ್ಬಣ ಪ್ರವೇಶದ ಸಂದರ್ಭ ಮತ್ತು ಚಪ್ಪರದಲ್ಲಿ ಸೇರಿದ ಸಭಿಕರಿಗೆ ಪನ್ನೀರು ಸಿಂಪಡಿಸುವ ಕ್ರಮವೂ ಇದೆ.

10. ಶಕುನದೀಪ :

ಚಪ್ಪರದ ಹೊರಗೆ ಇರುವ ವರ, ಬಲಗೊಡೆಯ, ಕಲಶಗಿತ್ತಿ ಮತ್ತು ತಳಿಗೆಗಾರ್ತಿಯರನ್ನು ಚಪ್ಪರಕ್ಕೆ ಆಹ್ವಾನಿಸಬೇಕಾದರೆ ವರನಿಗೆ ವಧುವಿನ ತಂದೆಯು

‘ಶಕುನದೀಪ’ ಮಾಡಬೇಕು. ಶಕುನದೀಪ ಅಂದರೆ ಕುಡಿ ಬಾಳೆಲೆಯಲ್ಲಿ ಬೆಳ್ತಿಗೆ ಅಕ್ಕಿಯ ಹಿಟ್ಟಿನ ಹಣತೆ ಮಾಡಿ, ಎಣ್ಣೆ ಹೊಯ್ದು, ಬತ್ತಿ ಹಾಕಿ ಹಚ್ಚಿದ ದೀಪ. ತೋರಣದ ಎದುರುಗಡೆ ಹೊರಗಿನಿಂದ ನೆಲದಲ್ಲಿ ಮಡಿವಾಳ ಮಡಿವಸ್ತ್ರ (ನಡೆಮಡಿ) ಹಾಸುತ್ತಾನೆ. ವಧುವಿನ ತಂದೆ ಈ ನಡೆಮಡಿಯ ಮೇಲೆ ಶಕುನದೀಪವನ್ನು ಇಡುತ್ತಾನೆ. ವರ ಆ ಕುಡಿ ಬಾಳೆಲೆಯ ತುದಿಯಲ್ಲಿ ಉಂಗುಷ್ಠವಿರಿಸಿ, ಕೈಮುಗಿದುಕೊಂಡು ನಿಲ್ಲುತ್ತಾನೆ. ವಧುವಿನ ತಂದೆ ವರನ ಕಾಲು ತೊಳೆಯುತ್ತಾನೆ. ಇಲ್ಲಿ ವರ ತೋರಣ ಮೂಲಕ ಒಳ ಸರಿಯುವುದರಿಂದ ಅವನಿಗೆ ಬಳು ಎತ್ತುವ ಸಂಪ್ರದಾಯವಿದೆ. ವಧುವಿನ ತಾಯಿ ಕಂಚಿನ ಬಟ್ಟಲಲ್ಲಿ ಬಳುನೀರು (ಅರಶಿನ ಕಲಸಿದ ನೀರು) ತಂದು, ವರನಿಗೆ ನಿವಾಳಿಸಿ ತೆಗೆದು ತೆಂಗಿನ ಮರದ ಬುಡಕ್ಕೆ ಎರೆಯುತ್ತಾಳೆ. ವರ ಆ ದೀಪದ ಮೇಲಿಂದ ದಾಟ ತೋರಣ ಮೂಲಕ ಚಪ್ಪರ ಪ್ರವೇಶಿಸುತ್ತಾನೆ. ವರನನ್ನು ಅನುಸರಿಸಿ ತಳಿಗೆ, ಕಲಶ ಸಹಿತ ಮಿಕ್ಕವರೂ ತೋರಣ ಮೂಲಕ ಚಪ್ಪರದೊಳಗೆ ಪ್ರವೇಶಗೈಯುವಾಗ ಯಥಾಪ್ರಕಾರ ಆರತಿ ಹಿಡಿದ ಹೆಂಗಳೆಯರು ಅವರಿಗೆ ಮತ್ತು ಪ್ರವೇಶಗೈಯುವವರು ಆರತಿಯ ಹೆಂಗಳೆಯರ ಮೇಲೆ ಪರಸ್ಪರ ಸೇಸೆಯಿಕ್ಕುತ್ತಾರೆ. ಆರತಿ ಅಕ್ಷತೆಯೊಂದಿಗೆ ಸಂಪ್ರದಾಯದ ಹಾಡನ್ನೂ ಹಾಡುತ್ತಾರೆ. ಶಕುನ ದೀಪವನ್ನು ವರನ ತಂದೆ ತೆಗೆದುಕೊಂಡು ಹೋಗಿ ತೆಂಗಿನ ಬುಡದಲ್ಲಿರಿಸುತ್ತಾನೆ. ಸೇಸೆಯ ಅಡಿಯಕ್ಕಿಯನ್ನು ಮಡಿವಾಳ ಆಯ್ದು ಶಕುನದೀಪದ ಅಡಿಯಲ್ಲಿ ಹಾಸಿದ ನಡೆಮಡಿಯ ವಸ್ತ್ರದಲ್ಲಿ ಕಟ್ಟಿಕೊಂಡು ಹೋಗುತ್ತಾನೆ.

ಈ ಶಕುನದೀಪ ಮಾಡುವ ಪದ್ಧತಿ ಕುಡುಬಿ ಸಮಾಜದಲ್ಲಿ ವರಪೂಜೆಯ ಒಂದು ವಿಶೇಷ ಸಂಪ್ರದಾಯದಂತೆ ಕಾಣುತ್ತದೆ. ವರನ ದಿಬ್ಬಣ ಬರುವಾಗ ಹಾದಿಯಲ್ಲಿ ಆದ ದುಷ್ಟಶಕ್ತಿಗಳ ಮತ್ತು ಮೃತಾತ್ಮಗಳ ದೃಷ್ಟಿ ನಿವಾರಣೆಗಾಗಿ ಈ ಶಕುನದೀಪದ ಆಚರಣೆ ಎಂಬುದು ಸಂಪನ್ಮೂಲ ವ್ಯಕ್ತಿಗಳ ಅಭಿಪ್ರಾಯ. ಇದೊಂದು, ವರನನ್ನು ಗೌರವಪೂರ್ವಕ ಸ್ವಾಗತಿಸುವ, ಒಂದು ರೀತಿಯಲ್ಲಿ ವರಪ್ರೂಜೆಯನ್ನು ಹೋಲುವ ಪ್ರಾತಿನಿಧಿಕ ಸಂಪ್ರದಾಯವಾಗಿಯೂ ಗೋಚರಿಸುತ್ತದೆ. ವರನೂ ಆ ದೀಪಸಾಕ್ಷಿಯಾಗಿ ಆ ಮನೆಗೆ, ತಾನು ವರಿಸಲಿರುವ ಆ ಮನೆಯ ವಧುವಿಗೆ ದ್ರೋಹ ಎಸಗುವುದಿಲ್ಲ, ಮುಂದಿನ ಜೀವನದಲ್ಲಿ ಆಕೆಯ ರಕ್ಷಣೆ ಪೋಷಣೆಗಳಲ್ಲಿ ಆಧಾರವಾಗಿರುತ್ತೇನೆ ಎಂಬುದಾಗಿ ಪ್ರಮಾಣಬದ್ಧನಾಗುವ ಅಂತರಾರ್ಥ ಈ ಸಂಪ್ರದಾಯದಲ್ಲಿ ಅಂತರ್ಗತವಾಗಿದೆ. ಮಾನಸಿಕವಾಗಿಯೂ ಮುಂದಿನ ಸಾಂಸಾರಿಕ ಜೀವನಕ್ಕೆ ತಯಾರಾಗುವ ಹಂತ ಎಂದು ಅರ್ಥೈಸಬಹುದು. ಈಗ ಈ ಸಂಪ್ರದಾಯ ಅಳಿಯುತ್ತಾ ಬರುತ್ತಿದೆ. ಇದರ ಬದಲಿಗೆ ಪುರೋಹಿತರು ವರನಿಗೆ ಒಂದು ತೆಂಗಿನಕಾಯಿ ಮತ್ತು ದೀಪವನ್ನು ಬಳು ಎತ್ತಿದಂತೆ ನಿವಾಳಿಸಿ, ತೆಂಗಿನಕಾಯಿಯನ್ನು ಹೊರಗೆ ಕೊಂಡುಹೋಗಿ ಈಡುಗಾಯಿ ಒಡೆಯುವ ಆಧುನಿಕ ಪದ್ಧತಿ ಪ್ರಾರಂಭವಾಗಿದೆ. ಕುಡುಬಿಯರಂತಹ ಬುಡಕಟ್ಟಿನ ಮೂಲ ಸಂಪ್ರದಾಯವೊಂದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾ ಹೇಗೆ ವೈದಿಕ ಆಚರಣೆಗಳ ತೆಕ್ಕೆಗೆ ಬಲಿಯಾಗುತ್ತದೆ ಎಂಬುದಕ್ಕೆ ಸ್ಪಷ್ಟ ನಿದರ್ಶನವಿದು.

***

11. ವರನ ಮನೆಯಲ್ಲಿ ಧಾರೆ ಆಗುವ ಸಂದರ್ಭ ಸಂಪ್ರದಾಯಗಳು :

ಯಾವುದೇ ರೀತಿಯಿಂದ ತರ್ಕಿಸಿದರೂ ಕೊಡಿಯಾಲ್ ಕುಡುಬಿಯರ ಮಟ್ಟಿಗೆ ವಧುವಿನ ಮನೆಯಲ್ಲಿ ಧಾರೆ ಆಗುವ ಸಂಪ್ರದಾಯವೇ ಸರಿ. ಆದರೂ, ಸಂದರ್ಭ ಮತ್ತು ಅನುಕೂಲಕ್ಕೆ ಹೊಂದಿಕೊಂಡು ವರನ ಮನೆಯಲ್ಲಿ ಮದುವೆ ಆಗುವ ಸಂದರ್ಭಗಳು ಇಲ್ಲದಿಲ್ಲ. ಹುಡುಗಿ ಬಡ ಕುಟುಂಬದವಳು ಆಗಿದ್ದರೆ, ಹುಡುಗಿ ಕಡೆಯವರು ಮದುವೆಯ ಖರ್ಚು ಭರಿಸಲು ಆರ್ಥಿಕವಾಗಿ ಅಸಮರ್ಥರಾಗಿದ್ದರೆ, ಎಲ್ಲಾ ಖರ್ಚು ವರನೇ ಭರಿಸಿ ಮದುವೆಯಾಗುವುದೂ ಇದೆ. ವರನ ಕಡೆಯವರು ತಮ್ಮ ಘನಸ್ತಿಕೆ, ಗತ್ತು ಗೈರತ್ತುಗಳನ್ನು ಪ್ರದರ್ಶಿಸಲು ತಮ್ಮಲ್ಲೇ ಮದುವೆ ಆಗಬೇಕೆಂಬ ಹಠಕ್ಕೆ ಬಿದ್ದಾಗಲೂ ಈ ರೀತಿಯ ಮದುವೆ ಜರಗುತ್ತದೆ.

11.1. ಮದುಮಗಳ ಶೃಂಗಾರ/ ವಧೂ ನಿರ್ಗಮನ :

ವರನ ಮನೆಯಲ್ಲಿ ಜರಗುವ ಮದುವೆಗೆ ವಧುವಿನ ದಿಬ್ಬಣ ಹೋಗಬೇಕಾದ ಸಂದರ್ಭದಲ್ಲಿ ವಧುವು ತಾಯಿ ಮನೆಯಿಂದ ಸಾದಾ ಉಡುಪಿನಲ್ಲಿ ಹೊರಡುವುದು ಸರಿಯಾಗುವುದಿಲ್ಲ. ಅವಳು ಮದುಮಗಳ ಶೃಂಗಾರದಲ್ಲಿಯೇ ಹೊರಡಬೇಕಾಗುತ್ತದೆ. ತವರಿನ ಕಡೆಯಿಂದ ಮದುಮಗಳ ಸಾಧಾರಣ ಮಟ್ಟಿನ ಶೃಂಗಾರ ಮಾಡಲಾಗುತ್ತದೆ. ಅದಕ್ಕಾಗೇ ಖರೀದಿಸಿದ 'ದಿಬ್ಬಣದ ಸೀರೆ' ಉಟ್ಟು, ಇರುವ ಒಡವೆಗಳೊಂದಿಗೆ ಬಾಡಿಗೆಯ ಕೃತಕ ಒಡವೆಗಳನ್ನು ತಂದು ವಧುವನ್ನು ಶೃಂಗರಿಸುತ್ತಾರೆ. ಬೆಳ್ಳಿಯ ಕಾಲುಂಗುರಗಳನ್ನು ದೇವಕಾರ್ಯದ ಸಂದರ್ಭ ತವರಿನ ಕಡೆಯಿಂದ ಕಡ್ಡಾಯವಾಗಿ ಹಾಕಲಾಗುತ್ತದೆ. ಈವರೆಗೆ ಒಡವೆಗಳನ್ನು ಮಾಡಿಸದೇ ಇದ್ದರೂ, ಮದುವೆಗೆ ಎಷ್ಟೇ ಕಷ್ಟಪಟ್ಟಾದರೂ ಕಿವಿಯೋಲೆ, ಕಂಠೀಹಾರಗಳನ್ನು ಮಾಡಿಸಿಯೇ ಮಾಡಿಸುತ್ತಾರೆ. ಸಂಬಂಧಿಕರ ಮತ್ತು ನೆರೆಹೊರೆಯವರ ಚಿನ್ನವನ್ನು ಎರವಲು ಪಡೆದೂ ಮದುಮಗಳನ್ನು ಅಲಂಕರಿಸುತ್ತಾರೆ. ತಲೆ ಬಾಚಿ ಅಬ್ಬಲಿಗೆ ಮಲ್ಲಿಗೆಗಳ ಹೂಜಡೆ ಹೆಣೆದು ತಲೆಗೂದಲು ಮುಚ್ಚುವಂತೆ ಮಲ್ಲಿಗೆ ಮಾಲೆಗಳನ್ನು 'ಜಲ್ಲಿ' ಹಾಕಿ, ಮೇಲಿನಿಂದ ಅಬ್ಬಲಿಗೆ ಮುಡಿಸುತ್ತಾರೆ. ಮದುಮಗಳಿಗೆ ಮುಡಿಕಟ್ಟುವ ಸಂಪ್ರದಾಯವಿಲ್ಲ. ಕುಡುಬಿ ಮದುಮಗಳಿಗೆ ಜಡೆ ಹೆಣೆಯುವುದೇ ಸಂಪ್ರದಾಯ. ಕೂದಲು ಗಿಡ್ಡ ಅಥವಾ ಕಡಿಮೆ ಇದ್ದಲ್ಲಿ ಚೌರಿ ಉಪಯೋಗಿಸಿ ಜಡೆ ಹೆಣೆಯುತ್ತಾರೆ. ಜಲ್ಲಿ ಹಾಕಿದ ಮೇಲ್ಗಡೆ ಚಿನ್ನದ ಜೈತಲೆಹಾರ ಮತ್ತು ತುರುಪು ತುರಾಯಿಗಳನ್ನು ಮುಡಿಸುತ್ತಾರೆ. ಇದ್ದಲ್ಲಿ ಚಿನ್ನದ, ಇಲ್ಲದಿದ್ದಲ್ಲಿ ಬಾಡಿಗೆಯ ಕೃತಕ ತೋಳ್ಬಂದಿ, ಸೊಂಟಪಟ್ಟಿ, ಮತ್ತಿತರ ಸರಗಳಿಂದ ಶೃಂಗರಿಸುತ್ತಾರೆ. ಮದುಮಗಳನ್ನು ಶೃಂಗರಿಸುವುದಕ್ಕಾಗಿಯೇ ಅನುಭವೀ ಮಹಿಳೆಯರನ್ನು ಕರೆಸುತ್ತಾರೆ. ಮದುಮಗಳೊಬ್ಬಳನ್ನೇ ಅಲಂಕರಿಸುವ ಕ್ರಮವಿಲ್ಲ. ಮದುಮಗಳ ಅಲಂಕಾರ ಪ್ರಾರಂಭಿಸುವ ಮೊದಲು ಕನ್ಯೆಯೊಬ್ಬಳನ್ನು ಮದುಮಗಳಂತೇ ಸಾಂಕೇತಿಕವಾಗಿ ಶೃಂಗರಿಸುವ ಸಂಪ್ರದಾಯವಿದೆ. ಈ ರೀತಿ ಶೃಂಗರಿಸಿದ ಕನ್ಯೆಗೆ ಶೀಘ್ರ ನೆಂಟಸ್ತಿಕೆ ಬರುತ್ತದೆ ಎಂಬ ನಂಬಿಕೆಯಿದೆ.

ಮದುಮಗಳಿಗೆ ಶೃಂಗಾರ ಎಷ್ಟು ಮಾಡಿದರೂ ಕಡಿಮೆಯೇ. ಶೃಂಗಾರಕ್ಕೆ ತುಂಬಾ ಸಮಯ ತಗಲುತ್ತದೆ. ಅದಕ್ಕಾಗಿಯೇ ಮದುಮಗಳು ಬೆಳಿಗ್ಗೆ ಸಾಧ್ಯವಿರುವಷ್ಟು ಬೇಗ ಊಟ ತಿಂಡಿ ಮುಗಿಸಿ ಸ್ನಾನ ಮಾಡಿ ಅಲಂಕಾರಕ್ಕೆ ಕುಳಿತುಕೊಳ್ಳುತ್ತಾಳೆ. ಕೆಲವರು ಪೂರ್ತಿಯಾಗಿ ಉಪವಾಸ ವ್ರತದಲ್ಲೇ ಇರುತ್ತಾರೆ. ನಂತರ ಈ ಹಿಂದೆ ವಿವರಿಸಿದಂತೆ ವರ ಅಲಂಕೃತನಾಗಿ ಹೊರಡುವ ಸಂದರ್ಭದ ಎಲ್ಲಾ ವಿಧಿಗಳನ್ನು, ಮದುಮಗಳು ಹೊರಡುವ ಈ ಸಂದರ್ಭದಲ್ಲೂ ಮಾಡುತ್ತಾರೆ.

ಮದುಮಗಳು ಆಚರಿಸಬೇಕಾದ ಎಲ್ಲಾ ವಿಧಿಗಳಲ್ಲಿ ಬಲಗೊಡತಿ ಪ್ರಮುಖ ಪಾತ್ರವಹಿಸಿ ಅವಳ ಮಾರ್ಗದರ್ಶನ ಮತ್ತು ಸಹಕಾರದಲ್ಲಿ ಸಂಪ್ರದಾಯಗಳ ಅನುಷ್ಠಾನವಾಗುತ್ತದೆ. ಅದಕ್ಕಾಗಿಯೇ ಸೋದರತ್ತೆ ಅಥವಾ ವಿವಾಹಿತ, ಮದುವೆ ಸಂಪ್ರದಾಯಗಳ ಅನುಭವವಿರುವ ಸಹೋದರಿಯನ್ನು ಬಲಗೊಡತಿಯಾಗಿ ನೇಮಿಸುತ್ತಾರೆ. ಗುರಿಕಾರ, ರಾಯಭಾರಿ, ದೇವರ ಮನೆಯ ಹಿರಿಯ, ಮದುಮಗಳ ಮಾತಾಪಿತೃಗಳು, ಸೋದರ ಮಾವ, ಅಜ್ಜ, ಚಿಕ್ಕಪ್ಪ, ಸಹೋದರ, ಸಹೋದರಿಯರು, ಆಪ್ತೇಷ್ಟ ಹಿರಿಯರೆಲ್ಲರನ್ನೂ ದೇವರ ಮನೆಗೆ ಕರೆದು ದೇವರೆದುರು ದೀಪ ಹಚ್ಚುತ್ತಾರೆ. ಮದುಮಗಳು ಜನಿಸಿದ ಕುಟುಂಬದ ಸರ್ವ ಸಂಬಂಧಗಳನ್ನು ಕಡಿದುಕೊಂಡು, ಸಾಂಸಾರಿಕ ಜೀವನದಲ್ಲಿ ಕಾಲಿರಿಸಲು ಹೊರಡುವ ಈ ಹೃದಯಸ್ಪರ್ಶಿ ಸಂದರ್ಭದಲ್ಲಿ ಮುಂದಿನ ಜೀವನದಲ್ಲಿ ಸುಖ ಸಮೃದ್ಧಿ ಪ್ರಾಪ್ತವಾಗಲು ದೇವರ ಆಶೀರ್ವಾದಕ್ಕಾಗಿ ಪ್ರಾರ್ಥಿಸುತ್ತಾರೆ. ಮದುಮಗಳು ದೈವ ದೇವರಿಗೆ, ತುಳಸಿಗೆ ವೀಳ್ಯಪಟ್ಟೆ ಇಡುವ ಮೂಲಕ ಕೈಮುಗಿದು ಪೊಡಮಡುತ್ತಾಳೆ. ನಂತರ ಅಲ್ಲಿ ಸೇರಿದ್ದ ಹಿರಿಯರೆಲ್ಲರಿಗೆ ಮತ್ತು ಮಾತಾಪಿತರಿಗೆ ವೀಳ್ಯಪಟ್ಟೆ, ನೀಡಿ ಕಾಲಿಗೆರಗಿ ವಂದಿಸಿ ಮನೆಯ ಹೊಸ್ತಿಲು ದಾಟುತ್ತಾಳೆ. ಇಷ್ಟು ಸಮಯ ತಮ್ಮ ಕರುಳಕುಡಿಯನ್ನು ಬಾಲ್ಯದಿಂದ ಲಾಲನೆ ಪಾಲನೆ ಮಾಡಿ ಬೆಳೆಸಿ ಇನ್ನೊಂದು ಕುಟುಂಬದೊಂದಿಗೆ ಶಾಶ್ವತವಾಗಿ ನೆಲೆಗೊಳ್ಳಲು ಕಳುಹಿಸುವ ಈ ಸಂದರ್ಭದಲ್ಲಿ ಹೆತ್ತ ತಂದೆತಾಯಿಯರ ಮತ್ತು ಕುಟುಂಬ ಪರಿವಾರದವರ ದುಃಖ ತಳಮಳಗಳಿಗೆ ಪಾರವಿರುವುದಿಲ್ಲ.

ಹೊರಡುವಾಗ ಮದುಮಗಳ ಕೈಯಲ್ಲಿ ವೀಳ್ಯಪಟ್ಟೆ ಮತ್ತು ಚಿಕ್ಕ ಗೆಜ್ಜೆಕತ್ತಿ ನೀಡಿರುತ್ತಾರೆ. ಕೆಲವು ಬಾರಿ ಮೈಗೆ ತಾಗುವಂತೆ ಕಾಸರ್ಕನ ಮರದ ಚಿಗುರನ್ನು ಸಿಕ್ಕಿಸುತ್ತಾರೆ. ಮದುಮಗಳಿಗೆ ಕೆಟ್ಟ ದೃಷ್ಟಿ ಬೀಳಬಾರದು. ದುಷ್ಟ ಶಕ್ತಿಗಳ ಪ್ರಭಾವ ಆಗಬಾರದು ಎಂದು ಮಾಡುವ ಇದೊಂದು ಮೂಳಿಗೆ ಆಗಿರಬಹುದು. ಈ ಮೂಳಿಗೆಯಿಂದ ಮದುಮಗಳಿಗೆ ಮಾನಸಿಕ ಸ್ಥಿರತೆ ಲಭಿಸುತ್ತದೆ. ಮದುಮಗಳನ್ನು ಬಲಗೊಡತಿ ಕೈಹಿಡಿದು, ಛತ್ರಿ ಬಿಡಿಸಿ ಹೊರಗೆ ಕರೆದುಕೊಂಡು ಬರುತ್ತಾಳೆ. ಕಲಶ ಹಿಡಿದ ವಧುವಿನ ಅವಿವಾಹಿತ ಸಹೋದರ ಅವಳನ್ನು ಹಿಂದಿನಿಂದ ಅನುಸರಿಸುತ್ತಾನೆ. ಹೊಸ್ತಿಲು ದಾಟದ ವಧು ಪುನಃ ಮನೆಯೊಳಗೆ ಹಿಂದೆ ಬರುವಂತಿಲ್ಲ. ತಯಾರಿಟ್ಟಿದ್ದ

ತೋರಣವನ್ನು ಐವರು ಪುರುಷರು ಹಿಡಿದು ಚಪ್ಪರಕ್ಕೆ ಪೂರ್ವದಿಶೆಯಲ್ಲಿ ಇಟ್ಟು ತೋರಣ ಮುಹೂರ್ತ ಮಾಡುತ್ತಾರೆ. ಮದುಮಗಳು ಚಪ್ಪರದಲ್ಲಿ ತುಳಸಿಗೆ ಪ್ರದಕ್ಷಿಣೆ ಹಾಕಿ ತೋರಣ ಮೂಲಕ ಹೊರಬರುತ್ತಾಳೆ. ಅವಳಿಗೆ ಕಾಲಿಗೆ ಚರ್ಮದ ಚಪ್ಪಲಿಗಳನ್ನು ತೊಡಿಸುತ್ತಾರೆ. ಬ್ಯಾಂಡು ವಾಲಗಗಳೊಂದಿಗೆ ಗರ್ನಾಲುಗಳನ್ನು ಸಿಡಿಸುತ್ತಾ ದಿಬ್ಬಣ ಹೊರಡುತ್ತದೆ. ಹಾದಿಯಲ್ಲಿ ಸಿಗುವ ದೈವದೇವಸ್ಥಾನಗಳ ಎದುರು ಮದುಮಗಳು ವೀಳ್ಯಪಟ್ಟಿ ಇಟ್ಟು, ವಂದಿಸುತ್ತಾಳೆ. ಮದುಮಗಳ ದಿಬ್ಬಣ ವರನ ಚಪ್ಪರದ ಹತ್ತಿರ ತಲುಪಿದಾಗ ವರನ ತಂದೆತಾಯಿಯವರು ದಿಬ್ಬಣಿಗರಿಗೆ ಕೈಮುಗಿದು. ಕಾಲು ತೊಳೆಯಲು ನೀರು ಕೊಟ್ಟು ಸ್ವಾಗತಿಸುತ್ತಾರೆ.

ವಧುವಿನ ದಿಬ್ಬಣ ವರನ ಮನೆಗೆ ಹೋಗಿ ಧಾರೆಯಾಗುವ ಸಂದರ್ಭ ವಧು, ತೋರಣ ಮೂಲಕ ಚಪ್ಪರ ಪ್ರವೇಶಿಸಬೇಕಾಗಿಲ್ಲ. ಆದುದರಿಂದ ಮದುಮಗಳಿಗೆ ಬಿಳಿ ಸುತ್ತುವ ಶಾಸ್ತ್ರವೂ ಅಗತ್ಯವಿಲ್ಲ. ವರನ ಚಪ್ಪರ ಹೇಗಾದರೂ ಕುಡುಬಿ ಸಂಪ್ರದಾಯದಲ್ಲಿ ಮದುವೆ ವಧುವಿನ ಚಪ್ಪರದಲ್ಲಿ ಆಗುವ ರೀತಿಯಲ್ಲಿ ಜರಗಿಸುವುದೇ ಸರಿಯಾದ ಕ್ರಮ. ಆದುದರಿಂದ ವಧುವಿನ ದಿಬ್ಬಣ ತಲುಪುವ ಮೊದಲು ವರ ಶೃಂಗರಿಸಿಕೊಂಡು, ಹೊರಡಲು ಸಿದ್ಧನಾಗಿ ನಿಲ್ಲಬೇಕು. ಮದುಮಗಳ ದಿಬ್ಬಣ ಆಗಮಿಸಿದಾಗ ವರ ಹೊರಟಿರದಿದ್ದರೆ, ದಿಬ್ಬಣವನ್ನು ಸ್ವಾಗತಿಸಿ, ಮುಖ್ಯ ಚಪ್ಪರದ ಹೊರಗಿನ ಪ್ರತ್ಯೇಕ ಚಪ್ಪರದಲ್ಲಿ ಅವರನ್ನು ವಿಶ್ರಮಿಸಲು ವ್ಯವಸ್ಥೆ ಮಾಡಬೇಕು. ವರನ ಅರಸಿನ ಶಾಸ್ತ್ರ ಹಿಂದಿನ ರಾತ್ರಿ ಆಗಿರದಿದ್ದಲ್ಲಿ, ವಧುವಿನ ದಿಬ್ಬಣ ಆಗಮಿಸಿದ ನಂತರವೂ ಅರಸಿನ ಶಾಸ್ತ್ರವನ್ನು ಪೂರೈಸುವ ಅಪರೂಪದ ಸಂದರ್ಭಗಳಿರುತ್ತವೆ. ಆ ನಂತರ ವರನ ಶೃಂಗಾರವಾಗಿ ತಳಿಗೆ, ಮೃತ್ತಿಕ ಕಲಶ, ದಿಬ್ಬಣ ಸಹಿತ ತನ್ನ ಚಪ್ಪರದಿಂದ ಹೊರಹೊರಟು. ಮನೆ ಮತ್ತು ಚಪ್ಪರವನ್ನು ಮದುಮಗಳಿಗೆ ಬಿಟ್ಟುಕೊಡಬೇಕು. ಹೀಗೆ ಮನೆ, ಚಪ್ಪರ ಬಿಟ್ಟುಕೊಟ್ಟು ವರ ಹೊರ ಹೊರಟಾಗ ತೋರಣ ಮೂಲಕ ಹೋಗಬೇಕಾಗಿಲ್ಲ. ವಧುವಿನ ದಿಬ್ಬಣಿಗರನ್ನೂ ಸಾಂಕೇತಿಕ ರೀತಿಯಲ್ಲಿ ಕೈಮುಗಿದು. ಕಾಲು ತೊಳೆಯಲು ನೀರು ನೀಡಿ ಸ್ವಾಗತಿಸಿದರಾಯಿತು. ಆದರೆ, ತಿಳುವಳಿಕೆಯ ಕೊರತೆಯಿಂದಲೋ ಅಥವಾ ಆಡಂಬರದ ಪ್ರದರ್ಶನಕ್ಕಾಗಿಯೊ– ಮದುಮಗಳ ದಿಬ್ಬಣವನ್ನು ಚಪ್ಪರಕ್ಕೆ ಸ್ವಾಗತಿಸುವಾಗಲೂ ಆರತಿ ಅಕ್ಷತೆಯೊಂದಿಗೆ ಬರಮಾಡಿಕೊಳ್ಳುವ ಕ್ರಮ ಚಾಲ್ತಿಗೆ ಬಂದಿರುವುದು ವಿಪರ್ಯಾಸ. ಮನೆಯೇ ಮದುಮಗಳದಾದ ಮೇಲೆ ಚಪ್ಪರಕ್ಕೆ ತೋರಣ, ಆರತಿ ಅಕ್ಷತೆಗಳು ಅನಗತ್ಯ. ಇಂತಹ ಸಂದರ್ಭಗಳಲ್ಲಿ ವರನನ್ನು ಚಪ್ಪರಕ್ಕೆ ಸ್ವಾಗತಿಸುವಾಗ ಮಾತ್ರ ಎಲ್ಲಾ ವಿಧಿಗಳನ್ನು ಪಾಲಿಸುವುದು ಮತ್ತು ಚಪ್ಪರಕ್ಕೆ ತೋರಣವನ್ನೂ ವಧುವಿನ ಕಡೆಯವರೇ ಇಡುವುದು ಸರಿಯಾದ ಕ್ರಮ.

ಚಪ್ಪರ ಪ್ರವೇಶಿಸಿದ ದಿಬ್ಬಣಿಗರು ಚಪ್ಪರದಲ್ಲಿ ವಿಶ್ರಮಿಸುತ್ತಾರೆ. ಆದರೆ ಮದುಮಗಳು ಮನೆಯೊಳಗೆ ಹೋಗಿ ಕುಳಿತುಕೊಳ್ಳಬೇಕು. ಭಾವನಾತ್ಮಕವಾಗಿ ಮನೆ ಮದುಮಗಳದೇ

ಆಗಿರುತ್ತದೆ. ಈ ಪ್ರಕಾರ ವಧುವಿನ ದಿಬ್ಬಣ ವರನಲ್ಲಿಗೆ ಬಂದು ಆಗುವ ಮದುವೆಯಾದರೆ, ವಧುವಿನ ಮನೆಯಲ್ಲಿ ಆಗುವ ಎಲ್ಲಾ ವಿಧಿಗಳೂ ಇಲ್ಲಿ ಆಗಬೇಕು. ತಾಂಬೂಲ ನಿಶ್ಚಿತಾರ್ಥ ಆಗಿರದಿದ್ದರೆ ಸಂಪ್ರದಾಯ ಪ್ರಕಾರ ನಿಶ್ಚಿತಾರ್ಥ ಆಗಬೇಕು. ವಧುವಿಗೆ ಅರಸಿನಶಾಸ್ತ್ರ ಆಗಿರದಿದ್ದರೆ ವರನ ಕಡೆಯಿಂದ ಅರಸಿನ ಬಾಗಿನ ನೀಡಿ ಅರಸಿನ ಶಾಸ್ತ್ರ ಆಗಬೇಕು. ವಧುವಿನ ತಂದೆ ಶಕುನ ದೀಪ ಮಾಡಿ ಆರತಿ ಅಕ್ಷತೆಗಳ ಮುಖೇನ ಹೊರ ಚಪ್ಪರದಲ್ಲಿರುವ ವರ ಮತ್ತು ವರನ ದಿಬ್ಬಣವನ್ನು ಯಥಾ ಸಂಪ್ರದಾಯ ಪ್ರಕಾರ ಮದುವೆ ಚಪ್ಪರಕ್ಕೆ ಬರಮಾಡಿಕೊಳ್ಳಬೇಕು. ಚಪ್ಪರಕ್ಕೆ ಆಗಮಿಸಿದ ಮೇಲೆ ಅವರಿಗೆ ಬೆಲ್ಲ ನೀರು, ತಾಂಬೂಲಗಳನ್ನು ಶಾಸ್ತ್ರಪ್ರಕಾರ ವಧುವಿನ ಕಡೆಯವರೇ ನೀಡಬೇಕು. ವರ ಶಕುನದೀಪ, ಆರತಿ ಅಕ್ಷತೆಗಳಿಂದ ತೋರಣ ಮೂಲಕ ಚಪ್ಪರಕ್ಕೆ ಆಗಮಿಸಿದ ಮೇಲೆ ವಧುವಿಗೆ ತಳಿಗೆ ನೀಡಬೇಕು. ಈ ಪ್ರಕಾರ ವಧುವಿನ ದಿಬ್ಬಣ ವರನಲ್ಲಿಗೆ ಹೋಗಿ ಆಗುವ ಮದುವೆಯಾದರೂ, ವರ ವಧುವಿನಲ್ಲಿಗೆ ಹೋಗಿ ಆಗುವ ಎಲ್ಲಾ ಸಂಪ್ರದಾಯಗಳ ಪ್ರಕಾರವೇ ಚಡಂಗಗಳನ್ನು ಜರಗಿಸಬೇಕು. ಆದರೆ ಸೇಸೆ ಬಟ್ಟಲನ್ನು ಮಾತ್ರ ವರನ ತಂದೆ ಇಡಬೇಕು ಹಾಗೂ ಸೇಸೆಯ ಗೌರವಾದಿಗಳನ್ನು ನಡೆಸಿಕೊಡಬೇಕು. ಇಲ್ಲಿ ಮುಯ್ಯಿಕಂಚನ್ನೂ ವರನ ತಂದೆಯೇ ಇಟ್ಟು, ಮರುಸೇಸೆಯ ಕ್ರಮದಲ್ಲಿ ಮುಯ್ಯಿ ಗೌರವಗಳನ್ನು ನಡೆಸಿಕೊಡಬೇಕು.

***

ವರನ ದಿಬ್ಬಣ ವಧುವಿನ ಮನೆಗೆ ಬಂದ ಸಂದರ್ಭ–ಚಪ್ಪರ ಪ್ರವೇಶಗೈದ ಬೀಗರನ್ನು ಚಾಪೆ ಹಾಸಿ ಕೂರಿಸುತ್ತಾರೆ. ಹಿಂದಿನ ಕಾಲದಲ್ಲಿ 'ಒಲಿಚಾಪೆ' (ಮೂಂಡಿ ಗಿಡದ ಎಳೆಗಳ ಚಾಪೆ, ಮೂಂಡಿಗಿಡ=ಕೇದಗೆಯ ಜಾತಿಯ ಗಿಡ)ಗಳೇ ಬಳಕೆಯಾಗುತ್ತಿದ್ದವು. ಕುಳಿತುಕೊಳ್ಳಲು ಬೆಂಚುಗಳಿದ್ದರೆ ವಿಶೇಷ ಅನ್ನಬೇಕು. ಮದುಮಕ್ಕಳ ಆಸನಕ್ಕೆ ಮಾತ್ರ ಬೆಂಚು ಉಪಯೋಗವಾಗುತ್ತಿತ್ತು. ಚಾಪೆಗಳಲ್ಲಿ ಕುಳಿತುಕೊಳ್ಳುವುದೇ ಒಂದು ಗೌರವ. ಚಾಪೆಗಳಲ್ಲಿ ಕುಳಿತರೆ ಬೀಗರಿಗೂ, ಆತಿಥೇಯರಿಗೂ ಸಮಾಧಾನ ಮತ್ತು ತೃಪ್ತಿ. ಅಲ್ಲಿಗೇ ಅವರಿಗೆ ಬಾಯಾರಿಕೆಗೆ ಬೆಲ್ಲನೀರು, ಉಪಾಹಾರ ಮತ್ತು ಕವಳದ ಏರ್ಪಾಡು ಆಗುತ್ತದೆ.

ಅಷ್ಟರಲ್ಲಿ ವಧುವಿನ ತಂದೆ ಒಂದು ಹೊಸ ಬಿಳಿ ಪಂಚೆಯನ್ನು ಬಲಗೈಯಲ್ಲಿ ಹಿಡಿದುಕೊಂಡು, ಎಡಗೈಯಲ್ಲಿನ ತಂಬಿಗೆಯಿಂದ ನೀರನ್ನು ಪಂಚೆಯ ಮೇಲೆರೆದು ಪುರುಷರ ಮೇಲೆ ಎರಚುತ್ತಾ 'ಬಂದಿರಾ ಬೀಗರೇ, ಕುಂತಿರಾ ಬೀಗರೇ, ನೀರು ಸಂದಿತೇ, ಗಾಳಿ ಸಂದಿತೇ, ಭಕ್ಷ ಸಂದಿತೇ' ಎಂಬುದಾಗಿ ಪ್ರತಿಯೊಂದು ಬಾರಿ ಹೇಳುವಾಗ ನೀರೆರಚಬೇಕು. ವಧುವಿನ ತಾಯಿಯೂ ಒಂದು ಹೊಸ ಸೀರೆಯನ್ನು ಬಲಗೈಯಲ್ಲಿ ಹಿಡಿದು, ಎಡಗೈಯ ತಂಬಿಗೆಯಿಂದ ಅದರ ಮೇಲೆ ನೀರು ಹೊಯ್ದು ಮಹಿಳೆಯರನ್ನುದ್ದೇಶಿಸಿ 'ಬಂದಿರಾ ಬೀಗತಿಯರೇ, ಕುಂತಿರಾ ಬೀಗತಿಯರೇ, ನೀರು

ಸಂದಿತೇ, ಗಾಳಿ ಸಂದಿತೇ, ಭಕ್ಷ ಸಂದಿತೇ?' ಎಂಬುದಾಗಿ ಹೇಳಿ, ಯಜಮಾನ ಪುರುಷರ ಮೇಲೆ ಎರಚಿದ ಪ್ರಕಾರವೇ ಮಹಿಳೆಯರ ಮೇಲೆ ಐದಾವರ್ತಿ ಎರಚಬೇಕು. ಇದಕ್ಕೆ ಹಾಂ ಅಸ್ತ್ರೀವೆ' ಎಂಬ ಪ್ರತ್ಯುತ್ತರವನ್ನು ಸಭಿಕರು, ಬೀಗರು ನೀಡುತ್ತಾರೆ. ಆಗಮಿಸಿದ ಬೀಗರಿಗೆ ಆದರ ನೀಡುವ ಈ ಕ್ರಮ ಕುಡುಬಿ ಬುಡಕಟ್ಟಿನ ವಿಶೇಷ ಸಂಪ್ರದಾಯ. ಹಿಂದೆಲ್ಲಾ ಕಟ್ಟುನಿಟ್ಟಿನಿಂದ ಪಾಲಿಸುತ್ತಿದ್ದರು. ಈ ಕ್ರಮವನ್ನು ಅನುಸರಿಸದಲ್ಲಿ ವಾಗ್ವಾದಗಳು ನಡೆದು ಬಂದ ಬೀಗರು ಮುನಿಸಿಕೊಳ್ಳುವ ಪ್ರಸಂಗಗಳೂ ಉದ್ಭವಿಸುತ್ತಿದ್ದವು.

12. ಬಾಳೆ ಮಂಟಪ :

ಕುಡುಬಿಯರು ನೈಸರ್ಗಿಕ ರೀತಿಯಲ್ಲಿ ಜೀವನ ಮಾಡುವ ಜನಾಂಗ. ಸಾಧ್ಯವಿರುವಷ್ಟೆಲ್ಲಾ ಪ್ರಾಕೃತಿಕ ವಸ್ತುಗಳನ್ನು ಉಪಯೋಗಿಸಿ ತಮ್ಮ ಆಚರಣೆಗಳನ್ನು ಪಾಲಿಸುತ್ತಾ ಬರುತ್ತಾರೆ. ಆ ನೈಸರ್ಗಿಕ ವಸ್ತುಗಳ ಆರಾಧನೆಯನ್ನೂ ಮಾಡುತ್ತಾರೆ. ಅವುಗಳ ಬಗ್ಗೆ ಭಕ್ತಿಯ ಮನೋಭಾವನೆಯನ್ನು ಹೊಂದಿರುತ್ತಾರೆ. ಬಾಳೆಗಿಡ ಫಲವಂತಿಕೆಯ ಸಂಕೇತ ಎಂಬ ನಂಬಿಕೆ ಇದೆ. ಕುಡುಬಿಯರ ಮದುವೆಗೆ ನಾಲ್ಕು ಬಾಳೆಗಿಡಗಳ, ಮೂರು ಬಾಗಿಲ ಮಂಟಪವೇ ಆಗಬೇಕು. ನಾಲ್ಕು ಬಾಳೆಗಿಡಗಳ ಮಂಟಪ ಹಾಕುವಾಗ ಬಾಗಿಲು ನಾಲ್ಕು ಆಗುವುದಾದರೂ ಆ ಮಂಟಪಕ್ಕೆ 'ಮೂರು ಬಾಗಿಲ ಮಂಟಪ' ಎಂದೇ ಹೆಸರು. ಮಂಟಪ ಹಾಕುವ ಪರಿಣತ ಕುಡುಬಿಯರಿದ್ದರು. ಅವರಿಗೆ 'ಕೇಳ್ಕಾರ್' (ಬಾಳೆ ಮಂಟಪ ಪರಿಣತರು) ಎಂಬ ಬೆಡಗಿನ ಹೆಸರು ಈ ಕಾರಣದಿಂದಲೇ ಬಂದಿರಬಹುದು ಎಂಬ ಅಭಿಪ್ರಾಯವಿದೆ.

ಬಾಳೆ ಮಂಟಪ ಹಾಕುವುದಕ್ಕೂ ಒಂದು ನಿರ್ದಿಷ್ಟ ಕ್ರಮವಿದೆ. ಮೂರು ಬಾಗಿಲ ಮಂಟಪ ಧರ್ಮ, ಅರ್ಥ, ಕಾಮ ಎಂಬ ಮೂರು ಪುರುಷಾರ್ಥಗಳ ಸಂಕೇತ. ದೇವಸ್ಥಾನಕ್ಕೆ ಸಮಾನವಾದ, ಬಾಳೆಯ ಮೂರು ಬಾಗಿಲ ಮಂಟಪ ಹಾಕುವುದನ್ನು ಕುಡುಬಿಯರು ಮದುವೆ ಸಂಪ್ರದಾಯದಲ್ಲಿ ಅನಾದಿ ಕಾಲದಿಂದ ಪಾಲಿಸಿಕೊಂಡು ಬಂದ ಪದ್ಧತಿ. ಮಂಟಪ ಹಾಕುವ ಜವಾಬ್ದಾರಿ ವರ ಮತ್ತು ವಧುವಿನ ಸಹೋದರರದು. ದಿಬ್ಬಣ ಬಂದು ತಲುಪಿದಾಗ ನಾಲ್ಕು ಫಲಬಿಟ್ಟ, ಬಾಳೆಗಿಡಗಳನ್ನು ತಂದು ಚಪ್ಪರದಲ್ಲಿ, ಮುಂಬಾಗಿಲು ಪೂರ್ವಕ್ಕೆ ಬರುವಂತೆ ಚಚ್ಚೌಕದ ಮಂಟಪ ಹಾಕುತ್ತಾರೆ. ಈ ಬಾಳೆ ಗಿಡಗಳಿಗೆ ಒಂದಕ್ಕೊಂದು ಆಧಾರವಾಗುವಂತೆ ಮೇಲ್ಗಡೆಯಿಂದ, ಎರಡೂ ಪಾರ್ಶ್ವಗಳಲ್ಲಿ ಎರಡೆರಡರಂತೆ ಒಟ್ಟು ಎಂಟು, ಮೊಲದ ಬಲೆಗೆ ಊರುವ ಬಿದಿರ ಸೀಮೆಕೋಲುಗಳನ್ನು (ಸಾತಿಯೊ) ಕಟ್ಟುತ್ತಾರೆ. ಮೊಲದ ಬಲೆಗೆ ಊರುವ ಸೀಮೆ ಕೋಲುಗಳಿಗೆ ಮೃತಾತ್ಮಗಳ ಅಥವಾ ದುಷ್ಟಶಕ್ತಿಗಳ ಪೀಡೆ ದೂರ ಎಂಬ ಬಲವಾದ ನಂಬಿಕೆ ಇರುವುದರಿಂದ ಆ ಕೋಲುಗಳನ್ನು ಮಾತ್ರ ಉಪಯೋಗಿಸಲಾಗುತ್ತದೆ. ಆ ಕೋಲುಗಳಿಗೆ ಮಂಟಪದ ಸುತ್ತ ಮಾವಿನೆಲೆಗಳ ತೋರಣ ಕಟ್ಟುತ್ತಾರೆ. ಕೋಲುಗಳನ್ನು ಜೋಡಿಸಿದ ಮೂಲೆಗಳ ಮೇಲೆ ನಾಲ್ಕು ಬಾಳೆದಿಂಡಿನ ತುಂಡುಗಳನ್ನಿಟ್ಟು ಅವುಗಳ ಮೇಲೆ ನಾಲ್ಕು ಹಣತೆಗಳನ್ನು

ಹಚ್ಚಿಡುತ್ತಾರೆ. ಬಾಳೆಗಿಡದ ಬುಡದಲ್ಲಿ ಸಮಾನಾಂತರವಾಗಿ ಅರಸಿನ ಶಾಸ್ತ್ರಕ್ಕೆ ಉಪಯೋಗಿಸಿದ್ದ ಸುರಗಿಸುತ್ತಿನ ಕಂಕಣಕಟ್ಟಿದ ಒನಕೆ ಇಟ್ಟು ಪುರೋಹಿತರು ಬೆಳ್ತಿಗೆ ಅಕ್ಕಿಯ ಹಿಟ್ಟಿನಿಂದ ಚೌಕಾಕಾರದ ಹಸೆ ಬರೆಯುತ್ತಾರೆ. ಈ ಮಂಟಪದ ಮಧ್ಯೆ ಮೇಲ್ಗಡೆ ಚಪ್ಪರಕ್ಕೆ ಮಡಿವಾಳ ಬಿಳಿಯ ಮಡಿಬಟ್ಟೆಯ ಕೊಡಿ (ಮೇಲ್ಕಟ್) ಕಟ್ಟಿ ಒಳಗಿಂದ ಸುಲಿದ ತೆಂಗಿನಕಾಯಿ ತೂಗುಹಾಕುತ್ತಾನೆ. ಮಡಿವಾಳ ಬೆಂಚೊಂದಕ್ಕೆ ಬಿಳಿ ಪಂಚೆ ಹೊದೆಸಿ ವಧೂವರರಿಗೆ ಕುಳಿತುಕೊಳ್ಳುವ ಆಸನವನ್ನೂ ತಯಾರು ಮಾಡಿಡುತ್ತಾನೆ.

ಫಲವಂತಿಕೆಯ ಶುಭಸಂಕೇತ ಮತ್ತು ಮಂಗಳಕಾರಕ ಎಂದು ಪರಿಗಣಿಸಲ್ಪಟ್ಟಿದ್ದ ಬಾಳೆ ಮಂಟಪ ಹಾಕುವ ಪದ್ಧತಿ ಇತ್ತೀಚೆಗೆ ಅಳಿದಿದೆ. ಸುಧಾರಣೆ ಮತ್ತು ಪರಿವರ್ತನೆಯ ಪ್ರಭಾವದಿಂದ, ಕಲ್ಯಾಣ ಮಂಟಪಗಳಲ್ಲಿ ಮತ್ತು ಸಭಾಗೃಹಗಳಲ್ಲಿ ಮದುವೆಗಳು ಜರಗುವ ಈ ಕಾಲದಲ್ಲಿ ಬಾಳೆಮಂಟಪದ ಪ್ರಾಕೃತಿಕ ಸಹಜ ಸೌಂದರ್ಯ ಮತ್ತು ಮಹತ್ವ ಇನ್ನಿಲ್ಲವಾಗಿದೆ. ಈಗಿನ ಪೀಳಿಗೆಗೆ ಬಾಳೆಮಂಟಪ ಅಂದರೇನೆಂದೇ ಅರಿವಿರದ ಪರಿಸ್ಥಿತಿ ಇದೆ. ಆಧುನಿಕ ಆವಿಷ್ಕಾರಗಳಿಂದಾಗಿ ಆಕರ್ಷಕ ರೀತಿಯ, ಪುನರ್ಬಳಕೆಯ ಕೃತಕ ಮಂಟಪಗಳ ಉಪಯೋಗ ಕುಡುಬಿ ಸಮುದಾಯದಲ್ಲೂ ಆಗಿದೆ ಮತ್ತು ಆಗುತ್ತಾ ಇದೆ ಎಂಬ ಸಂಗತಿ ವಿಪರ್ಯಾಸ ಎನ್ನಬಹುದು.

13. ತಳಿಗೆ ಪ್ರದಾನ / ಮದುಮಗಳ ಮರುಶೃಂಗಾರ :

ಕುಡುಬಿಯರ ಮದುವೆ ಸಂಪ್ರದಾಯಗಳಲ್ಲಿ ತಳಿಗೆ ಹಸ್ತಾಂತರವೂ ಒಂದು. ಇತರ ಕೆಲವು ಪ್ರವರ್ಧಮಾನ ಸಮುದಾಯಗಳಲ್ಲಿರುವಂತೆ ವರನನ್ನು ಕ್ರಯಕ್ಕೆ ಖರೀದಿಸುವ ಲಕ್ಷಣದ ವರದಕ್ಷಿಣೆ ಪದ್ಧತಿ ಕುಡುಬಿಯರಲ್ಲಿಲ್ಲ. ಬದಲಿಗೆ ವಸ್ತುರೂಪದಲ್ಲಿ ಅಥವಾ ಕೆಲವು ಬಾರಿ ಪರಂಪರಾಗತ ಪದ್ಧತಿ ಪ್ರಕಾರ ನಿಗದಿಪಡಿಸಿದ ಆರ್ಥಿಕ ಮೌಲ್ಯದ ರೂಪದಲ್ಲಿ ವಧುದಕ್ಷಿಣೆಯ ಕ್ರಮ ರೂಢಿಯಲ್ಲಿದೆ. ಇದನ್ನು 'ವಧುದಕ್ಷಿಣೆ' ಎನ್ನುವುದಕ್ಕಿಂತ 'ಕನ್ಯಾಶುಲ್ಕ' ಅಥವಾ 'ತೆರ' ಎಂದರೆ ಹೆಚ್ಚು ಅರ್ಥಭರಿತವಾಗಬಹುದು. ಕುಡುಬಿ ಸಂಸ್ಕೃತಿ ಪ್ರಕಾರ ವರನಿಂದ ವಧುವಿಗೆ ಸಲ್ಲಬೇಕಾದ ಗೌರವ ಮತ್ತು ಕರ್ತವ್ಯವೂ ಆಗಿರುತ್ತದೆ. ಕುಡುಬಿಯರು ಒಂದು ಬುಡಕಟ್ಟು ಜನಾಂಗವಾದುದರಿಂದಲೇ ಈ ಬುಡಕಟ್ಟು ಲಕ್ಷಣ ಕುಡುಬಿಯರ ಮದುವೆ ಸಂಪ್ರದಾಯದಲ್ಲಿ ಉಳಿದುಕೊಂಡು ಬಂದಿದೆ ಎಂಬ ಅಭಿಪ್ರಾಯವಿದೆ.

ಮದುಮಗನ ತಾಯಿ ಒಂದು ಹರಿವಾಣದಲ್ಲಿ ಮಂಗಳಸೂತ್ರ, ಧಾರೆಯ ಸೀರೆ, ಮೇಲು ಸೀರೆ, ಕಂಚುಕ ಮತ್ತು ಪೂರಕ ವಸ್ತ್ರಗಳು, ತೆಂಗಿನೆಣ್ಣೆ, ಮರದ ಹಣಿಗೆ, ಕಾಡಿಗೆ, ಕುಂಕುಮ, ಚೌರಿ, ಕನ್ನಡಿ, ಹೂವು ಮುಂತಾದ ಮಂಗಲ ವಸ್ತುಗಳ ತಳಿಗೆಯನ್ನು ದಿಬ್ಬಣ ಆಗಮಿಸುವಾಗಲೇ ತಂದಿರುತ್ತಾಳೆ. ಗುರಿಕಾರ ರಾಯಭಾರಿ, ಗುರುಹಿರಿಯರ ಉಪಸ್ಥಿತಿ ಮತ್ತು ಮಾರ್ಗದರ್ಶನದಲ್ಲಿ ಈ ತಳಿಗೆ ಪ್ರದಾನ ಸಂಪ್ರದಾಯವನ್ನು ಜರಗಿಸುತ್ತಾರೆ.

ತಳಿಗೆ ನೀಡುವುದು ವರನ ಕಡೆಯುವರು ಮತ್ತು ಸ್ವೀಕರಿಸುವವರು ವಧುವಿನ ಕಡೆಯ ಸುವಾಸಿನಿಯರು. ವರನ ತಾಯಿ, ಗುರಿಕಾರ್ತಿ, ರಾಯಭಾರ್ತಿ.... ಒಟ್ಟು ಐವರು ಸುಮಂಗಲಿಯರು. ವಧುವಿನ ತಾಯಿ ಸಹಿತ ಐವರು ಸುಮಂಗಲಿಯರಿಗೆ ಕೈಮುಗಿದು ಐವರು ತಳಿಗೆ ಸ್ವೀಕರಿಸಲು ಬನ್ನಿ' ಎಂದು ಹೇಳಿ ಕರೆನೀಡುತ್ತಾರೆ. ಅವರು ಬಂದಾಗ ವರನ ಕಡೆಯುವರು ಹಿರಿಯರ ಸಮ್ಮುಖ ತಳಿಗೆ ಎತ್ತಿಕೊಡುತ್ತಾರೆ. ತಳಿಗೆ ಸ್ವೀಕರಿಸಿದ ವಧುವಿನ ಕಡೆಯ ಮಹಿಳೆಯರು ವರನ ಕಡೆಯ ಮಹಿಳೆಯರಿಗೆ ಕೈಮುಗಿದು 'ಐವರು ಮದುಮಗಳನ್ನು ಶೃಂಗರಿಸಲು ಬನ್ನಿ' ಎಂದು ಆಹ್ವಾನಿಸುತ್ತಾರೆ. ಅವರ ಆಹ್ವಾನದಂತೆ ವರನ ಕಡೆಯುವರು ಮದುಮಗಳು ಇರುವಲ್ಲಿ ಹೋಗುತ್ತಾರೆ. ವರನ ತಾಯಿ ಸಂಪ್ರದಾಯ ಪ್ರಕಾರ ಮೊದಲು ಕನ್ಯೆಯೊಬ್ಬಳಿಗೆ, ನಂತರ ವಧುವಿಗೆ ತಲೆಗೆ ಎಣ್ಣೆ ಹಾಕಿ, ಮರದ ಹಣಿಗೆಯಿಂದ ತಲೆಬಾಚಿ, ಹೂವು ಮುಡಿಸುತ್ತಾಳೆ ಮತ್ತು ಸಾಂಕೇತಿಕವಾಗಿ ಕಾಡಿಗೆ, ಕುಂಕುಮಗಳಿಂದ ಅಲಂಕರಿಸುತ್ತಾಳೆ. ವಧುವನ್ನು ಈ ರೀತಿ ಅಲಂಕರಿಸುವ ಮುಂಚಿತವಾಗಿ ಕನ್ಯೆಯೊಬ್ಬಳನ್ನು ಹೂಮುಡಿಸಿ ಅಲಂಕರಿಸುವುದು ಕುಡುಬಿಯರ ಸಂಪ್ರದಾಯ.

ಮದುಮಗಳಿಗೆ ತಲೆತುಂಬಾ ಮಲ್ಲಿಗೆ ಮೊಗ್ಗಿನ ಮಾಲೆಗಳ ಜಲ್ಲಿ ಜಡಿಸಿ ಮೇಲ್ಗಡೆ ಅಬ್ಬಲಿಗೆ ಮುಡಿಸುತ್ತಾರೆ. ತಳಿಗೆಯಲ್ಲಿರುವ ಎಲ್ಲಾ ವಸ್ತುಗಳನ್ನು ಉಪಯೋಗಿಸಿ, ಎರಡೂ ಕಡೆಯುವರು ಸೇರಿ ಮದುಮಗಳನ್ನು ಶೃಂಗರಿಸುತ್ತಾರೆ. ತವರಿನ ದಿಬ್ಬಣದ ಸೀರೆಯನ್ನು ಬಿಚ್ಚಿ ತಳಿಗೆಯಲ್ಲಿನ ವರನ ಕಡೆಯ ಧಾರೆಸೀರೆಯನ್ನು ಉಡಿಸುತ್ತಾರೆ. ಮದುಮಗಳಿಗೆ ಕಚ್ಚೆ ಹಾಕಿ ಸೀರೆ ಉಡಿಸುವ ಕ್ರಮ ಕುಡುಬಿಯರಲ್ಲಿಲ್ಲ. ಈಗಿನ ಆವಾಹಿತ ಸಂಪ್ರದಾಯ ಪ್ರಕಾರ ಧಾರೆಯಾದ ನಂತರ ಮದುಮಗ ಕಟ್ಟುವ ಮಂಗಲಸೂತ್ರವನ್ನು, ಹಿಂದಿನಕಾಲದಲ್ಲಿ ಮದುಮಗಳು ಶೃಂಗರಿಸಲ್ಪಟ್ಟ ನಂತರ ವರನ ತಾಯಿಯೇ ಕಟ್ಟುತ್ತಿದ್ದಳು ಎಂಬ ವಿಷಯ ಕ್ಷೇತ್ರಕಾರ್ಯ ಸಂದರ್ಭ ತಿಳಿದುಬಂದಿರುವುದು ಕುತೂಹಲಕಾರಿಯಾಗಿದೆ. ಇದು ಕೂಡಾ ಬುಡಕಟ್ಟು ಲಕ್ಷಣದ ಸಂಪ್ರದಾಯವೆನ್ನಬಹುದು. ಕುಡುಬಿ ಬುಡಕಟ್ಟು ಸಂಪ್ರದಾಯದಲ್ಲಿ ಮಾಂಗಲ್ಯವನ್ನು ವರನಾದವನು ಕಟ್ಟುವುದಕ್ಕೆ ಅಷ್ಟು ಮಹತ್ವವಿರಲಿಲ್ಲ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಈಗ ಚಾಲ್ತಿಯಲ್ಲಿರುವ, ಮಂಗಲಸೂತ್ರವನ್ನು ವರನೇ ಕಟ್ಟುವ ಸಂಪ್ರದಾಯ ವೈದಿಕ ಆಚರಣೆಯ ಪ್ರಭಾವ. ಮೂಲದಲ್ಲಿ ಅದು ಕುಡುಬಿಯರ ಸಂಪ್ರದಾಯ ಅಲ್ಲ ಎಂದು ವೇದ್ಯವಾಗುತ್ತದೆ.

14. ಪುಣ್ಯಾರ್ಚನೆ / ಸಂಕಲ್ಪ :

ಮದುಮಗಳು ಸರ್ವಾಲಂಕಾರ ಭೂಷಿತಳಾಗಿ ತಯಾರಾದಾಗ ಮಂಟಪದಲ್ಲಿ ಪುರೋಹಿತರು ಧಾರೆಯ ವ್ಯವಸ್ಥೆಗೆ ತಯಾರು ಮಾಡಿರುತ್ತಾರೆ. ಗುರಿಕಾರ ರಾಯಭಾರಿಯುವರು ಅವರಿಗೆ ಸಹಾಯ ಮಾಡುತ್ತಾರೆ. ಪ್ರಥಮ ಹಂತವಾಗಿ ಪುರೋಹಿತರು ವಧೂವರ ಮತ್ತವರ ಮಾತಾಪಿತರನ್ನು, ನಂತರ ವರನ ಮಾತಾಪಿತರನ್ನು ಕರೆದು ಕೂರಿಸಿ ಪುಣ್ಯಾರ್ಚನೆ ನೆರವೇರಿಸುತ್ತಾರೆ. ಮಂಗಲಸೂತ್ರ ತರಿಸಿ ಸ್ವಸ್ತಿಕೆಯಲ್ಲಿಟ್ಟು

ಪೂಜೆ ಮಾಡಿ ಪವಿತ್ರಗೊಳಿಸುತ್ತಾರೆ. ಮೃತ್ತಿಕ ಕಲಶಗಳಲ್ಲಿ ಮೂಲ ಪವಿತ್ರ ಕಲಶದ ನೀರನ್ನು ಎರೆಯುತ್ತಾರೆ. ಕಲಶದ ಬಾಯಿಯಲ್ಲಿ ಮಾವು/ಹಲಸಿನೆಲೆಗಳನ್ನಿಟ್ಟು ಮೇಲಿಂದ ಚಂಡಿಕೆಯುಕ್ತ ಕಂಕಣ ಕಟ್ಟಿದ ಸುಲಿದ ತೆಂಗಿನಕಾಯಿಗಳನ್ನಿಡುತ್ತಾರೆ. ಧಾರೆಗೆ ಬಳಸುವ ಈ ಕಲಶಗಳಲ್ಲಿ ಕಲಶಕಾಣಿಕೆ ಹಾಕಿರುತ್ತಾರೆ. ಆ ಕಲಶಗಳನ್ನು ಹಿಂದೆ ಬಾಳೆಮಂಟಪದ ಎದುರಿನ ಬಾಳೆಗಿಡಗಳ ಬುಡದಲ್ಲಿ ಸ್ಥಾಪಿಸುತ್ತಿದ್ದರು. ಮಲ್ಲಿಗೆಯ ವರಮಾಲೆಗಳನ್ನು ಪುರೋಹಿತರೇ ತಯಾರು ಮಾಡುತ್ತಾರೆ. ಹಿಂದಿನ ಕ್ರಮಪ್ರಕಾರ ಮಲ್ಲಿಗೆಯ ವರಮಾಲೆಗಳನ್ನು ಪುರೋಹಿತರೇ ತಯಾರು ಮಾಡುತ್ತಿದ್ದರು. ಮತ್ತು ವರಮಾಲೆ ಮಲ್ಲಿಗೆಯ ಮಾಲೆಯೇ ಉಪಯೋಗವಾಗುತ್ತಿತ್ತು. ವಧೂವರರು ಬಾಸಿಂಗ ಕಟ್ಟಿಲ್ಲವಾದರೆ ಈ ಸಂದರ್ಭ ಪುರೋಹಿತರೇ ಬಾಸಿಂಗವನ್ನು ಕಟ್ಟುತ್ತಾರೆ. ವರನ ಬಾಸಿಂಗದಿಂದ ಕನಕಾಂಬರದ ಕೆಲವು ಹೂವುಗಳನ್ನು ತೆಗೆದು ವರಮಾಲೆಗೆ ಪೋಣಿಸುತ್ತಾರೆ (ಕನಕಾಂಬರ=ಅಬ್ಬಲಿಗೆ=CROSSANDRA UNDULAE FOLIA) . ಮದುವೆಯ ವಿಧಿಗಳಲ್ಲಿ ಕನಕಾಂಬರ ಹೂವನ್ನು ಉಪಯೋಗಿಸಿದ ನಂತರವೇ ಕುಡುಬಿ ಹೆಣ್ಣಿಗೆ ಅದನ್ನು ಮುಡಿಯುವ ಅಧಿಕಾರ ಪ್ರಾಪ್ತವಾಗುತ್ತದೆ. ಪುರೋಹಿತರು ಪುಣ್ಯಾರ್ಚನೆ ಮುಗಿಸಿದ ತಕ್ಷಣ ಯಜಮಾನ ಮಂಟಪದ ಮೇಲೆ ನಾಲ್ಕು ಮೂಲೆಗಳಲ್ಲಿರಿಸಿದ ಬಾಳೆದಿಂಡಿನ ತುಂಡುಗಳ ಮೇಲೆ ನಾಲ್ಕು ಹಣತೆಗಳನ್ನು ಹಚ್ಚಿಡುತ್ತಾನೆ.

ಅನಾದಿ ಕಾಲದಲ್ಲಿ ಕುಡುಬಿಯರ ಮದುವೆ ಸಂಪ್ರದಾಯದಲ್ಲಿ ವೈದಿಕರ ಪೌರೋಹಿತ್ಯ ಇರಲಿಲ್ಲ. ಈ ಪುರೋಹಿತತನದ ಕಾರ್ಯಗಳ ನಿರ್ವಹಣೆ ಸಮಾಜದ ಗುರಿಕಾರ ರಾಯಭಾರಿಯವರ ಜವಾಬ್ದಾರಿಯಾಗಿತ್ತು ಎಂಬುದು ಕ್ಷೇತ್ರ ಕಾರ್ಯವೇಳೆ ತಿಳಿದು ಬಂದ ವಿಚಾರ. ಮಧ್ಯಮ ಕಾಲದಲ್ಲಿ ಕರ್ಹಾಡ ಬ್ರಾಹ್ಮಣರಿಂದ ಪೌರೋಹಿತ್ಯ ನಡೆಸಲಾಯಿತು. ಪ್ರಾದೇಶಿಕ ಮತ್ತು ಸಾಂದರ್ಭಿಕ ಪರಿಸ್ಥಿತಿಯ ಬದಲಾವಣೆಯಿಂದ ಈಗ ಊರಿನ ಲಭ್ಯ ವೈದಿಕರನ್ನು ಆಹ್ವಾನಿಸಿ ವೈವಾಹಿಕ ಕ್ರಿಯೆಗಳನ್ನು ನಡೆಸುವುದರಿಂದ ಕುಡುಬಿಯರ ಬುಡಕಟ್ಟು ಮೂಲದ ಸಂಪ್ರದಾಯಗಳೆಲ್ಲಾ ಬ್ರಾಹ್ಮಣೀಕರಣಗೊಂಡಿವೆ. ಪ್ರಭಾವೀ ಸಮಾಜದ ಸಂಸ್ಕೃತಿಯೊಂದು ಬುಡಕಟ್ಟು ಮೂಲದ ಕಿರು ಸಂಸ್ಕೃತಿಯ ಮೇಲೆ ಬೀರುವ ಪ್ರಚೋದನೆ ಪ್ರಭಾವಗಳ ಪರಿಣಾಮವಿದು.

15. ಅಂತರಪಟ :

ಮಾಲಾರ್ಪಣೆಯ ಸಂದರ್ಭ ವಧೂವರರ ಮಧ್ಯೆ ಅಡ್ಡವಾಗಿ ಹಿಡಿಯುವ ಹೊಸ ಶ್ವೇತ ಪಂಚೆಗೆ 'ಅಂತರಪಟ' ಅಂತ ಹೆಸರು. ವಿವಾಹ ಮುಹೂರ್ತದ ವರೆಗೆ ವಧೂವರರು ಪರಸ್ಪರ ನೋಡಬಾರದು ಎಂಬ ಉದ್ದೇಶದಿಂದ ಈ ವ್ಯವಸ್ಥೆ. ಹಿಂದಿನ ಕಾಲದಲ್ಲಿ ಮುಹೂರ್ತ ಸಮಯಕ್ಕಿಂತ ಮೊದಲು ವಧೂವರರು ಒಬ್ಬರನ್ನೊಬ್ಬರು ನೋಡುವುದು, ಮಾತಾಡುವುದು ಅಶಾಸ್ತ್ರೀಯ, ನೋಡಿದರೆ ದುಷ್ಪರಿಣಾಮಗಳಾಗುತ್ತವೆ ಎಂಬ ನಂಬಿಕೆ ಇದ್ದಿರಬಹುದು.

ಹಿರಿ ದೀಪಾವಳಿಗೆ ತುಲಶೀ ಲಗ್ನದ ಸಂದರ್ಭ ಮನೆಯ ಯಜಮಾನ ತುಲಸೀ ಾಲೆ ಹಿಡಿದುಕೊಂಡು ತುಲಸಿ ಎದುರು ನಿಂತಾಗ ಆತನ ಮತ್ತು ತುಲಸಿಯ ಮಧ್ಯೆಯೂ ದೇ ರೀತಿ ಅಂತರಪಟವನ್ನು ಅಡ್ಡಹಿಡಿಯುವ ಪರಂಪರೆ ಇದೆ. ಇದು ಹಿಂದೂ ಂಸ್ಕೃತಿಯಲ್ಲಿ ಸಾಂಪ್ರದಾಯಿಕ ಮದುವೆ ಆಚರಣೆಯ ಪ್ರತೀಕ. ಇಲ್ಲಿ ಯಜಮಾನ ುಲಸಿಗೆ ಶ್ರೀ ವಿಷ್ಣುವಿನ ಪ್ರತಿನಿಧಿಯಾಗಿ ಮಾಲೆ ಹಾಕುವಾಗ ಅಂತರಪಟದ ತೆರೆ ಿಡಿಯುತ್ತಾರೆ.

ಮಾಲಾರ್ಪಣೆಯ ಸಂದರ್ಭ ಉದ್ಘೋಷಿಸಲ್ಪಡುವ ಈ ಕೆಳಗಿನ ಮರಾಠಿ ಂಗಳಾಷ್ಟಕವಲ್ಲಿ ಅಂತರಪಟ ಮತ್ತು ವಧೂವರರು ವಿವಾಹ ಪೂರ್ವ ಒಬ್ಬರನ್ನೊಬ್ಬರು ೋಡಲಾಗದೆಂಬ ಉಲ್ಲೇಖವಿದೆ.

'ಆಲೀ ಲಗ್ನ ಘಟಿ ಸಮೀಪ್‌ನವ್ರಾ ಘೆವೂನಿ ಯಾವಾ ಘರಾ
ಗೃಹಯೋಕ್ತೀ ಮಧುಪರ್ಕ್ ಪೂಜನ್ ಕರಾ ಅಂತಃ ಪಟಾತ್ ಧರಾ ।
ದೃಷ್ಟಾದೃಷ್ಟ ವಧುವರಾ ನ ಕರ್‍ತ್ಯಾಂ ದೊಘೇ ಕರಾವೀ ಉಭೀ
ವಾಜಂತ್ರೆ ಬಹೂ ಗಲಬಲಾನ್ ಕರಣೇ । ಕುರ್ಯಾತ್ ಸದಾ ಮಂಗಲಮ್ ।

ಭಾರತೀಯ ಸಂಸ್ಕೃತಿಯಲ್ಲಿ ಹಿರಿಯರ ಮುಖಾಂತರ ಜರಗುವ ಮದುವೆ ಂಬಂಧಕ್ಕೆ ಗೌರವ, ಘನತೆ, ಗಂಭೀರತೆಗಳಿವೆ. ನೆಂಟಸ್ತಿಕೆ ಹೊಂದಾಣಿಕೆ (Ap-proved Marriage) ಹಿರಿಯರ ಮುಖಾಂತರ ಆಗುವುದಕ್ಕೆ ಕುಡುಬಿ ಸಮಾಜದಲ್ಲಿ ಮಾನ್ಯತೆಯಿದೆ. ಯಾವುದೋ ಒಂದು ಕುಟುಂಬದ ಅಪರಿಚಿತ ಹೆಣ್ಣಿಗೆ, ಇನ್ನೊಂದು ಕುಟುಂಬದ ಗುರುತು ಪರಿಚಯವಿಲ್ಲದ ಹುಡುಗನೊಬ್ಬನೊಂದಿಗೆ ಆಗುವ ಮದುವೆಯನ್ನು ಕುಡುಬಿ ಹಿರಿಯರು ಜವಾಬ್ದಾರಿಯಿಂದಲೇ ನಿಶ್ಚಯಿಸಿ ನಿರ್ವಹಿಸುತ್ತಾರೆ. ಹಿರಿಯರು ಮಾಡಿದ ಈ ಸಂಬಂಧವನ್ನು ವಧೂವರರು ಸಮ್ಮತಿಸುತ್ತಾರೆ ಎನ್ನುವುದಕ್ಕೆ ಈ ಸಂಪ್ರದಾಯ ನಿದರ್ಶನವಾಗಿದೆ.

16. ಮಾಲಾರ್ಪಣೆ :

ವರನನ್ನು ಬಲಗೊಡೆಯ ಮದುವೆ ಮಂಟಪಕ್ಕೆ ಕೈಹಿಡಿದು ಕರೆತರುತ್ತಾನೆ. ಮದುಮಗಳನ್ನು ಸೋದರಮಾವ ಕರೆತರುತ್ತಾನೆ. ವಧುವಿನ ಓರಗೆಗಾರ್ತಿಯಾಗಿ ಬಲಗೊಡತಿಯೂ ಇರುತ್ತಾಳೆ. ಅವರ ಹಿಂಬಾಲಕರಾಗಿ ಕಲಶಗಿತ್ತಿ (ವರನ ಸಹೋದರಿ=ಕೊರೊಲಿ), ಕಲಶಗಾರ (ವಧುವಿನ ಸಹೋದರ=ಕೊರೊಲೊ) ಮಂಟಪದ ಬಾಳೆಗಿಡದ ಬುಡದಲ್ಲಿಟ್ಟದ್ದ ಪವಿತ್ರ ಕಲಶಗಳನ್ನು ಹಿಡಿದುಕೊಂಡು ಬರುತ್ತಾರೆ. ವರನ ವಿವಾಹಿತ ಸಹೋದರಿಗೆ ಕಲಶ ಹಿಡಿಯುವ ಅಧಿಕಾರ ಇರುವಂತೆ ವಧುವಿನ ಕಲಶ ಹಿಡಿವ ಅಧಿಕಾರ ಅವಿವಾಹಿತ ಸಹೋದರನಿಗೆ ಇರುತ್ತದೆ. ಮುಂದಿನಿಂದ ವಧೂವರರ,

ಅವರವರಿಗೆ ಸಂಬಂಧಪಟ್ಟ ಯಜಮಾನ ಯಜಮಾನ್ತಿ, ಸೋದರ ಮಾವಂದಿರು ಮತ್ತ ಗುರಿಕಾರ ರಾಯಭಾರಿಯವರು ಇರುತ್ತಾರೆ. ಪುರೋಹಿತರು ಮಂತ್ರಮುಖೇನ ವಿಧಿಗಳನ್ನು ಪ್ರಾರಂಭಿಸುವಾಗ ವರ ಮುಂದಿನಿಂದ, ವಧು ಹಿಂದಿನಿಂದ ಮಂಟಪಕ್ಕೆ ಐದಾವರ್ತಿ ಪ್ರದಕ್ಷಿಣೆ ಹಾಕುತ್ತಾರೆ. ವರ ಮಂಟಪದಲ್ಲಿ ಪೂರ್ವಾಭಿಮುಖವಾಗಿ ಸ್ವಸ್ತಿಕೆಯ ಕುಡಿ ಬಾಳೆಲೆಯ ಬುಡದಲ್ಲಿ ಹಾಕಿದ ಅಕ್ಕಿ ರಾಶಿಯ ಮೇಲೆ ಉಂಗುಷ್ಠವಿರಿಸಿ ನಿಲ್ಲುತ್ತಾನೆ. ಅವನಿಗೆದುರಾಗಿ ಅದೇ ಕುಡಿಬಾಳೆಲೆಯ ತುದಿಯಲ್ಲಿ ಹಾಕಿದ ಅಕ್ಕಿರಾಶಿ ಮೇಲೆ ವಧು ಉಂಗುಷ್ಠವಿರಿಸಿ ನಿಲ್ಲುತ್ತಾಳೆ. ಇವರಿಬ್ಬರ ನಡುವೆ ಎತ್ತರದಲ್ಲಿ ಹೊಸ ಶ್ವೇತ ವಸ್ತ್ರ ಅಂತರಪಟವನ್ನು, ವಧೂವರರ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣದಂತೆ ತೆ ಹಿಡಿಯುತ್ತಾರೆ.

ಪುರೋಹಿತರ ಮಂಗಳಾಷ್ಟಕ ಮುಖೇನ ವಿಧಿಗಳು ಮುಗಿದಾಗ ಅಂತರಪಟದ ಮೇಲ್ಪದಿಯಿಂದ ಮೊದಲು ವಧುವು ವರನಿಗೆ, ನಂತರ ವರ ವಧುವಿಗೆ ಪರಸ್ಪ ಮಾಲಾರ್ಪಣೆಗೈಯುತ್ತಾರೆ. ಮಾಲಾರ್ಪಣೆಗೆ ಮೊದಲು ಗುರಿಕಾರರು ಸಭೆಯನ್ನುದ್ದೇಶಿ 'ಸಮಸ್ತರೆಲ್ಲಾ ಕೇಳಿ, ಈಗ ವಧೂವರರು ಮಾಲಾರ್ಪಣೆಗೈಯುತ್ತಾರೆ' ಎಂಬುದಾಗಿ ಕೈಮುಗಿದು ಸಭಾ ಮರ್ಯಾದೆ ಸಲ್ಲಿಸುತ್ತಾರೆ. ಅದಕ್ಕೆ ಪ್ರತಿಯಾಗಿ 'ಹಾಂ ಅನ್ನುತ್ತೇವೆ' ಎಂಬ ಸಭೆಯ ಒಪ್ಪಿಗೆಯ ಮಾರುತ್ತರ ಬರುತ್ತದೆ. ಮಾಲಾರ್ಪಣೆಗೈದಾಗ ವಧೂವರರಿಗೆ ಎಲ್ಲರೂ ವರಮಾಲೆಯ ಸೇಸೆಯಿಕ್ಕುತ್ತಾರೆ. ಮಾಲಾರ್ಪಣೆಯ ನಂತರ ಅಂತರಪಟವನ್ನು ಸರಿಸುತ್ತಾರೆ.

17. ಧರ್ಮಧಾರೆ :

ಮುಂದಿನ ಸಂಪ್ರದಾಯ ಧಾರೆ ಎರೆಯುವ ಕಾರ್ಯಕ್ರಮ. ವಧೂವರರ ಕೈಯಲ್ಲಿ ವೀಳ್ಯಪಟ್ಟಿ ಇರುತ್ತದೆ. ವರನ ಬೊಗಸೆಯ ಮೇಲೆ ವಧುವಿನ ಬೊಗಸೆ ಇಡಲಾಗುತ್ತದೆ ಬೊಗಸೆಯ ಅಡಿಯಲ್ಲಿ ವರನ ಮಾತಾಪಿತೃಗಳು ಜಲಪಾತ್ರೆ ಹಿಡಿಯುತ್ತಾರೆ. ಗುರಿಕಾರರು ಸಭೆಗೆ ಕೈಮುಗಿದು 'ಸಮಸ್ತರು ಕೇಳಿ, ಧರ್ಮಧಾರೆ ಎರೆಯಲಾಗುತ್ತದೆ' ಅಂತ ಹೇಳುತ್ತಾರೆ ಪುರೋಹಿತರು ಧಾರೆಯ ವಿಧಿಗಳನ್ನು ನಡೆಸುತ್ತಿರುವಾಗ ಪ್ರಥಮವಾಗಿ ವಧುವಿನ ಮಾತಾಪಿತರು ಪವಿತ್ರ ಮೃತ್ತಿಕ ಕಲಶದ ನೀರನ್ನು ವಧೂವರರ ಬೊಗಸೆಯ ಮೇಲೆ ಐದಾವರ್ತಿ ಧಾರೆ ಎರೆಯುತ್ತಾರೆ. ನಂತರ ವರನ ಮಾತಾಪಿತರು ಇದೇ ರೀತಿ ಐದಾವರ್ತಿ ಅವರ ಪವಿತ್ರ ಕಲಶದ ನೀರನ್ನು ಧಾರೆ ಎರೆಯುತ್ತಾರೆ. ಹೀಗೆ ಎರೆದ ಧಾರೆನೀರು ಅಡಿಯಲ್ಲಿನ ಜಲಪಾತ್ರೆಯಲ್ಲಿ ಸಂಗ್ರಹವಾಗುತ್ತದೆ. ವಧೂವರರ ಮಾತಾಪಿತರ ಅನುಪಸ್ಥಿತಿಯಲ್ಲಿ ಸೋದರ ಮಾವ, ಸೋದರತ್ತೆಯರು ಧಾರೆ ಎರೆಯುವ ಹಕ್ಕುದಾರರು. ಅವರೂ ಇಲ್ಲದಿದ್ದಲ್ಲಿ ದಾಯಾದಿ ಚಿಕ್ಕಪ್ಪ ದೊಡ್ಡಪ್ಪ ದಂಪತಿಗಳು ಅಥವಾ ಹಿರಿಯ ಸಹೋದರ ದಂಪತಿಗಳು ಧಾರೆಯ ಹಕ್ಕುದಾರರಾಗಿರುತ್ತಾರೆ. ಕುಡುಬಿಯರಲ್ಲಿ ಹಿರಿಯ ಸಹೋದರ ದಂಪತಿಗಳಿಗೆ ಮಾತಾಪಿತರ ಸ್ಥಾನವಿದೆ. ಧಾರೆ ಎರೆಯಲ್ಪಟ್ಟಾಗ ವಧೂವರರಿಗೆ

ರೂ ಧಾರೆಯ ಅಕ್ಷತೆಯಿಕ್ಕುತ್ತಾರೆ. ಜಲಪಾತ್ರೆಯಲ್ಲಿ ಓಡಿದ ಧಾರೆ ನೀರನ್ನು ವರನ ಮ ಕೊಂಡುಹೋಗಿ ಫಲಬರುವ ತೆಂಗಿನಮರದ ಬುಡಕ್ಕೆ ಎರೆಯುತ್ತಾಳೆ.

ಹಿಂದಿನ ಸಂಪ್ರದಾಯ ಪ್ರಕಾರ ಧಾರೆ ಆದ ನಂತರ ಪುರೋಹಿತರು ವಧುವಿನ ತ್ರ ಘೋರ್ಷಿಸಿ ವರನ ಗೋತ್ರಕ್ಕೆ ಸೇರಿಸುವ ಶಾಸ್ತ್ರ ಮಾಡುತ್ತಿದ್ದರು. ಗೋತ್ರ ಯುವಾಗ ವಧೂವರರ ಹಿಂದಿನ ಮೂರು ತಲೆಮಾರುಗಳ ಅಜ್ಜ ಮುತ್ತಜ್ಜರಿಂದ ದು ಈವರೆಗಿನ ಹಿರಿಯರ ಹೆಸರು ಹೇಳಿ, ಗೋತ್ರ ವಿಭಜಿಸುವ ಪರಿಪಾಠವಿತ್ತು. ವಿಧಿಗೆ ವರನ ಕಡೆಯವರು ಐದು ವರಹ ವಧುದಕ್ಷಿಣೆಯಾಗಿ ನೀಡಬೇಕಾಗಿತ್ತು. ತ್ರ ಕಡಿವ ಶಾಸ್ತ್ರ ಆಗಿ ಆ ಹಣವನ್ನು ದೇವರ ಡಬ್ಬಿಗೆ ಹಾಕಲಾಗುತ್ತಿತ್ತು.

ಕುಡುಬಿ ಸಮುದಾಯದಲ್ಲಿ ಧರ್ಮಧಾರೆಯಾಗುವುದು ಜಲಸಾಕ್ಷಿ ಮುಖಾಂತರ. ಲ್ಲಿ ಲಾಜಹೋಮದ ಅಗ್ನಿಸಾಕ್ಷಿ ಪದ್ಧತಿಯ ಆಚರಣೆ ಅವಶ್ಯವಿಲ್ಲ. ಧಾರೆಗೆ ಮನೆಯಿಂದ ದಿರುವ ಸುರಗಿಸುತ್ತು ಕಂಕಣ ಕಟ್ಟಿದ ಮಣ್ಣಿನ ಕಲಶಗಳೇ ಆಗಿರಬೇಕು. ಕಂಚಿನ ಂಡಿಲಗಿಂಡಿ, ಕಲಶ ಕನ್ನಡಿಯ ಶಿರೋಧಾರೆ, ಲಾಜಹೋಮ, ಸಪ್ತಪದಿ, ಧಾರೆಯ ರತಿ... ಇವೆಲ್ಲಾ ವೈದಿಕ ಸಂಪ್ರದಾಯದ, ಈಗಿನ ಆಧುನಿಕ ಮತ್ತು ಸ್ಥಳೀಯ ಆಚರಣೆಗಳ ನುಕರಣೆಯ ಪ್ರಭಾವದಿಂದ ಪ್ರಾರಂಭವಾದ ಸಂಪ್ರದಾಯಗಳು ಹೊರತು ಮೂಲದಿಂದ ಡುಬಿಯರ ಸಂಪ್ರದಾಯಗಳಲ್ಲ. ಈಗಿನ ಮಧ್ಯಮಕಾಲದ ಆಚರಣಾ ಪದ್ಧತಿ ಪ್ರಕಾರವೂ ಂಗಲಸೂತ್ರ ಕಟ್ಟಿದ ನಂತರ ವಧೂವರರ ಕೈಗೆ ಕಂಕಣದಾರ ಕಟ್ಟಿದರೆ ಪುರೋಹಿತರು ಡೆಸುವ ಧಾರೆಯ ವಿಧಿಗಳು ಮುಗಿದಂತೆ. ಧಾರೆಯ ನಂತರ ಪುರೋಹಿತರು ಧೂವರರಿಗೆ ಸೂತ್ರಬಂಧದ ಶಾಸ್ತ್ರವನ್ನು ಪ್ರಾರಂಭಿಸುತ್ತಾರೆ.

18. ಸೂತ್ರಬಂಧ (ನೂಲುಡಿಕೆ):

ಧಾರೆ ಆಗಿ ಮದುಮಗಳನ್ನು ವರನ ಎಡಮಗ್ಗುಲಲ್ಲಿ ಒಂದೇ ಸಾಲಿನಲ್ಲಿ ಲ್ಲಿಸುತ್ತಾರೆ. ಪುರೋಹಿತರು ನೂಲನ್ನು ವರನ ಉಂಗುಷ್ಠದಿಂದ ಪ್ರಾರಂಭಿಸಿ ತಲೆಯ ಮೇಲಿಂದ ತಂದು, ವಧುವಿನ ತಲೆ, ಉಂಗುಷ್ಠ ಮೂಲಕ ವರನ ಉಂಗುಷ್ಠವರೆಗೆ ನೇರ ರೀತಿಯಲ್ಲಿ ಐದು ಸುತ್ತು ಸುತ್ತಿ ತಮ್ಮ ಮಂತ್ರ ಮುಖೇನ 'ಸೂತ್ರಬಂಧ' ಅಥವಾ 'ನೂಲುಡಿಕೆ' ಮಾಡುತ್ತಾರೆ. ಕುಡುಬಿಯರಲ್ಲಿ ಹೀಗೆ ನೇರ ನೂಲುಡಿಗೆ ಮಾಡುವುದು ವಾಡಿಕೆ. ಕೆಲವು ಪುರೋಹಿತರು ತಿಳುವಳಿಕೆಯ ಕೊರತೆಯಿಂದ ವಧೂವರರನ್ನು ಎದುರೆದುರು ನಿಲ್ಲಿಸಿ, ಇಬ್ಬರಿಗೂ ಒಟ್ಟಿಗೆ ಎದೆಯ ಮತ್ತು ಕಟಿಯ ಭಾಗದಲ್ಲಿ, ಎರಡುಕಡೆ ಐದೈದು ಸುತ್ತು ನೂಲು ಸುತ್ತಿ, ತೆಗೆಯುವಾಗ ಮೇಲಿನ ನೂಲನ್ನು ಕಾಲುಗಳ ಅಡಿಯಿಂದ, ಕೆಳಗಿನ ನೂಲನ್ನು ತಲೆಯ ಮೇಲಿಂದ ತೆಗೆಯುತ್ತಾರೆ. ಅಕ್ಷತಾರ್ಪಣೆಯ ಮುಖಾಂತರ ನೂಲುಡಿಕೆಯನ್ನು ವಿಮೋಚಿಸಿದ ಪುರೋಹಿತರು, ಅದಕ್ಕೆ ಅರಸಿನ ಕೊಂಬು ಪೋಣಿಸಿ, ಎರಡು ಪ್ರತ್ಯೇಕ ಕಂಕಣದಾರಗಳನ್ನು ತಯಾರಿಸಿಡುತ್ತಾರೆ. ಪರೋಕ್ಷವಾಗಿ

ಅರ್ಥೈಸುವುದಾದಲ್ಲಿ ಇದೊಂದು, ವಧೂವರರನ್ನು ಸಾಂಸಾರಿಕ ಬಂಧನದಲ್ಲಿ ತರುವ ಕುಡುಬಿಯರ ವಿಶೇಷ ಪದ್ಧತಿ ಎನ್ನಬಹುದು.

19. ಮಂಗಲಸೂತ್ರ ಧಾರಣೆ (ಮಾಂಗಲ್ಯ ಬಂಧ) :

ಹಿಂದಿನ ಕಾಲದಲ್ಲಿ ಕುಡುಬಿಯರಲ್ಲಿ ಮಂಗಲಸೂತ್ರಕ್ಕೆ ತಾಳಿಯ ಪರಿಕಲ್ಪನೆಯೇ ಇರಲಿಲ್ಲ. ಅವರ ಮಂಗಲಸೂತ್ರ ಅಂದರೆ ಕತ್ತಾಳೆ ನಾರಿನ ನೂಲಿಗೆ ಮಧ್ಯೆ 'ಧಾರಮಣಿ' ಹೆಣೆದು ಅದರ ಅಚೀಚೆ ಕರಿಮಣಿ ಪೋಣಿಸಿ ಗಂಟು ಹಾಕಿದ ಒಂದು ಸರ. ಪ್ರಾದೇಶಿಕ ಮತ್ತು ವೈದಿಕ ಸಂಪ್ರದಾಯದ ಪ್ರಭಾವದಿಂದ ತಾಳಿ ರೂಢಿಗೆ ಬಂತು ಎಂದು ಸಂಪನ್ಮೂಲ ಹಿರಿಯರು ನೆನಪಿಸುತ್ತಾರೆ. ಈ ರೀತಿಯ ಮಂಗಲಸೂತ್ರವನ್ನು ವಧು ಅಲಂಕೃತಳಾಗಿ ತಯಾರಾದಾಗ ವರನ ತಾಯಿಯೇ ವಧುವಿನ ಕೊರಳಿಗೆ ಕಟ್ಟುತ್ತಿದ್ದಳು ಎಂಬ ಕುತೂಹಲಭರಿತ ವಿಷಯ ತಿಳಿದುಬರುತ್ತದೆ. ಈಗ ತಾಳಿಸಹಿತವಾದ ಚಿನ್ನದ ಕರಿಮಣಿ ಬಳಕೆಯಲ್ಲಿದೆ.

ಸೂತ್ರಬಂಧ ಆದನಂತರ ಪುರೋಹಿತರು ಸ್ವಸ್ತಿಕೆ ಮೇಲಿನ ಮಾಂಗಲ್ಯ ಸರವನ್ನು ತೆಗೆದು ವರನ ತಾಯಿಯಲ್ಲಿ ನೀಡುತ್ತಾರೆ. ಅದನ್ನಾಕೆ ಪಂಚಸುಮಂಗಲಿಯರಿಗೆ ಮುಟ್ಟಿಸಿ ತಂದು ಪುರೋಹಿತರಲ್ಲಿ ನೀಡುತ್ತಾಳೆ. ಪುರೋಹಿತರು ಆ ಮಾಂಗಲ್ಯಕ್ಕೆ ಪವಿತ್ರ ವಿಧಿಗಳನ್ನು ನೆರವೇರಿಸಿ ವರನ ಕೈಯಲ್ಲಿ ನೀಡುತ್ತಾರೆ. ಗುರಿಕಾರ ಸಭಾಮರ್ಯಾದೆಯಾಗಿ 'ಸಮಸ್ತರು ಕೇಳಿ, ಮಾಂಗಲ್ಯ ಧಾರಣೆ ಆಗುತ್ತದೆ' ಅಂತ ಘೋಷಿಸುತ್ತಾನೆ. ಸಭೆಯಿಂದ ಒಪ್ಪಿಗೆ ಸೂಚಕವಾಗಿ 'ಹಾಂ ಅಸ್ತು ತ್ತೇವೆ' ಎಂಬ ಪ್ರತ್ಯುತ್ತರ ಬರುತ್ತದೆ. ವರ ಅಕ್ಷತಾರ್ಪಣೆಯೊಂದಿಗೆ ಮಾಂಗಲ್ಯವನ್ನು ವಧುವಿನ ಕೊರಳಿಗೆ ತೊಡಿಸುತ್ತಾನೆ. ಪುರೋಹಿತರ ಸಹಿತ ಎಲ್ಲರೂ ವಧೂವರರಿಗೆ ಅಕ್ಷತಾ ಸೇಸೆಯಿಕ್ಕಿ ಆಶೀರ್ವದಿಸುತ್ತಾರೆ.

20. ಪಾದಪೂಜೆ :

ಮಾಂಗಲ್ಯ ಧಾರಣೆಯ ನಂತರ ಧಾರೆಯೆರೆದು ಕೊಟ್ಟ ಕನ್ಯಾಪಿತೃಗಳ ಕಾಲು ತೊಳೆಯುವ ಶಾಸ್ತ್ರವೇ 'ಪಾದಪೂಜೆ'. ಇದು ಕನ್ಯಾದಾನ ಮಾಡಿದ ಮಾತಾಪಿತರಿಗೆ ಕುಡುಬಿ ಮದುವೆ ಸಂಪ್ರದಾಯದಲ್ಲಿ ಸಲ್ಲುವ ಗರಿಷ್ಠ ಗೌರವ. ಇದರ ಅರ್ಥದ ಅರಿವಿನ ಕೊರತೆಯಿಂದ ಈಗ ವರನ ಮಾತಾಪಿತರ ಪಾದಪೂಜೆಯನ್ನೂ ಮಾಡುವ ಕ್ರಮ ಆಚರಣೆಯಲ್ಲಿ ಬಂದಿದೆ. ಕುಡುಬಿಯರಲ್ಲಿ ವಧುವನ್ನು ಧಾರೆಯೆರೆದು ಕೊಟ್ಟ ಮಾತಾಪಿತರ ಮತ್ತು ಆಕೆಯನ್ನು ಬಾಳಸಂಗಾತಿಯಾಗಿ ಸ್ವೀಕರಿಸಿ, ಅತ್ತೆ ಮಾವಂದಿರ ಕಾಲು ತೊಳೆದು ಆಶೀರ್ವಾದ ಪಡೆಯುವ ಅಪೂರ್ವ ಭಾಗ್ಯಾವಕಾಶ ದಂಪತಿಯ ಬಾಳಿನಲ್ಲಿ ಮತ್ತೆಂದೂ ಪ್ರಾಪ್ತವಾಗುವುದಿಲ್ಲ. ಇತ್ತೀಚೆಗೆ ಕೆಲವು ಕಡೆ ಈ ಸಂಪ್ರದಾಯಕ್ಕೆ ವ್ಯತಿರಿಕ್ತವಾಗಿ ವಧೂವರರ ತಂದೆತಾಯಿಯರೇ ವಧೂವರರ ಕಾಲುತೊಳೆಯುವುದು ರೂಢಿಗೆ ಬಂದಿದೆ. ಕಾರಣ ಕೇಳಿದರೆ, ಮದುವೆಯ ದಿನ ವಧೂವರರು ಶಿವಪಾರ್ವತಿಯರ ಪ್ರತಿರೂಪ, ಆದುದರಿಂದ

ವರ ಕಾಲು ತೊಳೆಯುವ ಕ್ರಮ ಸರಿ ಎಂಬ ಸಮಜಾಯಿಷಿ ಕೇಳಿಬರುತ್ತದೆ. ಕುಡುಬಿ ಸ್ಕೃತಿಯಲ್ಲಿ ಇದೊಂದು ಋಣಾತ್ಮಕ ಸಂದೇಶ ನೀಡುವ ಆಚರಣೆ ಎಂಬಂತೆ ಚರಿಸುತ್ತದೆ. ವಧೂವರರು ಮಾತಾಪಿತರ, ಅದರಲ್ಲೂ ಕನ್ಯಾಪಿತೃಗಳ ಕಾಲುತೊಳೆದು ಶೀರ್ವಾದ ಪಡೆವ ಕ್ರಮ ಹೆಚ್ಚು ಸರಿ. ಪುಣ್ಯ ಸಂಪಾದನೆಯ ಮಾರ್ಗ ಎಂಬುದು ಡುಬಿಯರ ಸಾಮಾಜಿಕ ನಡವಳಿಕೆಗಳನ್ನು ಅಭ್ಯಸಿಸಿದಾಗ ಮನವರಿಕೆಯಾಗುವ ವಿಷಯ.

ಪಾದಪೂಜೆ, ಪುರೋಹಿತರ ಉಪಸ್ಥಿತಿಯ ಅವಶ್ಯಕತೆಯಿಲ್ಲದೆ ಕುಡುಬಿಯರೇ ಡೆಸುವ ಖಾಸಗಿ ಆಚರಣೆ. ಮಂಟಪದ ಎದುರುಗಡೆ ನಾಲ್ಕು ಮಣೆಗಳ ಮೇಲೆ, ೂರ್ವಾಭಿಮುಖವಾಗಿ ವಧೂವರರು, ಅವರಿಗೆದುರಾಗಿ ವಧುವಿನ ಮಾತಾಪಿತರು ಳಿತುಕೊಳ್ಳುತ್ತಾರೆ. ಅಡಿಯಲ್ಲೊಂದು ಜಲಪಾತ್ರೆ ಇಟ್ಟು ಪ್ರಥಮದಲ್ಲಿ ವರನ ಬೊಗಸೆಗೆ ಧು ತಂಬಿಗೆಯಿಂದ ನೀರೆರೆಯುತ್ತಾಳೆ. ವರ ಆ ನೀರಿನಿಂದ ವಧುವಿನ ತಂದೆಯ ಾದಗಳನ್ನು ಪಂಚಾವರ್ತಿ ತೊಳೆದು ಕೈಮುಗಿಯಬೇಕು. ನಂತರ ವಧುವಿನ ಬೊಗಸೆಗೆ ರ ನೀರೆರೆದು, ವಧು ತನ್ನ ತಾಯಿಯ ಪಾದಗಳನ್ನು ಪಂಚಾವರ್ತಿ ತೊಳೆದು ೖಮುಗಿಯಬೇಕು. ವಧೂವರರನ್ನು ಆಶೀರ್ವದಿಸಿದ ವಧುವಿನ ಮಾತಾಪಿತರು ಕುಳಿತಲ್ಲಿಂದ ಏಳುತ್ತಾರೆ.

ವಧುವಿನ ಮನೆಯಲ್ಲಿ ಧಾರೆಯಾಗುವ ಸಂದರ್ಭಗಳಲ್ಲಿ ಧಾರೆ ಎರೆದವರ ಾದ ತೊಳೆಯುವ ಶಾಸ್ತ್ರ ಮಾತ್ರ ರೂಢಿಯಲ್ಲಿತ್ತು. ಧಾರೆ ವರನ ಮನೆಯಲ್ಲಿ ಜರಗಿದರೂ ವಧುವಿನ ತಂದೆತಾಯಿಯರ ಪಾದಪೂಜೆಯೇ ಚಾಲ್ತಿಯಲ್ಲಿತ್ತು. ವರನ ತಂದೆತಾಯಿಯರ ಪಾದಪೂಜೆ ಮಾಡುವ ಕ್ರಮವಿರಲಿಲ್ಲ. ಸಭಾಗೃಹ, ಕಲ್ಯಾಣ ಮಂಟಪಗಳಲ್ಲಿ ಮದುವೆಗಳು ಜರಗುವ ಈಗಿನ ವ್ಯವಸ್ಥೆಯಲ್ಲಿ ವರನ ತಂದೆತಾಯಿಯರ ಪಾದಪೂಜೆಯ ಕ್ರಮವೂ ಆಚರಣೆಗೆ ಬಂದಿದೆ. ಮೂಲದಲ್ಲಿ ಇದು ಕುಡುಬಿ ಸಂಪ್ರದಾಯಕ್ಕೆ ವಿರುದ್ಧವಾಗಿ ಕಂಡರೂ, ವರನಿಗೂ ತನ್ನ ತಂದೆ ತಾಯಿಯರ ಕಾಲು ತೊಳೆದು ಆಶೀರ್ವಾದ ಪಡೆಯುವ ಅವಕಾಶ ಇದೊಂದೇ. ಆದುದರಿಂದ, ಧಾರೆ ವಧುವಿನ ಅಥವಾ ವರನ ಮನೆಯಲ್ಲಿ ಆದರೂ, ವರನ ತಂದೆ ತಾಯಿಯರ ಕಾಲುಗಳನ್ನೂ ತೊಳೆದು ಆಶೀರ್ವಾದ ಪಡೆಯುತ್ತಾರೆ. ಕುಡುಬಿಯರ ಸಾಮಾಜಿಕ ವ್ಯವಸ್ಥೆಯಲ್ಲಿ ಭಾವನಾತ್ಮಕ ಚಿಂತನಾ ದೃಷ್ಟಿಯಿಂದ ಈ ಕ್ರಮ ಸೂಕ್ತ ಮತ್ತು ಸಹ್ಯವಾದೀತು. ಆದುದರಿಂದ ಪಾದಪೂಜೆಯ ಪ್ರಥಮ ಅವಕಾಶ ವಧುವಿನ ಮಾತಾಪಿತರಿಗೆ ನೀಡಿ, ಆ ನಂತರ ವರನ ತಂದೆತಾಯಿಯರ ಕಾಲು ತೊಳೆವ ಪದ್ಧತಿಯನ್ನು ಒಪ್ಪಬಹುದೇನೋ.

ವರನ ತಂದೆ ತಾಯಿಯರನ್ನು ಮಣೆಗಳಲ್ಲಿ ಕೂರಿಸುತ್ತಾರೆ. ಯಥಾಪ್ರಕಾರ ವಧು ವರನ ಬೊಗಸೆಗೆ ನೀರೆರೆಯುತ್ತಾಳೆ. ವರ ಪಂಚಾವರ್ತಿ ಆ ನೀರಿನಿಂದ ತನ್ನ ತಂದೆಯ ಕಾಲು ತೊಳೆದು ನಮಸ್ಕರಿಸುತ್ತಾನೆ. ನಂತರ ವಧುವಿನ ಬೊಗಸೆಗೆ ವರ ನೀರೆರೆಯುತ್ತಾನೆ. ವಧು ಆ ನೀರಿನಿಂದ ವರನ ತಾಯಿಯ ಕಾಲು ತೊಳೆದು

ನಮಸ್ಕರಿಸುತ್ತಾಳೆ. ವಧೂವರರನ್ನು ಆಶೀರ್ವದಿಸಿದ ವರನ ಮಾತಾಪಿತರು ಕುಳಿತಲ್ಲಿಂದ ಏಳುತ್ತಾರೆ. ಆದರೆ ವಧೂವರರಿಗೆ ಮುಂದೆ ಕಂಕಣದಾರ ಕಟ್ಟಲಿರುವುದರಿಂದ ಅವರು ಅಲ್ಲಿಯೇ ಕುಳಿತಿರಬೇಕು.

21. ಕಂಕಣದಾರ ಬಂಧ :

ಪಾದಪೂಜೆ ಮುಗಿದ ತಕ್ಷಣ ಪುರೋಹಿತರು ಬಂದು ವಧೂವರರ ಕೈಯಲ್ಲಿ ವೀಳ್ಯಪಟ್ಟಿ ನೀಡುತ್ತಾರೆ. ವರನ ಜೋಗಸೆಗಳ ಮೇಲೆ ವಧುವಿನ ಜೋಗಸೆಗಳನ್ನಿರಿಸಿ, ಸೂತ್ರಬಂಧದಿಂದ ತಯಾರು ಮಾಡಿದ್ದ ಕಂಕಣದಾರಗಳನ್ನು ವರನ ಬಲಗೈ ಮಣಿಗಂಟು ಮತ್ತು ವಧುವಿನ ಎಡಗೈ ಮಣಿಗಂಟಿಗೆ ಮಂತ್ರ ಮುಖೇನ ಕಟ್ಟಿ ಅಕ್ಷತೆ ಹಾಕುತ್ತಾರೆ. ವಧೂವರರು ಕೈಯಲ್ಲಿದ್ದ ವೀಳ್ಯಪಟ್ಟಿಗಳನ್ನು ಕಂಕಣದಾರ ಕಟ್ಟಿದ ಗೌರವಾರ್ಥವಾಗಿ ಪುರೋಹಿತರಿಗೆ ನೀಡಬೇಕು. ಕೆಳಗಡೆ ಜಲಪಾತ್ರೆಯಲ್ಲಿ ಸಂಗ್ರಹವಾದ ನೀರನ್ನು ವಧುವಿನ ತಾಯಿ ಕೊಂಡುಹೋಗಿ ತೆಂಗಿನ ಮರದ ಬುಡಕ್ಕೆ ಎರೆಯುತ್ತಾಳೆ. ಕಂಕಣದಾರ ಕಟ್ಟಿದ ಮೇಲೆ ವಧೂವರರು ಎದ್ದು, ನಂತರ ಪುರೋಹಿತರ ಮುಖಾಂತರ ಬ್ರಹ್ಮಾರ್ಪಣೆ ಬಿಟ್ಟು ತೀರ್ಥಪ್ರಸಾದ ಸ್ವೀಕರಿಸುತ್ತಾರೆ.

ಮದುಮಗನ ಮನೆಯಲ್ಲಿ ಮದುವೆಯ ರಾತ್ರಿ 'ನಾಗೋಲೆ' ಎಂಬ, ಸಂತತಿ ಪ್ರಾಪ್ತಿಗಾಗಿ ಮಾಡುವ ನಾಗದೇವರ ಪೂಜೆ ಇದೆ. ಈ ನಾಗೋಲೆ ಆಗುವಲ್ಲಿವರೆಗೆ ಕಂಕಣದಾರ ವಧೂವರರ ಕೈಯಲ್ಲಿರಬೇಕು. ಆ ವರೆಗೆ ಅವರಿಬ್ಬರೂ ಉಪವಾಸ ವ್ರತದಲ್ಲಿರಬೇಕು. ಕುಚ್ಚಲಕ್ಕಿ ಅನ್ನ, ಮದುವೆ ಔತಣದ ವಿವಿಧ ಬಗೆಯ ಖಾದ್ಯಗಳನ್ನು ಸೇವಿಸುವಂತಿಲ್ಲ. ಉಪಾಹಾರ ಅಥವಾ ಪಾಯಸ ಸೇವಿಸಬಹುದು. ನಾಗೋಲೆ ಪೂಜೆ ಮುಗಿಯುವ ಹೊತ್ತಿಗೆ ಪುರೋಹಿತರು ಕಂಕಣದಾರ, ನಾಂದಿ, ಮತ್ತು ಬಾಸಿಂಗಗಳನ್ನು ಬಿಡಿಸಿ ವಿಸರ್ಜಿಸಿದ ನಂತರ ವಧೂವರರು ಮದುವೆಯ ಔತಣದ ಊಟ ಮಾಡಬಹುದು.

22. ಲಾಜಹೋಮ :

ಕುಡುಬಿ ಬುಡಕಟ್ಟಿನ ಸಂಪ್ರದಾಯ ಪ್ರಕಾರ ಮದುವೆಯಲ್ಲಿ ಅಗ್ನಿಸಾಕ್ಷಿಯ ಅವಶ್ಯಕತೆಯಿಲ್ಲ. ಜಲಸಾಕ್ಷಿ ಮಾತ್ರ ಅಗತ್ಯ ಎಂಬುದನ್ನು ಈ ಮೊದಲೇ ಉಲ್ಲೇಖಿಸಲಾಗಿದೆ. ಆದುದರಿಂದ ಈಗಿನ ಲಾಜಹೋಮ ಮತ್ತು ಸಪ್ತಪದಿಯ ಆಚರಣೆ ಕುಡುಬಿ ಸಂಸ್ಕೃತಿಯಲ್ಲಿ ವೈದಿಕ ಆಚರಣೆಯ ಪ್ರಭಾವದಿಂದ ಚಾಲ್ತಿಗೆ ಬಂದಿರುವ ಸಂಪ್ರದಾಯ. ಲಾಜಹೋಮದ ಕ್ರಮ ಮಾಡುವುದಾದಲ್ಲಿ ಧಾರೆ ಆದ ತಕ್ಷಣ ಮಂಗಲಸೂತ್ರ ಕಟ್ಟುವುದಿಲ್ಲ. ಮಂಗಲಸೂತ್ರವನ್ನು ಲಾಜಹೋಮ ಪ್ರಾರಂಭಕ್ಕೆ ಮುನ್ನ ಕಟ್ಟಲಾಗುತ್ತದೆ. ಮಾಂಗಲ್ಯ ಧಾರಣೆಯ ನಂತರ ವಧೂವರರನ್ನು ಪುರೋಹಿತರು ಹೋಮಕ್ಕೆ ಕೂರಿಸುತ್ತಾರೆ. ಹೋಮಕ್ಕೆ ಆಹುತಿಯಾಗಿ ಅರಳು ಹಾಕುವುದರಿಂದ ಈ ಹೋಮಕ್ಕೆ 'ಲಾಜಹೋಮ' ಅಂತ ಹೆಸರು.

ಪುರೋಹಿತರು ಹೋಮದ ವಿಧಿಗಳನ್ನು ನೆರವೇರಿಸುತ್ತಿರುವಾಗ ಮದುಮಗಳ ವಿವಾಹಿತ ಸಹೋದರ ಒಂದು ಹರಿವಾಣದಲ್ಲಿ ಅರಳು ಹಿಡಿದುಕೊಂಡು ನಿಲ್ಲುತ್ತಾನೆ. ನ ಮದುಮಗಳ ಹೆಗಲ ಮೇಲೆ ಕೈತಂದು ಈರ್ವರ ಜೋಗಸೆಗಳನ್ನು ಒಟ್ಟಿಗೆ ಹಿಡಿದಾಗ ಸಹೋದರ ಅರಳನ್ನು ಅವರ ಜೋಗಸೆಗೆ ಮುಷ್ಟಿಯಿಂದ ಹಾಕುತ್ತಾನೆ. ವಧೂವರರು ಮೂರು ಬಾರಿ ಈ ರೀತಿ ಅರಳು ಹಾಕಿದಾಗ ವಧುವಿನ ತೋರುಬೆರಳನ್ನು ಹಿಡಿದ ವರ ಹೋಮಕುಂಡಕ್ಕೆ ಪ್ರದಕ್ಷಿಣೆ ಹಾಕಿ ಈರ್ವರೂ ಅರಳನ್ನು ಹೋಮಾಗ್ನಿಗೆ ಅರ್ಪಿಸುತ್ತಾರೆ. ಮೂರಾವರ್ತಿ ಈ ರೀತಿ ಪುನರಾವರ್ತನೆಯಾಗುವಾಗಲೂ ವರನು ಹಿಡಿದಿರುವ ವಧುವಿನ ತೋರುಬೆರಳನ್ನು ಬಿಡುವಂತಿಲ್ಲ. ಅರಳು ಹಾಕಿದ ಮದುಮಗಳ ಸಹೋದರನಿಗೆ ವರ. ವಸ್ತ್ರ ಅಥವಾ ಆರ್ಥಿಕ ರೂಪದಲ್ಲಿ ಉಡುಗೊರೆ ನೀಡಬೇಕು. ಹೋಮಕ್ಕೆ ಅರಳು ಅರ್ಪಣೆಯ ನಂತರ ಪುರೋಹಿತರು ಸಪ್ತಪದಿಯ ಶಾಸ್ತ್ರವನ್ನು ಮಾಡಿಸುತ್ತಾರೆ.

22.1 ಸಪ್ತಪದಿ, ಪರಿಕಲ್ಪನೆ ಮತ್ತು ವ್ಯಾಖ್ಯೆ :

ಕುಡುಬಿಯರ ಸುಮಾರು 50 ವರ್ಷ ಹಿಂದಿನ ಮದುವೆಗಳಲ್ಲಿ ಸಪ್ತಪದಿಯ ಕ್ರಮವೇ ಇರಲಿಲ್ಲ. ತಮ್ಮದೇ ಆದ ರೂಢಿ ನಿಯಮಗಳಿಗೆ ಅನುಸಾರವಾಗಿ ಮದುವೆಗಳನ್ನು ತಮ್ಮ ಬುಡಕಟ್ಟಿನ ಸಂಪ್ರದಾಯಕ್ಕೆ ತಕ್ಕಂತೆ ಸರಳವಾದ ರೀತಿಯಲ್ಲಿ ಆಚರಿಸುತ್ತಿದ್ದರು. ಯಾವತ್ತು ಮದುವೆಗಳು ಮನೆ ಆವರಣ ದಾಟಿ ನಗರೀಕರಣದ ವೈಭವಗಳನ್ನು ಅನುಕರಿಸಬೇಕಾಯಿತೋ, ಅಂದಿನಿಂದ ಲಾಜಹೋಮ, ಸಪ್ತಪದಿಯಂತಹ ವೈದಿಕ ಆಚರಣೆಗಳು ಇಲ್ಲದ ಮದುವೆ–ಮದುವೆಯೇ ಅಲ್ಲ ಎಂಬಷ್ಟರಮಟ್ಟಿಗೆ ಅವ್ಯಾಹತವಾಗಿ ಈ ವಿಧಿಗಳು ಅನಿವಾರ್ಯವಾಗಿವೆ.

ಇಂದಿನ ಶ್ರೇಣೀಕೃತ ಸಮಾಜ ವ್ಯವಸ್ಥೆಯ ವಿವಾಹ ಸಂಪ್ರದಾಯದಲ್ಲಿ ವಿವಾಹ ಬಂಧನದ ಕುರುಹಾಗಿ ವಧು ಅಗ್ನಿಸಾಕ್ಷಿಯಾಗಿ ಸಪ್ತಪದಿ ತುಳಿಯುವುದು ಒಂದು ಅವಿಭಾಜ್ಯ ಆಚರಣೆ, ಭಾರತೀಯ ವಿವಾಹ ಸಂಪ್ರದಾಯದ ಪ್ರಮುಖ ಅಂಗ.

ಸಪ್ತಪದಿಯ ಅರ್ಥ ಹೀಗೆ ;

1. ಇಷ ಏಕಪದೀ ಭವ : ಅಂದರೆ, ನಮ್ಮ ಜೀವನ ಸಂಪದ್ಭರಿತವಾಗಲಿ. ಈ ಸಂಪತ್ತು ಕೇವಲ ಧನ, ಚಿನ್ನ ಮತ್ತು ಲೌಕಿಕಭೋಗದ ಸುಖ ಮಾತ್ರವಲ್ಲ. ಇದರಿಂದ ಎಲ್ಲಿ ಜಗತ್ತಿಗೆ ಶ್ರೇಯಸ್ಸಾಗಲಿ, ಈ ವಿವಾಹ ಬಂಧನದಿಂದ ನಮಗೆ ಆತ್ಮಾನುಭವ ಸಿಗಲಿ.

2. ಊರ್ಜೆ ದ್ವಿಪದೀ ಭವ : ಜೀವನದಲ್ಲಿ ಉತ್ಸಾಹ ಚಿಮ್ಮಲಿ. ಜೀವನ ಯಾಂತ್ರಿಕ ಕ್ರಿಯೆ ಆಗಿರಬಾರದು. ಅದರಲ್ಲಿ ಅಪರಿಮಿತ ಶಕ್ತಿ ತುಂಬಿರಬೇಕು. ಇಬ್ಬರ ದೇಹ ಮತ್ತು ಮನೋಪಟಲದಲ್ಲಿ ಸಂಸಾರದಲ್ಲಿ ಉತ್ತಮ ಫಲಿತಾಂಶ ಪ್ರಾಪ್ತವಾಗುವ ಶಕ್ತಿ ಇರಬೇಕು. ಸಾಮಾಜಿಕ ಅಭಿವೃದ್ಧಿಗಾಗಿ ಅವರು ಶ್ರಮಿಸಬೇಕು. ರಾಷ್ಟ್ರದ ಸ್ಥಾನವನ್ನು ಉತ್ತಮ ಸ್ಥಿತಿಗೆ ತಲುಪಿಸುವ ಜವಾಬ್ದಾರಿ ಜೀವನ ಪರ್ಯಂತ ಇರಬೇಕು.

3. ರಾಯೋ ಸ್ಪಾಶ್ಯ ತ್ರಿಪದಿ ಭವ : ನಮ್ಮ ಜೀವನ ಒಳ್ಳೆಯ ಮತ್ತು ಸರಿಯಾದ ದಾರಿಯಲ್ಲಿ ಸಾಗಲಿ, ಕೇವಲ ಸಾಂಸಾರಿಕ ಮತ್ತು ಆರ್ಥಿಕ ಅಭಿವೃದ್ಧಿ ಮಾತ್ರವಲ್ಲ. ಮೌಲಿಕ ಮತ್ತು ಆಧ್ಯಾತ್ಮಿಕ ಅಭಿವೃದ್ಧಿಯೂ ಆಗಲಿ, ಅಭಿವೃದ್ಧಿಯ ಹಾದಿ ನ್ಯಾಯವಾಗಿರಲಿ. ಇಂತಹ ಶ್ರೇಯೋಭಿವೃದ್ಧಿಗೆ ರಾಯೋ ಸ್ಪಾಶ್ಯ (ರಾಜಮಾರ್ಗ) ಎಂಬ ಹೆಸರಿದೆ.

4. ಮಯೋ ಭವ್ಯಾಯ ಚತುಷ್ಪದಿ ಭವ : ನಮ್ಮ ಸಾಂಸಾರಿಕ ಜೀವನ ಪ್ರೀತಿಯಿಂದ ಕೂಡಿರಲಿ. ಪ್ರೀತಿ, ಪ್ರೇಮ ಯೌವನಾವಸ್ಥೆಯಲ್ಲಿ ಇರುವುದು ಸಹಜ. ಮಧ್ಯ ವಯಸ್ಸು ಅಥವಾ ಇಳಿವಯಸ್ಸಿನಲ್ಲಿ ಇದು ಕಡಿಮೆಯಾಗುತ್ತದೆ. ಜೀವನ ಪೂರ್ತಿ ಈ ಪ್ರೀತಿ ತುಂಬಿರಲಿ ಎಂಬುದು ತಾತ್ಪರ್ಯ.

5. ಪ್ರಜಾಭ್ಯಾ ಪಂಚಪದಿ ಭವ: ಸಂತಾನ ಪ್ರಾಪ್ತಿ ವಿವಾಹದ ಪ್ರಮುಖ ಉದ್ದೇಶ. ನಮ್ಮ ಸಂಸ್ಕೃತಿ, ಭಾಷೆಗಳ ಮೌಲ್ಯವನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಲು ಸಂತಾನೋತ್ಪತ್ತಿಯಾಗಲಿ.

6. ಋತುಭ್ಯಾ ಷಟ್ಪದಿ ಭವ : ಕಾಲಚಕ್ರ ಪ್ರಕಾರ ಪ್ರಕೃತಿಯಲ್ಲಿ ವ್ಯತ್ಯಾಸಗಳು ಆಗುತ್ತಿರುತ್ತವೆ. ಈ ಕ್ರಿಯೆಯಲ್ಲಿ ಮನುಷ್ಯನ ಪಾಲು ವಿಶಿಷ್ಟವಿರುತ್ತದೆ. ಈ ಕಾರ್ಯದಲ್ಲಿ ಪತಿ-ಪತ್ನಿ ಏಕತ್ರ ಕಾರ್ಯವೆಸಗಬೇಕು.

7. ಸಖೇ ಸಪ್ತಪದೀ ಭವ : ಜೀವನದಲ್ಲಿ ಸಖ್ಯ ಪ್ರಮುಖ ಸ್ಥಾನ ಪಡೆಯುತ್ತದೆ. ಸಾಂಸಾರಿಕ ಜೀವನದಲ್ಲಿ ಪತಿ ಧಣಿಯಲ್ಲ, ಪತ್ನಿ ಸೇವಕಿಯೂ ಅಲ್ಲ. ಇವರಿಬ್ಬರದೂ ಸಮಾನ ಸ್ಥಾನಮಾನ. ಅವರಲ್ಲಿ ಸಹಾನುಭೂತಿ ಮತ್ತು ತಿಳುವಳಿಕೆ ಇರಬೇಕು. (ಡಾ। ಕೆ. ಮೋಹನ್ ಪೈ, ಕೊಡಿಯಾಲ್ ಖಬರ್ ಎಪ್ರಿಲ್ 1-15/2014).

ಹೋಮ ಕುಂಡದ ಉತ್ತರ ಮಗ್ಗುಲಲ್ಲಿ ಪುರೋಹಿತರು ಅಕ್ಷತೆಯ ಸಪ್ತರಾಶಿಗಳನ್ನು ಹಾಕುತ್ತಾರೆ. ಅದರ ಮೇಲೆ ನಾಣ್ಯ ಮತ್ತು ದರ್ಭೆಗಳ ಎಳೆಗಳನ್ನಿರಿಸುತ್ತಾರೆ. ವಿಧಿಗಳು ಜರಗುತ್ತಿದ್ದಂತೆ ವಧುವಿನ ಬಲಗೈಯ ತೋರುಬೆರಳು ಹಿಡಿದು ವರನು ಈ ಅಕ್ಷತಾ ರಾಶಿ ಇರುವಲ್ಲಿ ಕರೆತರುತ್ತಾನೆ. ಪುರೋಹಿತರ ಮಂತ್ರೋಚ್ಚಾರಣೆಯೊಂದಿಗೆ ವಧುವು ಬಲಗಾಲಿನ ಉಂಗುಷ್ಠದಿಂದ ಒಂದೊಂದೇ ರಾಶಿಯನ್ನು ತುಳಿಯುವಂತೆ ವರ ವಧುವನ್ನು ಸಪ್ತಪದಿ ದಾಟಿಸುತ್ತಾನೆ. ನಂತರ ಹೋಮ ಕುಂಡದ ಬಳಿ ಬಂದು ವಧೂವರರಿಬ್ಬರೂ ಹೋಮಾಗ್ನಿಗೆ ಪೂರ್ಣಾಹುತಿ ನೀಡುತ್ತಾರೆ. ವಿವಾಹದ ಪ್ರಮಾಣವಚನ ಸ್ವೀಕರಿಸಿ, ಬ್ರಹ್ಮಾರ್ಪಣೆಯೊಂದಿಗೆ ತೀರ್ಥಪ್ರಸಾದ ಸ್ವೀಕರಿಸುತ್ತಾರೆ. ಲಾಜಹೋಮ ಮಾಡದೇ ಇರುವ ಸಂದರ್ಭದಲ್ಲಿ ಬ್ರಹ್ಮಾರ್ಪಣೆಯ ಕ್ರಮವನ್ನು ಕಂಕಣದಾರ ಕಟ್ಟಿದ ಕೂಡಲೇ ಮುಗಿಸುತ್ತಾರೆ. ಲಾಜಹೋಮ ಮುಗಿಯುತ್ತಿದ್ದಂತೆ ವಧೂವರರಿಗೆ ಸುಮಂಗಲಿಯರು ಆರತಿ ಎತ್ತುತ್ತಾರೆ. ಒಂದು ವೇಳೆ ಲಾಜಹೋಮ ಇಲ್ಲದಿದ್ದಲ್ಲಿ ಈ ಸಂದರ್ಭ ಆರತಿ ಮಾಡುವ ಕ್ರಮ ಕುಡುಬಿಯರಲ್ಲಿ ಇಲ್ಲ. ಮದುವೆಯ ಮುಯ್ಯಿ, ಸೇಸೆ, ಉಡುಗೊರೆ....

ಇಂತಾದ ಎಲ್ಲಾ ಕ್ರಮಗಳು ಮುಗಿದು ವಧೂವರರು ಆಸನ ಬಿಟ್ಟು ಏಳುವ ಮೊದಲು ರತಿ ಮಾಡುವುದು ಕುಡುಬಿಯರ ಸಂಪ್ರದಾಯ.

23. ವಧೂವರ ಬಂಧ (ಸೆರಗು ಶಲ್ಯ ಬಂಧ = ಗಾಟಿಪೊಲ್ರ್) :

ಮುಂದೆ, ವಧೂವರರನ್ನು ಆಸನದಲ್ಲಿ ಕುಳ್ಳಿರಿಸುವ ಸಂದರ್ಭ ಮಂಟಪಕ್ಕೆ ಪ್ರದಕ್ಷಿಣೆ ಬರುವ ಮೊದಲು ವಧೂವರರ 'ಸೆರಗು-ಶಲ್ಯ ಬಂಧ'ವಾಗಬೇಕು. ಮಡಿವಾಳ ರು ಬೆಂಚಿಗೆ ಬಿಳಿ ಮಡಿವಸ್ತ್ರ ಹೊದೆಸಿ ತಯಾರಿಟ್ಟಿದ್ದ ವಧೂವರರ ಆಸನ ಹಿಪ್ರೋ)ವನ್ನು ಮಂಟಪದ ಮಧ್ಯೆ ತಂದಿಡುತ್ತಾರೆ. ಹೋಮ ಕುಂಡದ ಬಳಿ ಕುಳಿತಿದ್ದ ವರನ ಶಲ್ಯದ ತುದಿ ಮತ್ತು ವಧುವಿನ ಸೀರೆ ಸೆರಗಿನ ತುದಿಗಳನ್ನು ವರನ ವಿವಾಹಿತ ಸೋದರಿ ಬ್ರಹ್ಮ ಗಂಟು ಹಾಕಿ ಜೋಡಿಸುತ್ತಾಳೆ. ಇದುವೇ 'ವಧೂ-ವರ ಬಂಧ'.

ವೈವಾಹಿಕ ಬಂಧನ ಜನ್ಮಾಂತರದ ಯೋಗ. ಮುಂದಿನ ಸಾಂಸಾರಿಕ ಜೀವನದಲ್ಲಿ ಇದರ ಬಂಧ ಧೃಡ ಮತ್ತು ಸುಖಶಾಂತಿಯಿಂದ ಕೂಡಿರಬೇಕು. ಜೀವನ ಪರ್ಯಂತ ಗಂಡಹೆಂಡಿರ ಸಹಜೀವನದ ಸಂಬಂಧ ಸ್ಥಿರವಾಗಿರಬೇಕು ಎಂಬ ಅಂತರಾರ್ಥದಲ್ಲಿ ಈ ವಧೂವರ ಬಂಧ ಹಾಕುವ ಸಾಂಕೇತಿಕ ಕ್ರಮ ಆಚರಣೆಯಲ್ಲಿದೆ. ಈ ಬಂಧವು, ನಂತರ ವಧೂವರರ ಗೃಹಪ್ರವೇಶವಾಗಿ, ಸೇಸೆಯಿಂದ ಎಬ್ಬಿಸಿದ ಮೇಲೆ, ಹೊಸ್ತಿಲು ತಡೆದ ವರನ ಸಹೋದರಿ ಬಿಡಿಸುವವರೆಗೆ ಹಾಗೆಯೇ ಇರಬೇಕು. ಹೊಸ್ತಿಲು ತಡೆವ ಶಾಸ್ತ್ರದಲ್ಲಿ ಭಾಗಿಯಾಗುವ ಸಹೋದರಿಯೇ ಈ ಬಂಧವನ್ನು ಹಾಕಬೇಕು.

24. ವಧೂವರರ ಆಸನ ಸ್ವೀಕಾರ :

ವಧೂವರಬಂಧ ಇರುವಂತೆಯೇ ವರನು ವಧುವಿನ ಕೈಹಿಡಿದು, ಎರಡೂ ಕಡೆಯ ಯಜಮಾನ ಯಜಮಾನ್ತಿ, ಗುರಿಕಾರ ರಾಯಭಾರಿ, ಬಲಗೊಡೆಯ ಬಲಗೊಡತಿ, ಸೋದರಮಾವ, ಕಲಶಗಿತ್ತಿ, ಕಲಶಗಾರ.... ಇವರೆಲ್ಲಾ ಮಂಟಪಕ್ಕೆ ಪಂಚಪ್ರದಕ್ಷಿಣೆ ಹಾಕುತ್ತಾರೆ. ಪ್ರದಕ್ಷಿಣೆಯ ವೇಳೆ ವರ, ವಧುವಿನ ಕೈಹಿಡಿದುಕೊಂಡು ಮುಂದೆ ಸಾಗುತ್ತಾನೆ. ಐದು ಪ್ರದಕ್ಷಿಣೆ ಮುಗಿದು ಬಲಗೊಡೆಯ ಬಲಗೊಡತಿಯರು ಸಭೆಗೆ ಕೈಮುಗಿದು 'ಸಮಸ್ತರು ಕೇಳಿ, ವಧೂವರರನ್ನು ಆಸನದಲ್ಲಿ ಕೂರಿಸುತ್ತೇವೆ' ಎಂದು ಹೇಳುತ್ತಾರೆ. ಸಭೆಯ ಒಪ್ಪಿಗೆಯ 'ಹಾಂ ಅನ್ನುತ್ತೇವೆ' ಎಂಬ ಪ್ರತ್ಯುತ್ತರ ಬಂದಾಗ ವಧೂವರರನ್ನು ಆಸನದಲ್ಲಿ ಕೂರಿಸುತ್ತಾರೆ. ಅವರ ಮಗ್ಗುಲುಗಳಲ್ಲಿ ಕ್ರಮವಾಗಿ ಬಲಗೊಡೆಯ ಬಲಗೊಡತಿಯರೂ ಕುಳಿತುಕೊಳ್ಳುತ್ತಾರೆ.

25. ಅಕ್ಷತಾ ಬಟ್ಟಲು (ಸೇಸೆ ಬಟ್ಟಲು) :

ಮಂಟಪದ ಎದುರುಗಡೆ ಪ್ರತ್ಯೇಕ ಚಾಪೆಗಳನ್ನು ಹಾಸಲಾಗಿರುತ್ತದೆ. ಅಕ್ಷತೆಯ ಸೇಸೆ, ಮುಯ್ಯಿ ಮತ್ತು ಉಡುಗೊರೆಗಳ ಅರ್ಪಣೆಯ ಕಾರ್ಯವನ್ನು ನಿರ್ವಹಿಸಿಕೊಡುವುದು ಗುರಿಕಾರ ರಾಯಭಾರಿಯವರ ಕರ್ತವ್ಯ. ವಧುವಿನ ತಂದೆ ತನ್ನ ಹಾಗೂ ಬೀಗರ

ವಾಡೆಗಳ ಗುರಿಕಾರ ರಾಯಭಾರಿಯವರನ್ನು ಗೌರವಪೂರ್ವಕ ಕರೆದು ಹಾಸಿದ ಚಾಪೆಗಳ ಮೇಲೆ ಕೂರಿಸುತ್ತಾನೆ. ಅವರಿಗೆ ತಾಂಬೂಲದ ವ್ಯವಸ್ಥೆಯನ್ನೂ ಮಾಡುತ್ತಾನೆ. ಧಾರೆಗೆ ಉಪಯೋಗಿಸಿದ ಕಾಲುದೀಪಗಳನ್ನು ಮಂಟಪದ ಮಗ್ಗುಲಲ್ಲಿರಿಸುತ್ತಾನೆ.

ವಧೂವರರು ಆಸೀನರಾದ ಮೇಲೆ ಸೇಸೆ ಬಟ್ಟಲು ಇಡಬೇಕು. ಸೇಸೆಗಾಗಿ ಕಂಚಿನ ಬಟ್ಟಲು ಉಪಯೋಗಿಸುತ್ತಾರೆ. ವಧುವಿನ ತಂದೆ ತಲೆಗೆ ರುಮಾಲು ಸುತ್ತಿ ಎರಡು ಕಂಚಿನ ಬಟ್ಟಲುಗಳ ತುಂಬಾ ಕುಚ್ಚಲಕ್ಕಿ ಹಾಕಿ ಅದರ ಮೇಲೆ ಸಿಪ್ಪೆ ಸಹಿತವಾದ ಎರಡು ತೆಂಗಿನಕಾಯಿ ಮತ್ತು ವೀಳ್ಯಪಟ್ಟೆ ಇಟ್ಟು ತರುತ್ತಾನೆ. ಸಭೆಗೆ ಕೈಮುಗಿದು 'ಸಮಸ್ತರು ಕೇಳುವಂಥವರಾಗಿ, ಸೇಸೆ ಬಟ್ಟಲು ಇಡುತ್ತೇನೆ' ಎಂದು ಹೇಳಿ ಮಂಟಪದ ಎದುರು ಮಣೆಗಳ ಮೇಲೆ ಆ ಬಟ್ಟಲುಗಳನ್ನು ಇಡುತ್ತಾನೆ. ಸೇಸೆ ಬಟ್ಟಲು ಇಟ್ಟ ಗೌರವಾರ್ಥ ಅವನು ವಧೂವರರಿಗೆ ಸೇಸೆಯಿಕ್ಕಬೇಕು. ಎರಡೂ ಕಡೆಯ ಪವಿತ್ರ ಕಲಶಗಳನ್ನು ಮಂಟಪದ ಎದುರು ಮೂಲೆಗಳಲ್ಲಿ, ಮಗುಚದಂತೆ ಅಡಿಯಲ್ಲಿ ಸ್ವಲ್ಪ ಅಕ್ಕಿಹಾಕಿ ಸ್ಥಾಪಿಸುತ್ತಾನೆ.

26. ಅಕ್ಷತೆ (ಸೇಸೆ, ಮಂಗಲಾಕ್ಷತೆ) :

ದ್ವಿಪಕ್ಷೀಯ ಗುರಿಕಾರ ರಾಯಭಾರಿಯವರು ಅಕ್ಷತಾ ಸೇಸೆಯ ನಿರ್ವಹಣಾ ಕಾರ್ಯವನ್ನು ಪ್ರಾರಂಭಿಸುತ್ತಾರೆ. ಎರಡೂ ಕಡೆಯ ಈ ಧಾರ್ಮಿಕ ಮುಖಂಡರು ಪಾಲ್ಗೊಳ್ಳುತ್ತಾರಾದರೂ, ಇಲ್ಲಿ ಮುಂದಾಳ್ತನ ವಧುವಿನ ಕಡೆಯ ಗುರಿಕಾರ ರಾಯಭಾರಿಯವರದು. ಅಕ್ಷತೆಯ ಸೇಸೆ ಹಾಕುವುದಕ್ಕೂ ನಿಯಮಿತ ಕ್ರಮವಿದೆ. ವಧೂವರರಿಗೆ ಮಾತ್ರವಲ್ಲ, ಚಪ್ಪರದಲ್ಲಿರುವ ಆಹ್ವಾನಿತ ಸಭಿಕರಿಗೂ ಅಕ್ಷತಾ ಕಾಳು ಬೀಳಬೇಕು. ವಧೂವರರಿಗೆ ಹಾಕಿದ ಅಕ್ಷತೆ ಮಂಟಪಕ್ಕೆ ಹಾಕಿದ ಕೊಡಿವಸ್ತ್ರದ ಅಡಿಭಾಗಕ್ಕೆ (ಕೊಡಿಯಡಿ) ತಾಗಿ ವಧೂವರರ ಶಿರೋಧಾರೆಯಾಗಿ ಬೀಳಬೇಕು. ಸಭಿಕರಿಗೆ ಹಾಕುವ ಅಕ್ಷತೆ ಚಪ್ಪರದ ಅಡಿಭಾಗಕ್ಕೆ ತಾಗಿ ಅವರ ತಲೆಯ ಮೇಲೆ ಬೀಳಬೇಕು. ಆಯಾಯ ನಿಗದಿತ ಗೌರವ ಪ್ರಕಾರ ಅಕ್ಷತೆ ಅರ್ಪಿಸುವ ಗೌರವ ಸುಮಂಗಲೆಯರು ಮತ್ತು ಹೆಮ್ಮಕ್ಕಳದು. ಮಹಿಳೆಯರ ಅನುಪಸ್ಥಿತಿಯಲ್ಲಿ ಮಾತ್ರ ಮನೆಯ ಹಿರಿಯ ವ್ಯಕ್ತಿ ಪುರುಷರು, ಅವಿವಾಹಿತ ಯುವ ವಟುಗಳು ಅಕ್ಷತೆ ಹಾಕಲು ಅವಕಾಶವಿದೆ.

ಸೇಸೆಯ ಗೌರವ ನೀಡುವಾಗಲೂ ಯಾರಿಗೆ ಮೊದಲ ಮರ್ಯಾದೆ ಸಲ್ಲಬೇಕು ಎಂಬುದಕ್ಕೆ ನಿಯಮವಿದೆ. ಮನಸ್ಸಿಗೆ ಬಂದ ಹಾಗೆ ಎಲ್ಲರೂ ಸೇಸೆ ಹಾಕುವಂತಿಲ್ಲ. ಪ್ರಥಮವಾಗಿ ಧಾರೆಯ ವಿಧಿಗಳನ್ನು ನೆರವೇರಿಸಿಕೊಟ್ಟ ಪುರೋಹಿತರಿಗೆ ಗೌರವ ನೀಡಿ ಸೇಸೆ ಹಾಕಿಸುತ್ತಾರೆ. ಆಹ್ವಾನಿತರಲ್ಲಿ ಪುರೋಹಿತರಲ್ಲದೆ ಇತರ ಬ್ರಾಹ್ಮಣರಿದ್ದರೂ ಸೇಸೆಯ ಪ್ರಥಮ ಮರ್ಯಾದೆ ಅವರಿಗೇ ಸಲ್ಲುತ್ತದೆ. ವಿವಾಹ ಕಾರ್ಯದ ಯಜಮಾನ ಗೇಣಿ ಒಕ್ಕಲಾಗಿದ್ದಲ್ಲಿ ಅಥವಾ ಊರಿನಲ್ಲಿ ಜೈನ, ಬಂಟ ಸಮುದಾಯದವರಿಗೆ ಗೌರವ ಸಲ್ಲಿಸುವ ಪರಂಪರೆ ಇರುವಲ್ಲಿ ಪುರೋಹಿತರ ನಂತರ ಅವರಿಗೆ ಅವಕಾಶ ನೀಡಬೇಕು. ಕೊಡಿಯಾಲ್

ಡುಬಿಯರ ಪದ್ಧತಿ ಪ್ರಕಾರ ಹರೇಕಳದ (ಪನಿಯೆಗಳ್) ಗುರಿಕಾರ, ಹನ್ನೆರಡು ಡೆಗಳ ಪ್ರಮುಖ ಕೊಂಪದವನ ಗುರಿಕಾರ. ನಂತರ ಹನ್ನೆರಡು ವಾಡೆಗಳ ಗುರಿಕಾರರಿಗೆ ಬೊಬ್ಬರಿಗೆ ಅಕ್ಷತಾರ್ಪಣೆಗೈಯಲು ಅವಕಾಶ. ಇದರ ನಂತರ ಜೀಗರ ಅಕ್ಷತೆ ಹಾಕಿ, ಕ್ಷತಾರ್ಪಣೆಯ ಜವಾಬ್ದಾರಿಯನ್ನು ಜೀಗರ ಕಡೆಯ ಗುರಿಕಾರ ರಾಯಭಾರಿಯವರಿಗೆ ಹಿಸಿಕೊಡುತ್ತಾರೆ. ಅವರು, ಅವರ ವಾಡೆಯವರಿಗೆ ಮತ್ತು ಆಪ್ತೇಷ್ಟರಿಗೆ ಸರದಿಯ ರವ ಪ್ರಕಾರ ಅಕ್ಷತೆ ಹಾಕಿಸಿ, ಪುನರಪಿ ಅಕ್ಷತಾರ್ಪಣೆಯನ್ನು ವಧುವಿನ ಕಡೆಯವರಿಗೆ ಹಿಸಿಕೊಡುತ್ತಾರೆ. ಈ ರೀತಿ ಸರದಿ ಪ್ರಕಾರ ಅಕ್ಷತೆ ಹಾಕಲು ಆಗದಿದ್ದರೆ ಎರಡೂ ಡೆಯ ಐವರಂತೆ ಸುವಾಸಿನಿಯರಿಂದ ಅಕ್ಷತೆ ಹಾಕಿಸಿ ಸುಧಾರಿಸುವ ಅನುಕೂಲ ಶಾಸ್ತ್ರವೂ ಇದೆ. ಪುನಃ ಅಜ್ಜ-ಅಜ್ಜಿ, ಸೋದರ ಮಾವ- ಸೋದರತ್ತೆ, ಸಹೋದರಿ- ಭಾವ, ಬಲಗೊಡೆಯ- ಬಲಗೊಡತಿಯರಿಗೆ ಸೇಸೆಯ ಗೌರವ ಸಲ್ಲುತ್ತದೆ. ಇಷ್ಟರಲ್ಲಿ ಅಕ್ಷತಾರ್ಪಣೆಯ ಕ್ರಮ ಕೊನೆಗೊಳ್ಳುತ್ತದೆ. ಅಕ್ಷತಾರ್ಪಣೆಯ ಗೌರವ ನೀಡುವ ಸರದಿಯಲ್ಲಿ ಲೋಪವಾದಲ್ಲಿ ಅಥವಾ ಅವಕಾಶಗಳು ಹಿಂದು ಮುಂದಾದಲ್ಲಿ ಭಿನ್ನಾಭಿಪ್ರಾಯಗಳು ಉದ್ಭವಿಸುವುದುಂಟು.

27. ಮುಯ್ಯಿ (ಅಹೇರು), ಉಡುಗೊರೆಗಳು :

ಅಕ್ಷತಾರ್ಪಣೆಯ ಗೌರವ ಸಂದಾದ ಮೇಲೆ 'ಮುಯ್ಯಿ ಬಟ್ಟಲು' ಇಡುವ ಕ್ರಮವಿದೆ. ವಧುವಿನ ತಂದೆ ಐದು ಚಕ್ರ (ಒಂದೂ ಕಾಲು ರೂಪಾಯಿ ನಾಣ್ಯ) ಹಣವನ್ನು ಮಂಟಪದ ನಾಲ್ಕು ಮೂಲೆಗಳಿಗೆ ನಿವಾಳಿಸಿ ತೆಗೆದು ಕಾಲುದೀಪದ ಬುಡದಲ್ಲಿರಿಸುತ್ತಾನೆ. ಒಂದು ಕಂಚಿನ ಬಟ್ಟಲಲ್ಲಿ ಪ್ರತ್ಯೇಕ ಐದು ಚಕ್ರ ನಾಣ್ಯ ಹಾಕಿ ತಂದು ಸಭೆಯನ್ನುದ್ದೇಶಿಸಿ 'ಸಮಸ್ತರು ಕೇಳುವಂಥವರಾಗಿ, ಮುಯ್ಯಿ ಬಟ್ಟಲು ಇಡುತ್ತೇನೆ' ಎಂಬುದಾಗಿ ಕೈಮುಗಿದು ಹೇಳಿ ಸೇಸೆ ಬಟ್ಟಲುಗಳ ಎದುರುಗಡೆ ಮಣೆಯ ಮೇಲೆ ಆ ಬಟ್ಟಲನ್ನಿಡುತ್ತಾನೆ. ಮುಯ್ಯಿ ಬಟ್ಟಲನ್ನಿಟ್ಟು ಅವನು ವಧೂವರರಿಗೆ ಸೇಸೆಯಿಕ್ಕಬೇಕು. ಅಕ್ಷತೆಗೆ ಎರಡು ಬಟ್ಟಲಾದರೆ, ಮುಯ್ಯಿಗೆ ಒಂದೇ, ಅದೂ ಕೂಡಾ ಕಂಚಿನ ಬಟ್ಟಲೇ ಉಪಯೋಗವಾಗುತ್ತದೆ.

ಮುಯ್ಯಿ ಆಗುವಾಗ ವಧುವಿನ ತಂದೆಯನ್ನು ಗುರಿಕಾರ ರಾಯಭಾರಿಯವರು ಕರೆದು ಅವರೊಟ್ಟಿಗೇ ಚಾಪೆಯ ಮೇಲೆ ಕೂರಿಸುತ್ತಾರೆ. ಇದು ಯಾಕೆಂದರೆ – ಮುಯ್ಯಿ ತರುವವರು ಮಹಿಳೆಯರು. ಕುಡುಬಿ ಸಂಪ್ರದಾಯದಲ್ಲಿ ಮಹಿಳೆಯರು ತಮ್ಮ ಗಂಡನ ಹೆಸರು ಉಚ್ಚರಿಸುವುದಿಲ್ಲ. ಮುಯ್ಯಿಯನ್ನು ಪತಿಯ ಹೆಸರಲ್ಲಿ ದಾಖಲಿಸಿಡುವುದು ಕ್ರಮ. ಗುರಿಕಾರ ರಾಯಭಾರಿಯವರಿಗೆ ಈ ಎಲ್ಲಾ ಮಹಿಳೆಯರ ಪರಿಚಯವಿರುವುದಿಲ್ಲ. ಮಧ್ಯಮ ಕಾಲದಲ್ಲಿ ಈಗಿನಂತೆ ಮುಯ್ಯಿ ಹಣವನ್ನು ಕವರಿನಲ್ಲಿ ಹಾಕಿ ಇಡುವ ಕ್ರಮವಿರಲಿಲ್ಲ. ಮುಯ್ಯಿ ನೀಡುವ ಯಜಮಾನನ ಹೆಸರನ್ನು ಸಭೆಗೆ ಕೇಳಿಸುವಂತೆ ಮುಯ್ಯಿಯ ಮೌಲ್ಯವನ್ನು ಘಟ್ಟಿಯಾಗಿ ಉದ್ಘೋಷಿಸಿ ಹೇಳುವುದು ರೂಢಿ. ಗುರಿಕಾರ -ರಾಯಭಾರಿಯವರಿಗೆ

ಮುಯ್ಯಿ ತಂದ ಮಹಿಳೆಯ ಪತಿಯ ಗುರುತು ಪರಿಚಯ ತಿಳಿಸಲು ಯಜಮಾನ ಅವರ ಪಕ್ಕದಲ್ಲಿ ಉಪಸ್ಥಿತನಿರುವುದು ಅವಶ್ಯ. ಈಗ ಹೆಸರು ಹೇಳಿ ಮುಯ್ಯಿ ಇಡುವ ಪದ್ಧತಿ ಅಳಿದು, ಹಣವನ್ನು ಕವರಿನಲ್ಲಿ ಹಾಕಿಯೇ ಇಡುವುದು ವಾಡಿಕೆಯಾಗಿದೆ.

ಮುಯ್ಯಿ ಅಂದರೆ ತೀರಿಸುವಿಕೆ, ಹಿಂದಿರುಗಿಸುವಿಕೆ, ಅಥವಾ ತೀರಿಸಲಿಕ್ಕಿರುವಂಥದು ಎಂಬ ಅರ್ಥ ಬರುತ್ತದೆ. ವಿವಾಹ ಕಾರ್ಯದಲ್ಲಿ ಇದು ಹಣದ ರೂಪದಲ್ಲಿರುತ್ತದೆ. ಕುಡುಬಿ ಉಪಭಾಷೆಯಲ್ಲಿ 'ಗೊವ್ರೊಸ್' ಎಂದು ಬಳಕೆಯಾದ ಕೊಂಕಣಿ ಶಬ್ದವೂ ಇದೇ ಅರ್ಥವನ್ನು ಬಿಂಬಿಸುತ್ತದೆ. ಇಲ್ಲಿ ಮುಯ್ಯಿ ಹೊಸದಾಗಿ ಇಡುವುದೂ ಆಗಿರಬಹುದು ಅಥವಾ ಹಿಂದೆ ಅವರು ಇಟ್ಟ ಮುಯ್ಯಿಗೆ ಸ್ವಲ್ಪ ಹೆಚ್ಚಿಗೆ ಸೇರಿಸಿ ಇಡುವ ಮುಯ್ಯಿಯೂ ಆಗಿರಬಹುದು. ಹೊಸದಾಗಿ ಇಟ್ಟ ಮುಯ್ಯಿ ಮುಂದಕ್ಕೆ ಆತನ ಮನೆಯಲ್ಲಿ ಜರಗಬಹುದಾದ ಮದುವೆ ಸಮಯ ಹಿಂದೆ ಬರುತ್ತದೆ ಎಂಬ ಭರವಸೆಯಿಂದಲೇ ಮುಯ್ಯಿಯನ್ನಿಡುತ್ತಾರೆ. ಮುಯ್ಯಿ ಇಡುವುದರಿಂದ ಆ ಮನೆಯ ಯಜಮಾನನಿಗೆ ತತ್ಕಾಲಕ್ಕೆ ವಿವಾಹ ವೆಚ್ಚವನ್ನು ಸರಿದೂಗಿಸಲು ಆರ್ಥಿಕವಾಗಿ ಸಹಾಯವಾಗುತ್ತದೆ. ಆಮಂತ್ರಣ ನೀಡಿರುವುದಕ್ಕೆ ಗೌರವಾರ್ಥವಾಗಿಯೂ ಮುಯ್ಯಿ ಇಡುವ ಕ್ರಮ ರೂಢಿಗೆ ಬಂದಿದೆ.

ಆಹ್ವಾನಿತರಲ್ಲಿ ಬ್ರಾಹ್ಮಣರು, ಜಾಗದ ಧಣಿಯವರು ಅಥವಾ ಊರಿನ ಗುತ್ತಿನವರು ಇದ್ದಲ್ಲಿ ಮುಯ್ಯಿಯ ಪ್ರಥಮ ಗೌರವ ಅವರಿಗೆ ಸಲ್ಲುತ್ತದೆ. ನಂತರ ಹರೇಕಳ (ಪರಿಯೆಗಳ್) ಕೊಂಪದವು, ಹನ್ನೆರಡೂ ವಾಡೆಗಳಿಗೆ ಒಂದೊಂದು, ಬೀಗರಿಗೆ ಮತ್ತು ಬೀಗರ ಕಡೆಯ ನೆಂಟರಿಗೆ ಗೌರವ ಪ್ರಕಾರ ಮುಯ್ಯಿಗೆ ಅವಕಾಶ ನೀಡಲಾಗುತ್ತದೆ. ತರುವಾಯ ಅಜ್ಜ-ಅಜ್ಜಿ, ಸೋದರ ಮಾವ -ಸೋದರತ್ತೆ, ಭಾವ-ಸಹೋದರಿ, ಬಲಿಗೊಡೆಯ-ಬಲಗೊಡತಿಗೆ ಮುಯ್ಯಿಯ ಗೌರವ ಸಲ್ಲುತ್ತದೆ. ಇವರ ನಂತರ ವಧುವಿನ ಕಡೆಯ, ವಾಡೆಯ ಹೊರಗಿನ ನೆಂಟರಿಷ್ಟರು, ವಾಡೆಯ ಗುರಿಕಾರ, ರಾಯಭಾರಿ, ವಾಡೇಕಾರರು ಮತ್ತು ಹೊರಜಾತಿಯವರಿಗೆ ಸಾರಾಸಗಟಾಗಿ ಗೌರವ ನೀಡಿ ಮುಯ್ಯಿಗೆ ಅವಕಾಶ ನೀಡುತ್ತಾರೆ.

ಮುಯ್ಯಿ ಇಡುವಾಗ ಎರಡು ರೀತಿ ಇದೆ. ಹೆಚ್ಚಿನವರು ಮುಯ್ಯಿಯನ್ನು ಬಟ್ಟಲಲ್ಲಿ ಇಟ್ಟರೆ, ಕೆಲವು ಆಪ್ತರು ವಧೂವರರ ಕೈಯಲ್ಲಿ ಇಡುವುದಿದೆ. ಗುರಿಕಾರ ರಾಯಭಾರಿಯವರು ಇದನ್ನು, ಅಂದರೆ ಮುಯ್ಯಿಯನ್ನು ಕೈಯಲ್ಲಿ ಇಡುವುದಾದಲ್ಲಿ 'ಕೈಯಲ್ಲಿ' ಅಂತ ಸ್ಪಷ್ಟವಾಗಿ ಪ್ರತ್ಯೇಕ ಹೇಳಬೇಕು. ಮುಯ್ಯಿ ಬಟ್ಟಲಲ್ಲಿಟ್ಟ ಹಣ ಯಜಮಾನನ ಲೆಕ್ಕದಲ್ಲಿರುತ್ತದೆ. ಕೈಯಲ್ಲಿಟ್ಟ ಮುಯ್ಯಿ ಹಣವನ್ನು ವಧೂವರರು ಅವರ ಸ್ವಂತಕ್ಕೆ ಇಟ್ಟುಕೊಳ್ಳಬಹುದು. ಮುಯ್ಯಿಯನ್ನು ಗುರಿಕಾರ ಪಡೆದುಕೊಂಡು ಸಭೆಗೆ ತಿಳಿಸಿ ರಾಯಭಾರಿಯ ಕೈಯಲ್ಲಿ ಕೊಡುತ್ತಾನೆ. ರಾಯಭಾರಿಯಿಂದ, ಕೊಟ್ಟವರು ಅದನ್ನು ಹಿಂಪಡೆದು ಮುಯ್ಯಿ ಬಟ್ಟಲಲ್ಲಿಟ್ಟು ವಧೂವರರಿಗೆ ಮತ್ತು ಸಭಿಕರಿಗೂ ಸೇಸೆಯಿಕ್ಕಬೇಕು. ಗುರಿಕಾರ ಉದ್ಘೋಷಿಸಿ ಹೇಳಿದ ಪ್ರಕಾರ ಯಾರಾದರೊಬ್ಬರು ಮುಯ್ಯಿಯ ಲೆಕ್ಕ ಬರೆದು ಪಟ್ಟಿ ಮಾಡಬೇಕು. ಹಿಂದೆಲ್ಲಾ

ಮಹಿಳೆಯರಲ್ಲಿ ವಿದ್ಯಾಭ್ಯಾಸ ಹೊಂದಿದವರು ವಿರಳವಾಗಿದ್ದರು. ಇಂತಹ ಸಂದರ್ಭಗಳಲ್ಲಿ ಮುಯ್ಯಿ ಬರೆದುಕೊಳ್ಳಲೆಂದೇ ವಿದ್ಯಾಭ್ಯಾಸ ಹೊಂದಿದವರೊಬ್ಬರನ್ನು ಆಹ್ವಾನಿಸುತ್ತಿದ್ದರು. ಅವರನ್ನು ವಿಶೇಷ ಗೌರವದಿಂದ ನೋಡಿಕೊಳ್ಳುತ್ತಿದ್ದರು. ಮದುಮಗಳ ಚಪ್ಪರದಲ್ಲಿ ಮುಯ್ಯಿ ಆಗುವಾಗ ವರನ ಕಡೆಯವರಲ್ಲಿಯೂ ಕೆಲವರು ಮದುಮಗಳಿಗೆ ಮುಯ್ಯಿ ಮಾಡುವವರು ಇರುತ್ತಾರೆ. ಕೆಲವರಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿ ಒಬ್ಬರಿಗಿಂತ ಇನ್ನೊಬ್ಬರು ಮೇಲಾಗಬೇಕೆಂದು ಹೆಚ್ಚು ಹೆಚ್ಚು ಮುಯ್ಯಿ ಇಟ್ಟು ತಮ್ಮ ದೌಲತ್ತನ್ನು ಪ್ರಕಟಪಡಿಸುವ ಪ್ರಸಂಗಗಳೂ ಇಲ್ಲದಿಲ್ಲ. ಮಂಗಲಾಕ್ಷತೆಗೆ ಮಹಿಳೆಯರೇ ಬಂದರೂ, ಮುಯ್ಯಿಗೆ ಯುವತಿಯರನ್ನು ಕಳುಹಿಸುತ್ತಾರೆ. ಇದರಿಂದ ಆ ಯುವತಿ ಜನರ ಕಣ್ಣಿಗೆ ಬೀಳುತ್ತಾಳೆ. ಮುಯ್ಯಿ ಉಡುಗೊರೆಗಳನ್ನು ಹೆಸರು ಉದ್ಘೋಷಿಸಿ ಹೇಳುವುದರಿಂದ ಆ ಯುವತಿ ಯಾರ ಮಗಳೆಂಬುದು ನೆರೆದವರಿಗೆ ತಿಳಿಯುತ್ತದೆ. ಅವರ ವಿವರಗಳನ್ನು ಪಡೆದು ಮದುವೆ ಚಪ್ಪರದಲ್ಲೇ ನೆಂಟಸ್ತಿಕೆಗಳು ಕುದುರಿ, ಮದುವೆಯ ಈ ಕ್ರಮ, ಸಂಬಂಧ ಹೊಂದಾಣಿಕೆಯ ವೇದಿಕೆಯಾಗುವ ಅನೇಕ ಉದಾಹರಣೆಗಳಿರುತ್ತವೆ.

ಮುಯ್ಯಿ ಇಡುವಾಗ ಹತ್ತಿರ ಸಂಬಂಧಿಗಳು, ಆಪ್ತರು ವಧೂವರರಿಗೆ ವಸ್ತುರೂಪದಲ್ಲಿ ಉಡುಗೊರೆಗಳನ್ನು ಸಲ್ಲಿಸುವ ಕ್ರಮವಿದೆ. ಉಡುಗೊರೆಗಳು ವಿವಿಧ ರೀತಿಯವುಗಳಿರುತ್ತವೆ. ಚಿನ್ನದ ಉಂಗುರ, ಸರ, ಚೈನ್ ಇತ್ಯಾದಿ ವಸ್ತುಗಳನ್ನು ಸಹೋದರ ಸಹೋದರಿಯರು, ಸೋದರ ಮಾವ ಸೋದರತ್ತೆ, ಬಲಗೊಡತಿ.... ಮುಂತಾದವರು ಉಡುಗೊರೆ ಮಾಡುತ್ತಾರೆ. ವಸ್ತ್ರ, ಸೀರೆ ಹಾಗೂ ಆಧುನಿಕ ನಿತ್ಯೋಪಯೋಗಿ ವಸ್ತುಗಳೂ ಇರುತ್ತವೆ. ಹಿಂದಿನ ಕಾಲದಲ್ಲಿ ಮದುಮಗಳ ಮುಂದಿನ ಜೀವನದಲ್ಲಿ ಉಪಯೋಗಕ್ಕೆ ಬರುವ ಸಂಸಾರಯೋಗ್ಯ, ಉದ್ಯೋಗಯೋಗ್ಯ ವಸ್ತುಗಳ ಉಡುಗೊರೆಗಳನ್ನು ನೀಡುತ್ತಿದ್ದರು. ಇವುಗಳಲ್ಲಿ ಊಟದ ಬಟ್ಟಲು, ತಂಬಿಗೆ, ಕತ್ತಿ, ಮುಟ್ಟಾಳೆ, ಹಗ್ಗ, ಚಿಕ್ಕ ಹೆಡಿಗೆ, ಕುಕ್ಕಲು, ಪಾತ್ರೆ ಪಗಡಿಗಳು ಉಡುಗೊರೆಗಳ ವಸ್ತುಗಳಾಗಿರುತ್ತಿದ್ದವು. ಉಡುಗೊರೆಗಳು ವಧುವಿಗೆ ಮಾತ್ರವಲ್ಲದೆ ವರನಿಗೂ ಇರುತ್ತವೆ. ಗುರಿಕಾರ ರಾಯಭಾರಿಯವರು ಮುಯ್ಯಿ ಸ್ವೀಕರಿಸಿದಂತೆಯೇ ಉಡುಗೊರೆಗಳನ್ನೂ ಪಡೆದು, ಸಭೆಯಲ್ಲಿ ಪ್ರತ್ಯೇಕವಾಗಿ ಹೆಸರು ಹೇಳಿ ಕೊಡಬೇಕು ಮತ್ತು ಬರೆದುಕೊಳ್ಳುವವನು ಅವುಗಳನ್ನು ದಾಖಲಿಸಿಕೊಳ್ಳಬೇಕು.

ಈ ಪ್ರಕಾರ ಮುಯ್ಯಿ ಉಡುಗೊರೆಗಳನ್ನು ನಿರ್ವಹಿಸುವಾಗ ಸಾಕಷ್ಟು ಸಮಯ ತಗಲುತ್ತದೆ. ಎಲ್ಲರ ಮುಯ್ಯಿ ತೀರಿದ ನಂತರ ವಧುವಿನ ತಂದೆ ಮುಯ್ಯಿ ಬಟ್ಟಲು ತೆಗೆಯಬೇಕು. ಅವನು ತಲೆಗೆ ರುಮಾಲು ಸುತ್ತಿ, ಸಭೆಗೆ ವಂದಿಸಿ 'ಸಮಸ್ತರು ಕೇಳಿ, ಮುಯ್ಯಿ ಬಟ್ಟಲು ತೆಗೆಯುತ್ತೇನೆ' ಅಂತ ಹೇಳಿ, ವಧೂವರರಿಗೆ ಸೇಸೆಯಿಕ್ಕಿ, ಮುಯ್ಯಿ ಬಟ್ಟಲು ಎತ್ತಿ, ಕುಳಿತಿರುವ ಗುರಿಕಾರ ರಾಯಭಾರಿಯವರಲ್ಲಿ ಎಣಿಕೆಗಾಗಿ ನೀಡುತ್ತಾನೆ.

28. ಆರತಿ

ಮುಚ್ಚಿ ಬಟ್ಟಲು ತೆಗೆದ ನಂತರ ಎರಡೂ ಕಡೆಯ ಐವರು ಸುಮಂಗಲಿಯರು ಸೇರಿ ವಧೂವರರಿಗೆ ಆರತಿ ಎತ್ತುತ್ತಾರೆ. ಆರತಿ ಮಾಡುತ್ತಿರುವಾಗ ಸಂಪ್ರದಾಯದ ಆರತಿ ಹಾಡನ್ನು ಹಾಡುತ್ತಾರೆ. ಲಾಜಹೋಮದ ಸಂದರ್ಭ ಆರತಿ ಮಾಡಿರುವುದಾದಲ್ಲಿ ಈಗ ಪುನಃ ಆರತಿ ಮಾಡುವ ಅವಶ್ಯಕತೆ ಇರುವುದಿಲ್ಲ. ಆರತಿ ಮಾಡಿದ ಮಹಿಳೆಯರು ವಧೂವರರಿಗೆ ಆರತಿಯ ತಿಲಕವನ್ನಿಟ್ಟು ಸೇಸೆಯಿಕ್ಕುತ್ತಾರೆ.

29. ಪಾಡಿಸೀರೆ :

ವಧುವಿನ ತಂದೆತಾಯಿ ವಧೂವರರಿಗೆ ಪಾಡಿಸೀರೆಯನ್ನು ಉಡುಗೊರೆ ಮಾಡುವ ಕ್ರಮವಿದೆ. ವಧುವಿಗೆ ತವರಿನ ದಿಬ್ಬಣದ ಸೀರೆಯನ್ನು ಉಡುಗೊರೆ ಮಾಡುವ ಕ್ರಮಕ್ಕೆ 'ಪಾಡಿಸೀರೆ' ಅಂತ ಹೆಸರು. ವಧುವಿಗೊಬ್ಬಳಿಗೆ ಮಾತ್ರ ಉಡುಗೊರೆ ಮಾಡುವುದು ವಧೂವರರಲ್ಲಿ ತಾರತಮ್ಯ ಮಾಡಿದಂತಾಗುತ್ತದೆ. ಅದಕ್ಕಾಗಿ ವರನಿಗೂ ಒಂದು ಧೋತಿಯನ್ನು ಇದೇ ಸಂದರ್ಭ ಉಡುಗೊರೆ ಮಾಡಲಾಗುತ್ತದೆ. ಪಾಡಿಸೀರೆ ಉಡುಗೊರೆಯ ಈ ಕ್ರಮ ಧಾರೆಯಾದ ಚಪ್ಪರದಲ್ಲಿ ಮಾತ್ರ ನಡೆಯುತ್ತದೆ. ಮರುಸೇಸೆಯ ಚಪ್ಪರದಲ್ಲಿ ಇದನ್ನು ಜರಗಿಸಲಾಗುವುದಿಲ್ಲ. ಪಾಡಿಸೀರೆಯನ್ನು ವಧುವಿನ ತಾಯಿ ವಧುವಿಗೂ, ಧೋತಿಯನ್ನು ವಧುವಿನ ತಂದೆ ವರನಿಗೂ ಉಡುಗೊರೆ ಮಾಡುತ್ತಾರೆ. ಇದಾದ ಮೇಲೆ ವಧುವಿನ ತಂದೆ ತಲೆಗೆ ರುಮಾಲು ಸುತ್ತಿ 'ಸಮಸ್ತರು ಕೇಳಿ, ಸೇಸೆ ಬಟ್ಟಲು ತೆಗೆಯುತ್ತೇನೆ' ಎಂದು ಸಭೆಗೆ ಕೈಮುಗಿದು ಹೇಳಿ, ವಧೂವರರಿಗೆ ಸೇಸೆಯಿಕ್ಕಿ, ಸೇಸೆ ಬಟ್ಟಲು ತೆಗೆಯುತ್ತಾನೆ.

ಹಿಂದಿನ ಪದ್ಧತಿ ಪ್ರಕಾರ ನವಜೀಗರಿಗೆ – ಅಂದರೆ ಇಲ್ಲಿ ವರನ ತಂದೆತಾಯಿಯರನ್ನು ಮದುವೆ ಕೆಲದಿನಗಳಲ್ಲಿ ಮನೆಗೆ ಕರೆದು ಸಮ್ಮಾನದೂಟ ಹಾಕಿ ವಸ್ತ್ರ ರೂಪದ ಉಡುಗೊರೆ ನೀಡುವ ಕ್ರಮವಿತ್ತು. ಈಗ ಆ ಪದ್ಧತಿ ಬದಲಾವಣೆಯಾಗಿ ಮದುವೆ ಚಪ್ಪರದಲ್ಲೇ ತೀರಿಸುವುದು ರೂಢಿಗೆ ಬಂದಿದೆ. ಸೇಸೆ ಬಟ್ಟಲು ತೆಗೆದಾದ ಮೇಲೆ ವರಪಿತೃಗಳನ್ನು ಇಬ್ಬರನ್ನೂ ಒಟ್ಟಿಗೆ ಕುಳ್ಳಿರಿಸಿ ವರನ ತಾಯಿಗೆ ಸೀರೆ, ತಂದೆಗೆ ಧೋತರ ಉಡುಗೊರೆಯನ್ನು ನೀಡುತ್ತಾರೆ. ಈ ಉಡುಗೊರೆಗಳನ್ನು ಸ್ವತಃ ವಧುವೇ ನೀಡಬೇಕಾದರೂ, ಹೆಚ್ಚಿನ ಸಂದರ್ಭಗಳಲ್ಲಿ ವಧುವಿನ ತಂದೆ ತಾಯಿಯವರೇ ನೀಡುತ್ತಾರೆ.

30. ವಧುವಿನ ಮನೆಯಲ್ಲಿ ಗೃಹಪ್ರವೇಶ (ಹೊಸ್ತಿಲ ಶಾಸ್ತ್ರ) :

ಜೀಗರ ಉಡುಗೊರೆ ಸಂದ ಮೇಲೆ ಬಲಗೊಡೆಯ ಬಲಗೊಡತಿ 'ಸಮಸ್ತರು ಕೇಳಿ ವಧೂವರರನ್ನು ಎಬ್ಬಿಸುತ್ತೇವೆ' ಎಂದು ಸಭೆಗೆ ಕೈಮುಗಿದು ಹೇಳಿ ವಧೂವರರ ಕೈಹಿಡಿದು ಎಬ್ಬಿಸುತ್ತಾರೆ. ವರ, ವಧುವಿನ ಕೈಹಿಡಿದು ಮಂಟಪಕ್ಕೆ ಪಂಚಪ್ರದಕ್ಷಿಣೆ ಹಾಕಬೇಕು. ವರನ ಮುಂದುಗಡೆ ಬಲಗೊಡೆಯ ಹಾಗೂ ವಧುವಿನ ಹಿಂದುಗಡೆ ಬಲಗೊಡತಿ

ರುತ್ತಾರೆ. ಕಲಶಗಾರ ಮತ್ತು ಕಲಶಗಿತ್ತಿ ಕಲಶಗಳನ್ನು ಹಿಡಿದುಕೊಂಡು ಕ್ರಮವಾಗಿ ವರನ್ನು ಹಿಂಬಾಲಿಸುತ್ತಾರೆ.

ವರ, ವಧುವನ್ನು ಕೈಹಿಡಿದು ಮನೆಯ ಮುಖ್ಯ ಬಾಗಿಲ ಬಳಿ ಕರೆತರುತ್ತಾನೆ. ಹೊಸ್ತಿಲ ಎರಡೂ ಮೂಲೆಗಳಲ್ಲಿ ಕುಚ್ಚಲಕ್ಕಿಯ ರಾಶಿಗಳನ್ನು ಹಾಕಲಾಗುತ್ತದೆ. ವಧೂವರರು ಹೊಸ್ತಿಲ ಹೊರಗೆ ಮತ್ತು ವಧುವಿನ ಸಹೋದರ ಹೊಸ್ತಿಲ ಒಳಗಡೆ ನಿಲ್ಲುತ್ತಾರೆ. ವಧು ಮತ್ತು ವಧುವಿನ ಸಹೋದರ ಕೈಯಲ್ಲಿ ವೀಳ್ಯಪಟ್ಟಿ ಹಿಡಿದು ನಿಲ್ಲಬೇಕು. ವಧುವಿನ ಸಹೋದರ ಇಲ್ಲಿ ದಾರಂಧಕ್ಕೆ ಕೈಯಿಟ್ಟು ಅಡ್ಡ ನಿಲ್ಲುವುದಿಲ್ಲವಾದರೂ ವಧುವಿನ ಗೃಹಪ್ರವೇಶದ ಸಂಪ್ರದಾಯದ ಹಾಡನ್ನು ಸುಮಂಗಲಿಯರು ಹಾಡುತ್ತಾರೆ. ಹಾಡು ಮುಗಿದಾಗ ಸಹೋದರನ ಮಗಳನ್ನು ತನ್ನ ಮಗನಿಗೆ ಮದುವೆ ಮಾಡಿ ಕುಟುಂಬ ಸಂಬಂಧ ಮುಂದುವರಿಸುತ್ತೇವೆ ಎಂಬುದಕ್ಕೆ ಸಾಕ್ಷಿಯಾಗಿ ಮದುಮಗಳಾದ ಸಹೋದರಿ ಮತ್ತು ಸಹೋದರರು ತಮ್ಮ ಕೈಯಲ್ಲಿದ್ದ ವೀಳ್ಯಪಟ್ಟಿಗಳನ್ನು ಪರಸ್ಪರ ಐದಾವರ್ತಿ ಕೈ ಬದಲಾಯಿಸುವುದರ ಮೂಲಕ ಸಾಂಕೇತಿಕ ವಾಗ್ದಾನಕ್ಕೆ ಒಳಗಾಗುತ್ತಾರೆ. ಮದುಮಗಳು ಹೊಸ್ತಿಲ ಎಡಮೂಲೆಯಲ್ಲಿದ್ದ ಅಕ್ಕಿರಾಶಿಯನ್ನು ಹೊರಗೆ ಮತ್ತು ವರ ಬಲಮೂಲೆಯ ಅಕ್ಕಿರಾಶಿಯನ್ನು ಒಳಗೆ, ಒಂದೇ ವೇಳೆಯಲ್ಲಿ ಚೆಲ್ಲಿ ವಧೂವರರು ಮನೆ ಪ್ರವೇಶಿಸುತ್ತಾರೆ. ಆದರೆ, ವಧುವಿನ ಮನೆಯಲ್ಲಿ ವಧುವನ್ನು ಮನೆತುಂಬಿಸುವ ಈ ಪದ್ಧತಿಯನ್ನು ಕೆಲವು ವಾಡೆಗಳಲ್ಲಿ ಮತ್ತು ಸಂದರ್ಭಗಳಲ್ಲಿ ಉಪೇಕ್ಷಿಸಿರುವುದರಿಂದ, ಈಗಿನ ಪೀಳಿಗೆಯವರಿಗೆ ಇದರ ಮಾಹಿತಿ ಇಲ್ಲ.

ಪ್ರವೇಶಗೈದ ವಧೂವರರಿಗೆ ಸೇಸೆಯ ಸಂಪ್ರದಾಯವಿದೆ. ಇದನ್ನೂ ಕೆಲವು ವಾಡೆಗಳಲ್ಲಿ ಪಾಲಿಸುತ್ತಾರೆ. ಕೆಲವು ವಾಡೆಗಳಲ್ಲಿ ಇದರ ವಿಡ್ಡಾಯ ಅನುಷ್ಠಾನ ಕಂಡುಬರುವುದಿಲ್ಲ. ಮನೆಯೊಳಗೆ ಅಕ್ಕಪಕ್ಕ ಒಂದೊಂದು ಸೇರು ಅಕ್ಕಿರಾಶಿ ಹಾಕಿ, ಅದರ ಮೇಲೆ ಚಾಪೆ ಹರಡಿ, ಆ ರಾಶಿಗಳ ಮೇಲೆ ಪೂರ್ವಾಭಿಮುಖವಾಗಿ ವಧೂವರರನ್ನು ಕೂರಿಸುತ್ತಾರೆ. ವಧುವಿನ ತಂದೆ ಸೇಸೆ ಬಟ್ಟಲು ಇಡುತ್ತಾನೆ. ಪಂಚಸುಮಂಗಲಿಯರು ಸೇಸೆಯಿಕ್ಕುತ್ತಾರೆ. ವಧೂವರರಿಗೆ ಹಾಲು ಮತ್ತು ಬಾಳೆಹಣ್ಣನ್ನು ತಿನ್ನಲು ಕೊಡುತ್ತಾರೆ. ವರ ಅವುಗಳನ್ನು ಎಂಜಲು ಮಾಡಿಕೊಟ್ಟ ಅರ್ಧಭಾಗವನ್ನು ವಧುವು ತಿನ್ನಬೇಕು. ಮುಂದಿನ ದಾಂಪತ್ಯ ಸಮಪಾಲು – ಸಮಬಾಳು ಎಂಬುದು ಈ ಆಚರಣೆಯ ಅಂತರಾರ್ಥ. ವಧೂವರರನ್ನು ಎಬ್ಬಿಸಿದ ನಂತರ, ಲಾಜಹೋಮದ ಸಂದರ್ಭ ಹಾಕಿದ ಸೆರಗು–ಶಲ್ಯ ಬಂಧವನ್ನು ವರನ ಸಹೋದರಿ ಬಿಡಿಸುತ್ತಾಳೆ. ಆ ನಂತರ ವಧೂವರರು ಮನೆಯಿಂದ ಹೊರಬರಬಹುದು. ವಧೂವರರು ಕುಳಿತ ಅಡಿರಾಶಿ ಅಕ್ಕಿಯನ್ನು ವಧುವಿನ ತಾಯಿ ಅಳೆಯಬೇಕು. ಅಳೆಯುವಾಗ ಯಾರ ಅಡಿರಾಶಿ ಅಕ್ಕಿ ಜಾಸ್ತಿ ಬರುವುದೋ, ಅವರು ಅದೃಷ್ಟವಂತರೆಂಬ ಲೆಕ್ಕಾಚಾರವಿದೆ.

ವಧೂವರರು ಮಂಟಪದಿಂದ ನಿರ್ಗಮಿಸಿದಾಗ, ಚೆಲ್ಲಿರುವ ಸೇಸೆ ಅಕ್ಕಿಯನ್ನು ಮಡಿವಾಳ ರಾಶಿ ಮಾಡುತ್ತಾನೆ. ಅಕ್ಕಿ ರಾಶಿ ಮಾಡುವಾಗ ಅವನು ಹಿಡಿಯನ್ನು (ಪೊರಕೆ) ಉಪಯೋಗಿಸುವಂತಿಲ್ಲ. ಬಟ್ಟೆಯ ತುಂಡಿನಿಂದ ಅಥವಾ ಬಾಳೆ ಎಲೆಯಿಂದ ಆಯು ವಧೂವರರ ಆಸನಕ್ಕೆ ಮುಚ್ಚಿದ್ದ ವಸ್ತ್ರದಲ್ಲಿ ಮಂಟಪಕ್ಕೆ ಕಟ್ಟಿಡುತ್ತಾನೆ. ಈ ಸೇಸೆ ಅಕ್ಕಿ ಮಡಿವಾಳನಿಗೆ ಮಂಟಪಕ್ಕೆ ಕೊಡಿಬಟ್ಟೆ ಹಾಕಿರುವುದಕ್ಕೆ ಮತ್ತು ವಧೂವರರಿಗೆ ಆಸನ ತಯಾರಿಸಿರುವುದಕ್ಕೆ ಸಲ್ಲುವ ಗೌರವ.

ಮದುಮಕ್ಕಳು ಮನೆಯಿಂದ ಹೊರಬರುವಾಗ ಮುಯ್ಯಿಯ ಲೆಕ್ಕ ಮುಗಿದಿರುತ್ತದೆ ಗುರಿಕಾರ ಮುಯ್ಯಿ ಬಟ್ಟಲಿನ, ಕೈಯಲ್ಲಿನ ಮತ್ತು ಉಡುಗೊರೆಗಳ ಲೆಕ್ಕವನ್ನು ಮೊಬಲಗು ಸಹಿತ ವಧುವಿನ ತಂದೆಗೆ ಹಸ್ತಾಂತರಿಸುತ್ತಾನೆ. ವಧುವಿನ ಕಡೆಯಲ್ಲಿ ಮದುವೆ ಕಾರ್ಯದಲ್ಲಿ ಕಷ್ಟಪಟ್ಟವರಿಗೆ, ಸಹಕಾರ ನೀಡಿದವರಿಗೆ, ಜವಾಬ್ದಾರಿ ನಿರ್ವಹಿಸಿದ ಆಪ್ತೇಷ್ಟರಿಗೆ ಮತ್ತು ಬಲಗೊಡತಿಗೆ ವಸ್ತ್ರರೂಪದ ಉಡುಗೊರೆ ನೀಡಿ ಆಶೀರ್ವಾದ ಪಡೆಯುತ್ತಾಳೆ. ಈ ಉಡುಗೊರೆಗಳನ್ನು ಅರಸಿನ ಶಾಸ್ತ್ರದ ರಾತ್ರಿಯೂ ಕೊಡುವ ಕ್ರಮವಿದೆ. ಉಡುಗೊರೆ ಪಡೆಯಲು ಗೈರುಹಾಜರಾದವರಿಗೆ ಉಡುಗೊರೆಗಳನ್ನು ಕಳುಹಿಸಿಕೊಡುವ ವಾಡಿಕೆಯೂ ಇದೆ. ಅಭಿಪ್ರಾಯ ಭೇದವಿರುವವರು ಉದ್ದೇಶಪೂರ್ವಕ ತಪ್ಪಿಸಿಕೊಂಡು ಉಡುಗೊರೆ ಪಡೆಯಲು ಬರದಿರುವ ಸಂದರ್ಭಗಳೂ ಇರುತ್ತವೆ.

31. ಮದುವೆ ಔತಣ :

ಉಡುಗೊರೆ ವಿತರಣೆಯ ನಂತರ ವಧುವಿನ ತಂದೆ ಮದುವೆ ಔತಣಕ್ಕೆ ನೀರಿಡುತ್ತಾನೆ. ಎರಡು ತಂಬಿಗೆ ನೀರು ತಂದು, ತಲೆಗೆ ರುಮಾಲು ಸುತ್ತಿ ಪೂರ್ವಾಭಿಮುಖವಾಗಿ ನಿಂತು, ಸಭೆಗೆ ಕೈಮುಗಿದು 'ಸಮಸ್ತ ನೆಂಟರಿಷ್ಟರು ಊಟಕ್ಕೆ ಏಳಬೇಕು' ಎಂದು ಹೇಳುತ್ತಾನೆ. ಪಂಕ್ತಿಗಳಲ್ಲಿ ಕುಳ್ಳಿರಿಸಿ ಕುಡಿಬಾಳೆ ಎಲೆಗಳಲ್ಲಿ ಬಡಿಸುತ್ತಾರೆ ಪ್ರಥಮ ಪಂಗ್ತಿಯಲ್ಲಿ ಜೀಗರ ಕಡೆಯವರನ್ನೇ ಕುಳ್ಳಿರಿಸುತ್ತಾರೆ. ವಧೂವರರು ಮತ್ತು ಬಲಗೊಡೆಯ ಬಲಗೊಡತಿಯರೂ ಪ್ರಥಮ ಪಂಗ್ತಿಯಲ್ಲೇ ಕುಳಿತಿರಬೇಕು. ಆದರೆ ವಧೂವರರು ಒಂದೇ ಪಂಗ್ತಿಯಲ್ಲಿ ಒಟ್ಟಿಗೆ ಕುಳಿತುಕೊಳ್ಳುವಂತಿಲ್ಲ. ವರ ಮತ್ತು ಬಲಗೊಡೆಯರನ್ನು ಸಂಪ್ರದಾಯ ಪ್ರಕಾರ ಮಂಟಪದ ಬಾಳೆಗಿಡಗಳ ಬುಡಗಳನ್ನು ಒಟ್ಟು ಮಾಡಿ, ಅದರ ಎದುರು ಮಣೆಗಳ ಮೇಲೆ ಕೂರಿಸುತ್ತಾರೆ. ಮದುಮಗಳನ್ನು ಪ್ರತ್ಯೇಕ ಪಂಗ್ತಿಯಲ್ಲಿ ಬಲಗೊಡತಿಯೊಂದಿಗೆ ಕೂರಿಸಲಾಗುವುದು. ವಧೂವರರು ನಾಗೋಲಿಯಾಗಿ ಕಂಕಣದಾರ ವಿಸರ್ಜನೆಯವರೆಗೆ ಕುಚ್ಚಲಕ್ಕಿ ಅನ್ನ ಊಟ ಮಾಡುವಂತಿಲ್ಲ ಅವರು ಪಾಯಸ ಸೇವಿಸಬಹುದು ಅಥವಾ ಉಪವಾಸ ವ್ರತದಲ್ಲಿರಬೇಕು.

ಮದುವೆ ಔತಣದ ಅಡುಗೆ ತಯಾರಿಸಲು ವಾದೇಕಾರರೇ ಬಾಣಸಿಗರಿರುತ್ತಾರೆ ಸಮಾರಂಭದ ಅಡುಗೆಯನ್ನು ಹೆಚ್ಚಾಗಿ ತಯಾರು ಮಾಡುವವರು ಪುರುಷರು. ಕುಟುಂಬ

ತ್ತು ವಾಡೆಯ ಪುರುಷ ಮಹಿಳೆಯರೆಲ್ಲಾ ಅಡುಗೆಗೆ ಸಹಕಾರ ನೀಡುತ್ತಾರೆ. ಹೊರೆಯುವರೂ ಇವರೊಂದಿಗೆ ಕೈಜೋಡಿಸುತ್ತಾರೆ. ವಾಡೆಯ ಮತ್ತು ಹತ್ತುಸಮಸ್ತರಿಗೆ ಿದ ಅಡುಗೆಯ ಪಾತ್ರೆಗಳು ವಾಡೆಯ ಗುರಿಕಾರರಲ್ಲಿರುತ್ತವೆ. ಪಾತ್ರೆಗಳನ್ನು ಮತ್ತು ಡುಗೆ ಸಾಮಗ್ರಿಗಳನ್ನು ತಿಂಗಳ ಮುಂಚಿತವಾಗಿ ತಯಾರು ಮಾಡಿಡುತ್ತಾರೆ. ಊಟದ ಗಳಲ್ಲಿ ಮುಖ್ಯವಾಗಿ ಕುಚ್ಚಲಕ್ಕಿ ಅನ್ನ, ಪಲ್ಯ,ಸಾರು, ಸಾಂಬಾರು, ಉಪ್ಪಿನಕಾಯಿ, ಡ... ಮುಂತಾದವುಗಳಿರುತ್ತವೆ. ಸಾಮಾನ್ಯವಾಗಿ ಹೆಸರುಬೇಳೆಯ ಪಾಯಸ ಮಾಡುತ್ತಾರೆ. ಂದೆಲ್ಲಾ ಮದುವೆ ಊಟದಲ್ಲಿ ಸಿಹಿ ವಸ್ತು ಅಂದರೆ ಪಾಯಸ ಮಾತ್ರ. ಪಾಯಸದ ಲೆ ಸಾಕು ಬೇಕಾಗುವಷ್ಟು ಜೇನುತುಪ್ಪ ಬಡಿಸುತ್ತಿದ್ದರು. ಈಗಿನಂತೆ ಲಾಡು ಹೋಳಿಗೆ ಜಿಲೇಬಿ ಮುಂತಾದ ಸಿಹಿತಿಂಡಿಗಳನ್ನು ಮಾಡುವ ವಾಡಿಕೆ ಇರಲಿಲ್ಲ. ವ್ಯಂಜನಗಳಲ್ಲಿ ಬಿನ ಗಡ್ಡೆ, ಸೌತೆಕಾಯಿ, ಬದಿಹಲಸಿನ ಗುಜ್ಜೆ, ತೊಂಡೆಕಾಯಿ, ಕುಂಬಳ, ಚೀನಿಕಾಯಿಗಳು ಬಳಕೆಯಾಗುತ್ತಿದ್ದವು. ಮದುವೆ ಔತಣಕ್ಕೆ ಶಾಕಾಹಾರಿ ಅಡುಗೆ ಮಾತ್ರ ತಯಾರು ಮಾಡಲಾಗುತ್ತದೆ.

ಊಟದ ಪಂಗ್ತಿಗಳಲ್ಲಿ ಯಾರು ಹೆಚ್ಚು ಊಟ ಮಾಡುತ್ತಾರೆ, ಯಾರು ಹೆಚ್ಚು ಪಾಯಸ ಸೇವಿಸುತ್ತಾರೆ, ಯಾರು ಮೊದಲು ಊಟ ಮುಗಿಸುತ್ತಾರೆ, ಯಾರು ಎಲೆಯಲ್ಲಿ ಉಳಿಸುವುದಿಲ್ಲ ಎಂಬ ವಿಷಯಗಳಲ್ಲಿ ಸ್ಪರ್ಧೆ ಏರ್ಪಡುತ್ತಿತ್ತು. ಪಾಯಸದೂಟದಲ್ಲಿ ಯಾರು ಹೆಚ್ಚು ಜೇನು ಹಾಕಿಸಿಕೊಳ್ಳುತ್ತಾರೆ ಎಂಬ ವಿಷಯದಲ್ಲಿಯೂ ಸ್ಪರ್ಧೆ ಇರುತ್ತಿತ್ತು. ಈ ಪಂಥಾಟದಲ್ಲಿ ಕೆಲವು ಬಾರಿ ಊಟ ಕಡಿಮೆ ಬೀಳುವ ಸಂದರ್ಭಗಳೂ ಇದ್ದವು. ಕೆಲವು ಬಾರಿ ಯಜಮಾನನನ್ನು ಸೋಲಿಸಬೇಕೆಂಬ ದುರಾಲೋಚನೆಯಿಂದ, ಬರಬಹುದಾದ ಜನಸಂಖ್ಯೆಯನ್ನು ಕಡಿಮೆ ಲೆಕ್ಕ ಹೇಳಿ–ದಿಬ್ಬಣದೊಂದಿಗೆ ಜಾಸ್ತಿ ಜನ ಹೋಗಿ–ಈ ರೀತಿಯ ಅಡ್ಡದಾರಿಗಳಲ್ಲಿ ಕೃತಕವಾಗಿ ಊಟ ಕಡಿಮೆ ಆಗುವಂತೆ ಮಾಡುವುದೂ ಇತ್ತು. ಇಂತಹ ವಿಘ್ನಸಂತೋಷಿ ಕುಕೃತ್ಯಗಳ ಪೂರ್ವ ಸೂಚನೆ ಸಿಕ್ಕಿದ ಯಜಮಾನ ಲೆಕ್ಕಕ್ಕಿಂತ ಹೆಚ್ಚು ಅಡುಗೆ ತಯಾರಿಸಿ, ಕೊನೆಗೆ ಉಳಿದಿರುವುದನ್ನು ಹಳ್ಳಕ್ಕೆ ಚೆಲ್ಲಿದ ಮತ್ತು ಮಾಡಿದ ಅಡುಗೆ ಸಾಲದೆ ಮಗದೊಮ್ಮೆ ಅಡುಗೆ ಮಾಡಿ ಬಡಿಸಿದ ದೃಷ್ಟಾಂತಗಳು ಕೇಳಲು ಸಿಗುತ್ತವೆ. ಊಟದ ಕಾರಣದಿಂದ ಬೀಗ–ಬೀಗರ ನಡುವೆ, ವಾಡೆ–ವಾಡೆಗಳ ಮಧ್ಯೆ ವೈಮನಸ್ಯಗಳಾದ ದಾಖಲೆಗಳಿವೆ. ಮದುವೆ ಊಟದ ಆಹ್ವಾನ ಇದ್ದರೂ ಇರದಿದ್ದರೂ, ಹಿಂದೆ ಕೊರಗ ಮತ್ತು ಹೊಲೆಗೇರಿಯ ಹೊಲೆಯ ಮುಂತಾದ ದಲಿತ ಸಮುದಾಯದವರು ಬರುವುದು ಸಾಮಾನ್ಯವಾಗಿತ್ತು. ಅವರಿಗೂ ಪ್ರತ್ಯೇಕ ಮದುವೆ ಊಟವನ್ನು ನೀಡಲಾಗುತ್ತಿತ್ತು.

32. ಮರುದಿಬ್ಬಣ :

ಊಟ ಮುಗಿಸಿದ ಬೀಗರಾದಿಯಾಗಿ ಎಲ್ಲರಿಗೆ ಕವಳದ ಸರಬರಾಜು ಧಾರಾಳವಿರುತ್ತದೆ. ಇಷ್ಟರಲ್ಲಿ ವರನ ಕಡೆಯವರು ಹೊರಡಲನುವಾಗುತ್ತಾರೆ. ವರನ

ಮನೆಯಲ್ಲಿ ಅದೇ ದಿನ ಮರುಸೇಸೆಯಾಗಬೇಕು. ಅಲ್ಲಿ ಆ ರಾತ್ರಿ ನಾಗೋಲೆ ಶಾಸ್ತ್ರವಿದೆ. ನಾಗೋಲೆ ಆಗಿ ಕಂಕಣದಾರ ವಿಸರ್ಜಿಸುವಲ್ಲಿವರೆಗೆ ವಧೂವರರು ಉಪವಾಸ ವ್ರತದಲ್ಲಿರುತ್ತಾರೆ. ಆದುದರಿಂದ ವರನ ಮರುಸೇಸೆಯನ್ನು ಅದೇ ದಿನ ಪೂರೈಸಬೇಕು. ಮಧ್ಯಾಹ್ನಕ್ಕೆ ಮೊದಲು ಧಾರೆ ಆದರೆ ಮಧ್ಯಾಹ್ನ ನಂತರ ವರನ ಮರುಸೇಸೆಗೆ ಹಿಂದಿರುಗುತ್ತಾರೆ. ಗೋಧೂಳಿ ಲಗ್ನವಾದಲ್ಲಿ ಮಾತ್ರ ವರ ಆವತ್ತು ರಾತ್ರಿ ವಧುವಿನ ಮನೆಯಲ್ಲೇ ತಂಗಬೇಕು. ಈ ರೀತಿ ರಾತ್ರಿ ತಂಗುವುದಾದಲ್ಲಿ ವರನ ಮರುಸೇಸೆ ಮರುದಿನ ಹಗಲಲ್ಲಿ ಇರುತ್ತದೆ.

ವರನ ಕಡೆಯವರು ಹೊರಡುವಾಗ ವರನ ತಂದೆ, ಗುರಿಕಾರ, ರಾಯಭಾರಿ ಮತ್ತು ಅವರ ಕಡೆಯವರೆಲ್ಲರೂ ವಧುವಿನ ಕಡೆಯವರಿಗೆ 'ಹೋಗಿ ಬರುತ್ತೇವೆ' ಎಂದು ಕೈಮುಗಿಯುತ್ತಾರೆ. ವಧುವಿನ ಕಡೆಯವರು 'ದೇವರ ಇಚ್ಛೆ' ಎಂಬುದಾಗಿ ಪ್ರತಿವಂದಿಸುತ್ತಾರೆ. ವಧೂವರರ ದಿಬ್ಬಣ, ವರನ ಕಡೆಯ ಮತ್ತು ವಧುವಿನ ಕಡೆಯ ನೆಂಟರಿಷ್ಟರ ಸಮೇತ, ಬ್ಯಾಂಡುವಾಲಗ ಹಾಗೂ ಗರ್ನಾಲುಗಳ ಗೌಜಿಯೊಂದಿಗೆ ವರನ ಮನೆಗೆ ಬರುತ್ತಾರೆ. ಬರುವಾಗ ವಧುವಿನ ಕಡೆಯವರು ಮದುಮಗಳು ಅರಸಿನ ಶಾಸ್ತ್ರಕ್ಕೆ ಉಪಯೋಗಿಸಿದ್ದ ಜಾಗಿನ, ತವರಿನ ದಿಬ್ಬಣದ ಸೀರೆ ಮತ್ತು ಕಲಶವನ್ನು ತಪ್ಪದೆ ತಂದಿರಬೇಕು.

33. ಮರುಸೇಸೆ :

ದಿಬ್ಬಣಿಗ ಜೀಗರನ್ನು ಮತ್ತು ಇತರರನ್ನು ಕೈಮುಗಿದು, ಕಾಲು ತೊಳೆಯಲು ನೀರುಕೊಟ್ಟು ವರನ ತಂದೆ ಆದರದಿಂದ ಸ್ವಾಗತಿಸುತ್ತಾನೆ. ವರನ ತಾಯಿ ಬಲಗೈಯಲ್ಲಿ ಕಂಚಿನ ಬಟ್ಟಲಲ್ಲಿ ಅರಸಿನ ನೀರು, ಎಡಗೈಯಲ್ಲಿ ಮುಷ್ಟಿ ಗಂಜಿ ಹಿಡಿದುಕೊಂಡು ವಧೂವರರಿಬ್ಬರಿಗೂ ಒಟ್ಟಿಗೆ ಬಳು ಎತ್ತಿ ನಿವಾಳಿಸಿ ತೆಗೆದು ತೆಂಗಿನ ಮರದ ಬುಡಕ್ಕೆ ಎರೆಯುತ್ತಾಳೆ. ವಧೂವರರಿಬ್ಬರೂ ದಿಬ್ಬಣ ಸಹಿತ ತೋರಣ ಮೂಲಕ ಚಪ್ಪರ ಪ್ರವೇಶಿಸುತ್ತಾರೆ. ಚಪ್ಪರಕ್ಕೆ ಬಂದ ತಕ್ಷಣ ವಧೂವರರು ಮನೆ ಪ್ರವೇಶಿಸುವುದು ಶಾಸ್ತ್ರೀಯವಲ್ಲ. ಅವರು ಚಪ್ಪರದಲ್ಲಿ ಸಭಿಕರೊಂದಿಗೆ ಕುಳಿತಿರಬೇಕು. ಆಗಮಿಸಿದ ದಿಬ್ಬಣಿಗರನ್ನು ಚಾಪೆಹಾಸಿ ಕುಳ್ಳಿರಿಸುತ್ತಾರೆ. ಅವರಿಗೆ ಬೆಲ್ಲ, ನೀರು, ಪಾನಕ, ಫಲಾಹಾರ ಮತ್ತು ಕವಳ ನೀಡಿ ಸತ್ಕರಿಸುತ್ತಾರೆ.

ವರನ ಚಪ್ಪರದಲ್ಲಿಯೂ ನಾಲ್ಕು ಬಾಳೆಗಿಡಗಳ, ಮೇಲ್ಗಡೆ ಆಧಾರಕ್ಕಾಗಿ ಮೊಲದ ಬಲೆಗೆ ಊರುವ ಸೀಮೆಕೋಲುಗಳನ್ನು ಕಟ್ಟಿ, ಮಾವಿನೆಲೆಗಳ ತೋರಣದಿಂದ ಅಲಂಕರಿಸಿದ ಮಂಟಪವನ್ನು ಹಾಕಿರುತ್ತಾರೆ. ಆದರೆ ಧಾರೆಯ ಮಂಟಪಕ್ಕೆ ಹಾಕಿದಂತೆ ಮೇಲಕ್ಕೆ ಬಿಳಿವಸ್ತ್ರದ ಮೇಲ್ಕಟ್ಟು, ಬುಡದಲ್ಲಿ ಅಕ್ಕಿಹಿಟ್ಟಿನ ರಂಗೋಲಿ ಹಾಕಿರುವುದಿಲ್ಲ. ಈ ವಿಧಾನ ಧಾರೆ ಆಗುವಲ್ಲಿನ ಮಂಟಪಕ್ಕೆ ಮಾತ್ರ ಅವಶ್ಯ. ವಧೂವರರ ಆಸನವನ್ನೂ

ಮಡಿವಾಳನೇ ಬಿಳಿಬಟ್ಟೆ ಹೊದೆಸಿ ತಯಾರು ಮಾಡಬೇಕಾಗಿಲ್ಲ. ಅದನ್ನು ಇತರರೂ ಮಾಡಬಹುದು. ಧಾರೆ ವರನ ಮನೆಯಲ್ಲಿ ಆಗುವುದಾದಲ್ಲಿ ಮಾತ್ರ ಇದನ್ನೆಲ್ಲಾ ಮಡಿವಾಳನೇ ಮಾಡಬೇಕು. ಆವಾಗ ವರನ ಕಡೆಯವರು ಮಡಿವಾಳನನ್ನು ಕರೆಯಬೇಕಾಗುತ್ತದೆ. ಧಾರೆ ವಧುವಿನ ಮನೆಯಲ್ಲಿ ಆಗುವುದಾದಲ್ಲಿ ಮಡಿವಾಳನ ನೇಮಕದ ಜವಾಬ್ದಾರಿ ಹುಡುಗಿ ಕಡೆಯವರದು.

ಮುಂದಿನ ಕಾರ್ಯಕ್ರಮ ವಧೂವರರನ್ನು ಮಂಟಪದಲ್ಲಿ ಕುಳ್ಳಿರಿಸುವುದು. ವರನ ವಿವಾಹಿತ ಸಹೋದರಿ ವಧುವಿನ ಸೀರೆ ಸೆರಗು ಮತ್ತು ವರನ ಶಲ್ಯದ ತುದಿಗಳನ್ನು ಒಟ್ಟಿಗೆ ಜೋಡಿಸಿ ವಧೂವರ ಬಂಧದ ಗಂಟು ಹಾಕುತ್ತಾಳೆ. ವಧುವಿನ ಕೈಹಿಡಿದು ವರ ಮಂಟಪಕ್ಕೆ ಪಂಚಪ್ರದಕ್ಷಿಣೆ ಬರುತ್ತಾನೆ. ಬಲಗೊಡೆಯ, ಬಲಗೊಡತಿ, ಕಲಶಗಾರ, ಕಲಶಗಿತ್ತಿ ಅವರನ್ನು ಅನುಸರಿಸುತ್ತಾರೆ. ಬಲಗೊಡೆಯ ಬಲಗೊಡತಿಯರು ಸಭೆಗೆ ವಂದಿಸಿ 'ಸಮಸ್ತರು ಕೇಳುವಂಥವರಾಗಿ, ವಧೂವರರನ್ನು ಕುಳ್ಳಿರಿಸುತ್ತೇವೆ' ಅಂತ ಹೇಳಿ ಅವರನ್ನು ಮಂಟಪದಲ್ಲಿರುವ ಆಸನದಲ್ಲಿ ಕೂರಿಸುತ್ತಾರೆ.

33.1 ಸೇಸೆ :

ಯಜಮಾನ ಮಂಟಪದ ಎದುರುಗಡೆ ಚಾಪೆಗಳನ್ನು ಹಾಸಿ ತನ್ನ ಹಾಗೂ ಬೀಗರ ವಾಡೆಯ ಗುರಿಕಾರ ರಾಯಭಾರಿಯವರನ್ನು ಕರೆದು ಸೇಸೆ, ಮುಯ್ಯಿ ಹಾಗೂ ಉಡುಗೊರೆಗಳ ಕಾರ್ಯಗಳನ್ನು ನಿರ್ವಹಿಸಲಿಕ್ಕಾಗಿ ಕುಳ್ಳಿರಿಸುತ್ತಾನೆ. ಹಲವು ಸಲ, ಒಂದೇ ವಾಡೆಯೊಳಗಿನವರೊಂದಿಗೆ ನೆಂಟಸ್ತಿಕೆಗಳು ಏರ್ಪಟ್ಟಿರುತ್ತವೆ. ಇಂತಹ ಸಂದರ್ಭಗಳಲ್ಲಿ ಅದೇ ವಾಡೆಯ ಗುರಿಕಾರ ರಾಯಭಾರಿಯವರು ವಧೂವರರ ಎರಡೂ ಚಪ್ಪರಗಳಲ್ಲಿ ಈ ಸೇಸೆ, ಮುಯ್ಯಿಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ.

ವರನ ತಂದೆ ತಲೆಗೆ ರುಮಾಲು ಸುತ್ತಿ, ಎರಡು ಕಂಚಿನ ಬಟ್ಟಲುಗಳ ತುಂಬಾ ಕುಚ್ಚಲಕ್ಕಿ ಹಾಕಿ, ಮೇಲ್ಗಡೆ ಸಿಪ್ಪೆ ಸಹಿತವಾದ ತೆಂಗಿನಕಾಯಿ ಮತ್ತು ವೀಳ್ಯಪಟ್ಟಿ ಇಟ್ಟು ತರುತ್ತಾನೆ. ಸಭೆಯನ್ನು ಉದ್ದೇಶಿಸಿ 'ಸಮಸ್ತರು ಕೇಳಿ, ಸೇಸೆ ಬಟ್ಟಲು ಇಡುತ್ತೇನೆ' ಎಂಬುದಾಗಿ ಕೈಮುಗಿದು ಹೇಳಿ, ಮಂಟಪದ ಎದುರು ಎರಡು ಮಣೆಗಳ ಮೇಲೆ ಇಟ್ಟು ವಧೂವರರಿಗೆ ಸೇಸೆಯಿಕ್ಕುತ್ತಾನೆ. ಎರಡೂ ಕಡೆಯ ಮೃತ್ತಿಕ ಕಲಶಗಳನ್ನು ಪಡೆದು ಮಂಟಪದ ಎದುರುಗಡೆ, ಅಡಿಗೆ ಸ್ವಲ್ಪ ಅಕ್ಕಿಹಾಕಿ ಇಡುತ್ತಾನೆ. ಕಾಲುದೀಪವನ್ನೂ ಹಚ್ಚಿ ಮಂಟಪದ ಎದುರು ಇಡುತ್ತಾನೆ.

ಬ್ರಾಹ್ಮಣರು ಮತ್ತು ಜಾಗದ ಧಣಿಯವರು ಉಪಸ್ಥಿತರಿದ್ದಲ್ಲಿ ಗುರಿಕಾರ ರಾಯಭಾರಿಯವರು ಸೇಸೆ ಹಾಕಲು ಅವರಿಗೆ ಪ್ರಥಮ ಅವಕಾಶ ನೀಡುತ್ತಾರೆ. ನಂತರ ಕ್ರಮಪ್ರಕಾರ ಹರೇಕಳ, ಹನ್ನೆರಡು ವಾಡೆಯ ಪ್ರಮುಖ ಕೊಂಪದವು ಗುರಿಕಾರ, ಹನ್ನೆರಡೂ ವಾಡೆಯ ಗುರಿಕಾರರಿಗೆ ಮತ್ತು ಬೀಗರಿಗೆ, ಒಬ್ಬೊಬ್ಬರಂತೆ ಸೇಸೆಯ ಗೌರವ ನೀಡಲಾಗುತ್ತದೆ.

ನಂತರ ಸೇಸೆಯ ಜವಾಬ್ದಾರಿಯನ್ನು ಜೀಗರಿಗೆ ಬಿಟ್ಟು ಕೊಡಲಾಗುತ್ತದೆ. ಜೀಗರು ಅವರ ವಾಡೆಯ ಶಿಷ್ಟಾಚಾರ ಪ್ರಕಾರ ಆದ್ಯತೆಯವರಿಗೆ ಸೇಸೆಯನ್ನು ಹಾಕಲು ಅವಕಾಶ ನೀಡುತ್ತಾರೆ. ನೀಡಿದ ಗೌರವ ಸ್ವೀಕರಿಸುವವರು ಇಲ್ಲದಿದ್ದಲ್ಲಿ ಪ್ರಾತಿನಿಧಿಕವಾಗಿ ತಮ್ಮ ಕಡೆಯ ಐವರಿಂದ ಸೇಸೆ ಹಾಕಿಸುತ್ತಾರೆ. ಪುನಃ ವರನ ಕಡೆಯಿಂದ ಅಜ್ಜ ಅಜ್ಜಿ, ಸೋದರ ಮಾವ ಸೋದರತ್ತೆ, ಭಾವ ಸಹೋದರಿ, ಬಲಗೊಡೆಯ ಬಲಗೊಡತಿಯರು ಸೇಸೆ ಪೂರೈಸಿ ಸೇಸೆಯ ಕಾರ್ಯಕ್ರಮ ಕೊನೆಗೊಳಿಸುತ್ತಾರೆ.

33.2 ಮುಯ್ಯಿ / ಉಡುಗೊರೆಗಳು :

ಸೇಸೆ ಮುಗಿದ ಮೇಲೆ ವರನ ತಂದೆ ಒಂದೂ ಕಾಲು ರೂಪಾಯಿ ನಾಣ್ಯವನ್ನು ಮಂಟಪಕ್ಕೆ ನಿವಾಳಿಸಿ ತೆಗೆದು ದೀಪದ ಬುಡದಲ್ಲಿರಿಸುತ್ತಾನೆ. ಕಂಚಿನ ಬಟ್ಟಲಲ್ಲಿ ಒಂದೂ ಕಾಲು ರೂಪಾಯಿ ನಾಣ್ಯ ಹಾಕಿ ತಂದು, ತಲೆಗೆ ರುಮಾಲು ಸುತ್ತಿ, ಸಭೆಗೆ ವಂದಿಸಿ 'ಸಮಸ್ತರೆಲ್ಲಾ ಕೇಳಿ, ಮುಯ್ಯಿ ಬಟ್ಟಲಿಡುತ್ತೇನೆ' ಎಂದು ಹೇಳಿ ಸೇಸೆ ಬಟ್ಟಲುಗಳ ಎದುರು ಮಣೆಯ ಮೇಲೆ ಅದನ್ನು ಇಡುತ್ತಾನೆ. ಮುಯ್ಯಿ ಉಡುಗೊರೆ ನೀಡುವವರ ಗುರುತು ಪರಿಚಯ ಹೇಳಲು ಗುರಿಕಾರ ರಾಯಭಾರಿಯವರೊಂದಿಗೆ ಕುಳಿತುಕೊಳ್ಳುತ್ತಾನೆ.

ಇಲ್ಲಿಯೂ ಮುಯ್ಯಿ ಉಡುಗೊರೆಗಳನ್ನಿಡಲು ಕ್ರಮವಿದೆ. ಮುಯ್ಯಿ ಉಡುಗೊರೆ ಮಾಡುವವರ ಹೆಸರನ್ನು ಗುರಿಕಾರ ಸಭೆಗೆ ಕೇಳಿಸುವಂತೆ ದೊಡ್ಡ ಸ್ವರದಲ್ಲಿ ಕರೆದು ಹೇಳಬೇಕು. ಗುರಿಕಾರ ಮುಯ್ಯಿ ಉಡುಗೊರೆಗಳನ್ನು ಪಡೆದು ರಾಯಭಾರಿಯಲ್ಲಿ ಕೊಡಬೇಕು. ನೀಡಿದವರು ಅವುಗಳನ್ನು ರಾಯಭಾರಿಯಿಂದ ಪಡೆದು ಮುಯ್ಯಿ ಬಟ್ಟಲಲ್ಲಿ ಅಥವಾ ವಧೂವರರ ಕೈಯಲ್ಲಿ ಇಟ್ಟು ಸೇಸೆಯಿಕ್ಕಬೇಕು. ವಧೂವರರ ಕೈಯಲ್ಲಿ ಇಡುವ ಮುಯ್ಯಿ ಉಡುಗೊರೆಗಳನ್ನು ಪ್ರತ್ಯೇಕವಾಗಿ ಘೋಷಿಸಬೇಕು. ಮಂಟಪ ವರನದಾದರೂ, ವಧುವಿಗೂ ಮುಯ್ಯಿ ಮಾಡುವವರು ಇರುವುದರಿಂದ ಅದನ್ನು ಮದುಮಗಳ ಕೈಯಲ್ಲಿಯೇ ನೀಡಬೇಕಾಗುತ್ತದೆ. ವಿದ್ಯಾಭ್ಯಾಸವಿರುವ ಯಾರಾದರೊಬ್ಬ ಇದನ್ನು ದಾಖಲಿಸಿಕೊಳ್ಳಬೇಕು

ಬ್ರಾಹ್ಮಣರು ಮತ್ತು ಜಾಗದ ಧಣಿಯವರಿದ್ದಲ್ಲಿ ಅವರಿಗೆ ಮುಯ್ಯಿಯ ಪ್ರಥಮ ಮರ್ಯಾದೆ ಸಲ್ಲುತ್ತದೆ. ನಂತರ ಪರೇಕಳ, ಕೊಂಪದವ್ರು, ಹನ್ನೆರಡು ವಾಡೆಗಳ ಒಪ್ಪೊಟ್ಟರಿಗೆ ಜೀಗರಿಗೆ ಹಾಗೂ ಜೀಗರ ಗುರಿಕಾರ ರಾಯಭಾರಿಯವರ ಸರದಿಯ ಆದ್ಯತೆಯ ಮೇರೆಗೆ ಮುಯ್ಯಿಯ ಅವಕಾಶ ನೀಡಲಾಗುತ್ತದೆ. ಅಜ್ಜ, ಅಜ್ಜಿ, ಸೋದರ ಮಾವ ಸೋದರತ್ತೆ, ಭಾವ ಸಹೋದರಿ, ಬಲಗೊಡೆಯ ಬಲಗೊಡತಿ, ವಾಡೆಯ ಹೊರಗಿನ ನೆಂಟರಿಷ್ಟರು, ವಾಡೆಯ ಗುರಿಕಾರ ರಾಯಭಾರಿ ಮತ್ತು ವಾಡೆಕಾರರು ಮುಯ್ಯಿ ಮಾಡುತ್ತಾರೆ.

ಮುಯ್ಯಿಯೊಂದಿಗೆ ಆಪ್ತೇಷ್ಟರು ಉಡುಗೊರೆಗಳನ್ನು ಇಲ್ಲಿಯೂ ಇಡುವ ಕ್ರಮವಿದೆ. ರನಿಗೆ ಬಲಗೊಡೆಯ, ಸೋದರ ಮಾವ ಸೋದರತ್ತೆ, ಸಹೋದರ ಸಹೋದರಿಯರು ಸ್ವಿದ ಬಿಡವೆಗಳು, ವಸ್ತ್ರ ಹಾಗೂ ಸಂಸಾರಯೋಗ್ಯ ವಸ್ತುರೂಪದ ಉಡುಗೊರೆಗಳನ್ನು ನಾಡುತ್ತಾರೆ. ಈ ಹಿಂದೆ ವರ ಇಟ್ಟಿರುವ ಉಡುಗೊರೆಗಳು ಇದ್ದಲ್ಲಿ ಈ ಸಂದರ್ಭ ಂದಿರುಗಿಸುತ್ತಾರೆ. ಇಲ್ಲಿ ವಧುವಿಗೂ ಉಡುಗೊರೆ ಮಾಡುವವರಿದ್ದಾರೆ. ಗುರಿಕಾರ ುಯಭಾರಿಯವರು ಅವುಗಳನ್ನು ಪಡೆದುಕೊಂಡು ಉಡುಗೊರೆಗಳು ವರನಿಗೋ, ಧುವಿಗೋ ? ಎಂದು ಸ್ಪಷ್ಟವಾಗಿ ಹೇಳಿ ಕೊಡಬೇಕು.

ಮುಯ್ಯಿ ಉಡುಗೊರೆಗಳು ತೀರಿದ ನಂತರ ವರನ ತಂದೆ ರುಮಾಲು ಸುತ್ತಿ ಭೆಗೆ ವಂದಿಸಿ 'ಸಮಸ್ತರು ಕೇಳಿ, ಮುಯ್ಯಿ ಬಟ್ಟಲು ತೆಗೆಯುತ್ತೇನೆ' ಎಂದು ಹೇಳಿ ಧೂವರರಿಗೆ ಸೇಸೆಯಿಕ್ಕಿ ಮುಯ್ಯಿ ಬಟ್ಟಲು ತೆಗೆದು ಎಣಿಕೆಗಾಗಿ ಗುರಿಕಾರ ಾಯಭಾರಿಯವರಲ್ಲಿ ಕೊಡುತ್ತಾನೆ. ಇಲ್ಲಿ ವರನಿಗೆ ಆಗುವುದು ಮರುಸೇಸೆಯಾದುದರಿಂದ ರತಿ ಎತ್ತುವ ಅವಶ್ಯಕತೆ ಇಲ್ಲ. ಆದರೆ ಕೆಲವು ಕಡೆ ವಧೂವರರನ್ನು ಮಂಟಪದಲ್ಲಿ ೇಸೆಗೆ ಕುಳ್ಳಿರಿಸಿದ ಗೌರವಾರ್ಥವಾಗಿ ಆರತಿ ಮಾಡುವ ಕ್ರಮವಿದೆ. ನಂತರ ವರನ ಂದೆ ಮುಯ್ಯಿ ಬಟ್ಟಲು ತೆಗೆದ ಕ್ರಮದಲ್ಲೇ ಸಭೆಗೆ ವಂದಿಸಿ 'ಸೇಸೆ ಬಟ್ಟಲು ತೆಗೆಯುತ್ತೇನೆ' ಂಬುದಾಗಿ ಹೇಳಿ, ಸೇಸೆಯಿಕ್ಕಿ, ಸೇಸೆ ಬಟ್ಟಲು ತೆಗೆಯುತ್ತಾನೆ.

ಇಲ್ಲಿಯೂ ಬೀಗರಿಗೆ– ಅಂದರೆ ವಧುವಿನ ಮಾತಾಪಿತರಿಗೆ ವರನ ತಂದೆತಾಯಿ ವಸ್ತ್ರ ಉಡುಗೊರೆ ಮಾಡುವ ಕ್ರಮವಿದೆ. ವರನೇ ನೀಡಬೇಕಾದ ಈ ಉಡುಗೊರೆ ಈಗ ವರನ ತಂದೆತಾಯಿ ನೀಡುವ ಸಂಪ್ರದಾಯವಾಗಿ ಬದಲಾಗಿದೆ. ಹಿಂದಿನ ಕಾಲದಲ್ಲಿ ಮದುವೆಯ ನಂತರ ಒಂದು ದಿನ ಅಳಿಯ, ಅತ್ತೆ ಮಾವಂದಿರನ್ನು ಕರೆದು ಸಮ್ಮಾನದೂಟ ಹಾಕಿ ನೀಡುವ ಉಡುಗೊರೆ ಈಗ ಮದುವೆ ಚಪ್ಪರದಲ್ಲಿ ವರನ ತಂದೆ ತಾಯಿಯರು ನೀಡುತ್ತಾರೆ. ಸೇಸೆ ಬಟ್ಟಲು ತೆಗೆದಾದ ಮೇಲೆ ಮದುಮಗಳ ತಂದೆ ತಾಯಿಯರನ್ನು ಒಟ್ಟಿಗೆ ಕೂರಿಸಿ, ವರನ ತಂದೆ ವಧುವಿನ ತಂದೆಗೆ ಧೋತರ, ವರನ ತಾಯಿ ವಧುವಿನ ತಾಯಿಗೆ ಸೀರೆಯನ್ನು ಉಡುಗೊರೆ ಮಾಡುತ್ತಾರೆ. ಆ ನಂತರ ಬಲಗೊಡೆಯ ಬಲಗೊಡತಿ ಸಭೆಗೆ ವಂದಿಸಿ 'ಸಮಸ್ತರು ಕೇಳಿ, ವಧೂವರರನ್ನು ಎಬ್ಬಿಸುತ್ತೇವೆ' ಎಂದು ಹೇಳಿ ಎಬ್ಬಿಸುತ್ತಾರೆ. ವಧುವಿನ ಕೈ ಹಿಡಿದುಕೊಂಡ ವರ, ಬಲಗೊಡೆಯ ಬಲಗೊಡತಿ, ಕಲಶಗಾರ ಕಲಶಗಿತ್ತಿಯರು ಹಿಂದಿನಿಂದ ಬರುತ್ತಿದ್ದಂತೆ ಮಂಟಪಕ್ಕೆ ಪಂಚಪ್ರದಕ್ಷಿಣೆ ಹಾಕುತ್ತಾರೆ.

33.3. ವರನ ಮನೆಯಲ್ಲಿ ಗೃಹಪ್ರವೇಶ (ಹೊಸ್ತಿಲ ಶಾಸ್ತ್ರ) :

ಮಂಟಪದಿಂದ ಎದ್ದ ಮೇಲೆ ವಧೂವರರ ಗೃಹಪ್ರವೇಶವಾಗಬೇಕು. ಸೆರಗು ಶಲ್ಯ ಬಂಧ ಸಹಿತರಾದ ಅವರು ನೇರವಾಗಿ ಮನೆಯ ಮುಖ್ಯಬಾಗಿಲ ಬಳಿ ಬರುತ್ತಾರೆ.

ಅಲ್ಲಿಗೆ ತಲುಪುವಲ್ಲಿವರೆಗೂ ವಧುವಿನ ಕೈಯನ್ನು ವರ ಹಿಡಿದುಕೊಂಡಿರಬೇಕು. ಬಾಗಿಲ ಹೊಸ್ತಿಲಲ್ಲಿ ಎರಡೂ ಮೂಲೆಗಳಲ್ಲಿ ಕುಚ್ಚಲಕ್ಕಿಯ ರಾಶಿ ಹಾಕಿರುತ್ತಾರೆ. ವಧೂವರರು ಹೊಸ್ತಿಲ ಹೊರಗೆ, ವರನ ವಿವಾಹಿತ ಸಹೋದರಿ ಒಳಗಿನಿಂದ ದ್ವಾರಂಧಕ್ಕೆ ಎರಡೂ ಕೈಗಳನ್ನು ಅಡ್ಡ ಇಟ್ಟು ಬಾಗಿಲು ತಡೆದು ನಿಂತಿರುತ್ತಾಳೆ. ಇದಕ್ಕೆ 'ದೆರ್ಲ್ ಧರ್ಸ್ಂ' ಎಂತ ಹೆಸರು. ಸಹೋದರ ಸಹೋದರಿಯರ ಕೈಯಲ್ಲಿ ವೀಳ್ಯ ಪಟ್ಟಿಗಳಿರುತ್ತವೆ. ಈ ಸಂದರ್ಭ ಸುಮಂಗಲಿಯರು, ಸಹೋದರಿ ಹೊಸ್ತಿಲು ತಡೆಯುವ, ಸಹೋದರ ಸಹೋದರಿ ವೀಳ್ಯಪಟ್ಟಿ ಬದಲಾಯಿಸುವ ಸಂಪ್ರದಾಯದ ಹಾಡನ್ನು ಹಾಡುತ್ತಾರೆ.

ಕುಡುಬಿ ಸಮಾಜದ ಮದುವೆ ಸಂಪ್ರದಾಯದಲ್ಲಿ ವಧುವಿನೊಂದಿಗೆ ಸಹೋದರ ಮನೆ ಪ್ರವೇಶಿಸಲು ಬಾಗಿಲ ಹತ್ತಿರ ಬಂದಾಗ ಸಹೋದರಿ ಬಾಗಿಲಿಗೆ ಅಡ್ಡ ನಿಂತು ತಡೆಯುವ ಇದೊಂದು ವಿಶೇಷ ಸಂಪ್ರದಾಯ. ಕಾರಣವಿಷ್ಟೆ– ಸಹೋದರನಿಗೆ ಮುಂದೆ ಜನಿಸುವ ಮಗಳನ್ನು ತನ್ನ ಮಗನಿಗೆ ಮದುವೆ ಮಾಡಿಕೊಡಬೇಕೆಂಬುದು ಸಹೋದರಿಯ ಕೋರಿಕೆ. ವರನು ತನಗೆ ಜನಿಸಬಹುದಾದ ಮಗಳನ್ನು ಸಹೋದರಿಯ ಮಗನಿಗೆ ಮದುವೆ ಮಾಡಿಕೊಟ್ಟು ಸಹೋದರ ಮತ್ತು ಸಹೋದರಿಯ ಸಂಬಂಧವನ್ನು ಶಾಶ್ವತವಾಗಿ ಉಳಿಸುವ ವ್ಯವಸ್ಥೆಯ ಸಾಂಕೇತಿಕ ಆಚರಣೆ. ಹಾಡಿನ ಪ್ರಕಾರ ಬಾಗಿಲು ತಡೆದ ತನ್ನ ಒಡಹುಟ್ಟಿದ ಸಹೋದರಿಗೆ ಯಾವ ಯಾವ ಮೌಲ್ಯಯುತ ವಸ್ತುಗಳು, ಆಸ್ತಿಬದುಕು, ಒಡವೆಗಳನ್ನು ಕೊಡುತ್ತೇನೆಂದರೂ, ಅವೆಲ್ಲಾ ತನಗೆ ತೃಣಕ್ಕೆ ಸಮಾನ ಎಂಬಂತೆ ನಿರಾಕರಿಸಿ ಬಾಗಿಲು ತಡೆದಿರುವುದನ್ನು ಬಿಡುವುದಿಲ್ಲ. ಕೊನೆಗೆ, ಸಹೋದರನ ಮಗಳನ್ನು ತನ್ನ ಮಗನಿಗೆ ವಿವಾಹ ಮಾಡಿಕೊಡಲು ಬೇಡಿಕೆ ಇಡುತ್ತಾಳೆ. ಇದಕ್ಕೆ ಸಹೋದರ ಒಪ್ಪುತ್ತಾನೆ. ಸಹೋದರಿ ಬಾಗಿಲಡ್ಡವನ್ನು ಬಿಟ್ಟು, ತಮ್ಮೊಳಗೆ ಆದ ಒಪ್ಪಂದಕ್ಕೆ ಸಾಕ್ಷಿಯಾಗಿ ಇಬ್ಬರೂ ತಮ್ಮ ಕೈಯಲ್ಲಿದ್ದ ವೀಳ್ಯಪಟ್ಟಿಗಳನ್ನು ಒಬ್ಬರಿಗೊಬ್ಬರು ಐದಾವರ್ತಿ ಬದಲಾಯಿಸುತ್ತಾರೆ. ವರ ಹೊಸ್ತಿಲ ಬಲಮೂಲೆಯಲ್ಲಿದ್ದ ಅಕ್ಕಿರಾಶಿಯನ್ನು ಎಡಗಾಲಿಂದ ಹೊರಗೆ ಮತ್ತು ವಧು ಎಡಮೂಲೆಯ ಅಕ್ಕಿರಾಶಿಯನ್ನು ಬಲಗಾಲಿಂದ ಹೊಸ್ತಿಲ ಒಳಗೆ ಏಕಕಾಲದಲ್ಲಿ ಚೆಲ್ಲಿ ವಧೂವರರಿಬ್ಬರೂ ಹೊಸ್ತಿಲು ದಾಟಿ ಮನೆಯೊಳಗೆ ಸರಿಯುತ್ತಾರೆ.

ಒಳಗೆ ಹೋದ ವಧೂವರರಿಗೆ ಗೃಹಪ್ರವೇಶದ ಸೇಸೆಯಾಗಬೇಕು. ಮನೆಯೊಳಗೆ ಪೂರ್ವಾಭಿಮುಖವಾಗಿ ಕುಳಿತುಕೊಳ್ಳುವಂತೆ ಹತ್ತಿರ ಹತ್ತಿರ ಎರಡು ಸೇರು ಅಕ್ಕಿಯ ಎರಡು ಪ್ರತ್ಯೇಕ ರಾಶಿ ಹಾಕುತ್ತಾರೆ. ಅದರ ಮೇಲೆ ಚಾಪೆ ಹಾಸಿ ವಧೂವರರನ್ನು ಬಲಗೊಡೆಯ ಬಲಗೊಡತಿಯರು ಯಥಾ ಸಂಪ್ರದಾಯ ಪ್ರಕಾರ ಕುಳ್ಳಿರಿಸುತ್ತಾರೆ. ವರನ ತಂದೆ ಕಂಚಿನ ಬಟ್ಟಲತುಂಬಾ ಕುಚ್ಚಲಕ್ಕಿ, ಅದರ ಮೇಲೆ ತೆಂಗಿನಕಾಯಿ, ವೀಳ್ಯಪಟ್ಟಿ ಇಟ್ಟು ತಂದು ಸೇಸೆ ಬಟ್ಟಲು ಇಡುತ್ತಾನೆ. ಪಂಚಸುಮಂಗಲಿಯರು ಸೇಸೆಯಿಕ್ಕುತ್ತಾರೆ. ಕೆಲವು ವಾಡೆಗಳಲ್ಲಿ ಈ ಸೇಸೆ ಬಟ್ಟಲನ್ನು ಯಜಮಾನನ ಬದಲು ಯಜಮಾನ್ತಿ ಇಡುವ ಕ್ರಮವಿದೆ.

ಇಲ್ಲಿ ವಧುವಿನ ಈವರೆಗಿನ ಹೆಸರನ್ನು ಬದಲಾಯಿಸಿ ಮರುನಾಮಕರಣ ಮಾಡುವ ಕಾರ್ಯಕ್ರಮವಿದೆ. ಕುಡುಬಿ ಸಂಪ್ರದಾಯದಲ್ಲಿ ಪತ್ನಿ ತನ್ನ ಪತಿಯ, ಪತಿಯ ಹಿರಿಯ ಸೋದರನ, ಮಾವನ ಮತ್ತು ಹಿರಿಯ ಪುರುಷರ ಹೆಸರನ್ನು ತಪ್ಪಿಯೂ ಉಚ್ಚರಿಸುವುದಿಲ್ಲ. ಇದರಿಂದ ಕುಟುಂಬದ ಎಲ್ಲಾ ಮಹಿಳೆಯರಿಗೆ ಸಂಬೋಧನೆಗೆ ಅನುಕೂಲವಾಗುವ ಹೆಸರನ್ನು ಮದುಮಗಳಿಗೆ ಇಡುತ್ತಾರೆ.

ಮರುನಾಮಕರಣ ಮಾಡಿ ವಧೂವರರಿಗೆ ಹಾಲು ಮತ್ತು ಬಾಳೆಹಣ್ಣುಗಳನ್ನು ಕುಡಿಯಲು ತಿನ್ನಲು ಕೊಡುತ್ತಾರೆ. ವರ ಅದನ್ನು ಎಂಜಲು ಮಾಡಿ ವಧುವಿಗೆ ಕೊಡಬೇಕು ಮತ್ತು ವಧು ಅದನ್ನು ತಿನ್ನಬೇಕು. ಮುಂದಿನ ಜೀವನ ಈರ್ವರಿಗೂ ಸಮಪಾಲು-ಬಾಳು ಎಂಬುದು ಇದರ ಆಶಯ. ಆ ನಂತರ ಯಜಮಾನ ಸೇಸೆ ಬಟ್ಟಲು ಕೊಡುತ್ತಾನೆ. ವಧೂವರರನ್ನು ಬಲಿಗೊಡೆಯ ಬಲಿಗೊಡತಿ ಎಬ್ಬಿಸುತ್ತಾರೆ. ವಧೂವರರು ಸೇಸೆ ಅಡಿಯಕ್ಕಿಯನ್ನು ವರನ ತಾಯಿ ಸೆರಗಿನಲ್ಲಿ ಹಾಕಿ ಅಳೆಯುತ್ತಾಳೆ. ಅಳೆದಾಗ ಯಾರ ಅಡಿಯ ಅಕ್ಕಿ ಹೆಚ್ಚು ಬರುತ್ತದೆಯೋ ಅವರು ಭಾಗ್ಯಶಾಲಿ ಎಂಬ ನಂಬಿಕೆ ಇದೆ. ವರನ ಸಹೋದರಿ ವಧೂವರ ಬಂಧವನ್ನು ಬಿಡಿಸುತ್ತಾಳೆ. ಈ ವಧೂವರ ಬಂಧ ಬಿಡಿಸುವಾಗ ತನ್ನ ಪತಿಯ ಹೆಸರನ್ನು ನೇರವಾಗಿ ಹೇಳದೆ, ಆದರೆ ಪರೋಕ್ಷ ರೀತಿಯಲ್ಲಿ ಹೇಳಿ, ಆತನ ಹೆಸರಲ್ಲಿ ವಧೂವರ ಬಂಧವನ್ನು ಬಿಡಿಸುತ್ತೇನೆ ಎಂದು ಸಹೋದರಿ ಹೇಳಬೇಕು- ಈ ಸಂಪ್ರದಾಯ ಹಿಂದೆ ಕೆಲವು ವಾಡೆಗಳಲ್ಲಿ ಚಾಲ್ತಿಯಲ್ಲಿತ್ತು. ನಂತರ ವಧೂವರರು ಸ್ವತಂತ್ರವಾಗಿ ಎಲ್ಲರೊಂದಿಗೆ ಬೆರೆಯಬಹುದು.

ಇಷ್ಟಾಗುವಾಗ ಗುರಿಕಾರ ರಾಯಭಾರಿಯವರು ಮುಯ್ಯಿಯ ಲೆಕ್ಕವನ್ನು ವರನ ಕೈಯಲ್ಲಿ ನೀಡುತ್ತಾರೆ. ವರ, ಮದುವೆಯಲ್ಲಿ ಸಹಕಾರ ನೀಡಿದವರಿಗೆ, ಆಪ್ತೇಷ್ಟರಿಗೆ, ಬಲಿಗೊಡೆಯ, ಹಿರಿಯರಿಗೆ ವಸ್ತ್ರರೂಪದ ಉಡುಗೊರೆ ನೀಡುತ್ತಾನೆ. ಪುಣ್ಯ ಸಂಪಾದನೆಗಾಗಿ ಹಿರೀಕರಿಗೆ, ಬಂಧುಗಳಿಗೆ ಉಡುಗೊರೆ ನೀಡಿ ಆಶೀರ್ವಾದ ಪಡೆಯುವುದು ಸಂಪ್ರದಾಯ. ಈ ಉಡುಗೊರೆಗಳನ್ನು ಅರಸಿನ ಶಾಸ್ತ್ರದ ರಾತ್ರಿಯೂ ನೀಡುವುದಿದೆ. ದಂಪತಿಯರನ್ನು ಒಟ್ಟಿಗೆ ಕುಳ್ಳಿರಿಸಿ, ವರ ಉಡುಗೊರೆ ನೀಡಿ ವಧೂವರರಿಬ್ಬರೂ ಕಾಲಿಗೆರಗುತ್ತಾರೆ. ನಂತರ ವಧೂವರರು ತಮ್ಮ ಕೊರಳಲ್ಲಿದ್ದ ಮಾಲೆಗಳನ್ನು ತೆಗೆದು ಮಂಟಪಕ್ಕೆ ಜೋತುಹಾಕುತ್ತಾರೆ. ವರ ತನ್ನ ರುಮಾಲು ತೆಗೆದು ಮಂಟಪದ ಮೇಲಿರಿಸುತ್ತಾನೆ.

33.4 ಔತಣ :

ಈ ಎಲ್ಲಾ ಸಂಪ್ರದಾಯಗಳ ಬಳಿಕ ಮರುಸೇಸೆಯ ಔತಣಕ್ಕೆ ಎಬ್ಬಿಸುತ್ತಾರೆ. ವರನ ತಂದೆ ಎರಡು ತಂಬಿಗೆ ನೀರು ತಂದು, ತಲೆಗೆ ರುಮಾಲು ಸುತ್ತಿ, ಸಭೆಗೆ ಕೈಮುಗಿದು,'ಸಮಸ್ತರು ಕೇಳಿ, ಎಲ್ಲಾ ನೆಂಟರಿಷ್ಟರು ಊಟಕ್ಕೆ ಏಳಬೇಕು' ಎಂದು ಹೇಳಿ

ನೀರಿಡುತ್ತಾನೆ. ಪ್ರಾರಂಭದಲ್ಲಿ ಜೀಗರ ಕಡೆಯವರನ್ನೇ ಕುಳ್ಳಿರಿಸುತ್ತಾರೆ. ಪಂಗ್ತಿಗಳನ್ನು ಹಾಕಿ, ಒಬ್ಬರಿಗೊಬ್ಬರು ಬೆನ್ನಿಗೆ ಬೆನ್ನು ಆನಿಸಿ ಕುಳಿತಂತೆ, ಕುಡಿಬಾಳೆಲೆಯಲ್ಲಿ ಬಡಿಸುತ್ತಾರೆ. ವಧೂವರರು, ಬಲಗೊಡೆಯ ಬಲಗೊಡತಿಯರು ಪ್ರಥಮ ಪಂಗ್ತಿಯಲ್ಲಿ ಕುಳಿತುಕೊಳ್ಳಬೇಕು. ಮಂಟಪದ ಬಾಳೆಗಿಡಗಳ ಬುಡಗಳನ್ನು ಹತ್ತಿರ ಸೇರಿಸಿ, ಅದರ ಎದುರು ವರ ಮತ್ತು ಬಲಗೊಡೆಯರನ್ನು ಕುಳ್ಳಿರಿಸುತ್ತಾರೆ. ಮದುಮಗಳು ಮತ್ತು ಬಲಗೊಡತಿ ಪ್ರತ್ಯೇಕ ಪಂಗ್ತಿಯಲ್ಲಿ ಕುಳಿತಿರುತ್ತಾರೆ. ಆದರೆ, ವಧೂವರರು ನಾಗೋಲೆ ಆಗುವವರೆಗೆ ಉಪವಾಸ ವ್ರತ ಪಾಲಿಸಬೇಕಾಗಿರುವುದರಿಂದ ಅವರು ಪಾಯಸ ಮಾತ್ರ ಸೇವಿಸಬಹುದು ಅಥವಾ ಬೆಳ್ತಿಗೆ ಅಕ್ಕಿ ಅನ್ನ ಊಟ ಮಾಡಬಹುದು. ಕುಚ್ಚಲಕ್ಕಿ ಅನ್ನ ಊಟ ಮಾಡುವಂತಿಲ್ಲ. ನಾಗೋಲೆಯಾಗಿ ಕಂಕಣದಾರ ಬಿಡಿಸಿದ ಮೇಲೆ ಎಲ್ಲರಂತೆ ಸಹಜವಾದ ಊಟತಿಂಡಿಗಳಲ್ಲಿ ತೊಡಗಬಹುದು.

ಅಡುಗೆಯನ್ನು ಕುಟುಂಬಿಕರು, ವಾಡೇಕಾರರು ಮತ್ತು ಇತರರು ಸೇರಿ ಸಾಮೂಹಿಕವಾಗಿ ತಯಾರು ಮಾಡುತ್ತಾರೆ. ಸಮಾರಂಭದ ಅಡುಗೆಯಲ್ಲಿ ಪಳಗಿದ ಬಾಣಸಿಗರು ಪ್ರತೀ ವಾಡೆಯಲ್ಲಿ ಇರುತ್ತಾರೆ. ಪ್ರತೀ ವಾಡೆಯಲ್ಲಿ ಹತ್ತು ಸಮಸ್ತರ, ಅಡುಗೆಯ ಮತ್ತು ಪೂರಕ ಪಾತ್ರೆ ಸಾಮಗ್ರಿಗಳಿರುತ್ತವೆ. ಕೆಲವು ವಾಡೆಗಳಲ್ಲಿ 1000–1500 ಜನಕ್ಕೆ ಸಾಕಾಗುವ ಅಂದಾಜಿನ ಅಡುಗೆ ಪಾತ್ರೆಗಳು ಈಗಲೂ ಇವೆ. ಧಾರೆಯ ಚಪ್ಪರದಲ್ಲಿದ್ದಂತೆ ಇಲ್ಲಿಯ ಅಡುಗೆ ಕೂಡಾ ತರಕಾರಿಯದೇ ಆಗಿರುತ್ತದೆ. ಪಾಯಸ ಬಡಿಸಿ, ಪಾಯಸದ ಮೇಲೆ ಸಾಕಷ್ಟು ಜೇನುತುಪ್ಪ ಬಡಿಸುತ್ತಾರೆ. ಹಿಂದೆಲ್ಲಾ ಸಿಹಿತಿಂಡಿ ಮಾಡುವ ಕ್ರಮವೇ ಇರಲಿಲ್ಲ. ಪ್ರಥಮ ಪಂಗ್ತಿಯಲ್ಲಿ ಎಲ್ಲರಿಗೆ ಎಲ್ಲಾ ಬಗೆಗಳನ್ನು ಬಡಿಸಿ ಆಗುವಲ್ಲಿವರೆಗೆ ಯಾರೊಬ್ಬರೂ ಊಟ ಪ್ರಾರಂಭಿಸುವಂತಿಲ್ಲ. ಬಡಿಸುವಿಕೆ ಆದ ಮೇಲೆ ಯಜಮಾನ ಕೈಮುಗಿದು 'ಸಮಸ್ತರು ಭೋಜನ ಸ್ವೀಕರಿಸಬೇಕು' ಎಂದು ಹೇಳಿದ ನಂತರವೇ ಊಟವನ್ನು ಪ್ರಾರಂಭಿಸಬೇಕು. ಎಲ್ಲರ ಊಟವಾದ ಮೇಲೆ ಪಂಗ್ತಿಗಳಿಂದ ಒಟ್ಟಿಗೆ ಏಳಬೇಕು. ಊಟ ಮುಗಿಸಿ ಎದ್ದ ಎಲ್ಲರಿಗೆ ಕವಳದ ವ್ಯವಸ್ಥೆ ಇರುತ್ತದೆ.

33.5 ಕನ್ಯಾದಾನ (ಹೆಣ್ಣೊಪ್ಪಿಸುವ ಶಾಸ್ತ್ರ) :

ಧಾರೆ ಶಾಸ್ತ್ರ ವಧುವಿನ ಮನೆಯಲ್ಲಿ ಆದರೂ ವಧುವನ್ನು ಒಪ್ಪಿಸಿಕೊಡುವ ಶಾಸ್ತ್ರ ವರನ ಮನೆಯಲ್ಲೇ ಆಗಬೇಕು. ಎಲ್ಲರ ಊಟ ತೀರಿದ ಮೇಲೆ ವಧುವನ್ನು ಒಪ್ಪಿಸಿಕೊಡುವ ಶಾಸ್ತ್ರ ಮಾಡುತ್ತಾರೆ. ಚಪ್ಪರದಲ್ಲಿ ಮಂಟಪದ ಎದುರು ವರ ಪೂರ್ವಾಭಿಮುಖವಾಗಿ ನಿಲ್ಲುತ್ತಾನೆ. ಅವನ ಪರಿವಾರ ತಂದೆ ತಾಯಿ, ದೇವರ ಮನೆಯ ಹಿರಿಯ, ಸೋದರ ಮಾವ, ಬಲಗೊಡೆಯ ಹಾಗೂ ಕುಟುಂಬಸ್ಥರಿರುತ್ತಾರೆ. ವರ ತಲೆಗೆ ರುಮಾಲು ಇಟ್ಟಿರಬೇಕು. ವರನಿಗೆದುರಾಗಿ ಮದುಮಗಳು ಮತ್ತು ಅವಳ ಪರಿವಾರದೊಂದಿಗೆ ಸಹೋದರನೊಬ್ಬ ಅವಶ್ಯವಾಗಿ ಇರಬೇಕು. ಹೆಣ್ಣು ತವರು ಮನೆಯ

ಬಂಧಗಳನ್ನು ಕಡಿದುಕೊಳ್ಳುವ ಈ ಸಂದರ್ಭ ಹೆಣ್ಣೊಪ್ಪಿಸುವ ಸಂಪ್ರದಾಯದ ಹಾಡನ್ನು ಮುತ್ತೈದೆಯರು ಹಾಡುವ ಸನ್ನಿವೇಶ ವಿನೂತನ ಕಳೆಯಿಂದ ಕೂಡಿರುತ್ತದೆ.

ಯಾವುದೋ ಒಂದು ಕುಟುಂಬದಲ್ಲಿ ಜನಿಸಿದ ಹೆಣ್ಣನ್ನು, ಈವರೆಗೆ ಗುರುತು ಪರಿಚಯವಿಲ್ಲದ ಇನ್ನೊಂದು ಯಾವುದೋ ಕುಟುಂಬದ ಗಂಡಿಗೆ ಮದುವೆ ಮಾಡಿ ಒಪ್ಪಿಸಿ ಕೊಡುವಾಗ ಆ ಹೆಣ್ಣಿಗೆ ಪುನರ್ಜನ್ಮ ನೀಡಿದಂತೆ. ಹೆಣ್ಣಿನ ಮೇಲೆ ಪ್ರಭಾವ ಬೀರುವ ಜೀವನ ಬದಲಾವಣೆಯ ಇದೊಂದು ಸ್ಥಿತ್ಯಂತರದ ಸಂದರ್ಭ ಎನ್ನಬಹುದು. ಒಪ್ಪಿಸಿಕೊಟ್ಟ ತಕ್ಷಣ ಹೆಣ್ಣು ಈವರೆಗಿನ ಕುಟುಂಬದ ಎಲ್ಲಾ ಸಂಬಂಧ, ಹಕ್ಕಿನ ಬೇರುಗಳನ್ನು ಕಡಿದುಕೊಳ್ಳುತ್ತಾಳೆ. ಈ ಪರಿವರ್ತನೆಯ ಪ್ರಕ್ರಿಯೆಯಾಗಿ ಪತಿಯ ಹೆಸರು, ಪತಿಯ ಕುಟುಂಬದ ಹೆಸರುಗಳನ್ನು ತನ್ನ ಹೆಸರಿನೊಂದಿಗೆ ಸೇರಿಸಿಕೊಂಡು ಅಥವಾ ಹೊಸ ಹೆಸರನ್ನು ತಗಲಿಸಿಕೊಂಡು, ವಿವಾಹಪೂರ್ವ ಸರ್ವ ಸಂಕೇತ ಮತ್ತು ಅಸ್ತಿತ್ವಗಳನ್ನು ಕಳೆದುಕೊಳ್ಳುತ್ತಾಳೆ. ತವರಿನ ಎಲ್ಲಾ ನೆನಪುಗಳನ್ನು ಅಳಿಸಿಹಾಕಿ, ತನ್ನನ್ನು ತಂದುಕೊಂಡ ಮನೆಯವರಿಗೆ ಮೆಚ್ಚುಗೆ ಆಗುವ ರೀತಿ ಪರಿವರ್ತಿಸಿಕೊಳ್ಳಬೇಕಾಗುತ್ತದೆ. ಸ್ವಂತ ವ್ಯಕ್ತಿತ್ವ ಬಿಟ್ಟುಕೊಳ್ಳಲು ತಯಾರಾಗಬೇಕಾಗುತ್ತದೆ. ತಾನು ಮದುವೆಯಾದ ಹೊಸ ಪರಿಸರಕ್ಕೆ, ರೀತಿ ರಿವಾಜು ಸಂಪ್ರದಾಯಗಳಿಗೆ ಅರ್ಪಿಸಿಕೊಂಡು, ಮುಂದಿನ ಜೀವನವನ್ನು ಗಂಡನೊಂದಿಗೆ, ಗಂಡನ ಮನೆಯಲ್ಲಿ ಕಳೆಯಲು ಮಾನಸಿಕ ಹಾಗೂ ದೈಹಿಕ ರೀತಿಯಲ್ಲಿ ತಯಾರಾಗುವ ಈ ಭಾವನಾತ್ಮಕ ಮತ್ತು ಹೃದಯಸ್ಪರ್ಶಿ ಘಟನೆ ಹೆಣ್ಣಿಗೆ ಮತ್ತವಳ ಹೆತ್ತವರಿಗೆ ತಮ್ಮ ಕರುಳ ಕುಡಿಯ ಸಂಬಂಧ ಹರಿಯುವಾಗಿನ ಅಸದಳ ಮಧುರ ಯಾತನೆ.

ಹೆಣ್ಣೊಪ್ಪಿಸುವ ಸಂಪ್ರದಾಯದ ಹಾಡಿನಲ್ಲಿ ಒಂದು ಹೆಣ್ಣು ಮಗು ತಾಯಿಯ ಗರ್ಭಾವಸ್ಥೆಯಿಂದ, ಜನನಕ್ಕೆ ಬಂದು, ಮದುವೆ ಆಗುವವರೆಗೆ ಯಾವ ರೀತಿ ಬೆಳೆಯುತ್ತಾಳೆ, ಆ ಹೆಣ್ಣು ಮಗುವಿನ ಜತನವನ್ನು ಯಾರು ಯಾವ ರೀತಿ ಮಾಡುತ್ತಾರೆ, ದೇವರ ಕೃಪೆ ಅವಳ ಮೇಲೆ ಹೇಗೆ ಇರುತ್ತದೆ, ಪರಿಸರ ಯಾವ ರೀತಿ ಅವಳ ಜೀವನದ ಮೇಲೆ ಪ್ರಭಾವ ಬೀರುತ್ತದೆ ಎಂಬ ಸರ್ವ ಸಂಗತಿಗಳ ವಿವರಣೆ ಇದೆ. ಎಷ್ಟು ಕಠಿಣ ಮತ್ತು ಮಾನಸಿಕ ದೃಢತೆಯುಳ್ಳ ಹೆಣ್ಣಾದರೂ ಈ ಹಾಡನ್ನು ಗಮನವಿಟ್ಟು ಕೇಳಿದಲ್ಲಿ ತಡೆಯಲಾಗದ ನೋವು ಉಮ್ಮಳಿಸಿ ಬರುತ್ತದೆ. ಮಗಳನ್ನು ಸಾಕುವಾಗ ಮಾತಾಪಿತರು ತೋರಿದ ಅಕ್ಕರತೆ, ಮಗಳನ್ನು ಕಳಿಸುವಾಗ ಅವರು ಪಡುವ ಸಂಕಟ, ತಾಯಿ ಅಕ್ಕಂದಿರ ಬಗ್ಗೆ ಪ್ರೀತಿ ಇದ್ದರೂ ಎಲ್ಲರ ಹಂಬಲವನ್ನು ಮರೆತು ತನ್ನ ಜೀವನ ಸಂಗಾತಿಯನ್ನು ಮನದೊಳಗಿಟ್ಟುಕೊಂಡು ಮತ್ತೆಲ್ಲವನ್ನು ಮರೆತು ಗಂಡನ ಮನೆದಾರಿಯನ್ನು ಹಿಡಿಯುವಾಗಿನ ವಧುವಿನ ಒಲವು, ತವರಿನ ಪ್ರೀತಿಯನ್ನು ಮರೆಸುವ ಪತಿಯ ಪ್ರೇಮ– ಈ ಎಲ್ಲಾ ವಿಷಯಗಳು ಹಾಡಿನಲ್ಲಿ ಅಭಿವ್ಯಕ್ತವಾಗಿರುವುದನ್ನು ಗಮನಿಸಬಹುದು.

ಹಾಡು ಮುಗಿದಂತೆ ಹಿರಿಯರು ಹೆಣ್ಣಿನ ಈವರೆಗಿನ ಬೆಡಗಿನ ಸಂಬಂಧವನ್ನು ಕಡಿದು, ವರನ ಕುಟುಂಬಕ್ಕೆ ಸೇರಿಸಲು, ದೇವರು, ದೈವ ಮತ್ತು ಸಂದ ಹಿರಿಯ ಚೇತನರಲ್ಲಿ, ಹೆಣ್ಣಿನ ಮುಂದಿನ ಬಾಳು ಸುಖಸಂತೋಷದಿಂದ ಕೂಡಿರಲು ಈ ಕೆಳಗಿನಂತೆ ಪ್ರಥಮದಲ್ಲಿ ವಧುವಿನ ಕಡೆಯವರು ಪ್ರಾರ್ಥಿಸಿಕೊಳ್ಳುತ್ತಾರೆ–

'ನಮ್ಮ ಹಿರಿಯರ ಕಾಲದಿಂದ ನಡೆಸಿಕೊಂಡು ಬಂದ ಸಂಪ್ರದಾಯ ಪ್ರಕಾರ ನಮ್ಮ ಕನ್ಯೆಯನ್ನು ಧರ್ಮ ಧಾರೆ ಎರೆದು, ಕನ್ಯಾದಾನ ಮಾಡುವ ಈ ಸಂದರ್ಭದಲ್ಲಿ ನಾವೆಲ್ಲಾ ಒಟ್ಟಾಗಿ ಪ್ರಾರ್ಥಿಸುವುದೇನೆಂದರೆ –ಇಷ್ಟು ದಿನ ಇಷ್ಟು ಕಾಲವರೆಗೆ ಈ ಕನ್ಯೆಯ ಪಾಲನೆ, ಪೋಷಣೆ, ಸಂರಕ್ಷಣೆಯ ಜವಾಬ್ದಾರಿಗಳು, ಸೂಲೆಸೂತಕಗಳ ಸಹಿತ ನಮ್ಮ ಕುಟುಂಬಕ್ಕೆ, ನಮ್ಮ ದೇವರು ದೈವಾದಿಗಳಿಗೆ, ನಮ್ಮ ಗುರುಹಿರಿಯರಿಗೆ ಸಂದಿತ್ತು. ಈ ಹೊತ್ತಿನ ಘಳಿಗೆಯಿಂದ ಅವಳನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ನಿಮ್ಮ ಕುಟುಂಬಕ್ಕೆ, ನೀವು ನಂಬಿರುವ ದೇವರು ದೈವಾದಿಗಳಿಗೆ, ನಿಮ್ಮ ಗುರುಹಿರಿಯರಿಗೆ ವಹಿಸಿಕೊಡುತ್ತಿದ್ದೇವೆ. ನಾವಿಂದು ಹೆಣ್ಣೊಪ್ಪಿಸಿ ಕೊಟ್ಟಲ್ಲಿ ಅವಳ ಮುಂದಿನ ಜೀವಮಾನದಲ್ಲಿ ಆಡಿದ ಮಾತು, ಮಾಡಿದ ಕೆಲಸ ಕಾರ್ಯ, ವಹಿಸಿದ ಜವಾಬ್ದಾರಿಗಳಲ್ಲಿ ತಿಳಿದೋ ತಿಳಿಯದೆಯೊ ತಪ್ಪುಗಳಾದಲ್ಲಿ ತಿದ್ದಿ, ಬುದ್ಧಿ ಜ್ಞಾನಗಳನ್ನು ನೀಡಿ, ಈವರೆಗೆ ನಾವು ಹೇಗೆ ನಡೆಸಿಕೊಂಡು ಬಂದಿದ್ದೇವೊ ಹಾಗೆಯೇ ಸಂಭಾಳಿಸಿಕೊಂಡು ಹೋಗಿ, ಹಡೆದ ಮತ್ತು ಪಡೆದ ಮನೆಯ ಸಂಬಂಧ ಹಾಲು–ನೀರು ಬೆರೆತಂತೆ ಬೆರೆತು ಒಂದಾಗಿ, ಈ ದಿನ ಹಚ್ಚಿದ ದೀಪ ಎರಡೂ ಮನೆಗಳಿಗೆ, ಎರಡೂ ಕುಟುಂಬಗಳಿಗೆ ಬೆಳಕು ನೀಡಿ, ದಾಂಪತ್ಯ ಜೀವನದಲ್ಲಿ ಸಂತತಿ ವೃದ್ಧಿಯಾಗಿ, ಅದರ ಕೀರ್ತಿ ಸೂರ್ಯಚಂದ್ರರ ಕಾಲದವರೆಗೆ ಉಳಿಯುವಂತೆ ದೇವರು ಅನುಗ್ರಹಿಸಲಿ ಎಂದು ನಾವು ಪ್ರಾರ್ಥಿಸುತ್ತೇವೆ'.

ಈ ರೀತಿ ಹೆಣ್ಣಿನ ಕಡೆಯವರು ಪ್ರಾರ್ಥಿಸಿಕೊಂಡಾದ ನಂತರ ಹೆಣ್ಣನ್ನು ಒಪ್ಪಿಸಿಕೊಳ್ಳುವ ಗಂಡಿನ ಕಡೆಯವರು ಇದೇ ಪ್ರಕಾರ ಪುನರುಚ್ಚರಿಸಿ ಬೇಡಿಕೊಳ್ಳುತ್ತಾರೆ. ವಧುವಿನ ತಂದೆ ತನ್ನ ಕುಟುಂಬಸ್ಥರು, ವಧುವಿನ ಸೋದರ ಮಾವ, ಚಿಕ್ಕಪ್ಪಂದಿರು ಮತ್ತು ಸಹೋದರರಲ್ಲಿ 'ಸಮಸ್ತರು ಕೇಳಿ, ವಧುವನ್ನು ಒಪ್ಪಿಸಿಕೊಡುತ್ತೇನೆ' ಎಂದು ಎಲ್ಲರಿಗೆ ಕೈಮುಗಿದು ಹೇಳುತ್ತಾನೆ. ವರನ ಕಡೆಯ ಯಜಮಾನ, ಅವರ ಕಡೆಯ ಎಲ್ಲರಲ್ಲಿ 'ಸಮಸ್ತರು ಕೇಳಿ, ವಧುವನ್ನು ಒಪ್ಪಿಸಿಕೊಳ್ಳುತ್ತೇನೆ' ಎಂದು ಎಲ್ಲರಿಗೂ ಕೈಮುಗಿದು ಹೇಳಿಕೊಳ್ಳುತ್ತಾನೆ. ವಧುವಿನ ಕಡೆಯವರೆಲ್ಲರೂ ವಧುವನ್ನು ಸ್ಪರ್ಶಿಸುತ್ತಾರೆ. ಮಾವ ಮತ್ತು ಸಹೋದರರು ವಧುವನ್ನು ಕೈಹಿಡಿದು ವರನ ಕೈಯಲ್ಲಿ ಕೊಡುತ್ತಾರೆ. ವರ ತನ್ನ ರುಮಾಲಿನ ತುದಿಯನ್ನು ನೀಡುತ್ತಾನೆ. ಆ ರುಮಾಲಿನ ತುದಿ ಹಿಡಿದುಕೊಂಡು ವಧುವು ವರನನ್ನು ಹಿಂಬಾಲಿಸುತ್ತಾಳೆ. ವಧುವನ್ನು ವರನ ತಾಯಿ ಮತ್ತು ಇತರ ಹೆಂಗಳೆಯರು ಮನೆಯೊಳಗೆ ಕರೆದುಕೊಂಡು ಹೋಗಿ ಕುಡಿಬಾಳೆ ಎಲೆಯಲ್ಲಿ ಅವಳಿಗೆ ಬಡಿಸುತ್ತಾರೆ. ಕೆಲವು ಕಡೆಗಳಲ್ಲಿ ಮತ್ತು ಸಂದರ್ಭಗಳಲ್ಲಿ ಹೆಣ್ಣೊಪ್ಪಿಸುವಾಗ ವಧುವನ್ನು ಎತ್ತಿಕೊಡುವ

ವೂ ಇದೆ. ಸಭಾಂಗಣದಲ್ಲಿ ಮದುವೆ ಸಮಾರಂಭ ಜರಗುವ ಇಂದಿನ ಸಂದರ್ಭದಲ್ಲೂ ಡುಜಿಯರು ಈ ಅಪೂರ್ವ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದಾರೆ.

ವಧುವನ್ನು ಗಂಡಿನ ಕಡೆಯವರು ಮನೆಯೊಳಗೆ ಕರೆದುಕೊಂಡು ಹೋದ ಣ ಚಪ್ಪರದಲ್ಲಿ ದ್ವಿಪಕ್ಷೀಯರು ಮರುದಿನದ ಬಲಗೊಡೆಯರ ಸಮ್ಮಾನದೂಟ ಅಥವಾ ಧುವಿನ ಮನೆಯಲ್ಲಿ ಜರಗಲಿರುವ ಮರುಮನೆ ಶಾಸ್ತ್ರದ ಬಗ್ಗೆ ಸಮಾಲೋಚನೆ ರಂಭಿಸುತ್ತಾರೆ. ದ್ವಿಪಕ್ಷೀಯ ಬೀಗರ ಈ ಸಂದರ್ಭದ ನಿರ್ಣಯಗಳ ಗೌರವಾರ್ಥವಾಗಿ ಂದು ಹರಿವಾಣ ಎಲೆ ಅಡಿಕೆ ಅಲ್ಲಿ ಇಡುವ ಸಂಪ್ರದಾಯವಿದೆ. ಬಲಗೊಡೆಯರು ಮ್ಮಲ್ಲಿ ಬರಬೇಕು ಎಂದು ವಧುವಿನ ಕಡೆಯವರು ಆಹ್ವಾನಿಸಬೇಕು. ಬಲಗೊಡೆಯರು ರುವ ಸಮಯ ಯಾವುದು? ಬರುವ ಜನಸಂಖ್ಯೆ ಎಷ್ಟು ? ಎಂಬ ವಿಷಯಗಳನ್ನು ರನ ಕಡೆಯವರು ಸ್ಪಷ್ಟಪಡಿಸಬೇಕು. ಈ ಮಾತುಕತೆ ನಿರ್ಣಯವಾಗಿ ವಧುವಿನೊಡನೆ ಂಗಾತಿಯಾಗಿ ಬಲಗೊಡತಿ ಅಲ್ಲಿ ನಿಂತು, ಉಳಿದವರೆಲ್ಲ ಹಿಂದಕ್ಕೆ ಹೊರಡುತ್ತಾರೆ. ಹೊರಡುವಾಗ ಎಲ್ಲರೂ ಎದ್ದು ನಿಂತು ವರನ ಕಡೆಯವರಿಗೆ 'ನಾವು ಹೋಗಿ ಬರುತ್ತೇವೆ' ಎಂದು ಹೇಳಿ ವಂದಿಸುತ್ತಾರೆ. ವರನ ಕಡೆಯವರೂ 'ದೇವರ ಇಚ್ಛೆ' ಎಂದು ಕೈಮುಗಿದು ಪ್ರತಿವಂದಿಸಿ ಬೀಗರನ್ನು ಬೀಳ್ಕೊಡುತ್ತಾರೆ.

34. ವರನ ಮನೆಯಲ್ಲಿ ರಾತ್ರಿಯ ಕಾರ್ಯಕ್ರಮಗಳು :

ವಧುವಿನ ಕಡೆಯವರು ಹಿಂದಿರುಗುವುದರೊಂದಿಗೆ ಒಮ್ಮೆಗೆ ಮದುವೆ ಅಧ್ಯಾಯ ಕೊನೆಗೊಂಡರೂ, ವರನ ಮನೆಯಲ್ಲಿ ರಾತ್ರಿ ಕೆಲವು ಆಚರಣೆಗಳಿವೆ. ವಧೂವರರಿಬ್ಬರಿಗೂ ಜೋಡಿ ಅರಸಿನ ಶಾಸ್ತ್ರ, ಮದುಮಗಳನ್ನು ಅಡಗಿಸಿಡುವಿಕೆ, ಉಂಗುರದಾಟ, ಕಲಶಸ್ನಾನ ಮತ್ತು ನಾಗೋಲಿ ಪೂಜೆಗಳು ಆ ರಾತ್ರಿ ಜರಗುತ್ತವೆ. ನಾಗೋಲಿಗೆ ನಾಗಬನದ ಪ್ರತೀಕ ಮಾಡಿ ಪೂಜೆಯಾಗಬೇಕು. ಪೂಜೆ ಇರುವುದರಿಂದ ವಧೂವರರಿಬ್ಬರೂ ಪವಿತ್ರರಾಗಿರಬೇಕು ಎಂಬ ಉದ್ದೇಶದಿಂದ ಅವರಿಗೆ ಅರಸಿನ ಲೇಪನದ ಕಲಶಸ್ನಾನ ಆಗಬೇಕು. ಅರಸಿನ ಲೇಪನಕ್ಕೆ ಮೊದಲು ವರನು ಆಹ್ವಾನ ಗೌರವಾರ್ಥವಾಗಿ ವಧುವಿಗೆ ಹರಿವಾಣದಲ್ಲಿಟ್ಟು ಚಿನ್ನದೊಡವೆಗಳನ್ನು ತಲುಪಿಸಬೇಕು. ಪ್ರತಿಯಾಗಿ ವಧು ಒಂದು ಹರಿವಾಣ ತಾಂಬೂಲವನ್ನು ವರನಿಗೆ ಒಪ್ಪಿಸಬೇಕೆಂಬ ಶಾಸ್ತ್ರವಿದೆ. ಈ ಸಂಪ್ರದಾಯಗಳನ್ನು ಸಾಂಕೇತಿಕವಾಗಿಯಾದರೂ ಪಾಲಿಸಬೇಕೆಂಬ ನಿಯಮವಿದೆ.

34.1 ದಂಪತಿ ಅರಸಿನ ಶಾಸ್ತ್ರ :

ವರನು ಹಿಂದಿನ ರಾತ್ರಿ ಅರಸಿನ ಲೇಪನಕ್ಕೆ ಧರಿಸಿದ ಪಂಚೆಯನ್ನೇ ಉಡಬೇಕು. ವಧುವೂ ಕೂಡಾ ಬರುವಾಗ ತಂದಿರುವ, ತವರು ಮನೆಯಲ್ಲಿ ಹಿಂದಿನ ರಾತ್ರಿ ಉಪಯೋಗಿಸಿದ್ದ ಅರಸಿನ ಪಂಚೆಯನ್ನೇ ಉಡಬೇಕು. ವಾಡೆಯ ಮಹಿಳೆಯರು ಈ ಶಾಸ್ತ್ರವನ್ನು ನಡೆಸಿಕೊಡಬೇಕು. ಹಿಂದಿನ ರಾತ್ರಿ ಅರಸಿನ ಶಾಸ್ತ್ರಕ್ಕೆ ವರ ಕುಳಿತ ಜಾಗದಲ್ಲಿಯೇ

ಈ ಜೋಡಿ ಅರಸಿನ ಶಾಸ್ತ್ರವೂ ಜರಗಬೇಕು. ನವದಂಪತಿ ಒಂದೇ ಮಣೆಯ ಮೇಲೆ ಕುಳಿತುಕೊಳ್ಳಬೇಕು. ಅರಸಿನ ಲೇಪನಕ್ಕೆ ಈ ಸಂದರ್ಭ ಅಂಡಿಲು ಗಿಡದ ಕೋಲಿನ 'ಬಾಲ್' ಮತ್ತು ಹಾಡುಗಳ ಅವಶ್ಯಕತೆಯಿಲ್ಲ. ಅರಸಿನ ಲೇಪನದ ಯಥಾಕ್ರಮ ಪ್ರಕಾರ ಅರಸಿನ ಬಟ್ಟಲು ಇಟ್ಟು ಅಂಗೈಗಳನ್ನು ಅರಸಿನದಲ್ಲಿ ಅದ್ದಿ ವಧೂವರರಿಬ್ಬರಿಗೂ ಅರಸಿನ ಹಚ್ಚುತ್ತಾರೆ ಮತ್ತು ಕ್ರಮಪ್ರಕಾರ ಎಚ್ಚಿಸುತ್ತಾರೆ.

ಮದುಮಗಳು ಈ ಮನೆಗೆ ಹೊಸದಾಗಿ ಪ್ರವೇಶಿಸಿದವಳು. ಇಲ್ಲಿಯ ಜನರು ಮತ್ತು ಪರಿಸರ ಹೊಸತು. ಅವಳಿಗೆ ಈ ಮನೆಯವರೊಂದಿಗೆ ಹೇಗೆ ಹೊಂದಿಕೊಳ್ಳಬೇಕು? ಯಾರನ್ನು ಹೇಗೆ ಸಂಬೋಧಿಸಬೇಕು? ಆಡಿದ ಮಾತುಗಳಲ್ಲಿ, ನಡವಳಿಕೆಗಳಲ್ಲಿ ಎಲ್ಲಿ ತಪ್ಪಾಗಬಹುದೋ? ಎಂಬ ಹಿಂಜರಿಕೆ, ಹೆದರಿಕೆಗಳಿರುತ್ತವೆ. ಇಷ್ಟು ಸಮಯ ತನ್ನವರೊಂದಿಗೆ ತವರಿನಲ್ಲಿ ಕಳೆದು, ಈಗ ಪತಿಯ ಮನೆಗೆ ಕಾಲಿಡುವಾಗ ಆಗುವ ಮುಜುಗರ, ಮನೋಸಂಕಟ ಮತ್ತು ದುಃಖಗಳೂ ಇರುತ್ತವೆ. ಪತೀಗೃಹದ ವಾತಾವರಣಕ್ಕೆ ಹೊಂದಿಕೊಳ್ಳಲು, ಅವಳ ಸಂಕೋಚಭಾವವನ್ನು ನಿವಾರಿಸಲು, ಪತಿ ಹಾಗೂ ಆ ಮನೆಯವರೊಂದಿಗೆ ಸಲುಗೆ ಉದ್ಭವಿಸಲು, ವಿಶ್ವಾಸ ಬೆಳೆಯಲು, ಪತಿಪತ್ನಿ ಎಂಬ ಸಂಬಂಧದ ಬೀಜ ಮೊಳಕೆಯೊಡೆಯಲು ಮತ್ತು ಅವಳ ಮನಸ್ಸಿನ ದುಗುಡ ದೂರೀಕರಿಸಲು ಮನೋರಂಜನೆಗಾಗಿ ಕುಡುಬಿಯರು ಕೆಲವು ಸಂಪ್ರದಾಯಗಳನ್ನು ರೂಢಿಸಿಕೊಂಡಿದ್ದಾರೆ. ರಾತ್ರಿ ಮದುಮಗಳನ್ನು ಅಡಗಿಸಿಟ್ಟು ವರ ಅವಳನ್ನು ಹುಡುಕಿ ತರುವುದು, ಉಂಗುರ ಶೋಧನೆಯ ಸ್ಪರ್ಧೆ... ಮುಂತಾದವು ಇದಕ್ಕೆ ದೃಷ್ಟಾಂತಗಳು. ಈ ಎಲ್ಲಾ ವಿಧಿಗಳಲ್ಲಿ ಗೆದ್ದವರು ಸೋತವರ ಮೇಲೆ ಮುಂದಿನ ಜೀವನದಲ್ಲಿ ಹತೋಟಿ ಸಾಧಿಸುತ್ತಾರೆ ಎಂಬ ಮನೋಶಾಸ್ತ್ರವೂ ದುಡಿಸಿಕೊಳ್ಳುತ್ತದೆ.

34.2 ವಧುವನ್ನು ಅಡಗಿಸಿಡುವಿಕೆ :

ಅರಸಿನ ಶಾಸ್ತ್ರ ಪೂರೈಸಿದ ವಧೂವರರು ಚಪ್ಪರಕ್ಕೆ ಬರುತ್ತಾರೆ. ಬಲಗೊಡತಿ ಮತ್ತು ವರನ ಕಡೆಯ ಹೆಂಗಳೆಯರು ವಧುವನ್ನು ಮನೆಯೊಳಗೆ ಕರೆದುಕೊಂಡು ಹೋಗುತ್ತಾರೆ. ಒಳಗೆ ಎಲ್ಲಿಯಾದರೂ ಸಂಧಿ ಮೂಲೆಗಳಲ್ಲಿ ಅವಳನ್ನು ಅಡಗಿಸಿಡುತ್ತಾರೆ. ಕೆಲವು ಬಾರಿ ಒಲಿಚಾಪೆಯೊಳಗೆ ಸುರುಳಿಯಲ್ಲಿ ಕೂರಿಸುವುದಿದೆ. ಬಲಗೊಡತಿ ಇಲ್ಲಿ ಚಾಲಾಕಿನವಳಾಗಿರಬೇಕು. ಬಲಗೊಡತಿ ಹುಷಾರಿನವಳಾದರೆ ವರನಿಗೆ ಸುಲಭದಲ್ಲಿ ವಧುವನ್ನು ಹುಡುಕಲಾಗದಂತೆ ನೋಡಿಕೊಳ್ಳುತ್ತಾಳೆ. ಕೆಲವು ಬಾರಿ ಇತರ ವಿವಾಹಿತ ಯುವತಿಯರನ್ನು ವಧುವಿನಂತೆಯೇ ಬಿಳಿ ವಸ್ತ್ರ ಉಡಿಸಿ , ಮುಸುಕು ಹಾಕಿ, ಎಲ್ಲರೂ ಒಂದೇ ರೀತಿ ಕಾಣುವಂತೆ ಮಾಡುತ್ತಾಳೆ. ಒಳಗಿನಿಂದ ಅಡಗಿಸಿಟ್ಟವರು ಸೂಚನೆ ನೀಡಿದಂತೆ ವರ ಮನೆಯೊಳಹೊಕ್ಕು ವಧುವನ್ನು ಕೈಹಿಡಿದು ಅಥವಾ ಎತ್ತಿಕೊಂಡು ಬಂದು ಚಪ್ಪರಕ್ಕೆ ತಂದು ಬಿಡಬೇಕು. ಈ ರೀತಿ ಅಡಗಿಸಿಡುವಿಕೆ ಮತ್ತು ಹುಡುಕಿ ತರುವಿಕೆ ಐದಾವರ್ತಿ ನಡೆಯುತ್ತದೆ. ಸಾಧ್ಯವಾದಷ್ಟು ಇತರ ಹೆಂಗಳೆಯರೂ ವಧುವು

ದಂತೆ ವರನಿಗೆ ಕೀಟಲೆ ಮಾಡುತ್ತಾರೆ. ವಧುವನ್ನು ಹುಡುಕಲು ಹೋದ ವರ ಯಾರ್ಯಾರೋ ಯುವತಿಯರನ್ನು ಅಥವಾ ಬಲಗೊಡತಿಯನ್ನೇ ಎತ್ತಿತರುವ ನೋರಂಜನೆಯ ಪ್ರಸಂಗಗಳೂ ನಡೆಯುತ್ತವೆ. ವರ ಸ್ವಲ್ಪ ಸಂಕೋಚ ಸ್ವಭಾವದವನಾದಲ್ಲಿ ಧುವನ್ನು ಹುಡುಕಿ ತರಲು ಹಿಂಜರಿಯುತ್ತಾನೆ. ಹೀಗೆ ಅಡಗಿಕೊಂಡ ಮದುಮಗಳು ಮೇಲೋ? ಹುಡುಕುವ ವರ ಮೇಲೋ? ಎಂಬ ಪೈಪೋಟಿ ನಡೆಯುತ್ತದೆ. ಇದರಲ್ಲಿ ತ್ತೀರ್ಣರಾದವರು ಸಾಂಸಾರಿಕವಾಗಿ ಯಶಸ್ವಿಯಾಗುತ್ತಾರೆ ಎಂಬುದು ಲೆಕ್ಕಾಚಾರ.

34.3 ಉಂಗುರದಾಟ / ಓಕುಳಿ :

ವಧುವಿನ ಅಡಗಿಸಿಡುವಿಕೆಯ ನಂತರ ಉಂಗುರದಾಟದ ಮನೋರಂಜನೆ. ಪ್ಪರದಲ್ಲಿ ಒಂದು ಅನ್ನಬಸಿಯುವ ಅಥವಾ ಸಾಮಾನ್ಯ ಮರದ ಮರಿಗೆಯ ತುಂಬಾ ಕುಳಿ ನೀರು ತುಂಬಿಸಿ ಇಡುತ್ತಾರೆ. ಮರಿಗೆಯ ಪೂರ್ವಾಭಿಮುಖವಾಗಿ ವರ, ಅವನ ದುರು ದಿಸೆಯಲ್ಲಿ ವಧು ಕುಳಿತುಕೊಳ್ಳುತ್ತಾರೆ. ಯಜಮಾನ ಅಥವಾ ಗುರಿಕಾರ ಣ್ಣಡಿಕೆಯೊಂದರಲ್ಲಿ ಚಿನ್ನದುಂಗುರವನ್ನು ಅಡಗಿಸಿ, ಅದನ್ನು ಹಿಳ್ಳ ಪಟ್ಟಿಯಲ್ಲಿ ಮುಚ್ಚಿ ಮರಿಗೆಯೊಳಗೆ ಹಾಕುತ್ತಾನೆ. ಆ ಉಂಗುರವನ್ನು ವಧೂವರರು ಹುಡುಕಿ ತೆಗೆಯಬೇಕು. ಹುಡುಕಲು ವರ ಎಡಗೈ ಮತ್ತು ವಧು ಬಲಗೈ ಉಪಯೋಗಿಸಬೇಕು. ಯಾರು ಮೊದಲು ಉಂಗುರ ಹುಡುಕಿ ತೆಗೆಯುತ್ತಾರೋ ಅವರು ಬುದ್ಧಿವಂತರು, ಮುಂದಿನ ದಾಂಪತ್ಯ ಜೀವನದಲ್ಲಿ ಹೆಚ್ಚು ಯಶಸ್ವಿಯಾಗುತ್ತಾರೆ ಅನ್ನುವುದು ಲೆಕ್ಕಾಚಾರ. ಈ ರೀತಿಯ ಸ್ಪರ್ಧೆ ಐದು ಬಾರಿ ಜರಗುತ್ತದೆ. ಕೊನೆಗೆ ಮರಿಗೆಯಲ್ಲಿದ್ದ ಓಕುಳಿ ನೀರನ್ನು ವಧೂವರರು ಪರಸ್ಪರ ಎರಚಿಕೊಳ್ಳಬೇಕು. ಇದರಲ್ಲೂ ಯಾರು ಹುಷಾರಾಗುತ್ತಾರೆ ಎಂಬುದನ್ನು ನೋಡಲಾಗುತ್ತದೆ. ವಧುವನ್ನು ಅಡಗಿಸಿಡುವಿಕೆ, ಉಂಗುರದಾಟ, ಓಕುಳಿ ನೀರೆರಚಾಟ.... ಇವೆಲ್ಲಾ ಬುಡಕಟ್ಟು ಸಂಪ್ರದಾಯದ ಲಕ್ಷಣಗಳು ಎನ್ನಬಹುದು.

34.4 ಕಲಶ ಸ್ನಾನ :

ಉಂಗುರದಾಟ ಮುಗಿದಂತೆ ವಧೂವರರನ್ನು ನೇರವಾಗಿ ಕಲಶ ಸ್ನಾನಕ್ಕಾಗಿ ಕಲಶ ಸ್ನಾನದ ಚಚ್ಚೌಕ 'ಮಾಟೋಟ'ಗೆ ಕರೆದುಕೊಂಡು ಹೋಗುತ್ತಾರೆ. ವಧೂವರರೊಂದಿಗೆ ಇಲ್ಲಿ ಬಲಗೊಡತಿಗೂ ಕಲಶಸ್ನಾನವಾಗಬೇಕು. ಪ್ರಾರಂಭದಲ್ಲಿ ವಧೂವರರಿಬ್ಬರು ಮಾತ್ರ ಪೂರ್ವಾಭಿಮುಖವಾಗಿ ಒಂದೇ ಮಣೆಯ ಮೇಲೆ ಕುಳಿತು, ಅವರಿಗೆ ಕ್ರಮಪ್ರಕಾರ ಕಲಶಸ್ನಾನ ಮಾಡಿಸುತ್ತಾರೆ. ನಂತರ ಅವರ ಹಿಂದಿನಿಂದ ಇನ್ನೊಂದು ಮಣೆ ಇಟ್ಟು ಬಲಗೊಡತಿಯನ್ನು ಬೆನ್ನಿಗೆ ಬೆನ್ನು ತಾಗುವಂತೆ ಪಶ್ಚಿಮಾಭಿಮುಖವಾಗಿ ಕುಳ್ಳಿರಿಸುತ್ತಾರೆ. ಮೂವರ ತಲೆಗೂದಲನ್ನೂ ಒಂದೇ ಮುಷ್ಟಿಯಲ್ಲಿ ಹಿಡಿದುಕೊಳ್ಳಬೇಕು. ಕೂದಲ ಉದ್ದ ಸಾಕಾಗದಿದ್ದಲ್ಲಿ ನೂಲು ಜೋಡಿಸಿ ಭರ್ತಿ ಮಾಡಿ ಹಿಡಿದು, ಒಂದು ಬಿಂದಿಗೆ ನೀರನ್ನು ಒಂದೇ ಬಾರಿಗೆ ಭಸಭಸನೆ ಮೂವರ ತಲೆಗಳ ಮೇಲೂ ಸುರಿಯಬೇಕು. ಆಗ

ವಧೂವರರು ಅವರ ದಿಕ್ಕಿನಲ್ಲಿ ಮುಂದಕ್ಕೆ, ಬಲಗೊಡತಿ ಹಿಂದೆ ಪಶ್ಚಿಮಕ್ಕೆ ಓಡುತ್ತಾರೆ. ನಂತರ ಮೂವರೂ ಚೆನ್ನಾಗಿ ಸ್ನಾನ ಮಾಡಿ, ಮಡಿ ಉಟ್ಟು, ನಾಗೋಲೆಗೆ ತಯಾರಾಗುತ್ತಾರೆ.

34.5 ನಾಗೋಲೆ :

ನವದಂಪತಿ ಫಲವಂತಿಕೆಗಾಗಿ ನಾಗಾರಾಧನೆ ಮಾಡುವ ಪೂಜೆ 'ನಾಗೋಲೆ' ಮದುವೆಯಾಗಿ ಸಾಂಸಾರಿಕ ಬಂಧನದಲ್ಲಿ ಒಂದಾದ ಜೋಡಿಗೆ ಮುಂದೆ ಸಂತಾನ ಪ್ರಾಪ್ತಿಯಾಗಬೇಕೆಂಬ ಉದ್ದೇಶದಿಂದ ನಾಗಬನದ ಸ್ವರೂಪ ರಚಿಸಿ ನಾಗದೇವತೆಯನ್ನು ಆರಾಧಿಸುವ ಪದ್ಧತಿ. ಹಿಂದಿನ ಕಾಲದಲ್ಲಿ ಧಾರೆಯಾದ ದಿನದ ಮುಸ್ಸಂಜೆ ಹೊತ್ತಲ್ಲಿ ಹೊರಬೆಡಗಿನ ವಟು ಹುಡುಗರನ್ನು ಕರೆದು, ಅವರಲ್ಲಿ ಒಂದು ತೆಂಗಿನಕಾಯಿ ಮತ್ತು ವೀಳ್ಯಪಟ್ಟ ನೀಡಿ ಅತ್ತಿಯ ಗೆಲ್ಲು ತರಲು ಕಳುಹಿಸುತ್ತಿದ್ದರು. ಹುಡುಗರು ಅತ್ತಿ ಮರದ ಬುಡದಲ್ಲಿ ಮರಕ್ಕೆ ಪೂಜೆ ಮಾಡಿ, ಕಾಯಿ ಒಡೆದು ತಿಂದು, ಅತ್ತಿ ಗೆಲ್ಲು ಕಿತ್ತು ತರುತ್ತಿದ್ದರು. (ಅತ್ತಿ= FICUS RASEMOSA ಸಸ್ಯ ಶಾಸ್ತ್ರೀಯ ಹೆಸರು). ಅತ್ತಿಯ ಗೆಲ್ಲು ಸುಖಶಾಂತಿ ನೆಮ್ಮದಿಯ ಸಂಕೇತ, ನಾಗನಪೂಜೆ ಸಂತಾನಪ್ರಾಪ್ತಿಗೆ ಪೂರಕ ಎಂಬ ನಂಬಿಕೆಯಿದೆ. ಆದರೆ ಕುಡುಬಿಯರಲ್ಲಿ, ಋತುಮತಿಯಾದ ಹೆಮ್ಮಕ್ಕಳು ನಾಗಬನದಲ್ಲಿ ನಾಗಪೂಜೆ ಮಾಡಬಾರದು ಎಂಬ ನಂಬಿಕೆಯೂ ಇದೆ. ನಾಗೋಲೆ ನಾಗಬನದಲ್ಲಿ ಮಾಡಿದ ಪೂಜೆಗೆ ಸಮಾನ. ಆದುದರಿಂದ ನಾಗೋಲೆ ಸಂಪ್ರದಾಯ, ಹೆಣ್ಣು ಪ್ರೌಢಾವಸ್ಥೆ ತಲುಪುವ ಮೊದಲು ಮದುವೆಯಾಗುತ್ತಿದ್ದ ಕಾಲದಲ್ಲಿ ಆಚರಿಸುತ್ತಿದ್ದ ಕ್ರಮ ಸರಿ. ಈಗ ಋತುಮತಿಯಾದ ನಂತರ ಆಗುವ ಮದುವೆಯಲ್ಲಿ ಹೆಣ್ಣು ನಾಗನಪೂಜೆಗೆ ಕುಳಿತುಕೊಳ್ಳುವುದು ಎಷ್ಟು ಸರಿ? ಎಂಬ ವಿಷಯ ಕುಡುಬಿಯರಲ್ಲೇ ಅಭಿಪ್ರಾಯಭೇದಗಳಿಗೆ ಒಳಪಟ್ಟಿದೆ.

ನಂತರ ಮದುಮಗಳು ಧಾರೆಯ ಮೇಲುಸೀರೆ ಉಟ್ಟು, ಹೂ ಮುಡಿದು, ಮಂಟಪದ ಮೇಲಿರಿಸಿದ್ದ ಮಾಲೆ ಧರಿಸಿಕೊಂಡು ಶೃಂಗರಿಸಿಕೊಳ್ಳಬೇಕು. ವರ ಕಚ್ಚೆ ಹಾಕಿ, ಅಂಗಿ ಶಾಲು ಧರಿಸಿ, ರುಮಾಲು ಇಟ್ಟು ತಯಾರಾಗಬೇಕು. ಅವಿವಾಹಿತರು ನಾಗೋಲೆ ನೋಡಬಾರದು ಎಂಬ ಕಟ್ಟುಕಟ್ಟಳೆ ಇದೆ. ಅದಕ್ಕಾಗಿ ನಾಗೋಲೆ ನಡೆಯುವ ಅಷ್ಟೂ ಜಾಗವನ್ನು ಸುತ್ತ ಓಲಿಚಾಪೆಗಳಿಂದ ಅಡ್ಡ ಮಾಡಿಕೊಳ್ಳುತ್ತಾರೆ. ಗುರಿಕಾರ ರಾಯಭಾರಿ, ಬಲಗೊಡೆಯ ಬಲಗೊಡತಿ, ವರನ ತಂದೆತಾಯಿಯರು ಉಪಸ್ಥಿತರಿರುತ್ತಾರೆ. ನಾಗೋಲೆಯ ವಿಧಿಗಳೂ ಪೂರ್ವಾಭಿಮುಖವಾಗಿ ಜರಗುತ್ತವೆ. ವಧೂವರರನ್ನು ಏಕಚಾಪೆಯಲ್ಲಿ ಕುಳ್ಳಿರಿಸುತ್ತಾರೆ. ಪುರೋಹಿತರು ಪ್ರತ್ಯೇಕ ಚಾಪೆಯಲ್ಲಿ ಕುಳಿತಿರುತ್ತಾರೆ. ಪುರೋಹಿತರು ಅತ್ತಿಗೆಲ್ಲು ತರಿಸಿ, ಸಗಣಿಯ ಕಟ್ಟೆ ಕಟ್ಟಿ ಅದರಲ್ಲಿ ಅತ್ತಿ ಗೆಲ್ಲು ನೆಟ್ಟು ನಾಗಬನದ ಸ್ವರೂಪ ಮಾಡುತ್ತಾರೆ. ಅದರ ಅಡಿಯಲ್ಲಿ ಕುಡಿಬಾಳೆ ಎಲೆಯಲ್ಲಿ ಬೆಳ್ತಿಗೆ ಅಕ್ಕಿಯ ಹಿಟ್ಟಿನಿಂದ ಎರಡು ನಾಗನ ಆಕೃತಿಗಳನ್ನು ತಯಾರಿಸಿಡುತ್ತಾರೆ. ಆ ನಾಗ ಪ್ರತೀಕಗಳಿಗೆ ನಾಗಬನದಲ್ಲಿ ಹಾಲೆರೆಯುವ ಕ್ರಮದಲ್ಲಿ ಹಾಲೆರೆದು ಪೂಜೆ ಮಾಡುತ್ತಾರೆ.

ಪುರೋಹಿತರು ವಧೂವರರಿಂದ ಬ್ರಹ್ಮಾರ್ಪಣೆ ಬಿಡಿಸಿ ತೀರ್ಥಪ್ರಸಾದ ನೀಡುತ್ತಾರೆ. ವಧೂವರರ ಕೈಯಲ್ಲಿ ವೀಳ್ಯಪಟ್ಟಿ ನೀಡಿ, ವರನ ಜೊಗಸೆ ಮೇಲೆ ವಧುವಿನ ಜೊಗಸೆ ಇಟ್ಟು ಕಂಕಣದಾರ, ಬಾಸಿಂಗ ಮತ್ತು ನಾಂದಿಗಳನ್ನು ಬಿಡಿಸುತ್ತಾರೆ. ವರನ ತಂದೆತಾಯಿಯರ ಕೈಯಲ್ಲಿ ನಾಂದಿ ಇದ್ದರೆ, ಅದನ್ನೂ ಪುರೋಹಿತರು ಇದೇ ಸಂದರ್ಭ ಬಿಡಿಸುತ್ತಾರೆ. ಕಂಕಣದಾರ ಬಿಡಿಸಿದ ಗೌರವಾರ್ಥವಾಗಿ ಕೈಯಲ್ಲಿದ್ದ ವೀಳ್ಯಪಟ್ಟಿಗಳನ್ನು ಪುರೋಹಿತರಿಗೆ ದಾನ ನೀಡಿ ಆಶೀರ್ವಾದ ಪಡೆದು ವಧೂವರರು ಏಳುತ್ತಾರೆ. ಪುರೋಹಿತರು ನಾಗೋಲಿಯ ತೆಂಗಿನಕಾಯಿಯನ್ನು ಗೌರವವಾಗಿ ಗುರಿಕಾರರಿಗೆ ನೀಡುತ್ತಾರೆ. ವಿಸರ್ಜಿಸಲ್ಪಟ್ಟ ನಾಗಪ್ರತೀಕ, ಕಂಕಣದಾರ, ಬಾಸಿಂಗ, ನಾಂದಿಗಳನ್ನು ಕುಡಿಬಾಳೆ ಎಲೆ ಸಮೇತ ವರನ ತಂದೆ ಹರಿವ ನೀರಿನಲ್ಲಿ ಹರಿದುಬಿಡುತ್ತಾನೆ.

ನಾಗೋಲಿ ಪೂಜೆ ಪ್ರಾರಂಭವಾಗುವಾಗ ಸುಮಂಗಲಿಯರು ಅತ್ತಿ ಹೂವಿಗೆ ಸಂಬಂಧಿಸಿದ ಸಂಪ್ರದಾಯದ ಹಾಡನ್ನು ಹಾಡುತ್ತಾರೆ. ಈ ಹಾಡಿನಲ್ಲಿ ಸಹೋದರಿಯನ್ನು ಸಹೋದರ ತನ್ನ ಮದುವೆಗೆ ಆಮಂತ್ರಿಸಲು ಹೋಗುವ, ಸಹೋದರಿ ಅತ್ತಿಯ ಹೂವಿಗೆ ಬೇಡಿಕೆಯಿಡುವ ವಿವರಣೆ ಇದೆ. ಸಹೋದರಿ ಬಡತನದಲ್ಲಿ ಬಹಳ ಕಷ್ಟದ ಜೀವನ ಸಾಗಿಸುತ್ತಿರುತ್ತಾಳೆ. ಆಕೆಗೆ ಉಡಲು ಸರಿಯಾದ ವಸ್ತ್ರಗಳಿರುವುದಿಲ್ಲ. ತೊಡಲು ಒಡವೆಗಳಿರುವುದಿಲ್ಲ. ಸಹೋದರಿಯ ಪತಿಯೂ ಮನೆಯಲ್ಲಿರುವುದಿಲ್ಲ. ಹಾಗಾಗಿ ಸಹೋದರನ ಮದುವೆಗೆ ಹೊರಡಲು ಸಹೋದರಿ ಒಪ್ಪುವುದಿಲ್ಲ. ಸಹೋದರಿ ಮತ್ತು ಭಾವನಿಗೆ ಮೌಲ್ಯಯುತ ವಸ್ತ್ರ, ಒಡವೆಗಳನ್ನು, ಪ್ರಸಾಧನ ಸಾಮಗ್ರಿಗಳನ್ನು ಸಹೋದರ ತಂದು ಕೊಟ್ಟರೂ ಸಹೋದರಿಗೆ ತೃಪ್ತಿಯಾಗುವುದಿಲ್ಲ. ಅವಳಿಗೆ ಅತ್ತಿಯ ಹೂವಿನ ಅಭಿಲಾಷೆ ಇರುತ್ತದೆ. ಅದನ್ನು ತಂದುಕೊಡುವಂತೆ ಸಹೋದರನಲ್ಲಿ ವಿನಂತಿ ಮಾಡುತ್ತಾಳೆ. ಎಷ್ಟೇ ಪ್ರಯತ್ನ ಪಟ್ಟಾದರೂ ಸಹೋದರಿಯನ್ನು ಮದುವೆಗೆ ಕರೆತರಲೇಬೇಕೆಂದು ಛಲತೊಟ್ಟ ಸಹೋದರ ಅತ್ತಿಯ ಸಸಿ ನೆಟ್ಟು, ಮರವಾಗಿ ಬೆಳೆಸಿ, ಅತ್ತಿಯ ಹೂವಿಗಾಗಿ ಕಾದು ಕುಳಿತು ಬಹಳಷ್ಟು ಕಷ್ಟಪಡುತ್ತಾನೆ. ಒಂದು ದಿನ ಅತ್ತಿಯ ಹೂವು ಮಧ್ಯರಾತ್ರಿ ಅರಳಿ ದೇವಲೋಕ ಸೇರುತ್ತದೆ. ಸಹೋದರನಿಗೆ ಅತ್ತಿಯ ಹೂವು ಸಿಗದೆ ನಿರಾಶನಾಗುತ್ತಾನೆ. ಅತ್ತಿಯ ಹೂವು ಇಲ್ಲದೆ ಸಹೋದರಿ ಮದುವೆಗೆ ಹೊರಡುವುದಿಲ್ಲ. ಈ ಸಂದಿಗ್ಧದಿಂದ ಪಾರಾಗಲು ಸಹೋದರ ಚಿನ್ನದ ಅತ್ತಿ ಹೂವು ಮಾಡಿಸಿ ಸಹೋದರಿಗೆ ನೀಡಿ ಅವಳನ್ನು ಮದುವೆಗೆ ಕರೆದುಕೊಂಡು ಬರುತ್ತಾನೆ. ಎಷ್ಟೇ ಅಡ್ಡಿ ಆತಂಕಗಳು ಎದುರಾದರೂ ಸಹೋದರಿಯನ್ನು ತನ್ನ ಮದುವೆಗೆ ಸಹೋದರ ಬರಮಾಡಿಕೊಳ್ಳುತ್ತಾನೆ ಎಂಬುದು ತಾತ್ಪರ್ಯ. ಅತ್ತಿಯ ಮರಕ್ಕೂ ಈ ಆಚರಣೆಗೂ ಸಂಬಂಧ ಕಲ್ಪಿಸಲಾಗಿದೆ.

ನಾಗೋಲಿಯಿಂದ ಎದ್ದಾದ ಮೇಲೆ, ಪುರೋಹಿತರ ನಿರ್ಗಮನದ ನಂತರ ವಧೂವರರಿಗೆ ವಾಡೆಯವರ ಸೇಸೆ, ಮುಯ್ಯಿ, ಉಡುಗೊರೆಗಳು ಆಗಬೇಕು. ಹಿಂದಿನ ಕ್ರಮ ಪ್ರಕಾರ ಧಾರೆ ಅಥವಾ ಮರುಸೇಸೆಗೆ ವರನ ಕಡೆಯ ವಾಡೇಕಾರರು ಆಗಮಿಸಿದರೂ,

ಅಲ್ಲಿ ಅವರು ವರನಿಗೆ ಮುಯ್ಯಿ ಉಡುಗೊರೆಗಳನ್ನು ಇಡುತ್ತಿರಲಿಲ್ಲ. ಮನೆಯ ಮಹಿಳೆಯರು, ಮಕ್ಕಳು, ಇತರರೆಲ್ಲಾ ಹೋದರೂ ಯಜಮಾನ ಹೋಗುತ್ತಿರಲಿಲ್ಲ. ಅವನು ಮುಯ್ಯಿ ಉಡುಗೊರೆಗಳನ್ನು ಸಲ್ಲಿಸಲಿಕ್ಕಾಗಿಯೇ ರಾತ್ರಿ ನಾಗೋಲೆಯ ಸೇಸೆಗೆ ಹೋಗುತ್ತಿದ್ದ.

ವಧೂವರರನ್ನು ಮಂಟಪದಲ್ಲಿ ಬೆಂಚಿನ ಮೇಲೆ ಕುಳ್ಳಿರಿಸಿ, ಸೇಸೆ ಬಟ್ಟಲು ಇಟ್ಟು ಸೇಸೆ, ಮುಯ್ಯಿ ಬಟ್ಟಲು ಇಟ್ಟು ಮುಯ್ಯಿ ಉಡುಗೊರೆಗಳನ್ನು ಸಲ್ಲಿಸುತ್ತಾರೆ. ನಂತರ ನವದಂಪತಿ ಮನೆಯೊಳಗೆ ಹೋಗಬಹುದು. ಯಜಮಾನ ಊಟಕ್ಕೆ ನೀರಿಟ್ಟು ಸೇರಿದ್ದ ಎಲ್ಲಾ ಸಭಿಕರಿಗೆ ಊಟವಾಗುತ್ತದೆ. ಊಟವಾಗಿ ಎಲ್ಲರೂ ಅವರವರ ಮನೆಗೆ ಮರಳುತ್ತಾರೆ. ನಾಗೋಲೆ ಆದ ರಾತ್ರಿ ಧಾರೆಯ ಬಾಳೆ ಮಂಟಪವನ್ನು ಎಲ್ಲರೂ ನಿದ್ರಿಸಿದ ಮೇಲೆ, ಜನರ ಜಾಗರಣೆ ಇಲ್ಲದ ವೇಳೆಯಲ್ಲಿ, ಅದರೆ ಬೆಳಗಾಗುವ ಮೊದಲು ತೆಗೆದು ವಿಸರ್ಜಿಸಬೇಕು. ವಧುವಿನ ಮನೆಯಲ್ಲಿ ಹಾಕಿದ ಮಂಟಪ ಅದೇ ದಿನ ತೆಗೆಯುವುದಿಲ್ಲ. ಅದು ಮರುದಿನ ಬಲಗೊಡೆಯರ ಆಗಮನದ ವರೆಗೆ ಇರಬೇಕು.

****

35. ಮರುವರಿ ಶಾಸ್ತ್ರ (ಬಲಗೊಡೆಯರೂಟ) :

ಮರುದಿನ ಬಲಗೊಡೆಯರು ವಧುವಿನ ಮನೆಗೆ ಹೋಗುವ ಮರುವರಿ ಶಾಸ್ತ್ರದ ಕಾರ್ಯಕ್ರಮವಿದೆ. ಅದಕ್ಕೆ ಮೊದಲು, ವರನ ಮನೆಯಿಂದ ಬಲಗೊಡೆಯರು ಹೊರಡಬೇಕಾದರೆ, ಅಲ್ಲಿ ಅವರಿಗೆ ಮೀನೂಟ ಆಗಬೇಕು. ಇದೂ ಬುಡಕಟ್ಟು ಲಕ್ಷಣದ ಆಚರಣೆ. ಬುಡಕಟ್ಟಿನ ನಂಬಿಕೆ ಪ್ರಕಾರ ಮೀನು ಫಲವಂತಿಕೆಯ, ವಂಶಾಭಿವೃದ್ಧಿಯ ಸಂಕೇತ.

ಬೆಳಿಗ್ಗೆ ವಧೂವರರು ಮತ್ತು ಬಲಗೊಡೆಯ ಬಲಗೊಡತಿಯರು ಸಿಹಿನೀರಿನ ಮೀನು ಹಿಡಿಯಲು ಹೋಗಬೇಕು. ಮೀನು – ನದಿ, ಬಾವಿ, ಹಳ್ಳ, ಕೆರೆ.... ಎಲ್ಲಿಯದೂ ಆಗುತ್ತದೆ. ವರ ಮತ್ತು ಬಲಗೊಡೆಯ ಹಿಡಿದ ಮೀನನ್ನು ವಧು ಮತ್ತು ಬಲಗೊಡತಿ ಆಯ್ದು ತರುತ್ತಾರೆ. ವಧು ಆ ಮೀನನ್ನು ಶುಚಿಗೊಳಿಸಿ ಬಲಗೊಡತಿಯ ಸಹಕಾರದಿಂದ ಅಟ್ಟು ಮೀನು ಸಾರು ಮಾಡಬೇಕು. ಮೀನು ಶುಚಿ ಮಾಡುವಾಗ ಮದುಮಗಳಿಗೆ ಕತ್ತಿ ಸಿಗದಂತೆ ಅಡಗಿಸಿಟ್ಟು ಅಥವಾ ಹರಿತವಿಲ್ಲದ ಮೊಂಡುಕತ್ತಿ ಕೊಟ್ಟು, ಮದುಮಗಳಿಗೆ ಕೀಟಲೆ ಮಾಡುವುದುಂಟು. ಹೀಗೆ ಕೀಟಲೆ ಮಾಡುವ ಉದ್ದೇಶ ವಿಷ್ನ, ಸಂತೋಷ ಅಥವಾ ಮನೋರಂಜನೆ ಮಾತ್ರ ಅಲ್ಲ. ಬದಲಿಗೆ ವಧುವಿಗೆ ಅಡುಗೆ ಮಾಡಲು ತಿಳಿದಿದೆಯೊ ಇಲ್ಲವೋ? ಇಂತಹ ಅನನುಕೂಲ ಪರಿಸ್ಥಿತಿಗಳಲ್ಲಿ ನವವಧು ಯಾವ ರೀತಿ ಬುದ್ಧಿವಂತಿಕೆ ಉಪಯೋಗಿಸಿ ಸಫಲಳಾಗುತ್ತಾಳೆ? ಮನೆಯನ್ನು ತಾಳ್ಮೆ ಸಹನೆಗಳಿಂದ

ನಿರ್ಧರಿಸುವ ವ್ಯವಹಾರಗಳನ್ನು ಯಾವ ರೀತಿ ನಿರ್ವಹಿಸಬಹುದು? ಎಂದು ಪರೀಕ್ಷಿಸುವ ಪರೋಕ್ಷ ಉಪಾಯ ಇದಾಗಿರಬಹುದು.

ಕುಡುಬಿಯರ ಮದುವೆಯಲ್ಲಿ ಮೀನು ಅಟ್ಟು ಮಾಡುವ ಅಡುಗೆ ಇದೊಂದೇ. ಮೀನು ಅಟ್ಟು ಬಲಗೊಡೆಯರೊಂದಿಗೆ ವಧುವಿನ ಮನೆಗೆ ಹೋಗುವವರಿಗೆ ಇಲ್ಲಿ ಊಟ ಇರುವುದರಿಂದ ಇದಕ್ಕೆ 'ಮೀನೂಟ' ಎಂಬ ಹೆಸರೂ ಇದೆ. ಮದುವೆಯ ಉಳಿದೆಲ್ಲಾ ಊಟಗಳೂ ಶಾಕಾಹಾರಿಯಾಗಿದ್ದು, ಈ ಒಂದು ಊಟ ಮಾತ್ರ ಮದುವೆಯ ಎಂದು ಸಂಪ್ರದಾಯವಾಗಿ ಕುಡುಬಿಯರಲ್ಲಿ ಆಚರಿಸಲ್ಪಡುತ್ತದೆ. ಊಟಕ್ಕೆ ಕುಳಿತಿರುವಾಗ ವರನಿಗೆ, ಬಲಗೊಡೆಯ ಹಾಗೂ ಅವನ ಸಂಗಡಿಗರು ಇವರಿಗೆ ವಧುವೇ ಬಡಿಸಬೇಕು. ವರ ತನ್ನ ಊಟದೆಲೆಯಿಂದ ಒಂದು ಮುಷ್ಟಿ ವಧುವಿಗೆ ಬಡಿಸಬೇಕು.

ಬಲಗೊಡೆಯರ ಊಟ ಆಗಿ ಹೊರಡುವಾಗ ವರನ ಕಡೆಯ ಮೃತ್ತಿಕ ಕಲಶ, ಮದುಮಗಳ ಮನೆಯಿಂದ ಹೊರಡುವಾಗ ನೀಡಲು ಬೇಕಾಗುವಷ್ಟು ವೀಳ್ಯಪಟ್ಟಿಗಳನ್ನು ಜೊತೆಗೆ ಹಿಡಿದುಕೊಂಡಿರಬೇಕು. ಮದುಮಗಳು ತವರಿನ ದಿಬ್ಬಣದ ಸೀರೆ ಉಡಬೇಕು. ಚಪ್ಪರದಿಂದ ಹೊರ ಬರುವಾಗ ತೋರಣ ಮೂಲಕವೇ ಹೊರಡಬೇಕು. ಬಲಗೊಡೆಯರೊಂದಿಗೆ ಹೋಗಲಿರುವವರು ಪುರುಷರು ಆದರೂ ವಧುವಿನ ಮನೆ ನೋಡುವ ನೆಪದಿಂದ ಮಹಿಳೆಯರೂ ಹೋಗುವುದಕ್ಕೆ ಅವಕಾಶವಿದೆ. ಬಲಗೊಡೆಯರು ಇಲ್ಲಿಂದ ಹೊರಡುವಾಗ ಮತ್ತು ವಧುವಿನ ಚಪ್ಪರದ ಹತ್ತಿರ ತಲುಪಿದ ಸೂಚನಾರ್ಥವಾಗಿ ಗರ್ನಾಲು ಸಿಡಿಸುವ ಕ್ರಮವಿದೆ.

ಬಲಗೊಡೆಯರು ವಧುವಿನ ಮನೆ ತಲುಪಿದಾಗ ವಧುವಿನ ತಂದೆ ಅವರಿಗೆ ಕಾಲು ತೊಳೆಯಲು ನೀರು ಕೊಟ್ಟು ಗೌರವದಿಂದ ಸ್ವಾಗತಿಸುತ್ತಾನೆ. ವಧುವಿನ ತಾಯಿ ವಧೂವರರಿಬ್ಬರಿಗೂ ಮುಷ್ಟಿ ಅನ್ನ, ಮತ್ತು ಗಂಜಿ ತಿಳಿ ಬಟ್ಟಲು ಬಳು ಎತ್ತಿ ತೆಂಗಿನ ಮರದ ಬುಡಕ್ಕೆರೆಯುತ್ತಾಳೆ. ಎಲ್ಲರೂ ತೋರಣ ಮೂಲಕ ಚಪ್ಪರ ಪ್ರವೇಶಿಸುತ್ತಾರೆ. ಅವರಿಗೆ ಬಾಯಾರಿಕೆಗೆ ಬೆಲ್ಲ ನೀರು, ಮತ್ತು ಕವಳಕ್ಕೆ ತಾಂಬೂಲದ ಏರ್ಪಾಡು ಮಾಡಿರುತ್ತಾರೆ. ಸ್ವಲ್ಪ ಹೊತ್ತು ಚಪ್ಪರದಲ್ಲಿ ವಿಶ್ರಮಿಸಿದ ವಧು, ನಂತರ ಮನೆಯೊಳಗೆ ಹೋಗುತ್ತಾಳೆ.

35. 1. ತೈಲಾಭ್ಯಂಜನ :

ಮುಂದಿನ ಕಾರ್ಯಕ್ರಮ ತೈಲಾಭ್ಯಂಜನ. ವರ, ಬಲಗೊಡೆಯ ಸಹಿತ ಐವರು ಮತ್ತು ವಧುವಿನ ಕಡೆಯಿಂದ ಐವರು ಯುವಕರು ಪಂಚೆಯುಟ್ಟು ಖಾಲಿ ಮೈಯಲ್ಲಿ ಒಂದೇ ಬೆಂಚಿನಲ್ಲಿ ಪೂರ್ವಾಭಿಮುಖವಾಗಿ ಕೈಮುಗಿದು ಕುಳಿತುಕೊಳ್ಳುತ್ತಾರೆ. ವಧುವಿನ ತಂದೆ ಸಭೆಗೆ ತಿಳಿಸಿ, ಅವರನ್ನು ಕುಳ್ಳಿರಿಸಬೇಕು. ತಲೆಗೆ ರುಮಾಲು ಸುತ್ತಿ, ಒಂದು ಸಣ್ಣ ಗಿಂಡಿಯಲ್ಲಿ ತೆಂಗಿನೆಣ್ಣೆ ತಂದು, ಅಲ್ಲಿ ಸೇರಿದ ಸಭಿಕರಿಗೆ ಕೈಮುಗಿದು, 'ಸಮಸ್ತರು ಕೇಳಿ,

ಬಲಗೊಡೆಯರಿಗೆ ಎಣ್ಣೆ ಎರೆಯುತ್ತೇನೆ' ಎಂದು ಹೇಳಿ ಎಣ್ಣೆ ಹಾಕಲು ಪ್ರಾರಂಭಿಸುತ್ತಾನೆ. ಎಣ್ಣೆ ಎರೆಯುವಿಕೆ ಕ್ರಮವಾಗಿ ವರನ ಬಲಗಾಲ ಉಂಗುಷ್ಠದಿಂದ ಪ್ರಾರಂಭಿಸಿ ಮೊಣಗಾಲು, ಭುಜ, ಕಿವಿ ಹಾಗೂ ನೆತ್ತಿಗೆ ಏರಿಕೆ ಕ್ರಮದಲ್ಲಿ ಮತ್ತು ಎಡಬದಿಯಿಂದ ಇಳಿಕೆ ಕ್ರಮದಲ್ಲಿ ಎಡಗಾಲ ಉಂಗುಷ್ಠದ ವರೆಗೆ ಎರೆಯುತ್ತಾನೆ. ನಂತರ ಬಲಗೊಡೆಯ ಮತ್ತು ಇತರರಿಗೂ ಸರದಿಯಂತೆ ಇದೇ ಕ್ರಮದಲ್ಲಿ ಎಣ್ಣೆ ಎರೆಯುತ್ತಾನೆ. ಮದುಮಗಳ ಸಹೋದರರು ಆ ಎಣ್ಣೆಯನ್ನು ತಿಕ್ಕಿ ಮಸಾಜು ಮಾಡುತ್ತಾರೆ. ಬಲಗೊಡೆಯರಿಗೆ ಫಲಾಹಾರ ಹಾಗೂ ಕವಳಕ್ಕೆ ತಾಂಬೂಲ (ಅಡಿಕೆ ಹೋಳು ಮತ್ತು ತಾಂಬೂಲ ಮಾತ್ರ) ನೀಡುತ್ತಾರೆ. ಮದುಮಗಳ ಸಹೋದರರು ಅವರನ್ನು ಕೆರೆ, ಬಾವಿ ಅಥವಾ ಹಳ್ಳದ ತಣ್ಣೀರಲ್ಲಿ ಸ್ನಾನಮಾಡಿಸಬೇಕು. ಈ ಸಂದರ್ಭದಲ್ಲೂ ಬಲಗೊಡೆಯರಿಗೆ ಜೋಳು ಮೊಯಿಸಿ, ಅವರ ಗೋಳು ಹೊಯ್ದುಕೊಳ್ಳುವ ಮನೋರಂಜನೆಯೂ ಕೆಲವು ಕಡೆ ನಡೆಯುತ್ತದೆ. ಅವರ ಸ್ನಾನ ಮುಗಿಸಿ ಓಂದಿರುಗುವಾಗ ವಧುವಿನ ತಂದೆ ಗಂಧ ತೀಡಿ ಬಾಳೆಎಲೆಯಲ್ಲಿ ತಯಾರಿಡುತ್ತಾನೆ. ಸ್ನಾನ ಮುಗಿಸಿ ಬಂದ ಬಲಗೊಡೆಯ, ಮದುಮಗ ಮತ್ತಿತರರು ಆ ಗಂಧವನ್ನು ಹಚ್ಚಿಕೊಂಡು ತಮ್ಮ ತೊಡುಗೆಗಳನ್ನು ಧರಿಸುತ್ತಾರೆ.

ವರನ ದಿಬ್ಬಣ ವಧುವಿನ ಮನೆಗೆ ಹೋಗಿ ಆಗುವ ಮದುವೆಯಲ್ಲಿ, ಧಾರೆ ಆದ ದಿನವೇ ದಿಬ್ಬಣ ಹಿಂದೆ ಬಂದು ವರನ ಮನೆಯಲ್ಲಿ ಮರುಸೇಸೆ ಆಗುತ್ತದೆ. ಮರುದಿನ, ಬಲಗೊಡೆಯರು ವಧುವಿನ ಮನೆಗೆ ಹೋದಾಗ ಮೇಲೆ ವಿವರಿಸಿದ ಕ್ರಮ ಸಾಮಾನ್ಯ. ಆದರೆ, ವಧುವಿನ ದಿಬ್ಬಣ ವರನಲ್ಲಿಗೆ ಹೋಗಿ ಆಗುವ ಮದುವೆಯಾದಲ್ಲಿ, ವರನ ಮನೆಯಲ್ಲಿ ಮರುದಿನ ಬೆಳಿಗ್ಗೆ ಮೊಸೂಟ ಶಾಸ್ತ್ರ ಆಗಿ ಬಲಗೊಡೆಯರು ವಧುವಿನ ಮನೆಗೆ ಬರುತ್ತಾರೆ. ಇಂತಹ ವ್ಯವಸ್ಥೆಯಲ್ಲಿ ವಧುವಿನ ಮನೆಯಲ್ಲಿ ಮರುಸೇಸೆ ಇರುತ್ತದೆ. ಕೆಲವು ಅಪರೂಪದ ಸಂದರ್ಭಗಳಲ್ಲಿ ಮಾತ್ರ ವಧುವಿನ ಮುಯ್ಯಿ, ಉಡುಗೊರೆಗಳನ್ನು ವರನ ಮನೆಯಲ್ಲೇ ತೀರಿಸುತ್ತಾರೆ.

ಬಲಗೊಡೆಯರು ಸ್ನಾನ ಮುಗಿಸಿ ಬಂದ ಮೇಲೆ ವಧುವಿನ ಮಂಟಪದಲ್ಲಿ ಸೇಸೆ, ಮುಯ್ಯಿ, ಉಡುಗೊರೆಗಳಾಗಬೇಕು. ವಧುವಿನ ಮುಯ್ಯಿ ಉಡುಗೊರೆಗಳನ್ನು ವರನ ಮನೆಯಲ್ಲೇ ತೀರಿಸುವಿಕೆ ವಧುವಿನ ಕಡೆಯವರಿಗೆ ಗೌರವಕ್ಕೆ ಕುಂದು. ಒಂದು ವೇಳೆ ವಧುವಿನ ಮುಯ್ಯಿ ಉಡುಗೊರೆಗಳನ್ನು ವರನ ಮನೆಯಲ್ಲೇ ತೀರಿಸಿದ್ದಲ್ಲಿ, ಪುನಃ ವಧುವಿನ ಮನೆಯಲ್ಲಿ ಮುಯ್ಯಿ ಉಡುಗೊರೆಗಳ ಪದ್ಧತಿ ಅವಶ್ಯವಿಲ್ಲ. ಆದರೆ ಸೇಸೆಯ ಸಂಪ್ರದಾಯ ಆಗಲೇಬೇಕು. ಬಲಗೊಡೆಯರ ಸ್ನಾನ ಮುಗಿದಂತೆ ಎಲ್ಲರನ್ನು ಊಟಕ್ಕೆ ಎಬ್ಬಿಸುತ್ತಾರೆ. ಇಂತಹ ವ್ಯವಸ್ಥೆಯ ಮದುವೆಯಾದಲ್ಲಿ ವಧುವಿನ ಚಪ್ಪರದಲ್ಲಿ ಮಂಟಪದ ಅವಶ್ಯಕತೆಯೂ ಇರುವುದಿಲ್ಲ. ಬೆಂಚು ಇಟ್ಟು, ವಧೂವರರನ್ನು ಕುಳ್ಳಿರಿಸಿ ಸೇಸೆ ಕ್ರಮವನ್ನು ಮುಗಿಸಬಹುದು. ಆದರೂ ಸಾಮಾನ್ಯವಾಗಿ ಮಂಟಪವನ್ನು ಹಾಕಿಯೇ ಹಾಕುತ್ತಾರೆ. ಮಂಟಪವನ್ನು ಮಡಿವಾಳನ ಅವಶ್ಯಕತೆಯಿಲ್ಲದೆ ಯಾರೂ ಹಾಕಬಹುದು.

ವರ ಮತ್ತು ಬಲಗೊಡೆಯರು ತಮ್ಮ ಧಿರಿಸುಗಳನ್ನು ಹಾಗೂ ಮದುಮಗಳು ತವರಿನ ಸೀರೆಯುಟ್ಟು ತಯಾರಾಗುತ್ತಾರೆ. ವಧುವಿನ ತಂದೆ ಸೇಸೆ ಬಟ್ಟಲಿಟ್ಟು ಸೇಸೆಯಾಗಬೇಕು. ಗುರಿಕಾರ ರಾಯಭಾರಿಯವರ ಮಾರ್ಗದರ್ಶನದಲ್ಲಿ ಸೇಸೆ ಮತ್ತು ವರನ ಮನೆಯಲ್ಲಿ ವರನ ಕಡೆಯ ಮುಯ್ಯಿ ಉಡುಗೊರೆ ಮಾಡಿದ ಯಥಾವತ್ ಕ್ರಮದಲ್ಲೇ ಇಲ್ಲಿಯೂ ವಧುವಿನ ಕಡೆಯ ಮುಯ್ಯಿ ಉಡುಗೊರೆಗಳು ಆಗಬೇಕು. ವರನ ಕಡೆಯವರು ಜೀಗರಿಗೆ, ಅಂದರೆ ವಧುವಿನ ಕಡೆಯವರು ವರನ ಮನೆಯಲ್ಲಿ ವರನಿಗೆ ಮಾಡಿದ ಮುಯ್ಯಿಯ ಗೌರವವನ್ನು ಇಲ್ಲಿ ಹಿಂದೆ ಸಲ್ಲಿಸಬೇಕು. ಅದನ್ನು ಹಿಂದೆ ಸಲ್ಲಿಸದಿದ್ದರೆ ವರನ ಕಡೆಯವರಿಗೆ ಅಗೌರವ ಮತ್ತು ವಧುವಿನ ಕಡೆಯವರ ದೂಶಣೆಯನ್ನು ಕೇಳಬೇಕಾಗುತ್ತದೆ. ಇದೇ ಕಾರಣದಿಂದ ಕೆಲವು ಬಾರಿ ವಾಗ್ವಾದಗಳು ಉದ್ಭವಿಸಿ ದ್ವಿಪಕ್ಷೀಯರಲ್ಲಿ ವೈಮನಸ್ಯಕ್ಕೆ ಕಾರಣವಾಗುವುದುಂಟು. ವರನ ಮನೆಯಲ್ಲಿ ವಧುವಿನ ತಂದೆತಾಯಿಯರಿಗೆ ನೀಡಿದ ಉಡುಗೊರೆಗಳಿಗೆ ಪ್ರತಿಯಾಗಿ ಇಲ್ಲಿ ವರನ ತಂದೆ ತಾಯಿಯರಿಗೆ ವಧುವಿನ ಕಡೆಯಿಂದ ಉಡುಗೊರೆಗಳು ಸಂದಾಯವಾಗಬೇಕು. ಸೇಸೆ, ಮುಯ್ಯಿ, ಉಡುಗೊರೆಗಳು ಮುಗಿದ ಮೇಲೆ ವಧುವಿನ ತಂದೆ ಮುಯ್ಯಿ ಬಟ್ಟಲು ಮತ್ತು ಸೇಸೆ ಬಟ್ಟಲುಗಳನ್ನು ತೆಗೆಯುತ್ತಾನೆ. ವಧೂವರರನ್ನು ಎಬ್ಬಿಸಿ, ವರನು ವಧುವಿನ ಮನೆಯೊಳಗೆ ಹೋಗಿ ಚಪ್ಪರಕ್ಕೆ ಹಿಂದಿರುಗುತ್ತಾನೆ. ಈ ಸಂದರ್ಭ ಗೃಹಪ್ರವೇಶದ ಕ್ರಮ ಅಗತ್ಯವಿಲ್ಲ.

ಈ ರೀತಿ ಮುಯ್ಯಿ ಉಡುಗೊರೆಗಳಾಗಿ ವಧೂವರರು ಎದ್ದ ಮೇಲೆ ವಧುವಿನ ಕಡೆಯಿಂದ ತನ್ನವರಿಗೆ, ಮದುವೆಗೆ ಸಹಕಾರ ನೀಡಿದವರಿಗೆ, ಬಲಗೊಡತಿಗೆ ವಸ್ತ್ರರೂಪದ ಉಡುಗೊರೆ ನೀಡಿ ವಧು ಆಶೀರ್ವಾದ ಪಡೆಯುತ್ತಾಳೆ. ಚಪ್ಪರದಲ್ಲಿ ದಂಪತಿ ಜೋಡಿಗಳನ್ನು ಕುಳ್ಳಿರಿಸಿ ಉಡುಗೊರೆಗಳನ್ನು ನೀಡಿ ವಧು ಕಾಲಿಗೆರಗುತ್ತಾಳೆ. ಈ ಉಡುಗೊರೆಗಳನ್ನು ಅರಸಿನ ಶಾಸ್ತ್ರದ ರಾತ್ರಿಯೂ ಪೂರೈಸುವುದಿದೆ.

ವಧುವಿನ ತಂದೆ ನೀರಿಟ್ಟು ಎಲ್ಲರನ್ನು ಊಟಕ್ಕೆ ಎಬ್ಬಿಸುತ್ತಾನೆ. ಬಲಗೊಡೆಯರಿಗೆ ಮತ್ತು ನೆರೆದವರೆಲ್ಲರಿಗೆ ಔತಣವಾಗುತ್ತದೆ. ಇಲ್ಲಿ ವರ ಮತ್ತು ವಧು ಪಂಗ್ತಿಯಲ್ಲಿ ಒಟ್ಟಿಗೆ ಕುಳಿತುಕೊಳ್ಳಬೇಕು. ಈ ಊಟದಲ್ಲಿ ಮೀನು ಸಾರು ಆಗಬೇಕೆಂಬ ನಿಯಮವಿಲ್ಲ. ಆದರೆ, ವರನ ಮನೆಯಲ್ಲಿ ಮೀನೂಟ ಮಾಡಿರುತ್ತಾರೆ ಅಂತ ಕೆಲವು ಸಂದರ್ಭಗಳಲ್ಲಿ ವಧುವಿನ ಮನೆಯಲ್ಲೂ ಮೀನೂಟ ಮಾಡುವ ಕ್ರಮವಿದೆ.

35. 2. ವರಗೃಹ ಗಮನ :

ಊಟ ಮುಗಿದು ವರ ಮತ್ತು ವಧುವಿನ ಮೃತ್ತಿಕ ಕಲಶಗಳನ್ನು ಪರಸ್ಪರ ಅದಲು ಬದಲು ಮಾಡಿಕೊಳ್ಳುತ್ತಾರೆ. ವಧುವಿಗೆ ತವರು ಮನೆಯಲ್ಲಿ ಹಾಕಿದ್ದ ಬಾಡಿಗೆ ಒಡವೆಗಳಿದ್ದರೆ ಕಳಚುತ್ತಾರೆ. ಬಲಗೊಡೆಯರು ಹಿಂದಿರುಗುವ ತಯಾರಿ ನಡೆಸುತ್ತಾರೆ. ಹೊರಡುವಾಗ ವಧುವಿಗೆ ನಿತ್ಯೋಪಯೋಗಿ ವಸ್ತುಗಳನ್ನು ತವರಿನ ಕಡೆಯಿಂದ ಕೊಡುವ

ಕ್ರಮವಿದೆ. ಊಟದ ತಟ್ಟೆ, ತಂಬಿಗೆ, ಸೀರೆ ವಸ್ತ್ರಗಳು, ಪೆಟ್ಟಿಗೆ..... ಇತ್ಯಾದಿ ವಸ್ತುಗಳನ್ನು ಕೊಡುತ್ತಾರೆ. ಪತಿಯ ಮನೆಗೆ ಪ್ರಥಮವಾಗಿ ಹೋಗುವಾಗ ಅಲ್ಲಿ ಮಗಳಿಗೆ ಮುಜುಗರವಾಗದಿರಲಿ, ಪತಿಮನೆಯವರ ಹಂಗಿಸುವಿಕೆಗೆ ಒಳಗಾಗದಿರಲಿ ಎಂದು ತವರಿನವರ ಈ ವ್ಯವಸ್ಥೆಯಾಗಿರುತ್ತದೆ. ತವರಿನಿಂದ ಕೊಡುವ ಈ ವಸ್ತುರೂಪದ ಕಾಣಿಕೆಗೆ 'ಅಂದಾಣ್' ಅಂತ ಹೆಸರು.

ವರನು ವಧುವಿನ ಕಡೆಯ ಹಿರಿಯರಿಗೆ, ವಧುವಿನ ತಂದೆ ತಾಯಿ, ಸಹೋದರರು, ಚಿಕ್ಕಪ್ಪ ದೊಡ್ಡಪ್ಪ, ಅಜ್ಜ ಅಜ್ಜಿ, ಸೋದರ ಮಾವ ಸೋದರತ್ತೆ..... ಮುಂತಾದವರಿಗೆ ವೀಳ್ಯಪಟ್ಟಿ ನೀಡಿ, ವಧೂವರರಿಬ್ಬರೂ ಕಾಲಿಗೆರಗುತ್ತಾರೆ. ವರನಿಗೆ ವಧುವಿನ ಪಕ್ಷದ ಎಲ್ಲರ ಪರಿಚಯವಿರುವುದಿಲ್ಲ. ಅವನಿಗೆ ಅವರ ಸಂಬಂಧ ತಿಳಿಯಲಿಕ್ಕಾಗಿ ವೀಳ್ಯಪಟ್ಟಿ ನೀಡುವಾಗ, ಪಡೆಯುವವನ ಪರಿಚಯವನ್ನು ಮಾಡಿಕೊಡಲಾಗುತ್ತದೆ. ಹೀಗೆ ವೀಳ್ಯ ನೀಡಲು ಬಹಳಷ್ಟು ವೀಳ್ಯಪಟ್ಟಿಗಳು ಬೇಕಾಗುತ್ತವೆ.

ನಂತರ ವಧೂವರರಿಬ್ಬರೂ ಹೋಗಿ ವಧುವಿನ ಅಡುಗೆ ಚಪ್ಪರದಲ್ಲಿ ಕುಂಭ ಮುಹೂರ್ತಕ್ಕೆ ಏರಿಸಿದ್ದ ಕುಂಭವನ್ನು ಇಬ್ಬರೂ ಹಿಡಿದು ಇಳಿಸುತ್ತಾರೆ. ವಧುವು ವರನ ಮನೆಗೆ ಹೋಗಿ ಆಗುವ ಮದುವೆಯಾಗಲೀ ಅಥವಾ ವರನೇ ವಧುವಿನ ಮನೆಗೆ ಹೋಗಿ ಆಗುವ ಮದುವೆ ಆಗಿರಲಿ, ವರಗೃಹಗಮನ ಸಂದರ್ಭದಲ್ಲಿ, ವಧೂವರರಿಬ್ಬರೂ ಮೊದಲು ವಧೂಗೃಹದ ಕುಂಭಮುಹೂರ್ತದ ಘಡಿಗೆ ಇಳಿಸಬೇಕು. ವಧು ತನ್ನವರೆಲ್ಲರೊಂದಿಗೆ 'ಹೋಗಿ ಬರುತ್ತೇನೆ' ಎಂದು ಹೇಳುತ್ತಾಳೆ. ಅಗಲುವಿಕೆಯ ಈ ಹೊತ್ತಿನಲ್ಲಿ ವಧುವಿಗೆ ಮತ್ತು ಆಕೆಯ ಹೆತ್ತವರಿಗೆ ಈ ವರೆಗೆ ಕಟ್ಟಿಕೊಂಡ ದುಃಖವೆಲ್ಲ ಉಮ್ಮಳಿಸಿ ಹೊರಹೊಮ್ಮುತ್ತದೆ. ಚಪ್ಪರದಿಂದ ಹೊರಬರುವಾಗ ತೋರಣ ಮೂಲಕವೇ ಹೊರಬಂದು, ವಧೂವರರಿಬ್ಬರೂ ಹಿಡಿದು ತೋರಣವನ್ನು ತೆಗೆಯುತ್ತಾರೆ. ಚಪ್ಪರ ತೆಗೆಯುವ ಶಾಸ್ತ್ರವಾಗಿ ಚಪ್ಪರದ ಮಡಲನ್ನು ತೆಗೆಯುತ್ತಾರೆ. ವಧುವು ಪತಿಗೃಹಕ್ಕೆ ತೆರಳುವ ಈ ಸಂದರ್ಭದಲ್ಲಿ ತವರಿನಿಂದ ಕೊಟ್ಟಿರುವ ವಸ್ತುಗಳನ್ನು ಅವಳಿಗೆ ತಲುಪಿಸಲು ವಧುವಿನ ಸಹೋದರ ಅಥವಾ ಸೋದರ ಮಾವ ವಧೂವರರೊಟ್ಟಿಗೇ ಹೋಗುವ ವಾಡಿಕೆ ಇದೆ.

ವಧೂವರರು ಹಿಂದಿರುಗಿ ವರನ ಮನೆ ತಲುಪಿದಾಗ ವರನ ತಾಯಿ ಅವರಿಗೆ ಅಂಗಳದ ಹೊರಗೆ ಬಳುವಿತ್ತಿ ತೆಂಗಿನ ಮರದ ಬುಡಕ್ಕೆರೆಯುತ್ತಾಳೆ. ಇಬ್ಬರೂ ತೋರಣ ಮೂಲಕ ಚಪ್ಪರ ಪ್ರವೇಶಿಸಿ, ಇಬ್ಬರೂ ಹಿಡಿದು ಮೊದಲಿಗೆ ತೋರಣ ತೆಗೆದು, ಚಪ್ಪರ ತೆಗೆವ ಶಾಸ್ತ್ರವಾಗಿ ಚಪ್ಪರದ ಮಡಲು ತೆಗೆದು, ಅಡುಗೆ ಚಪ್ಪರದಲ್ಲಿನ ಕುಂಭಮುಹೂರ್ತದ ಘಡಿಗೆಯನ್ನು ಕೆಳಗಿಳಿಸುತ್ತಾರೆ. ದಂಪತಿ ಮನೆಪ್ರವೇಶಗೈದು ಬಾಯಿ ಎಂಜಲು ಮಾಡಿಕೊಳ್ಳಲು ಏನಾದರೂ ತಿನ್ನಬೇಕು. ಇಷ್ಟರಲ್ಲಿ ವಿವಾಹ ಸಂಭ್ರಮ ಕೊನೆಗೊಳ್ಳುತ್ತದೆ.

ಕಲಶಹಿಡಿದ ವಧುವಿನ ಸಹೋದರನಿಗೆ, ಕಲಶಗಿತ್ತಿಗೆ, ಗುರಿಕಾರ ರಾಯಭಾರಿಯವರಿಗೆ ವೀಳ್ಯಪಟ್ಟೆಯೊಂದಿಗೆ ಮಾಟೋಟಿಯಲ್ಲಿನ ಕಲಶಗಳಲ್ಲಿ ಒಂದೊಂದು ಮತ್ತು ಪುರೋಹಿತರಿಗೆ ಒಂದು ಕಲಶಗಳು, ವೀಳ್ಯಪಟ್ಟೆ – ಕಾಣಿಕೆಯೊಂದಿಗೆ ವಿವಾಹದ ಕೊನೆಯಲ್ಲಿ ಗೌರವಾರ್ಥವಾಗಿ ಸಲ್ಲಿಸಲ್ಪಡುತ್ತವೆ.

36. ಪಂಚಾವರ್ತನ (ಪಂಚ ಮರುವರಿ) :

ವಿವಾಹದ ನಂತರ ಮದುಮಗಳನ್ನು ತವರಿಗೆ ಕರೆದುಕೊಂಡು ಹೋಗುವುದು, ಹಿಂದೆ ಪತಿಯ ಮನೆಗೆ ಕರೆತರುವುದು ಇರುತ್ತದೆ. ವಿವಾಹವಾದ ಪ್ರಾರಂಭದ ದಿನಗಳಲ್ಲಿ ಮದುಮಗಳು ಒಬ್ಬಳನ್ನೇ ತವರಿಗೆ ಕಳುಹಿಸುವುದು ಅಥವಾ ಕರೆತರುವ ಕ್ರಮವಿಲ್ಲ. ಪತಿಯ ಮನೆಯಿಂದ ತವರಿಗೆ ವಿವಾಹದ ಐದನೇ ದಿನ ಹಿಂದೆ ಕರೆದುಕೊಂಡು ಹೋಗಬಹುದು. ಕರೆತರುವ ಮತ್ತು ಕಳುಹಿಸುವುದನ್ನು ಅವರವರ ಅನುಕೂಲಕ್ಕೆ ತಕ್ಕ ಹಾಗೆ ಮಾಡುತ್ತಾರೆ. ಹೀಗೆ ಮದುಮಗಳನ್ನು ಕರೆತರಲು ಮಹಿಳೆಯರು ಹೋಗುವಂತಿಲ್ಲ. ಮದುಮಗಳ ಸಹೋದರ, ಚಿಕ್ಕಪ್ಪ, ಸೋದರ ಮಾವ ಅಥವಾ ಇವರಲ್ಲಿನ ಯಾರಾದರೊಬ್ಬ ಅವಿವಾಹಿತ ಹುಡುಗ ತವರಿಗೆ ಕರೆತರಲು ಮತ್ತು ತವರಿನಿಂದ ಕರೆದುಕೊಂಡು ಹೋಗಲು ಮಾವ, ಷಡ್ಡುಕ, ಪತಿಯ ಕಿರಿಯ ಸಹೋದರ (ಮೈದುನ) ಮುಂತಾದವರು ಹೋಗಬಹುದು. ಮದುವೆಯಾದ ಮಗಳನ್ನು ತಾಯಿಮನೆಯಿಂದ ಮೂರನೇ ದಿನ, ಮಂಗಳವಾರ, ಶುಕ್ರವಾರ, ಭರಣೀಕೃತ್ತಿಕೆ, ಅಮಾವಾಸ್ಯೆ, ಸಂಕ್ರಮಣದ ಮರುದಿನ (ಸಿಂಗೊಡೆ ದಿನ) ಗಂಡನ ಮನೆಗೆ ಕಳುಹಿಸಬಾರದು ಎಂಬ ನಂಬಿಕೆ ಇದೆ. ಈ ರೀತಿ ಮದುಮಗಳು ಐದು ಬಾರಿ ತವರಿನಿಂದ ಪತಿಯ ಮನೆಗೆ, ಪತಿಯ ಮನೆಯಿಂದ ತವರಿಗೆ ಮನೆ ಬದಲಾಯಿಸಬೇಕು. ಇದಕ್ಕೆ 'ಪಂಚಾವರ್ತನ' 'ಪಂಚ ಮರುವರಿ' ಎಂದು ಹೆಸರು. ಪಂಚಾವರ್ತನಕ್ಕೆ ಮದುಮಗಳನ್ನು ತವರಿಗೆ ಕರೆದುಕೊಂಡು ಹೋಗುವವರು ಒಂದು ದಿನ ಮುಂಚಿತವಾಗಿ ಹೋಗಬೇಕು. ವರನ ಮನೆಯಲ್ಲಿ ಒಂದು ರಾತ್ರಿ ತಂಗಿ, ಮರುದಿನ ಅವರ ಸಮ್ಮಾನದ ಪಾಯಸದೂಟ ಆಗಿ ಮದುಮಗಳನ್ನು ಕರೆದುಕೊಂಡು ಹೋಗಬೇಕು. ತವರಿನಿಂದ ವಾಪಾಸು ಕರೆದುಕೊಂಡು ಹೋಗುವವರೂ ಹಾಗೆಯೇ ಒಂದು ದಿನ ಮುಂಚಿತವಾಗಿ ಹೋಗಿ, ಮರುದಿನ ಸಮ್ಮಾನದೂಟ ಆಗಿಯೇ ಕರೆದುಕೊಂಡು ಹೋಗಬೇಕು. ಪಂಚಾವರ್ತನದ ಈ ದಿನಗಳಲ್ಲಿ ಪತಿಯೇ ಪತ್ನಿಯನ್ನು ಕರೆದುಕೊಂಡು ಬರಲು ಹೋಗುವಂತಿಲ್ಲ. ಪತಿಯಾದವನು ಪ್ರಸ್ತ ಆಚರಣೆಯ ಶಯನೀ ಏಕಾದಶಿವರೆಗೆ ಅತ್ತೆಯ ಮುಖ ನೋಡಬಾರದೆಂಬ ಕಟ್ಟು ಕಟ್ಟಳೆ ಕುಡುಬಿಯರಲ್ಲಿದೆ. ಕೆಲವು ಕಡೆ ಮದುವೆಯಾದಂದಿನಿಂದ ಶಯನೀ ಏಕಾದಶಿವರೆಗೆ ಮದುಮಗಳು ತವರಿಗೆ ಹೋದಾಗಲೆಲ್ಲಾ ಒಂದು ತೆಂಗಿನಕಾಯಿಯನ್ನು ಜೊತೆಗೆ ಒಯ್ಯಬೇಕೆಂಬ ಶಾಸ್ತ್ರವಿದೆ ಅಂತ ತಿಳಿದುಬರುತ್ತದೆ.

ಪಂಚಾವರ್ತನ ಮುಗಿದಾಗ ನವದಂಪತಿಗೆ ಸಮೀಪ ಬಂಧುಗಳ ಸಮ್ಮಾನದ 'ಕೋರೆ ಊಟ'ವಿರುತ್ತದೆ. ಪ್ರಾರಂಭದಲ್ಲಿ ಬಲಗೊಡೆಯನ ಸಮ್ಮಾನದೂಟ ಆಗಬೇಕು. ಬಲಗೊಡೆಯನ ಕೋರೆ ಊಟವಾಗದೆ ಇತರೆಡೆ ಸಮ್ಮಾನಕ್ಕೆ ಹೋಗುವಂತಿಲ್ಲ. ಈ ಕೋರೆ ಊಟಗಳು ಮದುಮಗಳ ಕಡೆಯವರದೂ ಇರುತ್ತವೆ. ನೆಂಟರಿಷ್ಟರು ಸಮ್ಮಾನಕ್ಕೆ ಕರೆದಾಗಲೂ ವಧೂವರರು ಒಂದು ದಿನ ಮುಂಚಿತವಾಗಿ ಹೋಗಿ, ರಾತ್ರಿ ತಂಗಿ ಮರುದಿನ ಸಮ್ಮಾನದೂಟ ಆಗಿ ವಾಪಾಸು ಬರುತ್ತಾರೆ. ಈಗಿನ ಕ್ರಮಪ್ರಕಾರ ವರನು ಅತ್ತೆ ಮಾವಂದಿರಿಗೆ ಮದುವೆಯ ದಿನ ವಸ್ತ್ರ ಉಡುಗೊರೆ ನೀಡಿರದಿದ್ದರೆ, ವಿವಾಹಾನಂತರ ಒಂದು ದಿನ ಅತ್ತೆ ಮಾವ ಇಬ್ಬರನ್ನೂ ಕರೆದು, ಸಮ್ಮಾನ ಮಾಡಿ, ಉಡುಗೊರೆ ನೀಡಿ, ಮದುಮಗಳನ್ನು ಅವರೊಂದಿಗೆ ಕಳುಹಿಸಿಕೊಡುವ ಕ್ರಮ ಇದೆ. ಹಾಗೆಯೇ ವಧುವಿನ ತವರಿನವರೂ ವರನ ತಂದೆತಾಯಿಯನ್ನು ಸಮ್ಮಾನದೂಟಕ್ಕೆ ಕರೆದು ಉಡುಗೊರೆ ನೀಡುವ ಸಂಪ್ರದಾಯವಿದೆ.

37. ಶೋಭನ ಪ್ರಸ್ತ (ನಿಷೇಕ ಶಾಸ್ತ್ರ) :

ಕೋರೆ ಊಟದ ಸಮ್ಮಾನಗಳು ಸುಮಾರು ಪ್ರಥಮ ಏಕಾದಶಿಗಿಂತ ಮೊದಲು ಮುಗಿಯುತ್ತವೆ. ಕೊಡಿಯಾಲ್ ಕುಡುಬಿಯರ ಸಂಪ್ರದಾಯ ಪ್ರಕಾರ ಪ್ರಥಮ ಏಕಾದಶಿವರೆಗೆ ವಧೂವರರಿಗೆ 'ಪ್ರಸ್ತ' ಆಚರಣೆ ಇಲ್ಲ. ಪ್ರಸ್ತ ಆಚರಣೆವರೆಗೆ ನವದಂಪತಿಗೆ ದೈಹಿಕ ಸಂಪರ್ಕಕ್ಕೆ ಅವಕಾಶವಿಲ್ಲ. ಏಕಾದಶಿಗೆ ವರ ಮತ್ತು ಬಲಗೊಡೆಯ ವಧುವಿನ ತವರಿನಲ್ಲಿ ಉಪವಾಸ ವ್ರತ ಆಚರಣೆ ಮಾಡಬೇಕಿದೆ. ಇದಕ್ಕಾಗಿ ವಧೂವರರು ಮತ್ತು ಬಲಗೊಡೆಯನನ್ನು ಕರೆತರಲು ವಧುವಿನ ಸಹೋದರ ಅಥವಾ ಕುಟುಂಬದ ಯಾರಾದರೊಬ್ಬ ನವಮಿ ದಿನ ವರನಲ್ಲಿಗೆ ಹೋಗುತ್ತಾನೆ. ಆ ರಾತ್ರಿ ಆತ ವರನಲ್ಲಿ ತಂಗಬೇಕು. ದಶಮಿ ದಿನ ವರ ಬಲಗೊಡೆಯನಲ್ಲಿ ಹೋಗಿ ಆತನನ್ನು ಕರೆತರುತ್ತಾನೆ. ದಶಮಿಯ ಸಂಜೆ ವಧೂವರರು, ಬಲಗೊಡೆಯ ಹಾಗೂ ಕರೆದುಕೊಂಡು ಹೋಗುವ ವ್ಯಕ್ತಿ– ನಾಲ್ವರೂ ಹೊರಟು ಗೋಧೂಳಿ ಸಮಯಕ್ಕೆ ವಧುವಿನ ತವರು ತಲುಪುತ್ತಾರೆ. ಇಲ್ಲಿಗೆ ಬರುವಾಗ ವರ, ಅತ್ತೆ ಮಾವಂದಿರಿಗೆ ಉಡುಗೊರೆ ನೀಡಲು ಒಂದು ಬಾಳೆಗೊನೆ, ಒಂದು ಇಡೀ ಎಸಳು ತಂಬಾಕು ಮತ್ತು ವೀಳ್ಯದೆಲೆ ಅಡಿಕೆಗಳನ್ನು ತಂದು ಅವರಿಗೆ ಅದನ್ನು ಸಲ್ಲಿಸಬೇಕು.

ಮದುವೆಯಾದ ಮೇಲೆ ವಧುವಿನ ತವರಿಗೆ ಇದು ವರನ ಪ್ರಥಮ ಭೇಟಿ ಮತ್ತು ಅತ್ತೆಯ ಪ್ರಥಮ ಮುಖದರ್ಶನ. ಆದುದರಿಂದ ಅಳಿಯನಿಗೆ ಇಲ್ಲಿ ವಿಶೇಷ ಗೌರವವಿರುತ್ತದೆ. ಮರುದಿನ ಏಕಾದಶಿಯಂದು ವರ ಮತ್ತು ಬಲಗೊಡೆಯ ಉಪವಾಸ ವ್ರತ ಹಿಡಿಯಬೇಕು. ಫಲಾಹಾರ ಸ್ವೀಕರಿಸಬಹುದು. ದ್ವಾದಶಿಯಂದು ಉಪವಾಸ ಬಿಡುವಾಗ ಮೂಡೆ, ಹಲಸಿನೆಲೆಯ ಕೊಟ್ಟಿಗೆ, ಶ್ಯಾವಿಗೆ ಪಾಯಸದ ಊಟವಿರುತ್ತದೆ. ವರನಿಗೆ ಅತ್ತೆಯೇ ಕುಡಿಬಾಳೆ ಎಲೆಯಲ್ಲಿ ಬಡಿಸುತ್ತಾಳೆ. ಊಟವಾದ ಮೇಲೆ ಅಳಿಯ, ಅತ್ತೆಗೆ ಕಾಣಿಕೆ

ನೀಡಬೇಕು. ಕಾಣಿಕೆ ಚಿನ್ನ ಅಥವಾ ಹಣದ ರೂಪದಲ್ಲಿರುತ್ತದೆ. ಕಾಣಿಕೆಯನ್ನು ವೀಳ್ಯಪಟ್ಟಿಯೊಂದಿಗೆ, ಪ್ರಥಮವಾಗಿ ಅತ್ತೆಗೇ ನೀಡಿ, ಕಾಲಿಗೆರಗಬೇಕು. ಪರೋಕ್ಷವಾಗಿ ಈ ಆಚರಣೆ, ಪ್ರಸ್ತಕ್ಕೆ ಅಳಿಯ, ಅತ್ತೆಯಿಂದ ಅನುಮತಿ ಪಡೆಯುವ ಸಂಪ್ರದಾಯ. ಹಿಂದಿನ ಕಾಲದಲ್ಲಿ ಕಾಣಿಕೆಯ ವಸ್ತು ಅಥವಾ ಹಣವನ್ನು ಅಳಿಯ ತಾನು ಉಂಡ ಬಾಳೆಲೆಯ ಅಡಿಯಲ್ಲಿ ಇಡುವ ಕ್ರಮವಿತ್ತು. ಅಳಿಯನ ಎಂಜಲೆಲೆಯನ್ನು ಅತ್ತೆಯೇ ಎತ್ತಬೇಕು. ಎಂಜಲೆಲೆಯ ಅಡಿಯಲ್ಲಿದ್ದ ಕಾಣಿಕೆ ಆಕೆಗೇ ಸಲ್ಲುತ್ತದೆ. ನಂತರ ವರ, ಉಳಿದವರಿಗೂ ಅಂದರೆ ಮಾವ, ಭಾವಂದಿರು, ಮದುಮಗಳ ಸೋದರ ಮಾವ ಮತ್ತಿತರ ಹಿರಿಯರಿದ್ದರೆ ಅವರೆಲ್ಲರಿಗೆ ವೀಳ್ಯಪಟ್ಟಿ ನೀಡಿ ಕಾಲಿಗೆರಗುತ್ತಾನೆ. ಇದಾಗಿ ವಧೂವರರು ಮತ್ತು ಬಲಗೊಡೆಯ ಮೂವರೂ ವಾಪಸಾಗುತ್ತಾರೆ.

ಪ್ರಸ್ತದ ನಂತರ ದಂಪತಿ ಮಧ್ಯೆ ದೈಹಿಕ ಸಂಪರ್ಕ ಯಾವಾಗಲೂ ಏರ್ಪಡಬಹುದು. ನವದಂಪತಿಗೆ ಪ್ರಥಮ ರಾತ್ರಿಯನ್ನು ಕಳೆಯಲು ಬಲಿಚಾಪೆಯೇ ಆಗಬೇಕು. ಈ ಬಲಿಚಾಪೆಯನ್ನು ವರನ ತಾಯಿಯೇ ಹಾಸಿಕೊಡುವ ಸಂಪ್ರದಾಯವಿದೆ. ಆದುದರಿಂದಲೇ ಈ ಏಕಾದಶಿಗೆ 'ಶಯನೀ ಏಕಾದಶಿ' ಎಂಬ ಹೆಸರು ಅನ್ವರ್ಥವಾಗಿದೆ.

ಏಕಾದಶಿಯ ನಂತರದ ಎಲ್ಲಾ ಹಬ್ಬ ಹರಿದಿನಗಳಲ್ಲಿ, ಊರ ಜಾತ್ರೆ ಆಯನಗಳಿಗೆ, ಶುಭಕಾರ್ಯಗಳಲ್ಲಿ ಪತಿಪತ್ನಿ ಇಬ್ಬರೂ ಒಟ್ಟಿಗೆ ವಧುವಿನ ತವರಿಗೆ ಬರಬಹುದು. ಸಂಪ್ರದಾಯ ಪ್ರಕಾರ ತುಳುನಾಡಿನ ಕಾರ್ತೆಲ್ ತಿಂಗಳು ಕುಡುಬಿಯರಿಗೆ ಆಷಾಢ. ಆದರೆ ಇಲ್ಲಿಯ ಸಂಪ್ರದಾಯದಂತೆ ಆಟಿ ತಿಂಗಳು ಆಷಾಢವಾದುದರಿಂದ ಆಟಿ ತಿಂಗಳನ್ನು ಕುಡುಬಿಯರೂ ಆಷಾಢವಾಗಿ ಆಚರಿಸುವುದು ಸಾಮಾನ್ಯವಾಗಿದೆ. ಹೆಚ್ಚಿನ ಬುಡಕಟ್ಟು ಪಂಗಡಗಳಲ್ಲಿರುವಂತೆ ಆಟಿ (ಆಷಾಢ) ಒಂದು ತಿಂಗಳು ನವವಧು ತಾಯಿಮನೆಗೆ ಬಂದು ನಿಲ್ಲುವ ಪದ್ಧತಿ ಕುಡುಬಿಯರಲ್ಲಿಯೂ ಇದೆ. ಸಾಮಾನ್ಯವಾಗಿ ಕೃಷಿ ಕಾರ್ಯಗಳಿಗೆ ಆಷಾಢದಲ್ಲಿ ವಿರಾಮವಿರುತ್ತದೆ. ಈ ತಿಂಗಳಲ್ಲಿ ಅತ್ತೆ ಸೊಸೆ ಇಬ್ಬರೂ ಒಂದೇ ಹೊಸ್ತಿಲ ಮೂಲಕ ದಾಟಬಾರದು. ದಾಟಿದಲ್ಲಿ ಕಷ್ಟನಷ್ಟಗಳು ಉಂಟಾಗುತ್ತವೆ. ಶುಭ ಲಕ್ಷಣವಲ್ಲ ಎಂಬ ನಂಬಿಕೆಯೂ ಸಮಾಜದಲ್ಲಿದೆ. ಮಳೆಗಾಲದ ಆಷಾಢ ತಿಂಗಳು ಅಂದರೆ ಜೀವನ ಮಾಡಲು ಕಷ್ಟದ ದಿನಗಳು. ಜಮಾವಣೆ ಮಾಡಿದ ಆಹಾರ ಸಾಮಗ್ರಿಗಳೆಲ್ಲಾ ಮುಗಿದು ಉಣ್ಣಲು ತಿನ್ನಲು ತತ್ವಾರವಿರುತ್ತದೆ. ಆಷಾಢ ಮಾಸದಲ್ಲಿ ಏನನ್ನಾದರೂ ತಿನ್ನುವ ಆಸೆ ಸ್ವಾಭಾವಿಕವಾಗಿ ಎಲ್ಲರಿಗೂ ಇರುತ್ತದೆ. ನವವಿವಾಹಿತ ಹುಡುಗಿಗೆ ಅದು ಅಷ್ಟು ಸುಲಭವಾಗಿ ಸಾಧ್ಯವಾಗುವುದಿಲ್ಲ. ಮದುವೆ ಮಾಡಿಕೊಟ್ಟ ಹೆಣ್ಣಿಗೆ 'ಅತ್ತೆ ಉಳಿದರೆ ಕೊಡುವುದು, ತಾಯಿ ಉಳಿಸಿ ಕೊಡುವುದು' ಎಂಬ ಗಾದೆ ಮಾತಿದೆ. ಆಷಾಢದಲ್ಲಿ ನವವಿವಾಹಿತೆ ತವರಿನಲ್ಲಿರುವುದರಿಂದ ಉಂಡು ತಿಂದು ಸಂತೋಷದಿಂದ ಇರುವುದಕ್ಕೆ ಪೂರ್ವಿಕರು ಮಾಡಿದ ಇದೊಂದು ವ್ಯವಸ್ಥೆ. ಆಷಾಢ ತಿಂಗಳು ಅಮಂಗಳ ಎಂದು ಅದಕ್ಕೊಂದು ನಂಬಿಕೆ ಆಧಾರಿತ ಕಾರಣ ಕೂಡಾ ಕೊಟ್ಟಿದ್ದಾರೆ. ಜೈವಿಕ ರೀತಿ ಆಲೋಚಿಸಿದಾಗ, ಈ

ತಿಂಗಳಲ್ಲಿ ಗರ್ಭ ಸಂಭವಿಸಿದರೆ ಆರೋಗ್ಯದ ದೃಷ್ಟಿಯಿಂದ ಅಷ್ಟೊಂದು ಹಿತಕರವಲ್ಲ. ಹೆರಿಗೆ ಕೂಡಾ ಎಪ್ರಿಲ್-ಮೇ ತಿಂಗಳಲ್ಲಿ, ಕಠಿಣ ಬೇಸಿಗೆಯಲ್ಲಿ ಆಗುತ್ತದೆ. ಹೆರಿಗೆಗೆ ಈ ಕಾಲ ಪ್ರಶಸ್ತವಲ್ಲವಾದುದರಿಂದ ಆಷಾಢ ಮಾಸದಲ್ಲಿ ಪತಿಪತ್ನಿಯರ ನಡುವಿನ ದೈಹಿಕ ಸಂಪರ್ಕವನ್ನು ತಡೆಯುವ ಉದ್ದೇಶದಿಂದ ಪೂರ್ವಿಕರು ಈ ಸಂಪ್ರದಾಯಕ್ಕೆ ನಂಬಿಕೆಯ ಪೂರಕ ಆಧಾರ ನೀಡಿ ರೂಢಿಗೆ ತಂದಿರಬಹುದು.

ಸಾಮಾನ್ಯವಾಗಿ ಕೊಡಿಯಾಲ್ ಕುಡುಬಿಯರಲ್ಲಿ ನವವಿವಾಹಿತ ದಂಪತಿ ಆಷಾಢ ಅಮಾವಾಸ್ಯೆಯಂದು ಸಮುದ್ರ ಸ್ನಾನಕ್ಕೆ ಹೋಗುವ ವಾಡಿಕೆಯಿದೆ. ಆಷಾಢ ಅಮಾವಾಸ್ಯೆಯಂದು ಸಮುದ್ರ ಸ್ನಾನ ಮಾಡಿದಲ್ಲಿ ಸಂತಾನ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯಿದೆ. ಅಷ್ಟಮಿ, ನವರಾತ್ರಿ, ದೀಪಾವಳಿ, ಹೋಳಿಹಬ್ಬ ಮುಂತಾದ ಪರ್ವಕಾಲದ ಹಬ್ಬಗಳಿಗೆ ನವವಿವಾಹಿತರು ವಧುವಿನ ತವರು ಮನೆಗೆ ಬರುವ ಅವಕಾಶವನ್ನು ತಪ್ಪಿಸಿಕೊಳ್ಳುವುದಿಲ್ಲ.

ಸಹೋದರನ ಮದುವೆಯ ಸಂಪ್ರದಾಯಗಳಲ್ಲಿ ಸಹೋದರಿಗೆ ಕೆಲವು ಮಹತ್ವದ ಜವಾಬ್ದಾರಿಯ ಪಾತ್ರವಿದೆ. ಆದುದರಿಂದ ಎಷ್ಟೇ ಅನನುಕೂಲಗಳಿದ್ದರೂ ಸಹೋದರಿ, ತನ್ನ ಸಹೋದರನ ವಿವಾಹಕ್ಕೆ ಹಾಜರಾಗಿಯೇ ಆಗುತ್ತಾಳೆ. ಪಿತೃಪ್ರಧಾನ ಸಂಸ್ಕೃತಿಯ ಕುಡುಬಿಯರಲ್ಲಿ ತಂದೆ ತಾಯಿ ತೀರಿಕೊಂಡಾಗ ಹೆಮ್ಮಕ್ಕಳಿಗೆ ಅಂತಿಮವಿಧಿ, ಪಿಂಡಪ್ರದಾನಗಳಲ್ಲಿ ಅಧಿಕೃತ ರೀತಿಯಲ್ಲಿ ಭಾಗವಹಿಸಲು ಅವಕಾಶವಿಲ್ಲ. ಅನಧಿಕೃತವಾಗಿ ಬಂದು ಹೋಗಬಹುದು ವಿನಃ ಇಲ್ಲಿನ ಉತ್ತರಕ್ರಿಯಾದಿಗಳಲ್ಲಿ ಪಾತ್ರವಹಿಸುವ ಅಧಿಕಾರವಿಲ್ಲ. ಇಂತಹ ಅಪರಕ್ರಿಯೆಗಳಲ್ಲಿ ಪತಿಯ ಕುಟುಂಬದಲ್ಲಿ ಮಾತ್ರ ಅಧಿಕೃತವಾಗಿ ಪಾಲ್ಗೊಳ್ಳಬಹುದು.

****

38. ಪೂರಕ ವಿಷಯಗಳು :

38.1. ಅಕ್ಕ :

'ಹಿತ್ತಲಲ್ಲಿ ಎಕ್ಕ, ಮನೆಯಲ್ಲಿ ಅಕ್ಕ' ಎಂಬ ಗಾದೆಯ ಮಾತೊಂದಿದೆ. ಎಕ್ಕದ ಗಿಡ ಹಲವು ಔಷಧೀಯ ಗುಣವುಳ್ಳ ಸಸ್ಯ. ಹಿತ್ತಲಲ್ಲಿ ಎಕ್ಕದ ಗಿಡವೊಂದಿದ್ದರೆ ಮನುಷ್ಯನ ಹಲವಾರು ಕುತ್ತಗಳಿಗೆ ಮನೆ ಮದ್ದಾಗಿ ಉಪಯೋಗವಾಗುತ್ತದೆ. ಇದೇ ಪ್ರಕಾರ ಕುಡುಬಿಯರ ಕೌಟುಂಬಿಕ ವ್ಯವಸ್ಥೆಯಲ್ಲಿ ತಾಯಿಯ ನಂತರ, ತಾಯಿಯ ಸ್ಥಾನಮಾನವಿರುವ ವ್ಯಕ್ತಿತ್ವ ಅಂದರೆ 'ಹಿರಿಯಕ್ಕ'. ಪ್ರೀತಿಯಲ್ಲಿ, ವಾತ್ಸಲ್ಯ ತ್ಯಾಗಗಳಲ್ಲಿ ಅಕ್ಕ ಅಮ್ಮನನ್ನು ಬಿಟ್ಟುಕೊಡುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅಮ್ಮ ಅಪ್ಪ ತಮ್ಮ ಜವಾಬ್ದಾರಿಗಳಿಂದ ನುಣುಚಿಕೊಂಡರೂ, ಅವರ ತಪ್ಪಿಗೆ ತಾನು ಹೆಗಲುಕೊಟ್ಟು ನಿಭಾಯಿಸುವ ಅಕ್ಕಂದಿರಿದ್ದಾರೆ. ಮನೆಯಲ್ಲಿ ಎಲ್ಲರೊಂದಿಗೆ ಅಧಿಕಾರವಾಣಿಯಿಂದ ಮಾತಾಡಿ, ಎಲ್ಲರ ಮೇಲೂ ಅಧಿಕಾರ

ತೀರ್ಮಾನಿಸುವ ಅಧಿಕಾರ ಇರುವುದು ಅಕ್ಕನಿಗೆ ಮಾತ್ರ. ತನ್ನ ರಕ್ತ ಹಂಚಿಕೊಂಡು ಜನಿಸಿದ ಸಹೋದರ ಸಹೋದರಿಯರಿಗಾಗಿ ಎಂತಹ ತ್ಯಾಗಕ್ಕೂ ಸಿದ್ಧವಾಗುವ ಜೀವ ಅಂದರೆ ಅಕ್ಕ.

ಅಕ್ಕನ ಬಯ್ಗುಳ ಅಂದರೆ ಮಂತ್ರಗಳು ರಿಂಗುಣಿಸಿದಂತೆ. ಅವು ಎಚ್ಚರಿಕೆಯ ಹಿತವಚನಗಳು. ಅಪ್ಪ ಅಮ್ಮನಿಗಿಂತಲೂ ಅಕ್ಕನ ಭಾವನೆಗಳು ಅಧಿಕ. ತನ್ನ ಹಿಂದಿನಲ್ಲಿ ಜನಿಸಿದವರ ಮೇಲೆ ಅಕ್ಕನಿಗಿರುವ ಅಕ್ಕರೆ, ಅಕ್ಕನ ಮೇಲಿರುವುದು ಕಡಿಮೆ. ಹಿರಿಯವಳಾದರೆ ಅಕ್ಕನಿಗೆ ಕಷ್ಟನಷ್ಟಗಳು ಹೆಚ್ಚು. ಹಿರಿ ಸಹೋದರ ದಾರಿ ತಪ್ಪಿದರೂ, ಅವನ ನಂತರ ಜನಿಸಿದ ಅಕ್ಕ ಮನೆಯ ಜವಾಬ್ದಾರಿ ನಿರ್ವಹಿಸುವ ನಿದರ್ಶನಗಳಿವೆ. ಸಹೋದರ ಸಹೋದರಿಯರಿಗೆಲ್ಲಾ ತಾನು ದುಡಿದ ಸಂಪಾದನೆಯಲ್ಲಿ ಲಾಲನೆ ಪಾಲನೆ ಮಾಡಿ ಬೆಳೆಸಿ, ಮದುವೆ ಮಾಡಿ, ಅವರವರ ಸಂಸಾರ ರಚಿಸಿಕೊಟ್ಟು, ತಾನು ಏಕಾಂಗಿ ಅವಿವಾಹಿತ ಜೀವನ ಸಾಗಿಸುವ ಹಲವು ಅಕ್ಕಂದಿರ ಉದಾಹರಣೆಗಳಿವೆ.

ಹಿರಿಯಣ್ಣನಿಗೆ ಪ್ರತ್ಯುತ್ತರ ನೀಡುವವರಿರಬಹುದು. ಆದರೆ ಅಕ್ಕನ ಮಾತನ್ನು ಕಡೆಗಣಿಸುವವರ ಸಂಖ್ಯೆ ಕಡಿಮೆ. ಅಕ್ಕನ ಪ್ರೀತಿಯಲ್ಲಿ ಮೋಸ ವಂಚನೆಗಳಿರುವುದಿಲ್ಲ. ಪ್ರೀತಿ ಎಲ್ಲರಿಗೂ ಸಮಾನವಾಗಿ ಪಾಲಾಗುತ್ತದೆ. ಸಹೋದರ ಸಹೋದರಿಯರು ಮದುವೆಯಾಗಿ ಅವರವರ ಸಂಸಾರ ಸಾಗಿಸುವಾಗಲೂ ಅದು ಯಥಾಪ್ರಕಾರ ಮುಂದುವರಿಯುತ್ತದೆ. ಅಕ್ಕ ಏನು ಮಾಡಿದರೂ ಅದರಲ್ಲಿ ಸ್ವಾರ್ಥವಿರುವುದಿಲ್ಲ, ಸಹೋದರ ಸಹೋದರಿಯರ ಹಿತದೃಷ್ಟಿ ಮಾತ್ರವಿರುತ್ತದೆ. ವಸ್ತು, ಆಸ್ತಿಬದುಕು, ಒಡವೆಯಾದಿ ಏನೇ ಇರಲಿ, ಅದನ್ನು ಪ್ರತಿಯೊಬ್ಬರಿಗೂ ಸಮನಾಗಿ, ಸಮಾಧಾನಕರ ರೀತಿ ಪಾಲು ಮಾಡಲು ಅಕ್ಕನೇ ಬೇಕು. ಎಷ್ಟೋ ಮಕ್ಕಳಿಗೆ ಅಮ್ಮನ ಜಾಗದಲ್ಲಿ ಕೈತುತ್ತು ತಿನ್ನಿಸಿ, ಸಾಕಿ ಸಲಹಿ ಅವರ ಭವಿಷ್ಯ ಉಜ್ವಲಗೊಳಿಸುವುದಕ್ಕೆ ತನ್ನ ಭವಿಷ್ಯವನ್ನು ಬಲಿಕೊಟ್ಟು ದಂಡಿಸಿಕೊಂಡ ಅಕ್ಕಂದಿರಿದ್ದಾರೆ. ಒಡಹುಟ್ಟಿದವರ ಮದುವೆ ಮಾಡಿಸಿ ಅವರ ಸಂತೋಷದಲ್ಲಿಯೇ ತಾನೂ ಭಾಗಿಯಾಗುವ ಪ್ರಸಂಗಗಳಿರುತ್ತವೆ. ತಾನು ವಿವಾಹವಾಗಿ ಪತಿಯ ಮನೆಗೆ ಹೋದರೂ ತವರಿನ ಮತ್ತು ಸಹೋದರ ಸಹೋದರಿಯರ ಮೇಲೆ ಕಣ್ಣಿಡುವ ಅಕ್ಕಂದಿರ ಉದಾಹರಣೆಗಳಿವೆ. ಒಡಹುಟ್ಟಿದವರಿಗಾಗಿ, ಮದುವೆಯಾದರೂ ತವರಿನಲ್ಲೇ ನಿಲ್ಲಬೇಕಾದ ಪರಿಸ್ಥಿತಿಗೆ ಒಳಗಾಗಿ ಸಮಾಜದ ದೂಷಣೆ, ನಿಂದನೆ, ವಕ್ರೋಕ್ತಿ, ವ್ಯಂಗ್ಯೋಕ್ತಿ, ತುಚ್ಛೀಕರಣಗಳನ್ನು ಸಹಿಸಿ ಮಾನವಂತಳಾಗಿ ಬಾಳುವ ಎಷ್ಟೋ ಅಕ್ಕಂದಿರಿದ್ದಾರೆ. ಕುಡುಬಿಯರ ಕುಟುಂಬ ವ್ಯವಸ್ಥೆಯಲ್ಲಿ ಇಂತಹ ಹಲವು ಉದಾಹರಣೆಗಳು ಲಭಿಸುತ್ತವೆ.

ಕುಡುಬಿಯರ ವಿವಾಹ ಸಂಪ್ರದಾಯದಲ್ಲಿ ಅಕ್ಕನಿಗೆ ವಿಶೇಷ ಜವಾಬ್ದಾರಿಯ ಸ್ಥಾನಮಾನಗಳಿರುತ್ತವೆ. ಅಪ್ಪ ಅಮ್ಮ ತಿರಸ್ಕರಿಸಿದರೂ ಅಕ್ಕ ಮತ್ತು ಭಾವನ ಒಪ್ಪಿಗೆ ಮತ್ತು ಸೂಚನೆಯಂತೆ ಎಷ್ಟೋ ಮದುವೆಗಳು ಜರಗುತ್ತವೆ. ಅಪ್ಪ ಅಮ್ಮ ಬೇಡವೆಂದರೂ ಹುಡುಗನೊಬ್ಬನಿಗೆ ಅಕ್ಕ ಭಾವ ಹುಡುಗಿ ತೋರಿಸಿದರೆ ಆ ಮದುವೆ ನಿಶ್ಚಿತ ಅಂತ ಲೆಕ್ಕ. ಮದುವೆ ವಿಧಿಗಳಲ್ಲೂ ಅಕ್ಕನ ಪಾತ್ರ ಪ್ರಮುಖ. ಅರಶಿನ ಮುಹೂರ್ತದ ರಾತ್ರಿ ಆಗುವ

ಪ್ರತಿಯೊಂದು ಸಂಪ್ರದಾಯಕ್ಕೂ ಅಕ್ಕನ ಮಾರ್ಗದರ್ಶನ ಮತ್ತು ಮುಂದಾಳ್ತನ ಇರುತ್ತದೆ. ಅರಸಿನ ಹಚ್ಚಲು ಬೇಕಾದ 'ಬಾಲ್' ತಯಾರು ಮಾಡುವುದು, ಕಲಶಸ್ನಾನಕ್ಕೆ 'ಮಾಟೊಟ'ಯ ವ್ಯವಸ್ಥೆ, ಕಲಶಕ್ಕೆ ಸುರಗಿ ಸುತ್ತಿನ ಕಂಕಣ ಕಟ್ಟಿ ತಯಾರು ಮಾಡುವುದು, ಕಲಶಸ್ನಾನ, ಹಿಟ್ಟುಕುಟ್ಟುವ ಶಾಸ್ತ್ರ, ಕುಂಭ ಮುಹೂರ್ತ, ಉಡುಗೊರೆ ನೀಡುವಿಕೆ ಮುಂತಾದ ಕಾರ್ಯಕ್ರಮಗಳಲ್ಲಿ, ಅಕ್ಕ ಹೊರಗಿನ ಬೆಡಗಿಗೆ ಮದುವೆ ಮಾಡಿ ಕೊಟ್ಟಿರುವವಳಾದರೂ, ಅಕ್ಕನ ಈ ಅನಧಿಕೃತವೆನ್ನಬಹುದಾದ ಅಧಿಕಾರಕ್ಕೆ ಯಾರೂ ಆಕ್ಷೇಪವೆತ್ತುವುದಿಲ್ಲ. ಅಕ್ಕನ ಮಾತು ಬಿದ್ದರೆ ಮುಗಿಯಿತು, ಅದು ಕೊನೆಯ ತೀರ್ಮಾನ ಅಂತ ಲೆಕ್ಕ.

ಮದುವೆಗೆ ಮೊದಲು ಕಂಕಣಧಾರಣೆ (ಬಳೆ ತೊಡುವಿಕೆ)ಗೂ ಅಕ್ಕ ಉಪಸ್ಥಿತಳಿರಬೇಕು. ಮದುವೆಯ ಜವುಳಿ ಖರೀದಿಗೂ ಅಕ್ಕನ ಮಾರ್ಗದರ್ಶನ ಅಗತ್ಯ. ಮದುವೆ ವಿಧಿಯ ತಳಿಗೆ ತಯಾರು ಮಾಡಲು, ಮದುಮಗಳನ್ನು ಶೃಂಗರಿಸಲು, ಸಹೋದರನ ಕಲಶ ಹಿಡಿಯಲು, ವಧೂವರಬಂಧ ಹಾಕಲು, ವಧೂವರರ ಗೃಹಪ್ರವೇಶದ ಸಮಯ ಹೊಸ್ತಿಲು ತಡೆಯಲು, ಆರತಿ ಅಕ್ಷತೆ, ಉಂಗುರದಾಟ, ವಧುವನ್ನು ಅಡಗಿಸಿಡಲು, ಮರುವರಿ ಶಾಸ್ತ್ರದ ಬಲಗೊಡೆಯರ ಔತಣಕ್ಕೆ ಅಕ್ಕನ ಉಪಸ್ಥಿತಿ ಮತ್ತು ಸಹಕಾರ ಅಗತ್ಯ. ಕೊನೆಗೆ ಪಂಚಾವರ್ತನದಲ್ಲಿ ವಧುವನ್ನು ಕಳುಹಿಸಿಕೊಡುವ, ಕರೆದುಕೊಂಡು ಬರುವ ವ್ಯವಸ್ಥೆಗಳಲ್ಲೂ ಅಕ್ಕನ ವಿಚಾರಗಳಿಗೆ ಮಾನ್ಯತೆಯಿದೆ. ಸಹೋದರಿಯ ಮದುವೆಯಾದರೆ ಈ ಎಲ್ಲಾ ವಿಷಯಗಳ ಹೊರತಾಗಿ ವಧುವಿಗೆ ಬಲಗೊಡತಿಯಾಗಿ ಕಾರ್ಯನಿರ್ವಹಿಸಿ ಮದುವೆಯ ವಿಧಿಗಳಲ್ಲಿ ಪ್ರತ್ಯಕ್ಷ ಪಾತ್ರ ವಹಿಸುತ್ತಾಳೆ. ಈ ಪ್ರಕಾರ ಸಹೋದರ ಮತ್ತು ಸಹೋದರಿಯರಿಗೆ ಒಬ್ಬಳು ಅಕ್ಕ ಇದ್ದಲ್ಲಿ ಮದುವೆಯ ಅರ್ಧ ವಿಧಿಗಳು ಪರೋಕ್ಷವಾಗಿ ಅಕ್ಕನಿಂದಾಗಿಯೇ ನಿರ್ವಹಿಸಲ್ಪಡುತ್ತವೆ. ಅಕ್ಕನ ಸ್ಥಾನವನ್ನು ಭರ್ತಿ ಮಾಡಲು ಇತರ ಕುಟುಂಬ ಸದಸ್ಯರಿಗೆ ಅಸಾಧ್ಯ. ಸಹೋದರನ ಮದುವೆಗೆ ಎಷ್ಟು ಕಷ್ಟ, ಅನನುಕೂಲಗಳಿದ್ದರೂ ಬರುವುದನ್ನು ಆಕೆ ತಪ್ಪಿಸಿಕೊಳ್ಳುವುದಿಲ್ಲ.

38.2 ವಿನಿಮಯ ವಿವಾಹ :

ಒಂದೇ ತಂದೆತಾಯಿಯ ಮಕ್ಕಳು ಸಹೋದರ ಸಹೋದರಿಯರಿಗೆ, ಇನ್ನೊಂದು ಪ್ರತ್ಯೇಕ ಬೆಡಗಿನ ಕುಟುಂಬದ ಸಹೋದರ ಸಹೋದರಿಯರೊಂದಿಗೆ ಪರಸ್ಪರ ಆಗುವ ಮದುವೆಗೆ ಅಥವಾ ಸೋದರ ಮಾವ, ಸೋದರ ಸೊಸೆಯಂದಿರಿಗೆ ಇನ್ನೊಂದು ಬೆಡಗಿನ ಸಹೋದರ ಸಹೋದರಿಯೊಂದಿಗೆ ಆಗುವ ಮದುವೆಗೆ 'ವಿನಿಮಯ ವಿವಾಹ' ಎಂದು ಹೆಸರು. ವಿನಿಮಯ ವಿವಾಹ ಆಗುವಾಗ ಧಾರೆಯಾಗುವ ಚಪ್ಪರದ ವಧುವಿಗೆ ಮೊದಲು ಧಾರೆಯಾಗಬೇಕು. ಇಂತಹ ಸಂದರ್ಭಗಳಲ್ಲಿ ಆ ಚಪ್ಪರದ ವಧು ಸಹೋದರನಿಗಿಂತಲೂ ಹಿರಿಯಳೋ ಕಿರಿಯಳೋ ಎಂಬುದು ಪರಿಗಣಿಸಲ್ಪಡುವುದಿಲ್ಲ.

ಹೆಣ್ಣಿನ ರೂಪ, ಗುಣ, ಲಕ್ಷಣ ಚೆನ್ನಾಗಿರದಿದ್ದಲ್ಲಿ, ಅವಳು ಆರ್ಥಿಕವಾಗಿ ಸಶಕ್ತಳಾಗಿರದಿದ್ದಲ್ಲಿ, ಮನೋವೈಕಲ್ಯ ಹೊಂದಿದ್ದಲ್ಲಿ, ವಂಶಪರಂಪರೆಯ ವ್ಯಾಧಿಗಳಿದ್ದಲ್ಲಿ

ಹೆಣ್ಣು ಕಿವುಡಿ, ಮೂಗಿ, ಕುರುಡಿ, ಕುಂಟಿಯಾಗಿದ್ದಲ್ಲಿ, ಹೆಣ್ಣಿನ ನೈತಿಕ ನಡವಳಿಕೆ ಚೆನ್ನಾಗಿರದಿದ್ದಲ್ಲಿ–ಹೆಣ್ಣು ಕ್ಲಿಷ್ಟ ಪ್ರಾಯದಲ್ಲಿ ಮದುವೆಯಾಗದೆ ಹಾಕ ಉಳಿಯುತ್ತಾಳೆ. "ಮುಂಡಾಸಿನವ ಬರುವುದಿಲ್ಲ, ಮುಟ್ಟಾಳೆಯವನಿಗೆ ಕೊಡುವುದಿಲ್ಲ" ಎಂಬಂತೆ ಹೆತ್ತವರ ಜಂಭದ ನಡವಳಿಕೆಯಿಂದಲೂ ಹೆಣ್ಣು ನೆಂಟಸ್ತಿಕೆ ಬರದೆ ಮದುವೆಯಾಗದೆ ಉಳಿಯುತ್ತಾಳೆ. ಇಂತಹ ಸಂದರ್ಭಗಳಲ್ಲಿ ಹೆಣ್ಣಿನ ಅವಿವಾಹಿತ ಸಹೋದರರಿದ್ದಲ್ಲಿ ವಿನಿಮಯ ವಿವಾಹಕ್ಕೆ ತಯಾರಾಗುತ್ತಾರೆ. ಹೆಣ್ಣಿಗೆ ಖಾಸಾ ಸಹೋದರರಿಲ್ಲದಿದ್ದಲ್ಲಿ ತಂದೆಯ ಸಹೋದರರ ಗಂಡು ಮಕ್ಕಳು ಅಥವಾ ಪಾವೆಯಲ್ಲಿ ದಾಯಾದಿಗಳಾಗುವ ಸಹೋದರರು ತಯಾರಾದರೂ ವಿನಿಮಯ ವಿವಾಹ ಏರ್ಪಡಬಹುದು.

ವಿನಿಮಯ ವಿವಾಹದಲ್ಲಿ ದ್ವಿಪಕ್ಷೀಯರೂ ಒಂದೇ ಸ್ತರದಲ್ಲಿರಬೇಕು ಮತ್ತು ಅವರ ನಡವಳಿಕೆಗಳ ಮಟ್ಟ ಒಂದೇ ಆಗಿರಬೇಕು. ನೆಂಟಸ್ತಿಕೆಯಾಗುವಾಗ ಉಭಯತ್ರರ ಆರ್ಥಿಕ ಸ್ಥಿತಿ, ವಧೂವರರ ಗುಣಾವಗುಣಗಳು, ವ್ಯವಹಾರ, ರೀತಿನೀತಿಗಳು ಸುಮಾರಾಗಿಯಾದರೂ ಹೊಂದಾಣಿಕೆಯಾಗುವುದು ಒಳ್ಳೆಯದು. ಮದುವೆ ಆಗುವಾಗಲೂ ಎರಡೂ ಜೋಡಿ ವಧೂವರರ ಉಡುಗೆ ತೊಡುಗೆ, ಒಡವೆ, ಎರಡೂ ಕಡೆಯ ಊಟ ತಿಂಡಿ, ಕೊಡುಕೊಳ್ಳುವಿಕೆ, ಉಪಚಾರ ಆದರಾತಿಥ್ಯಗಳು ಒಂದೇ ರೀತಿ ಇರಬೇಕು. ಮದುವೆಯ ಉಡುಗೆ ತೊಡುಗೆ, ಒಡವೆಗಳು ಒಬ್ಬೊಬ್ಬರದು ಒಂದೊಂದು ಥರ ಇದ್ದಲ್ಲಿ ಹಂಗಿಸುವಿಕೆ, ಭಿನ್ನಾಭಿಪ್ರಾಯಗಳು ಉದ್ಭವಿಸುತ್ತವೆ. ಯಾವ ರೀತಿಯಿಂದಲೂ ಒಂದು ಕಡೆಯವರದು ಹೆಚ್ಚು, ಇನ್ನೊಂದು ಕಡೆಯವರದು ಕಡಿಮೆ ಆಗಬಾರದು. ಮದುವೆಯಾದ ಮೇಲೂ ಈರ್ವರೂ ವಧುಗಳನ್ನು ಅವರ ಗಂಡಂದಿರು ಒಂದೇ ರೀತಿ ನಡೆಸಿಕೊಳ್ಳಬೇಕು. ತಮ್ಮ ಪತ್ನಿಯರನ್ನು ನೋಡಿಕೊಳ್ಳುವ ದೃಷ್ಟಿ ಒಂದೇ ಆಗಿರಬೇಕು. ಕೊಡುಕೊಳ್ಳುವಿಕೆ, ಊಟೋಪಚಾರ, ಉಡುಗೆ ತೊಡುಗೆ ಒದಗಿಸುವಿಕೆ, ಆಡುವ ಮಾತು, ದುಡಿಮೆ, ಬರುವ ಹೋಗುವ ಮತ್ತಿತರ ವಿಚಾರಗಳಲ್ಲಿ ಪತಿಪತ್ನಿಯರು ಮಾತ್ರವಲ್ಲ, ಉಭಯ ಕುಟುಂಬಿಕರಲ್ಲಿಯೂ ವೈಮನಸ್ಯಗಳು ಉಂಟಾಗುವ ಅವಕಾಶಗಳಿವೆ. ಇಂತಹ ಅನೇಕ ಸಂದರ್ಭಗಳಲ್ಲಿ ಗಂಡಂದಿರು ಅವರ ಮಡದಿಯರನ್ನು ತಾಯಿ ಮನೆಗಟ್ಟಿದ ದೃಷ್ಟಾಂತಗಳಿವೆ. ಒಬ್ಬನ ಪತ್ನಿ ಮಾಡಿದ ತಪ್ಪಿನಿಂದ ಸರಿಯಾಗಿದ್ದ ಪತ್ನಿಯನ್ನೂ ಶಾಶ್ವತವಾಗಿ ತವರಿನಲ್ಲಿರಿಸಿದ ಉದಾಹರಣೆಗಳು ಸಿಗುತ್ತವೆ. ಗಂಡಂದಿರು ಮಾತ್ರ ಸರಿಯಾಗಿದ್ದರೆ ಸಾಲದು, ಅತ್ತೆ ಮಾವ ಹಾಗೂ ಪತಿಯ ಮನೆಯ ಜನರೂ ವಿನಿಮಯ ವಿವಾಹ ಕಡಿದು ಹೋಗಲು ಕಾರಣವಾಗುವ ಸಂದರ್ಭಗಳಿರುತ್ತವೆ. ಎರಡೂ ಪಕ್ಷದವರು ಇಂತಹ ಅನಪೇಕ್ಷಿತ ಘಟನೆಗಳು ಘಟಿಸದಂತೆ ಜಾಗ್ರತೆ ವಹಿಸಬೇಕಾಗುತ್ತದೆ. ಕೆಲವು ಬಾರಿ ಒಬ್ಬಳಿಗೆ ಮಕ್ಕಳಾಗಿ, ಇನ್ನೊಬ್ಬಳಿಗೆ ಸಂತತಿಯಾಗದಿದ್ದಲ್ಲಿ ಮತ್ಸರದ ಬೀಜ ಮೊಳೆತು, ಮನಸ್ತಾಪಕ್ಕೆ ಕಾರಣವಾಗುತ್ತದೆ. ಮನಸ್ಸು ಒಳ್ಳೆಯದಿರುವವರಾದರೆ ಆ ಮಕ್ಕಳಿರುವವಳ ಮಕ್ಕಳನ್ನೇ ತಂದು ತನ್ನದೇ ಮಕ್ಕಳಂತೆ ಸಾಕಿ ಸಲಹಿ ಬೆಳೆಸುವ ಜೋಡಿಯೂ ಇರುತ್ತದೆ. ಅದೇ ರೀತಿ ಒಬ್ಬೊಬ್ಬರೇ ಆಗುವ ಸ್ವಾಭಾವಿಕ ಮದುವೆ

ಆದವರಿಗಿಂತಲೂ ಉತ್ತಮ ರೀತಿಯಲ್ಲಿ ಜೀವನ ಮಾಡುವ ವಿನಿಮಯ ವಿವಾಹಿತ ಕುಟುಂಬಗಳೂ ಇರುವುದು ಅತಿಶಯವೇನಲ್ಲ.

38.3. ಅವಳಿ ಜವಳಿಗಳ ಮದುವೆ :

ಕುಡುಬಿಯರಲ್ಲಿ ಅವಳಿಜವಳಿಗಳ ಮದುವೆಯಾಗುವಾಗ ಹುಡುಗರಿಗೆ ಅವಳಿಜವಳಿ ಹುಡುಗಿಯರನ್ನೇ ಆಯ್ಕೆ ಮಾಡಬೇಕೆಂಬ ಶಾಸ್ತ್ರವಿದೆ. ಅವರಿಗೆ ಒಂದೇ ಘಳಿಗೆಯಲ್ಲಿ, ಒಂದೇ ರೀತಿಯ ಸಂಪ್ರದಾಯಗಳ ಮುಖಾಂತರ ಮದುವೆಯಾಗಬೇಕು. ಮದುವೆಯ ಉಡುಗೆತೊಡುಗೆಗಳು, ಒಡವೆ ವಸ್ತುಗಳು ಒಂದೇ ತೆರನಾಗಿರಬೇಕು. ವಧುಗಳ ಸೀರೆ, ಮಾಂಗಲ್ಯ ಮತ್ತು ಇತರ ಉಡುಗೆಗಳನ್ನು ಒಂದೇ ರೀತಿಯವು ಮತ್ತು ಮೌಲ್ಯದವು ಆಗಿರುವಂತೆ ಖರೀದಿಸಬೇಕು. ಅವರೀರ್ವರ ನಡುವೆ ಯಾವುದೇ ರೀತಿಯ ಭೇದ ಮಾಡಲಾಗದು. ಅವಳಿ ಹುಡುಗಿಯರೇ ಸಿಗದೇ ಇದ್ದಲ್ಲಿ ಒಬ್ಬರೇ ತಂದೆತಾಯಿಯ, ಅಣ್ಣ ತಮ್ಮಂದಿರ ಅಥವಾ ಅಕ್ಕತಂಗಿಯರ ಹೆಮ್ಮಕ್ಕಳನ್ನು ಮದುವೆಯಾಗುವ ಅವಕಾಶವಿದೆ. ಅವಳಿಜವಳಿಯಲ್ಲಿ ಒಂದು ಗಂಡು ಮತ್ತೊಂದು ಹೆಣ್ಣು ಆಗಿದ್ದಲ್ಲಿ ಅವರಿಗೆ ಅಂತಹುದೇ ಜೋಡಿಯ ನೆಂಟಸ್ತಿಕೆ ಸಿಗದಿದ್ದಲ್ಲಿ ಒಂಟಿ ನೆಂಟಸ್ತಿಕೆಗೆ ತಯಾರಾಗುವ ಸಂಭವ ಕಡಿಮೆ.

38.4. ಮರುವಿವಾಹ :

ಕುಡುಬಿ ಸಮಾಜದಲ್ಲಿ ಪತಿಯೊಬ್ಬ ತೀರಿಕೊಂಡಲ್ಲಿ ಪತ್ನಿ ತವರು ಮನೆ ಸೇರದೆ ಪತಿಯ ಕುಟುಂಬಿಕರ ಜೊತೆಯಲ್ಲೇ ಜೀವನ ಪರ್ಯಂತ ಬಾಳಬೇಕು. ಅವಳು ತೀರಿಕೊಂಡಾಗಲೂ ಆಕೆಯ ಅಂತಿಮ ವಿಧಿ ಮತ್ತು ಅಪರಕರ್ಮಗಳನ್ನು ಪತಿಯ ಕುಟುಂಬಸ್ಥರೇ ನೆರವೇರಿಸಬೇಕು ಹೊರತು ತವರು ಮನೆಯವರು ಮಾಡಿದರೆ ಆ ಆತ್ಮಕ್ಕೆ ಮೋಕ್ಷವಿಲ್ಲ ಎಂಬ ನಂಬಿಕೆಯಿದೆ. ಕುಡುಬಿ ಸಂಪ್ರದಾಯದಲ್ಲಿ ವಿಧವಾ ವಿವಾಹಕ್ಕೆ ಆಸ್ಪದವಿಲ್ಲ. ಪುರುಷರಿಗೆ ದ್ವಿತೀಯ ಅಥವಾ ಮರುವಿವಾಹ ಎರಡು ರೀತಿಯಲ್ಲಿ ಆಗುವ ಸಂದರ್ಭಗಳಿವೆ. ಪತ್ನಿ ಜೀವಂತವಿದ್ದು, ಅವಳನ್ನು ಬಿಟ್ಟು ಆಗುವ ಮರುವಿವಾಹ ಒಂದನೆಯದಾದರೆ, ಧರ್ಮಪತ್ನಿ ತೀರಿಕೊಂಡ ಮೇಲೆ ಆಗುವ ವಿಧುರ ವಿವಾಹ ಎರಡನೆಯದು. ಕುಡುಬಿ ಭಾಷೆಯಲ್ಲಿ ಇದಕ್ಕೆ ಕ್ರಮವಾಗಿ 'ದುಸ್ರ್ಯಾ ಪಣಾಚಿ ವ್ಹಾಡಿಗ್' ಹಾಗೂ 'ಥಾಕ್ಟ್ಯಾ ಪಣಾಚಿ ವ್ಹಾಡಿಗ್' ಅಂತ ಹೆಸರು. ದ್ವಿತೀಯ ವಿವಾಹ ಯಾವಾಗಲೂ ಆಗಬಹುದು. ಆದರೆ ವಿಧುರ ವಿವಾಹ ಪತ್ನಿ ತೀರಿಕೊಂಡ ಒಂದು ವರ್ಷದೊಳಗೆ ಆಗಬೇಕು. ಒಂದು ವರ್ಷದೊಳಗೆ ಆಗದಿದ್ದಲ್ಲಿ ನಂತರ ಮೂರು ವರ್ಷಗಳ ವರೆಗೆ ಮದುವೆಯಾಗುವಂತಿಲ್ಲ. ಮೂರುವರ್ಷ ಕಳೆದ ಮೇಲೆ ಯಾವಾಗಲೂ ಮದುವೆಯಾಗಬಹುದು.

ಮರುವಿವಾಹ, ವಿಧುರವಿವಾಹದಲ್ಲಿ ಪ್ರಥಮ ವಿವಾಹದ ಎಲ್ಲಾ ವಿಧಿಗಳೂ ಇರುತ್ತವೆ. ಆದರೆ ವಿಧುರವಿವಾಹದಲ್ಲಿ ಒಂದೆರಡು ವಿಶೇಷ ಆಚರಣೆಗಳಿವೆ. ತೀರಿಕೊಂಡ

ಪತ್ನಿಯ ಮಕ್ಕಳಿದ್ದಲ್ಲಿ ಅವರು ಮದುವೆಯ ಧಾರೆಯನ್ನು ನೋಡಲು ಪ್ರತಿಬಂಧವಿದೆ. ಈ ಮದುವೆಯಲ್ಲಿ ವರನು ತೋರಣ ಮೂಲಕ ಚಪ್ಪರ ಪ್ರವೇಶಿಸುವ ಸಂದರ್ಭ, ತೋರಣದ ಹೊರಭಾಗದಲ್ಲಿ ಎಡತೋರಣದ ಕಂಭಕ್ಕೆ ಆತುಕೊಂಡಂತೆ ಕಟ್ಟಿದ ಒಂದು ಬಾಳೆಗಿಡವನ್ನು ತನ್ನ ಎಡಗೈಯಲ್ಲಿ ಹಿಡಿದ ಕತ್ತಿಯಿಂದ ಒಂದೇ ಏಟಿಗೆ ಕಡಿದು ಒಳಪ್ರವೇಶಿಸಬೇಕು ಎಂಬ ನಿಯಮವಿದೆ. ಮರುವಿವಾಹವಾದರೂ ಹಿಂದಿನ ಪತ್ನಿಯ ಮಕ್ಕಳಿದ್ದಲ್ಲಿ ತಂದೆಯ ಆಸ್ತಿಯಲ್ಲಿ ಮತ್ತು ಧಾರ್ಮಿಕ, ಸಾಮಾಜಿಕ ಸ್ತರಗಳಲ್ಲಿ ಅವರಿಗೆ ಸಮಾನ ಹಕ್ಕು ಬಾಧ್ಯತೆಗಳಿರುತ್ತವೆ.

38.5. ಸಾಮೂಹಿಕ ವಿವಾಹ :

ಕುಡುಬಿ ಸಮುದಾಯದಲ್ಲಿ ಸಾಮೂಹಿಕ ಮದುವೆಗಳಿಗೆ ಅವಕಾಶವಿದೆ. ಹಿಂದಿನ ಕಾಲದಲ್ಲಿ ಸಾಮೂಹಿಕ ವಿವಾಹಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದರು. ಒಬ್ಬ ತಂದೆತಾಯಿಯ ಮಗಂದಿರು ಅಥವಾ ಮಗಳಂದಿರು, ಸಹೋದರ ಸಹೋದರಿಯರ ಮಕ್ಕಳ ಮದುವೆ ಒಟ್ಟಿಗೆ ಒಂದೇ ಚಪ್ಪರದಲ್ಲಿ, ಒಂದೇ ಮುಹೂರ್ತದಲ್ಲಿ ಆಗುತ್ತವೆ. ಇಂತಹ ಮದುವೆಗಳು ವಿನಿಮಯ ವಿವಾಹಗಳೂ ಆಗಿರಬಹುದು. ಆದರೆ ಮೂರು ಧಾರೆಗಳು ಒಂದೇ ಚಪ್ಪರದಲ್ಲಿ ಒಂದೇ ಮುಹೂರ್ತದಲ್ಲಿ ಆಗುವಂತಿಲ್ಲ. ಹೀಗೆ ಜೋಡಿ ವಿವಾಹಗಳು ನೆರವೇರುವಾಗ ಮದುವೆ ನಡೆಯುವ ಚಪ್ಪರದ ಕಡೆಯ ಹೆಣ್ಣಿಗೆ ಮೊದಲು ಧಾರೆಯಾಗಬೇಕಾದದ್ದು ನಿಯಮ. ಸಹೋದರ ಸಹೋದರಿಗೆ ಆಗುವ ಮದುವೆಯಲ್ಲಿ, ಸಹೋದರನಿಗೆ ಸೋದರ ಮಾವ ಅಥವಾ ತಂದೆಯ ಹತ್ತಿರ ಕುಟುಂಬ ಸಂಬಂಧಿ ಧಾರೆ ಎರೆಯಬಹುದಾದರೂ, ಸಹೋದರಿಗೆ ತಂದೆ ತಾಯಿಯೇ ಧಾರೆ ಎರೆಯುವುದು ಸಂಪ್ರದಾಯ.

ಸಾಮೂಹಿಕ ಮದುವೆ ವ್ಯವಸ್ಥೆಯಿಂದ ಮದುವೆ ಮನೆಯವರಿಗೆ ಮತ್ತು ಆಹ್ವಾನಿತರಿಗೆ ಸಮಯ, ಶ್ರಮಗಳ ಉಳಿಯತಾಯವಾಗುತ್ತದೆ. ನಾಲ್ಕು ಮದುವೆ ಒಟ್ಟಿಗೇ ಆದರೂ, ಊಟ, ವಾಲಗ, ಚಪ್ಪರ ಮತ್ತಿತರ ಖರ್ಚುಗಳು ಒಂದೇ ಖರ್ಚಿನಲ್ಲಿ ಪಾಲಾಗುತ್ತದೆ. ಕುಡುಬಿ ಸಮಾಜದ ಪಾಡೇಕಾರರ ಮದುವೆಗಳು ಹಿಂದಿನ ಕಾಲದಲ್ಲಿ ಗುರಿಕಾರರ ಮನೆಯಲ್ಲಿ ಸಾಮೂಹಿಕ ರೀತಿಯಲ್ಲಿ ಆಗುತ್ತಿದ್ದವು ಎಂದು ತಿಳಿದುಬರುತ್ತದೆ. ಈಗಲೂ ಕೆಲವು ಕಡೆ ಈ ರೀತಿಯ ಮದುವೆಗಳು ಅಪರೂಪಕ್ಕೆ ಜರಗುತ್ತವೆ. ಸದಾ ದುಡಿಮೆಯಲ್ಲೇ ತೊಡಗಿಸಿಕೊಳ್ಳುವ ಕುಡುಬಿಯರು ತಮ್ಮ ಬಡತನದ ಜೀವನದಲ್ಲಿ ಖರ್ಚುವೆಚ್ಚ ಮತ್ತು ಸಮಯಾವಕಾಶವನ್ನು ಸರಿದೂಗಿಸಿಕೊಳ್ಳಲು ಕಂಡುಕೊಂಡ ದಾರಿಯಿದು. ಮಾತ್ರವಲ್ಲದೆ ಇದೊಂದು ಕುಡುಬಿಯರ ಸಾಮೂಹಿಕ ಸಂಘಟನಾತ್ಮಕ ಜೀವನದ ಮತ್ತು ಬುಡಕಟ್ಟು ಲಕ್ಷಣದ ನಿದರ್ಶನವೆನ್ನಬಹುದು.

38.6. ಮನೆ ಅಳಿಯತನ :

ಒಬ್ಬ ದಂಪತಿಗೆ ಗಂಡು ಸಂತಾನವಿಲ್ಲದೆ, ಒಬ್ಬಳೇ ಮಗಳಿದ್ದಲ್ಲಿ ಅವಳಿಗೆ 'ಒಬ್ಬಂಟಿ ಹೆಣ್ಣು' (ಎಕ್ಕುಳೆಂ) ಅನ್ನುತ್ತಾರೆ. ಕುಡುಬಿಯರು ಪಿತೃಪ್ರಧಾನ ಸಂಸ್ಕೃತಿಯವರು. ಆದುದರಿಂದ ಈ ಒಬ್ಬಂಟಿ ಹೆಣ್ಣನ್ನು ಮದುವೆ ಮಾಡಿಕೊಟ್ಟಾಗ ತಂದೆಯ ಮನೆ, ಆಸ್ತಿ ಬದುಕುಗಳಿಗೆ ವಾರೀಸುದಾರರು ಇರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಪರೋಕ್ಷ ದತ್ತು ಸ್ವೀಕಾರ ರೂಪದ 'ಮನೆಅಳಿಯತನ' ಪಾಲಿಸುವ ಪದ್ಧತಿ ಇದೆ. ಮನೆ ಅಳಿಯತನದ ವಿವಾಹದಲ್ಲಿ ಹೆಣ್ಣು ಪತಿಯ ಮನೆಗೆ ಹೋಗಿ ಜೀವಿಸುವುದಿಲ್ಲ. ಬದಲಿಗೆ ಪತಿಯೇ ಪತ್ನಿಯ ಮನೆಗೆ ಬಂದು ನೆಲೆಸುತ್ತಾನೆ. ಮತ್ತು ಅತ್ತೆ ಮಾವಂದಿರ ಆಸ್ತಿ ಬದುಕಿಗೆ ಉತ್ತರಾಧಿಕಾರಿಯಾಗಿ ಅನುಭೋಗದಾರನಾಗಿರುತ್ತಾನೆ. ಅವನು ಅತ್ತೆ ಮಾವಂದಿರನ್ನು ಸ್ವಂತ ತಂದೆ ತಾಯಿಯರಂತೆಯೇ ನೋಡಿಕೊಳ್ಳುತ್ತಾನೆ. ಅವರ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಾನೆ. ಅತ್ತೆ ಮಾವಂದಿರ ಸಂಪತ್ತು, ನಂತರ ಅವನ ಮಕ್ಕಳಿಗೆ ಪರಂಪರಾಗತವಾಗಿ ಲಭಿಸುತ್ತದೆ. ಅತ್ತೆ ಮಾವಂದಿರ ಅಪರಕರ್ಮ ವಿಧಿಗಳನ್ನು ಮಾಡಲೂ ಅವನು ಹಕ್ಕುದಾರ ಎಂಬ ಅಭಿಪ್ರಾಯ ಮದುವೆ ಸಂಪ್ರದಾಯಗಳ ಮಾಹಿತಿ ಸಂಗ್ರಹದ ಸಂದರ್ಭ ಸಂಪನ್ಮೂಲ ವ್ಯಕ್ತಿಗಳು ವ್ಯಕ್ತಪಡಿಸಿದ್ದಾರೆ. ಆದರೆ ನನಗೆ ಮನವರಿಕೆಯಾದ ಪ್ರಕಾರ, ಅತ್ತೆ ಮಾವ ತೀರಿಕೊಂಡ ಸಂದರ್ಭ ಮನೆ ಅಳಿಯನಾದವನು ಅವರ ಅಂತಿಮಕ್ರಿಯೆಯ ಖರ್ಚನ್ನು ನೀಡಬೇಕು; ಪಿಂಡಪ್ರದಾನ ಮತ್ತು ಅಂತಿಮ ಕ್ರಿಯಾವಿಧಿಗಳನ್ನು ಕುಟುಂಬಿಕರು ನೆರವೇರಿಸಿದಲ್ಲಿ ಮಾತ್ರ ಪರಿಪೂರ್ಣ ಮತ್ತು ಫಲದಾಯಕವಾಗುತ್ತವೆ ವಿನಃ ಮನೆ ಅಳಿಯ ಮಾಡಿದರೆ ಆಗಲಾರದು. ಇದು ಕುಡುಬಿ ಸಂಸ್ಕೃತಿ ಹಾಗೂ ಸಮಾಜಶಾಸ್ತ್ರವನ್ನು ಅಧ್ಯಯನ ಮಾಡಿದರೆ ಮನದಟ್ಟಾಗುತ್ತದೆ.

ಮನೆ ಅಳಿಯನನ್ನು ನೇಮಿಸುವಾಗ ಕುಟುಂಬದ ಆಸ್ತಿ ಇನ್ನೊಂದು ಬೆಡಗಿಗೆ ಹೋಗುತ್ತದೆ. ಆದುದರಿಂದ ಹೆಚ್ಚಿನ ಸಂದರ್ಭಗಳಲ್ಲಿ ಮನೆಅಳಿಯತನವನ್ನು ಕುಟುಂಬಿಕರು ಅಥವಾ ದಾಯಾದಿಗಳು ವಿರೋಧಿಸುವುದು ಸ್ವಾಭಾವಿಕ. ಈ ನ್ಯಾಯದಿಂದಾಗಿ ಒಂದೇ ರಕ್ತವನ್ನು ಹಂಚಿಕೊಂಡು ಹುಟ್ಟಿದ ಸಹೋದರರ ನಡುವೆ ವೈಮನಸ್ಯ, ದ್ವೇಷಗಳು ಉದ್ಭವಿಸಿ ವ್ಯಾಜ್ಯಗಳಾಗಿ ಕೋರ್ಟು ಕಛೇರಿ ತಲುಪುವ ಪ್ರಸಂಗಗಳೂ ಇರುತ್ತವೆ.

38.7. ತೊಟ್ಟಿಲ ಮದುವೆ

ಸಾಮಾನ್ಯವಾಗಿ ಕುಡುಬಿಯರಲ್ಲಿ 'ತೊಟ್ಟಿಲ ಮದುವೆ' ಸಂಪ್ರದಾಯ ಚಾಲ್ತಿಯಲ್ಲಿಲ್ಲ. ಆದರೆ ಆ ಹೋಲಿಕೆಯ ಒಂದು ಅಘೋಷಿತ, ಪರೋಕ್ಷ ರೂಪ ಗೋಚರಿಸುತ್ತದೆ. ಸಹೋದರ ಹಾಗೂ ಸಹೋದರಿಯ ಸಂಬಂಧವನ್ನು ಉಳಿಸಿಕೊಂಡು ಮುಂದುವರಿಸುವ ವ್ಯವಸ್ಥೆಯಾಗಿ ಅವರ ಮಕ್ಕಳ ನಡುವೆ ಹಕ್ಕಿನ ಮದುವೆ ಏರ್ಪಡುತ್ತದೆ. ಇದಕ್ಕೆ ಪೂರಕವಾದ, ಸಹೋದರನ ಮದುವೆಯ ಗೃಹಪ್ರವೇಶ ಸಂಪ್ರದಾಯ ಆಗುವಾಗ ಸಹೋದರಿಯು ಹೊಸ್ತಿಲು ತಡೆಯುವ ವಿಧಿಯ ವಿವರಣೆಯನ್ನು ಈ ಹಿಂದೆ ವಿವರಿಸಲಾಗಿದೆ. ಇದು

ಒಂದು ಕಾರಣವಾದರೆ, ತೊಟ್ಟಿಲ ಮದುವೆಯ ಅನ್ವರ್ಥ ರೂಪದ ಮಾತು ತೇಲಿಸುವ ಪದ್ಧತಿ ಇನ್ನೊಂದು ಕಾರಣ. ಸಹೋದರನಿಗೆ ಹೆಣ್ಣು ಮಗು ಜನಿಸಿದಾಗ ಆರನೇ ದಿನ 'ಸಟಿ' ಆಚರಣೆಯ ಸಂದರ್ಭ ಸಹೋದರಿಯ ಎಳೆಯ ಪ್ರಾಯದ ಮಗನಿಂದ 'ಐವರು ಸಹೋದರರ ಹಿಂದಿನ ಹೆಣ್ಣು ನನಗೇ ಕೊಡಬೇಕು' ಅಂತ ಹೇಳಿಸುವ ಕ್ರಮವಿದೆ. ಸಹೋದರಿಯೂ ಸಹೋದರನೊಂದಿಗೆ 'ನಿನ್ನ ಮಗಳನ್ನು ನನಗೆ ಸೊಸೆಯಾಗಿ ನೀಡಬೇಕು' ಅಂತ ಪದೇ ಪದೇ ಹೇಳಿ ಮಕ್ಕಳು ಚಿಕ್ಕವರಿರುವಾಗಲೇ ಅವರಿಬ್ಬರು ಗಂಡಹೆಂಡತಿ ಎಂಬ ಭಾವನೆ ಬರುವಂತೆ ಮಾಡುತ್ತಾರೆ. ಮುಂದಕ್ಕೆ ಅವರು ವಿವಾಹ ವಯಸ್ಸು ಪ್ರಾಪ್ತರಾದಾಗ ಇದೇ ಭಾವನೆ ಬಲಿತು, ದೃಢವಾಗಿ ಸತಿಪತಿಯರಾಗುವ ನಿದರ್ಶನಗಳಿವೆ.

38.8. ಅನೈತಿಕ ಸಂಬಂಧ : (ಅಗಮ್ಯ ಗಮನ) :

ವಿವಾಹ ಆಗಿರದೆಯೇ ಸ್ತ್ರೀಯರ ಸಂಗ ಬೆಳೆಸಿ ಇಟ್ಟುಕೊಳ್ಳುವುದು, ಮಡದಿ ಮಕ್ಕಳು ಇರುವಾಗಲೇ ಪರಕೀಯ ಹೆಣ್ಣನ್ನು/ಸ್ತ್ರೀಯನ್ನು ದೈಹಿಕ ಸಂಪರ್ಕದಲ್ಲಿರಿಸಿ ಕೊಳ್ಳುವುದು, ವಿಧವೆ ಸ್ತ್ರೀಯೊಂದಿಗೆ ಸಾಂಸಾರಿಕ ಸಂಬಂಧವಿರಿಸಿಕೊಳ್ಳುವುದು, ಸ್ತ್ರೀಯೊಬ್ಬಳು ಪರಪುರುಷನೊಂದಿಗೆ ದಾಂಪತ್ಯ ಜೀವನ ನಡೆಸುವುದು, ಪತಿಗೆ ತಿಳಿಯದೆ ಪತ್ನಿ; ಅಥವಾ ಪತ್ನಿಗೆ ತಿಳಿಯದೆ ಪತಿ ಅಗಮ್ಯ ಗಮನದಲ್ಲಿರುವುದು, ಹೊರಜಾತಿಯವರೊಂದಿಗೆ ಅನೈತಿಕ ಸಂಬಂಧ ಹೊಂದಿರುವುದು... ಇತ್ಯಾದಿ ಸಂಗತಿಗಳು ವ್ಯಭಿಚಾರವಾಗುತ್ತದೆ. ಕುಡುಬಿಯರಲ್ಲಿ ಲೈಂಗಿಕತೆಯ ಪಾವಿತ್ರ್ಯಕ್ಕೆ ವಿಶೇಷ ಗೌರವವಿದೆ. ಅನೈತಿಕ ಸಂಬಂಧ ನಿರತರಾಗುವ ವ್ಯಭಿಚಾರಿಗಳಿಗೆ ಅಥವಾ ಹೊರಜಾತಿಯವರೊಂದಿಗೆ ವಿವಾಹ ಸಂಬಂಧ ಹೊಂದಿದವರಿಗೆ ಕುಡುಬಿ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಾನಮಾನವಿಲ್ಲ. ಹಿಂದಿನ ಕಾಲದಲ್ಲಿ ಅಂಥವರಿಗೆ ಕುಟುಂಬದಲ್ಲಿ ನೀರು ಕೂಡಾ ಕೊಡುತ್ತಿರಲಿಲ್ಲ. ತಂದೆತಾಯಿಯರು ವ್ಯಭಿಚಾರಿ ಮಕ್ಕಳಿಗೆ ಮನೆಯಲ್ಲಿ ಅವಕಾಶ ನೀಡಿದರೆ ಆ ಮನೆಗೇ ಬಹಿಷ್ಕಾರ ಹಾಕಲಾಗುತ್ತಿತ್ತು. ವಾಡೆಯ ಅಥವಾ ಸಮಾಜದಲ್ಲಿನ ಧಾರ್ಮಿಕ ಕಾರ್ಯಗಳಿಗೆ ವ್ಯಭಿಚಾರಿಗಳನ್ನು ಆಹ್ವಾನಿಸಿದರೆ ವಾಡೇಕಾರರು ಅಥವಾ ಸಮಾಜ ಬಂಧುಗಳು ಆ ಕಾರ್ಯವನ್ನು ಬಹಿಷ್ಕರಿಸಿ ಎದ್ದು ಹೋಗುತ್ತಿದ್ದರು. ವ್ಯಭಿಚಾರದಿಂದ ಹುಟ್ಟಿದ ಸಂತಾನಕ್ಕೂ ಯಾವುದೇ ಸ್ಥಾನಮಾನ ನೀಡುತ್ತಿರಲಿಲ್ಲ.

ಅವಿವಾಹಿತರ ಅನೈತಿಕ ಸಂಬಂಧದ ಸುಳಿವು ಸಿಗುತ್ತಿದ್ದಂತೆ ಸ್ವಾಭಾವಿಕವಾಗಿ ತರಾತುರಿಯಲ್ಲಿ ಮದುವೆಯ ಪ್ರಯತ್ನಗಳು ನಡೆಯುತ್ತವೆ. ಆದರೆ ಉದರದಲ್ಲಿ ಪಿಂಡವಿರುವಾಗ ಯಾರೂ ಮದುವೆಗೆ ತಯಾರಾಗುವುದಿಲ್ಲ. ಮಗು ಗರ್ಭದಲ್ಲಿರುವಾಗ ಮದುವೆ ಆದಲ್ಲಿ ತಾಯಿಯೊಂದಿಗೆ ಮಗುವಿಗೂ ಮದುವೆಯಾದಂತೆ ಆಗುವುದರಿಂದ 'ಪಿಂಡಕ್ಕೆ ಮತ್ತು ತಾಯಿಗೆ' ಒಟ್ಟಿಗೆ ಮದುವೆ ಮಾಡುವ ಕ್ರಮ ಇಲ್ಲ. ಇದು ಜಾತಿಯ ಹೊರಗೆ ಘಟಿಸಿದರಂತೂ ಅಂಥವರ ಕಡೆ ದೃಷ್ಟಿಯನ್ನೂ ಹರಿಸುವುದಿಲ್ಲ.

ಹೆಣ್ಣು ವಿವಾಹಪೂರ್ವ ಗರ್ಭವತಿಯಾದಲ್ಲಿ ಅಥವಾ ಅವಳಿಗೆ ಹೆರಿಗೆಯಾದಲ್ಲಿ ಅವಳ ಬಾಳು ನತದೃಷ್ಟವಾಗುತ್ತದೆ. ಆಕೆಗೆ ಮನೆಯಲ್ಲಿ, ಕುಟುಂಬದಲ್ಲಿ, ಸಮಾಜದಲ್ಲಿ ಮತ್ತು ಊರಿನಲ್ಲಿ ಯಾರೂ ಗೌರವ ನೀಡುವುದಿಲ್ಲ. ತಂದೆ ತಾಯಿ, ಸಹೋದರ ಸಹೋದರಿ ಎಂಬ ರಕ್ತಸಂಬಂಧದ ಲೆಕ್ಕಾಚಾರವನ್ನು ಇಲ್ಲಿ ಯಾರೂ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅವಳಿಗೆ ಸಂಪಾದನೆ, ಹಸಿವಿಗೆ ಅನ್ನ, ಉಳಿದುಕೊಳ್ಳಲು ಮನೆ, ಜೀವನ ಸಾಗಿಸಲು ಯಾವುದೇ ಅನುಕೂಲಗಳು ಲಭಿಸುವುದಿಲ್ಲ. ಪಟ್ಟಾರೆಯಾಗಿ ಆಕೆಯ ಜೀವನ ಕರುಣಾಜನಕ ಹಾಗೂ ನಿರಾಧಾರವಾಗುತ್ತದೆ.

ಬಹಳ ಹಿಂದಿನ ಅವಧಿಯಲ್ಲಿ ಅನಿವಾರ್ಯ ಸಂದರ್ಭಗಳಲ್ಲಿ ವ್ಯಭಿಚಾರಿಗಳನ್ನು ಹೆಣ್ಣು ಗಂಡೆಂಬ ತಾರತಮ್ಯವಿಲ್ಲದೆ, ಮಗದೊಮ್ಮೆ ಕುಟುಂಬ ಅಥವಾ ವಾಡಗೆ ಸ್ವೀಕರಿಸಬೇಕಾದಲ್ಲಿ ಔಪಚಾರಿಕ ವ್ಯವಸ್ಥೆಯೊಂದಿತ್ತು ಅಂತ ತಿಳಿದುಬರುತ್ತದೆ. ಒಂದೇ ಸಾಲಿನಲ್ಲಿ ಹನ್ನೆರಡು ಗುಡಿಸಲ ರಚನೆ ನಿರ್ಮಿಸಿ, ಆ ಗುಡಿಸಲುಗಳಿಗೆ ಬೆಂಕಿಯಿಟ್ಟು, ಬೆಂಕಿ ಉರಿಯುತ್ತಿರುವಾಗಲೇ ವ್ಯಭಿಚಾರಿಗಳು ಅದರ ಮೂಲಕ ತೂರಿಕೊಂಡು ಬರುವ ಒಂದು ತಾಂತ್ರಿಕ ವಿಧಾನ ಮಾಡುತ್ತಿದ್ದರು. ಈ ವಿಧಿಯಿಂದ ಅವನು/ಅವಳು ಪವಿತ್ರರಾದರು ಎಂದು ನಂಬುತ್ತಿದ್ದರು. ಆ ನಂತರವೇ ಅವರಿಗೆ ಕುಟುಂಬದಲ್ಲಿ ನೀರು ಕೊಡುತ್ತಿದ್ದರು (ಸಂಪನ್ಮೂಲ ವ್ಯಕ್ತಿ : ಶ್ರೀ ಪುತ್ತು ಗೌಡ, ಸಂಕೇಶ, ಕೊಂಪದವು 1999).

ಈ ಕ್ರಿಯೆಯ ತಾತ್ಪರ್ಯವನ್ನು ಹೀಗೆ ಅರ್ಥೈಸಬಹುದು. ವ್ಯಕ್ತಿಯ ವ್ಯಭಿಚಾರೀ/ ಅನೈತಿಕತೆಯ ನಡವಳಿಕೆಯನ್ನು ಸುಟ್ಟು ಹೊಸ ಜೀವನ ಸ್ವೀಕರಿಸಿದನೆಂಬ ನಂಬಿಕೆಯ ಹಿಂದೆ, ಅಗ್ನಿಗೆ ಆಹುತಿ ನೀಡುವ ಕ್ರಿಯೆಯ ಮೂಲಕ ನವಸೃಷ್ಟಿಯ ಆಶಯ ಗೋಚರಿಸುತ್ತದೆ. ಮನುಷ್ಯ ಮನುಷ್ಯತ್ವದ ಪ್ರಾಪ್ತಿಗೆ ಹನ್ನೆರಡು ಜನ್ಮ ಪಡೆಯಬೇಕೆಂಬ ನಂಬಿಕೆಯೂ ಇರುವುದನ್ನು ಇಲ್ಲಿ ಗಮನಿಸಬೇಕು. ಕಾಡಿಗೆ ಬೆಂಕಿ ಬಿದ್ದು ಸುಟ್ಟು, ಮಳೆಬಿದ್ದಾಗ ಹುಲ್ಲು, ಗಿಡಮರಗಳು, ಪುನಃ ಚಿಗುರೊಡೆದು ಮರುಹುಟ್ಟು ಪಡೆಯುವ ಕ್ರಿಯೆಯ ಪ್ರಭಾವ ಇದಾಗಿರಬಹುದು. ಅಗ್ನಿಯ ಎಲ್ಲವನ್ನು ಸುಟ್ಟು ಪವಿತ್ರಗೊಳಿಸುವ ಶಕ್ತಿಯ ಅರಿವು ಹಿಂದಿನವರಿಗೆ ಮನವರಿಕೆಯಿತ್ತು.

38.9. ಗೃಹಪ್ರವೇಶ (ಮನೆತುಂಬಿಸುವಿಕೆ):

ಮದುವೆಯ ವಿಧಿಗಳೆಲ್ಲಾ ಮುಗಿದಂತೆ, ಚಪ್ಪರದಿಂದ ಎಲ್ಲಕ್ಕಿಂತ ಮುಂಚಿತವಾಗಿ ವಧೂವರರು ಮನೆಯೊಳಗೆ ಪ್ರವೇಶಿಸುತ್ತಾರೆ. ಆದುದರಿಂದ ಈ ಕ್ರಮಕ್ಕೆ ವಧೂವರರ 'ಗೃಹಪ್ರವೇಶ' ಅಂತ ಹೆಸರು. ಗೃಹಪ್ರವೇಶ ಸಮಯ ವಧೂವರರು ಮುಖ್ಯ ಬಾಗಿಲ ಹೊಸ್ತಿಲು ದಾಟಿ ಒಳಸರಿಯುತ್ತಾರೆ. ಆದುದರಿಂದ ಇದು 'ಹೊಸ್ತಿಲು ದಾಟುವ' ಶಾಸ್ತ್ರ. ವಧು ಒಳ ಸರಿಯುವಾಗ ಹೊಸ್ತಿಲ ಕೊನೆಯಲ್ಲಿ ಹಾಕಿದ ಅಕ್ಕಿರಾಶಿಯನ್ನು ಕಾಲಿನಿಂದ ಮನೆಯೊಳಗೆ ಚೆಲ್ಲಿ ಒಳಗೆ ಹೋಗುತ್ತಾಳೆ. ಇದು ಹೊಸ್ತಿಲ ಮೇಲಿಂದ ವಧುವನ್ನು

ದಾಟಿಸುವ ಕ್ರಮ. ವಧೂವರರು ಒಳಸರಿಯಲು ಅನುವಾದಾಗ ವರನ ಸಹೋದರಿ ಬಾಗಿಲ ದಾರಂಧಗಳಿಗೆ ಕೈಗಳನ್ನಿಟ್ಟು ಅಡ್ಡ ನಿಲ್ಲುತ್ತಾಳೆ. ಆದುದರಿಂದ ಈ ಸಂಪ್ರದಾಯಕ್ಕೆ ಬಾಗಿಲ ಅಡ್ಡ, ಕವಾಟ (ಕವಡ) ಹಿಡಿಯುವುದು, ದ್ವಾರ ತಡೆಯುವುದು ಮುಂತಾದ ಹೆಸರುಗಳಿವೆ. ವರನಾದ ಸಹೋದರ ಬಾಗಿಲು ತಡೆದ ತನ್ನ ಸಹೋದರಿಗೆ ವಿವಿಧ ಅಮೂಲ್ಯ ವಸ್ತುಗಳನ್ನು ನೀಡುತ್ತೇನೆ ಅಂದರೂ ಸಹೋದರಿ ಬಾಗಿಲಿಗೆ ಅಡ್ಡ ನಿಂತಿರುವಲ್ಲಿಂದ ಕದಲುವುದಿಲ್ಲ. ಕೊನೆಯಲ್ಲಿ ಸಹೋದರ, ಮುಂದಕ್ಕೆ ತನಗೆ ಜನಿಸಬಹುದಾದ ಮಗಳನ್ನು ಆಕೆಯ ಮಗನಿಗೆ ಮದುವೆ ಮಾಡಿಕೊಡುತ್ತೇನೆ ಅಂತ ಭಾಷೆಕೊಟ್ಟ ಮೇಲೆ ಸಹೋದರಿ ಬಾಗಿಲಿಂದ ಸರಿಯುತ್ತಾಳೆ. ಈ ಸಂದರ್ಭ ಹಾಡಲಾಗುವ ಸಂಪ್ರದಾಯದ ಹಾಡಿನಲ್ಲಿ ವಿಶದವಾಗಿ ಇದರ ವಿವರಣೆಯಿದೆ. ಸಹೋದರ ಕೊಟ್ಟ ಭಾಷೆಗೆ ಸಾಕ್ಷಿಯಾಗಿ ತನ್ನ ಸಹೋದರಿಯೊಂದಿಗೆ ಕೈಯಲ್ಲಿದ್ದ ವೀಳ್ಯಪಟ್ಟಿಯನ್ನು ಐದಾವರ್ತಿ ಬದಲಾಯಿಸುತ್ತಾನೆ. ಆದುದರಿಂದ ಈ ಶಾಸ್ತ್ರಕ್ಕೆ 'ವೀಳ್ಯ ಬದಲಾಯಿಸುವ ಶಾಸ್ತ್ರ' ಎಂಬುದಾಗಿಯೂ ಹೆಸರಿದೆ.

38.10. ಮರುನಾಮಕರಣ :

ಕುಡುಬಿ ಮಹಿಳೆಯರು ತಮ್ಮ ಪತಿಯ ಕುಟುಂಬದಲ್ಲಿ ಪತಿಯ ಹಿರಿಯ ಸಹೋದರರ, ಅತ್ತೆ ಮಾವಂದಿರ ಹಾಗೂ ಪತಿಯ ಹೆಸರನ್ನು ತಪ್ಪಿಯೂ ಉಚ್ಚರಿಸುವುದಿಲ್ಲ. ಅವರ ಹೆಸರು ಹೇಳಲೇಬೇಕಾದ ಸಂದರ್ಭಗಳಲ್ಲಿ ಅನ್ವರ್ಥ ರೂಪದಲ್ಲಿ, ಪರೋಕ್ಷವಾಗಿ ಹೇಳುತ್ತಾರೆ. ಅವರನ್ನು ಸಂಬೋಧಿಸುವಾಗಲೂ ಏಕವಚನ ಉಪಯೋಗಿಸುವುದಿಲ್ಲ. ಅವರು, ಇವರು, ನೀವು, ತಾವು ಎಂಬ ಬಹುವಚನ ಉಪಯೋಗಿಸುತ್ತಾರೆ. ಆದಕ್ಕಾಗಿ, ವಧುವನ್ನು ಮನೆತುಂಬಿಸಿಕೊಳ್ಳುವ ಸಂದರ್ಭದಲ್ಲಿ ಸೇಸೆಯ ಕ್ರಮ ಆಗಿ ಎಬ್ಬಿಸುವ ಮೊದಲು ವಧುವಿಗೆ ಮರುನಾಮಕರಣ ಮಾಡುವ ಸಂಪ್ರದಾಯವಿದೆ. ಮರುನಾಮಕರಣದಿಂದ ಉಳಿದ ಮಹಿಳೆಯರಿಗೆ ವಧುವನ್ನು ಹೆಸರೆತ್ತಿ ಕರೆಯಲು ಅನುಕೂಲವಾಗುತ್ತದೆ. ಉದಾಹರಣೆಗೆ 'ಲಕ್ಷ್ಮೀ' ಎಂಬ ಹೆಸರಿನ ವಧುವನ್ನು 'ಲಕ್ಷ್ಮಣ' ಎಂಬ ಪುರುಷ ನಾಮವನ್ನು ಉಚ್ಚರಿಸಲು ನಿರ್ಬಂಧವಿರುವ ಮಹಿಳೆಯರು ಆ ಹೆಸರಿನಿಂದ ಆಕೆಯನ್ನು ಕರೆಯುವುದಿಲ್ಲ. ಆದುದರಿಂದ ಆ ವಧುವಿಗೆ ಲತಾ, ಲಲಿತಾ ಮುಂತಾಗಿ ಮರುನಾಮಕರಣ ಮಾಡುತ್ತಾರೆ ಅಥವಾ ಲಚ್ಚಿ, ಲಕ್ಕಿ ಮುಂತಾದ ಉಚ್ಚಾರಣೆಗೆ ಸುಲಭವಾದ ಹ್ರಸ್ವ ಹೆಸರುಗಳನ್ನು ಇಡಬಹುದು. ಈ ಹೊಸ ನಾಮಕರಣದಿಂದ ವಿವಾಹಿತಳು ಕಾಕತಾಳೀಯವಾಗಿ ಮದುವೆಯ ನಂತರ ಅದೃಷ್ಟವಂತೆ, ಹಡೆದ ಮತ್ತು ಪಡೆದ ಮನೆ, ಮನೆತನಗಳಿಗೆ ಶೋಭೆ, ಶ್ರೇಯಸ್ಸು ತರುವಂಥವಳಾಗಿಯೂ ಗುರುತಿಸಲ್ಪಡುವುದುಂಟು.

38.11. ವಿವಾಹ ಸಂಪ್ರದಾಯದಲ್ಲಿ ವೀಳ್ಯದ ಸ್ಥಾನ :

ಕುಡುಬಿಯರ ವಿವಾಹ ಸಂಪ್ರದಾಯದಲ್ಲಿ ವೀಳ್ಯಪಟ್ಟ ನೀಡಿ ಕಾಲಿಗೆರಗುವುದು ಗರಿಷ್ಠ ಗೌರವ ನೀಡುವ ಕ್ರಮ. ತಾಂಬೂಲ ನಿಶ್ಚಿತಾರ್ಥಕ್ಕೆ ವಧುವಿನ ಕಡೆಯಿಂದ

ಆಹ್ವಾನ ನೀಡುವಾಗ ಸೋದರ ಮಾವ, ಮೂಲ ಮನೆಯ ಹಿರಿಯರನ್ನು ವೀಳ್ಯ ನೀಡಿಯೇ ಆಮಂತ್ರಿಸಬೇಕು. ತಾಂಬೂಲ ನಿಶ್ಚಿತಾರ್ಥದ ವಿಧಿಗಳನ್ನು ನೆರವೇರಿಸುವ ಜವಾಬ್ದಾರಿ ಗುರಿಕಾರ ರಾಯಭಾರಿಯವರದು. ಅವರನ್ನು ವೀಳ್ಯ ನೀಡಿಯೇ ಆಮಂತ್ರಿಸಬೇಕು. ವರನ ಕಡೆಯವರೂ ಅವರ ಗುರಿಕಾರ, ರಾಯಭಾರಿ, ಭಾವ, ಸೋದರ ಮಾವ ಮತ್ತು ಕುಟುಂಬದ ಮೂಲ ಮನೆಯ ಹಿರಿಯರಿಗೆ ವೀಳ್ಯ ಮುಖಾಂತರವೇ ಆಮಂತ್ರಣ ನೀಡಬೇಕು.

ತಾಂಬೂಲ ನಿಶ್ಚಿತಾರ್ಥದಲ್ಲಿ ವೀಳ್ಯದ ಪ್ರಮುಖ ಪಾತ್ರವಿದ್ದು ವಿಧಿಗಳೆಲ್ಲಾ ವೀಳ್ಯದ ಮೂಲಕವೇ ಜರಗುತ್ತವೆ. ಹುಡುಗನಿಗೆ ತಮ್ಮ ಹುಡುಗಿಯನ್ನು ಮದುವೆ ಮಾಡಿಕೊಡುತ್ತೇವೆ ಎಂದು ಹುಡುಗಿ ಕಡೆಯವರು, ಆ ಹುಡುಗಿಯನ್ನು ತಮ್ಮ ಹುಡುಗನಿಗೆ ವಧುವಾಗಿ ಸ್ವೀಕರಿಸುತ್ತೇವೆ ಎಂದು ಹುಡುಗನ ಕಡೆಯವರು ದೈವದೇವರ ಹೆಸರಲ್ಲಿ, ಗುರುಹಿರಿಯರ ಸಮ್ಮುಖದಲ್ಲಿ ವೀಳ್ಯಸಾಕ್ಷಿಯಾಗಿ ಪ್ರಮಾಣ ಬದ್ಧರಾಗುವ ಸಂಪ್ರದಾಯ ತಾಂಬೂಲ ನಿಶ್ಚಿತಾರ್ಥ. ಈ ಸಂದರ್ಭ ದ್ವಿಪಕ್ಷೀಯರೂ ಪರಸ್ಪರ ವೀಳ್ಯ ಅದಲು ಬದಲು ಮಾಡಿಕೊಳ್ಳುವ ವಿಧಿಯಿಂದ ವಿವಾಹ ಅಧಿಕೃತವಾಗಿ ನಿಶ್ಚಯವಾಗುತ್ತದೆ. ಸಂಪ್ರದಾಯ ಬದ್ಧವಾಗಿ ವೀಳ್ಯ ಬದಲಾಯಿಸಿದರೆ ವಿವಾಹ ನಿಶ್ಚಯವಾದುದಕ್ಕೆ ಬೇರೆ ರುಜುವಾತು ಅವಶ್ಯವಿಲ್ಲ. ವೀಳ್ಯ ಸಾಕ್ಷಿ ಹೊರತು ಲಿಖಿತ ದಾಖಲೆಗಳ ಅಗತ್ಯ ಇಲ್ಲಿಲ್ಲ. ಈ ನಿಶ್ಚಿತಾರ್ಥದ ಸಂದರ್ಭದಲ್ಲಿ ಎರಡೂ ಕಡೆಯ ಗುರಿಕಾರ ರಾಯಭಾರಿ, ಪಂಚಪ್ರಧಾನರು, ಸೋದರ ಮಾವ, ಮೂಲ ಮನೆಯ ಹಿರಿಯ ಮತ್ತು ಇತರ ಗುರುಹಿರಿಯರಿಗೆ ನಿಶ್ಚಿತಾರ್ಥದ ಗೌರವವಾಗಿ ಪ್ರತ್ಯೇಕ ವೀಳ್ಯ ನೀಡುವ ಕ್ರಮವಿದೆ.

ಮದುವೆಗೆ ಆಹ್ವಾನಿಸುವಾಗ ಗುರಿಕಾರ ರಾಯಭಾರಿ, ಸೋದರಮಾವ, ಭಾವ ಮತ್ತು ಜೀಗರು – ಇವರಿಗೆ ವೀಳ್ಯಪಟ್ಟಿ ನೀಡಿಯೇ ಆಮಂತ್ರಿಸುವುದು ವಾಡಿಕೆ. ಕಂಕಣಧಾರಣೆಗೆ ಬಳೆಗಾರ ಬಂದಲ್ಲಿ ಸ್ವಸ್ತಿಕೆಗೆ ವೀಳ್ಯಪಟ್ಟಿ ಇಡಬೇಕು. ದೇವಕಾರ್ಯವಾಗುವಾಗ ವಧೂವರರು ದೇವರಿಗೆ ವೀಳ್ಯಪಟ್ಟಿ ಸಲ್ಲಿಸಿ ವಂದಿಸಬೇಕು. ವರನ ಕಡೆಯಿಂದ ಅರಸಿನ ಬಾಗಿನವನ್ನು ವಧುವಿನ ಮನೆಗೆ ತೆಗೆದುಕೊಂಡು ಹೋಗುವಾಗ ವೀಳ್ಯಪಟ್ಟಿಗಳನ್ನು ಕೊಂಡುಹೋಗಿ ಅಲ್ಲಿ ಪರಸ್ಪರ ಬದಲಾಯಿಸಲು ಇರುವುದರಿಂದ ಈ ವಿಧಿಗೆ 'ವೀಳ್ಯ ಬಾಗಿನ' ಅಂತಲೂ ಹೆಸರಿದೆ. ಮದುವೆಯ ಹಿಂದಿನ ರಾತ್ರಿಯ ಅರಸಿನ ಶಾಸ್ತ್ರ, ಪನ್ನೆ, ಕಲಶ ಸ್ನಾನ, ಹಿಟ್ಟು ಕುಟ್ಟುವ ಶಾಸ್ತ್ರ, ಕುಂಭಮುಹೂರ್ತ, ಹಾಲುಗಂಭ ಶಾಸ್ತ್ರ... ಇತ್ಯಾದಿ ಪ್ರತಿಯೊಂದು ವಿಧಿಯ ಆಚರಣೆಯ ಪ್ರಾರಂಭದಲ್ಲಿ ವೀಳ್ಯಪಟ್ಟಿ ಇಟ್ಟು ವಂದಿಸಬೇಕು. ವಧೂವರರು ಅಲಂಕೃತರಾಗಿ ಹೊರಡುವಾಗ ದೇವರು ದೈವಾದಿಗಳಿಗೆ, ತುಳಸೀ ಮಾತೆಗೆ ಮತ್ತು ಎಲ್ಲ ಹಿರಿಯರಿಗೆ ವೀಳ್ಯ ನೀಡಿ ಕಾಲಿಗೆರಗಿ ಆಶೀರ್ವಾದ ಪಡೆದು ಹೊರಡಬೇಕು. ದಿಬ್ಬಣ ಹೋಗುತ್ತಿರುವಾಗ ಹಾದಿಯಲ್ಲಿ ಎದುರಾಗುವ ದೇವಸ್ಥಾನ, ದೈವಸ್ಥಾನ, ನಾಗಸ್ಥಾನ, ಗಡುಸ್ಥಳಗಳಲ್ಲಿ ವೀಳ್ಯವಿಟ್ಟು

ಕೈಮುಗಿಯಬೇಕು. ಫಲವಂತಿಕೆಯ ಸಂಕೇತವಾಗಿ ವರನ ಕೈಯಲ್ಲಿ ತೆಂಗಿನಕಾಯಿ ಮತ್ತು ವೀಳ್ಯಪಟ್ಟ ಇರುವುದಾದರೆ ವಧುವಿನ ಕೈಯಲ್ಲಿ ವೀಳ್ಯಪಟ್ಟ ಇರುವುದು ಸಂಪ್ರದಾಯ. ವರನ ಕೈಯಲ್ಲಿ ಧಾರೆಮುಹೂರ್ತದ ಮಾಲಾರ್ಪಣೆವರೆಗೆ ಕೈಯಲ್ಲಿ ಕಂಕಣಕಟ್ಟಿದ ಚಂಡಿಕೆಯುಕ್ತ ತೆಂಗಿನಕಾಯಿಯೊಂದಿಗೆ ವೀಳ್ಯಪಟ್ಟಯೂ ಇರುತ್ತದೆ.

ಮದುವೆಯ ಧಾರೆ, ಕಂಕಣದಾರ ಬಂಧ, ನಾಗೋಲಿ ವಿಧಿಗಳಾಗುವ ಸಂದರ್ಭಗಳಲ್ಲಿ ವಧೂವರರೀರ್ವರ ಕೈಯಲ್ಲೂ ವೀಳ್ಯಪಟ್ಟ ಇರಬೇಕು. ಪ್ರತಿಯೊಂದು ಬಾರಿ ಸ್ವಸ್ತಿಕೆ ಇಡುವಾಗಲೂ ವೀಳ್ಯಪಟ್ಟ ಇಡಲೇಬೇಕು. ಸೇಸೆಬಟ್ಟಲು ಇಡುವಾಗ ಅದರಲ್ಲಿ ಅಕ್ಕಿ ಮತ್ತು ತೆಂಗಿನಕಾಯಿಯೊಂದಿಗೆ ವೀಳ್ಯಪಟ್ಟಯೂ ಇದ್ದರೆ ಮಾತ್ರ 'ಸೇಸೆ ಬಟ್ಟಲು' ಎಂಬ ಹೆಸರು ಅರ್ಥಪೂರ್ಣವಾಗುತ್ತದೆ. ಗೃಹಪ್ರವೇಶ ಆಗುವಾಗ ಸಹೋದರಿ ಹೊಸ್ತಿಲು ತಡೆದುದನ್ನು ಬಿಟ್ಟ ಮೇಲೆ ಸಹೋದರ ವರ ಮತ್ತು ಸಹೋದರಿ ವೀಳ್ಯ ಬದಲಾಯಿಸಿಕೊಳ್ಳಬೇಕು. ವರನ ಮನೆಯಲ್ಲಿ ಮದುವೆಯ ರಾತ್ರಿ ಉಂಗುರದಾಟಕ್ಕೆ ಮರಿಗೆಯಲ್ಲಿನ ಓಕುಳಿ ನೀರಿನಲ್ಲಿ ಉಂಗುರ ಹಾಕುವಾಗ ವೀಳ್ಯಪಟ್ಟಯೊಂದಿಗೆ ಹಾಕಬೇಕು. ನಾಗೋಲಿಗೆ ಅತ್ತಿ ಗೆಲ್ಲು ತರಲು ಹುಡುಗರು ಹೋದಾಗ ಅತ್ತಿಮರದ ಬುಡದಲ್ಲಿ ತೆಂಗಿನಕಾಯಿಯೊಂದಿಗೆ ವೀಳ್ಯಪಟ್ಟಯನ್ನು ಇಟ್ಟು ಪೂಜಿಸುತ್ತಾರೆ.

ವಧುವಿನ ಮನೆಯಲ್ಲಿ ಬಲಗೊಡೆಯರ ಸಮ್ಮಾನದೂಟ ಆಗಿ ಹಿಂದಿರುಗುವ ಸಂದರ್ಭ ವರ ವಧುವಿನೊಂದಿಗೆ, ವಧುವಿನ ಕಡೆಯ ಎಲ್ಲಾ ಹಿರಿಯರಿಗೆ ವೀಳ್ಯ ನೀಡಿ, ಕಾಲಿಗೆರಗಬೇಕು. ಪ್ರಥಮ ಏಕಾದಶಿಯಂದು ಅತ್ತೆ ಮಾವನ ಮನೆಗೆ ಸಮ್ಮಾನಕ್ಕೆ ಹೋದಾಗ ವರ ಅತ್ತೆಗೆ ಸಲ್ಲಿಸಲಿರುವ ಕಾಣಿಕೆಯನ್ನು ವೀಳ್ಯಪಟ್ಟಯೊಂದಿಗೆ ನೀಡಬೇಕು. ಅಲ್ಲಿಂದ ಹಿಂದಿರುಗುವಾಗ ಅಲ್ಲಿ ಉಪಸ್ಥಿತರಿರುವ ಎಲ್ಲಾ ಹಿರಿಯರಿಗೂ ವೀಳ್ಯಪಟ್ಟ ನೀಡಿ ಆಶೀರ್ವಾದ ಪಡೆಯಬೇಕು.

ಇವು ಮದುವೆಯ ಆಚರಣೆಗಳಲ್ಲಿ ವೀಳ್ಯ ಉಪಯೋಗವಾಗುವ ಪ್ರಮುಖ ಸಂದರ್ಭಗಳು. ವೀಳ್ಯ/ ವೀಳ್ಯಪಟ್ಟ ಅಂದರೆ ವೀಳ್ಯದೆಲೆ ಮತ್ತು ಅಡಿಕೆ. ಐದು ವೀಳ್ಯದೆಲೆಗಳ ಮೇಲೆ ಒಂದು ಅಡಿಕೆ ಇಟ್ಟಾಗ ವೀಳ್ಯಪಟ್ಟ ಆಗುತ್ತದೆ. ಅಡಿಕೆ ಪುರುಷ ಸಂಕೇತ. ವೀಳ್ಯದೆಲೆ ಪ್ರಕೃತಿ ಸಂಕೇತ ಮತ್ತು ವೀಳ್ಯ ಅಂದರೆ ಪ್ರಕೃತಿ ಪುರುಷ ಸಂಕೇತ. ಸ್ತ್ರೀ ಪುರುಷ ಸಂಬಂಧದಿಂದ ಸಂತಾನ ಪ್ರಾಪ್ತಿ ಮುಖಾಂತರ ವಂಶವೃದ್ಧಿಯಾಗುವ ಉದ್ದೇಶವಿರುವ ಮದುವೆ ಸಂಪ್ರದಾಯಗಳಲ್ಲಿ ಫಲವಂತಿಕೆಯ ಸಂಕೇತವಾಗಿ ಈ ರೀತಿ ವೀಳ್ಯ ಹಲವು ಸಂದರ್ಭಗಳಲ್ಲಿ ಉಪಯೋಗವಾಗುತ್ತದೆ.

38.12. ವಿವಾಹ ಸಂಪ್ರದಾಯದಲ್ಲಿ ತಾಂಬೂಲ (ಕವಳ) :

ಕವಳಕ್ಕೆ ವೈದ್ಯಕೀಯ / ಔಷಧೀಯ ಗುಣಗಳಿವೆ ಎಂಬುದು ವೈಜ್ಞಾನಿಕವಾಗಿಯೂ ಧೃಡಪಟ್ಟಿದೆ. ಕವಳ ಹಾಕಿದರೆ ಪಚನಕ್ರಿಯೆಗೆ ಒಳಿತು ಎಂಬುದು ಹಿಂದಿನಿಂದಲೂ

ಕುಡುಬಿಯರಿಗೆ ತಿಳಿದಿರುವ ವಿಚಾರ. ಕವಳ ಆರೋಗ್ಯವರ್ಧಕ ಮತ್ತು ತ್ರಿದೋಷ ಪರಿಹಾರಕವಾಗಿ ದೇಹಕ್ಕೆ ಕೆಲವು ಪೌಷ್ಠಿಕಾಂಶವನ್ನು ಒದಗಿಸುತ್ತದೆ. ಪ್ರಾಯ ಸಂದವರಿಗೆ ಸುಣ್ಣ ಮತ್ತು ಖನಿಜಾಂಶಗಳ ಕೊರತೆಯಿಂದಾಗಿ ಎಲುಬು ಸವೆಯುವ ಪೀಡೆ ಬರುತ್ತದೆ. ಕವಳ ಹಾಕುವುದರಿಂದ ಸುಣ್ಣದ ಅಂಶ ಮತ್ತು ಕೆಲವು ಖನಿಜಾಂಶಗಳು ಲಭ್ಯವಾಗುತ್ತವೆ. ಹಲ್ಲುಗಳ ಧೃಡತೆಗೆ ಮತ್ತು ಬಾಯಿ ವಾಸನೆ ನಿವಾರಣೆಯಲ್ಲಿ ಕವಳದ ಪಾತ್ರವಿದೆ. ಲೈಂಗಿಕ ನಿರಾಸಕ್ತಿಯಲ್ಲೂ ಪ್ರಚೋದನಕಾರಿಯಾಗಿ ಕವಳ ಪರಿಹಾರಕ ಎಂದು ತಿಳಿದು ಬರುತ್ತದೆ. ಜೀರ್ಣಶಕ್ತಿಗೆ ಮತ್ತು ವಾಯು ದೋಷಕ್ಕೆ ಗರ್ಭಿಣಿ ಮತ್ತು ಬಾಣಂತಿಯರ ಉಪಚಾರದ ಒಂದು ಭಾಗವಾಗಿ ಕವಳ ಉಪಯೋಗವಾಗುತ್ತದೆ ಎಂದು ವೈದ್ಯಕೀಯ ಶಾಸ್ತ್ರದಲ್ಲಿದೆ. ಕುಡುಬಿಯರು ಸಾಮಾನ್ಯವಾಗಿ ಕವಳ ಹಾಕುವ ಅಭ್ಯಾಸದವರು. ಪ್ರತಿಯೊಂದು ಮನೆಯಲ್ಲೂ ಕವಳ ಹಾಕುವವರಿರುತ್ತಾರೆ. ಆಗಮಿಸಿದ ಅತಿಥಿಗಳಿಗೆ ಉಣ್ಣಲು ತಿನ್ನಲು ನೀಡುವುದಕ್ಕಿಂತಲೂ ಕವಳ ನೀಡುವುದು ದೊಡ್ಡ ಗೌರವ. ಕವಳ ನೀಡುವುದು ಬಂಧುತ್ವದ ಸಂಕೇತವೂ ಆಗಿರುತ್ತದೆ.

ಕುಡುಬಿಯರ ಮದುವೆ ಸಂಪ್ರದಾಯದಲ್ಲಿ ವೀಳ್ಯಪಟ್ಟಿ ಹೇಗೆ ಪ್ರಮುಖ ಸ್ಥಾನ ಪಡೆದಿದೆಯೋ, ಅದೇ ಪ್ರಕಾರ ಕವಳಕ್ಕೂ ವಿಶೇಷ ಸ್ಥಾನಮಾನವಿದೆ. ಊಟಕ್ಕಿಂತಲೂ ಕವಳ ಹಾಕಿದರೆ, ಜಗಿದವನಿಗೆ ಎಲ್ಲಾ ರೀತಿಯಿಂದ ಸಂತೃಪ್ತಿಯಾಗಿದೆ ಅಂತ ಲೆಕ್ಕ. ನೆಂಟಸ್ತಿಕೆಗೆ ಬಂದ ಬೀಗರಿಗೆ ಪ್ರತಿಯೊಂದು ಬಾರಿ ಬಾಯಾರಿಕೆ ನೀಡಿದ ನಂತರ ಮತ್ತು ಊಟವಾದ ಮೇಲೆ ಕವಳ ನೀಡಬೇಕು. ಮದುವೆ ಪ್ರಸ್ತಾಪದ ಮಾತುಕತೆಯ ನಂತರ, ತಾಂಬೂಲ ನಿಶ್ಚಿತಾರ್ಥದ ಮಾತುಕತೆ ಮತ್ತು ಭೋಜನದ ನಂತರ, ಮಾತುಕತೆಯ ಗೌರವಾರ್ಥವಾಗಿ ಕವಳ ಸ್ವೀಕರಿಸಬೇಕು. ನಿಶ್ಚಯ ತಾಂಬೂಲದ ವೀಳ್ಯಪಟ್ಟಿಗಳನ್ನು ಪರಸ್ಪರ ಬದಲಾಯಿಸಿಕೊಂಡ ಮೇಲೆ ಎರಡೂ ಕಡೆಯ ಹರಿವಾಣಗಳಿಂದ ಒಂದೊಂದು ಅಡಿಕೆಗಳನ್ನು ಹೋಳು ಮಾಡಿ ಅದೇ ಹರಿವಾಣಗಳಿಂದ ಕವಳ ಹಾಕುವ ಸಂಪ್ರದಾಯವೇ ಇದೆ. ಈ ಕವಳ ಜಗಿದರೆ ತಾಂಬೂಲ ನಿಶ್ಚಯದ ಮೂಲಕ ನಿಘಂಟಾದ ಮದುವೆಗೆ ಎಲ್ಲರ ಒಪ್ಪಿಗೆಯಿದೆ ಅಂತ ಲೆಕ್ಕ. ವಿವಾಹ ವಾಗ್ದಾನದ ಮಾತುಕತೆ ಹಾಗೂ ತಾಂಬೂಲ ನಿಶ್ಚಿತಾರ್ಥದ ಮಾತುಕತೆ ಮುಗಿವಲ್ಲಿವರೆಗೆ ಧಾರಾಳ ಕವಳದ ಸರಬರಾಜು ವ್ಯವಸ್ಥೆ ಇರುತ್ತದೆ. ಈ ಅವಧಿಯಲ್ಲಿ ಮಾತುಕತೆಗೆ ಕುಳಿತಲ್ಲಿಂದ ಮಧ್ಯೆ ಯಾರೂ ಏಳುವಂತಿಲ್ಲ. ಅವರಿಗೆ ತಾಂಬೂಲ ರಸ ಉಗುಳಲು ಅಲ್ಲಿಯೇ ಪೀಕದಾನಿಗಳನ್ನು ಇಡಲಾಗುತ್ತದೆ.

ಮದುವೆ ಆಮಂತ್ರಣ ನೀಡುವಾಗ ತಾಂಬೂಲ ನೀಡಿಯೇ ಹೇಳುವ ಸಂಪ್ರದಾಯವಿತ್ತು. 'ವೀಳ್ಯಗ್' ಅಂದರೆ ಕವಳಕ್ಕೆ ತಾಂಬೂಲ ನೀಡಿ ಮದುವೆಗೆ ಆಮಂತ್ರಿಸುವುದು ಎಂದರ್ಥ. ಹೀಗೆ ಆಮಂತ್ರಣದ ಹೇಳಿಕೆ ನೀಡುವಾಗ ಕವಳ ಹಾಕುವ ಅಭ್ಯಾಸವಿರುವ ಆ ಮನೆಯ ಎಲ್ಲರಿಗೂ ವೀಳ್ಯದೆಲೆ, ಅಡಿಕೆಹೋಳು, ಸುಣ್ಣ, ತಂಬಾಕು ಚೂರಿನೊಂದಿಗೆ ನೀಡಿ ಹೇಳಬೇಕು. ಅರಶಿನ ಬಾಗಿನ ತಲುಪಿಸಲು ವಧುವಿನ ಮನೆಗೆ

ಹೋದ ವರನ ಕಡೆಯವರಿಗೆ. ಅಲ್ಲಿ ವಧುವಿಗೆ ಅರಸಿನ ಲೇಪನ ಆದ ನಂತರ ಊಟ ಅಥವಾ ಫಲಾಹಾರ ನೀಡಿ ಕವಳಕ್ಕೆ ತಾಂಬೂಲ ನೀಡಬೇಕು. ಊಟದ ನಂತರ ಕವಳ ನೀಡದಿದ್ದರೆ ಜೀಗರ ತುಚ್ಛೀಕರಣವನ್ನು ಕೇಳಬೇಕಾಗುತ್ತದೆ. ಮರುದಿಬ್ಬಣದಲ್ಲಿ ವಧುವಿನ ಮನೆಗೆ ಹೋದ ಬಲಗೊಡೆಯರಿಗೆ ತೈಲಾಭ್ಯಂಜನದ ಫಲಾಹಾರವಾದ ನಂತರ ಕವಳ ನೀಡುವ ಶಾಸ್ತ್ರವಿದೆ. ಅವರು ಕವಳ ಹಾಕುವ ಅಭ್ಯಾಸದವರು ಆಗಿರದಿದ್ದರೂ ತೈಲಾಭ್ಯಂಜನದ ಗೌರವಾರ್ಥವಾಗಿ ತೈಲಾಭ್ಯಂಜನಕ್ಕೆ ಒಳಗಾದವರೆಲ್ಲರೂ ಈ ಸಂದರ್ಭ ಕವಳ ಜಗಿಯಬೇಕು. ಬಲಗೊಡೆಯರ ಊಟವಾದ ಮೇಲೂ, ಊಟ ಪೂರೈಸಿದ ಎಲ್ಲರಿಗೆ ಕವಳ ನೀಡಬೇಕು. ಈ ಪ್ರಕಾರ ಮದುವೆಯ ಪ್ರತಿಯೊಂದು ಊಟದ ಬಳಿಕ ಕವಳ ನೀಡುವ ಕ್ರಮವನ್ನು ಕುಡುಬಿಯರು ಒಂದು ಸಂಪ್ರದಾಯವಾಗಿ ಪಾಲಿಸುತ್ತಾ ಬಂದಿದ್ದಾರೆ. ವಧುವನ್ನು ಒಪ್ಪಿಸುವಿಕೆ ಆದ ಮೇಲೆ, ಮರುದಿನದ ಮರುವರಿ ಶಾಸ್ತ್ರದ ಮಾತುಕತೆ ನಡೆವ ಸಂದರ್ಭ ಮಾತುಕತೆಯ ಗೌರವಾರ್ಥವಾಗಿ ಒಂದು ಹರಿವಾಣ ತಾಂಬೂಲ ಇಡುವ ಸಂಪ್ರದಾಯವಿದೆ. ಕವಳ ನೀಡುವುದರಿಂದ ಮನುಷ್ಯ – ಮನುಷ್ಯರ ನಡುವೆ, ಕುಟುಂಬ–ಕುಟುಂಬಗಳ ನಡುವಿನ ಬಾಂಧವ್ಯ ವೃದ್ಧಿಯಾಗುತ್ತದೆ. ಈ ಪ್ರಕಾರ ಕುಡುಬಿಯರು ಕವಳಕ್ಕೆ ಉಣ್ಣುವ ತಿನ್ನುವುದಕ್ಕಿಂತಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಾರೆ.

38.13. ವಿವಾಹ ಸಂಪ್ರದಾಯಗಳಲ್ಲಿ ಐದರ ಸಂಖ್ಯೆಯ ಮಹತ್ವ :

ಕುಡುಬಿಯರ ಮದುವೆ ವಿಧಿಗಳಲ್ಲಿ ಮತ್ತು ಉಪಯೋಗವಾಗುವ ವಸ್ತುಗಳಲ್ಲಿ ಐದರ ಸಂಖ್ಯೆಗೆ ವಿಶೇಷ ಮಹತ್ವವಿದೆ. ಐದು ಸಂಖ್ಯೆ ಪವಿತ್ರ ಎಂಬ ನಂಬಿಕೆಯೂ ಇದೆ. ಯುಗಾದಿಯ ನಂತರ ಐದು ಜನ ಹೊರಟರು ಅಂದರೆ ನೆಂಟಸ್ತಿಕೆಗೆಂದೇ ಅರ್ಥ. ಐದು ಜನ ಹೋದ ನೆಂಟಸ್ತಿಕೆ ಫಲದಾಯಕವಾಗುತ್ತದೆ ಎಂಬ ವಿಶ್ವಾಸ. ಆಗಮಿಸಿದ ನೆಂಟರನ್ನು ಐದು ಜನ ಎದುರ್ಗೊಂಡು ಕೈಮುಗಿದು ಸ್ವಾಗತಿಸುವುದು ಗೌರವಿಸುವ ವಿಶೇಷ ಕ್ರಮ. ನಿಶ್ಚಯ ತಾಂಬೂಲ ಆಗುವಾಗ ವಧು ಮತ್ತು ವರನ ಕಡೆಯವರಿಬ್ಬರೂ ಐದೈದು ವೀಳ್ಯಪಟ್ಟಿಗಳನ್ನು ಪರಸ್ಪರ ಪಂಚಾವರ್ತಿ ಬದಲಾಯಿಸುವ ಮೂಲಕ ಮದುವೆ ನಿಶ್ಚಯವಾಗುತ್ತದೆ. ಇದು ಮದುವೆಗೆ ಪ್ರಮಾಣಬದ್ಧರಾಗುವ ಸಂಪ್ರದಾಯವೂ ಆಗಿರುತ್ತದೆ. ಕಂಕಣಧಾರಣೆಗೆ ಐವರು ಸುಮಂಗಲಿಯರು ಹೋಗಬೇಕು ಮತ್ತು ಐವರು ಕಂಕಣಧಾರಣೆ ಮಾಡಬೇಕು. ಅಡುಗೆಯ ಚಪ್ಪರ ಹಾಕುವ ದಿನ ಅಡುಗೆಗಾಗಿ ಐದು ಒಲೆಗಳನ್ನು ಹಾಕಬೇಕು. ವಧುವಿನಲ್ಲಿಗೆ ಅರಸಿನಬಾಗಿನ ತಲುಪಿಸಲು ವರನ ಕಡೆಯ ಐವರು ಹೋಗಬೇಕು. ಅಲ್ಲಿ ಐದು ವೀಳ್ಯಪಟ್ಟಿಗಳನ್ನು ವಧುವಿನ ಕಡೆಯವರೊಂದಿಗೆ ಬದಲಾಯಿಸಿಕೊಳ್ಳಬೇಕು. ಪನ್ನೆಶಾಸ್ತ್ರ ಆಗುವಾಗ ವರ, ಬಲಗೊಡೆಯ ಸೇರಿ ಒಟ್ಟು ಐವರು ಕ್ಷೌರ ಮಾಡಿಸಿಕೊಳ್ಳಬೇಕು. ಅರಸಿನ ಲೇಪನವನ್ನು ಐವರು ಮುತ್ತೈದೆಯರು ಪೂರೈಸಬೇಕು. ಐವರು ಮುತ್ತೈದೆಯರು ಸೇರಿ ಕಲಶಸ್ನಾನ ಮಾಡಿಸಬೇಕು.

ಕಲಶಸ್ನಾನ ಮಾಡಿಸಲು ಐದು ಮೃತ್ತಿಕ ಕಲಶಗಳನ್ನು ಉಪಯೋಗಿಸಬೇಕು. ಓಟ್ಟುಕಟ್ಟುವ ಶಾಸ್ತ್ರ ಮತ್ತು ಕುಂಭ ಮುಹೂರ್ತವನ್ನು ಐವರು ನಡೆಸಿಕೊಡಬೇಕು. ಹಾಲುಗಂಭವನ್ನು ಐವರು ಮುತ್ತೈದೆಯರು ನೆಟ್ಟು ಮೊಳಕೆ ಬರಿಸಿದ ಪಂಚಧಾನ್ಯವನ್ನು ಐದು ಬಾರಿ ಅದರ ಬುಡಕ್ಕೆ ಸುರಿದು ಐದು ಬಾರಿ ನೀರೆರೆಯಬೇಕು.

ವರ ಶೃಂಗಾರಗೊಳ್ಳುವಾಗ ಐವರು ಪುರುಷರು ಹಿಡಿದು ವರನಿಗೆ ರುಮಾಲು ಏರಿಸಬೇಕು. ವಧೂವರರು ಚಪ್ಪರದಿಂದ ಹೊರಡುವಾಗ ಐವರು ಹಿಡಿದು ಚಪ್ಪರಕ್ಕೆ ತೋರಣ ಇಡಬೇಕು. ವರನನ್ನು ಶಕುನದೀಪ ಮುಖಾಂತರ ಚಪ್ಪರಕ್ಕೆ ಬರಮಾಡಿಕೊಳ್ಳುವಾಗ ಎರಡೂ ಕಡೆಯ ಐವ್ವರು ಸುವಾಸಿನಿಯರು ಆರತಿ ಅಕ್ಷತೆಯೊಂದಿಗೆ ಸ್ವಾಗತಿಸಬೇಕು. ವಧುವಿಗೆ ನೀಡಬೇಕಾದ ತಳಿಗೆಯನ್ನು ವರನ ಕಡೆಯ ಐವರು ಮಹಿಳೆಯರು ನೀಡಿ. ಅದನ್ನು ವಧುವಿನ ಕಡೆಯ ಐವರು ಮಹಿಳೆಯರು ಪಡಕೊಳ್ಳಬೇಕು. ದ್ವಿಪಕ್ಷೀಯ ಪಂಚ ಮಹಿಳೆಯರು ಸೇರಿ ವಧುವನ್ನು ಶೃಂಗರಿಸಬೇಕು.

ವಧೂವರರಿಗೆ ಧಾರೆ ಶಾಸ್ತ್ರ ಆಗುವಾಗ ಮೊದಲಿಗೆ ವಧುವಿನ ಕಡೆಯವರು. ನಂತರ ವರನ ಕಡೆಯವರು ಐದ್ವೈದು ಬಾರಿ ಕಲಶದ ನೀರನ್ನು ಧಾರೆ ಎರೆಯಬೇಕು. ವಧೂವರರನ್ನು ಮುಹೂರ್ತಕ್ಕೆ ಮೊದಲು ಮತ್ತು ಮಂಟಪದಲ್ಲಿ ಕೂರಿಸುವ ಮೊದಲು ಮಂಟಪಕ್ಕೆ ಐದು ಪ್ರದಕ್ಷಿಣೆ ಹಾಕಿಸಬೇಕು. ಧಾರೆಯ ಸಮಯ ವರನ ಕಡೆಯವರು ಐದು ವರಹಗಳನ್ನು ವಧುವಿನ ಕಡೆಯವರಿಗೆ ಕನ್ಯಾಶುಲ್ಕವಾಗಿ ಕೊಡುವುದು ಹಿಂದಿನ ಕಾಲದ ಸಂಪ್ರದಾಯವಾಗಿತ್ತು. ಯಜಮಾನ ಮುಷ್ಟಿ ಬಟ್ಟಲು ಇಡುವಾಗ ಅದರಲ್ಲಿ ಐದು ಚಕ್ರ (ಒಂದೂ ಕಾಲು ರೂಪಾಯಿ) ನಾಣ್ಯವನ್ನು ಮೂಲಧನವನ್ನಾಗಿ ಇಡಬೇಕು. ಪ್ರಥಮ ಸೇಸೆಯನ್ನು ಐವರು ಮುತ್ತೈದೆಯರು ಹಾಕಬೇಕು. ವಧೂವರರನ್ನು ಎಬ್ಬಿಸುವ ಮೊದಲು ಅವರಿಗೆ ಐವರು ಮುತ್ತೈದೆಯರು ಆರತಿ ಎತ್ತಬೇಕು.

ವರನ ಮನೆಯಲ್ಲಿ ಮದುವೆಯ ರಾತ್ರಿ ಉಂಗುರದಾಟ ಮತ್ತು ವಧುವನ್ನು ಅಡಗಿಸಿಟ್ಟು ವರ ಹುಡುಕಿ ತರುವ ಕ್ರಮಗಳನ್ನು ಐದ್ವೈದು ಬಾರಿ ಮಾಡಬೇಕು. ಬಲಗೊಡೆಯರು ಹೊರಡುವ ಮೊದಲು ಊಟಕ್ಕೆ ಮೀನು ಅಟ್ಟು ವಧು. ಬಲಗೊಡೆಯ ಮತ್ತು ವರನಿಗೆ ಒಟ್ಟು ಐವರ ಎಲೆಗೆ ಬಡಿಸಬೇಕು. ಬಲಗೊಡೆಯರು ವಧುವಿನ ಮನೆಗೆ ಹೋಗುವಾಗ ಕಡಿಮೆ ಪಕ್ಷ ಐವರಾದರೂ ಇರಬೇಕು. ಅಲ್ಲಿ ವಧು ಮತ್ತು ವರನ ಕಡೆಯ ಐವ್ವರಿಗೆ ತೈಲಾಭ್ಯಂಜನ ಆಗಬೇಕು. ಐದು ದಿನದ ಮದುವೆ ಆಗಿ ವಧು ಪಂಚಾವರ್ತನದಲ್ಲಿ ವರನ ಮನೆಯಿಂದ ತವರಿಗೆ, ತವರಿನಿಂದ ಗಂಡನ ಮನೆಗೆ ಹೋಗಿ ಬರಬೇಕು. ಮದುವೆಯ ಔತಣದಲ್ಲಿ ಪಂಚ ವ್ಯಂಜನಗಳಿರಬೇಕು.

ಈ ಪ್ರಕಾರ ಕುಡುಬಿಯರ ಮದುವ ಆಚರಣೆಯಲ್ಲಿ ಪ್ರತಿಯೊಂದು ವಿಧಿಯಲ್ಲಿಯೂ ಐದರ ಸಂಖ್ಯೆ ಶುಭ ಸಂಕೇತವಾಗಿ ಉಪಯೋಗವಾಗುತ್ತದೆ.

38.14. ನೈಸರ್ಗಿಕ ವಸ್ತುಗಳ ಉಪಯೋಗ :

ನಮ್ಮ ಪರಿಸರದಲ್ಲಿ ಸುಧಾರಿತ ಮತ್ತು ಸುಸಂಸ್ಕೃತ ಸಮಾಜ ಎಂಬುದಾಗಿ ಪರಿಗಣಿಸಲ್ಪಟ್ಟ ಸಮುದಾಯಗಳ ವಿವಾಹ ಸಂಪ್ರದಾಯಗಳಲ್ಲಿ ಉಪಯೋಗವಾಗುವ ವಸ್ತು, ಪರಿಕರ... ಇತ್ಯಾದಿಗಳಲ್ಲಿ ವೈದಿಕ ಪ್ರಭಾವ ಅಧಿಕವಾಗಿ ಕಂಡುಬರುತ್ತದೆ. ಈ ಸುಧಾರಿತ ಸಮಾಜಗಳಿಂದ ಅಸಂಸ್ಕೃತರು ಎಂಬ ತಿರಸ್ಕಾರ ಮನೋಭಾವನೆಗೆ ಒಳಗಾದ ಕುಡುಬಿ ಜನಾಂಗದ ಬುಡಕಟ್ಟು ರೀತಿಯ ಸಂಪ್ರದಾಯಗಳಲ್ಲಿ ಪ್ರಕೃತಿಯಲ್ಲಿನ ಸ್ವಾಭಾವಿಕ ವಸ್ತುಗಳನ್ನು ಉಪಯೋಗಿಸುತ್ತಿರುವುದು ಹಿಂದಿನಿಂದಲೂ ಪಾಲಿಸಿಕೊಂಡು ಬಂದಿರುವುದು ಗೋಚರಿಸುತ್ತದೆ. ಬುಡಕಟ್ಟು ಸಮುದಾಯದವರಿಗೆ ನಿಸರ್ಗವೇ ಶಕ್ತಿದೇವತೆ. ಪ್ರಕೃತಿಯೇ ಜೀವನ ಪ್ರಚೋದನಾ ಶಕ್ತಿ.

ಅರಶಿನ ಶಾಸ್ತ್ರಕ್ಕೆ ಅರಶಿನ ಕೊಂಬು, ತೆಂಗಿನೆಣ್ಣೆ, ಅಡಿಕೆ, ವೀಳ್ಯದೆಲೆ, ಅಂಡಿಲು ಗಿಡದ ಕೋಲಿಗೆ ಮಾವಿನೆಲೆ ಕಟ್ಟಿ ತಯಾರಿಸುವ 'ಹಾರ್' ಉಪಯೋಗವಾಗುತ್ತದೆ. ಮದ್ವೆಯಾಗುವಾಗ ಕಿಲೇಸಿಯನ್ನು ಕರೆದು. ಕ್ಷೌರಕ್ಕೆ ತೆಂಗಿನ ಹಾಲು ಅಥವಾ ಆಕಳ ಹಾಲು ಉಪಯೋಗಿಸುತ್ತಾರೆ. ಕಲಶ ಸ್ನಾನಕ್ಕೆ ಮಣ್ಣಿನ ಘಡಿಗೆಗಳು ಬಳಕೆಯಾಗುತ್ತವೆ. ಸ್ನಾನಕ್ಕೆ ತೆರೆದ ಬಾವಿಯ ತಣ್ಣಗಿನ ನೀರು ವಿನಃ ಬಿಸಿನೀರು ಉಪಯೋಗವಾಗುವುದಿಲ್ಲ. ಹಾಲುಗಂಧ ಶಾಸ್ತ್ರಕ್ಕೆ ಬೂರುಗದ ಗೆಲ್ಲುಬೇಕು. ಅದನ್ನು ನೆಡುವಾಗ ಮೊಳಕೆ ಬರಿಸಿದ ಪಂಚಧಾನ್ಯವನ್ನು ಬುಡದಲ್ಲಿನ ಆಕಳ ಸೆಗಣಿಯ ಕಟ್ಟೆಗೆ ಸುರಿಯಲಾಗುತ್ತದೆ. ಪಿಟ್ಟು ಕುಟ್ಟುವಿಕೆಗೆ ಭತ್ತ ಕುಟ್ಟುವ ಒನಕೆ ಬಳಸಲಾಗುತ್ತದೆ. ಕುಂಭಮುಹೂರ್ತಕ್ಕೆ ಮಣ್ಣಿನ ಘಡಿಗೆಯೇ ಆಗಬೇಕು ವಿನಃ ತಾಮ್ರ, ಹಿತ್ತಾಳೆ, ಸ್ಟೀಲ್ ಅಥವಾ ಇತರ ಯಾವುದೇ ಲೋಹದ ಪಾತ್ರೆ ಬಳಸತಕ್ಕದ್ದಲ್ಲ. ಹಿಂದಿನ ಕಾಲದಲ್ಲಿ ಪಿಂಗಾಣಿ (China clay) ಬಳೆಗಳನ್ನು ತೊಡುತ್ತಿದ್ದರು. ಈಗ ಅವು ಲಭ್ಯವಿಲ್ಲದಿರುವುದರಿಂದ ಗಾಜಿನ ಬಳೆಗಳು ಚಾಲ್ತಿಯಲ್ಲಿವೆ. ವಧುವಿನ ಕೈಯಲ್ಲಿ ವೀಳ್ಯಪಟ್ಟಿ, ವರನ ಕೈಯಲ್ಲಿ ವೀಳ್ಯಪಟ್ಟಿಯೊಂದಿಗೆ ತೆಂಗಿನಕಾಯಿ ನೀಡುವುದು.... ಇವೆಲ್ಲಾ ಫಲವಂತಿಕೆಯ ಸಂಕೇತ. ಮಣ್ಣಿನ ಘಡಿಗೆ, ತೆಂಗಿನಕಾಯಿ, ಒನಕೆ ಮುಂತಾದವುಗಳಿಗೆ ಕಂಕಣ ಅಥವಾ ಸುರಗಿ ಸುತ್ತು ಕಟ್ಟುವಾಗ ಮಾವಿನ ಎಲೆಯೊಂದಿಗೆ ಅರಶಿನ ಕೊಂಬು ಸೇರಿಸಿ ಕಟ್ಟಿದರೆ ಪವಿತ್ರ ಎಂಬ ನಂಬಿಕೆಯಿದೆ. ಧಾರೆಯ ಮಂಟಪವನ್ನು ಬಾಳೆಗಿಡಗಳಿಂದ ತಯಾರು ಮಾಡುತ್ತಾರೆ. ಮಂಟಪದ ಮೇಲ್ಗಡೆ ಮಣ್ಣಿನ ಹಣತೆಗಳನ್ನು ಉರಿಸಿ ಇಡುತ್ತಾರೆ. ಧಾರೆಯಾಗುವ ಮೊದಲು ಪುಣ್ಯಾರ್ಚನೆಯ ಪೂಜೆಗೆ, ನಾಗೋಲಿಯ ಕಲಶಕ್ಕೆ ಮಾವಿನ ಮತ್ತು ಹಲಸಿನ ಗೆಲ್ಲುಗಳು ಬೇಕು. ಶಕುನ ದೀಪಕ್ಕೆ ಕುಡಿಬಾಳೆ ಎಲೆಯಲ್ಲಿ ಹಣತೆಗೆ ಮತ್ತು ನಾಗೋಲಿಯ ನಾಗನ ಪ್ರತೀಕ ತಯಾರಿಸಲು ಬೆಳ್ತಿಗೆ ಅಕ್ಕಿಯ ಹಿಟ್ಟು ಉಪಯೋಗವಾಗುತ್ತದೆ. ಸೇಸೆಗೆ ಮತ್ತು ಹೊಸ್ತಿಲು ದಾಟುವ ಶಾಸ್ತ್ರಕ್ಕೆ ಕುಚ್ಚಿಗೆ ಅಕ್ಕಿ ವಿನಃ ಬೆಳ್ತಿಗೆ ಅಕ್ಕಿ ಉಪಯೋಗವಾಗುವುದಿಲ್ಲ. ಬೆಳ್ತಿಗೆ ಅಕ್ಕಿ ವೈದಿಕ ವಿಧಿಗಳಲ್ಲಿ ಹೆಚ್ಚಾಗಿ ಉಪಯೋಗವಾಗುತ್ತದೆ. ಹಿಂದಿನ ಕಾಲ

ಪ್ರಕಾರ ಅರಸಿನ, ಸೇಸೆ, ಮುಯ್ಯಿ ಶಾಸ್ತ್ರ ಮತ್ತು ಬಳು ಎತ್ತುವುದಕ್ಕೆ ಕಂಚಿನ ಬಟ್ಟಲೇ ಬಳಸಲ್ಪಡುತ್ತಿತ್ತು. ಬಾಸಿಂಗ, ವರಮಾಲೆ ಮತ್ತು ವಧುವಿಗೆ ಮುಡಿಸುವ ಹೂವುಗಳಲ್ಲಿ ಮುತ್ತೈದೆತನದ ಕುರುಹಾಗಿ ಕನಕಾಂಬರ ಬಳಸುತ್ತಾರೆ. ವಧುವಿಗೆ ಕೇಶಾಲಂಕಾರ ಮಾಡುವಾಗ ಮರದ ಹಣಿಗೆಯನ್ನು ಉಪಯೋಗಿಸಲೇಬೇಕೆಂಬ ನಿಯಮವಿದೆ. ಮದುವೆಯ ರಾತ್ರಿವರೆಗೆ ಊಟ ತರಕಾರಿಯದೇ ಇರುತ್ತದೆ. ಬಲಗೊಡೆಯರು ವಧುವಿನ ಮನೆಗೆ ಹೊರಡುವ ದಿನ, ಅಂದರೆ ಮದುವೆಯ ಮರುದಿನ ಹಳ್ಳ, ಹೊಳೆ, ತೊರೆ, ಕೆರೆಗಳಿಂದ ಸಿಹಿಮೀನು ಹಿಡಿದು ಅಟ್ಟು ಬಡಿಸುತ್ತಾರೆ. ಊಟಕ್ಕೆ ಕುಡಿಬಾಳೆ ಎಲೆಗಳು ಉಪಯೋಗವಾಗುತ್ತವೆ. ಊಟದ ಬಗೆಗಳಲ್ಲಿ ಸಿಹಿತಿಂಡಿ ಮಾಡುವುದು ಇತ್ತೀಚಿನ ವ್ಯವಸ್ಥೆ. ಮೊದಲೆಲ್ಲಾ ಸಿಹಿತಿಂಡಿ ಬದಲಿಗೆ ಜೇನು ಮಾತ್ರ ಬಳಸುತ್ತಿದ್ದರು. ಹೊರೆ ತಂದವರಿಗೆ, ಮಡಿವಾಳನಿಗೆ, ವಾಲಗದವರಿಗೆ, ಕಿಲೇಸಿಗೆ, ಪುರೋಹಿತರಿಗೆ ಅನ್ನವಡಿ ವಸ್ತುರೂಪದಲ್ಲಿ ತೆಂಗಿನಕಾಯಿ, ಕುಚ್ಚಲಕ್ಕಿ, ವೀಳ್ಯಪಟ್ಟಿ, ಸೌತೆಕಾಯಿ.... ಇತ್ಯಾದಿ ಸಂದಾಯವಾಗುತ್ತದೆ. ಕುಡುಬಿಯರ ಮದುವೆ ಸಂಪ್ರದಾಯದಲ್ಲಿ ಪುರೋಹಿತರ ಮಂತ್ರೋಚ್ಚಾರಣೆಗಿಂತಲೂ ಸಂಪ್ರದಾಯದ ಹಾಡುಗಳನ್ನು ಹಾಡುವ ತಂತ್ರಗಾರಿಕೆಯ ಶಾಸ್ತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಈ ಪ್ರಕಾರ ಕುಡುಬಿಯರ ಮದುವೆ ಸಂಪ್ರದಾಯದಲ್ಲಿ ಪ್ರಾಕೃತಿಕ ವಸ್ತು ಮತ್ತು ಸಂಗತಿಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ನಿಸರ್ಗದತ್ತ ವಸ್ತುಗಳನ್ನು ಬಳಸುವುದರಲ್ಲಿ ಆರೋಗ್ಯ ರಕ್ಷಣೆ ಹಾಗೂ ಫಲವಂತಿಕೆಯ ಪೂರಕ ಉದ್ದೇಶಗಳಿವೆ.

38.15. ಆಭರಣ ಧಾರಣೆಯ ಮಹತ್ವ :

ನಾವು ಧರಿಸುವ ಚಿನ್ನದೊಡವೆಗಳಿಗೆ ಮತ್ತು ಆಭರಣಗಳಿಗೆ ಆರೋಗ್ಯ ರಕ್ಷಣೆಯ ಸಂಬಂಧವಿದೆ. ಮಗು ಜನಿಸಿ ವರ್ಷದೊಳಗೆ ಕಿವಿ ಚುಚ್ಚಿ ಚಿನ್ನದ ಆಭರಣ ಹಾಕಿದರೆ ಆರೋಗ್ಯಕ್ಕೆ ಒಳ್ಳೆಯದು, ಮಕ್ಕಳಿಗೆ ಬರುವ ಬಾಲದೋಷಗಳು ದೂರವಾಗುತ್ತವೆ ಎಂಬ ನಂಬಿಕೆಯಿದೆ. ಕಿವಿ ಚುಚ್ಚುವಿಕೆಗೆ ಅಕ್ಯುಪಂಕ್ಚರ್ ಚಿಕಿತ್ಸೆಯ ಗುಣವಿದೆ ಎಂಬುದು ವೈಜ್ಞಾನಿಕವಾಗಿಯೂ ಧೃಡಪಟ್ಟಿದೆ. ಈ ಚಿಕಿತ್ಸೆ ಖಿನ್ನತೆ, ಕಳವಳಗಳಿಂದ ಮುಕ್ತಿ ಪಡೆಯುವ ಸರಳವಿಧಾನ.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಚಿನ್ನದ ಉಲ್ಲೇಖ, ವರ್ಣನೆ ಇದೆ. ಸಿಂಧೂ ನದಿ ನಾಗರಿಕತೆಗೆ ನಮ್ಮ ಕೋಲಾರದ ಹಟ್ಟಿ ಚಿನ್ನದ ಗಣಿಯಿಂದ ಚಿನ್ನ ಪೂರೈಕೆಯಾಗುತ್ತಿತ್ತು ಅಂತ ತಿಳಿದುಬರುತ್ತದೆ. ಸ್ವರ್ಣಾಭರಣ ಧಾರಣೆಯ ಸೌಂದರ್ಯಪ್ರಜ್ಞೆ ಸಿಂಧೂ ನಾಗರಿಕತೆಯಲ್ಲಿತ್ತು. ಕ್ರಿ.ಪೂ. 2000ದಷ್ಟು ಹಳೆಯ ಚಿನ್ನದ ಆಭರಣ ಬಳ್ಳಾರಿಯಲ್ಲಿ ಸಿಕ್ಕಿದೆ. ಮೊಹೆಂಜೊದಾರೊ, ಹರಪ್ಪಾ ಉತ್ಖನನಗಳಲ್ಲಿ ಚಿನ್ನದ ವಿವಿಧ ಸ್ವರೂಪಗಳು ಕಾಣಸಿಕ್ಕಿವೆ. ಸಿಂಧೂ ನದಿಗೆ ಹಿರಣ್ಯಾನಿ, ಹಿರಣ್ಯವರ್ಣಿ ಎಂಬ ಹೆಸರಿದೆ. ಚಿನ್ನ ಸೌಂದರ್ಯವರ್ಧಕ ಮಾತ್ರವಲ್ಲ, ಆರೋಗ್ಯವರ್ಧಕವೂ ಹೌದು. ಸ್ವರ್ಣ ಭಸ್ಮ ಸೇವನೆಯಿಂದ

ದೀರ್ಘಾಯುಷ್ಯ ಲಭಿಸುತ್ತದೆ ಎಂಬುದಾಗಿ ಅಥರ್ವ ವೇದದಲ್ಲಿ ವಿವರಿಸಲ್ಪಟ್ಟಿದೆ. 'ರಸರತ್ನ ಸಮುಚ್ಚಯ' ಎಂಬ ಗ್ರಂಥದಲ್ಲಿ ಲೋಹಭಸ್ಮ ತಯಾರಿ ಮತ್ತು ಚಿನ್ನದಿಂದ ಅನೇಕ ರೋಗ ಗುಣ ಮಾಡುವ ವಿಧಾನ ವಿವರಿಸಲಾಗಿದೆ. ರಸತರಂಗಿಣಿ. ಶುಕ್ರನೀತಿ. ರಸಾಯನ ಸಾರ. ಅಶ್ವಲಾಯನ ಗೃಹ್ಯ ಸೂತ್ರದಲ್ಲಿ ಚಿನ್ನದ ವಿವಿಧ ಉಪಯೋಗಗಳ ವರ್ಣನೆ ಸಿಗುತ್ತದೆ.

ಸಾಮಾನ್ಯವಾಗಿ ಸ್ತ್ರೀಯರು ಚಂಚಲ ಸ್ವಭಾವದವರಾಗಿರುತ್ತಾರೆ. ವಿವಾಹಿತ ಸ್ತ್ರೀಯು ಧರಿಸುವ ಪ್ರತೀ ಒಡವೆಯು ಹಿನ್ನೆಲೆಯಲ್ಲೂ ದೇಹಕ್ಕೆ ಹಿತಕಾರಿಯಾಗುವ ಗುಣವಿದೆ. ಆಭರಣ ಧಾರಣೆಯಿಂದ ಎಲ್ಲಾ ಹವಾಗುಣಕ್ಕೂ ಹೊಂದಿಕೊಳ್ಳುವ ಕ್ಷಮತೆ ಉಂಟಾಗುತ್ತದೆ. ಮದುಮಗಳನ್ನು ಅಡಿಯಿಂದ ಮುಡಿವರೆಗೆ ಆಭರಣಗಳಿಂದ ಶೃಂಗರಿಸಲಾಗುತ್ತದೆ.

ಕುಡುಬಿ ವಿವಾಹಿತ ಮಹಿಳೆಯರಿಗೆ ಕಾಲ್ಬೆರಳುಗಳಿಗೆ ಬೆಳ್ಳಿಯ ಉಂಗುರ, ಮೂಗಿನ ಎಡ ಹೊಳ್ಳೆಗೆ ಮೂಗುತಿ, ಕೈಗಳಿಗೆ ಪಿಂಗಾಣಿಯ/ ಗಾಜಿನ ಬಳೆ ಧರಿಸುವುದು ಮುತ್ತೈದೆತನದ ಲಕ್ಷಣ. ಅಪರೂಪಕ್ಕೆ ಕೆಲವರು ಹೊರತು ಭಾರತೀಯ ಮಹಿಳೆಯರೆಲ್ಲರೂ ಮೂಗುತಿ ಧರಿಸುವ ಕ್ರಮವಿದೆ. ಆದರೆ ಕುಡುಬಿಯರಲ್ಲಿ ಕೆಲವರು ಮೂಗಿನ ಎರಡೂ ಹೊಳ್ಳೆಗಳಿಗೆ ಮೂಗುತಿ ಧರಿಸುತ್ತಾರೆ. ಮೂಗು ಚುಚ್ಚುವಿಕೆ ಮತ್ತು ಮೂಗುತಿ ಧರಿಸುವಿಕೆಯಿಂದ ಲೈಂಗಿಕ ಪ್ರಚೋದನೆಯಾಗುತ್ತದೆ ಮತ್ತು ಸುಖ ಪ್ರಸವದ ಪೂರಕಾಂಶಗಳಿವೆ ಎಂಬ ನಂಬಿಕೆಯಿದೆ. ಸ್ತ್ರೀ ಪ್ರಜನನಾಂಗ ಮತ್ತು ಮೂಗುತಿ ಧರಿಸುವ ಮೂಗಿನ ಎಡಹೊಳ್ಳೆಗೆ ಸಂಬಂಧ ಇದೆ ಎಂಬುದು ಆಯುರ್ವೇದ ರೀತ್ಯಾ ಧೃಡಪಟ್ಟಿದೆ. ಮೂಗುತಿಗೆ ಅಷ್ಟಾಕಾರ ಮುತ್ತು ಕೂರಿಸಿ ಧರಿಸುವುದು ಬುಡಕಟ್ಟು ಜನಾಂಗದ ಲಕ್ಷಣವೂ ಆಗಿರುತ್ತದೆ. ಮೂಗುತಿಯ ಮುತ್ತಿಗೆ ಬೆಳಕಿನ ಕಿರಣಗಳು ಬಿದ್ದು ಪ್ರತಿಫಲಿಸಿದಾಗ ತಲೆಯಭಾಗದ ನರಗಳ ಮೇಲೆ ಪ್ರಭಾವ ಬೀಳುತ್ತದೆ. ಅದರಿಂದಾಗಿ ಮಾನಸಿಕ ಒತ್ತಡ ದೂರವಾಗುತ್ತದೆ ಅಂತ ತಿಳಿದುಬರುತ್ತದೆ.

ಸೊಂಟಕ್ಕಿಂತ ಕೆಳಗೆ ಧರಿಸುವ ಆಭರಣಗಳು ಬೆಳ್ಳಿಯವೇ ಆಗಿರಬೇಕು ಎಂಬ ನಿಯಮವಿದೆ. ಚಿನ್ನದ ಸಾಂದ್ರತೆ ಹೆಚ್ಚಾಗಿರುವುದರಿಂದ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಆದುದರಿಂದ ಕಡಿಮೆ ಸಾಂದ್ರತೆಯ ಬೆಳ್ಳಿಯ ಆಭರಣ ಧರಿಸುವುದರಿಂದ ಬೆನ್ನು ನೋವು ನಿವಾರಣೆಯಾಗುತ್ತದೆ. ಪಚನಕ್ರಿಯೆ ಹದ್ದು ಬಸ್ತಿನಲ್ಲಿರುತ್ತದೆ. ವಿವಾಹ ಸಂದರ್ಭ ವಧುವಿನ ಕೈಗೆ ಪಿಂಗಾಣಿ/ಗಾಜಿನ ಬಳೆ, ಕೈಬೆರಳಿಗೆ ಚಿನ್ನದ ಉಂಗುರ, ಬೆಳ್ಳಿಯ ಕಾಲುಂಗುರ ಧರಿಸುವ ಸಂಪ್ರದಾಯದ ಹಿಂದೆ ವೈಜ್ಞಾನಿಕ ದೃಷ್ಟಿಕೋನವೂ ಇದೆ. ದೇಹದ ಉಷ್ಣತೆಯ ಸಮತೋಲನವಾಗಿ ಎಲ್ಲಾ ಹವಾಮಾನಗಳಿಗೆ ಹೊಂದಿಕೊಳ್ಳಲು ಸಾಧ್ಯವಾಗಿ ಆರೋಗ್ಯ ಸುಧಾರಣೆಯಾಗುತ್ತದೆ. ಕಾಲಿನ ಹೆಬ್ಬೆರಳ ಪಕ್ಕದ ಬೆರಳಿಗೆ ಕಾಲುಂಗುರ ಧರಿಸುವುದರಿಂದ ಕಾಲುಗಳ ಸೂಕ್ಷ್ಮ ಭಾಗಗಳಿಗೆ ಒತ್ತಡ ಬಿದ್ದು, ತತ್ಸಂಬಂಧ ನರದೋಷ ಪರಿಹಾರವಾಗುತ್ತದೆ ಎಂಬುದು ವೈಜ್ಞಾನಿಕ ಪ್ರತಿಪಾದನೆ.

ಕುಡುಬಿಯರಲ್ಲಿ ಸುಮಂಗಲೆಯರು ಕಾಲುಂಗುರ ರಹಿತವಾಗಿ ಹೊಸ್ತಿಲು ದಾಟುವುದು ಅಶುಭ ಎಂಬ ನಂಬಿಕೆಯಿದೆ.

ಕುಡುಬಿಯರಲ್ಲಿ ಹಿಂದಿನ ಕಾಲದಲ್ಲಿ ತಾಳಿಯ ಪರಿಕಲ್ಪನೆ ಇರಲಿಲ್ಲ. ಮಾಂಗಲ್ಯ ಅಂದರೆ ಮಧ್ಯದಲ್ಲಿ 'ಧಾರೆ ಮಣಿ' ಜೋಡಿಸಿ, ಅದರ ಎರಡೂ ಮಗ್ಗುಲುಗಳಲ್ಲಿ ಕರಿಮಣಿ ಪೋಣಿಸಿದ ಒಂದು ಹಾರ ಅಷ್ಟೇ. ತಾಳಿ ಧರಿಸುವುದು ಇಲ್ಲಿಯ ಪ್ರಾದೇಶಿಕ, ಬಹುಸಂಖ್ಯಾ ಸಮಾಜದ ಅನುಕರಣೆಯ ಪ್ರಭಾವದಿಂದ ಪ್ರಾರಂಭವಾದ ಸಂಪ್ರದಾಯ. ಕರಿಮಣಿ, ಧಾರೆಮಣಿ ಮುಂತಾದವು ಮಹಿಳೆಯರ ದೈಹಿಕ ಪ್ರಕೃತಿ ಹಾಗೂ ಮನೋಪಟಲದ ಮೇಲೆ ಪ್ರಭಾವ ಬೀರುತ್ತವೆ ಎಂಬ ನಂಬಿಕೆಯಿದೆ.

ಚಿನ್ನಕ್ಕೆ ಸಾರ್ವಕಾಲಿಕ ಆರ್ಥಿಕ ಮೌಲ್ಯವಿದೆ. ವರ್ಷದಿಂದ ವರ್ಷ ಧಾರಣೆ ಜಾಸ್ತಿಯಾಗುತ್ತದೆ ವಿನಃ ಕಡಿಮೆಯಾಗುವುದಿಲ್ಲ. ಚಿನ್ನದೊಡವೆ ಮಾಡಿಸುವುದರಿಂದ ಆರ್ಥಿಕ ಅಡಚಣೆಗಳ ಸಂದರ್ಭ, ಸಾಂಸಾರಿಕ ತಾಪತ್ರಯಗಳಲ್ಲಿ ಅಡವಿಟ್ಟು ಅಥವಾ ವಿಕ್ರಯಿಸಿ ತಾತ್ಕಾಲಿಕ ಪರಿಹಾರ ಕಂಡುಕೊಳ್ಳಲು ಅನುಕೂಲವಾಗುತ್ತದೆ.

38.16. ವಿಧವೆಯರ ಸ್ಥಾನ :

ಕುಡುಬಿಯರಲ್ಲಿ ಪತಿಯ ಅವಸಾನಾ ನಂತರ ವಿಧವೆಯರಿಗೆ ಧಾರ್ಮಿಕ ಮತ್ತು ಸಾಮಾಜಿಕ ಸ್ತರಗಳಲ್ಲಿ ಸ್ಥಾನಮಾನ ಕಡಿಮೆ. ಪತಿ ತೀರಿಕೊಂಡಾಗ ಆಕೆ ಒಂದು ಘಳಿಗೆಯ ಪತ್ನಿ ಆಗಿದ್ದರೂ ಆಕೆಯ ಮುತ್ತೈದೆತನವನ್ನು ಪ್ರಕಟಪಡಿಸುವ ಸರ್ವಕುರುಹುಗಳನ್ನು ವರ್ಜಿಸಬೇಕು. ಮಾಂಗಲ್ಯ, ಬಳೆ, ಮೂಗುತಿ ಮುಂತಾದವುಗಳನ್ನು ಪತಿಯ ಮರಣಾನಂತರ ಆಕೆ ಧರಿಸಲು ಅವಕಾಶವಿಲ್ಲ. ಹೂವು ಮುಡಿಯುವಂತಿಲ್ಲ. ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಅವಳು ಸಪಾತ್ರ ಭಾಗವಹಿಸುವಂತಿಲ್ಲ. ಆದರೆ, ವೈದಿಕ ರೀತಿ ತಲೆಬೋಳಿಸುವ, ಕೆಂಪು ಸೀರೆ ಉಡುವ ಕ್ರಮ ಮಾತ್ರ ಕುಡುಬಿಯರಲ್ಲಿಲ್ಲ.

ವಿಧವೆ ಸ್ತ್ರೀ ಪತಿಯನ್ನು ಮುಕ್ಕಿ ತಿಂದವಳು ಎಂಬ ಅಪವಾದಕ್ಕೊಳಗಾಗಿ ಪತಿಯ ಮನೆಯವರ ತಾತ್ಸಾರ ಮತ್ತು ತವರಿನ ತಿರಸ್ಕಾರಕ್ಕೆ ಒಳಗಾಗುವ ಸಂದರ್ಭಗಳಿವೆ. ವಿವಾಹದಂತಹ ಮಂಗಲಕಾರ್ಯದಲ್ಲಿ ಎಲ್ಲರಿಗೆ ಸಂತೋಷದ ವಾತಾವರಣವಿದ್ದರೆ ವಿಧವೆ ಸ್ತ್ರೀ ಪ್ರತ್ಯೇಕ ಮತ್ತು ಬೇಜಾರಿನ ಪರಿಸ್ಥಿತಿಯಲ್ಲಿರಬೇಕಾಗುತ್ತದೆ. ನೆಂಟಸ್ತಿಕೆ, ತಾಂಬೂಲ ನಿಶ್ಚಿತಾರ್ಥ, ದೇವಕಾರ್ಯಗಳಲ್ಲಿ ವಿಧವೆಯರು ಭಾಗವಹಿಸುವಂತಿಲ್ಲ. ಅರಸಿನ ಶಾಸ್ತ್ರ, ಪನ್ನೆ, ಕಲಶಸ್ನಾನ, ಹಿಟ್ಟು ಕುಟ್ಟುವಿಕೆ, ಕುಂಭ ಮುಹೂರ್ತ, ಹಾಲುಗಂಭ ಮುಹೂರ್ತ, ತಳಿಗೆ ಪ್ರದಾನ.... ಮುಂತಾದವುಗಳೆಲ್ಲಾ ಸ್ತ್ರೀಯರ ಮುಂದಾಳ್ತನದಲ್ಲಿ ಜರಗುವ ವಿಧಿಗಳಾದರೂ ವಿಧವೆಯರು ಈ ಕಾರ್ಯಗಳಲ್ಲಿ ಪಾತ್ರವಹಿಸುವಂತಿಲ್ಲ. ವಧುವಿನ ಶೃಂಗಾರ, ಆರತಿ, ಸೇಸೆ, ಮುಯ್ಯಿ, ನಾಗೋಲೆ ಪೂಜೆ ಮುಂತಾದ ಮಂಗಲಕಾರಕ ಶಾಸ್ತ್ರಗಳಲ್ಲೂ ವಿಧವೆಯರಿಗೆ ಅವಕಾಶವಿಲ್ಲ. ಮದುವೆಯ ಇತರ ಪೂರಕ ಕಾರ್ಯಗಳಲ್ಲಿ

ಆಕೆ ಪರೋಕ್ಷವಾಗಿ ಸಹಕರಿಸಬಹುದು. ಎಲ್ಲರೂ ಮದುವೆ ಸಂಭ್ರಮದಲ್ಲಿರುವಾಗ ಮನೆ ಕಾಯುವಿಕೆ, ಗದ್ದೆಯ -ತೋಟದ ಬೆಳೆಗಳ ರಕ್ಷಣೆ, ಜಾನುವಾರುಗಳ ಸಾಕಣೆ, ವಿವಾಹ ಪೂರ್ವ ತಯಾರಿಗಳ ಕಾರ್ಯಗಳಲ್ಲಿ ಭಾಗವಹಿಸಬಹುದು. ಒಟ್ಟಿನಲ್ಲಿ ವಿಧವೆಯು ಎಲ್ಲಾ ರೀತಿಯಿಂದಲೂ ಪರಿತ್ಯಕ್ತ ಜೀವನ ನಡೆಸಬೇಕಾಗುತ್ತದೆ. ಆದುದರಿಂದ ಮದುವೆಯಂತಹ ಶುಭಕಾರ್ಯಗಳಿಗೆ, ಮಕ್ಕಳಿದ್ದಲ್ಲಿ ಅವರನ್ನೇ ಕಳುಹಿಸಿ ತನ್ನ ಪ್ರತಿನಿಧಿತ್ವವನ್ನು ತೋರ್ಪಡಿಸುತ್ತಾಳೆ.

38.17. ಋತುಮತಿ (ಪ್ರೌಢ ಸಂಸ್ಕಾರ) :

ಹಿಂದಿನ ಸಂಪ್ರದಾಯದಂತೆ ಒಬ್ಬಳು ಕನ್ಯೆ ಋತುಮತಿಯಾದರೆ ಐದು ದಿನ ಅವಳನ್ನು ಮನೆಯಿಂದ ಹೊರಗೆ ಒಂದು ಪ್ರತ್ಯೇಕವಾದ ಕುಟೀರದಲ್ಲಿ ಇರಿಸುತ್ತಿದ್ದರು. ಈಗ ಮನೆಯೊಳಗೆ, ಆಯದಿಂದ ಹೊರಗೆ ಒಂದು ಪ್ರತ್ಯೇಕ ಕೋಣೆಯಲ್ಲಿ ವ್ಯವಸ್ಥೆ ಮಾಡುತ್ತಾರೆ. ಜಂಟಿ ಕುಟುಂಬ ವ್ಯವಸ್ಥೆ ಇದ್ದಲ್ಲಿ ಋತುಮತಿ ಅಥವಾ ಸ್ತ್ರೀಯರು ತಿಂಗಳಪಾಳಿಯನ್ನು ಕಳೆಯಲು ಅವರಿಗಾಗಿಯೇ ಒಂದು ಕೋಣೆ ಮೀಸಲಿರುತ್ತದೆ. ಋತುಮತಿಯಾದವಳು ಮನೆಯಿಂದ ಹೊರಗೆ ತಿರುಗಾಡಲು ಮತ್ತು ಇತರರು ಅವಳನ್ನು ಮುಟ್ಟಲು ಅಸ್ಪದವಿಲ್ಲ. ಊಟ ತಿಂಡಿಯ ವ್ಯವಸ್ಥೆ ಅವಳಿಗೆ ಅಲ್ಲಿಯೇ ಮಾಡುತ್ತಾರೆ. ಅವಳ ಸಂಗಡಕ್ಕೆ ಯಾರಾದರೊಬ್ಬ ಪ್ರಾಯಸ್ಥೆಯನ್ನು ನಿಲ್ಲಿಸುತ್ತಾರೆ.

ಋತುಮತಿಯಾದ ಸುದ್ದಿಯನ್ನು ನಾಡೆಯ ಗುರಿಕಾರರಲ್ಲಿ ಪ್ರಥಮವಾಗಿ ತಿಳಿಸಬೇಕು. ಗುರಿಕಾರ್ತಿ ರಾಯಭಾರ್ತಿಗೆ ತಿಳಿಸುತ್ತಾಳೆ. ರಾಯಭಾರ್ತಿ ನಾಡೆಯ ಇತರ ಮಹಿಳೆಯರಿಗೆ-ಹೀಗೆ ಒಟ್ಟು ಐವರು ಮಹಿಳೆಯರು ಕೂಡಿ ಐದನೇ ದಿನ ಬಂದು ಹುಡುಗಿಗೆ ಶೀಗೆ, ಅರಶಿನ ಬೆರಸಿದ ತಣ್ಣೀರಿನಿಂದ ತೆಂಗಿನಮರದ ಬುಡದಲ್ಲಿ ಸ್ನಾನ ಮಾಡಿಸುತ್ತಾರೆ. ಅವಳಿಗೆ ಪ್ರಥಮವಾಗಿ ಸೀರೆ ಉಡಿಸಿ ಮನೆಯೊಳಗೆ ಕರೆತರುತ್ತಾರೆ. ಈ ಪ್ರಥಮ ಸೀರೆಯನ್ನು ಸೋದರಮಾವ ಅಥವಾ ಸಹೋದರ ನೀಡುವ ಸಂಪ್ರದಾಯವಿದೆ. ಈವರೆಗೆ ಇತರ ಹುಡುಗಿಯರಂತೆ ಲಂಗದಾವಣಿ ಉಟ್ಟುಕೊಂಡಿದ್ದರೂ, ಋತುಮತಿಯಾದ ನಂತರ ಹೆಮ್ಮಕ್ಕಳು ಸೀರೆ ಉಡುವುದು ಕುಡುಬಿಯರಲ್ಲಿ ಸಂಪ್ರದಾಯ.

ಮನೆಯೊಳಗೆ ಬಂದ ಹುಡುಗಿಗೆ ಅವಲಕ್ಕಿ ಕಜ್ಜಾಯ ಮಾಡಿಕೊಡುವುದು ವಾಡಿಕೆ. ಹಿಂದಿನವರು ಗೂಢಾರ್ಥದಲ್ಲಿ "ಹುಡುಗಿ ಅವಲಕ್ಕಿ ಕಜ್ಜಾಯ ತಿಂದಳು" ಅಂದರೆ ಋತುಮತಿಯಾದಳು ಎಂದರ್ಥ. ಏಳನೇ ದಿವಸ ಹತ್ತಿರದ ಶಿವದೇವಾಲಯಕ್ಕೆ ಕರೆದುಕೊಂಡುಹೋಗಿ ಪವಿತ್ರ ಕಲಶ ಸ್ನಾನ ಮಾಡಿಸುತ್ತಾರೆ. ಆದುದರಿಂದ ಋತುಮತಿಯಾಗುವುದಕ್ಕೆ 'ಪವಿತ್ರ ಸ್ನಾನ' ಅಂತಲೂ ಹೆಸರಿದೆ. ಕಲಶ ಸ್ನಾನಕ್ಕೆ ಹೋಗುವಾಗ ಅಲ್ಲಿನ ವಿಧಿಗಳಿಗಾಗಿ ಒಂದು ಧೋತರ, ಸಿಂಗಾರ, ಒಂದು ಸೇರು ಬೆಳ್ತಿಗೆ ಅಕ್ಕಿ, ವೀಳ್ಯಪಟ್ಟಿ ಕಾಣಿಕೆಗಳನ್ನು ಕೊಂಡುಹೋಗಬೇಕು. ಶಿವದೇವಾಲಯದಲ್ಲಿ ಕಲಶ ಸ್ನಾನ ಆದರೆ ಋತುಮತಿ ಪರಿಶುದ್ಧಳಾದಂತೆ.

ಹೆಣ್ಣು ಪ್ರೌಢಾವಸ್ಥೆಗೆ ತಲುಪುವ ಮೊದಲು ಮದುವೆಯಾಗುತ್ತಿದ್ದ ಕಾಲದಲ್ಲಿ, ಮದುವೆ ಆದರೂ ವಧುವು ತವರಿನಲ್ಲೇ ಇರುತ್ತಿದ್ದಳು. ಪತಿಯ ಮನೆಗೆ ಕಳುಹಿಸುತ್ತಿರಲಿಲ್ಲ. ಈ ಮೂಲಕ ಋತುಮತಿಯಾಗುವ ಮುಂಚಿನ ಸತಿಪತಿಯರ ಲೈಂಗಿಕ ಸಂಪರ್ಕಕ್ಕೆ ತಡೆಯೊಡ್ಡುತ್ತಿದ್ದರು. ಮದುವೆಯಾದ ಮೇಲೆ ಋತುಮತಿಯಾದ ಹುಡುಗಿಗೆ ವರನ ಮನೆಯಲ್ಲಿ 'ನ್ಹಾಣ್' ಎಂಬ ಕಲಶಸ್ನಾನದ ನಂತರದ ಸಂಪ್ರದಾಯ ಒಂದನ್ನು ಆಚರಿಸಲಾಗುತ್ತಿತ್ತು. 'ನ್ಹಾಣ್' ಅಂದರೆ 'ಸ್ನಾನ' ಎಂಬ ನೇರವಾದ ಅರ್ಥ ಕೊಡುವುದಾದರೂ ಪವಿತ್ರ ಸ್ನಾನದ ನಂತರ ಪತಿಯ ಮನೆಯಲ್ಲಿ ನಡೆಯಲಿರುವ ಉಡಿತುಂಬುವ ಈ ವಿಧಿಗೆ 'ನ್ಹಾಣ್' ಎಂದೇ ಹೆಸರು. ಋತುಮತಿಯಾದ ನಂತರದ ಮದುವೆ ಆಗಿದ್ದರೂ ಕೆಲವು ಕುಟುಂಬ ಮತ್ತು ವಾಡೆಗಳಲ್ಲಿ ಮದುವೆ ನಂತರದ ಪ್ರಥಮ ತಿಂಗಳ ಪಾಳಿಯ ಸಂದರ್ಭದಲ್ಲೂ 'ನ್ಹಾಣ್' ಆಚರಣೆ ಮಾಡುವ ಕ್ರಮವಿದೆ. ಇದಕ್ಕೆ 'ಮಡಿಲು ತುಂಬಿಸುವಿಕೆ' (ವೊಂಟಿ ಭೋರ್ಣಂ) ಎಂದೂ ಹೆಸರಿದೆ. ಈಗ ಈ ಎರಡೂ ಕ್ರಮಗಳು ಅಳಿದಿವೆ. ಬದಲಿಗೆ ಋತುಮತಿಯಾದ ಐದನೇ ದಿನದ ಸ್ನಾನದ ನಂತರ, ಹತ್ತಿರದ ಶಿವ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಕಲಶ ಸ್ನಾನ ಮಾಡಿಸಿ ಶುದ್ಧೀಕರಣದ ಶಾಸ್ತ್ರ ಮುಗಿಸುತ್ತಾರೆ.

ಮದುವೆಯಾದ ಹುಡುಗಿ ಋತುಮತಿಯಾದ ತಕ್ಷಣ ತವರಿನವರು ಬೀಗರಿಗೆ ಸುದ್ದಿ ತಲುಪಿಸಬೇಕು. 'ನ್ಹಾಣ್' ಆಚರಣೆಯ ವಿಧಿಗಳನ್ನು ಏಳನೇ ದಿನ ಮಾಡುವುದು ವಾಡಿಕೆ. ಆ ದಿನ ತವರಿನವರು ತಮ್ಮ ಹುಡುಗಿಯನ್ನು ವಧುವಿನಂತೆ ಅಲಂಕರಿಸಿ, ದಿಬ್ಬಣದೊಂದಿಗೆ ಬೀಗರಲ್ಲಿಗೆ ಬರಬೇಕು. ಈ ದಿಬ್ಬಣದಲ್ಲಿ ತವರಿನ ಕಡೆಯ ಬಂಧುವರ್ಗದ ಮಹಿಳೆಯರೇ ಇರುತ್ತಾರೆ. ಬರುವಾಗ ಅವರು ಮಡಿಲು ತುಂಬಿಸಲು ಬೇಕಾದ ಐದು ತೆಂಗಿನಕಾಯಿ, ಐದು ವೀಳ್ಯಪಟ್ಟಿ, ಸಿಂಗಾರ, ಹೂವು.... ಮುಂತಾದ ಮಂಗಲ ವಸ್ತುಗಳನ್ನು ತಂದಿರಬೇಕು. ವಧುವೂ ಹೊಸ ಉಡುಗೆ ತೊಡುಗೆಗಳಿಂದ ಅಲಂಕೃತಳಾಗಿರಬೇಕು.

ಬೀಗರಲ್ಲಿಗೆ ತಲುಪಿದ ವಧುವಿನ ದಿಬ್ಬಣವನ್ನು ಆದರದಿಂದ ಸ್ವಾಗತಿಸಲಾಗುತ್ತದೆ. ಅವರಿಗೆ ಬಾಯಾರಿಕೆಗೆ ಬೆಲ್ಲ ನೀರು, ಫಲಾಹಾರ, ಕವಳಕ್ಕೆ ತಾಂಬೂಲ ನೀಡಿ ಸತ್ಕರಿಸುತ್ತಾರೆ. ವಧುವನ್ನು ತಲೆಬಾಚಿ, ಸಿಂಗಾರ ಹೂವು ಮುಡಿಸಿ ಶೃಂಗರಿಸುತ್ತಾರೆ. ಮನೆಯ ಆಯದೊಳಗೆ ಚಾಪೆಯ ಮೇಲೆ ಮಣೆಹಾಕಿ ವಧುವನ್ನು ಪೂರ್ವಾಭಿಮುಖಿವಾಗಿ ಕುಳ್ಳಿರಿಸುತ್ತಾರೆ. ವಧುವಿನ ತಾಯಿ ಉಡಿಯ ಸೆರಗಿನಲ್ಲಿ ಅಕ್ಕಿ, ತೆಂಗಿನಕಾಯಿ, ವೀಳ್ಯಪಟ್ಟಿ ಇಟ್ಟು ಉಡಿ ತುಂಬಿಸುತ್ತಾಳೆ. ನಂತರ ಸೇಸೆಗಾಗಿ ವಧೂವರರನ್ನು ಒಟ್ಟಿಗೆ ಕೂರಿಸಲಾಗುತ್ತದೆ. ವರನ ತಂದೆ ಸೇಸೆ ಬಟ್ಟಲು ಇಡುತ್ತಾನೆ. ಆದ್ಯತೆಯ ಗೌರವ ಪ್ರಕಾರ ಆಗಮಿಸಿದ ನೆಂಟರಿಷ್ಟರು ವಧೂವರರಿಗೆ ಸೇಸೆಯಿಕ್ಕುತ್ತಾರೆ. ಸೇಸೆ ಮುಗಿದು ಯಜಮಾನ ಮುಯ್ಯಿ ಬಟ್ಟಲು ಇಡುತ್ತಾನೆ. ತವರಿನ ಮತ್ತು ಪತಿಯ ಕಡೆಯ ಆಪ್ತೇಷ್ಟರು ವಧುವಿಗೆ ಮುಯ್ಯಿ ಇಡುವ ಕ್ರಮವಿದೆ. ಗಂಡನ ಕಡೆಯಿಂದ ಅವರ ಯಥಾನುಸಾರ ಸೀರೆ ಉಡುಗೊರೆ ಮಾಡುತ್ತಾರೆ. ಆ ನಂತರ ಅಲ್ಲಿ ಸೇರಿದವರಿಗೆ ಶಾಕಾಹಾರಿ, ಪಾಯಸದೂಟವಿರುತ್ತದೆ.

38.18. ಮುಟ್ಟು (ತಿಂಗಳ ಪಾಳಿ) :

ಕುಡುಬಿ ಮಹಿಳೆಯರು ತಿಂಗಳ ಪಾಳಿಯ ಸಂದರ್ಭ ಕೆಲವು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ತಿಂಗಳ ಪಾಳಿಯ ಮೂರು ದಿವಸಗಳಲ್ಲಿ ಯಾರನ್ನೂ ಮುಟ್ಟುವುದಿಲ್ಲ ಮತ್ತು ಮುಟ್ಟಿಸಿಕೊಳ್ಳುವುದಿಲ್ಲ. ಆದುದರಿಂದ ಇದಕ್ಕೆ 'ಮುಟ್ಟು' ಎಂಬ ಶಬ್ದ (ಕುಡುಬಿ ಕೊಂಕಣಿ ಉಪಭಾಷೆಯಲ್ಲಿ 'ಹಾಪ್ಲಾನ' =untouchability) ಉಪಯೋಗವಾಗಿದೆ. ಸೂತಕದ ಈ ಮೂರು ದಿನಗಳಲ್ಲಿ ಆಕೆ ಮನೆ ಆಯದ ಹೊರಗಿನ ಹಜಾರದಲ್ಲಿ ಇರಬಹುದು. ತಿರುಗಾಡಬಹುದು. ಆದರೆ ಮನೆಯ ಆಯದ ಹೊಸ್ತಿಲು ದಾಟಿ ಒಳಬರುವಂತಿಲ್ಲ. ಅಡುಗೆಕೋಣೆ ಪ್ರವೇಶಿಸುವಂತಿಲ್ಲ. ಮನೆ, ದೇವರ ಮನೆಯಾದರೆ (ಹಿರಿಮನೆ) ಮುಟ್ಟಾದವರಿಗೆ ನಿಲ್ಲಲು ಮನೆಯ ಹೊರಗೆ ಒಂದು ಗುಡಿಸಲಿನ ವ್ಯವಸ್ಥೆ ಇರುತ್ತದೆ. ಮುಟ್ಟಾದ ಸ್ತ್ರೀ ಹತ್ತು ಸಮಸ್ತರ ಪೂಜೆ ಪುನಸ್ಕಾರಗಳು ಜರಗುವ ಅಂಗಳ ಅಥವಾ ವೇದಿಕೆ ಪ್ರವೇಶಿಸುವಂತಿಲ್ಲ. ಐದನೇ ದಿನ ಸ್ನಾನಾದಿಗಳನ್ನು ಪೂರೈಸಿ ಶುದ್ಧಳಾದ ನಂತರ ಆಕೆ ಅಡುಗೆಕೋಣೆ, ಮನೆಯ ಆಯದೊಳಗೆ ಪ್ರವೇಶ ಪಡೆಯಲು ಅರ್ಹಳಾಗುತ್ತಾಳೆ.

ಮುಟ್ಟು ಅಂದರೇನೆಂಬ ಕಲ್ಪನೆ ಇರದ ಎಳೆಯ ಮಕ್ಕಳ ಮುಗ್ಧ ಪ್ರಶ್ನೆಗೆ 'ನಿನ್ನ ಅಮ್ಮನಿಗೆ ಕಾಗೆ ಮುಟ್ಟಿದೆ, ಕಾಗೆ ಮುಟ್ಟಿದವರನ್ನು ಮುಟ್ಟಬಾರದು' ಎಂಬ ಸಮಜಾಯಿಷಿ ನೀಡಲಾಗುತ್ತಿತ್ತು. ಮುಟ್ಟಾದ ಮಹಿಳೆ ಚಿಕ್ಕ ಮಕ್ಕಳು ನಗ್ನಾವಸ್ಥೆಯಲ್ಲಿರುವಾಗ ಮುಟ್ಟಬಹುದು. ತನ್ನದೇ ಮಗುವಾದರೂ, ಮಗುವಿನ ಮೈಯಲ್ಲಿ ಬಟ್ಟೆ ಇರದ ಸಮಯದಲ್ಲಿ ಮಾತ್ರ ಮುಟ್ಟಬಹುದು ಮತ್ತು ಹಾಲನ್ನೂ ಊಡಿಸಬಹುದು. ಆದರೆ ಮಕ್ಕಳು ಅಥವಾ ದೊಡ್ಡವರನ್ನು ಮೈಮೇಲೆ ಬಟ್ಟೆ ಇರುವಾಗ ಮುಟ್ಟಿದರೆ, ಮುಟ್ಟಿಸಿಕೊಂಡವರಿಗೆ ಮೈಲಿಗೆ ಎಂಬ ನಂಬಿಕೆ ಇದೆ. ಹಾಗೆ ಮುಟ್ಟಿಸಿಕೊಂಡವರು ಆ ಬಟ್ಟೆಗಳನ್ನು ಕಳಚಿ ನೀರಲ್ಲಿ ನೆನೆಸಬೇಕು. ಮೈಮೇಲೆ ಬಟ್ಟೆ ಇರುವಾಗ ಮುಟ್ಟಾದವಳನ್ನು ಮುಟ್ಟಿದವರನ್ನು ಒಬ್ಬರಿಗೊಬ್ಬರು ಮುಟ್ಟಿದರೂ, ಅವರು ಬಟ್ಟೆ ಕಳಚಿ ನೀರಲ್ಲಿ ನೆನೆಸಬೇಕು. ಮುಟ್ಟಾದಾಕೆ ಮುಟ್ಟಿದ ಬಟ್ಟೆ ಮೈಯಲ್ಲಿರುವಾಗ ಇನ್ನೊಂದು ಬಟ್ಟೆ ಮುಟ್ಟಿದರೂ, ಆ ಬಟ್ಟೆಯೂ ಮೈಲಿಗೆಯಾದಂತೆ. ಈ ಪ್ರಕಾರ ಬಟ್ಟೆಯಿಂದ ಬಟ್ಟೆಗೆ ಈ ಮೈಲಿಗೆ ವರ್ಗಾವಣೆಯಾಗುತ್ತದೆ ಎನ್ನಬಹುದು.

ಮುಟ್ಟಾದವರನ್ನು ಮುಟ್ಟಿದವರು ಸ್ನಾನ ಮಾಡಿ ಶುದ್ಧರಾಗಬೇಕು. ಮುಟ್ಟಿನವಳಿಗೆ ದೇವಸ್ಥಾನ, ದೈವಸ್ಥಾನ, ನಾಗಬನಗಳ ಅಂಗಳ ಪ್ರವೇಶ ನಿಷಿದ್ಧ. ಅಲ್ಲಿ ಉಪಯೋಗವಾಗುವ ನೀರನ್ನು ಮುಟ್ಟಬಾರದು. ಬಾವಿ, ಭತ್ತದ ಕಣಜ, ಉಳುಮೆ ಸಾಮಾಗ್ರಿಗಳು, ಬೇಟೆಯ ಪರಿಕರಗಳು, ಮೂರ್ತಿ, ಹರಿವಾಣ, ಬಟ್ಟಲು, ಪಾತ್ರೆ ಮುಂತಾದ ಯಾವುದನ್ನೂ ಮುಟ್ಟಬಾರದು. ಪಾತ್ರೆಗಳನ್ನು ಮುಟ್ಟಿದಲ್ಲಿ ಅವುಗಳನ್ನು ತಿಕ್ಕಿ ತೊಳೆದು ಕವುಚಿ ಹಾಕಬೇಕು. ಆ ಪಾತ್ರೆಗಳನ್ನು ತೊಳೆಯಲು ಇತರರು ಯಾರಾದರೂ ನೀರು ಹೊಯ್ಯಬೇಕು.

ಮುಟ್ಟಿನ ಮಹಿಳೆ ತಾನು ಮಲಗಿದ್ದ ಮತ್ತು ಊಟ ಮಾಡಿದ್ದ ಜಾಗವನ್ನು ಸೆಗಣಿ ಸಾರಿಸಿ ಶುದ್ಧ ಮಾಡಬೇಕು. ಮೂರು ದಿನ ಬಾಳೆಲೆಯಲ್ಲಿ ಊಟ ಮಾಡಿ ಉಚ್ಚಿಷ್ಟ ಎಲೆಯನ್ನು ಯಾರೂ ಸಂಚರಿಸದಿರುವ ಜಾಗದಲ್ಲಿ ಎಸೆಯಬೇಕು.

ಮುಟ್ಟಿನವಳು ತಲೆಬಾಚಬಾರದು, ಹೂವು ಮುಡಿಯಬಾರದು, ಚಿನ್ನದ ಒಡವೆ ಧಾರಣೆ, ತಿಲಕಧಾರಣೆಗೆ ಅವಕಾಶವಿಲ್ಲ. ದೀಪವನ್ನು ಮುಟ್ಟುವಂತಿಲ್ಲ. ಮೂರನೇ ದಿನ ಸ್ನಾನ ಮಾಡುವಲ್ಲಿವರೆಗೆ ಆಕೆ ಇದ್ದಿಲತುಂಡು, ಮಾವಿನೆಲೆ, ಗೇರು ಎಲೆಗಳಿಂದ ಹಲ್ಲುಜ್ಜಬೇಕು. ಮೂರನೇ ದಿನ ಬೆಳಗ್ಗೆ ಶೀಗೆಕಾಯಿ ಮತ್ತು ಅರಸಿನ (ಶೀಗೆಕಾಯಿ=ACACIA SINUATA, ಅರಸಿನ = TURMERIC) ಬೆರೆಸಿದ ನೀರಿನಲ್ಲಿ ಸ್ನಾನ ಮಾಡಿ ಮನೆ ಪ್ರವೇಶಿಸಬಹುದು. ಆಕೆ ಹರಿವ ನೀರಿನಲ್ಲೂ ಸ್ನಾನ ಮಾಡಬಹುದು. ಕೆರೆಯಿಂದ ಹೊರ ಹರಿವಿನ ನೀರಲ್ಲಿ ಸ್ನಾನ ಮಾಡಬಹುದು. ಬಾವಿಯ ನೀರನ್ನು ಇತರರು ಸೇದಿ ಕೊಟ್ಟಲ್ಲಿ ಸ್ನಾನ ಮಾಡಬಹುದು. ಮನೆಯ, ದೇವರ, ದೈವೀಕ ಮತ್ತು ಧಾರ್ಮಿಕ ಕಾರ್ಯಗಳಿಗೆ ಉಪಯೋಗವಾಗುವ ನೀರಲ್ಲಿ ಸ್ನಾನ ಮಾಡುವಂತಿಲ್ಲ. ನೆಂಟಸ್ತಿಕೆಯಂತಹ ಶುಭಕಾರ್ಯಗಳಿಗೆ ಹೊರಟವರಿಗೆ ಮುಟ್ಟಾದಾಕೆ ಎದುರಾಗಬಾರದು. ಮುಟ್ಟಿನವಳ ನೆರಳು ನಾಗ ಅಥವಾ ನಾಗನಡೆಗೆ ಬೀಳಬಾರದು. ಐದು ದಿನ ಕಳೆವಲ್ಲಿವರೆಗೆ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಬಾರದು. ದೇವ, ದೈವಸ್ಥಾನಗಳಿಗೆ ಸಂಬಂಧಿಸಿದ ಚೆಂಡು ಹಾಕುವ, ಬಾಳೆ ನೆಡುವ ಬಾಕಿಮಾರು ಗದ್ದೆಗಳಿಗೆ ಕಾಲಿಡಬಾರದು. ಮಹಿಳೆಯರಿಗೆ ದೇವರ ಕೋಣೆ ಮತ್ತು ದೈವಸ್ಥಾನಗಳ ಒಳಗೆ ಮುಟ್ಟಿಲ್ಲದ ಇತರ ದಿನಗಳಲ್ಲೂ ಪ್ರವೇಶಿಸಲು ಕುಡುಬಿ ಸಮಾಜದಲ್ಲಿ ಅವಕಾಶವಿಲ್ಲ.

ಕುಡುಬಿ ಸಮಾಜದ ಮದುವೆ ಏರ್ಪಡುವಾಗ ವಧು, ಧಾರೆ ಎರೆಯುವ ವಧುವಿನ ತಾಯಿ, ಧಾರೆ ಎರೆಸಿಕೊಳ್ಳುವ ವರನ ತಾಯಿ, ಬಲಗೊಡತಿ, ಕಲಶಗಿತ್ತಿ ಇವರು ಮುಟ್ಟಿನ ಮೈಲಿಗೆಯಲ್ಲಿ ಇರಬಾರದು. ವಿವಾಹಕ್ಕೆ ದಿನ ನಿಶ್ಚಯಿಸುವಾಗ ಈ ಎಲ್ಲಾ ಐವರು ಮಹಿಳೆಯರ ತಿಂಗಳ ಪಾಳಿಯ ದಿನಗಳನ್ನು ತಪ್ಪಿಸಿ ಮದುವೆಯ ದಿನವನ್ನು ಆಯ್ಕೆ ಮಾಡಬೇಕು. ಮುಟ್ಟಿನವರು ಮದುವೆಯ ಯಾವುದೇ ಕಾರ್ಯದಲ್ಲಿ ಭಾಗವಹಿಸಲು ಅವಕಾಶವಿಲ್ಲ. ವಧುವಿನ ತಿಂಗಳ ಪಾಳಿಯನ್ನು ತಪ್ಪಿಸಿ, ವಧುವಿನ ಮತ್ತು ವರನ ತಾಯಿಯ ತಿಂಗಳ ಪಾಳಿಯ ದಿನಗಳನ್ನು ತಪ್ಪಿಸಲು ಅಸಾಧ್ಯವಾದ ಸಂದರ್ಭಗಳಲ್ಲಿ ಅನಿವಾರ್ಯವಾಗಿ ಇತರರು ಧಾರೆ ಎರೆವ ಪ್ರಸಂಗಗಳು ಹಲವು ಇರುತ್ತವೆ.

38.19. ಹೊಲೆ ಸೂತಕಗಳು : (ವೃದ್ಧಿ ಸೂತಕ, ಕ್ಷಯ ಸೂತಕ):

ಕುಡುಬಿಯರಲ್ಲಿ ಜನನದ ವೃದ್ಧಿ ಸೂತಕ ಮತ್ತು ಮರಣದ ಕ್ಷಯ ಸೂತಕವನ್ನು ಹನ್ನೆರಡು ದಿನ ಆಚರಣೆ ಮಾಡುವ ವಾಡಿಕೆಯಿದೆ. ಅಷ್ಟು ದಿನ ಶುದ್ಧಾಚಾರ ಆಚರಿಸಬೇಕೆಂಬ ನಿಯಮವಿದೆ. ಇದಕ್ಕೆ 'ಹೊಲೆ ಆಚರಣೆ' ಅನ್ನುತ್ತಾರೆ. ಸ್ತ್ರೀಯೊಬ್ಬಳು

ಗರ್ಭವತಿಯಾದಲ್ಲಿ ಏಳು ತಿಂಗಳ ನಂತರ ಪತಿ ಪತ್ನಿಯರಿಗೆ ಗರ್ಭದ ಹೊಲೆ ಇರುತ್ತದೆ. ಗರ್ಭಕ್ಕೆ ಏಳು ತಿಂಗಳಾದ ಮೇಲೆ ಗಂಡ ಹೆಂಡಿರು ದೇವ-ದೈವಸ್ಥಾನ, ನಾಗಬನಗಳಿಗೆ ಭೇಟಿ ನೀಡುವುದು ಅಥವಾ ಆ ಸಂಬಂಧಿತ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶವಿಲ್ಲ. ಹೆರಿಗೆಯಾದಲ್ಲಿ ಬಾಣಂತಿ ಮತ್ತು ಮಗುವನ್ನು ಮನೆಯ ಹೊರಗೆ ಪ್ರತ್ಯೇಕ ಕೊಠಡಿಯಲ್ಲಿ ಇರಿಸುತ್ತಾರೆ. ಸೂತಕ ಕಳೆವ ವರೆಗೆ ಅವರು ಮನೆ ಪ್ರವೇಶಿಸುವಂತಿಲ್ಲ. ಮನೆಯಲ್ಲೇ ಹೆರಿಗೆಯಾದಲ್ಲಿ ಅದಕ್ಕೆ ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಇರುತ್ತದೆ. ಹಿಂದಿನ ಜಂಟಿ ಕುಟುಂಬ ವ್ಯವಸ್ಥೆ ಇರುವಾಗ ಈ ಪ್ರತ್ಯೇಕ ಕೊಠಡಿ ಸಾಮಾನ್ಯವಾಗಿತ್ತು. ಇತ್ತೀಚಿನ ವರೆಗೂ ಹೆರಿಗೆಯಾದ ನಾಲ್ಕನೇ ದಿನ ಮಡಿವಾಳಗಿತ್ತಿ ಬಂದು ಬಾಣಂತಿ ಮತ್ತು ಮಗುವನ್ನು ಸ್ನಾನ ಮಾಡಿಸಿ, ಬಾಣಂತಿಯ ಬಟ್ಟೆಗಳನ್ನು ಒಗೆದುಕೊಟ್ಟು, ತಾನು ತಂದಿದ್ದ ಮಡಿಬಟ್ಟೆಗಳನ್ನು ಬಾಣಂತಿಗೆ ಉಡಿಸುವ ಕ್ರಮವಿತ್ತು. ಮಡಿವಾಳ್ತಿ, ತಾನು ತಂದ ಕ್ಷಾರ ವಿಭೂತಿಯನ್ನು ಮನೆ ಹಾಗೂ ಬಾಣಂತಿ ಕೋಣೆಯಲ್ಲಿ ಚಿಮುಕಿಸಿ ಶುದ್ಧ ಮಾಡುತ್ತಿದ್ದಳು. ಬಾಣಂತನದ ಆರನೇ ದಿನ ಸಟ ಆಚರಣೆ ಇದೆ. ಕೆಲವು ಕುಟುಂಬ ಹಾಗೂ ವಾಡೆಗಳಲ್ಲಿ ಈ ಆಚರಣೆಯನ್ನು ಒಂಭತ್ತನೇ ದಿನ ಮಾಡುತ್ತಾರೆ. ಆರನೇ ದಿನದ ಸಟಗೆ 'ಘುಗ್ಗಿ' ಕುಣಿಯುವಿಕೆ ಮತ್ತು ಒಂಭತ್ತನೇ ದಿನದ ಸಟಗೆ ಸಂಪ್ರದಾಯದ ಹಾಡು ಹಾಡುವ ಕ್ರಮ ಕೆಲವು ಪಂಗಡದವರಲ್ಲಿ ರೂಢಿಯಲ್ಲಿದೆ. ಸಟವು ಮುಸ್ಸಂಜೆ, ಯಾ ರಾತ್ರಿ ಹೊತ್ತಿನಲ್ಲಿ ಜರಗುತ್ತದೆ. ಸಟಗೆ ಕಡ್ಲೆ ಮತ್ತು ಹುರುಳಿ ಬೇಯಿಸಿ, ಕಾಯಿತುರಿ ಬೆಲ್ಲ ಬೆರೆಸಿ ಕಜ್ಜಾಯ ಮಾಡಿ ಹಂಚುವ ಕ್ರಮವಿದೆ. ಆರನೇ ದಿನದ ಸಟಗೆ ಹಸಿ ಕಡಲೆಹುರುಳಿಗಳನ್ನು ಬೇಯಿಸುವುದಾದರೆ ಒಂಭತ್ತನೇ ದಿನದ ಸಟಗೆ ಅವುಗಳನ್ನು ಕಾವಲಿಯಲ್ಲಿ ಹುರಿದು ನಂತರ ಬೇಯಿಸುತ್ತಾರೆ. ಆದುದರಿಂದ ಇದಕ್ಕೆ 'ಸುಕಿಸಟ' (ಒಣಸಟ) ಎಂಬ ಹೆಸರಿದೆ. ಆರು ದಿನದಲ್ಲಿ ಮಗುವಿನ ಹೊಕ್ಕುಳಬಳ್ಳಿ ಉದುರದಿದ್ದಲ್ಲಿ ಆರನೇ ದಿನದ ಆಚರಣೆಯನ್ನು ಬಾಕಿ ಮಾಡಿ ಒಂಭತ್ತನೇ ದಿನ ಆಚರಿಸುತ್ತಾರೆ. ಹೀಗೆ ತಪ್ಪಿದ ಸಟ (ಸುಕಿ =ತಪ್ಪಿದ)ಯನ್ನು ಒಂಭತ್ತನೇ ದಿನ ಆಚರಿಸುವುದರಿಂದ ಇದಕ್ಕೆ 'ಸುಕಿಸಟ' ಎಂಬ ಹೆಸರು ಬಂದಿರುವ ಸಾಧ್ಯತೆಯಿದೆ. ಕಡಲೆ ಹುರುಳಿಗಳು, ಪುರುಷ ಪ್ರಕೃತಿ ಸಂಕೇತಗಳಾಗಿರುವುದರಿಂದ ಸಟಗೆ ಅವುಗಳನ್ನು ಬೇಯಿಸಿ ಕಜ್ಜಾಯ ಮಾಡಿ ಹಂಚುವ ಸಂಪ್ರದಾಯ ಬಂದಿರಬಹುದು.

ಹೆರಿಗೆಯ ಸಪ್ತಮ ದಿನವನ್ನು ಆಚರಿಸುವ ಕ್ರಮವಿದೆ. ಆ ದಿನ ಮನೆಯನ್ನು ಕಸಮುಸುರೆ ತೆಗೆದು, ಸೆಗಣಿಯಿಂದ ಸಾರಿಸಿ, ಎಲ್ಲರೂ ಸ್ನಾನ ಮಾಡಿ ಶುದ್ಧರಾಗುತ್ತಾರೆ. ಬಾಣಂತಿ ಈ ದಿನ ಹೆರಿಗೆ ಕಸ ಹೂತ, ಸ್ನಾನದ ನೀರು ಹರಿವ ಜಾಗದಲ್ಲಿ ಒಂದು ಕೆಸುವಿನ ಸಸಿ ನೆಡಬೇಕು. ಬಾಣಂತಿಯನ್ನು ಬಾವಿಗೆ ಮುಟ್ಟಿಸಿ, ಬಾವಿಯ ನೀರು ಸೇದಿ ತೆಂಗಿನ ಮರಕ್ಕೆರೆದು ಗಂಗಾಪೂಜೆಯ ಶಾಸ್ತ್ರ ಮಾಡುತ್ತಾರೆ. ಇದಾದ ನಂತರ ಬಾಣಂತಿ ಮಗು ಮನೆ ಪ್ರವೇಶಿಸಬಹುದು. ಆ ದಿನ ಬಾಣಂತಿಗೆ ಮನೆಯೊಳಗೆ ಮೀನು ಸಾರು ಅಡುಗೆ ಮಾಡಿ ಬಡಿಸುತ್ತಾರೆ.

ಹನ್ನೆರಡನೇ ದಿನ ಪುನಃ ಮನೆಯವರೆಲ್ಲರೂ ಮನೆ ಶುದ್ಧಿಗೊಳಿಸಿ, ಬಟ್ಟೆಗಳನ್ನೆಲ್ಲಾ ಒಗೆದು, ಮಿಂದು ಶುಚಿರ್ಭೂತರಾಗುತ್ತಾರೆ. ಇತ್ತೀಚೆಗೆ ಪುರೋಹಿತರನ್ನು ಕರೆದು ಪುಣ್ಯಾರ್ಚನೆ ಮಾಡಿಸುವ ರೂಢಿ ಚಾಲ್ತಿಗೆ ಬಂದಿದೆ. ಅದೇ ದಿನ ಗೋಧೂಳಿ ಸಮಯದಲ್ಲಿ ಮಗುವಿಗೆ ತೊಟ್ಟಿಲು ಕಟ್ಟಿ ನಾಮಕರಣ ಮಾಡುತ್ತಾರೆ. ಇದಕ್ಕೆ 'ಭಾರ್‌ಸೊ' ಅಂತ ಹೆಸರಿದೆ. ಹೆರಿಗೆಯಾದಂದಿನಿಂದ ಹನ್ನೆರಡು ದಿನಗಳವರೆಗೆ ಕುಟುಂಬ ದಾಯಾದಿಗಳಿಗೆ ಹೊಲೆ ಇರುತ್ತದೆ.

ಮರಣ ಸಂಭವಿಸಿದರೆ, ಹೆಣ ಎತ್ತಿದ ಮೇಲೆ ಆ ಮನೆಯಲ್ಲಿ ಮಾಡಿಟ್ಟ ಅಡುಗೆ ಇದ್ದಲ್ಲಿ ಅದನ್ನು ಪೂರ್ತಿ ಹೊರಗೆಸೆದು, ಕಸಬಳಿದು ಸೆಗಣಿ ಸಾರಿಸಬೇಕು. ಜೆಡಗಿನ ಹೊರಗಿನ ಯಾರಾದರೊಬ್ಬರು ಅಡುಗೆ ಮಾಡಿ ಹೆಣ ಎತ್ತಿದ ಆ ಮನೆಯ ಕುಟುಂಬಿಕರಿಗೆ 'ದುಃಖದ ಗಂಜಿ' ಬಡಿಸಬೇಕು. ಮರಣದ ನಂತರ ಕುಟುಂಬಸ್ಥರಿಗೆ ಮೂರು ಪ್ರತ್ಯೇಕ ದಿನಗಳಲ್ಲಿ, ಮೂರು ನೀರು ಮೀಯುವ ಹೊಲೆ ಆಚರಣೆ ಇದೆ. ಮೂರನೇ ದಿನ ಮೃತನ ಚಿತೆಯ ಹತ್ತಿರ ಎಳನೀರು ಇಡಬೇಕು. ಮೃತನ ಹೆಸರಲ್ಲಿ ಮನೆಯ ಕಡ ಮಾಡಿನ ನೀರು ಧಾರೆ ಬೀಳುವ ಜಾಗದಲ್ಲಿ ತೆಂಕುಬಡಗು ದಿಕ್ಕಿನಲ್ಲಿ ಎರಡು ಕಲ್ಲಿನ ಒಲೆ ರಚಿಸಿ, ಒಡಕು ಮಡಿಕೆಯಲ್ಲಿ ಅರೆಬೆಂದ ಅನ್ನ ತಯಾರಿಸಿ ಚಿತೆಯ ಹತ್ತಿರ ಬಡಿಸಬೇಕು. ಮೃತನ ಉತ್ತರಕ್ರಿಯೆಯ ವ್ರತಸ್ಥನಾಗುವುದಕ್ಕೆ 'ಕ್ರಿಯೆ ಹಿಡಿಯುವುದು' ಅಂತ ಹೆಸರು. ಈ ಕ್ರಿಯೆ ಮೂರನೇ ದಿನದಂದೂ ಹಿಡಿಯಬಹುದು. ಆದರೆ ಕ್ರಿಯೆ ಹಿಡಿದ ಮೇಲೆ ಶುದ್ಧಾಚಾರದಲ್ಲಿ ಇರಬೇಕಾಗುತ್ತದೆ. ಇತರ ಜಾತಿಯವರೊಂದಿಗೆ ಬೆರೆಯುವಿಕೆ, ಮಾತುಕತೆ, ಮನೆಬಿಟ್ಟು ಹೊರಗೆ ತಿರುಗಾಡುವುದು ಕೂಡದು. ಕ್ರಿಯೆ ಹಿಡಿಯುವುದು ಅಂದರೆ ಮೃತನ ಶ್ರಾದ್ಧದ ವಿಧಿಗಳನ್ನು ಪೂರೈಸಲು ಅಧಿಕೃತನಾಗುವುದು. ಪಿಂಡಪ್ರದಾನಕ್ಕೆ ಈತನೇ ಅರ್ಹನಾಗುತ್ತಾನೆ. ಅಷ್ಟೂ ದಿವಸ ಮೈಲಿಗೆಯಾಗಬಾರದು. ಆದುದರಿಂದ ಹೆಚ್ಚಾಗಿ ಮರಣದ ಒಂಭತ್ತನೇ ದಿನ ಕ್ರಿಯೆ ಹಿಡಿಯುತ್ತಾರೆ. ಆ ದಿನ ಕುಟುಂಬಸ್ಥರು ಮನೆ ಶುದ್ಧೀಕರಿಸಿ, ಬಟ್ಟೆ ಒಗೆದು ಸ್ನಾನ ಮಾಡಿ ಎರಡನೇ ಬಾರಿ ಶುಚಿರ್ಭೂತರಾಗುತ್ತಾರೆ. ಇದೇ ದಿನ ಶ್ರಾದ್ಧಕ್ರಿಯಾ ವ್ರತಸ್ಥನಾದವನು ತಲೆ ಬೋಳಿಸಿ, ಗಡ್ಡಮೀಸೆ ಕಿಲೇಸಿಯಿಂದ ಸವರಿಸಿಕೊಳ್ಳುವ ಕ್ರಮವಿದೆ. ಇದಕ್ಕೆ 'ಖಿರ್ ಕರ್ಚಂ' ಅನ್ನುತ್ತಾರೆ. ಕ್ಷೌರವಾದ ಮೇಲೆ ಚಿತಾಭಸ್ಮ ರಾಶಿ ಮಾಡಿ, ನೀರು ತುಂಬಿದ ಹೊಸ ಮಡಿಕೆ ಒಡೆದು, ಸಮಾಧಿ ಮೇಲೆ ಒಂದು ತುಳಸೀ ಗಿಡವನ್ನು ನೆಡಬೇಕು.

ಮೂರನೇ ಸ್ನಾನ ಹನ್ನೊಂದನೇ ದಿನ ಬೆಳಗ್ಗೆ ಆಗುತ್ತದೆ. ಆ ದಿನವೂ ಕುಟುಂಬಸ್ಥರೆಲ್ಲರೂ ಮನೆಸಾರಿಸಿ ಸ್ನಾನ ಮಾಡಿ ಪರಿಶುದ್ಧರಾಗುತ್ತಾರೆ. ಪುರೋಹಿತರು ಬಂದು ಹೊಸಮನೆ ಒಕ್ಕಲಾಗುವ ಕ್ರಮದಲ್ಲಿ ಮರಣದ ಮನೆಯ ಶುದ್ಧಾಚಾರ ಮಾಡುತ್ತಾರೆ. ಮೃತನ ಹೆಸರಲ್ಲಿ ಹನ್ನೆರಡು ಪಡಿ ಎಡೆ (ವಾಯಸಾನ್ನ) ಬಡಿಸಿ, ಶ್ರಾದ್ಧಕ್ರಿಯಾ ವ್ರತಸ್ಥನಿಂದ ದಾನ ಮಾಡಿಸಿ, ಪಿಂಡಪ್ರದಾನ ಮಾಡುತ್ತಾರೆ. ಆ ನಂತರವೇ ಕುಟುಂಬಸ್ಥರು ಸೇರಿ

ಅಡುಗೆ ಮಾಡಿ ಮೃತನಿಗೆ ರಾಶಿ ಪಿಂಡ ಬಡಿಸಿ, ಕಾಗೆ ಕರೆದು ಎಡೆಯಿಟ್ಟು ಎಲ್ಲರೂ ಊಟ ಪೂರೈಸುತ್ತಾರೆ. ಮರುದಿನ ಹನ್ನೆರಡನೇ ದಿನದಂದು ನೆಂಟರಿಷ್ಟರಿಗೆ ಸಂತರ್ಪಣೆ ಮೂಲಕ ಭೋಜನ ನೀಡುತ್ತಾರೆ. ಹೀಗೆ ಹನ್ನೆರಡನೇ ದಿನ ಹೊಲೆ ಕಳೆಯುತ್ತದೆ.

ಕುಡುಬಿಯರಲ್ಲಿ ಅವಿವಾಹಿತ (ಬ್ರಹ್ಮಚಾರಿ) ಯುವಕ ಯುವತಿಯರು ತೀರಿಕೊಂಡಲ್ಲಿ ದಫನ ಮಾಡುವುದೇ ರೂಢಿ. ಮೃತರಿಗೆ ಮಾಡುವ ಎಲ್ಲಾ ವಿಧಿಗಳನ್ನು ಇವರಿಗೆ ಮಾಡಬೇಕಾಗಿಲ್ಲ. ಮೃತರ ಹೆಸರಲ್ಲಿ ಪಡಿಎಡೆ ಇಡಬೇಕಾಗಿಲ್ಲ. ಹನ್ನೊಂದನೇ ದಿನ ಪುರೋಹಿತರನ್ನು ಕರೆದು ಶುದ್ಧಾಚಾರಗೈದು ವಟುಗಳಿಗೆ ಬೆಲ್ಲ ಮತ್ತು ಕಾಯಿ (ತೆಂಗಿನಕಾಯಿ ಹೋಳು) ಹಂಚುವರೆ. ನಂತರ ಮಹಾಲಯದಲ್ಲಿ ಮೃತರ ಹೆಸರಿನಲ್ಲಿ ದೇವರಿಗೆ ಒಂದು ತೆಂಗಿನಕಾಯಿ ಒಡೆಯುತ್ತಾರೆ. ಗರ್ಭಿಣಿ ಮೃತಳಾದರೆ ಆಕೆಯ ಮುತ್ತೈದೆತನದ ಯಾವುದೇ ಕುರುಹುಗಳನ್ನು ಕಳಚಬೇಕಾಗಿಲ್ಲ. ಹೆಣ ಚಿತೆಯಲ್ಲಿಡುವಾಗ ಹೊಟ್ಟೆಯ ಮೇಲೆ ಬಿಡಿ ಸಿಂಗಾರ ಒಂದನ್ನಿಟ್ಟು ಬಿರಿಯಬೇಕು. ನಂತರ ಮಾಂಗಲ್ಯವನ್ನು ಕಳಚಬಹುದು. ಹೊಲೆಯ ಉಳಿದ ಆಚರಣೆಗಳು ಯಥಾವತ್ ಇರುತ್ತವೆ.

ಜನಿಸಿದ ತಕ್ಷಣ ಮಗು ಅತ್ತು ಮರಣಿಸಿದರೆ ಹೊಲೆ ಆಚರಣೆ ಇರುತ್ತದೆ. ಹನ್ನೊಂದನೇ ದಿನ ಶ್ರಾದ್ಧವೂ ಆಗಬೇಕು. ಮಗು ಅತ್ತು ಮರಣಿಸಿದರೆ ಮೃತ ಮಗುವಿನ ಹೆಸರಿನಲ್ಲಿ ತಾಯಿ ಮೊಲೆ ಹಾಲನ್ನು ಹಲಸಿನೆಲೆಯಲ್ಲಿ ಎಡೆ ಇಡಬೇಕು. ಮರಣಕ್ಕೆ ಮೊದಲು ಮಗು ಅಳದಿರದಿದ್ದರೆ ಹೊಲೆ ಆಚರಣೆ ಇಲ್ಲ.

ಈ ಪ್ರಕಾರ ಕುಡುಬಿಯರಲ್ಲಿ ಕುಟುಂಬಸ್ಥರಿಗೆ ವೃದ್ಧಿ ಸೂತಕ ಅಥವಾ ಕ್ಷಯ ಸೂತಕ ಹನ್ನೆರಡು ದಿನ ಆಚರಣೆ ಇದೆ. ಹೊಲೆ ಇರುವ ಕುಟುಂಬಿಕರು ಹನ್ನೆರಡು ದಿನಗಳವರೆಗೆ ದೈವೀಕ ಸ್ಥಳಗಳಿಗೆ ಭೇಟಿ ನೀಡುವಂತಿಲ್ಲ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವುದು ಮತ್ತು ಮಂಗಲಕಾರ್ಯಗಳ ಆಚರಣೆಗೆ ಅವಕಾಶವಿಲ್ಲ. ಇತರ ಬೆಡಗಿನವರು, ವಾಡೇಕಾರರು ಹೊಲೆ ಇರುವವರ ಮನೆ ಪ್ರವೇಶ ಮಾಡುವುದಿಲ್ಲ. ಹೊಲೆ ಇರುವವರಲ್ಲಿ ಊಟ ತಿಂಡಿ ಮಾಡುವುದು, ಅವರ ಸಂಪರ್ಕ ಮಾಡುವುದು ಸಮಾಜದ ಸಂಪ್ರದಾಯ ಪ್ರಕಾರ ನಿಷಿದ್ಧ. ಆದುದರಿಂದ ಹೊಲೆ ಇರುವ ವೇಳೆಯಲ್ಲಿ ನೆಂಟಸ್ತಿಕೆಗೆ ಹೋಗುವುದು, ವಿವಾಹ ಪ್ರಸ್ತಾಪ, ತಾಂಬೂಲ ನಿಶ್ಚಿತಾರ್ಥ, ಧಾರೆ.... ಇತ್ಯಾದಿ ವಿವಾಹ ಸಂಬಂಧಿ ಯಾವುದೇ ಆಚರಣೆಗಳನ್ನು ಇಡುವುದಿಲ್ಲ. ವಿವಾಹದ ದಿನ ನಿಶ್ಚಯವಾಗಿ ಹೊಲೆ ಬರುವ ಸೂಚನೆ ಇದ್ದಲ್ಲಿ, ನಾಂದಿ ಪೂಜೆ ಮಾಡಿ ವಧೂವರರಿಗೆ ಮತ್ತು ಧಾರೆಯ ವಿಧಿಗಳಲ್ಲಿ ಭಾಗವಹಿಸುವವರಿಗೆ ನಾಂದಿ ಕಟ್ಟಿದರೆ ಸಂಪ್ರದಾಯ ಪ್ರಕಾರ ಮದುವೆ ಸಮಾರಂಭವನ್ನು ಮುಗಿಸಬಹುದು. ಆದರೆ, ಮದುವೆಯ ಅಡುಗೆ ಮತ್ತು ಉಳಿದ ಕಾರ್ಯಗಳಲ್ಲಿ ನಾಂದಿ ಕಟ್ಟಿರದ ಇತರ ಕುಟುಂಬಿಕರು ಬೆರೆಯುವಂತಿಲ್ಲ. ಹೊಲೆ ಇರುವ ಕುಟುಂಬಸ್ಥರು ಅಡುಗೆ ಮಾಡಿದರೆ ಆಗಮಿಸಿದ ನೆಂಟರಿಷ್ಟರಿಗೆ

ಮೈಲಿಗೆಯಾಗುತ್ತದೆ. ಆದುದರಿಂದ ಅವರು ಊಟ ಮಾಡುವುದಿಲ್ಲ. ಈ ರೀತಿ ಹೊಲೆ ಆಚರಣೆಯನ್ನು ಕುಡುಬಿಯರು ಕಟ್ಟುನಿಟ್ಟಿನಲ್ಲಿ ಪಾಲಿಸುವುದರಿಂದ ಮದುವೆ ದಿನವನ್ನು ಬಹಳ ಜಾಗರೂಕತೆಯಿಂದ ನಿಗದಿಗೊಳಿಸುತ್ತಾರೆ.

****

39. ಗೋವಾ ಕುಡುಬಿಯರ ಮದುವೆ ಸಂಪ್ರದಾಯಗಳು :

ಗೋವಾ ಕುಡುಬಿಯರ ಮದುವೆ ಸಂಪ್ರದಾಯಗಳಲ್ಲೂ ಬುಡಕಟ್ಟು ಜನಾಂಗದ ಲಕ್ಷಣಗಳು ಸಾಕಷ್ಟಿವೆ. ಒಂದೇ ಮೂಲದವರಾದರೂ, ಇವರ ಮತ್ತು ಕೊಡಿಯಾಲ್ ಕುಡುಬಿಯರ ಮದುವೆ ಸಂಪ್ರದಾಯಗಳಲ್ಲಿ ಹಲವು ಸಾಮ್ಯ ಮತ್ತು ವ್ಯತ್ಯಾಸಗಳು ಕಂಡುಬರುತ್ತವೆ. ಗೋವಾ ಕುಡುಬಿಯರು ಮದುವೆಯ ದಿನ, ತಿಥಿ, ನಕ್ಷತ್ರ ಮತ್ತು ಜಾತಕಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದಿಲ್ಲ. ಹೆಣ್ಣು, ಗಂಡಿಗಿಂತಲೂ ಪ್ರಾಯದಲ್ಲಿ ಚಿಕ್ಕವಳಾಗಿರಬೇಕು ಎಂಬ ನಿಯಮ ಕಟ್ಟುನಿಟ್ಟಾಗಿಲ್ಲ. ಹಲವು ಸಂದರ್ಭಗಳಲ್ಲಿ ಹೆಣ್ಣಿನ ಪ್ರಾಯ ಗಂಡಿಗಿಂತ ಜಾಸ್ತಿ ಇರಬಹುದು. ಮದುವೆ ವಿಧಿಗಳಿಗೆ ಪುರೋಹಿತರ ಉಪಸ್ಥಿತಿ ಇರಲೇಬೇಕು ಎಂಬ ನಿಯಮವಿಲ್ಲ. ಮದುವೆಯ ಧಾರೆ ಮತ್ತು ಸಂಭ್ರಮ ಗಂಡಿನ ಮನೆಯಲ್ಲಿಯೇ ಹೆಚ್ಚಾಗಿ ಜರಗುತ್ತದೆ. ಹೆಣ್ಣಿನ ತಾಯಿ ಧಾರೆಗೆ ಹೋಗುವುದಿಲ್ಲ. ಮದುವೆಯಲ್ಲಿ ಹೆಣ್ಣಿನ ಕಡೆಯವರಿಗೆ ಗಂಡಿನ ಕಡೆಯವರಿಗಿಂತ ಪ್ರಾಮುಖ್ಯತೆ ಕಡಿಮೆ. ಮಗಳಿಗೆ, ಹುಡುಗಿಯ ತಾಯಿ ಎಳೆಯ ಪ್ರಾಯದಲ್ಲೇ, ಮೈನರೆವ ಮೊದಲು ಅಥವಾ ಮೈನರೆದ ಸಂದರ್ಭದಲ್ಲಿ ಎರಡೆಳೆಯ ಒಂದು ಕರಿಮಣಿ ಕಟ್ಟಿರುತ್ತಾಳೆ ಹಾಗೂ ಕಾಲುಂಗುರಗಳನ್ನು ತೊಡಿಸಿರುತ್ತಾಳೆ. ಆದುದರಿಂದ ಗೋವಾ ಕುಡುಬಿ ಯುವತಿಯರಲ್ಲಿ ವಿವಾಹಿತರು ಯಾರು ? ಅವಿವಾಹಿತರು ಯಾರು ? ಎಂದು ಗುರುತಿಸುವುದು ಕಷ್ಟ.

ಈಗ ವಿವಾಹ ವಾಗ್ದಾನವಾದ ತಕ್ಷಣ ಕಾಲುಂಗುರ ತೊಡಿಸುತ್ತಾರೆ ಮತ್ತು ವಧು ಮದುವೆಗೆ ಹೊರಡುವ ವೇಳೆ ಮಾಂಗಲ್ಯ ಧಾರಣೆ ಮಾಡಿಸುತ್ತಾರೆ. ಇತ್ತೀಚೆಗೆ ಧಾರೆಯಾದ ಮೇಲೆ ಮದುವೆಯ ವೈದಿಕ ಸಂಪ್ರದಾಯ ರೀತಿ ನಾಲ್ಕೆಳೆಯ ಮಾಂಗಲ್ಯವನ್ನು ವರನೇ ವಧುವಿಗೆ ಕಟ್ಟುವ ಕ್ರಮ ಚಾಲ್ತಿಗೆ ಬಂದಿದೆ. ಆದರೆ ಈ ಮಾಂಗಲ್ಯದ ಮೌಲ್ಯವನ್ನು ತವರಿನಿಂದಲೇ ಭರಿಸಲಾಗುತ್ತದೆ. ಕೆಲವು ಜೆಡಗುಗಳಲ್ಲಿ ತನ್ನ ಸ್ವಂತ ಖರ್ಚಿನಲ್ಲಿ ವರನೇ ಮಾಂಗಲ್ಯ ಕಟ್ಟುವ ಕ್ರಮವೂ ಇದೆ. ಹಿಂದೆ ಹೆಣ್ಣು ಋತುಮತಿಯಾದ ಸಂದರ್ಭ ಗೇಂಟಕಟ್ಟಿ ಸೀರೆ ಉಡಿಸುವ ವಾಡಿಕೆ ಇತ್ತು. ಈಗ ಈ ಕ್ರಮ ಮತ್ತು ಋತುಮತಿಯಾದ ಸಂದರ್ಭ ತವರಿನವರು ಮಾಂಗಲ್ಯ ಕಟ್ಟುವ ಕ್ರಮ ಕಡಿಮೆಯಾಗುತ್ತಾ ಬಂದಿದೆ. ಮದುವೆಗೆ ಹುಡುಗಿಗೆ 8–10 ಪವನು ಚಿನ್ನ ತವರಿನವರು ಹಾಕುತ್ತಾರೆ. ವಧುವಿಗೆ ಹಾಕಿದ ಚಿನ್ನದ ಒಡವೆಗಳು ಮತ್ತು ಮಾಂಗಲ್ಯ ಗಂಡನಿಗೆ ಅಥವಾ ಗಂಡನ ಕಡೆಯವರಿಗೆ ಯಾವುದೇ ಕಾರಣಕ್ಕೆ ಪರಾಭಾರೆ ಮಾಡುವ ಅಧಿಕಾರವಿಲ್ಲ. ಆ ಒಡವೆಗಳು ಎರಡು ಮೂರು

ತಲೆಮಾರುಗಳ ನಂತರ ತವರಿಗೇ ಹಿಂದೆ ಸೇರಬೇಕು. ಒಡವೆಗಳು ತವರಿಗೆ ಸೇರಿದ ನಂತರ ಆ ಸಂಬಂಧಕ್ಕೆ ತೆರೆ ಬೀಳುತ್ತದೆ.

ಹಿಂದಿನ ಸಂಪ್ರದಾಯ ಪ್ರಕಾರ ಗೋವಾ ಕುಡುಬಿ ಹೆಣ್ಣು ರವಕೆ ಧರಿಸುವುದು ಮದುವೆಗೆ ಮಾತ್ರ. ಮದುವೆಗೆ ಮುಂಚಿತವಾಗಿಯಾಗಲೀ, ಆ ನಂತರವಾಗಲೀ ರವಕೆ ಧರಿಸಲು ಅವಕಾಶವಿರಲಿಲ್ಲ. ಧಾರೆಯನ್ನು ಕನ್ಯಾಪಿತೃಗಳು ಎರೆಯುವುದಿಲ್ಲ. ಗಂಡಿನ ತಂದೆಯೇ ಧಾರೆ ಎರೆಸಿಕೊಂಡು ವಧುವನ್ನು ಸೊಸೆಯಾಗಿ ಸ್ವೀಕರಿಸುತ್ತಾನೆ. ಹುಡುಗಿ ತಾಯಿಮನೆಯಿಂದ ಮದುವೆಗೆ ಹೊರಟು ಬರುವಾಗಲೇ ತವರಿನ ಬೆಡಗು ಮತ್ತು ಅಲ್ಲಿನ ಸರ್ವಸಂಬಂಧಗಳನ್ನು ಕಡಿದುಕೊಂಡು ಬರುತ್ತಾಳೆ. ಮದುವೆಯಾದ ದಿನ ವರನ ಮನೆಯಲ್ಲಿ ರಾತ್ರಿ ಮರುಸೇಸೆಯ ಸಂಪ್ರದಾಯವಿದೆ. ಮರುಸೇಸೆಯ ರಾತ್ರಿ ಓಕುಳಿ ನೀರು ಆಡುವಾಗ ಅದರಲ್ಲಿ ಜೀವಂತ ಕಾಣೆ ಮೀನು ಹಿಡಿಯುವ ಕ್ರಮವಿದೆ. ಉಂಗುರದಾಟದ ನಂತರ ವಧೂವರರು ಸೇರಿನಲ್ಲಿ ಅಕ್ಕಿಹಾಕಿ ಒಬ್ಬೊಬ್ಬರೂ ಪ್ರತ್ಯೇಕವಾಗಿ ಮೂರಾವರ್ತಿ ಅಳೆಯಬೇಕು. ವಧುವನ್ನು ವರನೇ ಕೈಹಿಡಿದು ಧಾರೆ ಮಂಟಪಕ್ಕೆ ಕರೆದುಕೊಂಡು ಬರಬೇಕು. ಮಂಟಪದಲ್ಲಿ ವಧೂವರರ ಆಸನದ ಅಡಿಯಲ್ಲಿ, ವರ ಕುಳಿತುಕೊಳ್ಳುವಲ್ಲಿ ಅಕ್ಕಿಮುಡಿ, ವಧು ಕುಳಿತುಕೊಳ್ಳುವಲ್ಲಿ ಭತ್ತದ ಬೀಜದ ಮುಡಿ ಇಟ್ಟು ವಧೂವರರನ್ನು ಕೂರಿಸುತ್ತಾರೆ. ವಧೂವರರಿಬ್ಬರಿಗೂ ಮದುವೆಯ ಮುಂಚಿನ ದಿನ ಎಣ್ಣೆ ಶಾಸ್ತ್ರ ಆಗಬೇಕು. ಬಲಗೊಡೆಯರ ತೈಲಾಭ್ಯಂಜನದ ಸಂಪ್ರದಾಯ ವಧೂವರರಿಬ್ಬರ ಕಡೆಯಲ್ಲೂ ಆಗಬೇಕು. ಈ ತೈಲಾಭ್ಯಂಜನ ವರನ ಮನೆಯಲ್ಲೇ ಮೊದಲು ಆಗಬೇಕು.

ಹಿಂದಿನ ಕಾಲದಲ್ಲಿ ಹೆಣ್ಣು ಋತುಮತಿಯಾದ ಸಂದರ್ಭ ಅವಳಿಗೆ ಸೀರೆಯನ್ನು ಗೇಂಟಿಕಟ್ಟಿ ಉಡಿಸುತ್ತಿದ್ದರು ಎಂಬುದನ್ನು ಈ ಹಿಂದೆ ಉಲ್ಲೇಖಿಸಲಾಗಿದೆ. ಮಧ್ಯಕಾಲೀನ ಸಂದರ್ಭದಲ್ಲಿ ಮದುವೆಯ ವೇಳೆ ಗೇಂಟಿಕಟ್ಟಿ ಸೀರೆ ಉಡಿಸುವ ಕ್ರಮ ಚಾಲ್ತಿಗೆ ಬಂತು. ಆ ದಿವಸವೇ ಆಕೆಗೆ ರವಕೆಯನ್ನೂ ತೊಡಿಸುತ್ತಿದ್ದರು. ನಂತರ ಆಕೆಯ ಜೀವಿತದಲ್ಲಿ ಎಂದೂ ರವಕೆ ಧರಿಸುವಂತಿರಲಿಲ್ಲ. ಕೊಡಿಯಾಲ್ ಕುಡುಬಿ ಸಂಪ್ರದಾಯ ಪ್ರಕಾರ ನವದಂಪತಿಗೆ 'ಪ್ರಸ್ತ' ಅಥವಾ ಲೈಂಗಿಕ ಸಂಪರ್ಕಕ್ಕೆ ಪ್ರಥಮ ಏಕಾದಶಿಯ ಗಡುವು ಇರುವಂತೆ ಗೋವಾ ಕುಡುಬಿ ನವದಂಪತಿಗೆ ವಂಡಾರು ಕಂಬಳಕ್ಕೆ ಸುತ್ತಕ್ಕಿ ಬಿತ್ತುವ ಪರ್ಯಂತ ಲೈಂಗಿಕ ಸಂಪರ್ಕಕ್ಕೆ ಅವಕಾಶವಿಲ್ಲ. ಇವು ಗೋವಾ ಕುಡುಬಿ ಮದುವೆ ಸಂಪ್ರದಾಯಗಳಲ್ಲಿ ನಿಷ್ಪನ್ನವಾಗುವ ಪ್ರಮುಖ ಘಟನಾವಳಿಗಳು.

ಇವರಲ್ಲಿ ವ್ಯಭಿಚಾರಿಗೆ ತುಂಬಾ ಕುತೂಹಲಕರ ಶಿಕ್ಷೆಯಿದೆ. ವ್ಯಭಿಚಾರಿಯ ತಲೆಯನ್ನು ನುಣ್ಣಗೆ ಬೋಳಿಸಿ, ಮೀಸೆಯನ್ನು ತೆಗೆಸಲಾಗುತ್ತದೆ. ನಂತರ ಅವನನ್ನು ಹಳ್ಳದಲ್ಲಿ ನಿಲ್ಲಿಸಿ ಅವನ ತಲೆಯ ಮೇಲೆ ಊಟದ ಎಂಜಲೆಲೆಯನ್ನು ಎಸೆಯುತ್ತಾರೆ. ಮುಖ್ಯ ತೀರ್ಪುದಾರನು ಆರ್ಥಿಕರೂಪದ ದಂಡವನ್ನೂ ವಿಧಿಸುತ್ತಾನೆ. ಸ್ತ್ರೀಯೊಬ್ಬಳು ತನ್ನ ವ್ಯಭಿಚಾರದ ತಪ್ಪನ್ನು

ಒಪ್ಪಿಕೊಳ್ಳದಿದ್ದರೆ ಆಕೆಯ ಹೆಗಲ ಮೇಲೆ ಕಬ್ಬಿಣದ ಸಲಾಕೆಯಿಟ್ಟು ಬಿಸಿಲಲ್ಲಿ ನಿಲ್ಲಿಸಲಾಗುತ್ತಿತ್ತು ಅಂತ ತಿಳಿದು ಬರುತ್ತದೆ. (ಈಶ್ವರ ಎಸ್. ಜೋಶಿ 1983, ದಕ್ಷಿಣ ಕನ್ನಡದ ಕುಡುಬಿಯರು ಪು. 9)

ಗೋವಾ ಕುಡುಬಿಯರಲ್ಲಿಯೂ ಹುಡುಗ ಅಥವಾ ಹುಡುಗಿಗೆ ತಮ್ಮ ಜೀವನ ಸಂಗಾತಿಯನ್ನು ಹುಡುಕಿ ಆಯ್ಕೆ ಮಾಡುವ ಸ್ವಾತಂತ್ರ್ಯವಿಲ್ಲ. ಮದುವೆ ಆಗುವಲ್ಲಿವರೆಗೆ ಹುಡುಗ ಹುಡುಗಿ ಪರಸ್ಪರ ನೋಡುವ, ಭೇಟಿಯಾಗುವ ಅವಕಾಶವೂ ಇಲ್ಲ. ಹಿರಿಯರು ಮಾಡಿದ ನೆಂಟಸ್ತಿಕೆಯನ್ನು ಹುಡುಗನಾಗಲೀ, ಹುಡುಗಿಯಾಗಲೀ ಒಪ್ಪಬೇಕು. ಇವರಲ್ಲಿಯೂ ಪಿತೃಪ್ರಧಾನ ಸಂಸ್ಕೃತಿ ಪಾಲಿಸುತ್ತಾರೆ ಮತ್ತು ಸೋದರ ಮಾವನ ಮಗಳನ್ನು ಮದುವೆಯಾಗುವುದು ಸಾಂಪ್ರದಾಯಿಕ ಹಕ್ಕು. ಮಹಿಳೆಯರಿಗೆ ನೆಂಟಸ್ತಿಕೆಯಲ್ಲಿ ಅಷ್ಟು ಪ್ರಾಮುಖ್ಯತೆ ಇಲ್ಲ. ಸೋದರಿಕೆಯ ನೆಂಟಸ್ತಿಕೆ ಆದಲ್ಲಿ, ನೆಂಟಸ್ತಿಕೆಗೆ ಹೋಗುವಾಗ ಹುಡುಗನ ತಾಯಿಯೂ ಹೋಗುವ ಅವಕಾಶವಿದೆ. ಎಲ್ಲಾ ಸಂದರ್ಭಗಳಲ್ಲೂ ಹೊರಬೆಡಗಿನ, ಅಂದರೆ ತಂದೆಯ ಬೆಡಗಿನ ಹೊರತಾದ ಇತರ ಬೆಡಗಿನ ಹೆಣ್ಣನ್ನೇ ಆರಿಸಲಾಗುತ್ತದೆ. ದಾಯಾದಿ ಬೆಡಗುಗಳ ನಡುವೆ ನೆಂಟಸ್ತಿಕೆ ನಡೆಯುವುದಿಲ್ಲ.

ಇಂತಹದೇ ಕಡೆ ಹೆಣ್ಣು ಇದೆ ಅಂತ ತಿಳಿದಾಗ ಗಂಡಿನ ಮಾತಾಪಿತರು ತಮ್ಮ ಮಗನಿಗೆ ಆ ಹುಡುಗಿ ಸರಿಜೋಡಿಯಾಗಬಹುದೇ? ಅಥವಾ ತಮ್ಮ ಹುಡುಗನಿಗೆ ಹುಡುಗಿಯ ಕಡೆಯವರು ಹೆಣ್ಣು ನೀಡಲು ಒಪ್ಪಬಹುದೇ? ಎಂದು ಪ್ರಥಮವಾಗಿ ಒಂದು ತೀರ್ಮಾನಕ್ಕೆ ಬರುತ್ತಾರೆ. ನೆಂಟಸ್ತಿಕೆಯ ಬಗ್ಗೆ ವಿವರಗಳನ್ನು ಕಲೆಹಾಕಲು ಕೆಲವೊಮ್ಮೆ ವ್ಯಾವಹಾರಿಕವಾಗಿ ನೆಂಟರಲ್ಲಿ ಹೋಗಿ, ಹೆಣ್ಣಿನ ಕಡೆಯವರೂ ಗಂಡಿನಲ್ಲಿಗೆ ಬಂದು ಒಬ್ಬರಿಗೊಬ್ಬರ ಮಾಹಿತಿಗಳನ್ನು ಪಡೆದುಕೊಳ್ಳುತ್ತಾರೆ. ಹೆಣ್ಣು ಸುಮಾರಾಗಿ ದೈಹಿಕ, ಮಾನಸಿಕ, ರೂಪಲಕ್ಷಣ, ಗುಣಸ್ವಭಾವಗಳಲ್ಲಿ ಸರಿಯಾಗಿದ್ದಾಳೆಯೇ? ದುಡಿದು ಜೀವನ ಸಾಗಿಸಬಲ್ಲಳೇ? ಎನ್ನುವ ಸಂಗತಿಗಳನ್ನು ಮನವರಿಕೆ ಮಾಡಿಕೊಳ್ಳುತ್ತಾರೆ. ಸಂಬಂಧಕ್ಕೆ ಜಾತಕ, ಕೂಡಾವಳಿ, ಪ್ರಸಾದ ನೋಡುವ ಕ್ರಮ ಮತ್ತು ಹೆಣ್ಣಿನ ಪ್ರಾಯ ಪರಿಗಣನೆ ಇರುವುದಾದರೂ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದು ಕಾಣುವುದಿಲ್ಲ.

ಹೆಣ್ಣು ಆದೀತು ಎಂದು ಮನದಟ್ಟಾದಂತೆ, ಗಂಡಿನ ತಂದೆ, ಸೋದರ ಮಾವ, ವಾಡೆ ಬುಧವಂತ (ಗುರಿಕಾರ), ಮೂಲ ಮನೆಯ ಹಿರಿಯ ಅಥವಾ ಕುಟುಂಬದ ಹಿರಿವ್ಯಕ್ತಿ, ಅಜ್ಜ ಅಥವಾ ಯಾರಾದರೊಬ್ಬ ಬಂಧು.... ಹೀಗೆ ಐವರು ಕೂಡಿ ಅಧಿಕೃತ ರೀತಿಯಲ್ಲಿ ಹೆಣ್ಣು ಕೇಳಲು ತೆರಳುತ್ತಾರೆ. ನೆಂಟಸ್ತಿಕೆಯ ಪ್ರಥಮ ಪ್ರಸ್ತಾಪ ಹೆಣ್ಣಿನ ಮನೆಯಲ್ಲಿ ಆಗುತ್ತದೆ. ಎರಡೂ ವಾಡೆಗಳ ಬುಧವಂತರ ಸಮ್ಮುಖ ನೆಂಟಸ್ತಿಕೆಯ ವಾಗ್ದಾನವಾಗುತ್ತದೆ. ಮಾತುಕತೆಯಲ್ಲಿ ವಧುವಿಗೆ ತೆರ (ವಧುದಕ್ಷಿಣೆ / ಕನ್ಯಾಶುಲ್ಕ) ನೀಡುವ ವಿಷಯ ಪ್ರಮುಖವಾಗಿರುತ್ತದೆ. ಹುಡುಗನೇ ಹುಡುಗಿಗೆ ಆರ್ಥಿಕ ಅಥವಾ ವಸ್ತುರೂಪದಲ್ಲಿ ಕನ್ಯಾಶುಲ್ಕ ನೀಡುವ ಕ್ರಮವಿದೆ. ಹಿಂದಿನ ಕಾಲದಲ್ಲಿ ಒಂದು ವರಹ (ನಾಲ್ಕು ರೂಪಾಯಿ)ಗಳನ್ನು ಹುಡುಗ, ಹುಡುಗಿಗೆ ತೆರ ನೀಡಬೇಕಾಗಿತ್ತು. ಈಗ

ಸಾಮಾನ್ಯವಾಗಿ ಐವತ್ತರಿಂದ ನೂರು ರೂಪಾಯಿ ತೆರ ಚಾಲ್ತಿಯಲ್ಲಿದೆ. ವಸ್ತುರೂಪದಲ್ಲಿ ಸೀರೆ, ಬಳೆ, ಛತ್ರಿ, ಚಿನ್ನ, ಸಿಂಧೂರ ಕುಂಕುಮ, ಶೃಂಗಾರ ಸಾಧನಗಳನ್ನು ಹುಡುಗಿಗೆ ಹುಡುಗ ತೆರ ರೂಪದಲ್ಲಿ ಕೊಡುವ ಸಂಪ್ರದಾಯವಿದೆ. ಆರ್ಥಿಕವಾಗಿ ಸಶಕ್ತರಲ್ಲದವರು ಒಂದು ಮುಡಿ ಅಕ್ಕಿ, ಎರಡು ಡಬ್ಬಿ ಬೆಲ್ಲ, ಸಾವಿರ ಅಡಿಕೆ – ಈ ರೀತಿಯ ತೆರ ನೀಡುವ ಕ್ರಮ ಕೆಲವು ಕಡೆ ಚಾಲ್ತಿಯಲ್ಲಿದೆ.

ಹೆಣ್ಣಿನ ಮನೆಯಲ್ಲಿ ವಿವಾಹ ವಾಗ್ದಾನವಾದ ದಿನವೇ ದ್ವಿಪಕ್ಷೀಯರಿಗೂ ಅನುಕೂಲವಾಗುವ ದಿನವನ್ನು ಮದುವೆಗೆ ನಿಶ್ಚಯಿಸುತ್ತಾರೆ. ಮದುವೆ ನಿಶ್ಚಯವಾದ ಲೆಕ್ಕದಲ್ಲಿ ಇಲ್ಲಿ ನೆಂಟರಿಗೆ ಮತ್ತು ನೆರೆದ ಎಲ್ಲರಿಗೆ ಭೋಜನವಿರುತ್ತದೆ. ಇದೇ ಪ್ರಕಾರ ಹುಡುಗನ ಮನೆಯಲ್ಲೂ ಭೋಜನ ವ್ಯವಸ್ಥೆ ಮಾಡುತ್ತಾರೆ. ಆದರೆ ಇದು ಕಡ್ಡಾಯವೇನಲ್ಲ. ಹೆಣ್ಣಿನ ಮನೆಯಲ್ಲಿ ಭೋಜನ ಏರ್ಪಡಿಸಿರುವುದಕ್ಕೆ ಗಂಡಿನ ಕಡೆಯವರೂ ಭೋಜನ ಏರ್ಪಡಿಸುತ್ತಾರೆ ಹೊರತು ಮದುವೆಯ ಮಾತುಕತೆಗಳೆಲ್ಲಾ ಹೆಣ್ಣಿನ ಮನೆಯಲ್ಲೇ ಮುಗಿದಿರುತ್ತದೆ. ಗೋವಾ ಕುಡುಬಿಯರಲ್ಲಿ ಕೊಡಿಯಾಲ್ ಕುಡುಬಿಯರ ಪ್ರಕಾರ ತಾಂಬೂಲ ನಿಶ್ಚಿತಾರ್ಥ ಅಗತ್ಯವಿಲ್ಲ. ವಿವಾಹ ನಿಶ್ಚಯವಾದುದಕ್ಕೆ ವೀಳ್ಯವಟ್ಟಿ ಬದಲಾಯಿಸುವ ಕ್ರಮವೂ ಇಲ್ಲ. ಮದುವೆ ಬೇಶ (ವೃಷಭ) ತಿಂಗಳ ನಂತರದ ದಿನಗಳಲ್ಲಿ ಆಗುತ್ತದೆ. ಇತರ ವೇಳೆ ಮದುವೆಯಾಗುವುದು ವಿರಳ. ಕುಟುಂಬದಲ್ಲಿ ಹಿರಿಕವಲಿನವರ ಮದುವೆ ಬಾಕಿ ಇದ್ದಲ್ಲಿ ಕಿರಿಕವಲಿನಲ್ಲಿ ಮದುವೆ ಮಾಡಲು ತಯಾರಾಗುವುದು ಅಪರೂಪ.

ಗೋವಾ ಕುಡುಬಿಯರಲ್ಲಿ ಮದುವೆ ಕಾರ್ಯಗಳನ್ನು ಸುಧಾರಿಸಲು ಒಬ್ಬನನ್ನು ನೇಮಕ ಮಾಡುತ್ತಾರೆ. ಇವನಿಗೆ 'ರಾಯಭಾರಿ' ಎಂದು ಹೆಸರು. ರಾಯಭಾರಿಯನ್ನು ಗಂಡಿನ ಕಡೆಯವರು ನೇಮಕ ಮಾಡುತ್ತಾರೆ. ವಿವಾಹದ ಮಾತುಕತೆ, ವಾಗ್ದಾನ... ಮುಂತಾದ ಎಲ್ಲಾ ಕಾರ್ಯಗಳು ರಾಯಭಾರಿಯ ಉಪಸ್ಥಿತಿ, ಮಾರ್ಗದರ್ಶನದಂತೆ ಆಗತಕ್ಕದ್ದು. ಈ ರಾಯಭಾರಿ ಹೊರಗೋತ್ರದವನು ಆಗಿರಬೇಕು. ಒಬ್ಬ ಒಂದು ವರ್ಷ ಮಾತ್ರ ರಾಯಭಾರಿ ಆಗಿರಬಹುದು. ಮದುವೆ ನಿಶ್ಚಯವಾದ ಬೆನ್ನಲ್ಲೇ ರಾಯಭಾರಿಯ ನೇಮಕವೂ ಆಗುತ್ತದೆ.

ಗೋವಾ ಕುಡುಬಿಯರ ಮದುವೆಯೂ ಐದು ದಿನ ಜರಗುತ್ತದೆ. ಪ್ರಥಮ ದಿನ ಚಪ್ಪರ ಶಾಸ್ತ್ರದಿಂದ ಮದುವೆ ಸಂಭ್ರಮ ಪ್ರಾರಂಭವಾಗುತ್ತದೆ. ವಾಡೇಕಾರರು ಮತ್ತು ಆಪ್ತೇಷ್ಟರು ಸೇರಿ ಚಪ್ಪರ ಹಾಕುತ್ತಾರೆ. ಚಪ್ಪರಕ್ಕೆ ವಾಡೆಯ ಹತ್ತು ಸಮಸ್ತರು ಬಂದು ತೋರಣ ಏರಿಸಬೇಕು. ಚಪ್ಪರದೂಟದಂದು ಮಧ್ಯಾಹ್ನ ದೇವಕಾರ್ಯ ಆಗುವ ಮೊದಲು ಬಳೆಗಾರ ಬಂದು ವಧುವಿಗೆ ಕಂಕಣಧಾರಣೆ ಮಾಡುವ ಕ್ರಮವಿದೆ. ಬಳೆಗಾರ ಬಂದರೆ ಅವನಿಗೆ ತೆಂಗಿನಕಾಯಿ ಪಡಿ ಸಲ್ಲಿಸುತ್ತಾರೆ. ಕ್ಷೌರಿಕ ಬಂದು ವರನಿಗೆ ಕ್ಷೌರ ಮಾಡಿ ಪನ್ನೆ ಶಾಸ್ತ್ರ ಮಾಡುತ್ತಾನೆ. ಅವನಿಗೆ ಅಕ್ಕಿ, ತೆಂಗಿನಕಾಯಿ, ವೀಳ್ಯವಟ್ಟಿ, ಶಲ್ಯ, ಕಾಣಿಕೆಗಳನ್ನು ಕುಡಿಬಾಳೆ ಎಲೆಯಲ್ಲಿಟ್ಟು ಪಡಿ ನೀಡುತ್ತಾರೆ. ಪನ್ನೆ ಶಾಸ್ತ್ರದ ಸಮಯ ಸುವಾಸಿನಿಯರು

ಸಂಪ್ರದಾಯದ ಹಾಡು ಹಾಡುತ್ತಾರೆ. ಆ ದಿನ ಮಧ್ಯಾಹ್ನ ಆಗುವ ಊಟಕ್ಕೆ 'ಎಣ್ಣೆಯೂಟ' (ತೇಲಾ ಜೆವ್ಣೋಣ್) ಅಂತ ಹೆಸರು. ಈ ಊಟಕ್ಕೆ 'ಸೆಪ್ರ' ಎಂಬ ತಿಂಡಿಯನ್ನು ಖಡ್ಡಾಯವಾಗಿ ಮಾಡಬೇಕು. ರಾತ್ರಿ ಚಪ್ಪರದೂಟ ನಡೆಯುತ್ತದೆ. ಚಪ್ಪರದೂಟಕ್ಕೆ ಬರುವವರು ವೀಳ್ಯಪಟ್ಟಿಯೊಂದಿಗೆ ಬರುತ್ತಾರೆ. ಅವರ ಆಗಮನದ ಸಮಯ ಯಜಮಾನ ಕಾಲು ತೊಳೆಯಲು ನೀರು ನೀಡಿ ಕೈಮುಗಿದು ಸ್ವಾಗತಿಸಬೇಕು. ಸ್ವಾಗತಿಸಿದವರಿಗೆ ಬಂದವರು ವೀಳ್ಯಪಟ್ಟಿ ನೀಡಿ ಪ್ರತಿ ವಂದಿಸುತ್ತಾರೆ. ಚಪ್ಪರದೂಟ ಆಗಿ ಆಗಮಿಸಿದವರು ಹೊರಡುವಾಗ ಮನೆಯ ಯಜಮಾನ ಅವರಿಗೆ ವೀಳ್ಯಪಟ್ಟಿ ನೀಡಿ ವಂದಿಸಿ, ಮರುದಿನ ಬಂದು ಮದುವೆ ಸುಧಾರಿಸಿ ಕೊಡುವಂತೆ ವಿನಂತಿ ಮಾಡುತ್ತಾನೆ. ಈ ಕ್ರಮ ವಧೂವರರ ಎರಡೂ ಮನೆಗಳಲ್ಲಿ ಜರಗುತ್ತದೆ.

ವಧುವಿನ ಮನೆಯಲ್ಲಿ ಚಪ್ಪರದೂಟ ಮುಗಿದ ನಂತರ ಸುಮಾರು ಎರಡು ಗಂಟೆ ರಾತ್ರಿಗೆ ವರನ ಕಡೆಯಿಂದ ವರನ ತಂದೆ, ರಾಯಭಾರಿ, ವಾಡೆ ಬುಧವಂತ, ಇಬ್ಬರು ಹಿರಿಯರು– ಹೀಗೆ ಬೆಸಸಂಖ್ಯೆಯಲ್ಲಿ ಐದು ಸೀರೆ, ಮಾಂಗಲ್ಯ (ಕಟ್ ಕರಿಮಣಿ–ಇದ್ದರೆ?) ವೀಳ್ಯಪಟ್ಟಿ, ತಂಬಾಕು, ಕಿವಿಯೋಲೆ, ಹೂವು ಕುಂಕುಮದ ತಳಿಗೆ ಹಿಡಿದುಕೊಂಡು ಬರುತ್ತಾರೆ. ಇದಕ್ಕೆ 'ನಂಜಿಕೆಗ ಹೋಗುವುದು' ಅಂತ ಹೆಸರು. ವಧುವಿನ ಕಡೆಯವರು ಅವರನ್ನು ಸ್ವಾಗತಿಸಿ, ಅವರು ತಂದಿರುವ ತಳಿಗೆ ಸ್ವೀಕರಿಸಿದರೆ ಸಂಬಂಧ ಧೃಡಗೊಳಿಸಿದಂತೆ. ಬಂದ ನೆಂಟರಿಗೆ ಭೋಜನವಿರುತ್ತದೆ. ಅವರಲ್ಲಿ ರಾಯಭಾರಿ ಅವಶ್ಯವಾಗಿ ಉಪಸ್ಥಿತನಿರಬೇಕು. ಮರುದಿನ ಬೆಳಿಗ್ಗೆ ವಧು ಹೊರಡುವಾಗಿನ ಆಚರಣೆಗಳು ರಾಯಭಾರಿಯ ಉಪಸ್ಥಿತಿಯಲ್ಲಿ ಜರಗಬೇಕು. ಹಾಗಾಗಿ ಆಗಮಿಸಿದ ವರನ ಕಡೆಯ ನೆಂಟರು ಆ ರಾತ್ರಿ ಅಲ್ಲಿಯೇ ವಿರಮಿಸಬೇಕು.

ಆ ಮುಂಜಾವ ವರನ ಮನೆಯಲ್ಲಿ ವರನಿಗೆ, ವಧುವಿನ ಮನೆಯಲ್ಲಿ ವಧುವಿಗೆ ತೈಲಶಾಸ್ತ್ರ (ಎಣ್ಣೆ ಶಾಸ್ತ್ರ) ಆಗಬೇಕು. ಈ ಎಣ್ಣೆ ಹಚ್ಚುವ ಶಾಸ್ತ್ರ ವರನಿಗೆ ಮೊದಲ ಮತ್ತು ವಧುವಿಗೆ ನಂತರದ ವೇಳೆಯಲ್ಲಿ ಆಗಬೇಕು. ಈ 'ವೇಳೆಯ' ತೀರ್ಮಾನ ಹೆಣ್ಣಿನ ಮನೆಯಲ್ಲಿ ವಿವಾಹ ವಾಗ್ದಾನ ಸಮಯದಲ್ಲೇ ನಿಶ್ಚಿತವಾಗಿರುತ್ತದೆ. ಎಣ್ಣೆ ಶಾಸ್ತ್ರದ ಸಮಯ ವಧೂವರರ ಕೈಯಲ್ಲಿ ವೀಳ್ಯಪಟ್ಟಿ ಇರಬೇಕು. ಈ ವೀಳ್ಯಪಟ್ಟಿಗಳು ಮದುವೆಯ ಚಡಂಗಗಳು ಮುಗಿವವರೆಗೂ ವಧೂವರರ ಕೈಯಲ್ಲಿ ಇರಬೇಕು. ತೈಲ ಶಾಸ್ತ್ರ ಕುಟುಂಬದ ದೇವರ ಮನೆ ಅಥವಾ ಹಿರಿಮನೆಯಲ್ಲೇ ಆಗತಕ್ಕದ್ದು.

ಮದುವೆಯ ದಿನ ಬೆಳಿಗ್ಗೆ ವಧುವಿಗೆ, ವರನ ಕಡೆಯವರು ತಂದ ಸೀರೆ ಉಡಿಸಿ, ರವಕೆ ತೊಡಿಸಿ, ಮೇಲ್ಗಡೆ ಒಂದು ಶಾಲು ಹೊದಿಸಿ ಅಲಂಕೃತಳಾಗಿಸುತ್ತಾರೆ. ಗೋವಾ ಕುಡುಬಿ ಹೆಣ್ಣಿಗೆ ಈ ದಿನ ತೊಟ್ಟ ರವಕೆಯೇ ಪ್ರಥಮ ಮತ್ತು ಕೊನೆ. ಧಾರೆಯ ದಿನ ಹೊರತು ಆಕೆಯ ಜೀವನದಲ್ಲಿ ಮತ್ತೆಂದೂ ಆಕೆ ರವಕೆ ಧರಿಸುವಂತಿಲ್ಲ. ಗೋವಾ ಕುಡುಬಿಯರ ಮಹಿಳೆಯೊಬ್ಬಳು ಇತರ ಸಂದರ್ಭ ರವಕೆ ಧರಿಸಿದ

ನ್ಯಾಯವೊಂದು 1969ನೇ ವರ್ಷ ಕುಂದಾಪುರ ನ್ಯಾಯಾಲಯದಲ್ಲಿ ವ್ಯಾಖ್ಯಾನವಾಗಿ, ಗೋವಾ ಕುಡುಬಿ ಮಹಿಳೆಯರು ಬೇರೆ ಸಂದರ್ಭಗಳಲ್ಲಿ ರವಕೆ ತೊಡಬಹುದು ಎಂದು ತೀರ್ಪಾಗಿರುವುದು ತಿಳಿದು ಬರುತ್ತದೆ. ವಧುವಿನ ತಲೆಬಾಚಿ ಹೂವು ಮುಡಿಸಿ ಅಲಂಕರಿಸುತ್ತಾರೆ. ಇದರಲ್ಲಿ ಅಬ್ಬಲಿಗೆ (ಕನಕಾಂಬರ) ಹೂವು ಇರಲೇಬೇಕು. ಕುಡುಬಿಯರಲ್ಲಿ ಅಬ್ಬಲಿಗೆ ಹೂವು ಮುಡಿಯುವಿಕೆ ಮುತ್ತೈದೆತನದ ಸಂಕೇತ. ಅವಿವಾಹಿತ ತರುಣಿಯರಿಗೆ ಅಬ್ಬಲಿಗೆ ಮುಡಿಯಲು ಧಾರ್ಮಿಕ ನಿರ್ಬಂಧವಿದೆ. ಬಾಸಿಂಗ ಮತ್ತು ಕರಿಮಣಿಯನ್ನು ತೊಡಿಸಿ ವಧುವನ್ನು ತಯಾರು ಮಾಡುತ್ತಾರೆ. ಗೋವಾ ಕುಡುಬಿ ಹೆಣ್ಣಿಗೆ ಋತುಮತಿಯಾದ ಸಂದರ್ಭ ಕಟ್ಟಿದ ಕರಿಮಣಿ ಮತ್ತು ಮದುವೆಯ ಈ ಸಂದರ್ಭ ಕಟ್ಟಿದ ಕರಿಮಣಿ – ಹೀಗೆ ಎರಡು ಕರಿಮಣಿ ಇರುವುದು ವಿಶೇಷ. ಹಿಂದಿನ ಕಾಲದಲ್ಲಿ ಇವರ ಮದುವೆಗಳೂ ಗೋಧೂಳಿ ಲಗ್ನದಲ್ಲಿಯೇ ಜರಗುತ್ತಿದ್ದುವು. ಈಗ ಹೆಚ್ಚಿನೆಲ್ಲಾ ಮದುವೆಗಳೂ ಹಗಲು ಹೊತ್ತಲ್ಲೇ ಜರಗುತ್ತವೆ.

ಅಲಂಕೃತಳಾದ ವಧು ದೇವರ ಎದುರು ಮಣೆಯ ಮೇಲಿಟ್ಟ ದೀಪಕ್ಕೆ ವಂದಿಸಿ, ಉರಿಯುತ್ತಿರುವ ಆ ದೀಪವನ್ನು ನಂದಿಸಿ ಹೊರಡುತ್ತಾಳೆ. ಈ ನಂತರ ಯಾವತ್ತೂ ಆಕೆಗೆ ತಾಯಿಮನೆಯಲ್ಲಿ ದೀಪ ಹಚ್ಚುವ ಅಧಿಕಾರವಿರುವುದಿಲ್ಲ. ವಧುವು ಮನೆಯ ಮುಖ್ಯಬಾಗಿಲ ಹತ್ತಿರ ಬಂದಾಗ ಒಳಗಿಂದ ವಧು ಮತ್ತಾಕೆಯ ತಂದೆ, ಹೊಸ್ತಿಲ ಹೊರಗಿಂದ ವರನ ತಂದೆ, ರಾಯಭಾರಿ ಮತ್ತಿತರ ನೆಂಟರಿಷ್ಟರು ನಿಲ್ಲುತ್ತಾರೆ. ವರನ ತಂದೆ ವಧುವಿನ ಕೈಯ ಒಂದು ಬಳೆಯನ್ನು ಒಡೆಯುತ್ತಾನೆ. ವಧುವಿನ ಒಂದು ತಲೆಗೂದಲನ್ನು ಕೀಳುತ್ತಾನೆ. ಒಂದು ವೀಳ್ಯದೆಲೆ ಉದ್ದಕ್ಕೆ ಸೀಳಿ, ಅದರ ಒಂದು ಸೀಳನ್ನು ಮನೆಯೊಳಗೆ ಎಸೆಯುತ್ತಾನೆ. ಒಂದು ನಾಣ್ಯವನ್ನು ಎರಡಾಗಿ ತುಂಡರಿಸುತ್ತಾನೆ. ಈ ವಸ್ತುಗಳನ್ನು ಅಡಿಯಲ್ಲೊಂದು ಸೀರೆ ಹಿಡಿದು ವಧುವಿನ ಸಹೋದರರು ಸಂಗ್ರಹಿಸಿ ತೆಂಗಿನ ಬುಡಕ್ಕೆ ಅಥವಾ ಹಲಸಿನ ಬುಡಕ್ಕೆ ಎಸೆಯುತ್ತಾರೆ. ಕೆಲವು ಕಡೆ ಹೊಸ್ತಿಲಲ್ಲಿಟ್ಟ ದೀಪವನ್ನು ನಂದಿಸಿ ವಧು ಹೊಸ್ತಿಲು ದಾಟುತ್ತಾಳೆ. ಈ ಎಲ್ಲಾ ಸಂಪ್ರದಾಯಗಳು ಇತರ ಸಮುದಾಯಗಳಲ್ಲಿ ಅಮಂಗಲಕಾರಕವಾದರೆ ಗೋವಾ ಕುಡುಬಿಯರಲ್ಲಿ ಇದು ವಧುವಿನ ಗೋತ್ರ ವಿಭಜಿಸುವ ಶಾಸ್ತ್ರವಾಗಿ ಆಚರಿಸಲ್ಪಡುತ್ತದೆ. ಈ ನಂತರ ಆ ವಧುವಿಗೆ ತವರಿನ ಕೌಟುಂಬಿಕ ಸಂಬಂಧ, ಹೊಲೆ ಸೂತಕ, ಆಸ್ತಿ ಬದುಕಿನ ಯಾವತ್ತೂ ಅಧಿಕಾರಗಳು ಇರುವುದಿಲ್ಲ. ಮಾತಾಪಿತರ ಸರ್ವಸಂಬಂಧಗಳನ್ನು ಕಡಿದುಕೊಂಡು ವಧು ಹೊರಡುತ್ತಾಳೆ.

ವರನ ತಂದೆ ವಧುವನ್ನು ಕರೆದುಕೊಂಡು ಹೋಗಲು ಬರುವುದು ಮತ್ತು ವಧುವಿನ ಗೋತ್ರ ಕಡಿವ, ಮೇಲೆ ವಿವರಿಸಿದ ಶಾಸ್ತ್ರ ಮಾಡಿ ವಧುವನ್ನು ಕರೆದುಕೊಂಡು ಹೋಗುವುದು ಗೋವಾ ಕುಡುಬಿಯರ ವಿಶೇಷ ಸಂಪ್ರದಾಯ. ವಧುವಿನ ತಾಯಿ, ಮಗಳ ದಿಬ್ಬಣದೊಂದಿಗೆ ಅಥವಾ ಮದುವೆಗೆ ಹೋಗುವಂತಿಲ್ಲ. ಧಾರೆಯಲ್ಲಿ ಭಾಗವಹಿಸುವಂತೆಯೂ ಇಲ್ಲ. ವಧುವಿನ ತಂದೆ, ರಾಯಭಾರಿ, ವರನ ತಂದೆ, ವಿಪ್ರ

ಕರೆದುಕೊಂಡು ಹೋಗಲು ಬಂದ ನೆಂಟರು ಮತ್ತು ಹೆಣ್ಣಿನ ಕಡೆಯ ಇತರರು ವಧುವಿನೊಂದಿಗೆ ವರನಲ್ಲಿಗೆ ಹೊರಡುತ್ತಾರೆ. ವರನ ಚಪ್ಪರ ಸಮೀಪಿಸಲು ಸ್ವಲ್ಪ ದೂರವಿರುವಾಗ 'ನಾವು ಬಂದು ತಲುಪಿದೆವು' ಎಂದು ಹೇಳಿ ಕಳುಹಿಸುತ್ತಾರೆ. ಸುದ್ದಿ ತಲುಪಿದಂತೆ ವರನ ಕಡೆಯವರು ಬಂದು ದಿಬ್ಬಣಿಗರಿಗೆ ಬೆಲ್ಲ ನೀರು ಕೊಟ್ಟು ಸತ್ಕರಿಸುತ್ತಾರೆ. ಕೊಡಿಯಾಲ್ ಕುಡುಬಿಯರಲ್ಲಿ ಚಪ್ಪರಕ್ಕೆ ತಾಗುವಂತೆ ಎರಡು ಕಂಭಗಳನ್ನು ಆನಿಸಿ ತೋರಣವಿಡುತ್ತಾರೆ. ಆದರೆ, ಗೋವಾ ಕುಡುಬಿಯರು ತಮ್ಮ ಹಿಂದಿನ ಕ್ರಮಪ್ರಕಾರ ಚಪ್ಪರದ ಎದುರು ಸ್ವಲ್ಪ ದೂರದಲ್ಲಿ ನೆಲದಲ್ಲಿ ಕಂಭನೆಟ್ಟು ತೋರಣ (ಎದುರು ತೋರಣ)ವಿಡುತ್ತಿದ್ದರು ಅಂತ ತಿಳಿದುಬರುತ್ತದೆ. ಈಗ ಚಪ್ಪರಕ್ಕಾನಿಸಿ ತೋರಣವಿಡುವ ಕ್ರಮವೇ ಚಾಲ್ತಿಯಲ್ಲಿದೆ. ತೋರಣದ ಹತ್ತಿರ ಬಂದ ದಿಬ್ಬಣಿಗರಿಗೆ ಪ್ರತಿಯೋರ್ವರಿಗೂ ಯಜಮಾನ ಕಾಲು ತೊಳೆಯಲು ನೀರುಕೊಟ್ಟು, ವಂದಿಸಿ ಸ್ವಾಗತಿಸುತ್ತಾನೆ. ವಧು ತೋರಣದೆದುರು ಬಂದಾಗ ಮಡಿವಾಳ್ತಿ ನಡೆಮಡಿಯನ್ನು ನೆಲಕ್ಕೆ ಹರಡುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶ ಅಂದರೆ, ಕೊಡಿಯಾಲ್ ಕುಡುಬಿಯರಲ್ಲಿ ವರನ ಚಪ್ಪರ ಪ್ರವೇಶದ ಸಮಯ ಮಡಿವಾಳ ನಡೆಮಡಿ ಹಾಸುತ್ತಾನಾದರೆ, ಗೋವಾ ಕುಡುಬಿಯರಲ್ಲಿ ವಧುವಿನ ಚಪ್ಪರ ಪ್ರವೇಶದ ಸಮಯ ಮಡಿವಾಳ್ತಿ ನಡೆಮಡಿ ಹಾಕುತ್ತಾಳೆ. ನಂತರ ಪ್ರಥಮದಲ್ಲಿ ವರನ ಕಡೆಯವರು, ಆಮೇಲೆ ವಧುವಿನ ಕಡೆಯ ಮಹಿಳೆಯರು ಪರಸ್ಪರ ಹಣೆಗೆ ಕುಂಕುಮ ತಿಲಕವಿಡುತ್ತಾರೆ. ವರನ ಕಡೆಯ ಸುಮಂಗಲಿಯರು ವಧುವಿಗೆ ಆರತಿಯೆತ್ತಿ, ಕುಚ್ಚಲಕ್ಕಿಯ ಅಕ್ಷತೆ ಹಾಕುತ್ತಾರೆ. ಅಲ್ಲಿಂದ ವರನೇ ವಧುವನ್ನು ಕೈಹಿಡಿದು ಬಾಳೆಮಂಟಪಕ್ಕೆ ಕರೆತರುತ್ತಾನೆ.

ವರ ಕಚ್ಚೆ ಹಾಕಿ, ಬಿಳಿ ಅಂಗಿ ತೊಟ್ಟು, ತಲೆಗೆ ರುಮಾಲು, ಕೈಗೆ ವಾಳೆ, ಬೆರಳುಗಳಿಗೆ ಉಂಗುರ, ಕಾಲಿಗೆ ಉರಿಗೆಜ್ಜೆ, ಕೊರಳಿಗೆ ಗುಂಡುಮಣಿಸರ, ತರಕಾರಿ ಬೀಜದ ಸರ, ಗೆಜ್ಜೆತಿಗೆ, ಕಿವಿಯೋಲೆ, ಅಂಗಿಯ ಮೇಲ್ಗಡೆ ಕೆಂಪು ಕತ್ತರಿಶಾಲು ಧರಿಸಿ ಶೃಂಗಾರಗೊಂಡಿರುತ್ತಾನೆ. ಬಾಳೆ ಮಂಟಪದಲ್ಲಿ ಆಸನದ ಅಡಿಯಲ್ಲಿ ಬಲಮಗ್ಗುಲಲ್ಲಿ ಅಕ್ಕಿಮುಡಿ, ಎಡಮಗ್ಗುಲಲ್ಲಿ ಭತ್ತದ ಬೀಜದ ಮುಡಿಯನ್ನು ಇರಿಸಲಾಗಿರುತ್ತದೆ. ಬಾಳೆ ಮಂಟಪದ ಆಸನದಲ್ಲಿ ಅಕ್ಕಿ ಮುಡಿ ಇರುವಲ್ಲಿ ವರನನ್ನೂ, ಭತ್ತದ ಮುಡಿ ಇರುವಲ್ಲಿ ವಧುವನ್ನು ಒಬ್ಬರಿಗೊಬ್ಬರು ಆತುಕೊಂಡಂತೆ ಕೂರಿಸುತ್ತಾರೆ. ಮಂಟಪವನ್ನು ಮಾವಿನೆಲೆಯ ತೋರಣದಿಂದ ಶೃಂಗರಿಸಿರುತ್ತಾರೆ. ಮಂಟಪದಲ್ಲಿ ವಧೂವರರನ್ನು ನಿಲ್ಲಿಸಿ, ವರನ ಉಂಗುಷ್ಠದಿಂದ ಪ್ರಾರಂಭಿಸಿ, ವಧುವಿನ ತಲೆಯ ಮೇಲಿಂದ ತಂದ ನೂಲನ್ನು ವಧುವಿನ ಕಾಲಿನಡಿಯಿಂದ ಬರುವಂತೆ ಸುತ್ತಿ ಸೂತ್ರಬಂಧ ಮಾಡುತ್ತಾರೆ. ಇವರ ಪ್ರಕಾರ ಈ ಕ್ರಮ 'ನೂಲುಡಿಕೆ ಶಾಸ್ತ್ರ'. ಸೂತ್ರ ಬಂಧದ ಸಮಯ ಗೋವಾ ಕುಡುಬಿ ಸ್ತ್ರೀಯರು ಸಂಪ್ರದಾಯದ ಹಾಡು ಹಾಡುತ್ತಾರೆ.

ಗೋವಾ ಕುಡುಬಿಯರ ಮದುವೆಯ ವಿಧಿಗಳಲ್ಲಿ ವಧುವಿನ ಮಾತಾಪಿತರಿಗೆ ಹೆಚ್ಚಿನ ಪ್ರಾಶಸ್ತ್ಯ ಕಾಣುವುದಿಲ್ಲ. ವಧುವಿನ ತಾಯಿ ಮದುವೆಗೇ ಹೋಗುವುದಿಲ್ಲ. ಧಾರೆಯ ಶಾಸ್ತ್ರವಿರುವುದಾದರೂ ವಧುವಿನ ಕಡೆಯವರು ಧಾರೆ ಎರೆಯುವುದಿಲ್ಲ. ವರನ ತಂದೆಯೇ ಧಾರೆ ಎರೆಸಿಕೊಂಡು ವಧುವನ್ನು ಸೊಸೆಯಾಗಿ ಸ್ವೀಕರಿಸುತ್ತಾನೆ. ಧಾರೆ ಎರೆದುಕೊಳ್ಳುವ ಅಧಿಕಾರ ಕುಟುಂಬದ ಹಿರಿಯ ದಂಪತಿಗೆ. ಹಿರಿಯರ ಅನುಪಸ್ಥಿತಿಯಲ್ಲಿ ಮಾತ್ರ ವರನ ತಂದೆ ಧಾರೆ ಎರೆಯುತ್ತಾನೆ. ವರನ ತಂದೆಯ ಹಿರಿಯ ಸಹೋದರ ಇದ್ದಲ್ಲಿ ಧಾರೆ ಎರೆಯುವ ಅಧಿಕಾರ ಅವನಿಗೇ ಹೋಗುತ್ತದೆ.

ಸೂತ್ರಧಾರಿ ರಾಯಭಾರಿ ಸಭೆಗೆ ಕೈಮುಗಿದು 'ಈಗ ಧಾರೆ ಎರೆಯಲಾಗುವುದು' ಎಂದು ಕೂಗಿ ಹೇಳಿ ಸಭೆಯ ಒಪ್ಪಿಗೆ ಪಡೆಯುತ್ತಾನೆ. ವರನ ಬೊಗಸೆ ಮೇಲೆ ವಧುವಿನ ಬೊಗಸೆ ಇಟ್ಟು ವರನ ಕಡೆಯ ಯಜಮಾನ ಮೃತ್ತಿಕ ಕಲಶದ ನೀರೆರೆದು ಧಾರೆ ಶಾಸ್ತ್ರ ಮಾಡುತ್ತಾನೆ. ಗೋವಾ ಕುಡುಬಿಯರಲ್ಲಿ ಇಂದಿಗೂ ಒಂದೇ ಜೋಡಿ ಮದುವೆ ಆಗುವುದು ವಿರಳ. ಎರಡು, ಎರಡಕ್ಕಿಂತ ಹೆಚ್ಚು ಜೋಡಿ ಅಥವಾ ಸಾಮೂಹಿಕ ಮದುವೆಗಳಾಗುವುದು ಹೆಚ್ಚು, ಆದರೆ ಒಂದೇ ಚಪ್ಪರದಲ್ಲಿ ತ್ರಿವಳಿ ಮದುವೆಗಳಾಗುವುದಿಲ್ಲ. ಸಾಮೂಹಿಕ ಮದುವೆಗಳಾಗುವುದು ಬುಡಕಟ್ಟು ಜನಾಂಗದ ಒಂದು ಲಕ್ಷಣ ಅನ್ನುತ್ತಾರೆ ಇವರ ಮದುವೆಯ ಅಧ್ಯಯನದ ವಿವರ ನೀಡಿದ ಸಂಶೋಧಕರಾದ ಪ್ರೊ| ಎ. ವಿ. ನಾವಡರು ತಮ್ಮ 'ಕೊಂಕಣದ ಕುಡುಬಿಯರು' ಹೆಸರಿನ ಗ್ರಂಥದಲ್ಲಿ (ಪು. 42).

ಮದುವೆಯ ಕಾರ್ಯಕ್ರಮ ಮುಗಿದ ನಂತರ ವಧುವನ್ನು ಮನೆತುಂಬಿಸುವ 'ಗೃಹಪ್ರವೇಶ' ಸಂಪ್ರದಾಯವಿದೆ. ವಧೂವರರು ಮನೆಯ ಮುಖ್ಯಬಾಗಿಲ ಹೊಸ್ತಿಲ ಬಳಿ ತಲುಪಿದಾಗ ವರನ ಸಹೋದರಿ ಕೈಯಲ್ಲಿ ವೀಳ್ಯಪಟ್ಟಿ ಹಿಡಿದುಕೊಂಡು ಒಳಗಿನಿಂದ ಹೊಸ್ತಿಲು ತಡೆಯುತ್ತಾಳೆ. ವರ ಕೈಯಲ್ಲಿ ವೀಳ್ಯಪಟ್ಟಿ ಹಿಡಿದುಕೊಂಡು ಹೊಸ್ತಿಲ ಹೊರಗಿನಿಂದ ಬಲ ಮಗ್ಗುಲಲ್ಲಿ ಮತ್ತು ವಧು ಎಡಮಗ್ಗುಲಲ್ಲಿ ನಿಂತಿರುತ್ತಾರೆ. ಹೊಸ್ತಿಲ ಬಲ ಮೂಲೆಯಲ್ಲಿ ಅಕ್ಕಿರಾಶಿ, ಎಡಮೂಲೆಯಲ್ಲಿ ಭತ್ತದ ಬೀಜದ ರಾಶಿ ಹಾಕಲಾಗುತ್ತದೆ. ಈ ಸಂದರ್ಭ ಸುಮಂಗಲಿಯರು ಹೊಸ್ತಿಲು ತಡೆಯುವ ಸಂಪ್ರದಾಯದ ಹಾಡು ಹಾಡುತ್ತಾರೆ. ಹಾಡಿನ ಪ್ರಕಾರ ಸಹೋದರಿಯ ಮಗನಿಗೆ, ಸಹೋದರನಿಗೆ ಮುಂದಕ್ಕೆ ಜನಿಸಬಹುದಾದ ಮಗಳನ್ನು ಮದುವೆ ಮಾಡಿಕೊಳ್ಳುತ್ತೇವೆ ಎನ್ನುವ ಸಹೋದರ ಸಹೋದರಿಯರ ಒಪ್ಪಂದದ ಸಾಕ್ಷಿಯಾಗಿ ಅವರೀರ್ವರೂ ಕೈಯಲ್ಲಿದ್ದ ವೀಳ್ಯಪಟ್ಟಿಗಳನ್ನು ಪರಸ್ಪರ ಬದಲಾಯಿಸಿಕೊಳ್ಳುತ್ತಾರೆ. ವರ ಬಲಮೂಲೆಯ ಅಕ್ಕಿರಾಶಿಯನ್ನು ಎಡಗಾಲಿನಿಂದ ಹೊರಕ್ಕೆ ಮತ್ತು ವಧು ಎಡಮೂಲೆಯ ಭತ್ತದ ರಾಶಿಯನ್ನು ಬಲಗಾಲಿನಿಂದ ಒಳಕ್ಕೆ ಏಕಕಾಲದಲ್ಲಿ ಚೆಲ್ಲಿ ಹೊಸ್ತಿಲು ದಾಟಿ ಮನೆ ಪ್ರವೇಶಿಸುತ್ತಾರೆ. ಒಳಗೆ ಅವರಿಗೆ ಹಾಲು ಅಥವಾ ಬಾಳೆಹಣ್ಣು ತಿನ್ನಲು ನೀಡುತ್ತಾರೆ. ಆ ನಂತರ ನೆರೆದ ಸಭಿಕರಿಗೆ ಪಂಗ್ತಿಯಲ್ಲಿ

ಕೂರಿಸಿ ಶಾಕಾಹಾರಿ ಭೋಜನವಾಗುತ್ತದೆ. ಮದುವೆಯ ಎಲ್ಲಾ ಅಡುಗೆಗಳೂ ತರಕಾರಿಯದೇ ಆಗಿರುತ್ತವೆ.

ಮದುವೆಯಂದು ವಧುವನ್ನು ವರನ ಮನೆಯಲ್ಲಿ ಬಿಟ್ಟು ವಧುವಿನ ಕಡೆಯವರು ವಾಪಸಾಗುತ್ತಾರೆ. ವರನ ಮನೆಯಲ್ಲಿ ರಾತ್ರಿ ವರನ ಕಡೆಯ ನೆಂಟರ ಲೆಕ್ಕದಲ್ಲಿ ಮರುಸೇಸೆ ಆಗಬೇಕು. ಸೇಸೆಯ ಗೌರವ ನೀಡುವಾಗ ಹಿರಿಯ ಸ್ಥಾನದ ಆದ್ಯತೆ ಮೇರೆಗೆ, ಜೋಡಿ-ಜೋಡಿಗಳಿಗೆ ನೀಡಬೇಕು. ಮೊದಲ ಗೌರವ ನೀಡಬೇಕಾದವರಿಗೆ ನಂತರ ಅವಕಾಶ ನೀಡಿದರೆ ಹಿರಿಯ ಸ್ಥಾನದವರಿಗೆ ಅವಮಾನವಾಗಿ ಮದುವೆ ಸಂಭ್ರಮ ತ್ಯಜಿಸಿ ಇಳಿದುಹೋಗುವ ಸಂದರ್ಭಗಳಿರುತ್ತವೆ. ಸೇಸೆಯಾದ ಮೇಲೆ ಮುಯ್ಯಿ ಮಾಡುವ ಕ್ರಮವೂ ಇದೆ. ನಂತರ ವರ ತನ್ನ ಆಪ್ತೇಷ್ಟರಿಗೆ ಮತ್ತು ಬಂಧುಗಳಿಗೆ ವಸ್ತ್ರರೂಪದ ಉಡುಗೊರೆ ನೀಡುತ್ತಾನೆ. ಇಲ್ಲಿ ವಧುವಿನೊಂದಿಗಿರುವ ಬಲಗೊಡತಿಗೆ ಬಿಳಿಯ ಧೋತಿ ಉಡುಗೊರೆ ನೀಡುವ ಕ್ರಮವಿದೆ.

ಸೇಸೆಯಾದ ಮೇಲೆ ವಧುವಿನ ಅತ್ತೆ ಮತ್ತಿತರ ಸುವಾಸಿನಿಯರು ವಧುವನ್ನು ಬಾವಿಯ ಹತ್ತಿರ ಗಂಗಾಪೂಜೆಯ ಕ್ರಮಕ್ಕೆ ಕರೆದೊಯ್ಯುತ್ತಾರೆ. ಬಾವಿಯ ಹತ್ತಿರ ವಧುವಿನ ತಲೆಬಾಚಿ, ಹೂವು ಮುಡಿಸಿ, ರವಕೆ ಕಳಚಿ ಸೀರೆಯನ್ನು ಗೇಂಟುಕಟ್ಟಿ ಉಡಿಸಿ ಶೃಂಗರಿಸುತ್ತಾರೆ. ವಧು ಬಾವಿಯ ಹತ್ತಿರ ವೀಳ್ಯಪಟ್ಟಿ ಇಟ್ಟು ವಂದಿಸಿ, ಬಾವಿಯಿಂದ ಒಂದು ಬಿಂದಿಗೆ ನೀರು ಸೇದಿ ಮನೆಗೆ ಹಿಂದಿರುಗಬೇಕು. ಈ ನಂತರ ಯಾವತ್ತೂ ಆ ಹುಡುಗಿ ರವಕೆ ಧರಿಸುವಂತಿಲ್ಲ. ಹಿಂದಿನ ಕಾಲದಲ್ಲಿ ಆ ರವಕೆಯನ್ನು ಮುಂದಕ್ಕೆ ಕುಟುಂಬದ ಮದುವೆಯಾಗಲಿರುವ ಯುವತಿಯರಿಗೆ ಮದುವೆಯಾಗುವಾಗ ಧರಿಸಲು ಜೋಪಾನವಾಗಿ ಇರಿಸುತ್ತಿದ್ದರು ಎಂದು ತಿಳಿದುಬರುತ್ತದೆ. ಆ ಕಾಲದಲ್ಲಿ ಇದ್ದಿರಬಹುದಾದ ಬಡತನ ಮತ್ತು ಆರ್ಥಿಕ ದುಸ್ಥಿತಿ ಇದಕ್ಕೆ ಕಾರಣವಾಗಿ ಇದ್ದಿರಬಹುದು. ಕೆಲವು ಕಡೆ ಆ ರವಕೆಯನ್ನು ಹೋಳಿ ಹಬ್ಬದ ಶೃಂಗಾರಕ್ಕಾಗಿ ಆ ಮಹಿಳೆಯ ಪತಿ ಉಪಯೋಗಿಸುತ್ತಿದ್ದ ಎಂಬುದಾಗಿಯೂ ತಿಳಿದುಬರುತ್ತದೆ.

ಮರುಸೇಸೆಯ ರಾತ್ರಿ ವಿವಿಧ ವಿನೋದ ಮತ್ತು ಮನರಂಜನೆಯ ಆಚರಣೆಗಳು ಜರಗುತ್ತವೆ. ವಧೂವರರನ್ನು 'ಮಾಟೊಟ' ಚೌಕದಲ್ಲಿ ಕುಳ್ಳಿರಿಸಿ ಐದು ಕಲಶಗಳಿಂದ ಸ್ನಾನ ಮಾಡಿಸುವ ಕ್ರಮವಿದೆ. ಈ ಕಲಶಗಳು ನಂತರ ರಾಯಭಾರಿ, ಬುಧವಂತ ಮತ್ತು ಕಲಶಗಿತ್ತಿಯರಿಗೆ ಗೌರವಾರ್ಥವಾಗಿ ಸಲ್ಲುತ್ತವೆ. ಒಂದು ಶಾಲಿನಲ್ಲಿ ಸೌತೆಕಾಯಿ ಕಟ್ಟಿ ಮಾಂಡ್ಕಾರ ಮತ್ತು ಯಾರಾದರೊಬ್ಬ ಶಾಲಿನ ಕೊನೆಗಳನ್ನು ಹಿಡಿದುಕೊಂಡು ಧಾರೆ ಎರೆಸಿಕೊಂಡ ಯಜಮಾನ ಮತ್ತು ಕಲಶಗಿತ್ತಿಯರು ಕುಳಿತಲ್ಲಿ ಹೋಗಿ ಅವರ ತಲೆಯ ಮೇಲಿಂದ ಉಯ್ಯಾಲೆಯಾಡಿಸುತ್ತಾರೆ ಮತ್ತು ಅವರ ತಲೆಯ ಮೇಲೆ ಸ್ವಲ್ಪ ನೀರು ಚಿಮುಕಿಸುತ್ತಾರೆ. ಈ ಕ್ರಮಕ್ಕೆ 'ಮಗುವನ್ನು ಆಡಿಸುವುದು' (ಬಾಳ್ ಖೆಳೊಂವ್ಚೆಂ) ಎಂದು ಹೆಸರು. ಈ ಕ್ರಮ ವಧೂವರರಿಗೆ ಸಂತಾನ ಪ್ರಾಪ್ತಿಯ ಸೂಚಕ ಮತ್ತು

ಮಗುವನ್ನು ಆಡಿಸುವ ಪರೋಕ್ಷ ಸಂಕೇತವಾಗಿರಬಹುದು. ಈ ಸಂದರ್ಭದಲ್ಲೂ ಸುಮಂಗಲಿಯರು ಸಂಪ್ರದಾಯದ ಹಾಡು ಹಾಡುವ ಕ್ರಮವಿದೆ.

ಒಂದು ಮರದ ಮರಿಗೆಯಲ್ಲಿ ಕಾಣೆ ಜಾತಿಯ ಕಿರುಮೀನು ಹಾಕಿ, ಆ ಮೀನನ್ನು ವಧೂವರರು ಹಿಡಿಯಬೇಕು. ಮತ್ತು ಆ ಮರಿಗೆಯಲ್ಲಿ ಒಂದು ಮುಷ್ಟಿ ಬೆಳ್ತಿಗೆ ಅಕ್ಕಿ ಹಾಕಬೇಕು. ಮೀನು ಅತಿಸಂತಾನದ ಪ್ರತೀಕವಾಗಿರುವುದರಿಂದ ಮೀನು ಹಿಡಿಯುವಿಕೆ ಮತ್ತು ಆ ಮೀನಿಗೆ ತಿನ್ನಲು ಅಕ್ಕಿ ಕಾಳು ಹಾಕುವುದು ಫಲವಂತಿಕೆ ಹಾಗೂ ಸಮೃದ್ಧಿಯ ಸಂಕೇತ ಅನ್ನಬಹುದು. ಆ ನಂತರ ಮರಿಗೆಯೊಳಗೆ ಒಂದು ಉಂಗುರ ಹಾಕಲಾಗುತ್ತದೆ. ಆ ಉಂಗುರವನ್ನು ವಧೂವರರು ಹುಡುಕಿ ತೆಗೆಯಬೇಕು. ಉಂಗುರದಾಟ ಆಗಿ ವಧೂವರರು ಸೇರಿನಲ್ಲಿ ಅಕ್ಕಿ ಹಾಕಿ ಮೂರು ಮೂರು ಬಾರಿ ಅಳೆಯಬೇಕು. ಉಂಗುರದಾಟದಲ್ಲಿ ಯಾರಿಗೆ ಉಂಗುರ ಮೊದಲು ಸಿಗುತ್ತದೆ ಮತ್ತು ಸೇರಿನಲ್ಲಿ ಅಳೆಯುವಾಗ ಯಾರ ಅಕ್ಕಿ ಅಳತೆ ಜಾಸ್ತಿ ಬರುವುದೋ– ಅವರು ಮುಂದಿನ ಸಾಂಸಾರಿಕ ಜೀವನದಲ್ಲಿ ಯಶಸ್ವಿಯಾಗುತ್ತಾರೆ ಎಂಬುದು ನಂಬಿಕೆ. ಮದುವೆಯ ವರೆಗೆ ಗುರುತು ಪರಿಚಯವಿಲ್ಲದ ಹುಡುಗ ಮತ್ತು ಹುಡುಗಿಯ ಸಂಕೋಚ ಸ್ವಭಾವ ನಿವಾರಣೆ ಮಾಡಿ ಪರಸ್ಪರ ಸಲುಗೆ ಹಾಗೂ ವಿಶ್ವಾಸ ಉದ್ಭವಿಸಲು ಈ ಮನೋರಂಜನೆಯ ಆಚರಣೆ ರೂಢಿಗೆ ಬಂದಿರಬೇಕು.

ರಾತ್ರಿ ಊಟವಾದ ಮೇಲೆ ಯಜಮಾನ ಅತಿಥಿಗಳನ್ನು ಬೀಳ್ಕೊಡುವಾಗ ಬಲಮಗ್ಗುಲಲ್ಲಿ ಪುರುಷರನ್ನೂ, ಎಡಮಗ್ಗುಲಿಗೆ ಮಹಿಳೆಯರನ್ನೂ ನಿಲ್ಲಿಸಿ, ಪ್ರತಿಯೊಂದು ಮನೆಯವರಿಗೆ ವೀಳ್ಯಪಟ್ಟಿ ನೀಡಿ ಕೈಮುಗಿದು, ಮದುವೆ ಸಂಭ್ರಮವನ್ನು ಯಶಸ್ವಿಯಾಗಿ ಸುಧಾರಿಸಿಕೊಟ್ಟಿರುವುದಕ್ಕೆ ಕೃತಜ್ಞತೆ ಅರ್ಪಿಸಿ, ತಿಳಿಯದೆ ಆಗಿರಬಹುದಾದ ಅನನುಕೂಲ ಮತ್ತು ತಪ್ಪುಗಳಿಗೆ, ಗೌರವಿಸುವ ಸತ್ಕರಿಸುವ ಸಂಗತಿಗಳಲ್ಲಿ ಆದ ಕೊರತೆಗಳಿಗೆ ಕ್ಷಮಿಸುವಂತೆ ವಿನಂತಿಸುತ್ತಾನೆ.

ಮೂರನೇ ದಿನ ವಧುವಿನ ಕಡೆಯವರು ವಧುವನ್ನು ತವರಿಗೆ ಕರೆದುಕೊಂಡು ಹೋಗಲು ಏಳು ಅಥವಾ ಒಂಭತ್ತು ಜನ ವರನ ಮನೆಗೆ ಬರಬೇಕು. ಹೀಗೆ ಬಂದ ವಧುವಿನ ಕಡೆಯವರಿಗೆ ಇಲ್ಲಿ ತೈಲಾಭ್ಯಂಜನ ಸ್ನಾನ ಅದನಂತರ ಸಮ್ಮಾನದೂಟವಿದೆ. ಈ ಸಮ್ಮಾನದೂಟದಲ್ಲಿ ಹಲಸಿನ ಮುಳಕ, ಅವಲಕ್ಕಿ, ಸುಕ್ರುಂಡೆ – ಈ ಮೂರು ಬಗೆ ತಿಂಡಿ ಕಡ್ಡಾಯವಾಗಿ ಇರಲೇಬೇಕು. ಈ ಸಮ್ಮಾನದ ಅಡುಗೆ ತಯಾರು ಮಾಡುವ ಮೊದಲು, ಅಗ್ನಿ ಮುಹೂರ್ತಕ್ಕೆ ಯಜಮಾನನೇ ಒಂದು ತೆಂಗಿನಕಾಯಿ ಒಡೆದು ಅಡುಗೆ ಪ್ರಾರಂಭಿಸಬೇಕು. ಮುಳಕ ಕಾಯಿಸುವಾಗ ಮುಳಕ ಹಾಗೂ ಇತರ ತಿಂಡಿಗಳಲ್ಲಿ ಕೊನೆಯದನ್ನು ಯಜಮಾನನೇ ಕಾಯಿಸಬೇಕು. ಈ ಕ್ರಮಕ್ಕೆ 'ಎಣ್ಣೆ ಕಾವಲಿ ಶಾಸ್ತ್ರ' ಅಂತ ಹೆಸರು. ಈ ಕ್ರಮ ವಧುವಿನ ಮನೆಯಲ್ಲಿ ಸಮ್ಮಾನದೂಟ ಆಗುವಾಗಲೂ

ಅನುಸರಿಸಬೇಕು. ಸಮ್ಮಾನದೂಟ ಆಗಿ ವರನ ಕಡೆಯವರು ವಧುವನ್ನು ತವರಿಗೆ ಕರೆದುಕೊಂಡು ಹೋಗುತ್ತಾರೆ. ಈ ಸಂದರ್ಭ ವರ ಹೋಗುವ ಕ್ರಮವಿಲ್ಲ.

ವಧುವಿನ ಕಡೆಯವರು ವಧುವನ್ನು ಕರೆದುಕೊಂಡು ಹೋದ ಸ್ವಲ್ಪ ಹೊತ್ತಿನಲ್ಲಿ ವರನ ಸಹಿತ ಏಳು ಜನ ಪುರುಷರು ಮತ್ತೊಬ್ಬ ಮಹಿಳೆ ವಧುವನ್ನು, ವಧುವಿನ ತವರಿಂದ ಓಂದಕ್ಕೆ ಕರೆದುಕೊಂಡು ಬರಲು ತೆರಳುತ್ತಾರೆ. ಹೀಗೆ ಒಂದೆ ಕರೆದುಕೊಂಡು ಬರಲು ಹೋದವರಲ್ಲಿ ವಧುವಿನ ಕಡೆಯಿಂದ ಬಂದವರಿಗಿಂತ ಒಬ್ಬನಾದರೂ ಸಂಖ್ಯೆಯಲ್ಲಿ ಹೆಚ್ಚು ಇರಬೇಕು. ಅಲ್ಲಿ ಅವರಿಗೆ ಕಾಲು ತೊಳೆಯಲು ನೀರು ನೀಡಿ. ಕೈಮುಗಿದು ವಧುವಿನ ಕಡೆಯವರು ಸ್ವಾಗತಿಸುತ್ತಾರೆ. ಬಂದ ನೆಂಟರು ಚಪ್ಪರದಲ್ಲಿ ವಿಶ್ರಮಿಸಬಹುದು. ಆದರೆ, ಒಳಗೆ ಸೇಸೆ ಆಗದೆ ಅವರನ್ನು ಸತ್ಕರಿಸುವುದಾಗಲೀ, ಉಪಚರಿಸುವ ಕ್ರಮವಾಗಲೀ ಮಾಡುವಂತಿಲ್ಲ. ವರನನ್ನು ಮನೆಯೊಳಗೆ ಕರೆದು. ವಧೂವರರಿಬ್ಬರನ್ನೂ ಕುಳ್ಳಿರಿಸಿ. ವಧುವಿನ ತಾಯಿ, ಮಗಳು ಅಳಿಯರಿಗೆ ಸೇಸೆಯಿಕ್ಕುತ್ತಾಳೆ. ಮಗಳಿಗೆ ಒಂದು ಸೀರೆ ವಧುವಿನ ತಾಯಿ ಉಡುಗೊರೆ ಮಾಡುತ್ತಾಳೆ. ತಂದೆ ಅಳಿಯನಿಗೆ ಒಂದು ಉಂಗುರ ಹಾಗೂ ಶಾಲು ಉಡುಗೊರೆ ಮಾಡುತ್ತಾನೆ. ಹಾಗೇ ಅಳಿಯ, ಅತ್ತೆಗೆ ಒಂದು ಸೀರೆ, ಮಾವನಿಗೆ ಒಂದು ಉಂಗುರ ಹಾಗೂ ಶಾಲು ಉಡುಗೊರೆ ಮಾಡುತ್ತಾನೆ. ಈ ಕ್ರಮದಲ್ಲಿ ವಧುವಿನ ತಾಯಿ ಪ್ರಪ್ರಥಮವಾಗಿ ಮಗಳ ಮದುವೆ ಸಂಭ್ರಮದಲ್ಲಿ ಭಾಗಿಯಾಗುತ್ತಾಳೆ. ಸೇಸೆಯ ಈ ಕ್ರಮ ಆದ ನಂತರವೇ ಚಪ್ಪರದಲ್ಲಿ ವಿರಮಿಸಿರುವ ನೆಂಟರಿಗೆ ಬಾಯಾರಿಕೆ ನೀಡಿ ಕುಳ್ಳಿರಿಸುತ್ತಾರೆ. ಆ ನಂತರ, ಬಂದ ನೆಂಟರಿಗೆ ತೈಲಾಭ್ಯಂಜನವಿದೆ. ವರನ ಕಡೆಯವರು ವಧುವಿನ ಕಡೆಯ ಕೆಲವು ಗೌರವಾನ್ವಿತರಿಗೆ ವೀಳ್ಯಪಟ್ಟ ನೀಡಬೇಕು. ಆಗಮಿಸಿದ ಎಲ್ಲಾ ಅತಿಥಿಗಳಿಗೆ, ವರನ ಮನೆಯಲ್ಲಿ ಮಾಡಿದ ಕ್ರಮದಂತೆ ಇಲ್ಲಿಯೂ ಭೋಜನವಿದೆ. ಈ ಸಮ್ಮಾನದೂಟ ಆಗಿ ವಧುವನ್ನು ವರನ ಸಹಿತ ಪತಿಯ ಮನೆಗೆ ಕರೆತರುತ್ತಾರೆ.

ಪತಿಯ ಮನೆಗೆ ಮರಳಿದ ಮದುಮಗಳು ಪ್ರಥಮ ಅಡುಗೆ ಸ್ವತಃ ತಯಾರಿಸಿ ಐವರಿಗಾದರೂ ಉಣಬಡಿಸಬೇಕು. ಈ ಪ್ರಥಮ ಅಡುಗೆಯನ್ನು ಬಂದ ತಕ್ಷಣವೇ ಮಾಡಬಹುದು. ಅಥವಾ ನಂತರ ಒಂದು ಪ್ರಶಸ್ತ ದಿನ ನಿಗದಿಗೊಳಿಸಿಯೂ ಮಾಡಬಹುದು. ಕೊಡಿಯಾಲ ಕುಡುಬಿಯರಲ್ಲಿ ಶಯನೀ ಏಕಾದಶಿವರೆಗೆ ಲೈಂಗಿಕ ಸಂಪರ್ಕಕ್ಕೆ ಅವಕಾಶವಿಲ್ಲದಂತೆ ಗೋವಾ ಕುಡುಬಿಯರಲ್ಲಿಯೂ ಧಾರೆಯಾಗಿ, ವಧುವನ್ನು ಮನೆತುಂಬಿಸಿಕೊಂಡ ತಕ್ಷಣ ವಧೂವರರ ದೈಹಿಕ ಸಂಪರ್ಕಕ್ಕೆ ಅವಕಾಶವಿಲ್ಲ. ಇಲ್ಲಿನ 'ವಂಡಾರು' ಎಂಬ ಜಾಗದಲ್ಲಿ ಜರಗುವ ಪ್ರಸಿದ್ಧ ಕಂಬಳಕ್ಕೆ ವಧೂವರರು ಹೋಗಿ, ಕಂಬಳದಲ್ಲಿ ವರ ಕೋಣಗಳನ್ನು ಓಡಿಸಿ, ಕಂಬಳ ಗದ್ದೆಗೆ ಸುತ್ತಕ್ಕಿ ಚೆಲ್ಲಿದ ಮೇಲೆಯೇ ನಿಷೇಕ ಪ್ರಸ್ತ ಮಾಡುವುದು ರೂಢಿ. ಇದು ಕೋಣಗಳನ್ನು ಓಡಿಸುವ ಕಂಬಳ ಮಾತ್ರ ಅಲ್ಲ, ಅದೊಂದು ವಿಧಿ, ಆಚರಣೆಯ ಕ್ರಮ. ವಂಶಾಭಿವೃದ್ಧಿಯ ಆಶಯ ಮತ್ತು ಅನಿಷ್ಟ

ನಿವಾರಣೆಯ ಮನೋಶಾಸ್ತ್ರ ಅಡಕವಾಗಿರುವ ಸಂಪದಾಯ. ಮುಂದೆ ಕೂಡಿ ತಿಂಗಳಲ್ಲಿ (ಜನವರಿ/ಫೆಬ್ರವರಿ) ವರನ ಕಡೆಯವರು ನಿಗದಿಗೊಳಿಸಿದ ದಿನ ವಧುವಿನ ತಾಯಿ, ಐವರು ಸುಮಂಗಲಿಯರು ಮತ್ತು ಇಬ್ಬ ಬಂಧುವಿನೊಂದಿಗೆ ಅಳಿಯ ಮಗಳ ಮನೆಗೆ 'ಅತ್ತೆಯ ಸಮ್ಮಾನಕ್ಕೆ' ಬರುತ್ತಾಳೆ. ಇದು ವಧುವಿನ ತಾಯಿ, ಮಗಳು–ಅಳಿಯನ ಮನೆಗೆ ಬರುವ ಪ್ರಥಮ ಸಂದರ್ಭ . ಈ ದಿನ ಅಳಿಯ ತನ್ನ ಅತ್ತೆಗೆ ಸಮ್ಮಾನದೂಟ ಏರ್ಪಡಿಸಿ ಸೀರೆ ಉಡುಗೊರೆ ನೀಡುತ್ತಾನೆ.

ಕಾಲ, ಪರಿಸ್ಥಿತಿ ಮತ್ತು ಸಂದರ್ಭಕ್ಕೆ ತಕ್ಕಂತೆ ಸಮಾಜ, ಸಮಾಜದಲ್ಲಿನ ರೀತಿ ರಿವಾಜುಗಳು, ಸಂಪ್ರದಾಯಗಳು ಬದಲಾವಣೆಗೊಳ್ಳುವುದು ಸ್ವಾಭಾವಿಕ ಮತ್ತು ಅನಿವಾರ್ಯ. ಆದರೆ ಸಂಪ್ರದಾಯದ ಆಚರಣೆಗಳ ವಿಕೃತಿ ಆಗಬಾರದು. ಬದಲಾದ ವಾತಾವರಣದಲ್ಲಿ ಗೋವಾ ಕುಡುಬಿಯರು ಮೇಲೆ ವಿವರಿಸಿದ ಪ್ರಕಾರ ಅಲ್ಪಸ್ವಲ್ಪ ಕಾಯಕಲ್ಪದೊಂದಿಗೆ ಸಂಪ್ರದಾಯಗಳ ಮೂಲ ಸ್ವರೂಪವನ್ನು ಉಳಿಸಿಕೊಂಡಿರುವುದನ್ನು ಒಪ್ಪಬೇಕು. ಕೆಲವು ಬದಲಾವಣೆಗಳನ್ನು ಕೆಲಮಟ್ಟಿಗೆ ಬದಲಾಯಿಸಿಕೊಂಡಿದ್ದರೂ ಮೂಲ ಅರ್ಥ, ಗೌರವಗಳಿಗೆ ಕುಂದುಂಟಾಗಿಲ್ಲದಿರುವುದನ್ನೂ ಗಮನಿಸಬಹುದು. ಹಾಗೇ ಸ್ವಲ್ಪ ಮಟ್ಟಿಗೆ ಬದಲಾವಣೆಗಳನ್ನು ಮಾಡಿಕೊಂಡಿರುವುದನ್ನೂ ಒಪ್ಪಬೇಕು. ಮನೆಮದುವೆಗಳು ಕಡಿಮೆಯಾಗುತ್ತಾ, ಎಲ್ಲಾ ಮದುವೆಗಳನ್ನು ಸಭಾಂಗಣ, ಕಲ್ಯಾಣ ಮಂಟಪಗಳಲ್ಲಿ ಜರಗಿಸಲು ಆಸಕ್ತರಾಗಿರುವುದು ಗೋಚರಿಸುತ್ತದೆ. ಸಭಾಮಂಟಪಗಳಲ್ಲಿ ಮದುವೆಗಳು ಜರಗುವಾಗ ಕೆಲವು ಆಚರಣೆಗಳ ಅನುಷ್ಠಾನಕ್ಕೆ ಅನುಕೂಲ ವಾತಾವರಣ ಲಭಿಸದೇ ಇರುವುದರಿಂದ ಕೆಲವು ಸಂಪ್ರದಾಯಗಳು ಅಳಿವಿನಂಚಿಗೆ ತಲುಪಿರುವುದು ಕಂಡುಬರುತ್ತದೆ. ಮನೆಯಲ್ಲಿ ನೈಸರ್ಗಿಕ ಪರಿಕರಗಳನ್ನು ಉಪಯೋಗಿಸಿ ಹಾಕುವ ಚಪ್ಪರ ಈಗ ಆಧುನಿಕ ಶಾಮಿಯಾನಗಳಿಂದ ಶೋಭಿಸುತ್ತದೆ. ವಾಡೆಯ ಮುಖಂಡರಾದ ಬುಧವಂತ, ರಾಯಭಾರಿಗಳ ಮುಂದಾಳ್ತನದಲ್ಲಿ ಆಗುವ ಮದುವೆ ಈಗ ವೈದಿಕ ಸಂಪದಾಯಗಳ ಪ್ರಭಾವಕ್ಕೆ ಒಳಗಾಗಿರುವುದು ಗಮನಿಸಬೇಕಾದ ಬದಲಾವಣೆ.

ಹಿಂದಿನ ಕಾಲದಲ್ಲಿ ಐದು ದಿನಗಳ ಮದುವೆ ಸಂಭ್ರಮದ ವಿಜೃಂಭಣೆಯಿತ್ತು. ಬಂಧುಗಳು, ನೆರೆಹೊರೆಯವರು ಮತ್ತು ವಾಡೇಕಾರರು ತಮ್ಮದೇ ಮನೆಯ ಕಾರ್ಯವೆಂಬಂತೆ ಭಾಗಿಗಳಾಗುತ್ತಿದ್ದರು. ಮದುವೆಯಲ್ಲಿ ಮಾನವೀಯ ಸಂಬಂಧಗಳ ಬೆಸುಗೆ ಬಲವಾಗಿತ್ತು. ಪ್ರಕೃತ ಹೆಚ್ಚಿನ ಮದುವೆಗಳ ಗೌಜಿ ಗದ್ದಲಗಳು ಒಂದೆರಡು ದಿನಗಳಲ್ಲಿ ಮುಗಿದಿರುತ್ತವೆ. ಇದರಿಂದಾಗಿ ಆತ್ಮೀಯ ಸಂಬಂಧದ ಕೊಂಡಿ ಸಡಿಲಗೊಳ್ಳುತ್ತಿದೆ. ಮದುವೆಯ ಪ್ರತಿಯೊಂದು ವಿಧಿಯೂ ಸಂಪದಾಯದ ಜಾನಪದ ಹಾಡುಗಳ ಮೂಲಕ ಜರಗುತ್ತಿದ್ದವು. ಈ ಹಾಡುಗಳಲ್ಲಿ ಮದುವೆಯ ವಿಧಿಗಳ ಆಚರಣೆಯ ರೀತಿ ಮಾತ್ರವಲ್ಲದೆ, ವಧೂವರರ ಮುಂದಿನ ಸಾಂಸಾರಿಕ ಜೀವನ ತಮ್ಮ ಬುಡಕಟ್ಟು ಸಂಪದಾಯಗಳ ಚೌಕಟ್ಟಿನ ಪರಿಧಿಯೊಳಗೆ ಸುಗಮವಾಗಿ ನಡೆಯಲು ಮಾರ್ಗದರ್ಶಿ ಹಾಗೂ ಸಂಸ್ಕಾರಸೂಚಿ

ನಿರ್ದೇಶನವೂ ಆಗಿ ಪ್ರತಿಬಿಂಬಿತವಾಗುತ್ತಿತ್ತು. ಹಾಡುಗಳು ಉಳಿದವರಿಗೂ, ಪರಸ್ಪರ ಸಹಜೀವನದ ಸಂಸ್ಕಾರ ನೀಡುವ ಸೂತ್ರಗಳನ್ನು ಅನಾವರಣಗೊಳಿಸುತ್ತಿದ್ದವು. ಮದುವೆ ಹಾಡುಗಳಿಗೆ ವೈದಿಕರ ಮಂತ್ರಗಳಿಗಿಂತಲೂ ಹೆಚ್ಚಿನ ಪ್ರಾಧಾನ್ಯತೆಯಿತ್ತು. ಗೋವಾ ಕುಡುಬಿಯರಲ್ಲಿಯೂ ಮದುವೆ ಹಾಡುಗಳ ಅಳವಡಿಕೆ ವರ್ಷದಿಂದ ವರ್ಷ ಕಡಿಮೆಯಾಗುತ್ತಾ ಬರುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ.

ಗೋವಾ ಕುಡುಬಿಯರ ಈಗಿನ ಹೆಮ್ಮಕ್ಕಳು ಮತ್ತು ಮಹಿಳೆಯರು ಅವ್ಯಾಹತವಾಗಿ ರವಕೆ ಧರಿಸುವುದನ್ನು ರೂಢಿ ಮಾಡಿಕೊಂಡಿದ್ದಾರೆ. ಗೇಂಟಕಟ್ಟಿ ಸೀರೆ ಉಡುವ ಸಂಪ್ರದಾಯ ಇನ್ನೊಂದು ಹತ್ತು ವರ್ಷಗಳಲ್ಲಿ ಕಾಣಲು ಸಿಗುವುದು ಕಷ್ಟ ಎಂಬುದು ನನ್ನ ಅನಿಸಿಕೆ. ಇದು ಸಂಸ್ಕಾರಯುತ ಸಂಪ್ರದಾಯಗಳ ಅನುಷ್ಠಾನದ ದೃಷ್ಟಿಯಿಂದ ಹಿತಕರ ಬೆಳವಣಿಗೆ ಹೌದೆಂದು ಒಪ್ಪಬಹುದಾದರೂ, ಬುಡಕಟ್ಟಿನ ಮೂಲ ಸಂಸ್ಕೃತಿಯೊಂದರ ಅವನತಿಯಾಗುತ್ತಿರುವುದು ವಿಪರ್ಯಾಸ. ಇಷ್ಟು ಮಾತ್ರವಲ್ಲದೆ, ಗೋವಾ ಕುಡುಬಿಯರಲ್ಲಿ ಹೆಮ್ಮಕ್ಕಳಿಗೆ ವರದಕ್ಷಿಣೆ ನೀಡಿ ಮದುವೆ ಮಾಡಬೇಕಾದ ಪರಿಸ್ಥಿತಿ ಅಲ್ಲಿ–ಇಲ್ಲಿ ಪ್ರಾರಂಭವಾಗಿ, ಹೆಣ್ಣು ಹೆತ್ತವರಿಗೆ ತಮ್ಮ ಜವಾಬ್ದಾರಿಯನ್ನು ನಿಭಾಯಿಸಲು ತುಂಬಾ ಕಷ್ಟವಾಗಿರುವುದು ಇನ್ನೊಂದು ಖೇದಕರ ಸಂಗತಿಯಾಗಿದೆ. ವಧುದಕ್ಷಿಣೆಯ ಕ್ರಮ ಶಾಸ್ತ್ರದ ಒಂದು ಅಂಗವಾಗಿ ಮಾತ್ರ ಸೀಮಿತವಾಗಿರುವಂತೆ ಕಂಡುಬರುತ್ತಿದೆ. ಬಹುಜನ ಸಂಸ್ಕೃತಿಯ ಅನುಕರಣೆ ಬುಡಕಟ್ಟು ಸಮುದಾಯವೊಂದರ ಜೀವನದ ಸ್ಥಿತಿಗತಿಯ ಮೇಲೆ ಪ್ರಭಾವ ಬೀರಿ ಎದುರಿಸಬೇಕಾಗುವ ಅನನುಕೂಲ ಪರಿಸ್ಥಿತಿಯ ಪುರಾವೆಯಿದು. ನಾಗರೀಕತೆಯ ಸುಧಾರಣೆಯ ಹೆಸರಲ್ಲಿ ಬುಡಕಟ್ಟು ಜನಾಂಗದ ನೈಜ ಸಾಮಾಜಿಕ, ಧಾರ್ಮಿಕ ಸಂಪ್ರದಾಯಗಳ ಮೇಲೆ ಬೀರುವ ಪ್ರಭಾವದ ಪರಿಣಾಮ. ಆ ಮಟ್ಟಿಗೆ ಕೊಡಿಯಾಲ ಕುಡುಬಿಯರ ಮದುವೆಯಲ್ಲಿ ವರದಕ್ಷಿಣೆಯ ಪೀಡೆ ಗೋಚರಿಸದಿರುವುದು ಸಮಾಧಾನಕರ ವಿಷಯ.

ಇತರ ಸಮಾಜದ ಆಚರಣೆಗಳ ಅಂಧಾನುಕರಣೆಯಿಂದ ಮದುವೆಯ ಹಿಂದಿನ ದಿನ ಹಾಗೂ ಮದುವೆಯ ಮರುದಿನ ಪಾನಗೋಷ್ಠಿ ಮತ್ತು ಡಿಸ್ಕೋ ಡ್ಯಾನ್ಸ್ ಅಲ್ಲಲ್ಲಿ ಕೆಲವು ಕಡೆ ಪ್ರಾರಂಭವಾಗಿರುವುದು ನೋಡಲು ಸಿಗುತ್ತಿದೆ. ಹಿಂದೆ ಯುಗಾದಿಯ ನಂತರ ಮಾತ್ರ ಆಗುತ್ತಿದ್ದ ಮದುವೆಗಳು ಈಗ ವರ್ಷದ ಹೆಚ್ಚಿನ ತಿಂಗಳುಗಳಲ್ಲಿ ಜರಗುತ್ತವೆ. ಇದರಿಂದಾಗಿ ಪ್ರಸ್ತದ ಆಚರಣೆಗೆ ವಂಡಾರು ಕಂಬಳದ ವರೆಗೆ ಕಾಯುವಷ್ಟು ತಾಳ್ಮೆ ಯಾರಿಗೂ ಇರುವಂತೆ ಕಾಣುವುದಿಲ್ಲ. ಹಾಗಾಗಿ ಪ್ರಸ್ತದ ಶಾಸ್ತ್ರ ಹಿಂದಿನ ಮಹತ್ವವನ್ನು ಕಳಕೊಂಡಿದೆ ಎನ್ನಬಹುದು. ಪರಿಸರ, ಪರಿಸ್ಥಿತಿ ಮತ್ತು ಪ್ರಧಾನ ಸಂಸ್ಕೃತಿಯ ಪ್ರಭಾವದ ವಾಹಿನಿಯಲ್ಲಿ ಗೋವಾ ಕುಡುಬಿಯರಂತಹ ಬುಡಕಟ್ಟು. ಸಮುದಾಯದ ಅಧೀನ ಸಂಸ್ಕೃತಿಯ ಸಂಪ್ರದಾಯಗಳು ಅನಿವಾರ್ಯವಾಗಿ ಹೇಗೆ ಗೌಣವಾಗಿ, ಲೀನವಾಗುತ್ತವೆ ಎಂಬುದಕ್ಕೆ ಮೇಲೆ ವಿವರಿಸಿದ ಗೋವಾ ಕುಡುಬಿಯರ ಮದುವೆಯ ವಿಷಯಗಳು ಸಾಕ್ಷಿ.

ಪರಾಮರ್ಶನ ಸಾಹಿತ್ಯ :

1. ಕನ್ನಡ ಜಾನಪದ ವಿಶ್ವಕೋಶ ಪು. 432 – ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – 1985
2. ಡಾ। ಗಾಯತ್ರೀ ನಾವಡ – ಕುಡುಬಿಯರ ವಿಶಿಷ್ಟ ಸಂಸ್ಕೃತಿ ಉಳಿಯುವುದೇ? – ತರಂಗ 22–3–2001
3. ಪ್ರೊ. ಎ. ವಿ. ನಾವಡ – ಕೊಂಕಣದ ಕುಡುಬಿಯರು. ಪ್ರ : ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು – 2008

ಸಂಪನ್ಮೂಲ ವ್ಯಕ್ತಿಗಳು :

1. ಶ್ರೀ ಪುರುಷ ನಾಯ್ಕ್ 65. S/o. ಭರಣು ನಾಯ್ಕ್ ಹೊಸಮಕ್ಕಿ, ಮಂದರ್ತಿ ಅಂಚೆ, ಉಡುಪಿ
2. ಶ್ರೀ ಗೋಪಾಲ ನಾಯ್ಕ್ 38. S/o. ಪಾಯ್ಕ್ ನಾಯ್ಕ್ ಕಂಡಿಕೆ, ನಡೂರು ಅಂಚೆ, ಉಡುಪಿ
3. ಶ್ರೀ ನರಸಿಂಹ ನಾಯ್ಕ್ 40. S/o. ಪಾಯ್ಕ್ ನಾಯ್ಕ್ ಒಳಮಕ್ಕಿ, ಮಂದರ್ತಿ ಅಂಚೆ, ಉಡುಪಿ

ಸಂದರ್ಶನದ ದಿನಾಂಕ 25–1–2013

ಸಹಕಾರ : ಶ್ರೀನಿವಾಸ ಗೌಡ 34, S/o. ಕುಪ್ಪ ಗೌಡ,
ಕನ್ನೋರಿ ನಡುಮನೆ, ಎಡಪದವು, ಮಂಗಳೂರು.

*****

40. ಗೋವಾದಲ್ಲಿ ಕುಡುಬಿಯರ ವಿವಾಹ ಸಂಪ್ರದಾಯಗಳು :

ನಮ್ಮ ಕುಡುಬಿ ಜಾನಪದ ಕಲಾವೇದಿಕೆಯ ಕಲಾವಿದರು 18-3-2000ರಲ್ಲಿ ಗೋವಾಕ್ಕೆ ಅಧ್ಯಯನ ಪ್ರವಾಸಕ್ಕೆ ತೆರಳಿದ್ದೆವು. ಕಾನಾಕೊನಾ ಹತ್ತಿರದ ಆಸಾಳಿ ವಾಡೆಯ ಗುರಿಕಾರ ಗೋವಿಂದ ವೆಳಿಪ್‌ರವರಲ್ಲಿ ಕುಡುಬಿಯರ ಮದುವೆಗೆ ಸಂಬಂಧಪಟ್ಟ ಮಾಹಿತಿಯನ್ನು ದಾಖಲಿಸಿಕೊಂಡಿದ್ದೆವು. ಕರ್ನಾಟಕದಲ್ಲಿ ನೆಲೆಸಿರುವ ಕುಡುಬಿಯರು ಗೋವಾ ಮೂಲನಿವಾಸಿಗಳಾಗಿದ್ದು ಕರ್ನಾಟಕಕ್ಕೆ ಸ್ಥಳಾಂತರಗೊಂಡು ನೆಲೆಸಿದವರಾದುದರಿಂದ ಅಲ್ಲಿನ ಕುಡುಬಿಯರ ಮದುವೆ ಸಂಪ್ರದಾಯಗಳ ಹೋಲಿಕೆಯ ತಿಳುವಳಿಕೆಗಾಗಿ ಈ ಮಾಹಿತಿಯನ್ನು ಅಳವಡಿಸಲಾಗಿದೆ.

ಸಾಮಾನ್ಯವಾಗಿ ಗೋವಾದಲ್ಲಿಯೂ ಕುಡುಬಿಯರ ಮದುವೆಗಳು ಸಂವತ್ಸರ ಯುಗಾದಿಯ ನಂತರವೇ ಜರಗುತ್ತವೆ. ಯುಗಾದಿಯ ಎರಡು ಮೂರು ತಿಂಗಳ ಮೊದಲು ಖರ್ಚಿಗೆ ಹಣದ ವ್ಯವಸ್ಥೆ ಆಗಿರುತ್ತದೆ. ಗೇರುಬೀಜ, ಗೇರುಫೆನ್ನಿ ತಯಾರಿ ಮತ್ತು ಮಾರಾಟ ಇಲ್ಲಿ ಪ್ರತೀ ಮನೆಯವರ ಆರ್ಥಿಕ ಸಂಪನ್ಮೂಲದ ಪ್ರಮುಖ ಉಪವೃತ್ತಿ. ಫೆನ್ನಿ ತಯಾರಿಸಿ, ಅದರ ಆದಾಯದಿಂದಲೇ ಮದುವೆ ಮುಂತಾದ ಸಂಭ್ರಮಗಳ, ಮಳೆಗಾಲದ, ಇತರ ಖರ್ಚುಗಳನ್ನು ಹೊಂದಿಸಿಕೊಳ್ಳುತ್ತಾರೆ. ಯುಗಾದಿಯ ನಂತರ ಜನರಲ್ಲಿ ಬೆಳೆಗಳ ಆದಾಯವೂ ಕೈಗೆ ಬಂದು ಚಲಾವಣೆಯಲ್ಲಿ ಇರುತ್ತದೆ. ಆದುದರಿಂದ ಮದುವೆಗಳು ಯುಗಾದಿಯ ನಂತರವೇ ಜರಗುತ್ತವೆ ಎಂಬುದು ಇಲ್ಲಿನವರ ಅಭಿಪ್ರಾಯ.

ಕರ್ನಾಟಕದಲ್ಲಿ ನೆಲೆನಿಂತಿರುವ ಕುಡುಬಿಯರ ಮತ್ತು ಗೋವಾದಲ್ಲಿ ವಾಸವಿರುವ ಕುಡುಬಿಯರ ಮದುವೆ ಸಂಪ್ರದಾಯಗಳಲ್ಲಿ ವಿಶೇಷ ವ್ಯತ್ಯಾಸಗಳೇನೂ ಕಂಡುಬರುವುದಿಲ್ಲ. ಕನ್ಯೆಯೊಬ್ಬಳು ವಿವಾಹಾರ್ಹ ಪ್ರಾಯ ತಲುಪಿದಾಗ ಹೆಣ್ಣಿನ ಮಾತಾಪಿತರೇ 'ನಮ್ಮ ಮಗಳನ್ನು ನಿಮ್ಮ ಮಗನಿಗೆ ಮದುವೆ ಮಾಡಿಕೊಳ್ಳುವಿರಾ ? ಎಂಬ ಪ್ರಸ್ತಾಪವನ್ನು ಗಂಡಿನ ಕಡೆಯವರಲ್ಲಿ ತೆಗೆಯುತ್ತಾರೆ. ಗಂಡಿನ ಮಾತಾಪಿತರು ಒಪ್ಪಿದರೆ ಇಲ್ಲಿನ 'ಕಾರ್ಯಪಾಯಿಕ್ ಆದಿನಾಥೇಶ್ವರ' ದೇವಸ್ಥಾನದ ಕಂಭದ ಮೇಲಿರುವ ದೇವರ ವಿಗ್ರಹಗಳ ಮೇಲೆ ತುಂಬೆ ಹೂವುಗಳನ್ನಿಟ್ಟು ಹೂಪ್ರಶ್ನೆಯ ಸಾಲಾವಳಿ ನೋಡುತ್ತಾರೆ. ಸಾಲಾವಳಿ ಕೂಡಿ ಬಂದಲ್ಲಿ ವಿವಾಹ ನಿಶ್ಚಯಿಸಲ್ಪಡುತ್ತದೆ.

ಮದುವೆಗೆ ಮೊದಲು ತಾಂಬೂಲ ನಿಶ್ಚಿತಾರ್ಥದ ಕ್ರಮವಿದೆ. ಹುಡುಗಿ ಮತ್ತು ಹುಡುಗನ ಹಿರಿಯರು ಹೆಣ್ಣಿನ ಮನೆಯಲ್ಲಿ ಸೇರಿ, ಹೆಣ್ಣಿನ ಕಡೆಯವರು ನಿಶ್ಚಿತ ಹುಡುಗನಿಗೆ ಹೆಣ್ಣು ನೀಡುತ್ತೇವೆ ಎಂದು ಹೇಳಿ ಸಾಕ್ಷಿಯಾಗಿ ವಾಗ್ದಾನ ನೀಡುವ ಈ ಕ್ರಮಕ್ಕೆ ಇಲ್ಲಿ 'ಸಾಕರ್‌ಪುಡೊ' ಅಂತ ಹೆಸರು. ಗಂಡು, ಹೆಣ್ಣಿಗೆ ನಿಶ್ಚಿತಾರ್ಥದ ಕುರುಹಾಗಿ ಉಂಗುರ ತೊಡಿಸುವ ರೂಢಿ ಇದೆ. ಆದರೆ ಹೆಣ್ಣು, ಗಂಡಿಗೆ ಉಂಗುರ ತೊಡಿಸುವ ಕ್ರಮವಿಲ್ಲ.

ಮದುವೆ ಹೆಚ್ಚಾಗಿ ಹೆಣ್ಣಿನ ಮನೆಯಲ್ಲೇ ಆಗುವುದಾದರೂ, ಕೆಲವು ಸಂದರ್ಭಗಳಲ್ಲಿ ಗಂಡಿನ ಮನೆಯಲ್ಲೂ ಆಗುತ್ತದೆ. ಈಗೀಗ ಸಭಾಗೃಹ ಮತ್ತು ದೇವಸ್ಥಾನಗಳ ಕಲ್ಯಾಣ ಮಂಟಪಗಳಲ್ಲೂ ಮದುವೆಗಳು ಜರಗುತ್ತವೆ.

ಮದುವೆ ನಿಶ್ಚಯವಾಗಿ ಸೂತಕ ಬರಬಹುದಾದ ಸಂಭವ ಇದ್ದಲ್ಲಿ ನಾಂದಿ ಪೂಜೆ ಮಾಡಿ, ನಾಂದಿ ಧರಿಸುತ್ತಾರೆ. ವಧುವಿಗೆ ಅರಸಿನ ಬಾಗಿನ ಕಳುಹಿಸುವ ಕ್ರಮವಿಲ್ಲ. ಬದಲಿಗೆ ವರನ ಕಡೆಯಿಂದ 'ಅರಸಿನ ಎಣ್ಣೆ' ಕಳುಹಿಸುವುದು ಚಾಲ್ತಿಯಲ್ಲಿದೆ. ವರನ ಮನೆಯಲ್ಲಿ ಪನ್ನೆ ಶಾಸ್ತ್ರ, ಅರಸಿನ ಲೇಪನ, ಪಾಟೋಟ ಚೌಕಟ್ಟಿನಲ್ಲಿ ಕಲಶಸ್ನಾನ, ಕುಂಭ ಮುಹೂರ್ತ, ಹಾಲುಗಂಭ ಶಾಸ್ತ್ರ, ಹಿಟ್ಟು ಕುಟ್ಟುವ ಶಾಸ್ತ್ರ ಮುಂತಾದವು ಯಥಾವತ್ ಆಚರಣೆಯಲ್ಲಿವೆ. ವಧುವಿಗೂ ಪನ್ನೆ ಶಾಸ್ತ್ರ ಹೊರತು ಉಳಿದೆಲ್ಲಾ ವಿಧಿಗಳು ವರನ ಮನೆಯಲ್ಲಿನ ಪ್ರಕಾರವೇ ಆಗುತ್ತವೆ. ಪನ್ನೆ ಶಾಸ್ತ್ರಕ್ಕೆ, ಅರಸಿನ ಲೇಪನಕ್ಕೆ, ಕಲಶ ಸ್ನಾನಕ್ಕೆ, ಹಾಲುಗಂಭ ಶಾಸ್ತ್ರಕ್ಕೆ ಸುವಾಸಿನಿಯರು ಸಂಪ್ರದಾಯದ ಹಾಡುಗಳನ್ನು ಹಾಡುತ್ತಾರೆ. ಅಂಡಿಲು ಗಿಡದ ಕೋಲಿಗೆ ಮಾವಿನೆಲೆ ಕಟ್ಟಿ ಅರಸಿನ ಲೇಪನ ಮಾಡುತ್ತಾರೆ. ಕುಂಭ ಮುಹೂರ್ತದ ಮಡಿಕೆಯನ್ನು ವಧು ಮತ್ತು ವರ ಐವರು ಸುಮಂಗಲಿಯರೊಂದಿಗೆ ಸೇರಿ ಒಲೆಯ ಮೇಲೆ ಇರಿಸುತ್ತಾರೆ. ಆ ಮಡಿಕೆಗೆ ವಧು ಅಥವಾ ವರ ಐದು ಮುಷ್ಟಿ ಅಕ್ಕಿ ಹಾಕಿ, ಐದು ಬಾರಿ ನೀರೆರೆದು ಒಲೆ ಉರಿಸುವ ಈ ಕ್ರಮಕ್ಕೆ 'ರಸಯ್ ಮಡ್ಡಿ' ಅಂತ ಹೆಸರು. ವರನಿಗೆ ಬಲಿಗೊಡೆಯನಾಗಿ ಹೊರಬೆಡಗಿನ ಬ್ರಹ್ಮಚಾರಿ ಯುವಕನೊಬ್ಬನನ್ನು ನೇಮಕ ಮಾಡುತ್ತಾರೆ. ವಧುವಿಗೆ ಸ್ವಂತ ಸಹೋದರಿ ಅಥವಾ ಕುಟುಂಬದಲ್ಲಿ ಸಹೋದರಿ ಸಂಬಂಧ ಆಗುವವಳು ಬಲಿಗೊಡತಿಯಾಗುತ್ತಾಳೆ. ವರನ ಸಹೋದರಿಗೆ ಕಲಶಗಿತ್ತಿಯ ಜವಾಬ್ದಾರಿ ಇರುತ್ತದೆ.

ವರ ಹಾಗೂ ವರನ ದಿಬ್ಬಣವನ್ನು ಚಪ್ಪರಕ್ಕೆ ಬರಮಾಡಿಕೊಳ್ಳುವಾಗ ಆರತಿ ಅಕ್ಷತೆಯ ಕ್ರಮ ಇಲ್ಲ. ಆದರೆ 'ನಂದಾದೀಪ' ಉಪಯೋಗಿಸಿ 'ಶಕುನದೀಪ' ಮಾಡುವ ಕ್ರಮವಿದೆ. ನಮ್ಮಲ್ಲಿಯ ಕೊಡಿಯಾಲ ಕುಡುಬಿಯರಲ್ಲಿರುವಂತೆ ವರ, ದೀಪ ದಾಟಿ ಬರುವುದಿಲ್ಲ. ಆ ದೀಪವನ್ನು ವರನಿಗೆ ನಿವಾಳಿಸುತ್ತಾರೆ. ದಿಬ್ಬಣ ಒಳಪ್ರವೇಶಿಸುತ್ತಿದ್ದಂತೆ ಹಾಡು ಹಾಡುತ್ತಾರೆ. ಯಥಾ ಪ್ರಕಾರ ದಿಬ್ಬಣವನ್ನು ಸ್ವಾಗತಿಸಿ, ಬೀಗರನ್ನು ಕುಳ್ಳಿರಿಸಿ, ಬಾಯಾರಿಕೆಗೆ ಬೆಲ್ಲ ನೀರು ಕೊಟ್ಟು ಉಪಚರಿಸುತ್ತಾರೆ. ಚಪ್ಪರದಲ್ಲಿ ವಧೂವರರು ಪರಸ್ಪರ ಬಾಳೆಹಣ್ಣು ತಿನ್ನಿಸುವ ಕ್ರಮವಿದೆ.

ಮದುವೆಗೆ ಬಾಳೆ ಮಂಟಪ ಹಾಕುತ್ತಾರೆ. ಧಾರೆಯ ನಂತರ ವಧೂವರರ ಹೆತ್ತವರ ಕಾಲು ತೊಳೆಯುವ ಮತ್ತು ಕಂಕಣದಾರ ಕಟ್ಟುವ ಕಮವಿದೆ. ಈ ಕಂಕಣದಾರವನ್ನು, ನಂತರ ಬಾಸಿಂಗ ಬಿಡಿಸುವ ಮೊದಲು ಬಿಡಿಸಿ ದೇವರೆದುರು ಇಡುತ್ತಾರೆ. ಸೇಸೆ, ಮುಯ್ಯಿ, ಉಡುಗೊರೆ, ಪಾಡಿಸೀರೆ, ಗೃಹಪ್ರವೇಶದ ಆಚರಣೆಗಳು ಇಲ್ಲಿಯ ಪ್ರಕಾರವೇ ಚಾಲ್ತಿಯಲ್ಲಿವೆ. ವಧೂವರರನ್ನು ಬಾಳೆಮಂಟಪದ ಆಸನದಿಂದ ಎಬ್ಬಿಸುವ ಮೊದಲು

ಆರತಿ ಮಾಡುವ ಕ್ರಮವಿಲ್ಲ. ಗೃಹಪ್ರವೇಶದ ನಂತರ ಸೇರಿದ ಎಲ್ಲಾ ಸಭಿಕರಿಗೆ ಮದು ಊತಣವಿರುತ್ತದೆ.

ಊತಣದ ನಂತರ 'ಕನ್ಯಾದಾನ' ಕ್ರಮಪ್ರಕಾರ ಹೆಣ್ಣೊಪ್ಪಿಸುವ ಶಾಸ್ತ್ರವಿದೆ. ಸಂದರ್ಭ ಹೆಣ್ಣಿನ ಗೋತ್ರ ಕಡಿದು ಗಂಡಿನ ಗೋತ್ರದೊಂದಿಗೆ ಸೇರಿಸುವ ಕ್ರಮ ಈ ನಂತರವೇ ವಧುವಿಗೆ ಧಾರ್ಮಿಕ ಹಾಗೂ ಸಾಮಾಜಿಕ ರೀತಿ ಪತಿ ಮನೆ ಅಧಿಕಾರ ಪ್ರಾಪ್ತವಾಗುತ್ತದೆ ಮತ್ತು ತವರಿನಲ್ಲಿ ಈ ಅಧಿಕಾರಗಳನ್ನು ಕಳೆದುಕೊಳ್ಳುತ್ತಾ ಮದುವೆಯ ನಂತರ ವಧುವಿಗೆ ತವರಿನ ಸೂಲೆಸೂತಕಗಳು ಅನ್ವಯವಾಗುವುದಿ ಮದುವೆಯ ದಿನ ವಧುವು ವರನ ಮನೆಯಲ್ಲೇ ಉಳಿದುಕೊಳ್ಳಬೇಕಾಗುತ್ತದೆ. ಆ ರಾ ಪತಿಯ ಮನೆಯವರ ಸಲುಗೆ, ವಿಶ್ವಾಸಗಳನ್ನು ಗಳಿಸಲು ಕುಡುಬಿಯರಲ್ಲಿ ರೂಢಿಯಲ್ಲಿರು ಕೆಲವು ಆಚರಣೆಗಳನ್ನು ಇಲ್ಲಿಯವರೂ ಪಾಲಿಸಿಕೊಂಡು ಬರುತ್ತಿದ್ದಾರೆ. ವಧೂವ ಉಂಗುರದಾಟ, ವಧುವನ್ನು ಅಡಗಿಸಿಟ್ಟು ವರ ಹುಡುಕಿ ತರುವ ಮನೋರಂಜನೆಗಳ ಮರುದಿನ ಬಲಗೊಡೆಯರು ವಧುವಿನಲ್ಲಿಗೆ ಹೋಗುವ ಕ್ರಮಕ್ಕೆ ಇವರು 'ಪಾಂ ಪರ್ತಳ್' ಅನ್ನುತ್ತಾರೆ. ಬಲಗೊಡೆಯರು ಹೊರಡುವ ಮುನ್ನ ವರನ ಮನೆಯ ಮೀನೂಟ ಆಗಬೇಕು. ವಧುವಿನ ಮನೆಯಲ್ಲಿ ಬಲಗೊಡೆಯರಿಗೆ ತೈಲಾಭ್ಯಂಜನ ಸ್ನಾ ಸೇಸೆ ಮತ್ತು ಮರುವರಿ ಶಾಸ್ತ್ರದ ಸಂಪ್ರದಾಯಗಳೂ ಇವೆ.

ಪ್ರಥಮ ಏಕಾದಶಿಗೆ 'ಪ್ರಸ್ತ'ದ ಆಚರಣೆ ಇದೆ. ಈ ಸಂಪ್ರದಾಯದಲ್ಲಿ ಕೊಡಿಯಾ ಕುಡುಬಿಯರಲ್ಲಿ ವರನು ಅತ್ತೆಗೆ ಉಡುಗೊರೆ, ಕಾಣಿಕೆ ಸಲ್ಲಿಸುವ ಕ್ರಮವಿದ್ದರೆ, ಗೋವಾ ವಧುವಿನ ತಂದೆ ಛತ್ರಿ, ಪಾದುಕೆ..... ಮುಂತಾದ ಉಡುಗೊರೆಗಳನ್ನು ವರನಿಗೆ ನೀಡಬೇ ಆಧುನಿಕತೆ ಮತ್ತು ಪ್ರಾದೇಶಿಕ ಆಚರಣೆಗಳ ಅನುಕರಣೆಯಿಂದಾಗಿ ಗೋವಾದಲ್ಲಿಯ ಹಿಂದಿನ ಸಂಪ್ರದಾಯಗಳು ಪ್ರಾಮುಖ್ಯತೆ ಕಳೆದುಕೊಳ್ಳುತ್ತಿವೆ. ಆದರೂ ಹ ಸಂಪ್ರದಾಯಗಳನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತಾರೆ. ಹೊರಜಾತಿ ಸಂಬಂಧ, ಅನೈ ಸಂಬಂಧ ನಿರತರಿಗೆ ಸಮಾಜದಲ್ಲಿ ಗೌರವ, ಸ್ಥಾನಮಾನಗಳಿಲ್ಲ. ಅಂಥವರು ಅಸ್ಪೃಶ್ಯರ ಜೀವನ ಸಾಗಿಸಬೇಕು ಅಥವಾ ಊರನ್ನೇ ತೊರೆಯಬೇಕಾಗುತ್ತದೆ.

***

41. ಅಸಂಗತ ಸಂಗತಿಗಳು :

ಮದುವೆಯ ಕಾರ್ಯಕ್ರಮವನ್ನು ಬಹಳ ಜಾಗರೂಕತೆಯಿಂದ, ತ ಸಹನೆಗಳಿಂದ ಸಂಪ್ರದಾಯ ಚ್ಯುತಿಯಾಗದಂತೆ ಜರಗಿಸಬೇಕಾಗುತ್ತದೆ. ಎಲ್ಲರಿ ಸಮಾಧಾನವಾಗುವ ರೀತಿ ಯಜಮಾನನ ನಡವಳಿಕೆ ಇರಬೇಕಾಗುತ್ತದೆ. ವರನಿಗೆ ನಾಲ್ಕೈ ಜನ ಸೋದರ ಮಾವ/ ಭಾವಂದಿರು ಇರುವ ಸಂದರ್ಭ ಬಲಗೊಡೆಯ ಜವಾಬ್ದಾರಿಯನ್ನು ಹಿರಿಯ ಸ್ಥಾನದಲ್ಲಿರುವವರಿಗೆ ವಹಿಸಿಕೊಡಬೇಕಾಗುತ್ತದೆ. ಹಿರಿಯ

ಅನುಪಸ್ಥಿತಿ ಅಥವಾ ಗೈರುಹಾಜರಿಯಲ್ಲಿ ಅವನ ನಂತರದ ಸರದಿಯವನಿಗೆ ನೀಡಬಹುದು. ಎಲ್ಲ ಸೋದರ ಮಾವ ಅಥವಾ ಭಾವಂದಿರನ್ನು ಒಂದೇ ರೀತಿ, ಏಕತೂಕದ ಗೌರವದಲ್ಲಿ ನಡೆಸಿಕೊಳ್ಳಬೇಕು. ವಿವಾಹ ಆಮಂತ್ರಣ ನೀಡುವಾಗ, ಕೋರಿ ಊಟದ ಸಮ್ಮಾನಕ್ಕೆ ಹೋಗುವಾಗ ಮತ್ತು ಉಡುಗೊರೆ ನೀಡಿ ಗೌರವಿಸುವ ಸಂದರ್ಭ ತಾರತಮ್ಯ ನಡೆಸಬಾರದು. ಅವರೂ ವರನಿಗೆ ಸಮ್ಮಾನ, ಮುಯ್ಯಿ ಉಡುಗೊರೆಗಳನ್ನು ಮಾಡುವಾಗ, ಅವರವರೊಳಗೆ ಪರಸ್ಪರ ಮಾತಾಡಿಕೊಂಡು, ಒಂದೇ ತೀರ್ಮಾನಕ್ಕೆ ಬಂದು, ಹಿರಿಯನ ಪರಿಸ್ಥಿತಿ ಮತ್ತು ಮನೋಸ್ಥಿತಿಗೆ ಹೊಂದಾಣಿಕೆ ಮಾಡಿಕೊಂಡು ಕಾರ್ಯವೆಸಗಬೇಕು. ಯಾರಾದರೊಬ್ಬನ ಆರ್ಥಿಕ ಸ್ಥಿತಿ ಉತ್ತಮವಿದೆ ಎಂದು ಅವನು ಹೆಚ್ಚೆಚ್ಚು ಮುಯ್ಯಿ ಉಡುಗೊರೆಗಳನ್ನು ಮಾಡಿದರೆ ಮಿಕ್ಕವರಿಗೆ ಅವಮಾನ ಮಾಡಿದಂತಾಗುತ್ತದೆ. ವರನು ಸಹೋದರಿಯರನ್ನೂ ಒಂದೇ ರೀತಿ ನಡೆಸಿಕೊಳ್ಳಬೇಕು. ಅವರ ನಡುವೆ ಭೇದ ಭಾವ ಮಾಡಿದರೆ ಮನಸ್ತಾಪಕ್ಕೆ ಕಾರಣವಾಗುತ್ತದೆ. ಸೋದರತ್ತೆಯರು, ಸಹೋದರ-ಪತ್ನಿಯವರನ್ನೂ ಇದೇ ಕ್ರಮದಲ್ಲಿ ಗೌರವಿಸಿ ಸುಧಾರಿಸಬೇಕು. ವಧುವೂ ಕೂಡಾ ಸಹೋದರಿ-ಭಾವಂದಿರಿಗೆ, ಸೋದರ ಮಾವ-ಸೋದರತ್ತೆಯರಿಗೆ ಮತ್ತು ಇತರರಿಗೂ ಹಿರಿಸ್ಥಾನದ ಕ್ರಮದಲ್ಲಿ ಅರ್ಹತೆಯ ಮೇರೆಗೆ ಗೌರವ ನೀಡಬೇಕು. ಹಿರಿಯ ಸ್ಥಾನದವರನ್ನು ಸುಧಾರಿಸಿದ ಕ್ರಮದಲ್ಲಿಯೇ ಕಿರಿಯ ಸ್ಥಾನದವರನ್ನೂ ಆದರಿಸಬೇಕು. ಸಹೋದರಿಯರೂ ಅವರವರೊಳಗೆ ತೀರ್ಮಾನಕ್ಕೆ ಬಂದು ಸಮ್ಮಾನ, ಮುಯ್ಯಿ, ಉಡುಗೊರೆಗಳನ್ನು ಪೂರೈಸಿದರೆ ಮದುವೆಯಲ್ಲಿ ಮನಸ್ತಾಪಗಳುಂಟಾಗುವ ಸಂದರ್ಭಗಳು ಕಡಿಮೆಯಾಗುತ್ತವೆ.

ಮದುವೆಯ ಗೌರವ ಸಲ್ಲಿಸುವಲ್ಲಿ ವ್ಯತ್ಯಾಸವಾದಲ್ಲಿ, ಮಾತಿಗೆ ತಪ್ಪಿದರೆ, ನಿರ್ಣಯಗಳನ್ನು ತಿರಸ್ಕರಿಸಿದರೆ, ಹಿರಿಯರ ಮನನೋಯುವ ಸಂಗತಿಗಳು ಘಟಿಸಿದರೆ ಮದುವೆ ತಪ್ಪುವ ಹಲವು ಸಂದರ್ಭಗಳಿವೆ. ಹಿರಿಯರು ಆಯ್ಕೆ ಮಾಡಿ ನಿಶ್ಚಯಿಸಿದ ಸಂಬಂಧವನ್ನು ವರ/ವಧು ಒಪ್ಪದಿರುವ ಸಂದರ್ಭಗಳಲ್ಲಿ ಮದುವೆ ಬಾಕಿ ಉಳಿಯುವ ಸಂಭವಗಳಿರುತ್ತವೆ. ಹುಡುಗನಿಗೆ ಆತನ ಸೋದರಮಾವ ಅಥವಾ ಭಾವ ಹೆಣ್ಣು ಆಯ್ಕೆ ಮಾಡುವ ಕ್ರಮ ಕುಡುಬಿಯರಲ್ಲಿದೆ. ಅವರು ಆಯ್ಕೆ ಮಾಡಿದ ಹುಡುಗಿಯನ್ನು ಹುಡುಗ ಒಪ್ಪದಿದ್ದಲ್ಲಿ ಮದುವೆ ತಪ್ಪುತ್ತದೆ. ಸೋದರ ಮಾವನಿಗೆ ತನ್ನ ಮಗಳನ್ನು ಕೊಡುವ ಅಪೇಕ್ಷೆ ಇರುವಾಗ ಇತರ ಹೆಣ್ಣಿನೊಂದಿಗೆ ಮದುವೆ ನಿಶ್ಚಯವಾದಲ್ಲಿ ಆ ಸಂಬಂಧಿಕೆಯನ್ನು ಅವನು ತಪ್ಪಿಸುವ ಸಾಧ್ಯತೆಗಳಿರುತ್ತವೆ. ಹಿರಿಯರ ಆಯ್ಕೆಯ ಹೆಣ್ಣನ್ನು ಹುಡುಗ ಮೆಚ್ಚದಿದ್ದರೆ, ಹುಡುಗ ಮದುವೆಯಿಂದಲೇ ತಪ್ಪಿಸಿಕೊಳ್ಳುವ ಸಂದರ್ಭಗಳು ಇರುತ್ತವೆ. ಹುಡುಗನ/ಹುಡುಗಿಯ ಗುಣನಡತೆಗಳು ಸರಿಯಿಲ್ಲ ಅಂತ ಮನವರಿಕೆ ಆದಲ್ಲಿ ವಿವಾಹ ವಾಗ್ದಾನ, ತಾಂಬೂಲ ನಿಶ್ಚಿತಾರ್ಥ ಆದ ಮೇಲೂ ಮದುವೆಗಳು ತಪ್ಪಬಹುದು. ಬೀಗರು ಪರಸ್ಪರ ಮಾತುಕತೆಯಲ್ಲಿ ಒಬ್ಬರಿಗಿಂತ ಮತ್ತೊಬ್ಬರು ಮೇಲಾಗಬೇಕೆಂಬ ಹಾರಾಟದಲ್ಲಿ ಅವರ ಅಭಿಮಾನಕ್ಕೆ, ಕುಟುಂಬಕ್ಕೆ, ಹಾಡಿಗೆ ಅವಮಾನ ಆಗುವ ಸಂದರ್ಭಗಳಲ್ಲೂ ಮದುವೆಗಳು ತಪ್ಪಬಹುದು. ಬೀಗರ ಗೌರವಕ್ಕೆ ಕುಂದುಂಟಾದಾಗ ಮದುವೆ ಸಂಘಮದಿಂದ. ಊಟ

ತ್ಯಜಿಸಿ ಇಳಿದುಹೋಗುವ /ಹೋದ ದೃಷ್ಟಾಂತಗಳಿವೆ. ಹೀಗೆ ಸಿಟ್ಟು ಮಾಡಿಕೊಂಡು ಹೋದವರು ಅವರ ಜೀವಮಾನದಲ್ಲಿ ಮತ್ತೆಂದೂ ಪರಸ್ಪರ ಮುಖ ತೋರಿಸದ ದಾಖಲೆಗಳೂ ಇವೆ. ಮದುವೆ ನಿಶ್ಚಯಿಸಿದ ಹಿರಿಯರಿಗೆ, ಗುರಿಕಾರ ರಾಯಭಾರಿಯವರಿಗೆ ಕೋರ್ಟು ಕಛೇರಿಗಳ ಬಾಗಿಲು ತೋರಿಸಿದ ಪ್ರಸಂಗಗಳು ಕೇಳಲು ಸಿಗುತ್ತವೆ. ಇಂತಹ ಘಟನೆಗಳ ನಂತರ ಕುಟುಂಬ-ಕುಟುಂಬಗಳ ನಡುವೆ, ವಾಡೆ-ವಾಡೆಗಳ ನಡುವೆ ನೆಂಟಸ್ತಿಕೆ ನಡೆಯುವುದು ನಿಂತೇ ಹೋದ ವಿಷಯಗಳೂ ಕೇಳಲು ಸಿಗುತ್ತವೆ. ನೆಂಟಸ್ತಿಕೆ ಸಂದರ್ಭ ಮತ್ತು ಮದುವೆ ಚಪ್ಪರದಲ್ಲಿ ಪರಸ್ಪರ ವಾದವಿವಾದಗಳು ಉದ್ಭವಿಸಿ ಜಗಳಾಡುವ ಸಂದರ್ಭಗಳೂ ಇಲ್ಲದಿಲ್ಲ. ಅವಮಾನ ಮಾಡಿದ ಬೀಗರಿಗೆ ಪ್ರತಿ ಅವಮಾನ ಮಾಡಿ ದ್ವೇಷ ಸಾಧಿಸುವುದೂ ಇದೆ. ನೀಡುವ ಗೌರವದಲ್ಲಿ, ಊಟದಲ್ಲಿ ಏರುಪೇರು ಮಾಡುವುದು, ದಿಬ್ಬಣವನ್ನು ತಡವಾಗಿ ಒಯ್ಯುವುದು, ಸಮಯ ದಾಟಿದ ಮೇಲೆ ಕಳುಹಿಸುವುದು, ಉದ್ದೇಶಪೂರ್ವಕ ತಕರಾರು ತೆಗೆಯುವುದು, ಒಂದು ಕಡೆಯಲ್ಲಿ ಊಟ ಕಡಿಮೆ ಬಿದ್ದಲ್ಲಿ ಇನ್ನೊಂದು ಕಡೆಯೂ ಊಟ ಕಡಿಮೆ ಬೀಳುವಂತೆ ಹೆಚ್ಚು ಜನ ಒಯ್ಯುವುದು, ಒಂದು ಕಡೆಯ ಊಟದಲ್ಲಿ ಉಪ್ಪು ಹುಳಿ ಖಾರ ಹೆಚ್ಚಾದರೆ ಇನ್ನೊಂದು ಕಡೆಯೂ ಹೆಚ್ಚು ಮಾಡುವುದು, ಪಾಯಸ ತಿನ್ನಲಾಗದಂತೆ ಪಾಯಸಕ್ಕೆ ತುಪ್ಪ, ಎಣ್ಣೆ ಸುರಿಯುವುದು.... ಮುಂತಾದ ಕುತಂತ್ರ ಬಳಸಿ ಸಂಭ್ರಮವನ್ನು ಕೆಡಿಸುವ ಕುಯುಕ್ತಿಗಳೂ ನಡೆಯುತ್ತವೆ.

ನೆಂಟಸ್ತಿಕೆಯಲ್ಲಿ ಕೆಲವರು ದಲ್ಲಾಳಿಗಳಾಗಿ ಕಾರ್ಯವೆಸಗುವುದುಂಟು. ಈ ದಲ್ಲಾಳಿಗಳು ಚಾಣಾಕ್ಷರಿದ್ದು, ದಿಪಕ್ಷೀಯರಿಂದಲೂ ಆರ್ಥಿಕ ಲಾಭ ಪಡೆದು, ಮೋಸದ ವ್ಯವಹಾರ ನಡೆಸುವವರೂ ಇದ್ದಾರೆ. ಯಾವುದಾದರೂ ನ್ಯೂನತೆ, ಊನ ಹೊಂದಿದ ಹುಡುಗ/ಹುಡುಗಿಗೆ ಮದುವೆ ಮಾಡಲು ಪ್ರತ್ಯೇಕ ಸರಿಯಾಗಿರುವ ಜೋಡಿಯನ್ನು ತೋರಿಸಿ ಮದುವೆ ಮಾಡಿಸುವ ದಗಲ್ಬಾಜಿತನ ನಡೆಸುವ ದಲ್ಲಾಳಿಗಳಿದ್ದಾರೆ. ಪ್ರಾಯ, ರೂಪ, ಗುಣಗಳಲ್ಲಿ ಚೆನ್ನಾಗಿರುವ ತಂಗಿಯನ್ನು ತೋರಿಸಿ, ಪ್ರಾಯ ಕಳೆದ ಹಿರಿಯಳಿಗೆ ಮದುವೆ ಮಾಡುವ ಪ್ರಸಂಗಗಳೂ ಇಲ್ಲದಿಲ್ಲ. 'ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು' ಎಂಬ ಗಾದೆ ಮಾತಿನಂತೆ ಹುಡುಗ/ ಹುಡುಗಿಗೆ ಇರದ ಗುಣಗಳನ್ನು ವೈಭವೀಕರಣಗೊಳಿಸಿ ನೆಂಟಸ್ತಿಕೆ ಏರ್ಪಡಿಸುವ ದಲ್ಲಾಳಿಗಳೂ ಇದ್ದಾರೆ. ಈ ಮಧ್ಯವರ್ತಿ ದಲ್ಲಾಳಿಗಳ ಕುಹಕತನದಿಂದಾಗಿ ಮದುವೆಯಲ್ಲಿ ಚರ್ಚೆ ಗಲಾಟೆಗಳಿಗೆ ಕಾರಣವಾಗುವುದುಂಟು.

42. ಸಮಕಾಲೀನ ಸಂದರ್ಭದಲ್ಲಾದ ಬದಲಾವಣೆ /ಸಂಪ್ರದಾಯಗಳ ಪ್ರಸ್ತುತ ರೂಪ :

ಕುಡುಬಿಯರ ಮದುವೆ ಸಂಪ್ರದಾಯಗಳ ವಿವರಣೆ ನೀಡುವಾಗ ಸಮಕಾಲೀನ ಸಂದರ್ಭದಲ್ಲಿ ಮದುವೆಗಳು ಹೇಗೆ ನೆರವೇರುತ್ತವೆ, ಎಷ್ಟರ ಮಟ್ಟಿಗೆ ಬದಲಾವಣೆಗೊಂಡಿವೆ, ಹಿಂದಿನ ಮದುವೆಗಳಿಗಿಂತ ಎಷ್ಟು ಹೊಸರೂಪಗಳನ್ನು ಪಡೆದುಕೊಂಡಿವೆ ಎಂಬುದನ್ನೂ ಹೇಳಬೇಕಾಗುತ್ತದೆ-ಹೇಳಿದರೆ ಮಾತ್ರ ಮೂಲ ಸಂಪ್ರದಾಯ ಎಷ್ಟು ಉಳಿದಿದೆ, ಎಷ್ಟು

ಅಳಿದಿದೆ ಎಂದು ತಿಳಿಯುತ್ತದೆ. ಇಲ್ಲಿ ಬದಲಾವಣೆಯಾದ, ಅಳಿದಿರುವ ಮತ್ತು ಅಳಿವಿನಂಚಿನಲ್ಲಿರುವ ಸಂಪ್ರದಾಯಗಳ ವಿಷಯದ ಮೇಲೆ ಹೆಚ್ಚಿನ ಉಲ್ಲೇಖ ಮಾಡಲಾಗಿದೆ.

ಕಾಲ ಬದಲಾವಣೆಯಾದಂತೆ ಮತ್ತು ಪ್ರಾದೇಶಿಕ ಸಂಸ್ಕೃತಿಯ ಪ್ರಭಾವವೂ ಆಗಿ ಪ್ರಸ್ತುತ ಕುಡುಬಿಯರ ಮದುವೆ ನೆಂಟಸ್ತಿಕೆ ಹಾಗೂ ಸಂಪ್ರದಾಯಗಳಲ್ಲಿ ಬದಲಾವಣೆ ಆಗಿರುವುದನ್ನು ನಿರ್ವಿವಾದವಾಗಿ ಒಪ್ಪಬೇಕಾಗುತ್ತದೆ. ಮದುವೆಯ ಆಚರಣೆಗಳು ಕ್ರಮೇಣ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಕಳೆದುಕೊಳ್ಳುತ್ತಾ ಬರುತ್ತಿರುವುದು ಗಮನಿಸಬೇಕಾದ ಅಂಶ. ಪ್ರಸ್ತುತ ನೆಂಟಸ್ತಿಕೆಯ ರೀತಿರಿವಾಜುಗಳು ಹಿರಿಯರ ಮುಖಂಡತ್ವ ಮತ್ತು ಮಾರ್ಗದರ್ಶನದಲ್ಲಿ ನಡೆಯುತ್ತವಾದರೂ ಹುಡುಗನಿಗೆ ಬೇಕಾದ ಜೋಡಿಯನ್ನು ಸ್ವತಃ ಹುಡುಗನೇ ಆಯ್ಕೆ ಮಾಡುತ್ತಾನೆ. ಹುಡುಗಿಯರಿಗೂ ಅವರ ಅಭಿಪ್ರಾಯ ಪ್ರಕಟಪಡಿಸುವಷ್ಟು ಸ್ವತಂತ್ರತೆ ಲಭಿಸಿದೆ. ಅಪರೂಪಕ್ಕೆ, ಪ್ರೀತಿಸಿ ಮದುವೆಯಾಗುವ ಪ್ರಸಂಗ ಮತ್ತು ಅಂತರ್ಜಾತಿ ವಿವಾಹಗಳಾಗುವುದೂ ಕೇಳಲು ಸಿಗುತ್ತವೆ. ಬಾಲ್ಯ ವಿವಾಹ ಪದ್ಧತಿ ಪೂರ್ತಿ ಅಳಿದಿದೆ. ಹುಡುಗಿ ಋತುಮತಿಯಾಗದೆ ಮತ್ತು ಹದಿನೆಂಟು ವರ್ಷ ಭರ್ತಿಯಾಗದೆ ಈಗ ಮದುವೆಗಳು ಏರ್ಪಡುವುದಿಲ್ಲ. ಹುಡುಗನಿಗೂ, ತನ್ನ ಕಾಲ ಮೇಲೆ ತಾನೇ ನಿಲ್ಲುವ ಸ್ವಂತ ಒಂದು ಉದ್ಯೋಗ ವ್ಯಾಪ್ತಿಯ ವ್ಯವಸ್ಥೆಯಾಗದೆ ಮದುವೆ ಆಗುವುದಿಲ್ಲ. ಹುಡುಗ ಹುಡುಗಿಯರಿಗೆ, ತಮಗೆ ಅನುರೂಪವಾದ ಜೋಡಿಯನ್ನು ಅಯ್ಕೆ ಮಾಡುವಷ್ಟು ತಿಳುವಳಿಕೆ ಮತ್ತು ಜವಾಬ್ದಾರಿ ಈಗಿನವರಿಗಿದೆ.

ಹಿಂದಿನ ಕಾಲದಲ್ಲಿ ಜಂಟಿ ಕುಟುಂಬ ವ್ಯವಸ್ಥೆ ಸಾಮಾನ್ಯವಾಗಿತ್ತು. ಒಂದೊಂದು ಮನೆಯಲ್ಲಿ 50-60 ಜನ ಒಂದೇ ಅಡುಗೆಯನ್ನು ಹೊಂದಿಕೊಂಡು, ಒಬ್ಬನೇ ಯಜಮಾನನ ಮುಖಂಡತ್ವದಲ್ಲಿ ದೈನಂದಿನ ಜೀವನ ವ್ಯವಹಾರಗಳು ನಡೆಯುತ್ತಿದ್ದವು. ಕೃಷಿ, ಸಾಗುವಳಿಯ ಕೆಲಸಗಳಲ್ಲಿ ಕುಟುಂಬ ಸದಸ್ಯರೆಲ್ಲರೂ ಸಮಪಾಲು, ಸಮಬಾಳು ಎಂಬ ರೀತಿ ಭಾಗವಹಿಸುತ್ತಿದ್ದರು. ಜನಸಂಖ್ಯೆ ಹೆಚ್ಚಳವಾದಂತೆ ಪ್ರಸ್ತುತ ಕಾಲದಲ್ಲಿ ಜಂಟಿ ಕುಟುಂಬಗಳು ವಿಭಜನೆಯಾಗಿ ಒಂಟಿ ಕುಟುಂಬಗಳಾಗಿ, ಹಿಡುವಳಿಗಳ ಗಾತ್ರವೂ ಚಿಕ್ಕದಾಗಿದೆ. ಇತರ ದೈಹಿಕ ಶ್ರಮಕ್ಕೆ ಕೃಷಿ/ ಸಾಗುವಳಿಗಿಂತಲೂ ಹೆಚ್ಚಿನ ಸಂಪಾದನೆ ಲಭಿಸುವಾಗ ಬೇಸಾಯದ ಕಷ್ಟದ ಕೆಲಸಕ್ಕೆ ಜನರ ಕೊರತೆ ಉದ್ಭವಿಸಿದೆ. ಹಳ್ಳಿಯ ಸಾಮೂಹಿಕ ಶ್ರಮಜೀವನ ಅಳಿಯುತ್ತಾ ಜನ ನಗರೀಕರಣದೆಡೆಗೆ ಆಕರ್ಷಿತರಾಗುತ್ತಿದ್ದಾರೆ. ಗದ್ದೆ ವ್ಯವಸಾಯ ಕಡಿಮೆಯಾಗಿ ಯುವಕ ಯುವತಿಯರು ಒಂದಿಲ್ಲೊಂದು ಉಪಉದ್ಯೋಗ ಹೊಂದಿ ಜೀವನ ಸಾಗಿಸುತ್ತಾರೆ. ಅವಿಭಕ್ತ ಕುಟುಂಬ ಅಳಿದು ಅಲ್ಲಿ ಇಲ್ಲಿ ಒಂದೊಂದು ಜಂಟಿ ಕುಟುಂಬಗಳು ಉಳಿದಿವೆ. ಒಬ್ಬ ತಂದೆಗೆ ನಾಲ್ಕು ಜನ ಮಕ್ಕಳಿದ್ದರೆ, ಮದುವೆಯಾದ ತಕ್ಷಣ ನಾಲ್ಕು ಪ್ರತ್ಯೇಕ ಮನೆ ಕಟ್ಟಿ ಪ್ರತ್ಯೇಕವಾಗಿ ಸಂಸಾರ ಚಲಾಯಿಸುತ್ತಾರೆ. ಹಿಂದಿನದಕ್ಕಿಂತಲೂ ಈಗ ಹೆಚ್ಚಿನ ಶಿಕ್ಷಣ ಸೌಲಭ್ಯ ಪಡೆದು ಅವರವರು ಸ್ವತಂತ್ರ ಜೀವನ ನಡೆಸಲು ಪೂರಕವಾಗಿದೆ. ಹಿಂದಿನ ಕಾಲದಲ್ಲಿ ಒಬ್ಬೊಬ್ಬರಿಗೆ ಏಳೆಂಟು ಜನ ಮಕ್ಕಳು

ಇರುವುದು ಸಾಮಾನ್ಯವಾಗಿತ್ತು. ಈಗ ಕುಟುಂಬ ಯೋಜನೆಯನ್ನೂ ಪಾಲಿಸುವುದರಿಂದ ಜನನ ಪ್ರಮಾಣ ಒಂದು, ಎರಡು ಮಕ್ಕಳಿಗೆ ಸೀಮಿತವಾಗಿದೆ. ಚಿಕ್ಕ ಕುಟುಂಬ ಮತ್ತು ಶಿಕ್ಷಣವೂ ಲಭಿಸುವುದರಿಂದ ದೈಹಿಕ ಶ್ರಮದ ಹೊರತಾದ ಉದ್ಯೋಗ ನಿರತರಾಗಿದ್ದಾರೆ. ಮದುವೆಯಾಗುವಾಗ ಯುವಕ ಯುವತಿಯರ ಇಷ್ಟ–ಕಷ್ಟಗಳಿಗೆ, ವೈಯಕ್ತಿಕ ಅಭಿಪ್ರಾಯ ಮತ್ತು ಆಸೆ ಆಕಾಂಕ್ಷೆಗಳಿಗೆ ಅವಕಾಶ ಲಭಿಸಿದೆ. ಹಿರಿಯರೇ ಮುಂದೆ ನಿಂತು ಮಾಡುವ ಮದುವೆಯಾದರೂ ಹುಡುಗ–ಹುಡುಗಿಯರ ಆಲೋಚನೆ, ಮರ್ಜಿ ಮತ್ತು ವ್ಯವಸ್ಥೆಗಳಿಗೆ ಸ್ಥಾನಮಾನ ಲಭಿಸಿದೆ. ಕುಡುಬಿ ಸಮುದಾಯದಲ್ಲಿಯೂ ಈಗ ಮದುವೆಗೆ ಹುಡುಗ ಹುಡುಗಿಯರ ಒಪ್ಪಿಗೆ ಅವಶ್ಯ.

ಹಿಂದಿನ ಕಾಲದಲ್ಲಿ ವ್ಯವಸಾಯದ ಆದಾಯ ಹೊರತು ಇತರ ಹುಟ್ಟುವಳಿ ಕಡಿಮೆ ಇತ್ತು. ಈಗ ಪರ್ಯಾಯ ಸಂಪಾದನೆ ಅಧಿಕವಿದೆ. ಮದುವೆ ಮಾಡುವುದಕ್ಕಿಂತಲೂ ಧಣಿಯ ಗೇಣಿ ಸಂದಾಯ ಮಾಡುವುದು ಹೆಚ್ಚಿನ ಅಗತ್ಯ ಮತ್ತು ಜವಾಬ್ದಾರಿಯಾಗಿತ್ತು. ಇಲ್ಲಿಯ ಪ್ರಾದೇಶಿಕ ಪರಿಸ್ಥಿತಿಯ ಪ್ರಭಾವವೂ ಬಿದ್ದು ಈಗ ಆಟಿ (ಆಷಾಢ) ಮತ್ತು ಫಾಲ್ಗುಣ ಮಾಸ (ಅಂದರೆ ಶಿವರಾತ್ರಿಯಿಂದ ಚಾಂದ್ರಮಾನ ಯುಗಾದಿ ವರೆಗೆ) –ಈ ಎರಡು ತಿಂಗಳು ಬಿಟ್ಟು, ಉಳಿದಂತೆ ಇಡೀ ವರ್ಷವೂ ಮದುವೆಗಳು ಜರಗುತ್ತವೆ. ಆದುದರಿಂದ ಕುಡುಬಿಯರ ಮದುವೆಗಳು ಯುಗಾದಿಯ ನಂತರ –ಮಳೆಗಾಲ ಪ್ರಾರಂಭಕ್ಕೆ ಮೊದಲು ಜರಗುವ ಪದ್ಧತಿ ಅಳಿದಿದೆ. ಸಂಪರ್ಕ ಮಾಧ್ಯಮದ ಸವಲತ್ತು ಹೆಚ್ಚಿದುದರಿಂದ ವಿವಾಹ ವಾಗ್ದಾನದಂತಹ ಸಂಪ್ರದಾಯದಲ್ಲಿ ಸಮಯ ವ್ಯಯದ ಉಳಿತಾಯವಾಗಿದೆ. ವಾಹನದ ಸೌಕರ್ಯ ಇರುವುದರಿಂದ ಎರಡೆರಡು ಬಾರಿ, ಪ್ರತ್ಯೇಕ ಎರಡು ದಿನ ಆಗುವ ವಿವಾಹ ವಾಗ್ದಾನದ ಕ್ರಮ ಈಗ ಹುಡುಗ ಮತ್ತು ಹುಡುಗಿಯ ಮನೆಯಲ್ಲಿ ಒಂದೇ ದಿನದಲ್ಲಿ ಮುಗಿಯುತ್ತದೆ. ತಾಂಬೂಲ ನಿಶ್ಚಿತಾರ್ಥಕ್ಕೆ ಸಮಯಾವಕಾಶ ಸಿಗದಿದ್ದಲ್ಲಿ, ಮದುವೆ ದಿನ ಚಪ್ಪರದಲ್ಲಿಯೇ ತೀರಿಸುವ ಅನುಕೂಲಶಾಸ್ತ್ರ ಪಾಲಿಸುತ್ತಾರೆ. ಆದರೆ ಶಾಸ್ತ್ರ ಪ್ರಕಾರ ಆಗಬೇಕಾಗಿರುವ ತಾಂಬೂಲ ನಿಶ್ಚಿತಾರ್ಥದ ವಿಧಿಯನ್ನು ಬಾಕಿಯಿಡುವುದಿಲ್ಲ.

ಮದುವೆಗೆ ಕಂಕಣಧಾರಣೆಯ ಸಂಪ್ರದಾಯ ಚಾಲ್ತಿಯಲ್ಲಿದೆ. ಆದರೆ ಹಿಂದಿನಂತೆ ಬಳೆಗಾರ ಮನೆಗೆ ಬಂದು ಬಳೆ ಇಡುವ ಕ್ರಮ ಅಳಿದಿದೆ. ಈಗ ಬಳೆಗಾರನಲ್ಲಿಗೆ ಅಥವಾ ಬಳೆಯಂಗಡಿಗಳಿಗೆ ಹೋಗಿ ಬಳೆ ಧರಿಸುತ್ತಾರೆ. ಪಿಂಗಾಣಿ (china clay) ಬಳೆಗಳು ಅಳಿದು ಗಾಜಿನ ಬಳೆಗಳು ಚಾಲ್ತಿಗೆ ಬಂದಿವೆ. ಈ ಗಾಜಿನ ಬಳೆಗಳನ್ನು ಈಗ ಮದುವೆಯ ನಂತರ ಮಾತ್ರವಲ್ಲ, ಮದುವೆಗೆ ಮುಂಚೆಯೂ ಧರಿಸುವುದು ಮಾಮೂಲಿಯಾಗಿದೆ. ಮದುವೆಯ ಆಮಂತ್ರಣವನ್ನು ತಾಂಬೂಲ ನೀಡಿ ಹೇಳುವ ಕ್ರಮ ಪೂರ್ತಿ ಅಳಿದು ಆಮಂತ್ರಣ ಪತ್ರಗಳನ್ನು ಮುದ್ರಿಸಿ ವಿತರಿಸುತ್ತಾರೆ. ಅನಿವಾರ್ಯ ಗೌರವ ನೀಡಬೇಕಾದವರಿಗೆ ಮಾತ್ರ ವೀಳ್ಯಪಟ್ಟಿ ನೀಡಿ ಆಮಂತ್ರಿಸುತ್ತಾರೆ. ಚಪ್ಪರ ಹಾಕಿದಂದು ವಡೆ ಕಾಯಿಸುವ ವಿಚಾರ ಕೇಳಲು ಸಿಗುತ್ತದೆ ವಿನಃ ನೋಡಲು ಸಿಗುವುದಿಲ್ಲ. ಅರಸಿನ ಶಾಸ್ತ್ರದ ನಂತರ

ವಧು ಹಾಗೂ ವರನ ಮನೆಯಲ್ಲಿ ಇತರ ಪಂಗಡದವರಂತೆ ಮದರಂಗಿ (ಮೆಹಂದಿ) ಇಡುವ ಕ್ರಮ ಅಲ್ಲಿ ಇಲ್ಲಿ ಪ್ರಾರಂಭವಾಗಿರುವುದು ಕಾಣಲು ಸಿಗುತ್ತದೆ. ಮದರಂಗಿಗೆ ಔಷಧೀಯ ಗುಣವಿರುವುದು ಹೌದಾದರೂ ಮದುವೆಗೆ ಮದರಂಗಿ ಇಡುವ ಕ್ರಮ ಕುಡುಬಿಯರದಲ್ಲ. ಈಗ ಕಾಣಲು ಸಿಗುವ ಮದರಂಗಿ ಕ್ರಮ ಇತರ ಸಮಾಜದವರಿಂದ ಎರವಲು ಪಡೆದಿರುವಂಥದ್ದು. ಮಾತ್ರವಲ್ಲ, ಕೆಲವು ಜಿಡಗುಗಳಲ್ಲಿ (ಉದಾ: ಕೊಚ್ಚಿಕಾರ್ ಕುಳಿ) ಇತರ ಸಂದರ್ಭಗಳಲ್ಲೂ ಮದರಂಗಿ ಇಡುವುದು ನಿಷಿದ್ಧ ಎಂಬ ನಂಬಿಕೆ ಇರುವ ವಿಷಯ ಕೇಳಲು ಸಿಗುತ್ತದೆ.

ಸಮಕಾಲೀನ ಸಂದರ್ಭದಲ್ಲಿ ವರನ ಉಡುಗೆ ತೊಡುಗೆಯಲ್ಲಿ ಬದಲಾವಣೆಗಳಾಗಿವೆ. ಕಚ್ಚೆ, ಅಂಗಿ, ಶಾಲುಗಳ ಉಪಯೋಗ ಹಿಂದಿನಂತೆಯೇ ಆಗುತ್ತದೆ ಹೌದಾದರೂ ಬಣ್ಣ ಬದಲಾಗಿ, ಬಿಳಿ ಬಣ್ಣದ ಬದಲಿಗೆ ನಸು ಹಳದಿ ಬಣ್ಣದ ಉಡುಪುಗಳು ಬಳಕೆಯಲ್ಲಿ ಬಂದಿವೆ. ಗರ್ಭಸುತ್ತು ರುಮಾಲು ಕಟ್ಟುವ ರೀತಿ ಈಗ ಯಾರ ನೆನಪಲ್ಲೂ ಉಳಿದಿಲ್ಲ. ಗರ್ಭಸುತ್ತು ರುಮಾಲಿನ ಸ್ಥಾನದಲ್ಲಿ ಈಗ ಸಿದ್ಧ ರುಮಾಲು (ಪೇಟಾ) ಬಂದಿದೆ. ಈ ರುಮಾಲಿಗೆ ಆಧುನಿಕ ರೀತಿಯ ಬಾಸಿಂಗಗಳು ಬಳಕೆಗೆ ಬಂದಿವೆ. ಈ ಧಿರಿಸು ವರನಿಗೆ ಧಾರೆಯಾಗುವಲ್ಲಿ ವರೆಗೆ ಮಾತ್ರ ಇರುತ್ತದೆ. ಧಾರೆಯಾದ ತಕ್ಷಣ ಮಂಟಪದಲ್ಲಿ ಆಸೀನರಾಗುವ ಮೊದಲು ವರನ ಧಿರಿಸನ್ನು ಬದಲಾಯಿಸಿ ಪ್ಯಾಂಟ್, ಸಫಾರಿ, ಶೇರ್ವಾನಿ, ಸೂಟ್ ಬೂಟ್ ಧರಿಸುತ್ತಾರೆ. ಹೀಗೆ ಕುಡುಬಿ ಸಮಾಜದ ಮದುವೆಗಳಲ್ಲೂ ವಿದೇಶೀ ಸಂಸ್ಕೃತಿಯ ಗಾಳಿ ಬೀಸಿರುವುದು ಅಲ್ಲಿ -ಇಲ್ಲಿ ಕಂಡುಬರುತ್ತದೆ. ಮದುಮಗಳಿಗೆ ತಲೆತುಂಬಾ ಕೂದಲು ಮುಚ್ಚುವ ರೀತಿ ಮಲ್ಲಿಗೆ ಮೊಗ್ಗಿನ ಜಲ್ಲಿ ಜಿಡಿಸುತ್ತಿದ್ದರು. ಈಗ ಈ ಕ್ರಮ ಅಳಿದು ಅರ್ಧ ತಲೆಗೂದಲು ಕಾಣುವಂತೆ ಹೂವು ಮುಡಿಸುತ್ತಾರೆ. ಧಾರೆಯ ಸೀರೆ ಪಟ್ಟಾಗಿ ಅರಸಿನ ಬಣ್ಣದಲ್ಲಿ ಬಳಕೆಯಾಗುತ್ತಿತ್ತು. ಈಗ ಸಾರ್ವತ್ರಿಕವಾಗಿ ಕುಂಕುಮ ಬಣ್ಣದ ಧಾರೆಸೀರೆ ಉಪಯೋಗವಾಗುತ್ತಿದೆ.

ಮದುವೆಗಳು ಮನೆಯಂಗಳದಲ್ಲಿ ಜರಗುವುದಿಲ್ಲ ಆದುದರಿಂದ ಮಂಟಪ ಹಾಕುವ ಅವಶ್ಯಕತೆ ಇರುವುದಿಲ್ಲ. ಬಾಳೆ ಮಂಟಪ ನೋಡಲು ಸಿಗುವುದಿಲ್ಲ. ಈಗಿನ ಪೀಳಿಗೆಯವರಿಗೆ ಬಾಳೆ ಮಂಟಪದ ವಿಷಯವೇ ತಿಳಿದಿಲ್ಲ. ಸಭಾಗೃಹಗಳಲ್ಲಿ ಆಧುನಿಕ ವಿನ್ಯಾಸದ ರೆಡಿಮೇಡ್ ಮಂಟಪ ಶಾಸ್ತ್ರವಾಗಿ ಹಾಕಲ್ಪಡುತ್ತದೆ. ವರ್ಷಪೂರ್ತಿ ಅದೇ ಮಂಟಪದಲ್ಲಿ ಮದುವೆಗಳು ಜರಗುತ್ತಿರುತ್ತವೆ. ಶಕುನದೀಪ, ಆರತಿ ಅಕ್ಷತೆ, ಸೀಸೆಯೊಂದಿಗೆ ವರನ ದಿಬ್ಬಣವನ್ನು ಚಪ್ಪರಕ್ಕೆ ಸ್ವಾಗತಿಸುವ ಕ್ರಮ ಅಳಿಯುತ್ತಾ ಬರುತ್ತಿದೆ. ಆದುದರಿಂದ ಈಗ ಯಾರೂ ಮಡಿವಾಳನನ್ನು ಆಮಂತ್ರಿಸುವ ಪ್ರಮೇಯವಿಲ್ಲ. ಮಡಿವಾಳ ಬಂದು ಮಾಡಬೇಕಾಗಿರುವುದು ಏನೂ ಇಲ್ಲ.

ಮದುವೆಯ ಹಿಂದಿನ ರಾತ್ರಿ ಕೆಲಸಿ ಬಂದು ವರನಿಗೆ ಪನ್ನಶಾಸ್ತ್ರ ಆಗಬೇಕು. ಈಗಿನ ಕೆಲಸಿಗರು ಪನ್ನಶಾಸ್ತ್ರಕ್ಕೆ ಬರಲು ಒಪ್ಪುವುದಿಲ್ಲ. ಅವರ ಜಾತಿ ಸಂಘಟನೆಗಳು

ಊರಿನ ಮದುವೆ, ಮರಣಗಳಂತಹ ವಿಧಿಗಳಲ್ಲಿ ಭಾಗವಹಿಸಬಾರದು, ಅದು ಅಜಲು ಪದ್ಧತಿ ಎಂಬುದಾಗಿ ನಿರ್ಬಂಧ ಹಾಕಿದ ಕಾರಣ ನೀಡುತ್ತಾರೆ. ಆದರೆ ಅವರಲ್ಲಿ ಕೆಲವರು ಅವರ ಸಂಘಟನೆಗಳಲ್ಲಿ ತೊಡಗಿಸಿಕೊಂಡಿದ್ದೂ ತಮ್ಮ ಕರ್ತವ್ಯ ಎಂಬಂತೆ ಸ್ವಸಂತೋಷದಿಂದ ಬಂದು ಪಸ್ನೆ ಶಾಸ್ತ್ರ ಪೂರೈಸಿಕೊಡುವ ಸಂದರ್ಭಗಳಿವೆ. ಕಿಲೇಸಿಗರು ಬರದಿರುವುದರಿಂದ ಈಗ ಪಸ್ನೆ ಶಾಸ್ತ್ರವನ್ನು ಮಾಡದೆಯೇ ಮದುವೆಗಳು ಜರಗುತ್ತಿವೆ. ಪಸ್ನೆಶಾಸ್ತ್ರ ಆಗುವಾಗ ಸಂಪ್ರದಾಯದ ಹಾಡು ಹಾಡಬೇಕು. ಪಸ್ನೆಶಾಸ್ತ್ರವೇ ಇರದುದರಿಂದ ಮತ್ತು ಈಗಿನ ಪೀಳಿಗೆಯಲ್ಲಿ ಹಾಡಲು ತಿಳಿದವರ ಸಂಖ್ಯೆ ಕಡಿಮೆ ಇರುವುದರಿಂದ ಈ ಪರಂಪರೆ ಅಳಿವಿನಂಚಿನಲ್ಲಿದೆ.

ವಧೂವರರ ನಡೆದಿಬ್ಬಣ ಈಗ ನೋಡಲು ಸಿಗುವುದು ಕಷ್ಟ. ಕಲ್ಯಾಣ ಮಂಟಪಗಳನ್ನು ತಲುಪಲು ಈಗ ವಾಹನ ವ್ಯವಸ್ಥೆ ಇದೆ. ನಡೆದಿಬ್ಬಣಕ್ಕೆಂದೇ ಜನರು ಮದುವೆಗೆ ಬರುತ್ತಿದ್ದ ಕಾಲವಿತ್ತು. ಆ ಸೊಗಸು ಈಗ ಇಲ್ಲವಾಗಿದೆ. ದಿಬ್ಬಣ ತರುವ / ಕೊಂಡು ಹೋಗುವ ವಿಚಾರದಲ್ಲಿ ದ್ವಿಪಕ್ಷೀಯ ಜೀಗರ ನಡುವೆ ಆಗುತ್ತಿದ್ದ ಚರ್ಚೆ ಮತ್ತು ಆ ಸಂಬಂಧ ಉದ್ಭವಿಸುತ್ತಿದ್ದ ಭಿನ್ನಾಭಿಪ್ರಾಯಗಳು ದೂರವಾಗಿವೆ. ಕಲ್ಯಾಣ ಮಂಟಪಗಳಲ್ಲಿ ಬ್ಯಾಂಡ್ ವಾಲಗ ಮಾಡುವ ಕ್ರಮ ಕೆಲವು ಕಡೆಗಳಲ್ಲಿ ಉಳಿದಿದೆ. ಬ್ಯಾಂಡ್ ವಾಲಗದ ಬದಲಿಗೆ ಮೈಕ್, ಸೌಂಡ್ ಸಿಸ್ಟಮ್‌ಗಳು ಬಳಕೆಯಾಗುತ್ತಿವೆ. ಮನೆಗೆ, ಚಪ್ಪರಕ್ಕೆ, ಮಂಟಪಕ್ಕೆ ವಿದ್ಯುದ್ದೀಪ ಅಳವಡಿಸಿ ಅಲಂಕರಿಸುವ ಕ್ರಮ ಪ್ರಾರಂಭವಾಗಿದೆ. ಇಡೀ ಮದುವೆ ಸಂಭ್ರಮದ ಫೋಟೊ, ವಿಡಿಯೋ ತೆಗೆಯಲಾಗುತ್ತದೆ. ಕುಳಿತುಕೊಳ್ಳಲು ಚಾಪೆ ಹಾಸುವ ಸಂಪ್ರದಾಯವೇ ಅಳಿದು ಫೈಬರ್ ಕುರ್ಚಿಗಳು ಉಪಯೋಗವಾಗುತ್ತವೆ.

ಪ್ರಕೃತ ಚಿನ್ನದ ಮಂಗಲಸೂತ್ರ ಬಳಕೆಯಲ್ಲಿದೆ. ಧಾರೆಮಣಿಯ ಮಂಗಲಸೂತ್ರ ಧರಿಸುವ ಕ್ರಮ ಅಳಿದಿದೆ. ಚಿನ್ನದ ಹೊಸ ಶೈಲಿಯ, ಆಧುನಿಕ ವಿನ್ಯಾಸದ, ತಾಳಿ ಸಹಿತವಾದ ಮಂಗಲ ಸೂತ್ರಗಳು ಚಾಲ್ತಿಗೆ ಬಂದಿವೆ. ವಧುವಿನ ಮೂಗಿಗೆ ಮೂಗುತಿಯ ಬದಲು ನತ್ತು, ಬಟ್ಟು ಬಂದಿದೆ. ಹಿಂದೆ ಧಾರೆ ಜಲಸಾಕ್ಷಿ ಸಂಪ್ರದಾಯದಂತೆ ಜರಗಿದರೆ ಈಗ ಈ ಪರಿಸರದ ವೈದಿಕ ಧರ್ಮದ ಪ್ರಭಾವದಿಂದ ಧಾರೆಯ ಕ್ರಮದಲ್ಲಿ ಲಾಜಹೋಮ ಮತ್ತು ಸಪ್ತಪದಿಯ ಸಂಪ್ರದಾಯ ಪ್ರಾರಂಭವಾಗಿದೆ.

ಸುಮಾರು 50 ವರ್ಷ ಹಿಂದಿನ ಕುಡುಬಿಯರ ಮದುವೆಗಳೆಲ್ಲಾ ಮನೆಯಂಗಳದಲ್ಲಿ ಜರಗುತ್ತಿದ್ದು ಈಗ ಎಲ್ಲಾ ಮದುವೆಗಳು ಸಭಾಗೃಹಗಳಲ್ಲಿ ಜರಗುವುದರಿಂದ ಮದುವೆಯ ಧಾರೆ, ಮುಯ್ಯಿ, ಉಡುಗೊರೆ, ಸೇಸೆಗಳೆಲ್ಲಾ ಒಂದೇ ದಿನ, ಒಂದೇ ಜಾಗದಲ್ಲಿ ಮುಗಿಯುತ್ತವೆ. ಹಿಂದಿನಂತೆ ಐದು, ಏಳು ದಿನ ಮದುವೆಗಾಗಿ ಓಡಾಡಲು ಯಾರಿಗೂ ಪುರುಸೊತ್ತೂ ಇಲ್ಲ, ವ್ಯವಧಾನವೂ ಇಲ್ಲ. ಧಾರೆಯಾಗಿ ಎರಡೂ ಕಡೆಯವರು ಒಂದೊಂದು ಸೇಸೆ ಬಟ್ಟಲನ್ನು, ಒಂದೇ ವೇಳೆಯಲ್ಲಿ ಇಡುತ್ತಾರೆ. ನಾಮ್‌ಕೇವಾಸ್ತೆ ಮುಯ್ಯಿ ಬಟ್ಟಲನ್ನು ಸ್ಥಾಪಿಸುತ್ತಾರೆ. ಆದರೆ, ಆ ಮುಯ್ಯಿ ಬಟ್ಟಲಲ್ಲಿ ಯಾರೂ ಮುಯ್ಯಿಯನ್ನಿಡುವುದಿಲ್ಲ.

ಮುಯ್ಯಿ ಮತ್ತು ಉಡುಗೊರೆಗಳನ್ನು ಕವರಿನೊಳಗಿರಿಸಿ ವಧೂವರರ ಕೈಯಲ್ಲೇ ನೀಡುವ ಈಗಿನ ಕ್ರಮ ಪ್ರಾರಂಭವಾಗಿ ಐವತ್ತು ವರ್ಷಗಳೇ ಸಂದವು. ಇದರಿಂದಾಗಿ ಮುಯ್ಯಿ ಉಡುಗೊರೆಗಳನ್ನು ಸಭೆಯಲ್ಲಿ ಹೆಸರು ಹೇಳಿ ಉದ್ಘೋಷಿಸುವ ಕ್ರಮ ನಿಂತುಹೋಗಿದೆ. ಸೇಸೆಯ ಮತ್ತು ಮುಯ್ಯಿಗಳ ಅವಕಾಶವನ್ನು ಗೌರವಾದ್ಯತೆಗಳೊಂದಿಗೆ ನೀಡುವ ಕ್ರಮ ಸಾವಕಾಶವಾಗಿ ಅಳಿಯುತ್ತಾ ಬರುತ್ತಿದೆ. ಇದರಿಂದಾಗಿ ಗುರಿಕಾರ ರಾಯಭಾರಿಯವರಿಗೆ ಇದ್ದ ಜವಾಬ್ದಾರಿ ಕಡಿಮೆಯಾಗಿ, ಅವರಿಗೆ ಸಿಗಬೇಕಾದ ಸ್ಥಾನಮಾನ ಮತ್ತು ಗೌರವಗಳಿಗೆ ಕುಂದುಂಟಾಗಿರುವ ಹಾಗೆ, ಹಾಗೂ ಅವರು ಹೆಸರಿಗೆ ಮಾತ್ರ ಬಂದು ಭಾಗವಹಿಸುವಂತೆ ಭಾಸವಾಗುತ್ತಿದೆ.

ಎಲ್ಲಾ ಕಾರ್ಯಕ್ರಮಗಳು ಸಭಾಮಂಟಪಗಳಲ್ಲಿ ಆಗುವುದರಿಂದ ಕುಟುಂಬ ಸಂಬಂಧದ ಕೊಂಡಿ ಕಳಚಿದಂತಾಗಿದೆ.ಹಿಂದೆ ಮದುವೆ ಎಂಬಾಗ ಬಂದ ನೆಂಟರಿಷ್ಟರಿಂದ, ಕುಟುಂಬಿಕರಿಂದ ಮದುವೆಯ ಆರೇಳು ದಿನಗಳೂ ಮನೆ ತುಂಬಿ ತುಳುಕುತ್ತಿತ್ತು. ಈಗ ಮದುವೆಯ ಒಂದು ದಿನ ಸಭಾಮಂಟಪಕ್ಕೆ ಬಂದು ಮುಖ ತೋರಿಸಿ ಹೋಗುತ್ತಾರೆ. ಮದುವೆಗೆ ಬೇಕಾದ ಪೂರ್ವತಯಾರಿಗಳನ್ನು ತಿಂಗಳುಗಳ ಮೊದಲು ತಯಾರು ಮಾಡುವ ಜವಾಬ್ದಾರಿ ಇಲ್ಲ. ಆಪ್ತೇಷ್ಟರು ಹೊರೆ ಕಳುಹಿಸುವ ವಿಚಾರ ಅಪರೂಪಕ್ಕೆ ಕೇಳಲು ಸಿಗುತ್ತದೆ. ಹೊರೆ ಕೊಟ್ಟರೂ, ಅದನ್ನು ತಲುಪಿಸುವ ದಲಿತ ವರ್ಗದವರು ಬರುವ ಕ್ರಮ ನಿಂತು ಹಲವು ವರ್ಷಗಳು ಸಂದಿವೆ. ಚಪ್ಪರದ ಬದಲು ಹೆಸರಿಗೆ ಮಾತ್ರ ಶಾಮಿಯಾನ ಹಾಕಲಾಗುತ್ತದೆ. ಹಿಂದೆ, ಮದುವೆಗೆ ಹಾಕಿದ ಚಪ್ಪರ ಮಳೆ ಪ್ರಾರಂಭವಾಗುವ ವರೆಗೆ ಇರುತ್ತಿತ್ತು. ಬಂದ ನೆಂಟರಿಗೆ ನೆರಳು ನೀಡಿ, ವಿಶ್ರಮಿಸುವ ಜಾಗವಾಗಿ ಮನೆಗೆ ಭೂಷಣವಾಗಿಯೂ ಇತ್ತು. ಈಗಿನ ಶಾಮಿಯಾನವನ್ನು ಮದುವೆಯ ಹಿಂದಿನ ದಿನ ಹಾಕಿ ಮರುದಿನ ಕಳಚುತ್ತಾರೆ.

ಬೆಲ್ಲ ನೀರು ಕುಡಿದರೆ ಥಂಡಿಯಾಗುವ ಮತ್ತು ಸ್ವರ ಬದಲಾಗುವ ಹೆದರಿಕೆಯಿಲ್ಲ. ಬೆಲ್ಲ ನೀರು ನೀಡುವುದು ಬಂಧುತ್ವವನ್ನು ಒಪ್ಪುವ ಸಾಂಕೇತಿಕ ಕ್ರಮವೂ ಆಗಿರುತ್ತದೆ. ಮದುವೆ ದಿನ ನೆಂಟರಿಗೆ ಬೆಲ್ಲ ನೀರು ಕೊಡುವುದೇ ಒಂದು ಸಂಭ್ರಮ. ಇಗ ಬೆಲ್ಲ ನೀರು ಕೊಡುವುದರ ಬದಲಿಗೆ ಪಾನಕ, ತಂಪು ಪಾನೀಯ ನೀಡುವ ಕ್ರಮ ಪ್ರಾರಂಭವಾಗಿದೆ. ಕುಟುಂಬಿಕರು, ವಾಡೇಕಾರರು, ನೆರೆಹೊರೆಯವರು ಸೇರಿ ತಯಾರಿಸುವ ಅಡುಗೆಗೆ ಹೊರಗಿನ ಬಾಣಸಿಗರನ್ನು ಕರೆದು ಅಡುಗೆ ತಯಾರಿಸಲಾಗುತ್ತದೆ. ಅಲ್ಲಿ–ಇಲ್ಲಿ ಕೆಟರಿಂಗ್ ವ್ಯವಸ್ಥೆಯೂ ಶುರುವಾಗಿದೆ. ಮನೆಯಲ್ಲಿ ಮದುವೆಯಾಗುವಾಗ ಮದುವೆಯ ಎಲ್ಲಾ ಚಡಂಗಗಳು ಮುಗಿವಲ್ಲಿವರೆಗೆ ಊಟಕ್ಕೆ ನೀರಿಡುತ್ತಿರಲಿಲ್ಲ. ಈಗ ಒಂದು ಕಡೆಯಿಂದ ಧಾರೆ ಶಾಸ್ತ್ರ ಮುಗಿಯಿತು ಅನ್ನುವಾಗ ಇನ್ನೊಂದು ಕಡೆಯಿಂದ ಊಟವನ್ನೂ

ಪ್ರಾರಂಭಿಸುತ್ತಾರೆ. ಊಟಕ್ಕೆ ನೀರಿಡಬೇಕಾಗಿಯೂ ಇಲ್ಲ. ಎರಡೂ ಕಡೆಯವರ ಊಟವೂ ಸಭಾಗೃಹದಲ್ಲೇ ಮುಗಿದು, ಖರ್ಚುಗಳನ್ನು ಪಾಲುಮಾಡಿಕೊಳ್ಳುತ್ತಾರೆ.

ಮದುವೆ ಔತಣದಲ್ಲಿ ಹಿಂದಿನದಕ್ಕಿಂತಲೂ ಹೊಸ ಕ್ರಮಗಳು ಪ್ರಾರಂಭವಾಗಿವೆ. ಊಟದ ವ್ಯಂಜನಗಳು ಬದಲಾಗಿ ಹೊಸ ತಿನಿಸುಗಳು ಉಪಯೋಗವಾಗುತ್ತಿವೆ. ಪಲಾವ್, ಪೂರಿ, ಪೋಡಿ, ಮಿಠಾಯಿ, ಕ್ಷೀರಾ... ಇತ್ಯಾದಿಗಳಿರುತ್ತವೆ. ಹಿಂದೆ ಹೆಸರು ಬೇಳೆ ಪಾಯಸ ತಯಾರಿಸುವುದು ಸಾಮಾನ್ಯವಾಗಿತ್ತು. ಪಾಯಸದೊಂದಿಗೆ ಸಿಹಿವಸ್ತು ಅಂದರೆ ಜೇನು ಮಾತ್ರ ಇರುತ್ತಿತ್ತು. ಈಗ ಶ್ಯಾವಿಗೆ ಪಾಯಸ, ವಿವಿಧ ಥರದ ಲಾಡು, ಹೋಳಿಗೆ, ಐಸ್‌ಕ್ರೀಮ್ ಬಡಿಸುವ ಕ್ರಮ ಬಂದಿದೆ. ಜೇನು ಬಡಿಸುವ ಪದ್ಧತಿ ಅಳಿದಿದೆ. ಈ ಹೊಸ ವ್ಯಂಜನಗಳು ಇಲ್ಲದಿದ್ದರೆ ಯಜಮಾನರನ್ನು ಕೀಳು ದೃಷ್ಟಿಯಿಂದ ಕಾಣುತ್ತಾರೆ. ಊಟಕ್ಕೆ ಪಂಗ್ತಿಗಳಲ್ಲಿ ಕುಳ್ಳಿರಿಸಿ ಬಡಿಸುವಲ್ಲಿ ಈಗ ಮೇಜುಗಳಲ್ಲಿ ಬಡಿಸುತ್ತಾರೆ. ಪಂಗ್ತಿ ಹಾಕುವ ಸಂಪ್ರದಾಯವೇ ಅಳಿಯುತ್ತಾ ಬಂದಿದೆ. ಇತ್ತೀಚೆಗೆ ಬಫೆ ಊಟವೂ ಚಾಲ್ತಿಗೆ ಬಂದಿದೆ. ಬಲಗೊಡೆಯರು ವಧುವಿನ ಮನೆಗೆ ಹೊರಡುವ ಸಂದರ್ಭ ಸಿಹಿ ನೀರಿನ ಮೀನು ಹಿಡಿದು, ಅಟ್ಟು ಊಟವಾಗಬೇಕಿತ್ತು. ಈಗ ಮಾರುಕಟ್ಟೆಗಳಲ್ಲಿ ಸಿಗುವ ಹಸಿ ಅಥವಾ ಒಣಮೀನು ಅಟ್ಟು ಬಲಗೊಡೆಯರ ಊಟ ಆಗುತ್ತದೆ. ವಧುವಿನ ಮನೆಗೆ ಬಲಗೊಡೆಯರು ಸಮ್ಮಾನಕ್ಕೆ ಹೋಗುವ ಕ್ರಮವೂ ಶಾಸ್ತ್ರಕ್ಕೆ ಮಾತ್ರ ಸೀಮಿತವಾಗಿದೆ.

ವಧುವನ್ನು ಮನೆತುಂಬಿಸಿಕೊಳ್ಳುವ ಸಂಪ್ರದಾಯ ಚಾಲ್ತಿಯಲ್ಲಿದೆ, ಆದರೆ ಅಳಿಯುತ್ತಿರುವ ಪರಿಸ್ಥಿತಿಯಲ್ಲಿ ಉಳಿದಿದೆ. ಮನೆ ಪ್ರವೇಶ ಮಾಡಿದರೂ ಸಹೋದರ ಸಹೋದರಿಯರು ಪೀಳ್ವಪಟ್ಟಿ ಬದಲಾವಣೆ ಮಾಡುವ ಸಂಪ್ರದಾಯದ ಹಾಡು ತಿಳಿದ ಮತ್ತು ಹಾಡುವ ಮಹಿಳೆಯರು ಕಡಿಮೆಯಾಗಿದ್ದಾರೆ. ಆದುದರಿಂದ ಹಾಡು ಅಪರೂಪಕ್ಕೊಮ್ಮೆ ಕೇಳಲು ಸಿಗುತ್ತದೆ. ವರನ ಮನೆಯಲ್ಲಿ ಗೃಹಪ್ರವೇಶ ಆದ ರಾತ್ರಿ ಜರಗುವ ಅರಸಿನ ಲೇಪನ, ಉಂಗುರದಾಟ, ವಧುವನ್ನು ಅಡಗಿಸಿಡುವ ಕ್ರಮ, ಕಲಶಸ್ನಾನ .... ಇತ್ಯಾದಿ ಸಂಪ್ರದಾಯಗಳೂ, ಅಳಿವಿನಂಚಿನಲ್ಲಿವೆ. ವರನ ಮನೆಯಲ್ಲಿ ರಾತ್ರಿ ಹೊತ್ತು ಮಾತ್ರ ನಡೆಯುತ್ತಿದ್ದ ನಾಗೋಲೆಯ ಕ್ರಮ ಈಗ ಧಾರೆಯಾದ ತಕ್ಷಣ, ಧಾರೆಯ ಸಭಾ ಮಂಟಪದಲ್ಲೇ ಮಾಡಿ ಕಂಕಣದಾರ ಬಿಡಿಸಿ ವಿಸರ್ಜಿಸುತ್ತಾರೆ. ನಾಗೋಲೆ ಪೂಜೆಗೆ ನಾಗಬನದ ಸ್ವರೂಪ ಮಾಡಲು ಅತ್ತಿಯ ಗೆಲ್ಲು ಅವಶ್ಯ ಬೇಕಾಗಿತ್ತು. ದನದ ಹಸಿ ಸೆಗಣಿಯಿಂದ ಕಟ್ಟೆಕಟ್ಟ ಆದರಲ್ಲಿ ಅತ್ತಿ ಗೆಲ್ಲು ನೆಟ್ಟು ಹಿಂದಿನ ಪುರೋಹಿತರು ನಾಗಬನದ ಪ್ರತೀಕವನ್ನು ಮಾಡಿ, ಅದರಲ್ಲಿ ನಾಗನಿಗೆ ಹಾಲೆರೆದು ಪೂಜೆ ಮಾಡುತ್ತಿದ್ದರು. ಈಗಿನ ಪುರೋಹಿತರು ನಾಗಪೂಜೆ ಮಾಡುತ್ತಾರಾದರೂ ಅವರಿಗೆ ಅತ್ತಿ ಗೆಲ್ಲಿನ ಉಪಯೋಗವೂ ತಿಳಿದಿಲ್ಲ. ಮಹತ್ವವೂ ಗೊತ್ತಿಲ್ಲ. ಹಾಗಾಗಿ ಅತ್ತಿ ಗೆಲ್ಲು ತರುವ ಸಂಪ್ರದಾಯವೂ ಅಳಿದಿದೆ.

ಮದುವೆಯ ನಂತರ ವರ ತನ್ನ ಅತ್ತೆಗೆ ಮಾಡುವ ಸಮ್ಮಾನ ಅಪರೂಪವಾಗುತ್ತಿದೆ. ಈಗ ವರ್ಷಪೂರ್ತಿ ಮದುವೆಗಳಾಗುತ್ತಿರುವುದರಿಂದ ಪ್ರಥಮ ಏಕಾದಶಿಗೆ ಆಚರಿಸುವ

ಪ್ರಸ್ತದ ಕ್ರಮಕ್ಕೆ ಕಾಯಲು ಯಾರಿಗೂ ವ್ಯವಧಾನವಿಲ್ಲ. ಇದರ ಬದಲಿಗೆ ಮದುವೆಯಾದ ತಕ್ಷಣ, ಅದೇ ದಿನ ಹತ್ತಿರದ ದೇವಸ್ಥಾನಗಳಿಗೆ ಹೋಗಿ ಪೂಜೆ ಸಲ್ಲಿಸಿ ಬರುತ್ತಾರೆ. ಹಿಂದಿನ ನವವಧು ಆಟಿ (ಆಷಾಢ) ಒಂದು ತಿಂಗಳು ಪೂರ್ತಿ ತಾಯಿ ಮನೆಗೆ ಹೋಗಿ ನಿಲ್ಲುವ ಕ್ರಮವಿತ್ತು. ಈಗ ಹೆಚ್ಚೆಂದರೆ ಒಂದು ವಾರ ನಿಂತು ವಾಪಸಾಗುತ್ತಾಳೆ.

ಈ ಎಲ್ಲಾ ಬದಲಾವಣೆಗಳನ್ನು ಗಮನಿಸಿದಾಗ, ಮೂಲದಲ್ಲಿ ಬುಡಕಟ್ಟು ಜನಾಂಗವಾಗಿರುವ ಕುಡುಬಿಯರು, ಕರ್ನಾಟಕಕ್ಕೆ ಸ್ಥಳಾಂತರಗೊಂಡು ನೆಲಸಿದ ಕಾಲಘಟ್ಟದಲ್ಲಿ ಈ ಪ್ರದೇಶದ ಸಂಪ್ರದಾಯಗಳಿಗೆ ಹೊಂದಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿ ತಮ್ಮ ಮೂಲ ಸಂಸ್ಕೃತಿಯ ಉಳಿವಿಗೆ ಹೆಣಗಾಡುತ್ತಿರುವುದು ವ್ಯಕ್ತವಾಗುತ್ತದೆ.

43. ಉಪಸಂಹಾರ :

ಕುಡುಬಿಯರ ಮದುವೆ ಸಂಪ್ರದಾಯಗಳಲ್ಲಿ ಕೆಲವು ಬದಲಾವಣೆಗೊಂಡಿವೆ ಮತ್ತು ಕೆಲವು ಸಂಪ್ರದಾಯಗಳು ಅಳಿದಿರುವುದನ್ನು ಅಲ್ಲಗಳೆಯುವಂತಿಲ್ಲವಾದರೂ ಹೆಚ್ಚಿನವುಗಳು ಆಚರಣೆಯಲ್ಲಿ ಉಳಿದಿವೆ. ಹಿಂದಿನಿಂದ ಪಾಲಿಸಿಕೊಂಡು ಬಂದಿರುವ ಕಟ್ಟು ಕಟ್ಟಳೆಗಳನ್ನು ಕಟ್ಟುನಿಟ್ಟಿನಿಂದ ಆಚರಿಸುತ್ತಾ ಬರುತ್ತಿದ್ದಾರೆ. ಮದುವೆಯ ಪ್ರತಿಯೊಂದು ಆಚರಣೆಯ ಸಂದರ್ಭದಲ್ಲೂ ಯಜಮಾನ ತಲೆಗೆ ರುಮಾಲು ಧರಿಸಿರುತ್ತಾನೆ. ಸರ್ವ ವಿಧಿಗಳೂ ಪೂರ್ವಪಶ್ಚಿಮಾಭಿಮುಖವಾಗಿ ಜರಗುತ್ತವೆ ವಿನಃ ಉತ್ತರ ದಕ್ಷಿಣವಾಗಿ ಆಗುವುದಿಲ್ಲ. ಪ್ರಕೃತಿ ಪುರುಷ ಸಂಕೇತವಾದ ಅಡಿಕೆ ಮತ್ತು ವೀಳ್ಯದೆಲೆಗೆ ಧಾರ್ಮಿಕ ಮಹತ್ವ ನೀಡಿ ಮದುವೆಯ ಪ್ರತಿಯೊಂದು ಆಚರಣೆಯಲ್ಲೂ ವೀಳ್ಯಪಟ್ಟಿ ಮತ್ತು ತಾಂಬೂಲಕ್ಕೆ ವಿಶೇಷ ಸ್ಥಾನ ನೀಡಲಾಗಿದೆ. ಸಂಪ್ರದಾಯ ಅನುಷ್ಠಾನದಲ್ಲಿ ನೈಸರ್ಗಿಕ ವಸ್ತುಗಳನ್ನೇ ಬಳಸುತ್ತಾರೆ ಹೊರತು ಕೃತ್ರಿಮ ವಸ್ತುಗಳ ಉಪಯೋಗ ವಿರಳ. ಧಾರೆಯ ಕ್ರಮ ಇಂದಿಗೂ ಮೃತ್ತಿಕಾ ಕಲಶಗಳಿಂದ ಜಲಧಾರೆ ಎರೆದೇ ಆಗುತ್ತದೆ. ಮದುವೆಯ ಬಲಗೊಡೆಯರ ಔತಣದಲ್ಲಿ ಮಾತ್ರ ಸಂಪ್ರದಾಯ ಪ್ರಕಾರ ಮೀನು ಸಾರಿನ ಅಡುಗೆ ಮಾಡುತ್ತಾರೆ. ಉಳಿದಂತೆ ಎಲ್ಲಾ ಅಡುಗೆಗಳೂ ಶಾಕಾಹಾರಿಯೇ ಆಗಿರುತ್ತವೆ. ನೆಂಟರು ಆಗಮಿಸಿದಾಗ ಕಾಲು ತೊಳೆಯಲು ತಣ್ಣೀರು ನೀಡುವುದು, ಬಾಯಾರಿಕೆಗೆ ಮತ್ತು ಗೌರವಾರ್ಥ ಬೆಲ್ಲ ನೀರು ನೀಡಿ ಉಪಚರಿಸುವುದು, ತಾಂಬೂಲ ಹಂಚಿಕೆ ಮುಂತಾದ ರಿವಾಜುಗಳು ಸಾಮಾನ್ಯ. ಕಾರ್ಯಕ್ರಮದ ಕೊನೆಯಲ್ಲಿ ಹೊರಡುವಾಗ ಪ್ರತಿಯೊಂದು ಬಾರಿಯೂ ಆ ಮನೆಯ ಯಜಮಾನನಿಗೆ ಗೌರವಪೂರ್ವಕ ಕೈಮುಗಿದು 'ಹೋಗಿ ಬರುತ್ತೇವೆ' ಎಂದು ಹೇಳುವುದು ಮತ್ತು ಯಜಮಾನನು ಅವರಿಗೆ ಪ್ರತಿವಂದಿಸಿ 'ದೇವರ ಇಚ್ಛೆ' ಎಂದು ಪ್ರತ್ಯುತ್ತರ ನೀಡುವುದು ಮುಂತಾದ ಸಂಸ್ಕಾರಯುತ ಸಂಪ್ರದಾಯಗಳನ್ನು ತಪ್ಪದೇ ಪಾಲಿಸುತ್ತಾರೆ.

ಎಲ್ಲಕ್ಕಿಂತ ಮುಜುಗುರದ ವಿಚಾರವೆಂದರೆ ಕುಡುಬಿಯರ ಮದುವೆಯಲ್ಲಿಯೂ ಆಡಂಬರದ ಆಚಾರಗಳಿಗೆ ಬಲಿಬಿದ್ದು ಮತ್ತು ಪರಜಾತಿ, ಜನಾಂಗದವರ ಆಚರಣೆಗಳ ಅಂಧಾನುಕರಣೆಯಿಂದ ಕೆಲವು ವಿಪರೀತ ಮತ್ತು ವೈರುಧ್ಯ ಆಚರಣೆಗಳು ಚಾಲ್ತಿಗೆ ಬಂದು ಮೂಲ ಸಂಪ್ರದಾಯದ ವಿರೂಪವಾಗಿದೆ. ಅರಸಿನ ಶಾಸ್ತ್ರದ ರಾತ್ರಿ ಸಂಪ್ರದಾಯ ಪ್ರಕಾರ ಆಗಬೇಕಾದ ಕ್ರಮಗಳು ಮುಗಿದ ನಂತರ ವಿದೇಶೀಯರಂತೆ ಡಿಸ್ಕೋ ಡ್ಯಾನ್ಸ್ ಪ್ರಾರಂಭವಾಗಿದೆ. ಮದುವೆಯ ವಾಲಗದ ಬದಲಿಗೆ ಆರ್ಕೆಸ್ಟ್ರಾ, ಡಿ.ಜೆ.ಸೌಂಡ್ಸ್‌ನ ಹಿಮ್ಮೇಳಕ್ಕೆ ಅರ್ಥವಿಲ್ಲದ ಅಸಹ್ಯ ನೃತ್ಯಗಳು ಪ್ರಾರಂಭವಾಗಿವೆ. ತಾಂಬೂಲ ನಿಶ್ಚಿತಾರ್ಥಕ್ಕೆ ವರ, ವಧುವಿನ ಮನೆಗೆ ಹೋಗುವ ಕ್ರಮ ಮತ್ತು ನಿಶ್ಚಿತಾರ್ಥದ ಊಟ ಮಾಡುವ ಕ್ರಮವಿರಲಿಲ್ಲ. ಈಗ ವರನಾದವನು ತಾಂಬೂಲ ನಿಶ್ಚಿತಾರ್ಥದಲ್ಲಿ ಭಾಗವಹಿಸುವುದು ಮಾತ್ರವಲ್ಲ, ಹುಡುಗ ಹುಡುಗಿಗೆ, ಹುಡುಗಿ ಹುಡುಗನಿಗೆ ಉಂಗುರ ತೊಡಿಸುವ ಕ್ರಮ ಶುರುವಾಗಿದೆ. ಮೂಲದಲ್ಲಿ ಇದು ಕುಡುಬಿಯರ ಸಂಪ್ರದಾಯವೇ ಅಲ್ಲ. ಮದುವೆಯ ಮರುರಾತ್ರಿ, ಎಲ್ಲರನ್ನೂ ಆಮಂತ್ರಿಸಿ ಬಾಡೂಟ ನೀಡಿ, ಅಮಲು ಸೇವನೆಯ ಡಿನ್ನರ್ ಪಾರ್ಟಿ ಕೊಟ್ಟು ಯುವ ಪುರಷ, ಮಹಿಳೆಯರ ಅಸಭ್ಯ ಕುಣಿತಗಳಂತಹ ಅಥರ್ವಣ ಕ್ರಮಗಳು ಚಾಲ್ತಿಗೆ ಬರುತ್ತಿರುವುದನ್ನು ಗಮನಿಸಬಹುದು. ಕನ್ಯಾಶುಲ್ಕ ಅಥವಾ ತೆರ ನೀಡುವ ಸಂಪ್ರದಾಯ ಅಳಿದು, ಅಲ್ಲಿ-ಇಲ್ಲಿ ಹುಡುಗ, ಹುಡುಗಿ ಕಡೆಯಿಂದ ವರದಕ್ಷಿಣೆ ಕೇಳುವ ಮತ್ತು ಹೆಣ್ಣು ಹೆತ್ತವರು ಗೌಪ್ಯವಾಗಿ ವರದಕ್ಷಿಣೆ ನೀಡುತ್ತಿರುವ ಸುದ್ದಿಗಳು ಕೇಳಲು ಸಿಗುತ್ತಿವೆ. ಒಂದು ಕಾಲದಲ್ಲಿ ಉತ್ತಮ ಸಂಸ್ಕಾರವಂತ ಸಮಾಜ ಎಂಬ ಹೆಗ್ಗಳಿಕೆಯಿಂದ ಬಾಳಿದ ಕುಡುಬಿ ಜನಾಂಗಕ್ಕೆ ಕುಡುಬಿ ಸಂಸ್ಕೃತಿಯನ್ನೇ ನಾಶಗೊಳಿಸುವ, ಕುಡುಬಿಯರ ಜೀವನದ ತತ್ವ ಸಿದ್ಧಾಂತಗಳಿಗೆ ಕೊಡಲಿಯೇಟು ಬೀಳುವ ಈ ಎಲ್ಲಾ ವಿಪರೀತ ಬದಲಾವಣೆ ಅನಿವಾರ್ಯವೇ? ಎಂಬುದು ಪ್ರಶ್ನೆ!

ಸಂಸ್ಕೃತಿ ಅಳಿಯುವುದಿಲ್ಲ. ಪರಿವರ್ತನೆಗೊಳ್ಳುತ್ತದೆ / ಪರಿವರ್ತನೆಗೊಳ್ಳಬೇಕು. ಸಂಸ್ಕೃತಿ ಎಂಬುದು ನಿಂತ ನೀರಾಗಬಾರದು. ನಿಂತ ನೀರು ನಿಷ್ಕ್ರಿಯ ಮತ್ತು ಚೈತನ್ಯರಹಿತವಾಗಿರುತ್ತದೆ. ಹರಿವ ನೀರು ಪರಿಶುದ್ಧ ಹಾಗೂ ಚೈತನ್ಯಭರಿತವಾಗಿ ವಿವಿಧ ರೀತಿ ಉಪಯೋಗವಾಗುತ್ತದೆ. ಸಂಸ್ಕೃತಿಯೂ ಹರಿವ ನೀರಾಗಬೇಕು. ಆದರೆ, ಪರಿವರ್ತನೆಯ ಹೆಸರಲ್ಲಿ ಮೂಲ ಸತ್ವ, ಗುಣ, ರೂಪ, ಗೌರವಗಳನ್ನು ಕಳೆದುಕೊಳ್ಳಬಾರದು. ಸಂಸ್ಕೃತಿಯ ಸ್ಥಾನಕ್ಕೆ ಅಪಚಾರ, ಅವಮಾನ ಆಗಬಾರದು. ಕೃತಿ ಸಂಸ್ಕೃತಿಯಾಗಬೇಕು ಹೊರತು ವಿಕೃತಿಯಲ್ಲ. ಪ್ರಕೃತಿ ಸಹಜವಾಗಿ ಹರಿವ ನದಿಯೊಂದಕ್ಕೆ ಕಲ್ಮಶ, ಸತ್ವನಾಶಕ, ಜೀವನಾಶಕ, ಮಲಮೂತ್ರಾದಿಗಳನ್ನು ಹರಿಯಬಿಟ್ಟರೆ ಆ ನದಿ ಮಲಿನ ಮಾತ್ರವಲ್ಲ, ತನ್ನನ್ನು ಅವಲಂಬಿಸಿ ಬಾಳುವ ಜೀವಕೋಟಿಗೆಲ್ಲಾ ವಿಷವಾಗಿ ಅವಸಾನಕ್ಕೆ ನಾಂದಿಯಾಗುತ್ತದೆ. ನದೀ ನೀರನ್ನು ಸಹಜ ರೀತಿ ಬಳಸಿದರೆ ಜೀವಕೋಟಿಗೆ ಜೀವಾಮೃತವಾಗಬಲ್ಲುದು. ಸಂಸ್ಕೃತಿಯೂ ಇದರಿಂದ ಹೊರತಲ್ಲ.

ಯಾವುದೇ ಪ್ರದೇಶದಲ್ಲಿ ಪ್ರಧಾನ ಸಂಸ್ಕೃತಿಯ ಪ್ರಭಾವ ಅಧೀನ ಸಂಸ್ಕೃತಿಯ ಮೇಲೆ ಆಗುವುದು ಸ್ವಾಭಾವಿಕ. ಬಲಿಷ್ಠ ಸಂಸ್ಕೃತಿಯ ಒಳಗೆ ಬುಡಕಟ್ಟು ಸಂಸ್ಕೃತಿ ವಿಲೀನಗೊಳ್ಳುತ್ತದೆ ಅಥವಾ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಒಂದು ಜನಾಂಗ ಬಹಳಕಾಲ ಇನ್ನೊಂದು ಸಂಸ್ಕೃತಿಯ ಜನರೊಟ್ಟಿಗೆ ಸಾಮಾಜಿಕ ರೀತಿ ಹೊಂದಿಕೊಂಡು ಹೋಗುವ ಪರಿಸ್ಥಿತಿ ಎದುರಾದಾಗ ಅನಿವಾರ್ಯವಾಗಿ ನವಸಂಸ್ಕೃತಿಯ ಸಂವರ್ಧನೆಯಾಗುತ್ತದೆ ಹಾದಾದರೂ ಹಳೆಯ ಎಲ್ಲಾ ಸಂಗತಿಗಳನ್ನು ವೈಭವೀಕರಿಸಿಕೊಂಡು ಹೋಗುವಾಗ ಜೀವಿತದ ಮೂಲ ರೂಪವನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುತ್ತದೆ.

ಜೀವನ ಜಡಾತ್ಮಕವಲ್ಲ, ಪರಿವರ್ತನಾಶೀಲ, ಅದು ಜೀವಿತದ ಲಕ್ಷಣ. ಪರಿವರ್ತನೆಯಾಗಲು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ... ಅನೇಕ ಕಾರಣಗಳಿರುತ್ತವೆ. ತಾಂತ್ರಿಕ ನಾಗರೀಕತೆಯಿಂದ ಉದ್ಭವಿಸಿದ ಆಧುನೀಕತೆಯಿಂದಾಗಿ ಬುಡಕಟ್ಟು ಸಮುದಾಯದ ಜೀವನ ಅತಂತ್ರಗೊಳ್ಳುವ ಅನಿವಾರ್ಯ ಪರಿಸ್ಥಿತಿಯ ಪ್ರಭಾವ ಕುಡುಬಿ ಸಮಾಜದ ಮೇಲೂ ಕೆಲಮಟ್ಟಿಗೆ ಆಗಿರುವುದನ್ನು ಒಪ್ಪಬೇಕು. ಅದೇ ವೇಳೆ ಜೀವನ ಸುಧಾರಣೆಯೂ ಆಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಇದನ್ನು ಸಮನ್ವಯ ಸಂಸ್ಕೃತಿಯ ಉದಯವೆನ್ನಬಹುದೇನೋ? ಹಿಂದಿನ ಕೃಷಿ ಪದ್ಧತಿ, ಗೇಣಿ ಒಕ್ಕಲಾಗಿ ವ್ಯವಸಾಯ ಮಾಡುವ ಪರಿಸ್ಥಿತಿ ಈಗಿಲ್ಲ. ಕೃಷಿಗಿಂತಲೂ ಉಪವೃತ್ತಿಗಳಲ್ಲಿ ಸುಲಭ ಮತ್ತು ಹೆಚ್ಚಿನ ಸಂಪಾದನೆ ಲಭಿಸುವುದರಿಂದ ಸಾಗುವಳಿಯಂತಹ ಕಷ್ಟದ ದೈಹಿಕ ದುಡಿಮೆಗೆ ಜನ ತಯಾರಾಗುವುದಿಲ್ಲ. ಕೃಷಿಗೆ ಮಾಡಿದಷ್ಟು ಖರ್ಚು ಅದರ ಆದಾಯದಿಂದ ಬರುವುದಿಲ್ಲವಾದುದರಿಂದ ವ್ಯವಸಾಯ ಪದ್ಧತಿ ಕಡಿಮೆಯಾಗುತ್ತಾ ಬರುತ್ತಿದೆ. ಹಿಂದಿನ ಫಲವತ್ತಾದ ಮೂರು ಬೆಳೆ ಬೆಳೆಯುವ ಗದ್ದೆಗಳು ಪಾಳು ಬಿದ್ದಿರುವುದನ್ನು ನೋಡಬಹುದು. ಕುಡುಬಿಯರಲ್ಲಿದ್ದ ಕೂಡು ಕುಟುಂಬಗಳು ಅಳಿದು ಬಿಡಿ ಕುಟುಂಬಗಳಾಗಿವೆ. ಮನೆಗಳ ವಿನ್ಯಾಸ, ಅನ್ನಪಾನ, ಉಡುಗೆತೊಡುಗೆಗಳಲ್ಲಿ ಬದಲಾವಣೆಗಳಾಗಿವೆ. ಮುಳಿಹುಲ್ಲಿನ ಮಾಡಿನ, ಮಣ್ಣಿನ ಗೋಡೆಗಳ ಮನೆಗಳನ್ನು ಕೆಡವಿ ಹಂಚಿನ, ಕಾಂಕ್ರೀಟ್‌ನ, ವಿದ್ಯುತ್ ಸಂಪರ್ಕದ ಆಧುನಿಕ ಸೌಲಭ್ಯವಿರುವ ಮನೆಗಳ ರಚನೆಯಾಗುತ್ತಿದೆ. ಏತ ನೀರಾವರಿ ಹೆಸರಿಲ್ಲದಂತಾಗಿ ಪಂಪ್‌ಸೆಟ್‌ಗಳಿಂದ ನೀರಿನ ಉಪಯೋಗವಾಗುತ್ತಿದೆ. ದೊಡ್ಡ ದೊಡ್ಡ ಗಿರಣಿಗಳು ಬಂದು, ಭತ್ತ ಕುಟ್ಟಿ ಅಕ್ಕಿ ಮಾಡುವ ಕಲೆ ಕುಡುಬಿಯರಿಗೆ ಮರೆತೇ ಹೋಗಿದೆ. ಮಣ್ಣಿನ ಪಾತ್ರೆ ಪಗಡಿಗಳ ಸ್ಥಾನವನ್ನು ತಾಮ್ರ, ಹಿತ್ತಾಳೆ, ಕಂಚು, ಸ್ಟೀಲ್, ಅಲ್ಯುಮಿನಿಯಂ, ಪ್ಲಾಸ್ಟಿಕ್, ಫೈಬರ್ ಪಾತ್ರೆಗಳು ಆಕ್ರಮಿಸಿವೆ. ಆಧುನಿಕ ಊಟ ತಿಂಡಿಗಳು ಉಪಯೋಗವಾಗುತ್ತಿವೆ. ಇಲ್ಲಿಯ ಬಹುಸಂಖ್ಯಾ ಸಮಾಜದವರೊಂದಿಗೆ ತಕ್ಷಣ ಬೆರೆಯಲು ತಯಾರಾಗದ ಕುಡುಬಿಯರು ಹಿಂದೆ ಹಳ್ಳಿಯ ಹಾಡಿಗಳಲ್ಲಿ, ಪ್ರತ್ಯೇಕವಾಗಿ ಸಾಮೂಹಿಕ ರೀತಿ ಮನೆಗಳನ್ನು ಕಟ್ಟಿ ವಾಸಿಸುತ್ತಿದ್ದರು. ಶಿಕ್ಷಣ ಪಡೆದವರ ಸಂಖ್ಯೆಯೂ ಕನಿಷ್ಠವಾಗಿತ್ತು. ಈಗಿನ ಸುಧಾರಿತ ಸಮಾಜದಲ್ಲಿ ಪ್ರತೀ

ಕುಗ್ರಾಮಕ್ಕೂ ರಸ್ತೆ ಸಂಪರ್ಕ, ಶಿಕ್ಷಣ ಸಂಸ್ಥೆಗಳು ಪ್ರಾರಂಭವಾಗಿ ಕುಡುಬಿಯರಲ್ಲಿಯೂ ಶಿಕ್ಷಿತರು, ಶಿಕ್ಷಣಾಸಕ್ತರು ಹೆಚ್ಚಾಗಿದ್ದಾರೆ. ಆದರೆ ಉನ್ನತ ವ್ಯಾಸಂಗ ಹೊಂದಿ ಸಮಾಜ ವ್ಯವಸ್ಥೆಯ ಇತರ ಸಮುದಾಯದವರ ಸಮಾಸಮ ಕುಡುಬಿಯರು ತಲುಪಿಲ್ಲ ಎಂಬ ಸಂಗತಿ ವಾಸ್ತವ.

ಗೋವಾ ಮೂಲಸ್ಥಾನದಿಂದ ಸ್ಥಳಾಂತರಗೊಂಡ ಕುಡುಬಿಯರು ಕರ್ನಾಟಕದ ಈ ನೆಲದಲ್ಲಿ ಅಲ್ಪಸಂಖ್ಯಾತರು. ಇಲ್ಲಿಯ ಬಹುಸಂಖ್ಯಾತ ಸಮಾಜದ ಪ್ರಧಾನ ಸಂಸ್ಕೃತಿಯ ಪ್ರಭಾವ ಕುಡುಬಿಯರಂತಹ ಆಧೀನ ಸಂಸ್ಕೃತಿಯ ಮೇಲೆ ಆಗುವುದು ವಿಶೇಷವೇನಲ್ಲ. ಆದರೂ ಮದುವೆಯಂತಹ ಸಂಪ್ರದಾಯದಲ್ಲಿ ಹೆಚ್ಚಿನ ಮೂಲ ರೀತಿರಿವಾಜುಗಳನ್ನು, ನಡವಳಿಕೆಗಳನ್ನು ಉಳಿಸಿಕೊಂಡು ಬಂದಿರುವ ಕುಡುಬಿಯರಿಗೆ ನಿರ್ಲಕ್ಷಿಸಿಕೊಂಡು ಬಂದಿರುವ ಕೆಲವು ವಿಶೇಷ ಸಂಪ್ರದಾಯಗಳನ್ನು ಆಚರಣೆಯ ವಾಹಿನಿಯಲ್ಲಿ ತರಲು ಮತ್ತು ಈಗಿನ ಕೆಲವು ಮೌಲ್ಯರಹಿತ ಆಚರಣೆಗಳನ್ನು ಕಡೆಗಣಿಸಿ, ಮೂಲ ಸಂಪ್ರದಾಯಗಳನ್ನು ಮುಂದಿನ ಪೀಳಿಗೆಗೆ ದಾಟಿಸಲು ಕಷ್ಟವಾಗಲಿಕ್ಕಿಲ್ಲ.

***

ಆಧಾರ ಸಾಹಿತ್ಯ :

1. ಬಸ್ತಿ ಪುಂಡಲೀಕ ವೆಂಕಟೇಶ ಶೆಣೈ : ಕೊಂಕಣಿ ಮತ್ತು ಮರಾಠಿ–ಇವುಗಳ ತುಲನಾತ್ಮಕ ವಿಮರ್ಶೆ (ಪು: 101–102) ಪ್ರ: ಶ್ರೀ ಲಲಿತಾ ಪ್ರಾಚ್ಯ ಸಂಶೋಧನಾಲಯ, ಮಂಗಳೂರು –1968

2. ಎಸ್. ಪುರುಷೋತ್ತಮ ಮಲ್ಯ : ಕೊಂಕಣಿ ಲೋಕ್ ಗೀತ್ : ಪ್ರ: ಕೊಂಕಣಿ ಭಾಷಾ ಪ್ರಚಾರ ಸಭಾ, ಕೊಚ್ಚಿ –1976

3. ಗೊಂಯ್ಚೊ ಲೋಕ್‌ವೆದ್ – ಪ್ರ: ರಾಜ್ಯ ಶಿಕ್ಷಣ್ ಶಾಸ್ತ್ರ ಸಂಸ್ಥಾ, ಗೋವಾ–1983

4. ಈಶ್ವರ ಎಸ್. ಜೋಶಿ : ದಕ್ಷಿಣ ಕನ್ನಡದ ಕುಡುಬಿಯರು – ಪ್ರ: ಐಬಿಹೆಚ್ ಪ್ರಕಾಶನ, ಬೆಂಗಳೂರು–1983

5. ಕನ್ನಡ ಜಾನಪದ ವಿಶ್ವಕೋಶ (ಪು:432)–ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–1985

6. ಆರೂರು ಲಕ್ಷ್ಮಣ ಶೇಟ್:ಬಡತನವ ಉಂಡುಟ್ಟ ಕುಡುಬಿಯರ ಮದುವೆಗಳು–ಸಂಯುಕ್ತ ಕರ್ನಾಟಕ–07.01.1990

7. ಶ್ಯಾಂ ವೆರೆಂಕಾರ್:ಗೊಂಯ್ಚ್ಯಾ ಲೋಕ್‌ವೆದಾಚೊ ರೂಪ್‌ಕಾರ್–ಪ್ರ: ಗೋವಾ ಕೊಂಕಣಿ ಅಕಾಡೆಮಿ–1991

8. ಡಾ. ಜಯಂತಿ ನಾಯ್ಕ್ : ಕಣೆರ್ ಖಿಂಟ ನಾರಿ– ಪ್ರ: ಗೋವಾ ಕೊಂಕಣಿ ಅಕಾಡೆಮಿ–1993

9. ಗೋಕುಲ್‌ದಾಸ್ ಪ್ರಭು:ಕೇರಳಾಂತ್ಲೆಂ ಲೋಕ್‌ಗೀತ್– 'ಸಾಂತ್' ಸ್ಮರಣ್ ಸಂಚಿಕಾ, ಮಾಂಡ್ ಸೊಭಾಣ್, ಮಂಗಳೂರು–1993

10.OLIVINHO GOMES: Village Goa a study of Goan social structure And change, Pub:S.CHAND &Co, NEW DEHLI-1996

11.ಕರ್ನಾಟಕ ಬುಡಕಟ್ಟುಗಳು(ಸಂ.1)–ಪ್ರ:ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ–1998

12.ಡಾ. ಗಾಯತ್ರೀ ನಾವಡ: ಕುಡುಬಿಯರ ವಿಶಿಷ್ಟ ಸಂಸ್ಕೃತಿ ಉಳಿಯುವುದೆ?–ತರಂಗ, 22.3.2001.

13.ಶರತ್ಚಂದ್ರ ಶೆಣೈ, ಕೊಚ್ಚಿ: ಲೋಕ್‌ಧನ್–ಕೇರಳಾಂತ್ಲೊ ಕೊಂಕಣಿ ಲೋಕ್ ವೆದ್, ಏಕ್ ವಳಕ್–2004

14.ಡಾ.ವೈ.ರವೀಂದ್ರನಾಥ್ ರಾವ್: ಕುಡುಬಿ ಬುಡಕಟ್ಟು ಜನಾಂಗ – ಪ್ರ: ಕುಡುಬಿ ಸಮಾಜೋದ್ಧಾರಕ ಸಂಘ, ಅಲ್ತಾರು – 23–3–2005

15. PRATAP SINH VELIP KANKAR : THE KURMIS -KUNBIS OF INDIA (PAGE : 66-67) PUB: PRITAM PRAKASHAN, GOA - 2006

16. ಪ್ರೊ ಎ.ವಿ. ನಾವಡ : ಕೊಂಕಣದ ಕುಡುಬಿಯರು – ಪ್ರ: ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು –2008

17. ಡಾ। ಎಲ್. ಸುನೀತಾ ಬಾಯಿ, ಕೊಚ್ಚಿ : ಹಿಂದಿ ಔರ್ ಕೊಂಕಣಿ ಸಾಹಿತ್ಯಾಕಾ ತುಲನಾತ್ಮಕ್ ಅಧ್ಯಯನ್ – ಶೋಧ್ ಸಂಕಲನ್ –2010

18. ಕುಡುಬಿ ಜನಾಂಗಗಳ ಕೂಡುಕಟ್ಟುಗಳ ಮಾಹಿತಿ – ಕುಡುಬಿ ಸಮಾಜೋದ್ಧಾರಕ ಸಂಘ, ಆಲ್ತಾರು, ಯಡ್ತಾಡಿ, ಉಡುಪಿ – 2010ರ ವಾರ್ಷಿಕ ಮಹಾಸಭೆಯ ಪುಸ್ತಕ.

19. ಪ್ರೊ। ಪ್ರಜಲ್ ಸಾಖರ್‌ದಾಂಡೆ – ಗೊಂಯ್ಚೊ ಇತಿಹಾಸ್ – ಕೊಂಕಣ್ ಟ್ಯಾಮ್ಸ್ ಎಪ್ರಿಲ್ – ಜೂನ್ – 2011

20. ಡಾ। ಕಸ್ತೂರಿ ಮೋಹನ ಪೈ – ಕೊಡಿಯಾಲ್ ಖಬರ್ ಎಪ್ರಿಲ್ 1–15/2014

21. ದೇವಿದಾಸ್ ಗಾಂವ್ಕರ್, ಖೆತಿಗಾಂವ್– ಗೋವಾ: ಗೋವ್ಯಾತೀಲ್ ಆದಿವಾಸಿ- ರಚನಾ ಆಣಿ ಜೀವನ್ ಶೈಲಿ; ಪ್ರ. ರಾಜ್ಯ ಭಾಷಾ ಸಂಚಾಲನಾಲಯ, ಗೋವಾ ಸರಕಾರ– 2013.

ಸಂಪನ್ಮೂಲ ವ್ಯಕ್ತಿಗಳು :

(ಸಂದರ್ಶನ : ಯಂ. ಗೋಪಾಲ ಗೌಡ ಪಟ್ಲಜಿಲ್, ವಿಜಯ ಗೌಡ, ಶಿಬ್ರಿಕೆರೆ)

1. ಶ್ರೀ ಓಮಯ ಗೌಡ (75 ವರ್ಷ) ಘಾಡಿಗ, ಪುತ್ತಿಗೆಬೀಡು, ಶಕ್ತಿಪುರ– 29–12–1996

2. ಶ್ರೀ ಬಾಬು ಗೌಡ (45 ವರ್ಷ) S/o. ತಿಮ್ಮ ಗೌಡ, ಮೈಂದೇರಿ, ಮರಕಡ – 3–8–1997

3. ಶ್ರೀ ಪುತ್ತು ಗೌಡ (78 ವ.) ಸಂಕೇಶ ಕೊಂಪದವು – 13–11–1999

4. ಶ್ರೀ ಲಿಂಗಪ್ಪ ಗೌಡ (58 ವ.) S/o. ಪುಂಡು ಗೌಡ, ಪಾಡಿಯಾರು, ಕಿಂಡೇಲು – 14–11–1999

5. ಶ್ರೀ ಕಮಲಾಕರ್ ಮ್ಹಾಳ್‌ಶಿ – ಸಹಕಾರ್ಯದರ್ಶಿ, ಗೋವಾ ಕೊಂಕಣಿ ಅಕಾಡೆಮಿ, ಶ್ರೀ ಸ್ಥಳ, ಕಾಣಕೋಣ್, ಗೋವಾ – 18–3–2000

6. ಶ್ರೀ ಗೋವಿಂದ ವೆಳಿಪ್ – ಬುಧವಂತ, ಆಸಾಳಿ ವಾಡೆ, ಕಾಣಕೋಣ್, ಗೋವಾ– 18–3–2000

7. ಕುಡುಬಿ ಆಸಾಳಿ ವಾಡೆ ಸದಸ್ಯರು, ಕಾಣಕೋಣ್, ಗೋವಾ– 18–3–2000

ಪುರುಷರು :

1. ಜಾನು ವೆಳಿಪ್, 2. ಭಿಕಾಜೀ ವೆಳಿಪ್ 3. ನಾರಾಯಣ ನೆವ್ಕಾರ್

ಮಹಿಳೆಯರು :

1. ರಾಧಾ ವೆಳಿಪ್, 2. ಚಂದ್ರಾವತೀ ಭಗತ್ 3. ಸರಸ್ವತೀ ವೆಳಿಪ್ 4. ಲಕ್ಷ್ಮಾವತೀ ಗಾಂವ್ಕರ್ 5. ಶುಭವತೀ ವೆಳಿಪ್ 6. ಶಾರದಾ ವೆಳಿಪ್ 7. ದ್ರೌಪದೀ ವೆಳಿಪ್ 8. ರುಕ್ಮಿಣಿ ಗಾಂವ್ಕರ್.

8. ಶ್ರೀ ಬಾಬು ಗೌಡ (60 ವ.) S/o. ತಿಮ್ಮ ಗೌಡ, ಮೈಂದೇರಿ, ಮರಕಡ – 29–7–2012, 7–11–2012.

***




ವರನ ಪನ್ನೆ ಶಾಸ್ತ್ರ



ವರನ ಅರಸಿನ ಶಾಸ್ತ್ರ



ವಧುವಿನ
ಅರಸಿನ ಶಾಸ್ತ್ರ



ವರನ
ಕಲಶ ಸ್ನಾನ



ವಧುವಿನ
ಕಲಶ ಸ್ನಾನ

ಬೋಳು ಮೊಯಿಸುವಿಕೆ







ಹಿಟ್ಟು ಕುಟ್ಟುವ ಶಾಸ್ತ್ರ

ಫಡಿಗೆ ಮುಹೂರ್ತ





ಘಡಿಗೆ
ಮುಹೂರ್ತ



ಹಾಲುಗಂಭ
ಶಾಸ್ತ್ರ



ವರಾಗಮನ



ಹೂ ಜಡೆ



ಮದರಂಗಿ





ತಳಿಗೆ ಪ್ರದಾನ



ಅಂತರ ಪಟ





ಮಾಲಾರ್ಪಣೆ



ಧರ್ಮಧಾರೆ

ಧರ್ಮಧಾರೆ







ಪಾದ ಪೂಜೆ

ಕಂಕಣದಾರಬಂಧ





ಮಾಂಗಲ್ಯಬಂಧ



ಲಾಜಹೋಮ



ವಧೂವರರು



ಆರತಿ



ಯಂ. ಗೋಪಾಲ ಗೌಡ

ಮಂಗಳೂರು ತಾಲೂಕು ತೆಂಕ ಎಡಪದವು ಗ್ರಾಮದ ಪಟ್ಲಚಿಲ್ ಎಂಬಲ್ಲಿ 27-11-1955ರಲ್ಲಿ ಕೊಂಕಣಿ ಕುಡುಬಿ ಸಾಂಪ್ರದಾಯಿಕ ಕುಟುಂಬ ಒಂದರಲ್ಲಿ ಗೋಪಾಲ ಗೌಡರು ಜನಿಸಿದರು. ಪದವಿಪೂರ್ವ ಶಿಕ್ಷಣ ಹೊಂದಿದ ಇವರು ಪ್ರಕೃತ ಮಂಗಳೂರಿನ ಸೈಂಟ್ ಎಲೋಶಿಯಸ್ ಕಾಲೇಜಿನ ಕೊಂಕಣಿ ಸಂಸ್ಥೆಯ ಕೊಂಕಣಿ ಸದವಿಕಾ ಅಂಚೆ ಶಿಕ್ಷಣದ ಸಮನ್ವಯಿ, ಸಂಸ್ಥೆಯ ಗ್ರಂಥಾಲಯದ ಮೇಲ್ವಿಚಾರಕ ಮತ್ತು ವಸ್ತುಸಂಗ್ರಹಾಲಯದ ಉಸ್ತುವಾರಿಯಾಗಿ ವೃತ್ತಿ ನಿರತರು.

ಪ್ರವೃತ್ತಿಯಿಂದ ಕುಡುಬಿ ಸಂಸ್ಕೃತಿಯ, ಜಾನಪದದ ಅಭಿಜಾತ ಕಲಾಕಾರನ ನೆಲೆಯಲ್ಲಿ 14ರ ಎಳವೆಯಿಂದಲೇ ಧಾರ್ಮಿಕ ಹಿನ್ನೆಲೆಯ ಗುಮಟೆ, ಕೋಲಾಟಗಳ ಹಾಡು ಹಾಗೂ ನೃತ್ಯಾಭ್ಯಾಸ ಪರಿಣತರಾಗಿ ಹಿರಿಯರಿಂದ ಅನುಭವ ಗಳಿಸುತ್ತಾ, ಯುವ ಪೀಳಿಗೆಗೆ ಪರಿಣತಿ ನೀಡುತ್ತಾ ಕೊಂಕಣಿ ಸಾಂಸ್ಕೃತಿಕ ಜಗತ್ತಿನಲ್ಲಿ ಪ್ರತಿಭಾವಂತರಾಗಿ ಸುಪರಿಚಿತರು. ಸುಮಾರು 40 ವರ್ಷಗಳ ಹಿಂದೆ ಕುಡುಬಿ ವಾಡೆಗಳಿಂದ ಹೊರಗೆ, ಕಲಾಪ್ರದರ್ಶನಕ್ಕಾಗಿ ಇವರು ರಚಿಸಿದ ಸ್ವತಂತ್ರ ತಂಡ ಈಗ 'ಕುಡುಬಿ ಜಾನಪದ ಕಲಾ ವೇದಿಕೆ' ಎಂಬ ಹೆಸರಲ್ಲಿ ಕಲಾ ಪ್ರದರ್ಶನ ನೀಡುವ ಏಕೈಕ ನೋಂದಾಯಿತ ಸಂಸ್ಥೆ. ದೇಶಾದ್ಯಂತ 200ಕ್ಕೂ ಮಿಕ್ಕ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರತಿಷ್ಠಿತ ವೇದಿಕೆಗಳಲ್ಲಿ ಪ್ರದರ್ಶನಗಳನ್ನು ನೀಡಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದ ಹೆಗ್ಗಳಿಕೆ ಇವರದು.

ಕುಡುಬಿ ಸಮಾಜ, ಸಂಸ್ಕೃತಿ ಮತ್ತು ಜಾನಪದದ ಬಗ್ಗೆ ಸಂಶೋಧನೆ ಕೈಗೊಳ್ಳುವವರಿಗೆ ಸಂಪನ್ಮೂಲ ವ್ಯಕ್ತಿಯಾಗಿ ಮಾಹಿತಿಯನ್ನು ಒದಗಿಸಿದ್ದಾರೆ. ಸ್ವಿಜರ್ಲೆಂಡ್, ಕೆನಡಾ, ಜರ್ಮನಿ, ಇಂಗ್ಲೆಂಡ್ ಮುಂತಾದೆಡೆಗಳಿಂದ ಬಂದ ಅಧ್ಯಯನಕಾರರು ಇವರಿಂದ ಮಾಹಿತಿಯನ್ನು ಪಡೆದು ದಾಖಲೀಕರಣ ಮಾಡಿಕೊಂಡಿರುತ್ತಾರೆ. ಕುಡುಬಿ ಸಮಾಜದ ಪ್ರಥಮ ಬರಹಗಾರನಾಗಿ ಕುಡುಬಿಯರಿಗೆ ಸಂಬಂಧಿಸಿದಂತೆ ಇವರ ಲೇಖನಗಳು, ಸಂಶೋಧನಾ ಕೃತಿಗಳಲ್ಲಿ, ಜಾಲತಾಣಗಳಲ್ಲಿ, ಕೊಂಕಣಿ ವಿದ್ಯಾರ್ಥಿಗಳಿಗೆ ಪಠ್ಯ ವಿಷಯವಾಗಿ, ಭಾಷಾಂತರ ಸಾಹಿತ್ಯ ನಿಯತಕಾಲಿಕೆಗಳಲ್ಲಿ ಪ್ರಕಟಣೆಗೊಂಡಿವೆ. ವಿವಿಧ ವಿಚಾರಗೋಷ್ಠಿ, ಕಾರ್ಯಾಗಾರ, ಆಕಾಶವಾಣಿ, ದೂರದರ್ಶನ ಕಾರ್ಯಕ್ರಮಗಳಲ್ಲಿ ಭಾಷಣ, ಪ್ರಬಂಧ, ವಿಚಾರ ಮಂಡನೆ ಮಾಡಿರುತ್ತಾರೆ

ಪ್ರಕಟಿತ ಪುಸ್ತಕಗಳು :

1. ಕುಡ್ಯಾಲಿಂ ಗುಮ್ಟಾಂ ಆನಿ ತೋಣಿಯಾಂ ಪೊದಾಂ –2001 (ಹೋಳಿ ಜಾನಪದ ಗೀತೆಗಳ ಸಂಗ್ರಹ) ಪುನರ್ ಮುದ್ರಣ 2016
2. ಕುಡುಬಿ ಕೊಂಕ್ಣಿ ಗಾದಿ – 2011 (3000 ಮಿಕ್ಕ ಕುಡುಬಿ ಗಾದೆಗಳ ಸಂಗ್ರಹ)
3. ಗುಮಟ್ – 2011 (ಗುಮಟೆ ಬಗ್ಗೆ ಪರಿಚಯಾತ್ಮಕ ಪುಸ್ತಕ)
4. ವ್ಹಾಡಿಂಗ್ – 2013 (ಕುಡುಬಿಯರ ಮದುವೆ ಸಂಪ್ರದಾಯಗಳ ವಿಶ್ಲೇಷಣಾತ್ಮಕ ವಿವರಣೆಯ ಪುಸ್ತಕ)

ಪ್ರಶಸ್ತಿ :

1. 'ಗೌರವ ಜಾನಪದ ಪ್ರಶಸ್ತಿ–2002' : ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು.
2. 'ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ – 2014' : ದಕ್ಷಿಣ ಕನ್ನಡ ಜಿಲ್ಲಾಡಳಿತ.